UNIVERSAL
LIBRARY
OU_202167
UNIVERSAL
LIBRARY

ಶ್ರೀಮದ್ವಿಶಿಷ್ಟಾದ್ವೈತ ಸಿದ್ಧಾನ್ತರತ್ನಮಾಲಾ

ದ್ವಿತೀಯ ರತ್ನವು—ಪದಿಮೂರನೆಯ ಸಂಚಿಕೆಯು

ಶ್ರೀಮನ್ನಿಗಮಾನ್ತ ಮಹಾದೇಶಿಕಪ್ರಣೀತ

ಶ್ರೀಮದ್ರಹಸ್ಯತ್ರಯ ಸಾರೇ

ಸಾಧ್ಯೋಪಾಯ ಶೋಧನಾಧಿಕಾರಶ್ಚತುರ್ವಿಂಶಃ

ವಿದ್ಯಾಭ್ಯಾಸವ ಇಲಾಖಾ ರಿಟೈರ್ಡ್ ಸರ್ಕಲ್ ಇನ್ಸ್ಪೆಕ್ಟರು

ಸಿ. ಯಂ. ವಿಜಯರಾಘವಾಚಾರ್ಯರಿಂದ

ರಚಿಸಲ್ಪಟ್ಟ

ಆಚಾರ್ಯಹೃದಯಾನ್ವೇಷಿಣೀ

ಎಂಬ ಕನ್ನಡ ಅರ್ಥ ತಾತ್ಪರ್ಯಗಳೊಂದಿಗೆ ಮುದ್ರಿಸಲ್ಪಟ್ಟಿರುತ್ತದೆ.

ಬೆಂಗಳೂರು ಸಿಟಿ


೧೯೩೮

ಕ್ರಯ ೧ ರೂಪಾಯಿ

ಶ್ರೀಯೈನಮಃ

ಶ್ರೀಮತೇ ರಾಮಾನುಜಾಯ ನಮಃ

ಶ್ರೀಮತೇ ನಿಗಮಾನ್ತ ಮಹಾದೇಶಿಕಾಯ ನಮಃ



ಸಾಧ್ಯೋಪಾಯ ಶೋಧನಾಧಿಕಾರಃ ೨೪

ಯಥಾಧಿಕರಣಂ ಪ್ರಭುನ್ಯಜನ ದಾನ ಹೋಮಾರ್ಚನಾ ।
ಭರನ್ಯಸನ ಭಾವನಾ ಪ್ರಭೃತಿಭಿಸ್ಸಮಾರಾಧಿತಃ ।

ಹಿಂದಿನ ಅಧಿಕಾರ ದಲ್ಲಿ ಸಿದ್ಧೋಪಾಯ ವಿಷಯದಲ್ಲಿ ಆತನ ಗುಣ ಸಂಬಂಧಾದಿಗಳ ಮೂಲಕವಾಗಿ ಪ್ರಾಸ್ತುವಾಗಬಹುದಾದ ಶಂಕಾಗಳಿಗೆಲ್ಲಾ ಪ್ರಮಾಣಗಳಿಂದಿಗೆ ಸರಿಯಾದ ಸಮಾಧಾನಗಳನ್ನು ತಿಳಿಸಿದವರಾಗಿ ಈ ಅಧಿಕಾರದಲ್ಲಿ ಸಾಧ್ಯೋಪಾಯ ವಿಷಯದಲ್ಲಿ ಹುಟ್ಟಿಸಬಹುದಾದ ಶಂಕಾಗಳಿಗೆ ಸಮಾಧಾನವನ್ನು ಹೇಳುತ್ತಾರೆ

ಆದರೆ 'ತನ್ನ ಪ್ರಾಪ್ತಿಗೆ ತನಗೆ ಸ್ವತಃ ಸಾಧನತ್ವವು ಸರಿಯೆಂದು ತೋರಿಬರುವುದಿಲ್ಲವು; ಯಾಗ ದಾನ ಹೋಮಾದಿಗಳೆಲ್ಲಾ ಅಪೂರ್ವ ದ್ವಾರಾ ಫಲವನ್ನು ಕೊಡುತ್ತವೆಂದು ಮೀಮಾಂಸಕರು ಹೇಳುವ ಪ್ರಕಾರ, ಭಕ್ತಿಮಾರ್ಗಕ್ಕೂ ಕೂಡ ಆ ಅಪೂರ್ವ ಮೂಲಕವಾಗಿಯೇ ಮೋಕ್ಷಪ್ರಾಪ್ತಿಯುಂಟಾಗುವುದರಿಂದ ಸಿದ್ಧೋಪಾಯದ ಆವಶ್ಯಕತೆಗೆ ಕಾರಣವಿಲ್ಲವೆಂದು ಕೆಲವರು ಹೇಳುವರು; ಭರನ್ಯಾಸದಲ್ಲಾದರೋ ಭಗವಂತನನ್ನೇ ಸಿದ್ಧೋಪಾಯವೆಂದೇ ವರಿಸತಕ್ಕದ್ದೆಂದು ಹೇಳುವದರಿಂದ ಭರನ್ಯಾಸವೇ ಸಾಧ್ಯೋಪಾಯವಲ್ಲವೆಂದು ಅಭಿಪ್ರಾಯವಿರುವಾಗ, ಆ ಭರನ್ಯಾಸವೆಂಬ ಸಾಧ್ಯೋಪಾಯದ ಶೋಧನೆಯ ಮಾತೇ ಉಂಟಾಗಲು ಕಾರಣವಿಲ್ಲವು.' ಇಂತಹ ಪೂರ್ವಪಕ್ಷಕ್ಕೆ ಸಮಾಧಾನರೂಪದಲ್ಲಿ ಶ್ರೀಃಪತಿಯು ಸಿದ್ಧೋಪಾಯನೆಂಬುದನ್ನು ಶ್ರುತಿ ಪ್ರಮಾಣಗಳಿದಲೂ, ಸ್ಮೃತಿ ಪ್ರಮಾಣಗಳಿಂದಲೂ,

ಫಲಂದಿಶತಿ ದೇಹಿನಾ ಮಿತಿಹಿ ಸಂಪ್ರದಾಯ ಸ್ಥಿತಿ।
ಶ್ರುತಿ ಸ್ಮೃತಿ ಗುರೂಕ್ತಿಭಿರ್ನಯವತೀಭಿ ರಾಭಾತಿ ನಃ ॥೫೩॥

ಸತ್ತರ್ಕಗಳಿಂದಲೂ, ಬ್ರಹ್ಮಸೂತ್ರಗಳಿಂದಲೂ, ಪರಮಾಚಾರ್ಯರುಗಳ ದಿವ್ಯಸೂಕ್ತಿ ಸಂಪ್ರದಾಯಗಳಿಂದಲೂ, ಸ್ಥಾಪಿಸಿ, ಅಂತಹ ಸಿದ್ಧೋಪಾಯನು **ಸುಮ್ಮನೆ** ತನ್ನಿಷ್ಟ ಬಂದಂತೆ ಫಲ ಕೊಡುವುದಿಲ್ಲವೆಂದೂ, ಸಾಧ್ಯೋಪಾಯಗಳಿಂದ ಆರಾಧಿತನಾಗಿ ಸಂತಪ್ತನಾದರೇನೇ ಫಲವನ್ನು ಕೊಡುವನೇ ವಿನಾ ಅನ್ಯಥಾ ಇಲ್ಲವೆಂದುಪದೇಶಿಸುತ್ತಾರೆ. ಆದುದರಿಂದ ಶ್ರೀಯಃಪತಿಯನ್ನು ಉಪಾಯಭಾವದಿಂದ ವರಿಸುವ ಸಾಧ್ಯೋಪಾಯವಾದ ಭರನ್ಯಾಸಾನುಷ್ಠಾನವೂ ಆವಶ್ಯಕವು. ಅದರ ಶೋಧನವೂ ಸಹ ಆವಶ್ಯಕವು. ಈ ಅಭಿಪ್ರಾಯವನ್ನೇ ಸಂಗ್ರಹಿಸಿ **ಈ** ಶ್ಲೋಕದಲ್ಲಿ ಉಪದೇಶಿಸುತ್ತಾರೆ—

ಅರ್ಥ—ಪ್ರಭುಃ - ಸರ್ವಶಕ್ತಿ ಸ್ವಾತಂತ್ರ್ಯ ಕಾರುಣ್ಯ ಮೊದಲಾದವುಗಳಿಂದ ಸಮರ್ಥನಾಗಿರುವ ನಮ್ಮ ಸ್ವಾಮಿಯು, **ಯಥಾಧಿಕರಣಂ - ವರ್ಣಾಶ್ರಮರೂಪ** ಅಧಿಕಾರಕ್ಕನುಗುಣವಾಗಿ, ಎಂದರೆ ಹಾಗೆ ಅನುಷ್ಠಿಸಲ್ಪಟ್ಟ, **ಯಜನ . . . .ಪ್ರಭೃತಿಭಿಃ, ಯಜನ** - ಯಜ್ಞ, ದಾನ, ಹೋಮ, ಸಾಯಂಪ್ರಾತರ್ಹೋಮವೂ, **ಅರ್ಚನ - ಪೂಜೆ, ಭರನ್ಯಸನ** - ಭರನ್ಯಾಸಾನುಷ್ಠಾನ, **ಭಾವನಾ** - ಧ್ರುವಾನುಸ್ಮೃತಿಯು, ಎಂದರೆ ಭಕ್ತಿಯೋಗ, **ಪ್ರಭೃತಿಭಿಃ** - ಮೊದಲಾದವುಗಳಿಂದ, (ಈ ಪ್ರಭೃತಿ ಶಬ್ದದಿಂದ ಕೆಲವು **ವ್ಯಾಖ್ಯಾತೃ**ಗಳು ವ್ರತಾನುಷ್ಠಾನ, ತೀರ್ಥಯಾತ್ರೆ, ಭಗವತ್ಸೇವೆ, ಭಾಗವತಸೇವೆಗಳು ಸಂಕಲ್ಪಿಸಲ್ಪಟ್ಟವೆಂದು ಹೇಳುವರು; ಇನ್ನು ಕೆಲವರು ಭಾವನಾಶಬ್ದದಿಂದ ಭಕ್ತಿಯೋಗವು ಹೇಳಲ್ಪಟ್ಟಿದುದರಿಂದ ಪ್ರಭೃತಿ ಶಬ್ದದಿಂದ ಕರ್ಮಜ್ಞಾನಯೋಗಗಳು ಸಂಗ್ರಹಿಸಲ್ಪಟ್ಟವೆಂದು ಅಭಿಪ್ರಾಯಪಡುವರು.) **ಸನಾರಾಧಿತಃ** - ಚೆನ್ನಾಗಿ ಆರಾಧಿಸಲ್ಪಟ್ಟವನಾಗಿಯೇ, **ದೇಹಿನಾಂ** - ಜೀವನರಿಗೆ, **ಫಲಂ ದಿಶತಿ** - ಆಯಾಯಾ ಸಾಧ್ಯೋಪಾಯಗಳಿಗೆ ಅನುಗುಣವಾದ ಫಲವನ್ನು ಕೊಡುವನು, **ಇತಿ ಹಿ** - ಎಂಬುದಾಗಿಯಲ್ಲವೇ, **ಸಂಪ್ರದಾಯ ಸ್ಥಿತಿಃ** - ಪೂರ್ವಾಚಾರ್ಯರುಗಳ ಉಪದೇಶಮೂಲಕ ಪರಂಪರೆಯಿಂದ ಬಂದ ಮರ್ಯಾದೆಯ ನೆಲೆಯು, **ನಃ**-ಶಾಸ್ತ್ರಗಳ ಮತ್ತು ಆಚಾರ್ಯರುಗಳ ಉಪದೇಶಗಳಲ್ಲಿ ತುಂಬಾ ಶ್ರದ್ಧೆಯುಳ್ಳ **ನಮಗೆ, ನಯವತೀಭಿಃ** - ಸತ್ತರ್ಕಗಳಿಂದ ಯುಕ್ತವಾದ, **ಶ್ರುತಿ ಸ್ಮೃತಿ ಗುರೂಕ್ತಿಭಿಃ**-ಶ್ರುತಿ ಸ್ಮೃತಿಗಳ **ಮತ್ತು** ಗುರುಗಳ ದಿವ್ಯೋಕ್ತಿಗಳಿಂದ, **ಆಭಾತಿ** - ಪ್ರಕಾಶಿಸುತ್ತದೆ. ಯಜನ

ದಾನ ಹೋಮಾದಿಗಳ ಮೂಲಕ ಹೇಗೆ ಸರ್ವೇಶ್ವರನು ಫಲವನ್ನು ಕೊಡುವನೆಂದು ನಾವು ನಂಬಿದ್ದೇವೋ, ಹಾಗೆಯೇ ಮೋಕ್ಷಾರ್ಥಿಗೂ ಕೂಡ ಭರನ್ಯಸನ ಜ್ಞಾನನಗಳಾದ ಪ್ರಪತ್ತಿಭಕ್ತಿಗಳಾದ ಸಾಧ್ಯೋಪಾಯಗಳ ಮೂಲಕ ಮೋಕ್ಷವನ್ನು ಕೊಡುವನೆಂಬುದು ಸಾರಾಭಿಪ್ರಾಯವು

ತಾತ್ಪರ್ಯ—ಈ ಸಾಧ್ಯೋಪಾಯ ಸಹಕಾರಿಗಳಾದ ಯಜನ ದಾನ ಹೋಮಾದಿಗಳನ್ನು **ಯಥಾಧಿಕರಣಂ** - ಅಧಿಕಾರಾನುಗುಣವಾಗಿ **ಅನುಷ್ಠಿಸತಕ್ಕದ್ದೆಂದು** ಹೇಳಿದರು. ಯಜನ ದಾನ ಹೋಮಗಳಲ್ಲಿ **ಎಲ್ಲರಿಗೂ ಅಧಿಕಾರವಿಲ್ಲವು** ತ್ರೈವರ್ಣಿಕರಲ್ಲದವರಿಗೆ ಅಧಿಕಾರವಿಲ್ಲವು ಅರ್ಚನ ಭರನ್ಯಸನಗಳಲ್ಲಿ **ಸರ್ವರಿಗೂ ಅಧಿಕಾರವುಂಟು**. ಭಾವನೆಯಲ್ಲಿ ಸ್ತ್ರೀ ಶೂದ್ರ ಚಂಡಾಲಾದಿಗಳಿಗೆ ಅಧಿಕಾರವಿಲ್ಲವು ; ಆದುದರಿಂದ **ಯಥಾಧಿಕರಣಂ** ಎಂಬ ಪ್ರಯೋಗವು

ಯಜನ ದಾನ ಹೋಮಾದಿಗಳಾದ ಇಲ್ಲಿ ಹೇಳಿರುವ ಉಪಾಯಗಳೆಲ್ಲಾ ಮುಮುಕ್ಷುವಿನ ಸಾಧ್ಯೋಪಾಯಗಳೆಂದು ಭಾವಿಸಕೂಡದು. ಚತುರ್ವಿಧಪುರುಷಾರ್ಥಗಳಿಗೂ ಇವು ಸಾಧ್ಯೋಪಾಯಗಳೆಂದು ಹೇಳಲ್ಪಟ್ಟವು. ಆದರೆ ಮೋಕ್ಷವನ್ನು ಸಾಧಿಸಿಕೊಡುವ ಸಾಧ್ಯೋಪಾಯಗಳು ಎರಡೇ. ಇದನ್ನು ಹಿಂದೆಯೇ " **ಪ್ರಪನ್ನಶ್ಚ ದ್ವೇಧಾ ಸುಚರಿತ ಪರೀಪಾಕಭಿದಯಾ** " ಎಂಬ ಸ್ಥಳದಲ್ಲಿ ಉಪಪಾದಿಸಿರುತ್ತಾರೆ ಲಲನೆಯ ಪುಟವನ್ನು ನೋಡಿ. ಈ ಸಾಧ್ಯೋಪಾಯಗಳನ್ನು ಅನುಷ್ಠಿಸದೇ ಅವುಗಳ ನೈಜಫಲಗಳು ದೊರೆಯುವದಿಲ್ಲವು. ಹಾಗಾದರೆ ಅವುಗಳೇ ಫಲಗಳನ್ನು ಕೊಡುತ್ತವೆಯೇ, ಇಲ್ಲವೇ ಸರ್ವೇಶ್ವರನು ಫಲಗಳನ್ನು ಕೊಡುತ್ತಾನೆಯೇ ಎಂಬ ಪ್ರಶ್ನೆಯು ಉಂಟಾಗುತ್ತದೆ ಮಿಮಾಂಸಕರು ಹೇಳುವದೇನೆಂದರೆ, ಈ ಸಾಧ್ಯೋಪಾಯಗಳಿಂದ ಒಂದು ಅವ್ಯಕ್ತವು ಉತ್ಪನ್ನವಾಗುತ್ತದೆಂದೂ ಅದಕ್ಕೆ ಅಪೂರ್ವವೆಂಬ ಹೆಸರೆಂದೂ, ಈ ಅಪೂರ್ವವೇ ಫಲವನ್ನು ಕೊಡುತ್ತದೆಂದೂ ಹೇಳುವರು. ಈ ಅಭಿಪ್ರಾಯವು ಶ್ರೀ ಭಾಷ್ಯದಲ್ಲಿ ಖಂಡಿಸಲ್ಪಟ್ಟಿರುತ್ತವೆ. ಈ ಸಾಧ್ಯೋಪಾಯಗಳೆಲ್ಲಾ ಅಚೇತನಗಳು, ತಾನೇ ಸ್ವತಂತ್ರಿಸಿಯಾಗಲಿ, ಅವ್ಯಕ್ತದ್ವಾರಾವಾಗಲಿ ಫಲಗಳನ್ನು ಕೊಡಲಾರವು ಫಲಕೊಡುವವನು ಸರ್ವೇಶ್ವರನು. ಅತನು ಈ ಸಾಧ್ಯೋಪಾಯಗಳಿಂದ ಆರಾಧಿತನಾಗಿಯೇ ಫಲ ಕೊಡುವನೇ ವಿನಾ ತಾನಾಗಿಯೇ ಕೊಡನು. ಇದರಿಂದ ಸರ್ವಶಕ್ತನಾಗಿ, ಸ್ವತಂತ್ರನಾಗಿ, ಪರಮಕಾರುಣಿಕನಾಗಿರುವ ಮಹಾ ಪ್ರಭುವು ಈ ಅಜ್ಞಾಗಳ ಸ್ವರೂಪವಾದ ಸಾಧ್ಯೋಪಾಯಗಳ ಆವಶ್ಯಕತೆಯನ್ನು ನಿರೀಕ್ಷಿಸುವನೇ ಎಂಬಾಕ್ಷೇಪಕ್ಕೆ ಸಮಾಧಾನವು ಇದರಿಂದ ಹೇಳಲ್ಪಟ್ಟಿತು ಇವುಗಳಿಂದ **ಸಮಾರಾಧಿತನಾದರೇನೇ** ಸಂತುಷ್ಟನಾಗಿ ಫಲವನ್ನು **ಅನುಗ್ರಹಿಸುವನು**, ಇಲ್ಲದಿದ್ದರೆ **ಇಲ್ಲವು** ಈಸಾಧ್ಯೋ

ಪಾಯಗಳ ಆವಶ್ಯಕತೆಯು ಏಕೆಂದರೆ ತನಗೆ ವೈಷಮ್ಯ ನೈಘೃಣ್ಯಾದಿಗಳಿಲ್ಲವೆಂದು ತೋರಿಸಿಕೊಳ್ಳುವದಕ್ಕಾಗಿ ಎಂದು ಭಾವಿಸತಕ್ಕದ್ದು.

"ಫಲಂ ದಿಶತಿ ದೇಹಿನಾಂ" ಇಲ್ಲಿ ಚೇತನನನ್ನು ದೇಹೀ ಎಂದು ಹೇಳಿದುದು, ಆತನಿಗೆ ಪ್ರಭುವಾದ ಸ್ವಾಮಿಯು ಕರಣ ಕಳೇಬರಯೋಗವನ್ನು ಪರಮಕೃಪಯಾ ದಯಪಾಲಿಸಿರುವದು, ಆತನು ತನ್ನ ಸಙ್ಕಲ್ಪ ಪ್ರಯತ್ನಗಳ ಮೂಲಕ ಇಂತಹ ಸಾಧ್ಯೋಪಾಯಗಳನ್ನು ಅನುಷ್ಠಿಸಲಿ ಎಂಬ ಉದಾರ ಭಾವದಿಂದ ಎಂಬುದು ತೋರಿಬರುತ್ತದೆ.

ಹೀಗೆಲ್ಲಾ ಸಾಧ್ಯೋಪಾಯಗಳನ್ನು ಪೂರ್ವಸುಕೃತಗಳಿಗನುಸಾರವಾಗಿ ಅನುಷ್ಠಿಸುವಹಾಗೆ ಮಾಡವನನು ಸಿದ್ಧೋಪಾಯನಾದ ಸರ್ವಶಕ್ತನಾದ ಸ್ವಾಮಿಯೆಂದು ತಿಳಿಸುವದಕ್ಕಾಗಿ ಪ್ರಭು ಶಬ್ದವನ್ನುಪಯೋಗಿಸಿರುತ್ತಾರೆ, ಹಾಗೆ ಪ್ರೇರಿಸುವದಕ್ಕೆ ಸರ್ವೇಶ್ವರನಿಗೆ ಸರ್ವಶಕ್ತತೆಯೂ, ಕಲ್ಯಾಣ ಗುಣಗಣವೂ, ಪತ್ನೀ ಮೊದಲಾದ ವಿಶೇಷಣಗಳ ವಿಶಿಷ್ಟತೆಯೂ, ತತ್ತತ್ಫಲಪ್ರದಾನಕ್ಕೆ ಬೇಕಾದ ಸ್ವಾತಂತ್ರ್ಯ ಸಾಮರ್ಥ್ಯಾದಿಗಳೂ ಪ್ರಭು ಶಬ್ದದಿಂದ ಸಙ್ಗ್ರಹಿಸಲ್ಪಟ್ಟವು ಈ ಪ್ರಭು ಶಬ್ದವನ್ನೇ ಶ್ರೀದೇಶಿಕರವರು ಮುಂದಿನ ವಾಕ್ಯದಲ್ಲಿ **"ಸರ್ವಜ್ಞನಾಯ್, ಸರ್ವಶಕ್ತಿಯಾಯ್, ಪರಮ ಕಾರುಣಿಕನಾಯ್, ಸರ್ವಶೇಷಿಯಾಯ, ಸಪತ್ನೀಕನಾಯ, ಸರ್ವಲೋಕ ಶರಣ್ಯಾ"** ಎಂದು ವಿಸ್ತರಿಸಿರುತ್ತಾರೆ. ಹೀಗೆ ಸಾಧ್ಯೋಪಾಯಗಳಿಂದಾರಾಧಿತನಾಗಿಯೇ ಸಿದ್ಧೋಪಾಯನು ಫಲವನ್ನು ಕೊಡುವನೆಂಬ ಭಿಪ್ರಾಯವು, ತಮಗೆ ಆಚಾರ್ಯ ಪರಂಪರಯಾ ಉಪದೇಶಮುಖೇನ ಬಂದುದು ಎಂದು ತಿಳಿಸುವದಕ್ಕಾಗಿ **ಸಂಪ್ರದಾಯಸ್ಥಿತಿಃ** ಎಂಬ ಪ್ರಯೋಗವು ಪ್ರಕೃತ ಮೋಕ್ಷಪ್ರಾಪ್ತಿಗೆ ಭರನ್ಯಸನ ಜ್ಞಾನಗಳಿಲ್ಲವೆ ಪ್ರಭುವು ಮೋಕ್ಷವನ್ನು ಕೊಡುವದಿಲ್ಲವೆಂಬುದು ತಮ್ಮ ಅಭಿಪ್ರಾಯ ಮಾತ್ರವೇ ಅಲ್ಲವು ನಾಧಮ್ಯಗಳು ಮೊದಲುಗೊಂಡು ಸಂಪ್ರದಾಯ ರೀತ್ಯಾ ದೊರೆತ ಇವೇ ಅಭಿಪ್ರಾಯವು. ಆದುದರಿಂದ ಸರ್ವೇಶ್ವರನು ಮಹಾಕೃಪಾನಿಧಿಯು, ಹೇಗಾ ಉದಾರನಾಗುವನು, ಈ ಭರನ್ಯಾಸಾದಿಗಳಿಂದ ಪ್ರಯೋಜನವೇನು, ಇತ್ಯಾದಿ ಆಕ್ಷೇಪಗಳಿಗೆ ಸ್ವತರಾಂ ಅವಕಾಶವಿಲ್ಲವೆಂಬ ಭಾವವು. ಇದು ಸಂಪ್ರದಾಯಸ್ಥಿತಿಯಾದುದರಿಂದ ಆಧಾರವನ್ನು ಉಲ್ಲಂಘಿಸಿ ನಡೆಯುವವ ಶ್ರೇಯಸ್ಸಾಧನವಲ್ಲವೆಂಬ ಭಾವವೂ ತೋರಿಬರುತ್ತದೆ.

ಬರೀ ಸಂಪ್ರದಾಯಸ್ಥಿತಿಯೇ ಆದ ಪಕ್ಷದಲ್ಲಿ ಪ್ರತಿಕಕ್ಷಿಯವರು ನಮ್ಮನ ಬಂದಂತೆ ನಡೆಯಬಹುದು. ಆ ಸಂಪ್ರದಾಯಸ್ಥಿತಿಗೆ ಸಂಪೂರ್ಣ ಬಲವುಂಟೆಂದು ಹೇಳುತ್ತಾರೆ. **ಪ್ರಥಮತಃ** ಸತ್ತರ್ಕದ ಬಲವುಂಟೆಂದು **ನಯವತೀಭಿಃ** ಎಂಬುದರಿಂದ ಉಪದೇಶಿಸುತ್ತಾರೆ. **ಫಲಮತ ಉಪಪತ್ತೇಃ** ಎಂಬ (೩.೨.೩೭) ಶಾರೀರಕ

ಸೂತ್ರದಲ್ಲಿ ಶ್ರುತಿಯಲ್ಲಿ ಹೇಳಿರುವ ಭಗವಂತನ ಅನುಗ್ರಹವೇ ಫಲಪ್ರದವಲ್ಲದೆ ಶ್ರುತಿಯಲ್ಲಿ ಹೇಳದ ಉಪೂರ್ವವು ಫಲಪ್ರದವಲ್ಲವೆಂದು ತೋರಿಸಿರುವ ಸತ್ತರ್ಕವನ್ನು ಗೃಹೀತವಾದುದು ಶ್ರುತಿಸ್ಮೃತಿ ಗುರೂಕ್ತಿಗಳು ಎಂಬ ಭಾವವು ಶ್ರೀ ದೇಶಿಕರ ವರ ಆಚಾರ್ಯರಾದ ವಾದಿಹಂಸಾಂಬುವಾಹರೆಂಬ ಅಪರನಾಮಧೇಯವುಳ್ಳ ಉಪ್ಪುಳ್ಳಾರ್ಯವರು ವಾದಿಗಳಲ್ಲಿ ಪ್ರಥಮರು, ಅಂತಹ ಮಹನೀಯರು ಈ ಶ್ರುತಿ ಸ್ಮೃತಿ ಗುರೂಕ್ತಿಗಳನ್ನೆಲ್ಲಾ ವಾದಮೂಲಕ ಸ್ಥಿರಪಡಿಸಿ ತಮಗೆ ಉಪದೇಶಿಸಿದರು ಎಂಬರ್ಥವು **ನಯನತೀಭಿರಾಭಾತಿ ನಃ** ಎಂಬುದರಿಂದ ತೋರಿಬರುತ್ತದೆ. ಹೀಗೆ ಶ್ರುತಿ ಸ್ಮೃತಿ ಗುರೂಕ್ತಿಗಳು ನ್ಯಾಯಾನುಗೃಹೀತಗಳಾದರೇ ಶಾಸ್ತ್ರಾರ್ಥಗಳು, **ಆಭಾತಿ**-ಪ್ರಕಾಶಿಸುತ್ತವೆ. ಇಲ್ಲದಿದ್ದರೆ ಕುವಾದಗಳಿಂದ ಅಪಾರ್ಥಗಳೇ ತೋರಿಬರುವದರಿಂದ ಪ್ರಕಾಶಿಸುವದಿಲ್ಲವೆಂದೂ, ಆ ಕಾರಣದಿಂದಲೇ ವಿಪಕ್ಷದವರಿಗೆ ಪ್ರಕಾಶಿಸಲಿಲ್ಲವೆಂಬ ಭಾವವು. ತಮಗಾದರೋ ಮಹಾವಾದಿಶ್ರೇಷ್ಠರುಗಳ ಉಪದೇಶವು ದೊರೆತು ಶ್ರುತಿ ಸ್ಮೃತಿ ಗುರೂಕ್ತಿಗಳಿಗೆ ನ್ಯಾಯಾನುಗೃಹೀತ ಸಮಂಜಸಾರ್ಥವು ದೊರೆತಿರುವದರಿಂದ ತಾವು ಈ ಭಾಗದಲ್ಲಿ ತುಂಬಾ ಸುಕೃತಿಗಳೆಂದು ತಮ್ಮ ಎಣಿಕೆಯನ್ನು ಮಿಟ್ಟಿ **ನಃ** ಎಂದು ಹೇಳಿಕೊಳ್ಳುವಹಾಗೆ **ಆಭಾತಿನಃ** ಎಂದು ಹೇಳಿಕೊಂಡಿರುತ್ತಾರೆ

ಸಾಧ್ಯೋಪಾಯಗಳಿಂದ ಪ್ರೀತನಾದ ಸಿದ್ಧೋಪಾಯನೇ ಸಕಲ ಫಲಪ್ರದನೆಂಬುದಕ್ಕೆ ಪ್ರಮಾಣಗಳು ಯಾವುವೆಂದರೆ :—

೧. **" ಸ ವಾ ಏಷ ಮಹಾನಜಃ ಆತ್ಮಾ ಅನ್ನಾದೋ ವಸುದಾನೋ ವಿನ್ದತೇ ವಸು "** (ಬ. ೬ ಳ ೩೪) ಯಾವನು ಈ ಮಹತ್ತಾಗಿ ನಿತ್ಯನಾಗಿ ಉತ್ಪತ್ತಿ ರಹಿತನಾದ ಪರಮಾತ್ಮನನ್ನು ಅನ್ನವನ್ನೂ ದ್ರವ್ಯವನ್ನೂ ಕೊಡವ ಸಿದ್ಧೋಪಾಯನೆಂದು ತಿಳಿದು ಉಪಾಸಿಸುತ್ತಾನೋ, ಆತನು ಅನ್ನವನ್ನೂ ದ್ರವ್ಯವನ್ನೂ ಹೊಂದುವನು ಎಂಬರ್ಥವು ಇವರಿಂದ ಸಾಧ್ಯೋಪಾಯಾನುಷ್ಠಾನದಿಂದ ಫಲವೆಂಬುದು ವ್ಯಕ್ತವು. ಆದರೂ ಫಲಕೊಡುವವನು ಸರ್ವೇಶ್ವರನು, ಸಾಧ್ಯೋಪಾಯವಲ್ಲವು ಸಾಧ್ಯೋಪಾಯದಿಂದ ಆರಾಧಿತನಾಗಿ ಪ್ರೀತನಾಗಿ ಫಲವನ್ನು ಕೊಡುವನು

೨ **" ಸ ಏನೈನಂ ಭೂತಿಂ ಗಮಯತಿ "** (ಯಜುರ್ವೇದ ಪ್ರಾಹಿತೆ ೨೧೧) ಯಾರು ವಾಯುದೇವತಾಕಾಮ ಯಜ್ಞವನ್ನು ಮಾಡುವರೋ, ಅವರಿಗೆ ಆದೇ ವಾಯುದೇವತೆಯು ಎಂದರೆ ತದಂತರ್ಯಾಮಿಯಾದ ಭಗವಂತನು, ಐಶ್ವರ್ಯವನ್ನು ಹೊಂದಿಸುವನು.

೩. **"ತಮುಕ್ರತುಂ ಪಶ್ಯತಿ ವೀತಶೋಕೋಧಾತುಃ ಪ್ರಸಾದಾನ್ಮಹಿಮಾನ ಮೀಶಂ "** (ತೈತ್ತರೀಯ. ಆಂಭೃಣಿ) ಅಂತಹ ಸರ್ವಕರ್ಮ ಬಂಧ ಶೂನ್ಯ

ನಾದ ಅಪಹತ ಪಾಪ್ಮನಾದ ಮಹತ್ತಾದ ಮಹಿಮೆಯುಳ್ಳ ಸರ್ವ ನಿಯಾಮಕ ನಾದ ಪರಮಾತ್ಮನನ್ನು ಯಾವಾಗ ಸಾಕ್ಷಾತ್ಕರಿಸುವನೋ, ಆಗ ಸರ್ವ ಸ್ವಷ್ಟಾ ವಾದ ಪರಮಾತ್ಮನ ಅನುಗ್ರಹದಿಂದ ಶೋಕವಿಲ್ಲದವನಾಗುವನು ಎಂದರೆ ನಿರತಿ ಶಯ ಆನಂದವನ್ನು ಹೊಂದುವನು. (೪. ೨ ೧.)

೪. "ಯಂಯಮಂತತಮಭಿಕಾಮಾ ಭವಂತಿ, ತಂತಮೇವೋಪ ಜೀವಂತಿ"

೫. "ಯಮೇ ವೈಷ ವೃಣುತೇ ತೇನ ಲಭ್ಯಃ" (ಮುಂ. ೩ ೨.೩) ಇದರರ್ಥವು ಹಿಂದೆಯೇ ಉಪಪಾದಿತವು.

ಸ್ಮೃತಿವಾಕ್ಯಗಳು.

೬. "ಅಹಂ ಹಿ ಸರ್ವ ಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ।
ಭೋಕ್ತಾರಂ ಯಜ್ಞತಪಸಾಂ ಸರ್ವಲೋಕ ಮಹೇಶ್ವರಂ॥
ಯೇ ಯಜಂತಿ ಪಿತೄ್ ದೇವಾ್ ಬ್ರಾಹ್ಮಣಾ್ ಸಹುತಾಶನಾ್।
ಸರ್ವಭೂತಾಂತರಾತ್ಮಾನಂ ವಿಷ್ಣುಮೇವ ಯಜಂತಿತೇ॥

ಎಂಬುದರಿಂದ ಸಾಧ್ಯೋಪಾಯಗಳಾದ ಸರ್ವ ಕರ್ಮಗಳಿಂದಲೂ ಶ್ರೀ ಮಹಾ ವಿಷ್ಣುವೇ ಆರಾಧಿಸಲ್ಪಡುವನೆಂದು ಹೇಳಲ್ಪಟ್ಟಿತು. ಮುಂದೆ ಅತನೇ ಪ್ರೀತನಾಗಿ ಅವುಗಳಿಗೆ ಉಚಿತವಾದ ಫಲಗಳನ್ನು ಕೊಡುವನೆಂದು ಹೇಳಲ್ಪಡುತ್ತದೆ:—

"ಯೋ ಯೋ ಯಾಂ ಯಾಂ ತನುಂ ಭಕ್ತಃ ಶ್ರದ್ಧಯಾರ್ಚಿತು ಮಿಚ್ಛತಿ" ಎಂದು ಪ್ರಾರಂಭಿಸಿ ಕಡೆಗೆ,

"ಲಭತೇ ಚ ತತಃ ಕಾನ್ಮಾ ಮಯೈವ ವಿಹಿತಾ್ ಹಿತಾ್"॥

ಎಂಬುದರಿಂದ ಸಾಧ್ಯೋಪಾಯಕ್ಕೆ ಉಚಿತವಾದ ಫಲವನ್ನು ಕೊಡುವವನೂ ತಾನೇ ಎಂದುಪದೇಶಿಸಲ್ಪಟ್ಟಿರುತ್ತದೆ. ಹಾಗೆಯೇ ಇನ್ನೊಂದು ಕಡೆಯಲ್ಲೂ,

ಅನನ್ಯೇನೈವ ಯೋಗೇನ ಮಾಂ ಧ್ಯಾಯಂತ ಉಪಾಸತೇ।
ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರ ಸಾಗರಾತ್॥

ಇಲ್ಲಿಯೂ ಸಾಧ್ಯೋಪಾಯವಾದ ಯೋಗದಿಂದಲೇ ಬ್ರಹ್ಮಪ್ರಾಪ್ತಿಯು ಹೇಳಲ್ಪಟ್ಟಿರುತ್ತದೆ. (ಗೀ. ೮೬ ೨೪)

ವಾಲ್ಮೀಕಿ ಮಹರ್ಷಿಯೂ ಕೂಡ

೭. " ಕಥಂಚಿದುಪಕಾರೇಣ ಕೃತೇನೈಕೇನ ತುಷ್ಯತಿ" ಎಂಬುದರಿಂದ ಸಾಧ್ಯೋಪಾಯದಿಂದ ಶ್ರೀ ರಾಮನು ಸಂತುಷ್ಟನಾಗಿ, ಅನುಗ್ರಹೋನ್ಮುಖನಾಗು

ವನು ಎಂಬುದನ್ನು "**ನಸ್ಮರತ್ಯಪಕಾರಾಣಾಂ ಶತಮುಷ್ಯಾತ್ಮವತ್ತಯಾ**" ಎಂಬುದರಿಂದ ತಿಳಿಸಿರುತ್ತಾರೆ.

೮. ಶ್ರೀ ಪರಾಶರರು ಪ್ರಾಚೀನ ಬರ್ಹಿವಾಕ್ಯದಿಂದ ಹೇಳುತ್ತಾರೆ :—

ಧರ್ಮಮರ್ಥಂ ಚ ಕಾಮಂ ಚ ಮೋಕ್ಷಂಚಾನ್ವಿಚ್ಛತಾಂ ತಥಾ ।
ಆರಾಧನೀಯೋ ಭಗವಾನನಾದಿಃ ಪುರುಷೋತ್ತಮಃ ॥

(ವಿ ಪು. ೧. ೧೪. ೧೬) ಚತುರ್ವಿಧ ಪುರುಷಾರ್ಥಗಳನ್ನಪೇಕ್ಷಿಸುವವರು ಆಯಾ ಫಲಗಳಿಗನ ಗುಣವಾದ ಸಾಧ್ಯೋಪಾಯಗಳಿಂದ ಪುರುಷೋತ್ತಮನನ್ನು ಆರಾಧಿಸತಕ್ಕದ್ದೆಂದು ಹೇಳಲ್ಪಟ್ಟಿರುತ್ತದೆ.

೯. "**ಕರ್ಣಧಾರ ಇವಾಪಾರೇ ಭಗವಾ೯ ಪಾರದರ್ಶನಃ**" ಸಂಸಾರ ಸಾಗರದಲ್ಲಿ ಮಗ್ನರಾದವರನ್ನು ಸರ್ವೇಶ್ವರನು ಹಡಗಿನಲ್ಲಿ ಕೂಡಿಸಿ ಆಚೆಯ ದಡವನ್ನು ಸೇರಿಸುವನೆಂಬುದರಿಂದ ಸಿದ್ಧೋಪಾಯನೆಂಬುದನ್ನೂ, ಹಾಗೆ ಸಿದ್ಧೋಪಾಯನಾಗಲು ಬೇಕಾದ ಭಗವತ್ಪ್ರೀತಿಯುಂಟಾಗಬೇಕಾದರೆ, "**ಆತಃ ಪುಮ್ಭಿರ್ದ್ವಿಜಶ್ರೇಷ್ಠಾ ವರ್ಣಾಶ್ರಮ ವಿಭಾಗಶಃ । ಸ್ವನುಷ್ಠಿತಸ್ಯ ಧರ್ಮಸ್ಯ ಸಂಸಿದ್ಧಿರ್ಹರಿತೋಷಣಮ್॥ ತಸ್ಮಾದೇಕೇನ ಮನಸಾ ಭಗವಾ೯ ಸಾತ್ವತಾಂ ಪತಿಃ । ಶ್ರೋತವ್ಯಃ ಕೀರ್ತಿತವ್ಯಶ್ಚ ಧ್ಯೇಯಃ ಪೂಜ್ಯಶ್ಚ ನಿತ್ಯದಾ॥**" (ಭಾ. ೧. ೨. ೧೩-೪) ಎಂಬುದರಿಂದ ಸಾಧ್ಯೋಪಾಯದ ಆವಶ್ಯಕತೆಯು ಹೇಳಲ್ಪಟ್ಟಿತು ಹಾಗೆಯೇ "**ಶ್ರವಣಂ ಕೀರ್ತನಂ**" ಎಂಬಲ್ಲಿಯೂ ಸಾಧ್ಯೋಪಾಯಗಳೂ ತತ್ಸಹಕಾರಿಗಳೂ ಹೇಳಲ್ಪಟ್ಟವು ಮತ್ತು "**ಭಗವದ್ಭಕ್ತಿಯೋಗೇನ ಪ್ರಾಪ್ತಾ ಭಾಗವತೀ ಗತಿಃ**" ಭಾಗ. (೩. ೨೪. ೫೭) ಎಂಬಲ್ಲಿ ಭಕ್ತಿಯೋಗದಿಂದ ಮೋಕ್ಷಫಲವು ವಿಧಿಸಲ್ಪಟ್ಟಿರುತ್ತದೆ

೧೦. ಸರ್ವೇಶ್ವರನೇ ಲೋಕಗುರುವಾಗಿ ಅನೇಕ ಸ್ಥಳಗಳಲ್ಲಿ ಸಾಧ್ಯೋಪಾಯಾವಶ್ಯಕತೆಯನ್ನು ಪದೇಶಿಸಿರುತ್ತಾನೆ. "**ಸರ್ವಧರ್ಮಾ೯ ಪರಿತ್ಯಜ್ಯ ಮಾಮೇಕಂ ಶರಣಂವ್ರಜ**" ಎಂದೂ (ಗೀ ೧೮ ೬೬) "**ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ । ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ**" (ರಾ ಅಯೋಧ್ಯಾ ೧೮ ೩೩) ಎಂದೂ ತನ್ನ ದಿವ್ಯಸಙ್ಕಲ್ಪವನ್ನು ವ್ಯಕ್ತಪಡಿಸಿರುತ್ತಾನೆ.

೧೧. **ಶ್ರುತಿ ಸ್ಮೃತಿ ಗುರೂಕ್ತಿಭಿಃ** ಎಂಬಲ್ಲಿ ಗುರೂಕ್ತಿಭಿಃ ಎಂಬುದರಿಂದ ಶ್ರೀ ಯತಿವರ್ಯರು "**ಫಲಮತ ಉಪಪತ್ತೇಃ**" ಎಂಬ ಸೂತ್ರವ್ಯಾಖ್ಯಾನದಲ್ಲಿ ಹೇಳಿರುವ "**ಸ ಏವಹಿ ಸರ್ವಜ್ಞಸ್ಸರ್ವಶಕ್ತಿರ್ಮಹೋದಾರೋ ಯಾಗದಾನ ಹೋಮಾದಿಭಿ ರಪಾಸನೇನಚಾರಾಧಿತಃ ಐಹಿಕಾಮುಷ್ಮಿಕ**

ಸಾಧ್ಯೋಪಾಯಂ ವಿನಾ ಸಿದ್ಧೋಪಾಯಸ್ಯ ವಶೀಕರಣಂ ನ ಸಾಧ್ಯಂ.

ಇಪ್ಪಡಿ ಸರ್ವಜ್ಞನಾಯ್, ಸರ್ವಶಕ್ತಿಯಾಯ್, ಪರಮಕಾರುಣಿಕ

ಭೋಗಜಾತಂ ಸ್ವಸ್ವರೂಪಾವಾಪ್ತಿರೂಪಮುಪವರ್ಗಂ ಚ ದಾತುಮಿಷ್ಟೇ " ಮತ್ತು ಹಾಗೆಯೇ ಸಲಾಧಿಕರಣದ ಕೊನೆಯಲ್ಲಿ ಕೇಳಿರುವ "ತದಾರಾಧನ ರೂಪಾಣಿ ಚ ಯಾಗದಾನ ಹೋಮಪಾತ್ಮಕಾನಿ", "ಸ್ತುತಿನಮಸ್ಕಾರ ಸಂಕೀರ್ತನಾರ್ಚನಧ್ಯಾನ ನ್ಯಾಸಾದಿಭಿರಾರಾಧಿತಾತ್ಪರಸ್ಮಾತ್ಪುರುಷಾದೆವ್ಹೀಗಾಪವರ್ಗರೂಪ ಫಲಂಚ ವದಂತೀತಿಸರ್ವಂ ಸಮಂಜಸಂ" ಎಂಬೀ ವಾಕ್ಯಗಳೂ ಸಹ ಜ್ಞಾಪಿಸಲ್ಪಟ್ಟವು ಇವುಗಳ ಅರ್ಥವೇನೆಂದರೆ :— "ಆ ಪರಬ್ರಹ್ಮನು, ತಾನೇ ಸರ್ವಜ್ಞನು, ಸರ್ವಶಕ್ತಿಯುಳ್ಳವನು, ಮಹೋದಾರಿಯು, ಹೋಮ ಮೊದಲಾದವುಗಳಿಂದಲೂ, ಉಪಾಸನೆಯಿಂದಲೂ ಕೂಡ ಆರಾಧಿಸಲ್ಪಟ್ಟವನಾಗಿ ಐಹಿಕಾಮುಷ್ಮಿಕಭೋಗ ಸಮೂಹವನ್ನೂ, ಚೇತನನು ತನ್ನ ಸ್ವಂತ ಸ್ವರೂಪವನ್ನು ಹೊಂದುವ ಮೋಕ್ಷವನ್ನೂ, ಕೊಡಲು ಶಕ್ತನಾಗಿದ್ದಾನಷ್ಟೆ" ಮುಂದೆ ಅಚೇತನವಾಗಿ ಅನಿತ್ಯವಾಗಿ ಕ್ಷಣಧ್ವಂಸಿಯಾಗಿರುವ ಕರ್ಮವು ಕಾಲಾನ್ತರದಲ್ಲಿ ಪ್ರಾಪ್ತವಾಗುವ ಫಲವನ್ನು ಕೊಡಲಾರದಷ್ಟೇ ಎಂದು ಇನ್ನೆ- "ಸ್ತುತಿ ನಮಸ್ಕಾರ ಕೀರ್ತನೆ ಅರ್ಚನೆ ಉಪಾಸನೆ ಭರಸಮರ್ಪಣೆ ಮೊದಲಾದವುಗಳಿಂದ ಆರಾಧಿಸಲ್ಪಟ್ಟ ಪರಮ ಪುರುಷನಿಂದಲೇ ಸರ್ವವಿಧ ಭೋಗಗಳೂ ಮೋಕ್ಷವೂ ಸಹ ಫಲವೆಂದು ವೇದಾನ್ತಗಳು ಹೇಳುತ್ತವೆಯಾದುದರಿಂದ ಸಮಸ್ತ ಶಾಸ್ತ್ರವೂ ನಮಗೆ ಸಮಂಜಸವು" ಎಂದು ಹೇಳಿ ಫಲಾಧಿಕರಣವನ್ನು ಮುಗಿಸಿರುತ್ತಾರೆ. ಹೀಗೆ ಸಾಧ್ಯೋಪಾಯಾವಶ್ಯಕತೆಯನ್ನು ಹೇಳುವ **ನಃ**-ತಮಗೆ, ಸರ್ವವೂ ಸಮಂಜಸವು ಎಂಬರ್ಥವನ್ನು ಸೂಚಿಸುವದಕ್ಕಾಗಿಯೇ, **ಅಭಾತಿನಃ** ಎಂದ. ಪ್ರಯೋಗಿಸಿರುತ್ತಾರೆ. ಹೀಗೆ ಶ್ರೀ ದೇಶಿಕರವರು ಶ್ರೀ ಭಾಷ್ಯಾರ್ಥಗಳನ್ನು ಮನಸ್ಸಿನಲ್ಲಿಟ್ಟೇ ಪ್ರಯೋಗಗಳನ್ನು ಮಾಡಿರುತ್ತಾರೆ.

ಸಾಧ್ಯೋಪಾಯವಿಲ್ಲದೆ ಸಿದ್ಧೋಪಾಯನನ್ನು ವಶಮಾಡಿಕೊಳ್ಳುವದು ಸಾಧ್ಯವಿಲ್ಲವು

ಸಿದ್ಧೋಪಾಯನ ಸ್ವರೂಪ ಮಾಹಾತ್ಮ್ಯಯನ್ನು ಚನ್ನಾಗಿ ಅರಿತವನಾಗಿದ್ದರೂ, ಆತನಲ್ಲಿ ತುಂಬಾ ಭಕ್ತಿಯೂ ಸಂಸಾರದಲ್ಲಿ ಸಂಪೂರ್ಣವಾದ ವೈರಾಗ್ಯವೂ, ಪ್ರಾಪ್ತವಾಗಿದ್ದರೂ, ಪ್ರಾಪ್ಯವನ್ನು ಹೊಂದಬೇಕೆಂಬ ರುಚಿ, ತ್ವರೆ ಸಹ ತಲೆತೋರಿ

ಮಾಯ್, ಸರ್ವಶೇಷಿಯಾಯ್, ಸಪತ್ನೀಕಮಾಯ್, ಸರ್ವಲೋಕ ಶರಣ್ಯಮಾನ ಸಿದ್ಧೋಪಾಯ ವಿಶೇಷಮ್ ತೆಳಿನ್ದಾಲುಮ್, (೧) "ಆರೋಗ್ಯ

ದ್ದರೂ, ಹೀಗೆ ಜ್ಞಾನ ಭಕ್ತಿ ವೈರಾಗ್ಯಗಳು ಈ ಮೋಕ್ಷಾರ್ಥಿಗೆ ಉಂಟಾಗಿದ್ದರೂ, ಸಾಧ್ಯೋಪಾಯವನ್ನು ಅನಷ್ಠಿಸುವಹಾಗೆ ಮಾಡುವ ತನ್ನ ಸುಕೃತವೂ ಆದನ್ನು ಚನ್ನಾಗಿ ತಿಳಿಯುವ ಭಗವಂತನ ಅನುಗ್ರಹವೂ, ಇಲ್ಲದ ಪಕ್ಷದಲ್ಲಿ ಈ ಸಿದ್ಧೋಪಾಯನಾದ ಮುಕುಂದನು " **ನದಿಶತಿ ಮುಕುಂದೋ ನಿಜಪದಂ** " ಎಂದು ಹೇಳಿರುವಹಾಗೆ, ಮೋಕ್ಷವನ್ನು ಕೊಡುವದಿಲ್ಲವು ಎಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.

ನರ್ವೇಶ್ವರನು ಸಿದ್ಧೋಪಾಯನಾಗಲು ಬೇಕಾದ ಕಲ್ಯಾಣಗುಣಗಳು ಆತನಲ್ಲಿನೆ ಎಂದು ಪ್ರಥಮತಃ ಹೇಳುತ್ತಾರೆ. **ಇಪ್ಪಡಿ-ಸಿದ್ಧೋಪಾಯ ಶೋಧನಾಧಿಕಾರದಲ್ಲಿ ಸ್ಥಾಪಿಸಿದ ರೀತಿಯಲ್ಲಿ, ಸರ್ವಜ್ಞನ್ ಮಾಯ್**-ಸರ್ವಜ್ಞನಾಗಿ, ಸದಾ ಏಕಕಾಲದಲ್ಲೇ ಎಲ್ಲವನ್ನೂ ಸಾಕ್ಷಾತ್ಕರಿಸುವವನಾಗಿ, ಇದರಿಂದ ಚೇತನನು ಮಾಡಿದ್ದನ್ನರಿತು ಆತನು ಹೇಗೆ ಅನುಗ್ರಹಕ್ಕೆ ಅರ್ಹನೆಂದು ತಿಳಿಯಲು ಬೇಕಾದಗುಣವು, **ಸರ್ವಶಕ್ತಿಯಾಯ್** - ಈತನುಮಾಡುವ ಸಾಧ್ಯೋಪಾಯಗಳಿಂದ, ಪ್ರಾಪ್ಯಪ್ರಾಪಕಗಳಿಗೆ ವಿರೋಧಗಳನ್ನು ನಿವಾರಣೆಮಾಡುವ ಶಕ್ತಿಯು, ಐಹಿಕಗಳಿಗಾಗಿ ಸಾಧ್ಯೋಪಾಯಾನುಷ್ಠಾನವಾದರೂ, **ತತ್ಫಲಪ್ರಾಪ್ತಿ** ವಿರೋಧಿಗಳನ್ನೂ ಹೋಗಲಾಡಿಸುವ ಶಕ್ತಿಯು, **ಪರಮಕಾರುಣಿಕಮಾಯ್**-ಕೃಪಾಸಾಗರನಾಗಿ, ಸಾಮರ್ಥ್ಯವಿದ್ದರೂ ಕೃಪೆಯಿಲ್ಲದಿದ್ದರೆ ಅನುಗ್ರಹ ಉಂಟಾಗುವದಿಲ್ಲವೆಂದು ಉಪಪಾದಿಸಿರುವಹಾಗೆ, **ಅನುಗ್ರಹಕ್ಕೆ ಕೃಪೆಯೂ ಆವಶ್ಯಕವು, ಸರ್ವಶೇಷಿಯಾಯ್**- ಎಲ್ಲವೂ ತನ್ನ ಪ್ರಯೋಜನಕ್ಕಾಗಿರುವದರಿಂದ ಸಮಸ್ತಕ್ಕೂ ಶೇಷಿಯಾಗಿ, ಇದರಿಂದ ಚೇತನಾನುಗ್ರಹವೂ ಆತನನ್ನು ಪ್ರೀತಿಸುವ ಸ್ವಭಾವವೂ ಹೇಳಲ್ಪಟ್ಟವು, **ಸಪತ್ನೀಕಮಾಯ್**-ಅನುಗ್ರಹಮಯಳಾಗಿ ಚೇತನ ಸಂರಕ್ಷಣೆಯಲ್ಲಿ ಬದ್ಧಾದರವುಳ್ಳ ಪತ್ನಿಯಾದ ಲಕ್ಷ್ಮಿಯಿಂದ ಯುಕ್ತನಾಗಿ, **ಈ ವಿಶೇಷಣವೂ ಅನುಗ್ರಹಕ್ಕೆ ಆವಶ್ಯಕವು, ಸರ್ವಲೋಕಶರಣ್ಯಮಾನ** - ಸಮಸ್ತ ಚೇತನರಿಗೂ **"ಸಮೋಹಂಸರ್ವಭೂತೇಷು"** ಎಂದು ಹೇಳಿರುವಹಾಗೆ ಏನೊಂದೂ ಪಕ್ಷಪಾತವಿಲ್ಲದೆ ತನ್ನನ್ನಾಶ್ರಯಿಸಿದವರನ್ನೆಲ್ಲಾ ಉದ್ಧಾರ ಮಾಡುವವನಾದ, **ಸಿದ್ಧೋಪಾಯ ವಿಶೇಷಮ್ ತೆಳಿನ್ದಾಲುಮ್** - ಸರ್ವೇಶ್ವರನೇ ಸಿದ್ಧೋಪಾಯನೆಂಬ ಜ್ಞಾನ ಉಂಟಾಗಿದ್ದರೂ, ಮತ್ತು (೨)

---

(೧)

ಮಿಂದ್ರಿಯೌಲ್ಪಣ್ಯ ಮೈಶ್ವರ್ಯಂ ಶತ್ರು ಶಾಲಿತಾ । ವಿಯೋಗೋ ಬಾಂಧವೈರಾಯುಃ ಕಿಂತದ್ಯೇನಾತ್ರತುಷ್ಯತಿ" ಎಜ್ಞಿರಪಡಿಯೇ ವಿವೇಕಮಿಲ್ಲಾದಾರ್ಕು ಗುಣಮಾಯ್ ತೋತ್ತಿನ ವೈಯುಮ್ ದೋಷಮಾನಪಡಿ ಕಂಡು (ಸಂಸಾರ) ವೈರಾಗ್ಯಮ್ ಪೂರ್ಣಮಾನಾಲುಮ್ (೨) "ಪರಃಮಾತ್ಮನಿ

"ಆರೋಗ್ಯಮಿಂದ್ರಿಯೌಲ್ಪಣ್ಯಂ - ಆರೋಗ್ಯವು ವಿಷಯೋಪಭೋಗಿಗೆ ಬಹಳ ಬೇಕಾದುದಾದರೂ, ವಿವೇಕಿಗೆ ಇಂದ್ರಿಯಗಳ ಹಾವಳಿಗೆ ಕಾರಣಭೂತವಾಗಿ ದೋಷಯುಕ್ತವಾದುದು, ಐಶ್ವರ್ಯಂ ಶತ್ರುಶಾಲಿತಾ-ಐಶ್ವರ್ಯವೇನೋ ಐಹಿಕ ಭೋಗಗಳಿಗೆ ಸಾಧಕವಾಗಿದ್ದರೂ ವಿವೇಕಿಗೆ ಇತರರಲ್ಲಿ ಅಸೂಯೆಯನ್ನುಂಟು ಮಾಡುವದರಮೂಲಕ ಶತ್ರುಗಳನ್ನುಂಟುಮಾಡುವ ದೋಷವುಳ್ಳದು, ಅಥವಾ ಕಾಮಕ್ರೋಧಾದಿಗಳನ್ನುಂಟುಮಾಡುವ ದೋಷವುಳ್ಳದು, ವಿಯೋಗೋ ಬಾಂಧವೈರಾಯುಃ - ಆಯುಸ್ಸು ಬಹುಕಾಲ ಈ ಲೋಕದ ಉಪಭೋಗಗಳಿಗೆ ಸಾಧಕವಾಗಿದ್ದರೂ, ಬಹುಕಾಲ ಬದುಕಿದವನಿಗೆ ಪುತ್ರ ಕಳತ್ರ ಸಹೋದರಾದಿಗಳಾದ ಅನೇಕ ಬಂಧುವಿಯೋಗಮೂಲಕ ದುಃಖವನ್ನುಂಟುಮಾಡುವ ದೋಷವುಳ್ಳದು, ಹೀಗಿರುವಾಗ, ಯೇನ - ಯಾವುದರಿಂದ, ಅತ್ರ – ಈ ದೋಷ ಸಪ್ತಕಗಳಿಂದ ಕೂಡಿದ ಲೋಕದಲ್ಲಿ, ತುಷ್ಯತಿ – ಸಂತೋಷಪಡುವನೋ, ತತ್-ಅದು, ಕಿಂ - ಯಾವುದು ? ಎಂದರೆ ಯಾವುದೂ ವಿವೇಕಿಗೆ ಸಂತೋಷಕರವಾದುದಿಲ್ಲವು ಎಂಬ ಭಾವವು. ಸರ್ವವೂ (೩) "ಭಯನಿದಾನವೇ" ಭಯಕ್ಕೆ ಕಾರಣಭೂತವಾದುದೇ ಎಂಬ ತಾತ್ಪರ್ಯವು. ಎಜ್ಞಿರಪಡಿಯೇ - ಎಂದು ಹೇಳಿರುವಹಾಗೆ, ವಿವೇಕಮಿಲ್ಲಾದಾರ್ಕು - ವಿವೇಕವಿಲ್ಲದವರಿಗೆ, ಗುಣಮಾಯ್ ತೋತ್ತಿನ ವೈಯುಮ್ - ಒಳ್ಳೆದೆಂಬದಾಗಿ ತೋರಿಬಂದ, ಆಯುರಾರೋಗ್ಯೈಶ್ವರ್ಯವೆಲ್ಲವೂ, ದೋಷಮಾನಪಡಿ ಕಂಡು - ದೋಷಯುಕ್ತವಾದುದು ಎಂದು ಚನ್ನಾಗಿ ಅರಿತು, ವೈರಾಗ್ಯಮ್ ಪೂರ್ಣಮಾನಾಲುಮ್ -- ಸಂಸಾರದಲ್ಲಿ ವೈರಾಗ್ಯವು ಸಂಪೂರ್ಣವಾಗಿ ಉಂಟಾಗಿದ್ದರೂ

"ಸಂಪದಸ್ವಪ್ನ ಸಂಕಾಶಾ ಯೌವನಂ ಕುಸುಮೋಪಮಂ ।
ತಟಿಚ್ಚಂಚಲ ಮಾಯುಶ್ಚ ಕಸ್ಯಸ್ಯಾಜ್ಞಾನತೋ ಧೃತಿಃ ॥"

ಎಂದರೆ "ಸಂಪತ್ತುಗಳು ಕನಸಿನಲ್ಲಿ ಕಂಡ ಗಂಟಿನ ಹಾಗೂ, ಯೌವನವು ಬಾಡಿ ಹೋಗುವ ಮೃದುವಾದ ಪುಷ್ಪದಹಾಗೂ, ಆಯುಸ್ಸು ಚಂಚಲವಾದ ಮಿಂಚಿನ

---

(೨) ನಾರದ ಪರಿವ್ರಾಜಕೋಪನಿಷತ್ತು. (೩) ಅಭೀತಿಸ್ತುತಿಃ.

ಯೋ ರಕ್ತಃ" ಎಜ್ಞಾರಪಡಿಯೇ ಪ್ರಾಪ್ಯರುಚಿಯುಂಡಾನಾಲುಮ್ (೪) "ಮಹತಾ ಪುಣ್ಯಪಣ್ಯೇನ ಕ್ರೀತೇಯಂ ಕಾಯನೌ ತ್ವಯಾ । ಪ್ರಾಪ್ತುಂ ದುಃಖೋದಧೇಃ ಪಾರಂ ತ್ವರ ಯಾವನ್ನ ಭಿದ್ಯತೇ" ॥ ಎಜ್ಞಾರಪಡಿಯೇ ತ್ವರೈ ಪಿರಿನ್ದಾಲುಮ್, ಅನಾದಿಯಾಗ ಅನುವೃತ್ತಮಾನ

ಹಾಗೂ ವಿರಕ್ತನಿಗೆ ತೋರಿಬರುವದರಿಂದ, ಇಂತಹ ಸರಿಯಾದ ಜ್ಞಾನವುಳ್ಳ ಯಾವ ವಿವೇಕಿಗೆ ಇವುಗಳಲ್ಲಿ ಸ್ಥಿರಬುದ್ಧಿಯುಂಟಾಗುತ್ತದೆ" ಎಂಬುದು ಇಲ್ಲಿ ಅನುಸಂಧೇಯವು. (೩) "ಪರಮಾತ್ಮನಿಯೋರಕ್ತಃ" ಪರಮಾತ್ಮನಲ್ಲಿ ಯಾವನು ಭಕ್ತಿಯುಳ್ಳವನೋ, ಮುಂದಕ್ಕೆ "ವಿರಕ್ತೋ೭ಪರಮಾತ್ಮನಿ" ಪರಮಾತ್ಮ ವ್ಯತಿರಿಕ್ತಗಳಾದ ಐಹಿಕಗಳಲ್ಲಿ ವೈರಾಗ್ಯವುಳ್ಳವನಾಗುತ್ತಾನೆ ಎಂದು ಇದೆ, **ಎಜ್ಞಾರಪಡಿಯೇ** - ಎಂದು ಹೇಳಿರುವ ಹಾಗೆ, **ಪ್ರಾಪ್ಯರುಚಿ ಯುಂಡಾನಾಲುಮ್** - ಪ್ರಾಪ್ಯನಾದ ಶ್ರಿಯಃಪತಿಯನ್ನು ಹೊಂದಬೇಕೆಂಬ ಆಶೆಯನ್ನು ಹೊಂದಿದ್ದರೂ, (೪) ಇದು ಶಿಷ್ಯನಿಗೆ ಗುರುವು ಹೇಳುವ ಸಂದರ್ಭವು. **"ಮಹತಾ** - ಮಹತ್ತಾದ, **ಪುಣ್ಯಪಣ್ಯೇನ** - ಪುಣ್ಯವೆಂಬ ದ್ರವ್ಯದಿಂದ, **ತ್ವಯಾ** - ನಿನ್ನಿಂದ, **ಇಯಂ** – ಈ, **ಕಾಯನೌಃ** - ಶರೀರವೆಂಬ ಹಡಗು, **ಕ್ರೀತಾ** - ಕೊಂಡುಕೊಳ್ಳಲ್ಪಟ್ಟಿತು, ಎಂದರೆ ತುಂಬಾ ಪುಣ್ಯವಿಶೇಷವಿದ್ದುದರಿಂದಲೇ ಇಂತಹ ಮಾನುಷ ಜನ್ಮವು ನಿನಗೆ ಲಭಿಸಿರುತ್ತದೆ ಎಂದು ಹೇಳಿರುತ್ತದೆ. ಈ ಶರೀರವನ್ನೇ ಒಂದು ಹಡಗಿಗೆ ಹೋಲಿಸಿರುತ್ತಾರೆ; ಏತಕ್ಕೆಂದರೆ ಉತ್ತರಾರ್ಧದಿಂದ ಹೇಳುತ್ತಾರೆ. **ಯಾವತ್** - ಎಷ್ಟರಲ್ಲಿ, ಈ ದೇಹವೆಂಬ ಹಡಗು, **ನ ಭಿದ್ಯತೇ** – ಒಡೆದುಹೋಗುವದಿಲ್ಲವೋ ಆಷ್ಟರಲ್ಲೇ ಎಂದರೆ **ದೇಹಾವಸಾನವು** ಪ್ರಾಪ್ತವಾಗುವದರೊಳಗೇನೇ, **ದುಃಖೋದಧೇಃ** – ಸಂಸಾರವೆಂಬ ದುಃಖರೂಪ ಸಮುದ್ರದ, **ಪಾರಂ**-ಆಚೆಯ ದಡವನ್ನು, **ಪ್ರಾಪ್ತುಮ್** - ಹೊಂದುವದಕ್ಕೆ, **ತ್ವರ** - ಶೀಘ್ರಪಡಿಸು, ಎಂದರೆ ಈ ಜ್ಞಾನವಿವೇಕಗಳಿರುವ ಈ ಮಾನುಷಜನ್ಮವು ತುಂಬಾ ಪುಣ್ಯಶೇಷದಿಂದುಂಟಾದುದು, ಈ ಜನ್ಮವು ಕಳೆಯುವದರಲ್ಲೇ ಜ್ಞಾನ ಸಂಪಾದಿಸಿಕೊಂಡು ಸಾಧ್ಯೋಪಾಯಾನುಷ್ಠಾನವನ್ನು ಮಾಡಿ, ಆತನನ್ನು ಹೊಂದು," **ಎಜ್ಞಾರಪಡಿಯೇ** - ಎಂದು ಹೇಳಿರುವ ಹಾಗೆ, **ತ್ವರೈ ಪಿರನ್ದಾಲುಮ್** - ಪ್ರಾಪ್ಯವನ್ನು ಹೊಂದಬೇಕೆಂಬ ತ್ವರಾತಿಶಯವು ಉಂಟಾಗಿದ್ದರೂ, ಹೀಗೆ ಸರ್ವೇಶ್ವರನನ್ನು ಹೊಂದಲು ಬೇಕಾದ ವೈರಾಗ್ಯ, ಪ್ರಾಪ್ಯರುಚಿ, ಪ್ರಾಪ್ಯತ್ವರೆ ಇವೆಲ್ಲವೂ ಇದ್ದರೂ, ಮುಂದಿನ ವಾಕ್ಯ

---

(೪) ವರಾಹ ಪುರಾಣ.

ಆಜ್ಞಾತಿಲಂಘನ ಮಡಿಯಾಗ ಪ್ಪಿರಿನ್ದು ನಿರ್ಕ್ಕಿರ ಬಂಧಕಮಾನ ಭಗವನ್ನಿಗ್ರಹತ್ತುಕ್ಕು ಪ್ರಶಮನಮಾಗ, "ಮಾಮೇಕಂ ಶರಣಂ ವ್ರಜ" ಎನ್ರು ವಿಧಿವಾಕ್ಯ (ತ್ತಿ) ತ್ತಾಲುಮ್, "ಪ್ರಪದ್ಯೇ" ಎನ್ರು ಅನುಷ್ಠಾನ ವಾಕ್ಯ (ತ್ತಿ) ತ್ತಾಲುಮ್ ಶೊಲ್ಲಪ್ಪಟ್ಟ ಸಾಧ್ಯೋಪಾಯ ವಿಶೇಷಂ ತೆಳಿಯಾದ ಪೋದು ಸಿದ್ಧೋಪಾಯ ಭೂತನಾನ ಸರ್ವೇಶ್ವರನೈ ವಶೀಕರಿಕ್ಕವಿರಗಿಲ್ಲೈ.

ಶೇಷದಿಂದ ಸಾಧ್ಯೋಪಾಯಾನುಷ್ಠಾನವು ಪರಮಾತ್ಮ ಕೃಪಯಾ ಉಂಟಾಗದಿದ್ದ ಪಕ್ಷದಲ್ಲಿ ಭಗವದನುಗ್ರಹವು ಅಂತವನಿಗಿಲ್ಲವೆಂದು ಹೇಳುತ್ತಾರೆ, ಏಕೆಂದರೆ "ತಸ್ಯ ಚ ವಶೀಕರಣಂ ತಚ್ಚರಣಾಗತಿರೇವ" ಎಂದು ಶ್ರೀ ಭಾಷ್ಯದಲ್ಲಿ ಯತಿವರ್ಯರು ಹೇಳಿರುವ ಹಾಗೆ ಸಾಧ್ಯೋಪಾಯಾನುಷ್ಠಾನವಿಲ್ಲದುದರಿಂದ ಶ್ರಿಯಃಪತಿಯನ್ನು ವಶೀಕರಣ ಮಾಡಲಸಾಧ್ಯವೆಂಬಭಿಪ್ರಾಯವು. **ಅನಾದಿಯಾಗ ಅನುವೃತ್ತ ಮಾನ** - ಈ ದುಷ್ಕರ್ಮಗಳು ಯಾವಾಗಲಿಂದ ಅನುಸರಿಸಿ ಬಂದಿವೆ ಎಂದು ಹೇಳಲು ಸಾಧ್ಯವಿಲ್ಲದುದರಿಂದ, ಅನಾದಿಯಾಗಿ ಅನುಸರಿಸಿ ಬಂದ ಎಂದು ಹೇಳಲ್ಪಟ್ಟಿರುತ್ತದೆ. **ಆಜ್ಞಾತಿಲಂಘನಂ** – ಸರ್ವೇಶ್ವರನ ಆಜ್ಞೆಗಳಾದ ವಿಧಿ ನಿಷೇಧ ವಾಕ್ಯಗಳನ್ನು ಅತಿಕ್ರಮಿಸಿ ನಡೆದ ಅಕೃತ್ಯಕರಣ ಕೃತ್ಯಾಕರಣ ರೂಪ ಅಪರಾಧಗಳ, **ಅಡಿಯಾಗ** – ಮೂಲಕವಾಗಿ, **ಪಿರಿನ್ದು ನಿರ್ಕ್ಕಿರ** – ಉತ್ಪನ್ನವಾಗಿರುವ, **ಭಗವನ್ನಿಗ್ರಹಕ್ಕೆ, ಪ್ರಶಮನಮಾಗ** - ಶಾಂತಿಯು ರೂಪದಲ್ಲಿ, **ಮಾಮೇಕಂ ಶರಣಂ ವ್ರಜ** – ನನ್ನೊಬ್ಬನನ್ನು ಉಪಾಯವಾಗಿ ಹೊಂದು, **ಎನ್ರು ವಿಧಿವಾಕ್ಯ ತ್ತಾಲುಮ್** - ಎಂಬ ವಿಧಿವಾಕ್ಯದಿಂದಲೂ, **"ಪ್ರಪದ್ಯೇ" ಎನ್ರು ಅನುಷ್ಠಾನ ವಾಕ್ಯತ್ತಾಲುಮ್** – **ಚರಣೌ ಶರಣ ಮಹಂ ಪ್ರಪದ್ಯೇ** ಎಂದು ಅನುಷ್ಠಾನ ಮಂತ್ರವಾದ ದ್ವಯ ಪೂರ್ವ ಖಂಡದಿಂದಲೂ, **ಶೊಲ್ಲಪ್ಪಟ್ಟ** – **ಹೇಳಲ್ಪಟ್ಟ, ಸಾಧ್ಯೋಪಾಯ ವಿಶೇಷಂ**-ಸಾಧ್ಯೋಪಾಯ ವಿಶೇಷವು, **ತೆಳಿಯಾದಪೋದು** - ಅದನ್ನು ಅನುಷ್ಠಿಸುವದು ಅತ್ಯಾವಶ್ಯಕವೆಂಬ **ಜ್ಞಾನ** ಉಂಟಾಗದೇ ಇರುವಾಗ, **ಸಿದ್ಧೋಪಾಯ ಭೂತನಾದ ಸರ್ವೇಶ್ವರನನ್ನು, ವಶೀಕರಿಕ್ಕ ವಿರಗಿಲ್ಲೈ** - **ವಶಮಾಡಿಕೊಳ್ಳುವ ಮಾರ್ಗವು ಇನ್ನು ಯಾವುದೂ ಇರುವದಿಲ್ಲವು. ಸಾಧ್ಯೋಪಾಯವನ್ನವಲಂಬಿಸದೇ ಸಿದ್ಧೋಪಾಯನು ಅನುಗ್ರಹಿಸುವದಿಲ್ಲವೆಂದು ಇಲ್ಲಿ ಹೇಳಲ್ಪಟ್ಟಿತು.** ಹಿಂದೆ **" ಪ್ರಪನ್ನಾದನ್ಯೇಷಾಂ "** ಎಂಬ ಶ್ಲೋಕಮೂಲಕ **ಸಾಧ್ಯೋಪಾಯಗಳು ಭಕ್ತಿಪ್ರಪತ್ತಿಗಳಿರಡೇ ಎಂದೂ, ಇವುಗಳಲ್ಲಿ ಯಾವುದಾದರೂ ಒಂದನ್ನು ಅವಲಂಬಿಸದೆ ಮುಕ್ತಿದಾಯಕನು ಮುಕ್ತಿಯನ್ನು ಕೊಡ**

ಆಗ್ಯೆಯಾಲ್ ಅರ್ದಿ ಅಧಿಕಾರತ್ತಿಲುಮ್ ಸ್ವರೂಪತ್ತಿಲುಮ್, ಪರಿಕರ ಙ್ಗಳಿಲುಮ್, ವರುಮ್ ಕಲಕ್ಕ್ಯಙ್ಗಳೈ ಶಮಿಪ್ಪಿಕ್ಕಿರೋಮ್ :—

ನೆಂದು ಹೇಳಲ್ಪಟ್ಟಿರುತ್ತದೆ. ಮಾಮೇಕಂ ಶರಣಂ ವ್ರಜ ಎಂಬುವದರಿಂದ ಭಕ್ತಿರೂಪ ಉಪಾಯವೂ, ಪ್ರಪದ್ಯೇ ಎಂಬುವದರಿಂದ ಭರನ್ಯಾಸವೂ ಹೇಳಲ್ಪಟ್ಟಿತೆಂದೂ, ಅಥವಾ ಎರಡರಿಂದಲೂ ಭರನ್ಯಾಸವು ಬೋಧಿಸಲ್ಪಟ್ಟಿತೆಂದೂ, ಭರನ್ಯಾಸವು ಪ್ರಕರಣಾನುಗುಣ್ಯವಾಗಿ ಹೇಳಲ್ಪಟ್ಟರೂ ಭಕ್ತಿಮಾರ್ಗವೂ ಉಪಲಕ್ಷಣ ರೀತ್ಯಾ ಉಪದೇಶಿಸಲ್ಪಟ್ಟಿತೆಂದೂ ಭಾವಿಸಬಹುದು. ಶ್ರುತಿಯೂ ಕೂಡ "ನಾನ್ಯಃಪನ್ಥಾ ಅಯನಾಯ ವಿದ್ಯತೇ" (ಪು. ಸೂ) ಎಂದು ಸಾಧ್ಯೋಪಾಯಾನುಷ್ಠಾನವಿಲ್ಲದೆ ಅತನನ್ನು ಹೊಂದಲು ಸಾಧ್ಯವಿಲ್ಲವೆಂದು ಹೇಳುತ್ತದೆ. ಮತ್ತು

"ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ ।
ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿತೇ"

ಈ ಜೀವಾತ್ಮನಿಗೆ ಕರ್ಮ ಕೃತವಿಚಿತ್ರ ಗುಣಮಯವಾದ ಪ್ರಕೃತಿ ಸಂಸರ್ಗರೂಪವಾದ ಸಂಸಾರದಿಂದ ಬಿಡುಗಡೆಯು ಪ್ರಪದನವನ್ನನುಷ್ಠಿಸದೆ ಎಂದಿಗೂ ಉಂಟಾಗುವಲ್ಲವೆಂದೂ ಹೇಳಲ್ಪಟ್ಟಿರುತ್ತದೆ. ಮತ್ತು ಧ್ಯಾನ ಶ್ಲೋಕದಲ್ಲಿ

"ಯತ್ಪ್ರಪತ್ತಿಂ ವಿನಾ ಸರ್ವೈ ರ್ಯಸ್ಯಮಾಯಾ ದುರತ್ಯಯಾ ।
ಧನಂಜಯ ರಥಸ್ಥಂ ತತ್ ಪ್ರಪದ್ಯೇ ಪರಮಂ ಮಹಃ"

ಯಾವ ಸರ್ವೇಶ್ವರನಲ್ಲಿ ಶರಣಾಗತಿಯನ್ನನುಷ್ಠಿಸದೆ ಸಂಸಾರವನ್ನು ದಾಟಲಸಾಧ್ಯವೋ, ಅಂತಹ ಅರ್ಜುನಲೀಲಾ ಸಾರಥಿಯಾದ ಸರ್ವೋತ್ಕೃಷ್ಟ ತೇಜಸ್ಸನ್ನು ಶರಣು ಹೊಂದುವೆನು. ಆಗ್ಯೆಯಾಲ್ - ಹೀಗೆ ಸಾಧ್ಯೋಪಾಯಾನುಷ್ಠಾನವಿಲ್ಲದೆ ಮೋಕ್ಷವಿಲ್ಲವೆಂಬುದು ಸ್ಥಾಪಿತವಾದನಂತರ, (೧) ಅಧಿಕಾರತ್ತಿಲುಮ್ – ಯಾರಿಗೆ ಈ ಸಾಧ್ಯೋಪಾಯವಾದ ಭರನ್ಯಾಸದಲ್ಲಿ ಅಧಿಕಾರವೆಂಬುವದರಲ್ಲೂ, (೨) ಸ್ವರೂಪತ್ತಿಲುಮ್ - ಅದರ ಸ್ವರೂಪದಲ್ಲೂ, (೩) ಪರಿಕರಙ್ಗಳಿಲುಮ್ – ಅದರ ಅಂಗಗಳಲ್ಲೂ, ವರುಮ್ ಕಲಕ್ಕ್ಯಙ್ಗಳೈ – ಬರುವ ಶಙ್ಕಾರೂಪ ಆಕ್ಷೇಪಗಳನ್ನು, ಶಮಿಪ್ಪಿಕ್ಕಿರೋಮ್ - ಶಮನಮಾಡುತ್ತೇವೆ, ಎಂಬದಾಗಿ ಈ ಅಧಿಕಾರದಲ್ಲಿ ಉಪದೇಶಿಸುವದನ್ನು ಪ್ರತಿಜ್ಞಾವಾಕ್ಯರೂಪದಲ್ಲಿ ಹೇಳುತ್ತಾರೆ. ಈ ಅಧಿಕಾರದಲ್ಲಿ ಮೂರು ವಿಧವಾದ ಆಕ್ಷೇಪಗಳಿಗೆ ಸನ್ನಾಧಾನವು ಹೇಳಲ್ಪಡುತ್ತದೆ :—(೧) ಅಧಿಕಾರ ವಿಷಯದಲ್ಲಿ (೨) ಸ್ವರೂಪ ವಿಷಯದಲ್ಲಿ (೩) ಪರಿಕರಗಳ ವಿಷಯದಲ್ಲಿ ಉಂಟಾಗಬಹುದಾದ ಶಙ್ಕಾಗಳನ್ನು ಪೂರ್ವಪಕ್ಷ

ಪ್ರಪತ್ತೇ ಸ್ಸರ್ವಾಧಿಕಾರತ್ವೇ ಸಮರ್ಥನಮ್

ಇಪ್ಪ್ರಪತ್ತಿಯು ಮೊರು ವೈದಿಕ ಧರ್ಮಮನ್ನೋ? ಇದುವು ಮೊರು ಯಾಗ ವಿಶೇಷ ಮಾಗವನ್ನೋ ನ್ಯಾಸವಿದ್ಯೈ ಯಿಲೆಯೋದಪ್ಪಡು

ಮಾಡಿ ಅನುವದಿಸಿ ಅವುಗಳಿಗೆ ಸಮಾಧಾನವನ್ನೂ ಹೇಳುತ್ತಾರೆ. ಹೀಗೆ ಸಾಧ್ಯೋಪಾಯ ವಿಷಯವಾದ ಶಙ್ಕಾಗಳು ಶೋಧಿಸಲ್ಪಡುವದರಿಂದ ಇದಕ್ಕೆ **ಸಾಧ್ಯೋಪಾಯ ಶೋಧನಾಧಿಕಾರವೆಂಬ** ಹೆಸರು.

(೧) ಪ್ರಪತ್ತಿಯಲ್ಲಿ ಸರ್ವರಿಗೂ ಅಧಿಕಾರ ಉಂಟೆಂಬುದರ ಸಮರ್ಥನೆಯು.

ಪ್ರಥಮತಃ ಅಧಿಕಾರ ವಿಷಯದಲ್ಲುಂಟಾಗುವ ಪೂರ್ವಪಕ್ಷವನ್ನುಪಪಾದಿಸಿ ಅದನ್ನು ನಿರಸನ ಮಾಡುತ್ತಾರೆ. **ಇಪ್ಪ್ರಪತ್ತಿಯು**-ಈ ಭರನ್ಯಾಸವು, **ಒರು ವೈದಿಕ ಧರ್ಮಮನ್ನೋ**-ವೇದದಲ್ಲಿ ಹೇಳಿರುವ ಒಂದು ಕರ್ಮಾನುಷ್ಠಾನವಲ್ಲವೋ? **ಇದುವುಮ್** - ಈ ಪ್ರಪದನವು, **ಒರು ಯಾಗವಿಶೇಷಮಾಗಮನ್ನೋ** - ಒಂದು ಯಾಗವಿಶೇಷವೆಂದಲ್ಲವೇ ನ್ಯಾಸವಿದ್ಯೆಯಲ್ಲಿ, **ಓದಪ್ಪಡುಗಿರದು** - ಪಠಿತವಾಗಿರುತ್ತದೆ ಎಂದರೆ ಹೇಳಲ್ಪಟ್ಟಿರುತ್ತದೆ. **ಆಗೈಯಾಲ್** - ಆದುದರಿಂದ, **ಇದು ಸರ್ವಾಧಿಕಾರಮಾಗಕ್ಕೊಡಮೋ** - ಈ ಪ್ರಪತ್ಯನುಷ್ಠಾನದಲ್ಲಿ ಶೂದ್ರ ಚಂಡಾಲ ಮೊದಲುಗೊಂಡು ಎಲ್ಲರಿಗೂ ಅಧಿಕಾರ ಉಂಟೆಂದು ಅಧಿಕಾರಿ ವಿಭಾಗಾಧಿಕಾರದಲ್ಲಿ ಹೇಳಿರುವದು ಸರಿಯೋ, **ಎನ್ಱು** - ಎಂಬದಾಗಿ, **ಶಿಲರ್**-ಕೆಲವರು, ಅವರು ಯಾರೆಂದರೆ, ಶ್ರೀ ಸೋಮೇಶಿಯಾಂಡಾನ್ ಪ್ರಭೃತಿಗಳು, **ವಿಚಾರಿಪ್ಪಾರ್ಗಳ್** - ಪೂರ್ವಪಕ್ಷವನ್ನು ಹೇಳುವರು. ಭರನ್ಯಾಸವೂ ಒಂದು ವೇದವಿಹಿತ ಧರ್ಮವು. ನ್ಯಾಸವಿದ್ಯೆಯಲ್ಲಿ ಒಂದು ಯಾಗ ವಿಶೇಷವೆಂದೇ ರೂಪಕ ಮಾಡಿ ಹೇಳಿರುತ್ತದೆ. ಅದು ಯಾವುದೆಂದರೆ, ನಾವುಗಳು ಅದನ್ನು ಪ್ರತಿದಿನವೂ ದೇವತಾರ್ಚನೆಯ ಶಾತ್ತುಮರೆಯಲ್ಲಿ ಪಠಿಸುತ್ತೇವೆಯಾದುದರಿಂದ, **ಓದಪ್ಪಡುಗಿರದು** - ಎಂಬ ಪ್ರಯೋಗವು (೧) "ತಸ್ಯೇವಂ ವಿದುಷೋ ಯಜ್ಞಸ್ಯಾತ್ಮಾ ಯಜಮಾನಃ" ಎಂದಾರಂಭಿಸಿ, "ತಸ್ಮಾದ್ಬ್ರಹ್ಮಣೋ ಮಹಿಮಾನಮಿತ್ಯುಪನಿಷತ್" ಎಂದು ಮುಗಿಸುವ ವಾಕ್ಯವಾಗಿರುತ್ತದೆ. ಇದರರ್ಥವೇನೆಂದರೆ:— ನ್ಯಾಸವಿದ್ಯಾನಿಷ್ಠನ ಸ್ವರೂಪಸ್ಥಿತಿ ಪ್ರವೃತ್ತಿಗಳೆಲ್ಲಾ ಒಂದು ಯಾಗರೂಪವಾದುದೆಂದು ಇಲ್ಲಿ ಹೇಳಲ್ಪಡುತ್ತದೆ. ಈ ನ್ಯಾಸವಿದ್ಯೆ ಎಂಬ ಯಾಗಕ್ಕೆ ಜೀವಾತ್ಮನೇ ಯಜಮಾನನು, ಯಜ್ಞ ಯಜಮಾನನು ಸಪತ್ನೀಕನಾಗಿರಬೇಕು, ಶ್ರದ್ಧೆಯೇ

ಗಿರದು. ಆಗೈಯಾಲ್ ಇದು ಸರ್ವಾಧಿಕಾರವಾಗ ಕ್ಕೂಡುವೋ ವೆನ್ರು ಶಿಲರ್ ವಿಚಾರಿಪ್ಪರ್ಗಳ್.

ಪತ್ನಿಯು, ಆ ಪ್ರಪನ್ನನ ಶರೀರವೇ ಇಧ್ಮವು ಕಟ್ಟಿಗೆಯು, ವಕ್ಷಸ್ಥಳವೇ ವೇದಿಕೆಯು, ವಕ್ಷಸ್ಥಳದ ಕೂದಲುಗಳೇ ಪರಿಸ್ತರಣ ದರ್ಭೆಗಳು, ಶಿಖೆಯೇ ವೇದವು, ಇಲ್ಲಿ ವೇದ ಶಬ್ದವು ಯಾಗದಲ್ಲಿ ಬೇಕಾದ ದರ್ಭವಿಶೇಷವನ್ನು ಸೂಚಿಸುತ್ತದೆ. (ಈಗಿನವರಿಗೆ ವೇದವೇ ಬೇಕಾಗಿಲ್ಲವಾದುದರಿಂದ ಶಿಖೆಯಿಲ್ಲದವರಾಗಿರುತ್ತಾರೆ.) ಹೃದಯವೇ ಕೋಪವೆಂಬ ಪಶುವನ್ನು ಕಟ್ಟುವ ಯೂಪಸ್ತಂಭವು, ಕಾಮವೇ ಎಂದರೆ ಭಗವದನುಭವದ ಆಶೆಯೇ ಹೋಮಕ್ಕೆ ಬೇಕಾದ ತುಪ್ಪವು, ಕೋಪವೇ ವಧಿಸತಕ್ಕ ಪಶುವು, ಶಾಂತಿಯೇ ಬ್ರಾಹ್ಮಣರಿಗೆ ಕೊಡುವ ದಕ್ಷಿಣೆಯು, ವಾಕ್ಕೇ ಎಂದರೆ ಪ್ರಪನ್ನನ ಭಗವದ್ಗುಣಪ್ರಶಂಸಾರೂಪ ವಾಕ್ಕೇ ಋತ್ವಿಕ್ಕು ಹೇಳತಕ್ಕ ಮಂತ್ರಗಳು, ಪ್ರಾಣವೇ ಎಂದರೆ ವಾಯು ಸಂಚಾರಗಳೇ ಉದ್ಗಾತೃವಿನ ಸಾಮಗಾನವು, ಚಕ್ಷುಸ್ಸೇ ಎಂದರೆ ಜ್ಞಾನ ಚಕ್ಷುಸ್ಸೇ ಅಧ್ವರ್ಯುವಿನ ಯಜುರ್ವೇದಾಮ್ನಾನವು, ಮನಸ್ಸೇ ಬಹ್ಮಾ, ಕಿವಿಗಳೇ ಅಗ್ನಿಧ್ರವು, ದೇಹಾವಸನದವರಿವಿಗೂ ಯಾಗದೀಕ್ಷೆಯು, ಇವನು ಊಟಮಾಡುವದೂ ಪಾನಮಾಡುವದೂ ಸೋಮ ಪಾನವು, ಹೀಗೆಯೇ ರೂಪಕಮಾಡಿ ಹೇಳಿ ಕೊನೆಗೆ ಯಾಗಕ್ಕೆ ಅವಭೃಥವೇ ಮರಣವೆಂದು ಹೇಳಿ, ಈತನ ಜೀವಮಾನದಲ್ಲೆಲ್ಲಾ ನಡೆಯತಕ್ಕ ಒಂದು ದೊಡ್ಡ ಅಗ್ನಿಹೋತ್ರವೆಂದು ತಿಳಿಸಿ, ಹೀಗೆ ತಿಳಿದ ಜ್ಞಾನಿಯಾದ ಪ್ರಪನ್ನನಿಗೆ ಉಂಟಾಗಬಹುದಾದ ಅರ್ಚಿರಾದಿಗತಿಯನ್ನು ಬೋಧಿಸಿ ಪರಬ್ರಹ್ಮಪ್ರಾಪ್ತಿಯನ್ನು ಫಲವಾಗಿ ಉಪದೇಶಿಸಿರುತ್ತದೆ. ಹಾಗೆಯೇ ಪುರುಷಸೂಕ್ತದ ೧೮ನೆಯ ಋಕ್ಕಿನಲ್ಲಿ ಹೇಳಲ್ಪಟ್ಟಿರುತ್ತದೆ :— (೨) **"ಯಜ್ಞೇನ ಯಜ್ಞಮಯಜಂತ ದೇವಾಃ । ತಾನಿ ಧರ್ಮಾಣಿ ಪ್ರಥಮಾನ್ಯಾಸನ್ । ತೇಹನಾಕಂ ಮಹಿಮಾನಃ ಸಚಂತೇ । ಯತ್ರ ಪೂರ್ವೇ ಸಾಧ್ಯಾಸ್ಸಂತಿ ದೇವಾಃ"** ॥ ಮುಕ್ತರಾಗಬೇಕೆಂಬುವರು ಭರನ್ಯಾಸರೂಪಯಜ್ಞದಿಂದ, **ಯಜ್ಞೇನೈವಿಷ್ಣುಃ** ಎಂದು ಹೇಳಿರುವ ಹಾಗೆ ಸರ್ವಯಜ್ಞಾರಾಧ್ಯನಾದ ಶ್ರೀ ಮಹಾವಿಷ್ಣುವನ್ನು ಆರಾಧಿಸುತ್ತಾರೆ. ಅಂತವರು ನಿತ್ಯವಿಭೂತಿಯಲ್ಲಿರುವ ಅನಂತ ಗರುಡ ವಿಷ್ವಕ್ಸೇನಾದಿ ನಿತ್ಯಸೂರಿಗಳೊಂದಿಗೆ ಸೇರುವದಕ್ಕಾಗಿ ಆರ್ಚಿರಾದಿಗಳಿಂದ ಸನ್ಮಾನಿಸಲ್ಪಟ್ಟು ದಿವ್ಯ ವೈಕುಂಠವನ್ನು ಹೋಗಿ ಸೇರುವರು ಎಂದು ಹೇಳಲ್ಪಟ್ಟಿರುತ್ತದೆ. (೩) **"ಯ ಸ್ಸನ್ನಿಧಾಯ ಆಹುತೀರ್ಯೋ**

ವೇದೇನ ದಾಶವುತ್ಯೋ ಅಗ್ನಯೇ ಯೋ ನವುಸಾ ಸಸ್ವಧ್ವರಃ" (೪) "ಹವಿರ್ಗೃಹೀತ್ವಾತ್ಮರೂಪಂ ವಸುರಣ್ಯೇತಿ ಮುಂತ್ರತಃ ಜುಹುಯಾತ್ಪ್ರಣವೇನಾಗ್ನಾವಚ್ಯುತಾಖ್ಯೇ ಸನಾತನೇ" ಜೀವಾತ್ಮರೂಪದ ಹವಿಸ್ಸನ್ನು ತೆಗೆದುಕ್ಕೊಂಡು ಓಂ ಎಂಬ ಪ್ರಣವವನ್ನು ಉಚ್ಚರಿಸಿ, ಅನಾದಿಯಾದ ಅಚ್ಯುತನೆಂಬ ಅಗ್ನಿಯಲ್ಲಿ "ವಸುರಣ್ಯೋವಿಭೂರಸಿ ಎಂಬ ಮಂತ್ರವನ್ನು ಹೇಳಿ ಹೋಮ ಮಾಡತಕ್ಕದ್ದು ಎಂದರೆ ಆತನ ಪಾದದಲ್ಲಿ ಸಮರ್ಪಿಸತಕ್ಕದ್ದೆಂಬ ಭಾವವು. ಮಂತ್ರವು ಯಾವುದೆಂದರೆ :—"ವಸುರಣ್ಯೋ ವಿಭೂರಸಿ, ಪ್ರಾಣೇತ್ವಮಸಿ ಸಂಧಾತಾ, ಬ್ರಹ್ಮೇತ್ವಮಸಿ ವಿಶ್ವಸೃಕ್ ತೇಜೋದಾಃ ತ್ವಮಸ್ಯಗ್ನೇಃ ವರ್ಚೋದಾಃ ತ್ವಮಸಿ ಸೂರ್ಯಸ್ಯ ದ್ಯುಮ್ನೋದಾಃ ತ್ವಮಸಿ ಚಂದ್ರಮಸ ಉಪಯಾಮ ಗೃಹೀತೋಸಿ, ಬ್ರಹ್ಮಣೇತ್ವಾ ಮಹಸ ಓಮಿತ್ಯಾತ್ಮಾನಂ ಯುಞ್ಜೀತ" (ತೈ. ಆಂಜಸಿ) ಇದರರ್ಥವೇನೆಂದರೆ :— ಇದು, ನ್ಯಾಸಶಬ್ದದಿಂದ ಹೇಳಲ್ಪಡುವ ಪ್ರಪದನ ಕರಣಮಂತ್ರವು. ವಸುರಣ್ಯಃ ಎಂದರೆ ವಸುಗಳಿಂದ ಪ್ರಾಪ್ಯನು, ಎಂಬುದರಿಂದ ಸರ್ವ ದೇವತೆಗಳಿಗೂ ಉಪಾಸ್ಯನು. ಎಲ್ಲಕ್ಕೂ ಆತ್ಮವಾಗಿ ವ್ಯಾಪಿಸಿರುವದರಿಂದ ಸರ್ವಕ್ಕೂ ನಿಯಾಮ್ಯವಾಗಿ ವಿಭುವು. ಪ್ರಾಣೇತ್ವಮಸಿಸಂಧಾತಾ – ಪ್ರಾಣ ಶಬ್ದದಿಂದ ಹೇಳಲ್ಪಡುವ ಕಾರ್ಯಕಾರಣಗಳ ಸಂಯೋಜಕನು; ವಿಶ್ವಸೃಕ್ - ವಿಶ್ವವನ್ನು ಸೃಷ್ಟಿಸುವವನು; ತ್ವಮಸಿ ತೇಜೋದಾಃ - ತೇಜಸ್ಸನ್ನು ಕೊಡುವನೂ ನೀನೇ, ಕಾಂತಿಯನ್ನು ಕೊಡುವನೂ ನೀನೇ, ಸೂರ್ಯಚಂದ್ರರಿಗೂ ಕಾಂತಿಯನ್ನು ಕೊಡುವನು ನೀನೇ. ನೀನು ಬಹು ಕಾಲಕ್ಕೆ ಸಿಕ್ಕಿರುವಿ, ನಿನ್ನನ್ನು ಶರಣು ಹೊಂದೋಣ; ನಿನ್ನ ಪ್ರಯೋಜನಕ್ಕಾಗಿಯೇ ಭಗವಚ್ಛ್ರೇಷತ್ವವನ್ನು ಉಪಪಾದಿಸುವ ಪ್ರಣವೋಚ್ಚಾರಣೆ ಮೂಲಕವಾಗಿ ಆತ್ಮಸಮರ್ಪಣೆಯನ್ನು ಮಾಡತಕ್ಕದ್ದೆಂಬುದು, ಈ ಶ್ರುತ್ಯರ್ಥವು. (೫) "ಸಮಿತ್ಸಾಧನಕಾದೀನಾಂ ಯಜ್ಞಾನಾಂ ನ್ಯಾಸ ಮಾತ್ಮನಃ। ನವುಸಾ ಯೋಕರೋ ದ್ದೇವೇ ಸಸ್ವಧ್ವರ ಇತೀರಿತಃ" ಇದು ಮೂರನೆಯ ಪ್ರಮಾಣದ ಉಪಬೃಹ್ಮಣವು. ಸಮಿತ್ತೇ ಸಾಧನವಾಗಿ ವುಳ್ಳೋಣ ಮೊದಲಾದವುಗಳಿಂದ ಕೂಡಿದ ಯಜ್ಞಗಳ ಮಧ್ಯೆ ಆತ್ಮಾವನ್ನು ನ್ಯಾಸಮಾಡುವ ಭರನ್ಯಾಸವನ್ನು ಯಾವನು ಅಖಂಡ ನಮಸ್ಸಿನ ಮೂಲಕ ಸರ್ವೇಶ್ವರನಲ್ಲಿ ಮಾಡುತ್ತಾನೋ ಅವನು ಸಮಾಚೀನವಾದ ಯಜ್ಞವನ್ನು ಮಾಡಿದವನೆಂದು ತಿಳಿಯತಕ್ಕದ್ದು.

ಹೀಗೆ ಭರನ್ಯಾಸವೂ ಒಂದು ಯಾಗರೂಪಧರ್ಮವೆಂದು ಹೇಳಿರುವದರಿಂದಲೂ ಶ್ರುತಿಯಲ್ಲಿ ತ್ರೈವರ್ಣಿಕರಲ್ಲದೆ ಇತರರಾದ ಶೂದ್ರಾದಿಗಳಿಗೆ ಇಂತಹ ವೈದಿಕ

ಇದು ಸರ್ವೇಶ್ವರನೈ ಸರ್ವರುಕ್ಕುಮ್ ಶರಣಮೆನ್ರೋದುಗಿರ ಶ್ವೇತಾಶ್ವತರ ಶ್ರುತಿಬಲತ್ತಾಲೇ ಪರಿಹೃತಮ್. ಇವ್ವರ್ಥಮ್ (೧) "ಸರ್ವಲೋಕ

ಧರ್ಮಗಳಲ್ಲಿ ಅಧಿಕಾರವಿಲ್ಲವೆಂದೂ ಅಪಶೂದ್ರಾಧಿಕರಣದಲ್ಲಿ ಹೇಳಿರುವದರಿಂದಲೂ ಈ ಪ್ರಪತ್ತಿಯಲ್ಲಿ ಸರ್ವರಿಗೂ ಅಧಿಕಾರ ಉಂಟೆಂದು ಹೇಳಿದುದು ಸರಿಯೋ ಎಂದಾಕ್ಷೇಪವು. ಈ ಆಕ್ಷೇಪಕ್ಕೆ ಸಮಾಧಾನವನ್ನು ಮುಂದಿನ ವಾಕ್ಯದಿಂದ ಹೇಳುತ್ತಾರೆ.

ಇದು - ಈ ಆಕ್ಷೇಪವು, ಸರ್ವೇಶ್ವರನೈ - ಸರ್ವೇಶ್ವರನನ್ನು, ಸರ್ವರುಕ್ಕುಮ್ - ಸಮಸ್ತರಿಗೂ, ಶರಣಮ್ - ಉಪಾಯನು, ಎನ್ರುಮ್ ಓದುಗಿರ - ಎಂದು ಪರಿಸುವ ಶ್ವೇತಾಶ್ವತರ ಶ್ರುತಿಯ, ಬಲತ್ತಾಲೇ - ಪ್ರಮಾಣವಾಗಿರುವ ಬಲದಿಂದ, ಪರಿಹೃತಮ್-ಪರಿಹಾರವನ್ನು ಹೊಂದಿತು. ಈ ಅಧಿಕಾರ್ಯವನ್ನು ಶ್ರೀಮದಾಚಾರ್ಯರವರು "ಶ್ರೌತೀಸದ್ವಶರಣ್ಯತಾ ಭಗವತಸ್ಸ್ವಕೃತ್ಯಾಪಿ ಸತ್ಯಾಪಿತಾ" ಎಂಬ ಪ್ರಪತ್ತಿಯೋಗ್ಯಾಧಿಕಾರದ ಸಂಗ್ರಹ ಶ್ಲೋಕದಲ್ಲಿ ಸ್ಥಾಪಿಸಿರುತ್ತಾರೆ. ಇಲ್ಲಿ ಸರ್ವರುಕ್ಕುಮ್ ಎಂದು ಹೇಳುವಾಗ ಏನೊಂದೂ ಸಂಕೋಚವಿಲ್ಲದೆ ಶೂದ್ರ ಪಂಚಮರಿಗೂ ಕೂಡ ಅನ್ವಯಿಸುವದರಿಂದ ಏನೊಂದೂ ವ್ಯತ್ಯಾಸವಿಲ್ಲದೆ ಸರ್ವರಿಗೂ ಈ ಉಪಾಯಾನುಷ್ಠಾನದಲ್ಲಿ ಅಧಿಕಾರವುಂಟೆಂಬ ಭಾವವು. ಉಪನಿಷತ್ತುಗಳಲ್ಲಿ ತೈತ್ತರೀಯ ಮತ್ತು ಶ್ವೇತಾಶ್ವತರಗಳುಬಹು ವ್ಯಕ್ತವಾಗಿಯೂ ಬಹುಸ್ಪುಟವಾಗಿಯೂ ಉಪದೇಶಿಸುವದರಿಂದ ಅಂತಹ ಪ್ರಮಾಣಕ್ಕೆ ವ್ಯತ್ಯಸ್ತವಾಗಿ ಅರ್ಥಮಾಡುವದೇ ಸಾಧ್ಯವಲ್ಲದುದರಿಂದ ಶ್ವೇತಾಶ್ವತರ ಶ್ರುತಿ ಬಲತ್ತಾಲೆ ಎಂದು ಹೇಳಿರುತ್ತಾರೆ. "ಸರ್ವಸ್ಯ ಶರಣಂ ಸುಹೃತ್" ಎಂಬುದು ಆ ಶ್ರುತಿವಾಕ್ಯವು. "ಪ್ರಪತ್ತಿಕ್ಕು ಜಾತ್ಯಾದಿ ನಿಯಮು ಮಿಲ್ಲಾಮೈಯಾಲೇ ಸರ್ವಾಧಿಕಾರತ್ವೆಂಸಿದ್ಧಮ್" ಎಂದು ಅಲ್ಲಿ ಸ್ಥಾಪಿಸಿರುತ್ತಾರೆ. ಹಾಗೆಯೇ

ನ ಜಾತಿಭೇದಂ ನ ಕುಲಂ ನ ಲಿಙ್ಗಂ ನ ಗುಣಕ್ರಿಯಾಃ ।
ನ ದೇಶಕಾಲೌ ನಾವಸ್ಥಾಂ ಯೋಗೋಽಯಮುಪೇಕ್ಷತೇ ॥

ಭರನ್ಯಾಸರೂಪವಾದ ಈ ಯೋಗವಾದರೋ, ಬ್ರಾಹ್ಮಣ ಕ್ಷತ್ರಿಯ ಶೂದ್ರಾದಿ ಜಾತಿ ಭೇದವನ್ನಾಗಲಿ ಉತ್ಕೃಷ್ಟ ನಿಕೃಷ್ಟ ಕುಲಗಳ ವ್ಯತ್ಯಾಸವನ್ನಾಗಲಿ ಸ್ತ್ರೀ ಪುರುಷ ಭೇದವನ್ನಾಗಲಿ, ಗುಣಕ್ರಿಯೆಗಳ ಉತ್ತಮಾಧಮ ಸ್ಥಿತಿಯನ್ನಾಗಲಿ,

---

(೧) ರಾಮಾ. ಯುದ್ಧ. ೧೭. ೧೫.

ಶರಣ್ಯಾಯ" (೨) ಸರ್ವಯೋಗ್ಯ ಮನಾಯಾಸ ಮಪ್ರಮಾದ ಮನೂಪ ಮಮ್ । ಪ್ರಪನ್ನಾರ್ತಿ ಹರಂ ವಿಷ್ಣುಂ ಶರಣಂ ಗಂತು ಮರ್ಹಸಿ " ಇತ್ಯಾ

ದೇಶಕಾಲಗಳ ವಿವೇಚನೆಯನ್ನಾಗಲಿ, ಅವಸ್ಥೆಯ ಸಮೀಚೀನತ್ವವನ್ನಾಗಲಿ ಅಪೇಕ್ಷಿಸುವದಿಲ್ಲವು.

ಮುಂದೆ ಕೆಲವು ಶ್ರುತ್ಯುಪಬ್ರಹ್ಮಣಗಳನ್ನು ಮೇಲಿನಭಿಪ್ರಾಯದ ಸಮರ್ಥನೆಗಾಗಿ ಉದಾಹರಿಸುತ್ತಾರೆ :—

ಸರ್ವಲೋಕಶರಣ್ಯಾಯ ರಾಘವಾಯ ಮಹಾತ್ಮನೇ । ನಿವೇದಯತ ಮಾಂ ಕ್ಷಿಪ್ರಂ ವಿಭೀಷಣಮುಪಸ್ಥಿತಂ ॥ ಎಂಬುದು ಪೂರಾ ಶ್ಲೋಕವು, **ಸರ್ವಲೋಕ ಶರಣ್ಯಾಯ** - ಅಧಿಕಾರ ಭೇದವೇನೂ ಇಲ್ಲದೆ ದೇವ ಮನುಷ್ಯ ತಿರ್ಯಕ್ಸ್ಥಾವರಾದಿ ಸಮಸ್ತಕ್ಕೂ ಮತ್ತು "ನಿಷಾದಾನಾಂ ನೇತಾ"ಎಂಬ ದಯಾಶತಕ ಶ್ಲೋಕ ಟೀಕರಲ್ಲಿ ಹೇಳಿರುವಹಾಗೆ ನಿಮ್ನೋನ್ನತಿ ಭೇದವಿಲ್ಲದೆ ಸಮಸ್ತರಿಗೂ ಆಶ್ರಯಿಸಲು ಯೋಗ್ಯನಾದ, **ರಾಘವಾಯ** - ಶರಣಾಗತರನ್ನು ರಕ್ಷಿಸುವದರಲ್ಲಿಯೂ ಬೇಡಿದುದನ್ನು ಕೊಡುವದರಲ್ಲೂ ಅತ್ಯಂತ ಪ್ರಸಿದ್ಧಿಯನ್ನು ಹೊಂದಿದ ರಘುವಂಶದಲ್ಲಿ ಅವತರಿಸಿದವನಾದ, **ಮಹಾತ್ಮನೇ** - ಮಹತ್ತಾದ ಕೃಪೆಯಿಂದ ಕೂಡಿದ ಮನಸ್ಸುಳ್ಳವನಾದ, ಅಥವಾ ಮನುಷ್ಯಾವತಾರಿಯಾಗಿರುವ ಪರಮಾತ್ಮನಾದ ಶ್ರೀರಾಮನಿಗೆ, **ವಿಭೀಷಣಂ ಮಾಂ** - ಶ್ರೀರಾಮನನ್ನು ಸಕಲವಿಧ ಬಂಧುತ್ವೇನ ಭಾವಿಸಿದ ವಿಭೀಷಣನಾದ ತನ್ನನ್ನು, ಒಂದು ಮುಹೂರ್ತ ಕೂಡ ಆತನನ್ನು ಬಿಟ್ಟಿರಲಾರೆನಾದುದರಿಂದ ತುಂಬಾ ದಾಹಪೀಡಿತನು ನೀರನ್ನು ಹೇಗೆ ಪಾನ ಮಾಡದಿರಲಾರನೋ ಹಾಗೆ ಇರುವ ತನ್ನನ್ನು, ಅಥವಾ ಧರ್ಮದಲ್ಲೇ ಬುದ್ಧಿ ಇರಬೇಕೆಂದು ಬ್ರಹ್ಮನನ್ನು ಪ್ರಾರ್ಥಿಸಿ ಅಂತಹ ವರವನ್ನು ಪಡೆದವನಾದುದರಿಂದ, ಇದುವರೆಗಿನ ಸ್ಥಿತಿಯು ಅಗ್ನಿಯಲ್ಲಿ ಬಿದ್ದು ತಪಿಸುವಂತಿರುವದರಿಂದ, **ಉಪಸ್ಥಿತಂ** - ವಿಭೀಷಣನಾದ ತನ್ನನ್ನು, ಅಥವಾ ಆ ವರಪ್ರಸಾದದಿಂದುಂಟಾದ ಜ್ಞಾನದಿಂದ ಶ್ರೀರಾಮನು ಸರ್ವಲೋಕ ಶರಣ್ಯನೆಂದು ನಂಬಿರುವ ವಿಭೀಷಣನಾದ ತನ್ನನ್ನು, **ನಿವೇದಯತ** - ಆತನ ಪಾದದಲ್ಲಿ ನೀವುಗಳು ಪುರುಷಕಾರಭೂತರಾಗಿ ಸಮರ್ಪಿಸತಕ್ಕದ್ದು.

(೨) "**ಸರ್ವಯೋಗ್ಯಂ** - ಸಮಸ್ತರಿಗೂ ಶರಣ್ಯನಾಗಿರಲು ಯೋಗ್ಯನು, ದಯಾದಿ ಕಲ್ಯಾಣಗುಣಗಳಿಂದಲೂ, ಸರ್ವಶೇಷಿಯಾಗಿರುವದರಿಂದಲೂ, ಶರಣಾ

ದ್ಯುಪಬ್ರಹ್ಮಣಜ್ಞಳಾಲುಮ್ (೩) "ತ್ರಯಾಣಾಂ ಕ್ಷತ್ರಿಯಾದೀನಾಂ" ಎನ್ನು ತುಡಜ್ಞು ಶೂದ್ರ ಪರ್ಯಂತಜ್ಞಳಾನ ವರ್ಣಂಗಳೈ ಯಿಡುತ್ತು "ಪ್ರಪನ್ನಾ ನಾಂಚ ತತ್ವತಃ" ಎನ್ನು ಶೊಲ್ಲುಗಿರ ಶ್ರೀ ಸಾತ್ವತ ವಚನತ್ತಾಲುಮ್, "ಕುಯೋನಿಷ್ವಪಿ ಸಂಜಾತೋ ಯಸ್ಸಕೃಚ್ಛರಣಂಗತಃ । ತಂ

ಗತ ಪರಿಪಾಲನಾದಿ ವ್ರತವಿಂದಲೂ ಯೋಗ್ಯನು, ಸರ್ವಯೋಗ್ಯನಾಗಿದ್ದರೂ, ತುಂಬಾ ಕಷ್ಟಸಾಧ್ಯನೋ ಎಂದರೆ, **ಅನಾಯಾಸಂ** - ಏನೊಂದೂ ಆಯಾಸವಿಲ್ಲದೆ ಸಿದ್ಧೋಪಾಯನು, ಹಾಗೆ ಸುಲಭನಾದರೂ **ಪ್ರಮಾದವೇನಾದರೂ** ಉಂಟೋ ಎಂದರೆ, **ಅಪ್ರಮಾದಂ** - ಏನೊಂದೂ ಪ್ರಮಾದವಿಲ್ಲದಿರುವವನು, **ಅನೂಪಮಂ** - ತನಗೆ ಸಮರು ಯಾರೂ ಇಲ್ಲದವನು, ಅಸದೃಶನು, **ಪ್ರಪನ್ನಾರ್ತಿಹರಂ** - ಪ್ರಪನ್ನನ ಕ್ಲೇಶಗಳನ್ನೆಲ್ಲಾ ಅಪಹರಿಸುವವನು ಎಂದರೆ ಹೋಗಲಾಡಿಸುವವನು ಇಂತಹ, **ವಿಷ್ಣುಂ** - ವಿಷ್ಣುವನ್ನು, **ಶರಣಂ ಗಂತುಮರ್ಹಸಿ**- ಶರಣು ಹೊಂದಲು ಯೋಗ್ಯನು, ಇಲ್ಲಿಯೂ **ಸರ್ವಯೋಗ್ಯಂ** ಎಂದಿರುವದರಿಂದ, **ಸರ್ವಸ್ಯಶರಣಂ** ಎಂಬ ಶ್ರುತ್ಯರ್ಥವು ಉಪಬ್ರಹ್ಮಣ ಮಾಡಲ್ಪಟ್ಟಿತು." ಇಲ್ಲಿ **ಅನಾಯಾಸಂ, ಅಪ್ರಮಾದಂ, ಅನೂಪಮಂ** ಎಂಬ ವಿಶೇಷಣಗಳು ವಿಷ್ಣುವಿಗೆ ಸಂಬಂಧಿಸಿದವಾದರೂ, ಅಂತಹ ವಿಷ್ಣುವನ್ನು **ಶರಣಂ ಗಂತುಂ** ಎಂದು ಹೇಳಿರುವದರಿಂದ, ಶರಣಶಬ್ದಕ್ಕೂ ವಿಶೇಷಣಗಳೆಂದು ಭಾವಿಸಿ, ಆ ವಿಷ್ಣುವಿನಲ್ಲಿ ಪ್ರಪದನವೂ ಕೂಡ ಅನಾಯಾಸ, ಅಪ್ರಮಾದ ಅನೂಪಮಂ ಎಂದು ಭಾವಿಸಬಹುದು ; ಇತ್ಯಾದ್ಯುಪಬ್ರಹ್ಮಣಜ್ಞಳಾಲುಮ್-ಇವೇ ಮೊದಲಾದ ಉಪಬ್ರಹ್ಮಣಗಳಿಂದಲೂ, **ತ್ರಯಾಣಾಂ ಕ್ಷತ್ರಿಯಾದೀನಾಂ** - ತ್ರಯಾಣಾಂ ಎಂದರೆ ಬ್ರಾಹ್ಮಣ ಕ್ಷತ್ರಿಯ ವೈಶ್ಯರೆಂದು ಎಲ್ಲಿ ಅರ್ಥ ಉಂಟಾಗುತ್ತದೋ ಎಂಬ ಶಂಕಾದಿಂದ, **ಕ್ಷತ್ರಿಯಾದೀನಾಂ** ಎಂದು ಇಲ್ಲಿ ಹೇಳಲ್ಪಟ್ಟಿರುತ್ತದೆ, ಕ್ಷತ್ರಿಯ ವೈಶ್ಯ ಶೂದ್ರರುಗಳ, **ಎನ್ನು ತುಡಜ್ಞು** - ಎಂದು ಆರಂಭಿಸಿ, ಶೂದ್ರ ಪರ್ಯಂತಗಳಾದ ವರ್ಣಗಳನ್ನು, **ಯೆಡುತ್ತು** - ಸ್ಪಷ್ಟವಾಗಿ ತೋರುವಹಾಗೆ ಮಾಡಿ, **"ಪ್ರಪನ್ನಾನಾಂಚ ತತ್ವತಃ"** "ಯಥಾರ್ಥವಾಗಿಯೂ ಪ್ರಪನ್ನರಾದ," **ಎನ್ನು** - ಎಂಬದಾಗಿ, **ಶೊಲ್ಲುಗಿರ ಶ್ರೀ ಸಾತ್ವತ ವಚನತ್ತಾಲುಮ್** - ಹೇಳುವ ಶ್ರೀ ಸಾತ್ವತ ಸಂಹಿತಾ ವಾಕ್ಯದಿಂದಲೂ, ಇಲ್ಲಿ **ಪ್ರಪನ್ನಾನಾಂ** ಎಂಬುದು ತ್ರಯಾಣಾಂ ಕ್ಷತ್ರಿಯಾದೀನಾಂ ಎಂಬುವದರೊಂದಿಗೆ ಅನ್ವಯವಾದುದರಿಂದ ಶೂದ್ರರಲ್ಲೂ

---

(೩) ಶ್ರೀ ಸಾತ್ವ. ತಿ. ೯.

ಮಾತಾ ಪಿತೃಹಂತಾರ ಮಪಿಪಾತಿಭವಾರ್ತಿಹಾ" ಎನ್ನು ಶೊಲ್ಲುಗಿರ ಸನ ತ್ಕುಮಾರ ಸಂಹಿತಾ ವಚನತ್ತಾಲುಮ್, ದೃಢೀಕೃತವ್.

ಪ್ರಪನ್ನತೆಗೆ ಅರ್ಹತೆಯುಂಟೆಂಬುದು ತೋರಿಬರುತ್ತದೆ. ಇದರಿಂದ ಪ್ರಪತ್ತಿಗೆ ಸರ್ವಾಧಿಕಾರತ್ವವು ಸಿದ್ಧವು. **"ಕುಯೋನಿಷ್ವಪಿ** - ಕುತ್ಸಿತ ಯೋನಿಗಳಾದ ಶೂದ್ರ, ನಿಷಾದ, ಪಂಚಮ ಜಾತಿಯಲ್ಲೂ ಕೂಡ, **ಸಂಜಾತಃ** - ಹುಟ್ಟಿದರೂ, **ಸಕೃಚ್ಛರಣಂ ಗತಃ**-ಮ ಕ್ತಿದಾಯಕನನ್ನು ಒಂದುಸಲ ಶರಣು ಹೊಂದುವನಾ ಗುತ್ತಾನೋ, **ತಂ** - ಅಂತಹ ಪ್ರಪನ್ನನನ್ನು, **ಮಾತಾಪಿತೃ ಹಂತಾರಮುಪಿ** - ತಾಯಿತಂದೆಯನ್ನು ಕೊಂದವನಾಗಿದ್ದರೂ, **ಭವಾರ್ತಿಹಾ** - ಸಂಸಾರ ಬಂಧ ದಿಂದುಂಟಾಗುವ ಕ್ಲೇಶಗಳನ್ನು ಹೋಗಲಾಡಿಸುವ ಭಗವಂತನು,**ಪಾತಿ**-ಸಂರಕ್ಷಿಸು ತ್ತಾನೆ" ಎನ್ನು - ಎಂಬದಾಗಿ, **ಶೊಲ್ಲುಗಿರ** - ಹೇಳುವ ಸನತ್ಕುಮಾರಸಂಹಿತಾ ವಾಕ್ಯದಿಂದಲೂ, **ದೃಢೀಕೃತಮ್** - ಸಮರ್ಥನೆ ಮಾಡಲ್ಪಟ್ಟಿತು. ಪ್ರಪನ್ನ ದಲ್ಲಿ ಅಧಿಕಾರವು ಬ್ರಾಹ್ಮಣಾದಿ ತ್ರಿವರ್ಣದವರಿಗೆ ಮಾತ್ರವೇ ಅಲ್ಲದೆ ಶೂದ್ರ ಪಂಚಮರಿಗೂ ಕೂಡ ಉಂಟು. ಇದಕ್ಕೆ ಸರ್ವರಿಗೂ ಅಧಿಕಾರ ಉಂಟೆಂಬುದಕ್ಕೆ ಶ್ರುತಿ ಪ್ರಮಾಣವನ್ನು ಉದಾಹರಿಸಿ, ಅನಂತರ ಶ್ರುತಿಯು ಸರ್ವಾಧಿಕಾರತ್ವವನ್ನೇ ವಿಧಿಸಿತು ಎಂಬುದನ್ನು ಸಮರ್ಥನೆ ಮಾಡಿ ಹೇಳುವದಕ್ಕಾಗಿ ಸಾತ್ವತ ಸನತ್ಕು ಮಾರವಾಕ್ಯಗಳನ್ನೂ ಕೂಡ ಉದಾಹರಿಸಿದರು. **ಕುಯೋನಿಷು** ಎಂದು ಹೇಳಿರು ವದರಿಂದ ಇದಕ್ಕೆ ಜಾತ್ಯಾದಿ ಭೇದವೂ ಇಲ್ಲವೆಂದು ಹೇಳಿದುದಲ್ಲದೆ, ಅಧಿಕಾ ರಿಯು ಎಷ್ಟು ಪಾಪಿಷ್ಠನಾಗಿ ತಾಯಿತಂದೆಗಳನ್ನು ಕೊಂದವನಾದರೂ ರಕ್ಷಿಸಲ್ಪ ಡುವನೆಂದು ಹೇಳಲ್ಪಟ್ಟಿತು. **ಮಿತ್ರಭಾವೇನ ಸಂಪ್ರಾಪ್ತಂ ನ ತ್ಯಜೇಯಂ ಕಥಂಚನ । ದೋಷೋ ಯದ್ಯಪಿ ತಸ್ಯ ಸ್ಯಾತ್ಸತಾ ಮೇತದಗರ್ಹಿತಂ** ದೋಷಿಯೂ ಕೂಡ ಶರಣಾಗತನಾದರೆ ರಕ್ಷಿಸಲ್ಪಡುವನೆಂದು ಶ್ರೀ ರಾಮನು ಹೇಳಿ ರುತ್ತಾನೆ. ಮಹಾ ಪಾಪಿಯಾದ ರಾವಣನೇ ಶರಣಾಗತನಾದರೂ ರಕ್ಷಿಸಲ್ಪಡುವನು ಎಂದು **"ಯದಿವಾ ರಾವಣಸ್ಸ್ವಯಂ"** ಎಂಬುದರ ಮೂಲಕ ತಿಳಿಯಪಡಿಸು ತ್ತಾರೆ. **ಕುಯೋನಿ** ಯಲ್ಲಿ ಜನಿಸಿದ ಮಹಾಪಾಪಿಯಾದ ಕಾಕನೂ ಕೂಡ ರಕ್ಷಿಸ ಬೇಕೆಂದು ಪ್ರಪದನ ಮಾಡಿದುದರಿಂದ ರಕ್ಷಿಸಲ್ಪಟ್ಟನು. ಹೀಗೆ ಶರಣಾಗತಿಗೆ ಸರ್ವಾ ಧಿಕಾರತ್ವ ಉಂಟೆಂಬುದು ಸಿದ್ಧವು. ಆದರೆ ಪ್ರಪನ್ನನು ಭವಾರ್ತಿಪರಿಹಾರಕ್ಕಾಗಿ ಶರಣಾಗತಿಯನ್ನು ಮಾಡುವದರಿಂದ ಆತನು ಯಾರೇ ಆಗಲಿ **ಭವರ್ತಿಹಾ** ಆದ ಶ್ರೀಹರಿಯು ಭವಾರ್ತಿಯಿಂದ ರಕ್ಷಿಸುವನೆಂಬ ಭಾವವು.

ಶೂದ್ರಾದೀನಾಂ ಉಪಾಸನೇಽನಧಿಕಾರಃ ನ ತು ಪ್ರಪತ್ತೌ.

ಆಗ್ನೇಯಾಲ್ ಉಪಾಸನಮ್ ತ್ರೈವರ್ಣಿಕಾಧಿಕಾರಮಾಗ ಅಪ ಶೂದ್ರಾಧಿ ಕರಣತ್ವಿಲೇ ಸಮರ್ಥಿತಮಾನಾಲುಮ್, ವೈದಿಕಜ್ಞಾನ ಸತ್ಯ ವಚನಾದಿಗಳ್ ಪೋಲೆ, ಪ್ರಪತ್ತಿಯ್ಯುಮ್ ಸಾಮಾನ್ಯಧರ್ಮ ಮಾಗೈ

ಶೂದ್ರಾದಿಗಳಿಗೆ ಉಪಾಸನದಲ್ಲಿ ಅಧಿಕಾರವಿಲ್ಲವು ಪ್ರಪತ್ತಿಯಲ್ಲಾದರೋ ಹಾಗಲ್ಲವು.

ಈ ಅಧಿಕರಣದಲ್ಲಿ ಶೂದ್ರನಿಗೆ ಬ್ರಾಹ್ಮಣ .ಕ್ಷತ್ರಿಯ ವೈಶ್ಯರಹಾಗೆ ಉಪಾಸನದಲ್ಲಿ ಅಧಿಕಾರ ಉಂಟೇ ಇಲ್ಲವೇ ಎಂಬ ವಿಚಾರದಲ್ಲಿ ಶೂದ್ರ ನಿಗೂ ಅರ್ಥಿತ್ವವೂ ಉಪಾಸನೆಯಲ್ಲಿ ಸಾಮರ್ಥ್ಯವೂ ಇರುವದರಿಂದಲೂ, ಪುರಾಣಾ ದಿಗಳಿಂದ ಬ್ರಹ್ಮಸ್ವರೂಪಜ್ಞಾನವೂ ಉಂಟಾಗುವದರಿಂದಲೂ, ಉಪನಿಷತ್ತಿನಲ್ಲಿ ಜಾನಶ್ರುತಿರಾಜನನ್ನು, ಓ ಶೂದ್ರನೇ ಎಂದು ಸಂಬೋಧಿಸಿ ರೈಕ್ವರು ಬ್ರಹ್ಮವಿದ್ಯೆ ಯನ್ನು ಉಪದೇಶಿಸಿರುವದರಿಂದಲೂ, ಶೂದ್ರನಿಗೂ ಅಧಿಕಾರ ಉಂಟೆಂದು ಪೂರ್ವ ಪಕ್ಷಮಾಡಿ, ಉಪನಯನಮಾಡಿ ಬಂದ ವೇದಾಂತಾಧ್ಯಯನ ಜ್ಞಾನದಿಂದ ಉಪಾ ಸನಕ್ಕೆ ಅಧಿಕಾರ ಉಂಟಾಗುವದರಿಂದ, ಅಂತಹ ಉಪನಯನವು ಶೂದ್ರನಿಗಿಲ್ಲವಾ ದುದರಿಂದಲೂ, ಉಪನಿಷತ್ತಿನಲ್ಲಿ ಜಾನಶ್ರುತಿಯನ್ನು ಸಂಬೋಧಿಸಿದುದು ಬ್ರಹ್ಮ ಜ್ಞಾನವಿಲ್ಲವೇ ಎಂಬ ಶೋಕದ ಮೂಲಕ ಶೂದ್ರನೆಂದಾದುದರಿಂದಲೂ, ಜಾನ ಶ್ರುತಿರಾಜನು ಶೂದ್ರನಲ್ಲದೆ ಕ್ಷತ್ರಿಯನಾದುದರಿಂದಲೂ, ಶೂದ್ರನಿಗೆ ಬ್ರಹ್ಮವಿದ್ಯೆ ಯಲ್ಲಿ ಅಧಿಕಾರವಿಲ್ಲವು. ಉಪಾಸನವು ಬ್ರಹ್ಮವಿದ್ಯಾರೂಪವಾದ ಉಪಾಯ ವಾದುದರಿಂದ ಬ್ರಾಹ್ಮಣ ಕ್ಷತ್ರಿಯ ವೈಶ್ಯರು ಮಾತ್ರವೇ ವೇದಾಧಿಕಾರಿಗಳಾದುದ ರಿಂದ ಅದರಲ್ಲಿ ಅಧಿಕಾರ ಉಂಟೆಂದೂ, ಶೂದ್ರ ಪಂಚಮರುಗಳಿಗೆ ಇಲ್ಲವೆಂದೂ, ವ್ಯಾಸಸೂತ್ರಗಳ ಅಪಶೂದ್ರಾಧಿಕರಣದಲ್ಲಿ ಹೇಳಿಲ್ಪಟ್ಟಿರುವಾಗ, ಈ ಪ್ರಪದನವೂ ಉಪಾಸನದ ಹಾಗೆ ಮೋಕ್ಷೋಪಾಯವೆಂದು ಶ್ರುತಿಯಲ್ಲಿ ಹೇಳಿರುವದರಿಂದಲೂ, ಅದೂ ಒಂದು ವೈದಿಕ ಕರ್ಮವಾದುದರಿಂದಲೂ ಉಪಾಸನದಹಾಗೆ ತ್ರೈವರ್ಣಿಕ ರಿಗೆ ಮಾತ್ರವೇ ಇದರಲ್ಲಿ ಅಧಿಕಾರವೆಂದು ಭಾವಿಸುವದು ನ್ಯಾಯವಲ್ಲವೇ ಎಂಬಾ ಕ್ಷೇಪಕ್ಕೆ ಸಮಾಧಾನವನ್ನು ಹೇಳುತ್ತಾರೆ :-ಆಗ್ನೇಯಾಲ್-ಶ್ರುತಿವಾಕ್ಯಬಲದಿಂದ ಲೂ, ಅದನ್ನು ಸಮರ್ಥಿಸಿ ಹೇಳಿರುವ ಸಂಹಿತಾವಾಕ್ಯಪ್ರಮಾಣಗಳಿಂದಲೂ, ಪ್ರಪ

ಯಾಲೇ ಯಥಾಧಿಕಾರಮ್ ವೈದಿಕ ಮಂತ್ರತ್ತಾಲೆಯಾದಲ್, ತಾಂತ್ರಿಕ ಮಂತ್ರಾದಿಗಳಾಲಿ ಯಾದಲ್ ಸರ್ವರುಕ್ಕುಮ್ ಪ್ರಪತ್ತ್ಯನುಷ್ಠಾನತ್ತುಕ್ಕು ವಿರೋಧವಿಲ್ಲೆ.

ತ್ತಿಗೆ ಸರ್ವಾಧಿಕಾರತ್ವವು ತೋರಿಬರುವುದರಿಂದ, ಉಪಾಸನವು, ತ್ರೈವರ್ಣಿಕಾಧಿಕಾರಮಾಗ-ಬ್ರಾಹ್ಮಣ ಕ್ಷತ್ರಿಯ ವೈಶ್ಯ ಮೂರು ವರ್ಣದವರಿಗೆ ಮಾತ್ರವೇ ಅಧಿಕಾರವಿರುವಹಾಗೆ, ವ್ಯಾಸಸೂತ್ರಗಳ ಅಪಶೂದ್ರಾಧಿಕರಣದಲ್ಲಿ ಸಮರ್ಥಿತಮಾನಾಲುಮ್-ಸಾಧಿಸಲ್ಪಟ್ಟಿದ್ದರೂ, ವೈದಿಕಜ್ಞಾನ – ವೇದದಲ್ಲಿಹೇಳಿರುವ, ಸತ್ಯವಚನಾದಿಗಳ್ ಪೋಲೇ-"ಸತ್ಯಂವದ ಧರ್ಮಂಚರ" (ತೈ. ಶಿಕ್ಷಾವಲ್ಲಿ) ಇತ್ಯಾದಿ ವಾಕ್ಯಗಳಹಾಗೆ, ಪ್ರಪತ್ತಿಯೂ ಕೂಡ, ಸಾಮಾನ್ಯ ಧರ್ಮವಾಗ್ಯೆಯಾಲೆ-ಎಲ್ಲಾವರ್ಣದವರಿಗೂ ಅನ್ವಯಿಸುವ ಧರ್ಮವಾದುದರಿಂದ, ಯಥಾಧಿಕಾರಮ್-ಅಧಿಕಾರಿಯು ಬ್ರಾಹ್ಮಣಾದಿಯಲ್ಲೊಬ್ಬನೋ ಅಥವಾ ಶೂದ್ರಪಂಚಮನೋ ಅದಕ್ಕನುಗುಣವಾಗಿ, ವೈದಿಕ ಮಂತ್ರತ್ತಾಲೆಯಾದಲ್-ಕಠಶ್ರುತಿಯಲ್ಲಿ ವೇದಪ್ರತಿಪಾದ್ಯವಾದ ದ್ವಯಮಂತ್ರದಿಂದಲೇಯಾಗಲಿ, ತಾಂತ್ರಿಕ ಮಂತ್ರಾದಿಗಳಾಲೇ ಯಾದಲ್ - ತಾಂತ್ರಿಕ ಮೂಲಕವಾಗಲಿ ಎಂದರೆ ತ್ರಿವರ್ಣದವರಿಗೆ ದ್ವಯಮಂತ್ರಮೂಲಕವಾಗಿ ಶೂದ್ರಾದಿಗಳಿಗೆ "ಶ್ರೀಮನ್ನಾರಾಯಣಸ್ವಾಮಿ" ಎಂಬ ತಾಂತ್ರಿಕಾದಿ ಮಂತ್ರದ ಮೂಲಕವಾಗಿ ಎಂಬ ಭಾವವು, ಸರ್ವರಿಗೂ, ಪ್ರಪತ್ತ್ಯನುಷ್ಠಾನತ್ತುಕ್ಕು - ಪ್ರಪದನಾನುಷ್ಠಾನವುಂಟೆಂಬುದರಲ್ಲಿ, ವಿರೋಧಮಿಲ್ಲೈ - ವಿರೋಧವೇನೂ ಇಲ್ಲವು. ಭಕ್ತಿಯೋಗವು ಪ್ರಪದನದಹಾಗೆ ವೇದಪ್ರೋಕ್ತವಾದ ಉಪಾಯವಾಗಿ ತ್ರೈವರ್ಣಿಕರಿಗೆ ಮಾತ್ರವೇ ಅದರಲ್ಲಿ ಅಧಿಕಾರವುಂಟೆಂಬುದು ಶಾರೀಕಮಿಮಾಮಾಂಸಾ ಅಪಶೂದ್ರಾಧಿಕರಣದಲ್ಲಿ (೧ ೩ ೯) ವ್ಯಕ್ತವು. ಉಪಾಸನ ಪ್ರಪತ್ತಿಗಳೆರಡೂ ಮೋಕ್ಷೋಪಾಯಗಳು. ಹೀಗಿರುವಾಗ ಉಪಾಸನದಲ್ಲಿ ತ್ರೈವರ್ಣಿಕರಿಗೆ ಮಾತ್ರ ವಧಿಕಾರವೆಂದು ಶ್ರೀ ವ್ಯಾಸರು ಅಪಶೂದ್ರಾಧಿಕರಣದಲ್ಲಿ ವೇದಪ್ರೋಕ್ತವೆಂದು ಸ್ಥಾಪಿಸಿರುವಾಗ ಪ್ರಪತ್ತಿಗೆ ಮಾತ್ರ ಸರ್ವಾಧಿಕಾರತ್ವವು ಹೇಗೆ? ಎಂದರೆ ಶ್ರುತಿ ಸ್ಮೃತಿ ಪ್ರಮಾಣಗಳ ಬಲದಿಂದ ಸರ್ವಾಧಿಕಾರತ್ವವು ಸಿದ್ಧವೆಂದು ಹಿಂದಿನ ವಾಕ್ಯಗಳಿಂದ ಸ್ಥಾಪಿಸಿದರು. ಹೀಗೆ ಪ್ರಪತ್ತಿಗೆ ಸರ್ವಾಧಿಕಾರತ್ವವನ್ನು ಒಪ್ಪಿಕೊಂಡರೆ ಅನುಷ್ಠಾನವೇನು ಶೂದ್ರಾದಿಗಳ ವಿಷಯದಲ್ಲೂ ಸಮವೇ ಇಲ್ಲವೇ ವ್ಯತ್ಯಸ್ತವೇ ಎಂದರೆ ತ್ರೈವರ್ಣಿಕರಿಗೆ ಮಂತ್ರವು ಯಥಾವತ್ತಾಗಿಯೂ ಇತರರಿಗೆ ತಾಂತ್ರಿಕವಾಗಿಯೂ

ಸ್ವಾಶ್ರಯಣಂ ಸರ್ವ ಸಾಧಾರಣಮಿತಿ ಭಗವದುಕ್ತಿಃ.

ಕಾಕಾದಿಗಳುಮ್ ಪ್ರಪನ್ನರಾಗ ಶಾಸ್ತ್ರಜ್ಞಳಿಲೇ ಕೇಳಾ ನಿನ್ರೋಮ್

(೧) **"ಮಾಂಹಿ ಪಾರ್ಥವ್ಯಪಾಶ್ರಿತ್ಯ ಯೇ ಪಿಸ್ಯುಃ ಪಾಪಯೋನಯಃ ।**

ಉಪದೇಶ್ಯವೆಂಬ ಭಾವವು. ತಾಂತ್ರಿಕ ಮಂತ್ರಗಳು ಯಾವುವೆಂಬುದು ದ್ವಯಾಧಿಕಾರದಲ್ಲಿ ಪ್ರತಿಪಾದಿಸಲ್ಪಟ್ಟಿವೆ :—**"ಶ್ರೀಮನ್ನಾರಾಯಣಸ್ವಾಮಿನ್ನನನ್ಯ ಶರಣಸ್ತವ । ಚರಣೌ ಶರಣಂ ಯಾತಸ್ತವೈವಾಸ್ಮೀಹಮಚ್ಯುತ॥"** ಎಂಬ ಪಂಚರಾತ್ರತಂತ್ರದಲ್ಲಿ ಹೇಳಲ್ಪಟ್ಟ ಮಂತ್ರವನ್ನು ದ್ವಯಕ್ಕೆ ಬದಲಾಗಿ ಉಪಯೋಗಿಸಬಹುದು, ಅಥವಾ **ಶ್ರೀಮನ್ನಾರಾಯಣಸ್ವಾಮಿನ್ದಾಸೋಹಂ ತವ ತಸ್ಯವೈ । ಪರಮಾಪ್ತಸ್ತವೇವಾರ್ಥಮನುಕೂಲೋ ವಿವರ್ಜಯ॥ ಪ್ರಾತಿಕೂಲ್ಯಂ ಸುವಿಸ್ರಬ್ಧ ಸ್ಸಂಪ್ರಾರ್ಥ್ಯ ಶರಣಂ ಗತಃ । ವ್ರಜಾಮಿ ಯುಷ್ಮಚ್ಚರಣಂ ತತ್ರೈವಾಹಂ ಮಯೋರ್ಪಿತಂ॥"** ಈ ಎರಡು ಶ್ಲೋಕಕ್ಕೂ ದ್ವಯವೆಂದೇ ಹೆಸರು. **ತಾಂತ್ರಿಕ ಮಂತ್ರಾದಿ** ಎಂಬಲ್ಲಿ ಆದಿ ಪದದಿಂದ **"ಮಂತ್ರೈರನುಶ್ರವ ಮುಖೇಷ್ವಧಿಗ್ಯಮಾನೈ ಸ್ಸ್ವಧಿಕ್ರಿಯಾ ಸನುಚಿತೈ ಯದಿವಾನ್ಯವಾಕ್ಯೈಃ"** ಎಂಬ ಶ್ಲೋಕದಲ್ಲಿ ಅನ್ಯವಾಕ್ಯೈಃ ಎಂಬುದರಿಂದ ತೋರಿಬರುವ ಅದೇ ಅರ್ಥಗರ್ಭಿತವಾದ ಇತರ ವಾಕ್ಯಗಳು ಸೂಚಿಸಲ್ಪಟ್ಟವು. ದ್ವಯದಲ್ಲಿ ಹೇಗೋ ಹಾಗೆಯೇ ಮೂಲಮಂತ್ರದ ವಿಷಯದಲ್ಲೂ ಸ್ತ್ರೀ ಶೂದ್ರಾದಿಗಳ ವಿಷಯದಲ್ಲಿ ಸ್ವಲ್ಪ ವ್ಯತ್ಯಾಸದಿಂದ ಉಪದಿಶ್ಯವು

ತನ್ನ ಆಶ್ರಯದಲ್ಲಿ ಸರ್ವರಿಗೂ ಅಧಿಕಾರ ಉಂಟೆಂದು ಭಗವಂತನ ಉಕ್ತಿಯು.

ಮುಂದೆ ತಿರ್ಯಗ್ಜಂತುಗಳಿಗೂ ಅಧಿಕಾರ ಉಂಟೆಂದು ಭಗವದುಕ್ತಿಯನ್ನೇ ಪ್ರಮಾಣವಾಗಿ ಉದಾಹರಿಸಿ ಕೈಮುತಿಕನ್ಯಾಯಪ್ರಕಾರ ಶೂದ್ರರಿಗೆ ಅಧಿಕಾರ ಉಂಟೇಉಂಟೆಂದು ಸ್ಥಾಪಿಸುತ್ತಾರೆ. **ಕಾಕಾದಿಗಳುಮ್**-ಇಂದ್ರನ ಮಗನಾದ **ಕಾಕಾಸುರನೇ** ಮೊದಲಾದವರೂಕೂಡ, ಇಲ್ಲಿ ಆದಿಶಬ್ದದಿಂದ, **ಕಪೋತ ಗಜೇಂದ್ರಾದಿಗಳು** ಹೇಳಲ್ಪಟ್ಟರು, **ಪ್ರಪನ್ನರಾಗ**—ಪ್ರಪದನವನ್ನನುಷ್ಠಿಸಿ ಭಗವತ್ಪಾದಾಶ್ರಯವನ್ನು ಮಾಡಿದವರೆಂದು, **ಶಾಸ್ತ್ರಗಳಲ್ಲಿ, ಕೇಳಾನಿನ್ರೋಮ್**-ಗುರುಮುಖೇನ ಕೇಳಿರುತ್ತೇವೆ, (೧) **"ಹೇ ಪಾರ್ಥ**-ಓ ರಾಜರ್ಷಿಯಾದ ಅರ್ಜುನನೇ, **ಸ್ತ್ರಿಯಃ**-

---

(೧) ಗೀ. ೯. ೩೨

ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಪಿ ಯಾಂತಿ ಪರಾಂಗತಿಮ್" ಎನ್ನು ಭಗವದಾಶ್ರಯಣ ಮಾತ್ರನು ಸರ್ವಸಾಧಾರಣ ವಾಗ ಶರಣ್ಯ ತಾನು ಮ್ ಅರುಳಿಚ್ಚೆಯ್ದರ್ತ ಉಪಾಸನತ್ತುಕ್ಕುಮ್ ಪ್ರಾರಂಭಂ ತ್ರೈವರ್ಣಿಕ ಶರೀರತ್ತಿಲೇಯಾನಾಲುಮ್, ಅವಸಾನಮ್ ಸರ್ವಶರೀರತ್ತಿಲುಮ್

ಸ್ತ್ರೀಗಳಾಗಲಿ, ವೈಶ್ಯಾಃ - ಧರ್ಮಾಧರ್ಮಗಳ ವಿವೇಕವಿಲ್ಲವೆ ಯಾವಾಗಲೂ, ವಾಣಿಜ್ಯದಲ್ಲಿ ಮುಳುಗಿದ ವೈಶ್ಯರೂ, ತಥಾ - ಹಾಗೆಯೇ, ಶೂದ್ರಾಶ್ಚ - ಆಚಾರ ಶೂನ್ಯರಾದ ಶೂದ್ರರೂ ಸಹ, ಪಾಪಯೋನಯೋಪಿ-ಪಾಪಜನ್ಮವನ್ನೆತ್ತಿದವರಾದರೂ ಕೂಡ, ಯೇಸ್ಯುಃ - ಯಾರು ಆಗುತ್ತಾರೋ, ತೇಪಿ - ಅವರುಗಳೂ ಕೂಡ, ಮಾಂ ಹಿ ವ್ಯಪಾಶ್ರಿತ್ಯ - ನನ್ನನ್ನು ಚನ್ನಾಗಿ ಆಶ್ರಯಿಸಿಯಲ್ಲವೇ ಪರಾಂಗತಿಂ ಯಾಂತಿ-ಅತ್ಯುತ್ಕೃಷ್ಟವಾದ ಗತಿಯನ್ನು ಹೊಂದುವರು. ಹೀಗಿರುವಲ್ಲಿ ಬ್ರಾಹ್ಮಣರಾಗಿ ಪುಣ್ಯಾನಂತರರಾಗಿರುವವರು ಸದ್ಗತಿಯನ್ನು ಹೊಂದುವರು ಎಂದು ಹೇಳಬೇಕಾಗಿದ್ದೇನಿದೆ, ಕೈವಲ್ಯವಿತರಣವ್ಯಾಯಸಿದ್ಧವೆಂದು ಹೇಳಲ್ಪಡುತ್ತದೆ." ಎನ್ನು - ಎಂಬದಾಗಿ, ಭಗವದಾಶ್ರಯಣ ಮಾತ್ರನು-ಭಗವಂತನನ್ನು ಆಶ್ರಯಿಸೋಣ ಮಾತ್ರವು, ಸರ್ವ ಸಾಧಾರಣವಾಗ - ಸಮಸ್ತರಿಗೂ ಸಾಧಾರಣವಾದುದೆಂದು ಎಂದರೆ ಸಮಸ್ತ ಅಧಿಕಾರಿಗಳಿಗೂ ಉಂಟೆಂಬುದು, ಇಲ್ಲಿ ಮಾತ್ರ ಶಬ್ದದಿಂದ ಉಪಾಸನವು ಹಾಗಲ್ಲವೆಂಬುದು ಸೂಚಿತವು, ಸ್ತ್ರೀ ಶೂದ್ರಾದಿಗಳಿಗೆ ಉಪಾಸನದಲ್ಲಿ ಅಧಿಕಾರವಿಲ್ಲವು, ಶರಣ್ಯ ತಾನುಮ್ - ಸಮಸ್ತರಿಗೂ ಉಪಾಯಭೂತನಾಗಿ ರಕ್ಷಕನಾದ ಸರ್ವೇಶ್ವರನು ತಾನೇ, ಅರುಳಿಚ್ಚೆಯ್ದರ್ತ - ದಯಮಾಡಿ ಉಪದೇಶಿಸಿರುತ್ತಾನೆ, ಕಾಕಾದಿ ವೃತ್ತಾಂತಗಳು ಶ್ರೀಮದ್ರಾಮಾಯಣದಲ್ಲಿ ಸುಪ್ರಸಿದ್ಧವು. ಸ್ತ್ರೀ ಶೂದ್ರಾದಿಗಳಿಗೆ ಉಪಾಸನ ಪ್ರಾರಂಭದಲ್ಲಿ ಅಧಿಕಾರವಿಲ್ಲವೆಂದೂ ತ್ರೈವರ್ಣಿಕರಿಗೆ ಮಾತ್ರ ಉಂಟೆಂದೂ ಅಪಶೂದ್ರಾಧಿಕರಣದಲ್ಲಿ ಹೇಳಲ್ಪಟ್ಟಿದ್ದರೂ, ಉಪಾಸನವು ಸಿದ್ಧಿಸಿದ ಸ್ತ್ರೀ ಶೂದ್ರಾದಿ ಜನ್ಮಗಳು ಅನಂತರ ಪ್ರಾಪ್ತವಾದರೆ ಅಂತಹ ನೀಚ ಜನ್ಮದಲ್ಲೂ ಪೂರ್ಣಫಲವನ್ನು ಪಡೆದಿರುತ್ತಾರೆ. ಹೀಗೆ ನೀಚ ಜಾತೀಯರೂ ಕೂಡ ಹಿಂದೆ ಭಕ್ತಿಮಾರ್ಗವನ್ನವಲಂಬಿಸಿದವರು, ಅಂತಹ ನೀಚಜಾತಿಯಲ್ಲೂ ಉಪಾಯ ಪೂರ್ತಿಯನ್ನು ಮಾಡಿ ಫಲವನ್ನು ಹೊಂದಿರುತ್ತಾರೆಂಬುದಕ್ಕೆ ಪ್ರಮಾಣವನ್ನು ಮುಂದಿನ ವಾಕ್ಯದಿಂದ ಉದಾಹರಿಸಿ, ಹೀಗಿರವಾಗ ಅಂತಹ ನೀಚ ಜಾತೀಯರಿಗೆ ಪ್ರಪದನದಲ್ಲಿ ಅಧಿಕಾರವಿಲ್ಲವೆಂದು ಹೇಳುವದು ಸ್ವತರಾಂ ಸಾಧ್ಯವಿಲ್ಲವೆಂದು ಹೇಳುತ್ತಾರೆ. ಉಪಾಸನತ್ತುಕ್ಕುಮ್

ಕೊಡುಮೆನ್ನುಮಿಡವು, (೧) ಧರ್ಮವ್ಯಾಧಾದಯೋಪ್ಯನ್ಯೇ ಪೂರ್ವಾಭ್ಯಾಸಾಜ್ಜುಗುಪ್ಸಿತೇ। ವರ್ಣಾವರತ್ವೇ ಸಂಪ್ರಾಪ್ತಾ ಸ್ಸಂಸಿದ್ಧಿಂ ಶ್ರಮಣೇಯಥಾ" ಎನ್ನು ಶ್ರೀವಿಷ್ಣುಧರ್ಮತ್ತಿಲೇ ಶೊಲ್ಲಪಟ್ಟುದು.

ಪ್ರಾರಂಭವು-ಉಪಾಸನಕ್ಕೆ ಪ್ರಾರಂಭವು, ತ್ರೈವರ್ಣಿಕ ಶರೀರತ್ತಿಲೇಯೊನಾಲುವು - ಬ್ರಾಹ್ಮಣ ಕ್ಷತ್ರಿಯ ವೈಶ್ಯಜನ್ಮವನ್ನೆತ್ತಿದ ಶರೀರದಿಂದ ಮಾತ್ರವೇ ಆದರೂ, ಅವಸಾನವು-ಆ ಉಪಾಸನಕ್ಕೆ ಅಂತ್ಯವು, ಸರ್ವಶರೀರತ್ತಾಲುವು ಕೊಡುವು - ಸ್ತ್ರೀ ಶೂದ್ರಾದಿ ಯಾವ ಜನ್ಮವನ್ನೆತ್ತಿದ ಶರೀರದಿಂದಲೇಯಾಗಲಿ ಸಮಸ್ತರಿಗೂ ಆಗಬಹುದು, ಎನ್ನುಮಿಡವು - ಎನ್ನುವ ಸಂದರ್ಭದಲ್ಲಿ ಆದಕ್ಕೆ ಪ್ರಮಾಣವನ್ನು ಉದಾಹರಿಸುತ್ತಾರೆ:—(೧)"ಅನ್ಯೇ-ಇತರರಾದ, ಧರ್ಮವ್ಯಾಧಾದಯೋಪಿ-ಧರ್ಮವ್ಯಾಧನೇ ಮೊದಲಾದವರೂಕೂಡ, ಜುಗುಪ್ಸಿತೇ ತುಂಬಾ ಹೇಯವಾದ, ವರ್ಣಾವರತ್ವೇ - ಕೀಳು ವರ್ಣದ ಜನ್ಮವನ್ನು ಹೊಂದಿದರೂ, ಪೂರ್ವಾಭ್ಯಾಸಾತ್ - ಹಿಂದಿನ ಜನ್ಮದಲ್ಲಿ ಅನುಷ್ಠಿಸಿದ ಭಕ್ತಿಯೋಗದ ಮಹಿಮೆಯಿಂದ, ಸಂಸಿದ್ಧಿಂ - ಮೋಕ್ಷವನ್ನು, ಶ್ರಮಣೀಯಥಾ - ಸನ್ಯಾಸಿನಿಯಾದ ಶಬರಿಯು ಹೇಗೆ ಹೊಂದಿದಳೋ ಹಾಗೆ, ಸಂಪ್ರಾಪ್ತಾಃ - ಹೊಂದಿದವರಾದರು" ಎನ್ನು-ಎಂಬದಾಗಿ ವಿಷ್ಣು ಧರ್ಮದಲ್ಲಿ, ಶೊಲ್ಲಪಟ್ಟಿದು - ಹೇಳಲ್ಪಟ್ಟಿತು, ಡಬೇಳಾದ ಶಬರಿಯೂ,ವ್ಯಾಧನಾದ ಧರ್ಮವ್ಯಾಧನೂ ಸಹ ಇಂತಹ ಕೀಳುಜನ್ಮವನ್ನು ಕಾರಣಾಂತರದಿಂದ ಹೊಂದಿದ್ದರೂ, ಹಿಂದಿನ ಉತ್ಕೃಷ್ಟಜನ್ಮದಲ್ಲಿ ಪ್ರಾರಂಭಿಸಿದ ಉಪಾಸನೆಯ ಮಹಿಮೆಯಿಂದ ಸರ್ವೇಶ್ವರನ ಧ್ಯಾನದಲ್ಲೇ ನಿರತರಾಗಿ ಮೋಕ್ಷವನ್ನು ಹೊಂದಿದರೆಂಬ ಇತಿಹಾಸಗಳುಂಟೆಂಬ ತಾತ್ಪರ್ಯವು. ಹಿಂದೆ ಉಪಾಸನವನ್ನು ಉತ್ಕೃಷ್ಟಜನ್ಮದಲ್ಲಿ ಆರಂಭಿಸಿದುದರಿಂದ ಅನಂತರ ನಿಕೃಷ್ಟಜನ್ಮ ಬಂದರೂ ಭಗವದಾಶ್ರಯಣವು ಮೋಕ್ಷದಾಯಕವಾಗಿರುವಾಗ, ಪ್ರಪದನಾನುಷ್ಠಾನಮೂಲಕ ಭಗವದಾಶ್ರಯಣವು ಸರ್ವಾಧಿಕಾರವಾಗುವದರಲ್ಲಿ ಸಂದೇಹವಿಲ್ಲವೆಂಬ ತಾತ್ಪರ್ಯವು. ಉಪಾಸನಕ್ಕೆ ತ್ರೈವರ್ಣಿಕರಿಗಲ್ಲದೆ ಶೂದ್ರಾದಿಗಳಿಗೆ ಅಧಿಕಾರವಿಲ್ಲವು; ಆದುದರಿಂದ ಉಪಾಸನಾರಂಭಕ್ಕಾದರೂ ಉತ್ತಮವರ್ಣದಲ್ಲಿ ಜನ್ಮವು ಆವಶ್ಯಕವು; ಪ್ರಪತ್ತಿಗಾದರೋ ಅಂತಹ ನಿಯಮವಿಲ್ಲವು. ಕೀಳು ಜನ್ಮದವರೂ ಅನುಷ್ಠಿಸಿ ಅದೇ ಜನ್ಮದಲ್ಲೇ ಮುಕ್ತಿಯನ್ನು ಹೊಂದಬಹುದು. ಶಬರಿಯು ಸನ್ಯಾಸಿನಿಯೆಂದು

---

(೧) ವಿ. ಧ. ೧೦೨. ೨೯ ಹಿಂದೆ ಪರಿಪೂರ್ಣ ಬ್ರಹ್ಮಾನುಭವಾಧಿಕಾರದ ಗಲಟಿನೆಯ ಪುಟ ನೋಡಿ.

ಪ್ರಪತ್ತೇಃ ಸರ್ವಾಧಿಕಾರತ್ವಂ, ಆಕಿಂಚಿನ್ಯ ಮೇವ ಸರ್ವತ್ರಾಧಿಕಾರಃ

ಇಪ್ಪಡಿ ಉಪಾಸನನುಮ್ ತ್ರೈವರ್ಣಿಕರ್ಕ್ಕೇ ಆರಂಭಣೀಯಮಾನಾ ರ್ಪೋಲೆ ಪ್ರಪತ್ತಿಯಿಲೊರು ನಿಯಮಮುಕತ್ತಾಲೆ ಸಾಮಾನ್ಯ ವಚನ

ಹೇಳಲ್ಪಟ್ಟತಲ್ಲಾ ಸನ್ಯಾಸಾಶ್ರಮವು ಸ್ತ್ರೀಯರಿಗುಂಟೋ ಎಂದರೆ ಸನ್ಯಾಸವೃತ್ತಿಯಲ್ಲಿದ್ದಳೆಂಬ ಅಭಿಪ್ರಾಯವೇ ವಿನಾ ಸನ್ಯಾಸಾಶ್ರಮವನ್ನು ವಹಿಸಿದಳೆಂಬ ಭಾವವಲ್ಲವು. ಉತ್ತಮವರ್ಣದಲ್ಲಿ ಉಪಾಸನವನ್ನಾರಂಭಿಸಿ, ಉಪಾಸನ ನಿಷ್ಪತ್ತಿಯಿಲ್ಲದೇ ಹೋಗಿ, ಇನ್ನೊಂದು ನಿಕೃಷ್ಟಜನ್ಮಪ್ರಾಪ್ತವಾದರೆ ಆಗ ಉಪಾಸನವನ್ನು ಪೂರ್ತಿಮಾಡಲು ಅಧಿಕಾರ ಉಂಟೋ ಎಂದರೆ ವಿದುರಾದಿಗಳಹಾಗೆ ಯೋಗಾಧಿಕಾರವು ಶಬರಿಗೆ ಇತ್ತೆಂದು ವ್ಯಾಖ್ಯಾತೃಗಳು ಅಭಿಪ್ರಾಯಪಟ್ಟಿರುತ್ತಾರೆ. ಶ್ರೀ ವಾಲ್ಮೀಕಿ ಮಹರ್ಷಿಯೂ ೭ಳನೆಯ ಸರ್ಗಾಂತ್ಯ ಶ್ಲೋಕದಲ್ಲಿ "ತತ್ಪುಣ್ಯಂ ಶಬರೀ ಸ್ಥಾನಂ ಜಗಾಮಾತ್ಮಸಮಾಧಿನಾ" ಎಂದು ಆತ್ಮ ಸಮಾಧಿ ಶಬ್ದವನ್ನು ಪ್ರಯೋಗಿಸಿರುತ್ತಾರೆ. ಸಮಾಧಿ ಶಬ್ದದಿಂದ ಅಷ್ಟಾಂಗ ಯೋಗವು ಹೇಳಲ್ಪಟ್ಟಿಲ್ಲವು; ಆಸನಾದಿಗಳಿಲ್ಲದೆ ತದೇಕಧ್ಯಾನವು ಹೇಳಲ್ಪಟ್ಟಿತು. ಆದರೆ ಅದಕ್ಕೆ ಅಂಗವಾಗಿ ಯಜ್ಞಾದಿ ಕರ್ಮಗಳ ಸ್ಥಾನದಲ್ಲಿ ತಮ್ಮ ಗುರುವಾದ ಮತಂಗಮಹರ್ಷಿಯ ಶುಶ್ರೂಷೆಯನ್ನಿಟ್ಟುಕೊಂಡಿದ್ದಳು. ಇಲ್ಲಿ ಹೇಳಿರುವ ಪುಣ್ಯಸ್ಥಾನವು ಪುನರಾವೃತ್ತಿ ರಹಿತವಾದ ಅಕ್ಷಯಲೋಕವಾದ ಪರಮಪದವೇ. ಶಬರೀ ವಿದುರಾದಿಗಳಿಗೆ ನಿರತಿಶಯವಾದ ಜ್ಞಾನದೀಪ್ತಿ ಇದ್ದುದರಿಂದ ಆತ್ಮ ಜ್ಞಾನ ಮೂಲಕ ಪರಮಾತ್ಮ ಧ್ಯಾನದಿಂದ ಮೋಕ್ಷವು ಲಭಿಸಿತು ಎಂಬ ತಾತ್ಪರ್ಯವು.

ಪ್ರಪತ್ತಿಗೆ ಸರ್ವಾಧಿಕಾರತ್ವವುಂಟು; ಅದಕ್ಕೆ ಬೇಕಾದ ಅಂಗವು ಆಕಿಂಚನ್ಯ ಮಾತ್ರವೇ.

ಇಪ್ಪಡಿ - ಮೇಲೆಹೇಳಿದ ರೀತಿಯಲ್ಲಿ, ಉಪಾಸನವು, ತ್ರೈವರ್ಣಿಕರ್ಕ್ಕೇ - ಬ್ರಾಹ್ಮಣ ಕ್ಷತ್ರಿಯ ವೈಶ್ಯರಿಗೇನೇ, ಆರಂಭಣೀಯ ಮಾನಾರ್ಪೋಲೇ ಆರಂಭಿಸಲು ಯೋಗ್ಯವಾದ ಹಾಗೆ, ಪ್ರಪತ್ತಿಯಲ್ಲಿ ಒರು ನಿಯಮಮುಕತ್ತಾಲೆ- ಒಂದು ನಿಬಂಧನೆಯ ಪ್ರಕಾರ, ಸಾಮಾನ್ಯ ವಚನತ್ತುಕ್ಕು - ಸಾಮಾನ್ಯ ಪ್ರಮಾಣವಾದ, "ಸರ್ವಸ್ಯ ಶರಣಂ ಸುಹೃತ್" ಎಂಬ ವಾಕ್ಯಕ್ಕೆ, ಸಂಕೋಚಮಿಲ್ಲಾಮೈಯಾಲುಮ್ - ಸಂಕೋಚವಿಲ್ಲದೇ ಇರುವದರಿಂದಲೂ, ವಿಶೇಷ

ತ್ತುಕ್ಕು ಸಂಕೋಚಮಿಲ್ಲಾಮ್ಮೈಯಾಲುಮ್, ವಿಶೇಷ ವಚನ ಪ್ರಾಬಲ್ಯ ತ್ತಾಲುಮಿ, ಪ್ರಪದನಂ ಸರ್ವೇಷ್ಕುಮ್ ಯೋಗ್ಯಮ್. ಆನ ಪಿನ್ಪು ಇದು ತನಕ್ಕು ವಿಶೇಷಿತ್ತುವೇಣ್ಡುಮಧಿಕಾರಾಂಶಮುಮ್ ಮುನ್ಪೇ ಶೊನ್ನೋಮ್.

ವಚನ ಬಲತ್ತಾಲುಮ್-ಸರ್ವರಿಗೂ ಅಧಿಕಾರ ಉಂಟೆಂದು ವಿಶೇಷಿಸಿ ಹೇಳಿರುವ ಪ್ರಮಾಣಗಳ ಬಲದಿಂದಲೂ, **ಪ್ರಪದನಂ ಸರ್ವರಕ್ಕು ಯೋಗ್ಯಮ್** - ಪ್ರಪದನವು ಎಲ್ಲರಿಗೂ ಯೋಗ್ಯವಾದುದು, ಎಂದರೆ ಪ್ರಪದನದಲ್ಲಿ ಸರ್ವರಿಗೂ ಅಧಿಕಾರ ಉಂಟೆಂಬ ಭಾವವು. ಭಕ್ತಿಮಾರ್ಗದಲ್ಲಿ ಎಂದರೆ ಉಪಾಸನದಲ್ಲಿ ಮಾತ್ರ ಸರ್ವರಿಗೂ ಅಧಿಕಾರವಿಲ್ಲವು. ತ್ರೈವರ್ಣಿಕರಿಗೆ ಮಾತ್ರ ಆರಂಭಮಾಡುವ ಅಧಿಕಾರವು; ಉಪಾಸನ ನಿಷ್ಪತ್ತಿಯು ನಿಕೃಷ್ಟಜನ್ಮದಲ್ಲೂ ಆಗಬಹುದು ಎಂಬ ತಾತ್ಪರ್ಯವು. ಹೀಗೆ ಪ್ರಪದನಕ್ಕೆ ಇಂತಹ ನಿರ್ಬಂಧವು ಯಾವುದೂ ಇಲ್ಲವು. ತ್ರೈವರ್ಣಿಕರಿಗೆ ಮಾತ್ರವೇ ಎಂದಾಗಲಿ, ಶೂದ್ರಾದಿಗಳಿಗೆ ಮಾತ್ರವೇ ಎಂದಾಗಲಿ, ಯಾವ ನಿರ್ಬಂಧವೂ ಇಲ್ಲವೆಂಬ ಭಾವವು. **ಆನಪಿನ್ಪು** - ಪ್ರಪದನವು ಸರ್ವಾಧಿಕಾರವುಳ್ಳದ್ದೆಂದಾದ ನಂತರ, **ಇದು ತನಕ್ಕು** - ಈ ಪ್ರಪದನಕ್ಕೆ, **ವಿಶೇಷಿತ್ತು ವೇಣ್ಡುಮ್ ಅಧಿಕಾರಾಂಶಮ್**-ಮುಖ್ಯವಾಗಿ ಬೇಕಾದ ಅಧಿಕಾರವನ್ನು ಎಂದರೆ ಅಜ್ಞಾವನ್ನು, **ಮುನ್ಪೇ ಶೊನ್ನೋಮ್**-ಹಿಂದೆ ಪ್ರಪತ್ತಿಯೋಗ್ಯಾಧಿಕಾರದಲ್ಲಿ ಆಕಿಂಚನ್ಯವೇ ಮುಖ್ಯಾಧಿಕಾರವೆಂದು ಹೇಳಿದೆವು. ಹಿಂದೆ ಪ್ರಪತ್ತಿಯೋಗ್ಯಾಧಿಕಾರದಲ್ಲಿ ಹೇಳಿರುವದು ಉಪಾಸನಕ್ಕೆ ಅರ್ಹತೆಯಿಲ್ಲದವರಿಗೆ ಪ್ರಪತ್ತ್ಯಧಿಕಾರವೆಂದು ತೋರಿಬರುವದರಿಂದಲೂ, ತ್ರೈವರ್ಣಿಕತ್ವವು ಉಪಾಸನಕ್ಕೆ ಅಧಿಕಾರವೆಂದು ಹೇಳಿರುವದರಿಂದಲೂ, ತ್ರೈವರ್ಣಿಕರಿಗೆ ಪ್ರಪತ್ತಿಯಲ್ಲಿ ಅಧಿಕಾರವಿಲ್ಲವೆಂದಾಗುತ್ತದೋ ಎಂಬ ಸಂದೇಹ ಉಂಟಾಗಬಹುದು. ಆಕಿಂಚನ್ಯವೂ ಮುಖ್ಯವೆಂದು ಹೇಳುವದರಿಂದ ಆಕಿಂಚನ್ಯವೂ ತ್ರೈವರ್ಣಿಕತ್ವವೂ ಇದ್ದುದಾದರೆ ಅಧಿಕಾರವೆಂದು ಊಹಿಸಿದರೆ, ಆಗ ಶೂದ್ರಾದಿಗಳಿಗೆ ಅಧಿಕಾರವಿಲ್ಲವಾಗುತ್ತದೆ. ಇದೂ ಅಲ್ಲದೆ ಸರ್ವರಿಗೂ ಅಧಿಕಾರ ಉಂಟೆಂದು ಹೇಳಿಬಿಟ್ಟರೆ, ಉಪಾಸನಾದಿಗಳಿಗೆ ಸಾಮರ್ಥ್ಯವೂ ವಿಳಂಬಾಸಹತ್ವಾದಿಗಳೂ ಇರುವ ಮೋಕ್ಷಾರ್ಥಿಗೂ ಅಧಿಕಾರ ಉಂಟೆಂದಾಗುತ್ತದೆ. ಇತ್ಯಾದಿ ಎಲ್ಲಾ ಶಂಕಾಗಳಿಗೂ ಸಮಾಧಾನಾರ್ಥವಾಗಿ ಒಂದು ಕಾರಿಕೆಯನ್ನು ಮುಂದೆ ಅನುಗ್ರಹಿಸುತ್ತಾರೆ—ತ್ರೈವರ್ಣಿಕನಾಗಲಿ ತ್ರೈವರ್ಣಿಕನಲ್ಲದೇಇರಲಿ, ಸರ್ವರಿಗೂ ಪ್ರಪತ್ತಿಯಲ್ಲಿ ಅಧಿಕಾರ ಉಂಟು;

ಕಾ. ಅತಸ್ತ್ರೈವರ್ಣಿಕೇ ತ್ವಾದೇ ಭಾರ್ಯಾವೋಽಭಾವೋಽಪಿ ಕಸ್ಯಚಿತ್ ।
ನಾಧಿಕಾರಃ ಪ್ರಪತ್ತೇಸ್ಸ್ಯಾದಾಕಿಂಚನ್ಯ ಮನಾಶ್ರಿತಃ ॥೩೬॥

ಹಾಗೆ ಅಧಿಕಾರಿಯಲು ಮುಖ್ಯವಾದ ಅಂಗವು, ಆಕಿಂಚನ್ಯವು; ಸಾಮರ್ಥ್ಯ ವಿಳಂಬಾ ಸಹತ್ವಾದಿಗಳಿರುವ ಭಕ್ತಿಯೋಗನಿಷ್ಠನು ಸಕಿಂಚನನಾಗಿ ಆಕಿಂಚನ್ಯ ವಿಲ್ಲದವನಾದುದರಿಂದ, ಆತನು ಪ್ರಪತ್ತಿಗೆ ಅಧಿಕಾರಿಯಲ್ಲವು, ಎಂಬೀ ಅರ್ಥ ಗರ್ಭಿತವಾದ ಕಾರಿಕೆಯನ್ನನುಗ್ರಹಿಸುತ್ತಾರೆ.

ಕಾ. ಅರ್ಥವು— ಅತಃ-ಹೀಗೆ ಮೇಲೆ ಉಪಪಾದಿಸಿದ ರೀತಿಯಲ್ಲಿ ಪ್ರಪತ್ತಿಗೆ ಸರ್ವಾಧಿಕಾರತ್ವವು ನಿರ್ಣಯಿಸಲ್ಪಟ್ಟಿರುವದರಿಂದ, ಅಥವಾ ಅಧಿಕಾರಕ್ಕೆ ಯಾವ ವಿಧ ಸಂಕೋಚವೂ ಇಲ್ಲದಿರುವದರಿಂದ, **ತ್ರೈವರ್ಣಿಕೇ ತ್ವಾದೇಃ** - ಬ್ರಹ್ಮ ಕ್ಷತ್ರಿಯ ವೈಶ್ಯಜಾತಿಯೇನು, ಆದಿಶಬ್ದದಿಂದ ಬ್ರಹ್ಮಚರ್ಯ ಗೃಹಸ್ಥವಾನ ಪ್ರಸ್ಥ ಸನ್ಯಾಸಾಶ್ರಮವೇನು, ಮತ್ತು ಸ್ತ್ರೀ ಪುರುಷನಾಗಿರುವದೇನು ಇವುಗಳ, **ಭಾವಃ**-ಸದ್ಭಾವಃ, ಇರೋಣವೂ, **ಅಭಾವೋಽಪಿ** – ಇಲ್ಲದಿರೋಣವೂ ಕೂಡ, **ಕಸ್ಯಚಿತ್** - ಯಾವ ಚೇತನಿಗೇ ಆಗಲಿ, **ಆಕಿಂಚನ್ಯ ಮನಾಶ್ರಿತಃ**-ಆಕಿಂಚನ್ಯವನ್ನು ಆವಲಂಬಿಸದೇ ಇರುವನಾಗಿ,ಎಂದರೆ ಆಕಿಂಚನ್ಯವಿಲ್ಲದುದಾದರೆ, **ಅಕಾರಣದಿಂದ, ಪ್ರಪತ್ತೇಃ** - ಪ್ರಪದನಕ್ಕೆ, **ಅಧಿಕಾರಃ ನಸ್ಯಾತ್**–ಅಧಿಕಾರವಾಗುವದಿಲ್ಲವು. ಬ್ರಾಹ್ಮಣಾದಿ ಯಾವಜಾತಿಯವನೇ ಆಗಲಿ, ಬ್ರಹ್ಮಚರ್ಯಾದಿ ಯಾವ ಆಶ್ರಮವನ್ನು ವಹಿಸಿದವನೇ ಆಗಲಿ, ಈ ಜಾತಿಯವನಾಗದೆ ಶೂದ್ರ ಪಂಚಮ ಯಾವ ಜಾತಿಯವನೇ ಆಗಲಿ, ಪುರುಷನೇ ಆಗಲಿ, ಸ್ತ್ರೀಯೇ ಆಗಲಿ, ಆಕಿಂಚನ್ಯವಿಲ್ಲದೇ ಹೋದರೆ ಅತನು ಪ್ರಪತ್ತಿಗೆ ಅಧಿಕಾರಿಯಾಗುವದಿಲ್ಲ ಎಂಬುದು ಈ ಶ್ಲೋಕಾರ್ಥವು. ಇದರಿಂದ ಆಕಿಂಚನ್ಯವಿದ್ದುದಾದರೆ ಸರ್ವರೂ ಅಧಿಕಾರಿಗಳೇ ಎಂಬ ಭಾವವು. ಭಕ್ತಿಯೋಗ ನಿಷ್ಠನು ಆಕಿಂಚನನಲ್ಲವಾದುದರಿಂದ ಪ್ರಪತ್ತಿಗೆ ಅಧಿಕಾರಿಯಲ್ಲವು. ಈ ಸಂದರ್ಭದಲ್ಲಿ,

ನ ಜಾತಿಭೇದಂ ನ ಕುಲಂ ನ ಲಿಙ್ಗಂ ನ ಗುಣ ಕ್ರಿಯಾಃ ।
ನ ದೇಶಕಾಲೌ ನಾವಸ್ಥಾಂ ಯೋಗೋಽಯ ಮಪೇಕ್ಷತೇ॥

ಎಂಬ ಶ್ಲೋಕವನುಸಂಧೇಯವು. ಪ್ರಪದನರೂಪವಾದ ಈ ಯೋಗವು ಜಾತಿ ಕುಲಗಳ ಉತ್ಕೃಷ್ಟತೆ ನಿಕೃಷ್ಟತೆಯನ್ನಾಗಲಿ ಸ್ತ್ರೀಪುರುಷ ಭೇದವನ್ನಾಗಲಿ ಗುಣಕ್ರಿಯೆಗಳ ಉತ್ತಮಾಧಮ ಸ್ಥಿತಿಯನ್ನಾಗಲಿ, ದೇಶಕಾಲಾವಸ್ಥೆಗಳ ಯೋಗ್ಯಾಯೋಗ್ಯತೆಗಳನ್ನಾಗಲಿ ಅಪೇಕ್ಷಿಸುವದಿಲ್ಲವು. ಇನ್ನು ಯಾವುದನ್ನು ಅಪೇಕ್ಷಿಸುತ್ತದೆ ಎಂದರೆ ಆಕಿಂಚನ್ಯವನ್ನು ಮಾತ್ರವೇ ಅಪೇಕ್ಷಿಸುತ್ತದೆ.

ಇವ್ವರ್ಥತ್ತೈ (೧) "ಕುಲಜ್ಞಳಾಯ ವೀರಿರಂಡಿ ಲೊನ್ರೆಲುಮ್ ಪಿರನ್ದಿಲೇ" ಎಜ್ಞರ ಪಾಟ್ಟಲುಮ್,(೨) "ಜನಿತ್ವಾಹಂ ವಂಶೇ" ಎಜ್ಞರ ಶ್ಲೋಕತ್ತಿಲುಮ್, ಕಣ್ಡುಕೊಳ್ವದು.

ಇವ್ವರ್ಥತ್ತೈ - ಈ ಅಭಿಪ್ರಾಯವನ್ನು ತಿರುಮಳಿಶೈಯಾಳ್ವಾರವರು ರಚಿಸಿದ ತಿರುಚ್ಚಂದವಿರುತ್ತದ (೧) "ಕುಲಜ್ಞಳಾಯ" ಎಂಬುವ ಪಾಶುರದಲ್ಲೂ (೨) "ಜನಿತ್ವಾಹಂ ವಂಶೇ" ಎನ್ನುವ ಯಾಮುನೇಯರ ಸ್ತೋತ್ರರತ್ನದ ಶ್ಲೋಕದಲ್ಲೂ, ಕಣ್ಡುಕೊಳ್ವದು - ತಿಳಿದುಕೊಳ್ಳತಕ್ಕದ್ದು. "ಕುಲಜ್ಞಳಾಯ" ಎಂಬ ಪೂರಾ ಪಾಶುರಕ್ಕೂ ಅದರ ಅರ್ಥಕ್ಕೂ ಉತ್ತರಕೃತ್ಯಾಧಿಕಾರದ ೧೩೧ನೆಯ ಪುಟವನ್ನು ನೋಡಿ. ಅಲ್ಲಿ ಆಕಿಂಚನ್ಯವು ಪ್ರದರ್ಶಿಸಿಸಲ್ಪಟ್ಟಿರುತ್ತದೆ. ಶ್ರೀ ಯಾಮುನೇಯರ ಶ್ಲೋಕವು ಯಾವುದೆಂದರೆ—

ಜನಿತ್ವಾಹಂ ವಂಶೇ ಮಹತಿ ಜಗತಿ ಖ್ಯಾತ ಯಶಸಾಂ ।
ಶುಚೀನಾಂ ಯುಕ್ತಾನಾಂ ಗುಣ ಪುರುಷ ತತ್ವ ಸ್ಥಿತಿವಿದಾಂ ॥
ನಿಸರ್ಗಾದೇವ ತ್ವಚ್ಚರಣ ಕಮಲೈಕಾಂತ ಮನಸಾಂ ।
ಅಧೋಧಃ ಪಾಪಾತ್ಮಾ ಶರಣದ ನಿಮಜ್ಜಾಮಿ ತಮಸಿ ॥೬೧॥

ಇದು ವಿಶೇಷವಾದ ಆಕಿಂಚನ್ಯವನ್ನು ಪ್ರದರ್ಶಿಸುವ ಶ್ಲೋಕವು. ಹೇ ಶರಣದ - ಅನನ್ಯಗತಿಕರಾಗಿಯೂ ಸಕಿಂಚನರಾಗಿರುವವರಿಗೆ ಅವರವರ ಅಧಿಕಾರಾನುಗುಣವಾಗಿ ಮೋಕ್ಷೋಪಾಯವನ್ನು ದಯಪಾಲಿಸುವವನೇ, ಜಗತಿ-ಈ ಲೋಕದಲ್ಲಿ, ಖ್ಯಾತ ಯಶಸಾಂ-ಅಗಮೋತ್ಥ ಜ್ಞಾನವುಳ್ಳವರೆಂದು ಪ್ರಸಿದ್ಧಿಯನ್ನು ಹೊಂದಿದ, ಶುಚೀನಾಂ – ಅಂತರಿಂದ್ರಿಯ ಬಾಹ್ಯೇಂದ್ರಿಯಗಳ ಪಾರಿಶುದ್ಧ್ಯವನ್ನು ಹೊಂದಿದ, ಬರೀ ಜಲದಿಂದ ಶುದ್ಧಿ ಹೊಂದಿದವರೆಂಬರ್ಥವಲ್ಲವು, ಅಥವಾ ಕರ್ಮಯೋಗದಿಂದ ಪಾಪಗಳನ್ನು ಕಳೆದುಕೊಂಡು ಪರಿಶುದ್ಧರಾದ, ಯುಕ್ತಾನಾಮ್-ಆತ್ಮಾವಲೋಕನಕ್ಕೆ ಯೋಗ್ಯರಾದ, ಎಂದರೆ ಜ್ಞಾನಯೋಗನಿರತರಾದ ಅಥವಾ ನಿನ್ನ ಅನುಭವದ ವಿಶ್ಲೇಷವಿಲ್ಲದಿರುವ, ಗುಣಪುರುಷ ತತ್ವಸ್ಥಿತಿವಿದಾಂ - ಪ್ರಕೃತಿಪುರುಷ ಇವುಗಳ ಸ್ವರೂಪ ಯಾಥಾತ್ಮ್ಯವನ್ನು ಚನ್ನಾಗಿ ತಿಳಿದಿರುವ, ನಿಸರ್ಗಾದೇವ - ಸ್ವಾಭಾವಿಕವಾಗಿಯೇ, ತ್ವಚ್ಚರಣ ಕಮಲೈಕಾಂತ ಮನಸಾಂ-ನಿನ್ನ (ಸರ್ವೇಶ್ವರನ) ಚರಣಕಮಲದಲ್ಲೊಂದರಲ್ಲೇ ಸಕ್ತವಾದ ಮನಸ್ಸುಳ್ಳ, ಹೀಗೆ ಭಕ್ತಿಯೋಗ ನಿಷ್ಠರ, ಮಹತಿ ವಂಶೇ – ಘನವಾದ ವಂಶದಲ್ಲಿ

---

(೧) ತಿರುಚ್ಚಂದವಿರುತ್ತಂ. ೯೦. (೨) ಆಳ. ಸ್ತೋ. ೬೧,

ಆಗೈಯೊಲ್ ಶರಣ್ಯ ಶರಣಾಗತಿ ಜ್ಞಾನಮುಮ್, ಆಕಿಂಚನ್ಯಾದಿಗಳು ಮುಡೈಯ ಸರ್ವಜಾತಿಯರ್ಕ್ಕುಮ್ ಪ್ರಪತ್ತ್ಯಧಿಕಾರಮ್ ಸಿದ್ಧಮ್.

ಅಹಂ – ದುರ್ಭಗನಾದ ನಾನೊಬ್ಬ ಮಾತ್ರ, **ಜಾತ್ವಾ** - ಹುಟ್ಟಿ, **ಪಾಪಾತ್ಮಾ** - ಪಾಪಗಳಲ್ಲೇ ಬುದ್ಧಿಯುಳ್ಳವನಾಗಿ, ಅಥವಾ ಪಾಪವೇ ಸ್ವರೂಪ ಸ್ವಭಾವಗಳಾಗಿ ಉಳ್ಳವನಾಗಿ, **ತಮಸಿ** - ಅಜ್ಞಾನ ವಿಪರೀತಜ್ಞಾನರೂಪ ಸಮುದ್ರದಲ್ಲಿ, **ಅಧೋಧಃ** - ಕೆಳಕೆಳಗೆ ಹೋಗುತ್ತಾ, **ನಿಮಜ್ಜಾಮಿ** - ಮುಳುಗಿರುವೆನು, ಇಂತಹ ಮಹಾಜ್ಞಾನನಿಧಿಗಳ ವಂಶದಲ್ಲಿ ಹುಟ್ಟಿರುವಾಗಲೇ ಉಪಾಯಾವಲಂಬನವನ್ನು ಮಾಡಿ ಈ ಜ್ಞಾನ ಸಾಗರವನ್ನು ದಾಟದೇ ಆ ಸಮುದ್ರದಲ್ಲೇ ಮುಳುಗಿರುತ್ತೇನೆ; ಹೀಗೆ ಯಾವುದೊಂದೂ ಗತಿಯಿಲ್ಲವೆ ಆಕಿಂಚನನಾದ ನನಗೆ, ಹೇ ಶರಣದ ನೀನೇ ಪರಮಕೃಪಯಾ ಒಂದುಪಾಯವನ್ನು ತೋರಿ ಸಿದ್ಧೋಪಾಯನಾಗಿ ಈ ಸಮುದ್ರದಲ್ಲಿ ಮುಳುಗಿರುವ ನನ್ನನ್ನು ಕೃಪಯಾ ಕೈಹಿಡಿದು ಎತ್ತತಕ್ಕದ್ದೆಂದು ತಮ್ಮ ಆಕಿಂಚನ್ಯವನ್ನು ಪ್ರದರ್ಶಿಸಿರುತ್ತಾರೆ. ಮುಂದಿನ ಶ್ಲೋಕವಾದ **"ಅಮರ್ಯಾದಃ"** ಎಂಬಲ್ಲೂ ಕೂಡ ಆಕಿಂಚನ್ಯವೇ ಹೇಳಲ್ಪಟ್ಟಿರುತ್ತದೆ. **"ಶರಣದ"** ಎಂದು ಸಂಬೋಧನೆಯಿರುವದರಿಂದ ಸರ್ವಾಧಿಕಾರತ್ವವೂ ಸೂಚಿತವು. ಆಕಿಂಚನ್ಯಮಾತ್ರ ಅವಶ್ಯಕವೆಂಬ ಭಾವವು. ಮಹಾಕುಲ ಪ್ರಸೂತತ್ವವೂ ಕೂಡ ಕಾರ್ಯಕಾರಿಯಾಗುವದಿಲ್ಲವೆಂಬ ಭಾವವು. ಉಪಾಸನಾದಿಗಳಿಗೆ ತಾನು ಅಶಕ್ತನೆಂಬ ಆಕಿಂಚನ್ಯಮಾತ್ರವೇ ಅಧಿಕಾರವೆಂದು ತಾವು ಇಷ್ಟುದೂರ ಉಪಪಾದಿಸಿದ ಅಭಿಪ್ರಾಯವನ್ನೇ ನಿಗಮನಮಾಡಿ ಹೇಳುತ್ತಾರೆ—

ಆಗೈಯೊಲ್ – ಹೀಗೆ **ತ್ರೈವರ್ಣಿಕತ್ವ ಆತ್ರೈವರ್ಣಿಕತ್ವಾದಿಗಳು** ಯಾವುದೂ ಪ್ರಪತ್ತಿಗೆ ಅಧಿಕಾರವಿಲ್ಲದುದರಿಂದ, **ಶರಣ್ಯ ಶರಣಾಗತಿ ಜ್ಞಾನಮುಮ್** - ಸರ್ವರಿಗೂ ಉಪಾಯಭೂತನಾಗಿರುವ ಸರ್ವೇಶ್ವರನಲ್ಲಿ ಮಾಡುವ ಶರಣಾಗತಿಯ ಜ್ಞಾನವನ್ನೂ, **ಆಕಿಂಚನ್ಯಾದಿಗಳುಮ್** - ಆಕಿಂಚನ್ಯವೇ ಮೊದಲಾದವುಗಳನ್ನೂ, **ಉಡೈಯ** - ಹೊಂದಿರುವ, **ಸರ್ವಜಾತಿಯರ್ಕ್ಕುಮ್**-ಪಂಚಮಾದಿ ಸಮಸ್ತ ಜಾತಿಯವರಿಗೂ, **ಪ್ರಪತ್ತಿಯಲ್ಲಿ ಅಧಿಕಾರವು, ಸಿದ್ಧಮ್** - ಸ್ಥಾಪಿತವು. ಈ ನಿಗಮನ ವಾಕ್ಯದಲ್ಲಿ ಸಮಸ್ತ ಜಾತಿಯವರಿಗೂ ಅಧಿಕಾರವೆಂದು ಸರ್ವಾಧಿಕಾರವನ್ನು ಸ್ಥಾಪಿಸಿದರೂ, ಅಂಗಾಂಗಿ ಸಮೇತ ಶರಣಾಗತಿಯನ್ನು ಶರಣ್ಯನಲ್ಲಿ ಅನುಷ್ಠಿಸಿದರೇನೇ ಪ್ರಪತ್ತಿಪೂರ್ಣವಾಗುತ್ತೆಯೇ ವಿನಾ, ಪ್ರಧಾನಾಜ್ಞವಾದ ಆಕಿಂಚನ್ಯ ಒಂದು ಮಾತ್ರವಿದ್ದುಬಿಟ್ಟರೆ ಶರಣಾಗತಿಯಾಗುವದಿಲ್ಲ

ಅಥ ಪ್ರಪತ್ತಿ ಸ್ವರೂಪ ಶಙ್ಕಾ ಪರಿಹಾರಃ

ಇವ್ವುಪಾಯ ಸ್ವರೂಪತ್ತೈ ಪತ್ತೆ "ನಾರಾಯಣಂ ಸಲಕ್ಷ್ಮೀಕಂ ಪ್ರಾಪ್ತುಂ ತಚ್ಚರಣದ್ವಯವಮ್। ಉಪಾಯ ಇತಿ ವಿಶ್ವಾಸೋ ದ್ವಯಾರ್ಥ ಶರಣಾಗತಿಃ" ॥ ಎಜ್ಞರಭಿಯುಕ್ತರ್ ಪಾಶುರವುಮ್, ಅಧಿಕಾರ ಕೋಟಿಯಿಲುಮ್ ಅಜ್ಞ ಕೋಟಿಯಲುಮ್ ನಿಶ್ಚಿರ ವಿಶ್ವಾಸತ್ತಿ ನುಡೈಯ ಪ್ರಾಧಾನ್ಯಮ್ ಶೊಲ್ಲುಗೈಕ್ಕಾಗವತ್ತೈ.

ವೆಂಬಭಿಪ್ರಾಯವನ್ನು ಸೂಚಿಸುವದಕ್ಕಾಗಿ "ಶರಣ್ಯ ಶರಣಾಗತಿ ಜ್ಞಾನ ಮುಮ್" ಎಂಬ ಪ್ರಯೋಗವು.

ಹೀಗೆ ಪ್ರಪತ್ತ್ಯಧಿಕಾರದ ಸ್ವರೂಪವ್ಯವಸ್ಥೆಯನ್ನು ಮಾಡಿ, ಮುಂದೆ ಪ್ರಪತ್ತಿಸ್ವರೂಪವಾದ ಅಂಗಿಯಲ್ಲುಂಟಾಗುವ ಶಂಕಾಗಳನ್ನು ಪರಿಹರಿಸುತ್ತಾರೆ

ಪ್ರಪತ್ತಿ ಸ್ವರೂಪದಲ್ಲಿ ಉಂಟಾಗುವ ಶಙ್ಕಾಗಳನ್ನು ಪರಿಹರಿಸುತ್ತಾರೆ.

ಸರ್ವೇಶ್ವರನು ನಮ್ಮನ್ನು ರಕ್ಷಿಸಿಯೇ ರಕ್ಷಿಸುವನೆಂಬ ಮಹಾ ವಿಶ್ವಾಸವೇ, ಶರಣಾಗತಿಯೇ, ಅಥವಾ ಆತನ ಚರಣದ್ವಂದವೇ ನಮಗೆ ಸರ್ವವಿಧದಲ್ಲೂ ತಾರಕವೆಂಬ ಮಹಾ ವಿಶ್ವಾಸವೇ ಶರಣಾಗತಿಯೇ ಎಂಬ ಅಭಿಪ್ರಾಯವನ್ನು ಸರಿಯಾಗಿ ತಿಳಿದುಕೊಳ್ಳದೇ ಮಹಾ ವಿಶ್ವಾಸವಾದ ಆಜ್ಞವನ್ನು ಅಜ್ಞಾನದ ಶರಣಾಗತಿಯೆಂದು ಕೆಲವರು ಭಾವಿಸುವರು. ಇದು ಸರಿಯಾದ ಅಭಿಪ್ರಾಯವಲ್ಲವೆಂದೂ, ಮಹಾ ವಿಶ್ವಾಸವೇ ಶರಣಾಗತಿಯೆಂದು ಹೇಳಿದುದರ ಸರಿಯಾದಭಿಪ್ರಾಯವೇನೆಂಬುದನ್ನೂ ತಿಳಿಸುತ್ತಾರೆ.

ಇವ್ವುಪಾಯಸ್ವರೂಪತ್ತೈ - ಈ ಪ್ರಪದನವೆಂಬ ಉಪಾಯದ ಸ್ವರೂಪವನ್ನು ಕುರಿತ, ಇದು ಅಭಿಯುಕ್ತರ್ ಪಾಶುರಮುಮ್ ಎಂಬುದರೊಂದಿಗೆ ಅನ್ವಯವು, (೧) "ಸಲಕ್ಷ್ಮೀಕಂ-ಲಕ್ಷ್ಮಿಯೊಂದಿಗೆ ಸದಾ ಇರುವ, ನಾರಾಯಣನನ್ನು, ಪ್ರಾಪ್ತುಂ-ಹೊಂದಲು, ತಚ್ಚರಣದ್ವಯವಮ್-ಆ ಲಕ್ಷ್ಮೀನಾರಾಯಣರ ಪಾದದ್ವಂದವು, ಉಪಾಯ ಇತಿವಿಶ್ವಾಸಃ-ಉಪಾಯವೆಂಬದಾಗಿ ಅದರಲ್ಲಿ ಮಹಾ ವಿಶ್ವಾಸವು, ಎಂಬುದು ದ್ವಯಾರ್ಥಶರಣಾಗತಿಃ-ದ್ವಯಮಂತ್ರದ ಅರ್ಥವಾದ "ಶರಣಾಗತಿಯು", ಎನ್ನು - ಎಂಬದಾಗಿ, ಅಭಿಯುಕ್ತರ್ ಪಾಶುರಮುಮ್-ಮಹಾಪೂಜ್ಯರ ಶ್ಲೋಕವು, ಅಧಿಕಾರ ಕೋಟಿಯಲ್ಲೂ, ಅಜ್ಞಕೋಟಿಯಲ್ಲೂ,

ವಿಶ್ವಾಸಪ್ರಾರ್ಥನೇ ಅಙ್ಗೀ, ನತು ಅಙ್ಗಿನೀ

ಅಪ್ಪದಿಯೇ (೧) "ಪ್ರಪತ್ತಿ ರ್ವಿಶ್ವಾಸ ಸ್ಸಕೃತ್ಪಾರ್ಥನಾ ಮಾತ್ರೇಣಾ ಪೇಕ್ಷಿತಂ ದಾಸ್ಯತೀತಿ ವಿಶ್ವಾಸಪೂರ್ವಕಂ ಪ್ರಾರ್ಥನ ಮಿತಿಯಾವತ್" ಎಙ್ಗಿರವಾಕ್ಯಮುಮ್ ಪ್ರಾಧಾನ್ಯವಿವಕ್ಷೈಯಾಲೇ ಮುದಲ್ ವಿಶ್ವಾಸ

ನಿರ್ಕ್ಕಿರ - ಇರುವ, ಮಹಾ ವಿಶ್ವಾಸದ, ಪ್ರಾಧಾನ್ಯಮ್ - ಪ್ರಾಮುಖ್ಯತೆಯನ್ನು, ಶೊಲ್ಲುಗೈಕ್ಕಾಕ ವತ್ತನ್ಯೈ - ಹೇಳುವದಕ್ಕಾಗಿ ಮಾತ್ರವೇ. ಮಹಾ ವಿಶ್ವಾಸವೇ ದ್ವಯಾರ್ಥವಾದ ಶರಣಾಗತಿಯೆಂದರೆ ಮಹಾವಿಶ್ವಾಸವೇ ಅಙ್ಗಿಯಾದ ಶರಣಾಗತಿಯೆಂದು ಹೇಳಿದಂತಾಯಿತು. ಮಹಾವಿಶ್ವಾಸವು ಶರಣಾಗತಿಗೆ ಒಂದು ಮುಖ್ಯವಾದ ಅಙ್ಗವೆಂದು ಹಿಂದೆ ಪರಿಕರವಿಭಾಗಾಧಿಕಾರದಲ್ಲಿ ಹೇಳಲ್ಪಟ್ಟಿರುತ್ತದೆ ಈ ಮಹಾ ವಿಶ್ವಾಸವು ಅಧಿಕಾರಿ ಎಂದೆನಿಸಿಕೊಳ್ಳುವದಕ್ಕೂ ಬೇಕು, ಮತ್ತು ಅಙ್ಗಗಳಲ್ಲಿ ಒಂದು ಪ್ರಧಾನವಾದ ಅಙ್ಗವಾಗಿಯೂ ಬೇಕು, ಹೀಗಿರುವದರಿಂದ ಅದರ ಪ್ರಾಮುಖ್ಯತೆಯನ್ನು ಮನಸ್ಸಿನಲ್ಲಿಟ್ಟು ವಿಶ್ವಾಸವೇ ಶರಣಾಗತಿ ಎಂದು ಹೇಳಿಬಿಟ್ಟರೇ ವಿನಾ, ಪ್ರಪದನಕ್ಕೆ ಅಙ್ಗವಾದ ಮಹಾ ವಿಶ್ವಾಸವನ್ನೇ, ಅಙ್ಗಿಯೆಂಬಭಿಪ್ರಾಯದಿಂದಲ್ಲವೆಂಬ ತಾತ್ಪರ್ಯವು ತಮ್ಮ ಅಭಿಪ್ರಾಯ ಸಮರ್ಥನೆಗಾಗಿ ಶ್ರೀ ಭಾಷ್ಯಕಾರರೂ, ಪ್ರಪತ್ತಿಯೇ ಮಹಾವಿಶ್ವಾಸವೆಂದು ಹೇಳಿ, ಅದರ ತಾತ್ಪರ್ಯವು ವಿಶ್ವಾಸಪೂರ್ವಕಪ್ರಾರ್ಥನಾ ಎಂದು ವಿವರಿಸಿ, ಇದೇ ಪ್ರಪದನವೆಂದು ಉಪದೇಶಿಸಿರುತ್ತಾರೆ. ಶ್ರೀ ಭಾಷ್ಯಕಾರರ ಶಿಷ್ಯರು ಒಂದಾನೊಂದುಕಾಲದಲ್ಲಿ ಪ್ರಪತ್ತಿಯ ಸ್ವರೂಪವೆಂತಾದ್ದೆಂದು ಪ್ರಶ್ನಿಸಲು, ಆಗ ಅವರು ಅಪ್ಪಣೆ ಕೊಡಿಸಿದ ಮುಕ್ತಕ ವಾಕ್ಯವನ್ನು ಉದಾಹರಿಸುತ್ತಾರೆ—

ವಿಶ್ವಾಸ ಪ್ರಾರ್ಥನೆಗಳು ಅಂಗಗಳು, ಅಙ್ಗಿಯಾಗಲಾರವು.

ಅಪ್ಪದಿಯೇ - ಮೇಲೆ ಉಪಪಾದಿಸಿದ ಹಾಗೆಯೇ "ಪ್ರಪತ್ತಿಃ- ಪ್ರಪತ್ತಿ ಎಂಬುದು, ವಿಶ್ವಾಸಃ - ವಿಶ್ವಾಸವು, ಸಕೃತ್ಪ್ರಾರ್ಥನಾ ಮಾತ್ರೇಣ - ಒಂದು ಸಲ ಪ್ರಾರ್ಥಿಸುವ ಮಾತ್ರದಿಂದ, ಅಪೇಕ್ಷಿತಂ – ಕೋರಿದ ಫಲವನ್ನು, ದಾಸ್ಯತೀತಿ - ಸರ್ವೇಶ್ವರನು ಕೊಡುವನೆಂದು ವಿಶ್ವಾಸ ಪೂರ್ವಕವಾಗಿ, ಪ್ರಾರ್ಥನ ಮಿತಿ ಯಾವತ್ - ಪ್ರಾರ್ಥಿಸೋಣ ಯಾವುದೋ ಅದು," ಎಙ್ಗಿರ ವಾಕ್ಯಮುಮ್ - ಎನ್ನುವ ವಾಕ್ಯವೂ, ಪ್ರಾಧಾನ್ಯ ವಿವಕ್ಷೈಯಾಲೇ - ಪ್ರಾಮುಖ್ಯತೆಯನ್ನು ಹೇಳಬೇಕೆಂಬ ಇಚ್ಛೆಯಿಂದ, ಮುದಲ್ ವಿಶ್ವಾಸತ್ತೈ ಚ್ಚೊಲ್ಲಿ

---

(೧) ಶ್ರೀ ಭಾಷ್ಯಕಾರರ ಸೂಕ್ತಿ.

ತ್ತೈ ಚೆನ್ಬಲ್ಲಿ, "ಅನನ್ಯ ಸಾಧ್ಯೇ" ಎಜ್ಞಾರ ಭರತಮುನಿ ಪ್ರಣೀತ ಲಕ್ಷಣ ವಾಕ್ಯತ್ತಿನ್ಪಡಿಯೇ ವಿಶ್ವಾಸಪೂರ್ವಕಂ ಪ್ರಾರ್ಥನೆನ್ನು ನಿಷ್ಕರ್ಷಿತ್ತದು.

ಮೊದಲು ಪ್ರಪದನವೇ ವಿಶ್ವಾಸವೆಂದು ಹೇಳಿ, "ಅನನ್ಯ ಸಾಧ್ಯೇ" ಎಜ್ಞಾರ ಭರತನ್ಮುನಿ ಪ್ರಣೀತ - ಎಂದು ಭರತಮುನಿಯಿಂದ ರಚಿಸಲ್ಪಟ್ಟ, ಲಕ್ಷಣ ವಾಕ್ಯತ್ತಿ ಪಡಿಯೇ - ಪ್ರಮತ್ತಿಗೆ ತೇಳುವ ಲಕ್ಷಣ ವಾಕ್ಯದಹಾಗೆ, ವಿಶ್ವಾಸ ಪೂರ್ವಕವಾದ, ಪ್ರಾರ್ಥನ ಮೆನ್ನು - ಪ್ರಾರ್ಥನೆಯೆಂದು, ನಿಷ್ಕರ್ಷಿತ್ತದು - ನಿಷ್ಕರ್ಷಿಸಲ್ಪಟ್ಟದುದು ಪ್ರಪತ್ತಿ ಎಂಧಾದ್ದು ಎಂದರೆ ಶ್ರೀ ಭಾಷ್ಯಕಾರರೂ ಮಹಾ ವಿಶ್ವಾಸನೇ ಎಂದು ಪ್ರಥಮತಃ ತೇಳಿ, ವಿಶ್ವಾಸವು ಪ್ರಪತ್ತಿಗೆ ಅಂಗವಾಗಿರುವಾಗ ಅದೇ ಅಂಗಿರೂಪ ಶರಣಾಗತಿಯಾವೀತೆಂಬ ಪೂರ್ವಪಕ್ಷ ಬಂದೀತೆಂದು, ಮಹಾವಿಶ್ವಾಸದಿಂದ ತನ್ನ ಪುರುಷಾರ್ಥವು ಯಾವುದೋ ಅದನ್ನು ಪ್ರಾರ್ಥಿಸುವದು ಎಂದು ತನ್ಮತ ವಾಕ್ಯಾಭಿಸ್ರಾಯವನ್ನು ಭರತಮುನಿಯ ಲಕ್ಷಣ ವಾಕ್ಯವನ್ನು ಸಾರವಾಗಿ ಹೇಳಿದರು. ಹಾಗೆ ಹೇಳಲು ಕಾರಣವೇನೆಂದರೆ ಆ ಮಹಾ ವಿಶ್ವಾಸಾಂಗದ ಪ್ರಾಧಾನ್ಯತೆಯನ್ನು ಸನುರ್ಧಿಸಿ ಹೇಳುವದಕ್ಕಾಗಿ ಎಂಬ ಭಾವವು. ಭರತ ಮುನಿಯ ವಾಕ್ಯವು ಯಾವುದೆಂದರೆ .—

ಅನನ್ಯ ಸಾಧ್ಯೇ ಸ್ವಾಭೀಷ್ಟೇ ಮಹಾ ವಿಶ್ವಾಸಪೂರ್ವಕಂ ।
ತದೇಕೋಪಾಯತಾ ಯಾಚ್ಞಾ ಪ್ರಪತ್ತಿಶ್ಶರಣಾಗತಿಃ॥

ಇದರರ್ಥಕ್ಕೆ ಸಾಂಗಪ್ರಪದನಾಧಿಕಾರದ ಗಂಭೀರತೆಯ ಪುಟವನ್ನು ಪರಾಂಬರಿಸಿ. ಭರತ ಮುನಿಗಳು ವಿಶ್ವಾಸಪೂರ್ವಕವಾಗಿ ಭಗವಂತನೇ ಮುಖ್ಯ ಸಿದ್ಧೋಪಾಯನೆಂದು ತಿಳಿದು ಸ್ವಾಭೀಷ್ಟವನ್ನು ಸಕೃತ್ ತಿಳಿಸಿ ರಕ್ಷಾಪೇಕ್ಷೆಯನ್ನು ಪ್ರಾರ್ಥಿಸುವದೇ ಪ್ರಪತ್ತಿ ಎಂದು ಹೇಳಿರುವ ಹಾಗೆ ಶ್ರೀ ಭಾಷ್ಯಕಾರರೂ **"ಪ್ರಾರ್ಥನಾಮಿತಿಯಾವತ್"** ಎಂದು ಹೇಳಿದರು. ಇಲ್ಲಿ ಪ್ರಾರ್ಥನೆಯು ಕೂಡ **ಗೋಪ್ತೃತ್ವ ವರಣ**ರೂಪವಾದ ಅಜ್ಞವು. ಅದು ತಾನೇ ಪ್ರಪತ್ತಿ ಹೇಗಾವೀತು ಎಂಬುದಕ್ಕೆ ಸಮಾಧಾನವಾಗಿ, **ಯಾಚ್ಞಾ ಪ್ರಪತ್ತಿಃ** - ಎಂಬುದರಭಿಸ್ರಾಯವು, **"ಭರನ್ಯಾಸಂ ಯಾಚ್ಞಾನ್ವಿತ ಮಭಿನದನ್ತಿ ಪ್ರಪದನಂ"** ತನಗೆ ಅಪೇಕ್ಷಿತವಾದುದರ ಸರ್ವ ಭರವನ್ನು ಸರ್ವೇಶ್ವರನಲ್ಲಿಡುವದೇ ಪ್ರಪದನವೆಂದು ಹೇಳುತ್ತಾರೆ ಎಂಬುದೆಂದು ಶ್ರೀ ದೇಶಿಕರವರೇ ಸಾಂಗಪ್ರಪದನಾಧಿಕಾರದಲ್ಲಿ ವ್ಯಾಖ್ಯಾನಮಾಡಿರುತ್ತಾರೆ. ಈ ಅಭಿಪ್ರಾಯವನ್ನೇ ಮುಂದಿನ ವಾಕ್ಯದ ಮೂಲಕ ತಿಳಿಸುತ್ತಾರೆ.

ಇವ್ಯಾಕ್ಯೆನ್ತಾನುಮ್, ಆತ್ಮನಿಕ್ಷೇಪ ಮಜ್ಞ ಇತರಜ್ಞಳ್ ಅಜ್ಞಜ್ಞ ಳೆನ್ಬ ಶೊಲ್ಲುಗಿರ (೧) "ನ್ಯಾಸಃ ಪಂಚಾಂಗ ಸಂಯುತಃ" ಇತ್ಯಾದಿ ವಚನ ಜ್ಞಳಾಲೆ ಪ್ರಾರ್ಥನೈಯುಮ್ ಅಜ್ಞಮಾಗೈಯಾಲ್ (೨) "ರಕ್ಷಾಪೇಕ್ಷಾಂ ಪ್ರತೀಕ್ಷತೇ" ಎಜ್ಞ ರಪಡಿಯೇ ಈಶ್ವರ ಅಪೇಕ್ಷಾಮಾತ್ರಸಾಪೇಕ್ಷ ನೆನ್ರಿವ್ವಜ್ಞತ್ತಿ ಪ್ರಾಧಾನ್ಯತ್ತೈ ವಿವಕ್ಷಿತ್ತು ಚ್ಚೊನ್ನಪಡಿ.

ಮಹಾ ವಿಶ್ವಾಸವೂ ಅಜ್ಞವು, ಮತ್ತು ಯಾಚನೆಯೂ ಗೋಪ್ತೃತ್ವವರಣರೂಪ ಅಜ್ಞವು; ಇವೆರಡೂ ಅಜ್ಞಿಯಾವ ಪ್ರಪತ್ತಿಯಾಗಲಾರವು. ಭರತಮುನಿ ಮತ್ತು ಶ್ರೀ ಭಾಷ್ಯಕಾರರುಗಳು ವಿಶ್ವಾಸ ಪೂರ್ವಕ ಯಾಚನೆಯೇ ಪ್ರಪತ್ತಿ ಎಂದು ಹೇಳಿದುದರಭಿಪ್ರಾಯವು, ಮಹಾ ವಿಶ್ವಾಸವೂ ಗೋಪ್ತೃತ್ವವರಣವೂ ಎರಡೂ ಮುಖ್ಯವಾದ ಅಜ್ಞಗಳೆಂದು ತಿಳಿಸುವದರಲ್ಲಿ ತಾತ್ಪರ್ಯವು. ಹಾಗಾದರೆ ಶ್ರೀ ಭಾಷ್ಯಕಾರರು "ವಿಶ್ವಾಸಪೂರ್ವಕಂ ಪ್ರಾರ್ಥನಮಿತಿ ಯಾವತ್" ಎಂದು ಪ್ರಪತ್ತಿಗೆ ಹೇಗೆ ಲಕ್ಷಣವನ್ನು ಹೇಳಿದರು ಎಂಬಾಕ್ಷೇಪಕ್ಕೆ ಮುಂದೆ ಸಮಾಧಾನವನ್ನೂ ಹೇಳುತ್ತಾರೆ.

ಇವ್ಯಾಕ್ಯೆನ್ತಾನುಮ್-"ಪ್ರಪತ್ತಿರ್ವಿಶ್ವಾಸಃ" ಎಂದಾರಂಭಿಸಿ "ಪ್ರಾರ್ಥನಮಿತಿ ಯಾವತ್" ಎಂದು ಮುಗಿಸಿ ಹೇಳಿರುವ ಶ್ರೀ ಭಾಷ್ಯಕಾರರ ವಾಕ್ಯವೂ ಕೂಡ ಆತ್ಮನಿಕ್ಷೇಪವು ಅಜ್ಞಿ, ಇತರಂಗಳ್ - ಎಂದರೆ ವಿಶ್ವಾಸ ಪ್ರಾರ್ಥನಾ ಮೊದಲಾದವು, ಅಜ್ಞಿಜ್ಞಳೆನ್ಬ ಶೊಲ್ಲುಗಿರ ಅಜ್ಞಿಗಳೆಂದು ಹೇಳುವ, "ನ್ಯಾಸಃ ಪಂಚಾಂಗ ಸಂಯುತಃ ಎಂದರೆ ಆತ್ಮನಿಕ್ಷೇಪವೆಂದು ಹೇಳಿಸಿಕೊಳ್ಳುವ ಭರ ನ್ಯಾಸವೆಂಬ ಅಜ್ಞಿಯು ಐದು ಅಂಗಗಳಿಂದ ಕೂಡಿದುದು" ಇತ್ಯಾದಿ ವಚನಜ್ಞ ಳಾಲೇ - ಇವೇ ಮೊಲಾದ ಪ್ರಮಾಣಗಳಿಂದ, ಪ್ರಾರ್ಥನೆಯುಮ್ ಅಜ್ಞಮಾ ಗಿಲ್-ಪ್ರಾರ್ಥನೆಯೂ ಗೋಪ್ತೃತ್ವ ವರಣರೂಪ ಅಜ್ಞವಾದುದರಿಂದ, "ರಕ್ಷಾ ಪೇಕ್ಷಾಂ ಪ್ರತೀಕ್ಷತೇ" - "ಪ್ರಪತ್ತಿಯು ಭಗವಂತನ ರಕ್ಷೆಯ ಅಪೇಕ್ಷೆಯನ್ನು ಎದುರು ನೋಡುತ್ತದೆ" ಎಜ್ಞರಪಡಿಯೇ-ಎಂದು ಹೇಳಿರುವಹಾಗೆ, ಈಶ್ವರ- ಸರ್ವೇಶ್ವರನು, ಅಪೇಕ್ಷಾಮಾತ್ರ ಸಾಪೇಕ್ಷ - ತನ್ನ ಮನೋರಥವು ಯಾವು ದೆಂದು ಮಾತ್ರ ತಿಳಿಯಲು ಅಪೇಕ್ಷೆಯುಳ್ಳವನು, ಎನ್ರಿವ್ವಜ್ಞತ್ತಿ - ಎಂಬ ದಾಗಿ ಈ ಗೋಪ್ತೃತ್ವ ವರಣರೂಪ ಅಜ್ಞಿದ, ಪ್ರಾಧಾನ್ಯವನ್ನು, ವಿವಕ್ಷಿತ್ತು ಚ್ಚೊನ್ನಪಡಿ - ಚನ್ನಾಗಿ ತಿಳಿಸಬೇಕೆಂಬಭಿಲಾಷೆಯಿಂದ ಹೇಳಲ್ಪಟ್ಟಿತೆಂದು

---

(೧) ಲಕ್ಷ್ಮೀ ತಂತ್ರ ೧೭ ೭೪. (೨) ಲಕ್ಷ್ಮೀತಂತ್ರ, ೧೭. ೭೮

ಶ್ರೀ ಭಾಷ್ಯಕಾರಾಭಿಪ್ರಾಯೇಪಿ ನಿಕ್ಷೇಪ ಏವಾಜ್ಞೇ

ಶಿರಿಯು ಗದ್ಯತ್ತಿಲುಮ್ ವಿಶ್ವಾಸಪೂರ್ವಕ ಪ್ರಾರ್ಥನೈಯೈಪ್ಪಣ್ಣಿ "ನಮೋಸ್ತುತೇ" ಎನ್ರು ಮುಡಿಕ್ಕೈಯಾಲುಮ್, ಉಪಾಯ ವರಣಶಬ್ದ ಸಾಮರ್ಥ್ಯತ್ತಾಲುಮ್ ನಿಕ್ಷೇಪಮುಮ್ ಸಿದ್ಧಮ್.

ಭಾವಿಸತಕ್ಕದ್ದು. "ಪ್ರಪತ್ತಿರ್ವಿಶ್ವಾಸಃ" ಎಂದು ಹೇಳುವಾಗ ಹೇಗೆ ಪ್ರಪತ್ತಿಗೆ ವಿಶ್ವಾಸರೂಪ ಅಜ್ಞಾದ ಪ್ರಾಧಾನ್ಯವನ್ನು ತಿಳಿಸುವದಕ್ಕಾಗಿ ಹಾಗೆ ಪ್ರಯೋಗವೋ, ಹಾಗೆಯೇ ಪ್ರಾರ್ಥನಮಿತಿಯೂವತ್ ಎಂದು ಹೇಳುವಾಗಲೂ, ಗೋಪ್ತೃತ್ವ ವರಣ ಪ್ರಾಧಾನ್ಯವನ್ನು ತಿಳಿಸುವದಕ್ಕಾಗಿ ಎಂದು ಭಾವಿಸತಕ್ಕದ್ದೆಂಬ ತಾತ್ಪರ್ಯವು. "ನ್ಯಾಸಃ ಪಂಚಾಂಗ ಸಂಯುತಃ" ಎಂಬ ಶ್ಲೋಕವನ್ನು ಸ್ವಾಮಿ ದೇಶಿಕರವರೇ ಉದಾಹರಿಸಿರುತ್ತಾರೆ. ೧೫೬ನೆಯ ಪುಟವನ್ನೂ ೧೦೦ ಪುಟವನ್ನೂ ನೋಡಿ.

ಹಾಗೆಯೇ "ರಕ್ಷಾಪೇಕ್ಷಾಂ" ಎಂಬ ಶ್ಲೋಕವನ್ನೂ ಪರಿಕರ ವಿಭಾಗಾಧಿಕಾರದಲ್ಲೇ ಉದಾಹರಿಸಿರುತ್ತಾರೆ. ೧೩೦ನೆಯ ಪುಟ ನೋಡಿ.

ಹೀಗೆ ವಿಶ್ವಾಸವೂ ಯಾಚನೆಯೂ ಸಹ ಪ್ರಪತ್ತಿಗೆ ಅಜ್ಞಾಗವಾದರೆ, ಅಜ್ಞಾ ಯಾವುದು ಎಂದು ತೋರ್ಪಡಿಸಿದ್ದಾರೆಯೇ ಎಂದರೆ ಬಹುಕಡೆಯಲ್ಲಿ ನಿಕ್ಷೇಪವೇ ಅಜ್ಞಾ ಎಂದು ತೋರ್ಪಡಿಸಿರುತ್ತಾರೆಂದು ಹೇಳುತ್ತಾರೆ —

ಶ್ರೀ ಭಾಷ್ಯಕಾರರ ಅಭಿಪ್ರಾಯಾನುಸಾರವಾಗಿಯೂ ನಿಕ್ಷೇಪವೇ ಅಜ್ಞಾಯು

ಮುಂದೆ, ಇತರರು ಹೇಳುವಹಾಗೆ ಪ್ರಾರ್ಥನೆಯೇ ಪ್ರಪತ್ತಿಯಲ್ಲವು, ಪ್ರಪತ್ತಿಯು ಆತ್ಮನಿಕ್ಷೇಪವೆಂಬುದೇ ಶ್ರೀ ಭಾಷ್ಯಕಾರರ ಅಭಿಪ್ರಾಯವೆಂದು ಮಿತಗದ್ಯ ಮತ್ತು ವೈಕುಂಠ ಗದ್ಯವಾಕ್ಯಗಳಿಂದ ವ್ಯಕ್ತಪಡಿಸುತ್ತಾರೆ ಆದುದರಿಂದ "ವಿಶ್ವಾಸಪೂರ್ವಕಂ ಪಾರ್ಥನಾ" ಎಂಬ ಶ್ರೀ ಭಾಷ್ಯಕಾರರ ವಾಕ್ಯವೂ, "ಯಾಚ್ಞಾಪ್ರಪತ್ತಿಃ" ಎಂಬ ಭರತಮುನಿಯ ವಾಕ್ಯವೂ ಔಪಚಾರಿಕವು ಎಂಬ ಭಾವವು. ಶಿರಿಯ ಗದ್ಯತ್ತಿಲುಮ್ - ಚಿಕ್ಕ ಗದ್ಯವಾದ ಶ್ರೀರಂಗ ಗದ್ಯದಲ್ಲೂ, ವಿಶ್ವಾಸಪೂರ್ವಕ ಪ್ರಾರ್ಥನೈಯೈಪ್ಪಣ್ಣಿ – "ನಿತ್ಯದಾಸ್ಯಂ ದಾಸ್ಯತೀತಿ ಮಹಾ ವಿಶ್ವಾಸ ಪೂರ್ವಕಂ ನಿತ್ಯ ಕೈಙ್ಕರತಾಂ ಪ್ರಾರ್ಥಯೇ" ಎಂದು "ವಿಶ್ವಾಸಪೂರ್ವಕವಾಗಿ ದಿವ್ಯವೈಕುಂಠವಲ್ಲಿದ್ದು, ನಿನಗೆ ಸದಾ ಕೈಂಕರ್ಯವನ್ನು ಮಾಡುವದನ್ನು ಪ್ರಾರ್ಥಿಸುವನೆಂದು" ಪ್ರಾರ್ಥಿಸಿ

ನಮಶ್ಶಬ್ದ ಆತ್ಮನಿವೇದನ ಪರಃ

ನಮಸ್ಸಾತ್ಮ ನಿಕ್ಷೇಪ ಪರಮೆನ್ನು ಮಿಡಮ್ (೧) "ನಮಸ್ಕಾರಾ

"ನಮೋಽಸ್ತುತೇ" ನಿನಗೆ ನಮಸ್ಕಾರವನ್ನು ಮಾಡಬೇನೆಂದು ಮುಂಗಿಸಿರುವದರಿಂದಲೂ, ಉಪಾಯವರಣ ಶಬ್ದಸಾಮರ್ಥ್ಯತ್ತಾಲುಮ್ - ಅಲ್ಲಿ ಇರುವದೇನೆಂದರೆ "ತತ್ಪ್ರೇವಾ ನಂತಕಾಲ ಸಮಾಕ್ಷಯಾಪ್ಯದೃಷ್ಟ ಸಂತಾರೋಪಾಯೇ ನಿಖಿಲ ಜನ್ತು ಜಾತ ಶರಣ್ಯಂ ಶ್ರೀಮನ್ನಾರಾಯಣ ತವ ಚರಣಾರವಿಂದ ಯುಗಳಂ ಶರಣಮಹಂ ಪ್ರಪದ್ಯೇ" ಎಂಬಲ್ಲಿ "ಶರಣಮಹಂ ಪ್ರಪದ್ಯೇ" ಎಂದಿರುವದರಿಂದ ಉಪಾಯನಾಗಿರಬೇಕೆಂಬ ಶಬ್ದಸಾಮರ್ಥ್ಯದಿಂದಲೂ, **ನಿಕ್ಷೇಪ ಮುನುಮ್** - ಎಂದರೆ ಆತ್ಮ ನಿಕ್ಷೇಪವು, **ಸಿದ್ಧಮುಮ್** - ಸ್ಥಾಪಿತವು, ಎರಡು ಕಾರಣಗಳಿಂದ ಪ್ರಪತ್ತಿ ಎಂಬದು ಪ್ರಾರ್ಥನೆ ಮಾತ್ರವೇ ಅಲ್ಲವು, ಪ್ರಾರ್ಥನೆಯೊಂದಿಗೆ ಆತ್ಮನಿಕ್ಷೇಪವೇ ಎಂದು ಹೇಳುತ್ತಾರೆ (೧) "ನಮೋಽಸ್ತುತೇ" ಎಂದು ಕೊನೆಯಲ್ಲಿ ಹೇಳಿರುವದರಿಂದ, ನಮಶ್ಶಬ್ದಕ್ಕೆ ಆತ್ಮನಿಕ್ಷೇಪಾರ್ಥವು ಹೇಗೆ ಎಂದರೆ ಹಾಗೆ ಉಪಯೋಗಿಸಿರುವದಕ್ಕೆ ಮುಂದಿನ ವಾಕ್ಯದಿಂದ ಪ್ರಮಾಣವನ್ನು ತೋರಿಸುತ್ತಾರೆ (೨) ಶರಣಮಹಂ ಪ್ರಪದ್ಯೇ ಎಂದು ಇರುವದರಿಂದ; ಶರಣ ಶಬ್ದವು ಉಪಾಯಾರ್ಥವಾಗಿ ಉಪಾಯ ಭರವನ್ನು ಅವನಲ್ಲಿಡುವದರಿಂದ ಆತ್ಮನಿಕ್ಷೇಪವು ಸಿದ್ಧವು ಎಂಬ ತಾತ್ಪರ್ಯವು ಇದು ಹೇಗೆಂದರೆ- ಶರಣಂ ಪ್ರಪದ್ಯೇ ಎಂಬುದು ಸರ್ವೇಶ್ವರನೇ ಉಪಾಯಭೂತನೆಂಬ ನಿಶ್ಚಯಜ್ಞಾನವನ್ನು ಬೋಧಿಸುವದರಿಂದ ಉಪಾಸನ ಸ್ಥಾನದಲ್ಲಿ ಸರ್ವೇಶ್ವರನೇ ನಿಂತು ಉಪಾಯ ಪೂರ್ತಿಯನ್ನುಂಟುಮಾಡಿ ಫಲನನ್ನು ಕೊಡುವನೆಂದು ನಂಬಿ ಸರ್ವ ಭರವನ್ನೂ ಅವನಲ್ಲಿಡುವದೇಯಾದುದರಿಂದ ಶರಣಂ ಪ್ರಪದ್ಯೇ ಎಂಬುದರಿಂದ ಆತ್ಮನಿಕ್ಷೇಪ ಸಿದ್ಧಿಯೆಂಬ ತಾತ್ಪರ್ಯವು

ನಮಸ್ಸು ಆತ್ಮನಿವೇದನ ಪರವೆಂದು ಹಿಂದೆ ಹೇಳಲ್ಪಟ್ಟಿತು ಅದಕ್ಕೆ ಪ್ರಮಾಣವನ್ನು ತೋರಿಸುತ್ತಾರೆ—

ನಮಃ ಎಂಬ ಶಬ್ದವು ಆತ್ಮನಿವೇದನ ಪರವು

ನಮಸ್ಸು - ನಮಶ್ಶಬ್ದವು, **ಆತ್ಮನಿಕ್ಷೇಪ ಪರಮೆನ್ನು ಮಿಡಮ್** - ಆತ್ಮನಿಕ್ಷೇಪವನ್ನು ಬೋಧಿಸುತ್ತದೆಂಬುದಕ್ಕೆ ಪ್ರಮಾಣವಾಗಿ "ನಮಸ್ಕಾರಾತ್ಮಕ-ನಮಸ್ಕಾರ ರೂಪವಾದ, **ಆತ್ಮನಿವೇದನಂ** - ಆತ್ಮನಿಕ್ಷೇಪವನ್ನು, **ಯಸ್ಮೈ** -

(೧) ಮನ್ತ್ರರ-ಪದ

ತ್ಮಕಂ ಯಸ್ಮೈ ವಿಧಾಯಾತ್ಮ ನಿವೇದನಮ್ ಇತ್ಯಾದಿಗಳಿಲೇ ಪ್ರಸಿದ್ಧಮ್.

ಯಾವ ಭಗವಂತನಿಗಾಗಿ, ವಿಧಾಯ ಮಾಡಿ, ಮುಂದೆ "**ತ್ಯಕ್ತ್ವದುಃಖೋದಯಾ ಲಾನ್ಯಾನ್ಯಾನಶ್ಚ ತೇತಂನಮಾನ್ಯಹಂ**" ಎಂದು ಇರುತ್ತದೆ; ಸಮಸ್ತ ದುಃಖಗಳಿಂದಲೂ ಬಿಡಲ್ಪಟ್ಟವನಾಗಿ, ಸಮಸ್ತ ಇಷ್ಟಾರ್ಥಗಳನ್ನೂ ಯಾವನಿಂದ ಹೊಂದುವನೋ, ಅಂತಹ ಲಕ್ಷ್ಮೀನೃಸಿಂಹನನ್ನು ನಾನು ನಮಿಸುತ್ತೇನೆ ಎಂದರೆ ಶರಣು ಹೊಂದುತ್ತೇನೆಂಬುದು ತಾತ್ಪರ್ಯವು" ಇತ್ಯಾದಿಗಳಿಲೇ-ಇವೇ ಮೊದಲಾದ ಪ್ರಮಾಣಗಳಲ್ಲಿ, **ಪ್ರಸಿದ್ಧಂ**-ಪ್ರಸಿದ್ಧವಾದುದು ತನ್ನ ಇಷ್ಟಾರ್ಥಸಿದ್ಧಿಯನ್ನುಂಟುಮಾಡುವ **ಉಪಾಯಕ್ಕೆ** ಅನುಕೂಲತೆಯು ರಕ್ಷಾಭರವನ್ನೆಲ್ಲಾ ನಮರ್ಪಿಸುವದೇ ಆತ್ಮನಿಕ್ಷೇಪವು. ಇದು ಪ್ರಣಾಮರೂಪವಾದುದು. ಹಾಗೆಯೇ ನಮಸ್ಸು ಆತ್ಮನಿಕ್ಷೇಪ ಪರವೆಂದು ಭಾರತ ವನಪರ್ವದಲ್ಲಿ (೨೨೦ ಅಧ್ಯಾ) ಹೇಳಲ್ಪಟ್ಟಿರುತ್ತದೆ ಮಾರ್ಕಂಡೇಯ ಮಹರ್ಷಿಯು ಯುಧಿಷ್ಠಿರಾದಿಗಳನ್ನು ಕುರಿತು ಶ್ರೀಕೃಷ್ಣನು ಸಾಮಾನ್ಯನಲ್ಲವು ಅತನೇ ಪರತತ್ವವು, "**ಸರ್ವೇಷಾಮೇವಲೋಕಾನಾಂ ಪಿತಾ ಮಾತಾ ಚ ಮಾಧವಃ । ಗಚ್ಛಧ್ವಮೇನಂ ಶರಣಂ ಶರಣ್ಯಂ ಪುರುಷರ್ಷಭಾಃ**" ॥ ಅತನನ್ನೇ ಶರಣು ಹೊಂದಿರಿ ನಿಮ್ಮಿಷ್ಟಾರ್ಥವು ಕೈಗೂಡುತ್ತದೆಂದು ಹಿತೋಪದೇಶವನ್ನು ಮಾಡಲು, ಆದಕ್ಕೆ "**ವಿನಮುಕ್ತಾಶ್ಚತೇ ಸಾರ್ಥಾಯಮಾಚ ಪುರುಷರ್ಷಭಾ । ದ್ರೌಪದ್ಯಾ ಸಹಿತಾಸ್ಸರ್ವೇ ನಮಶ್ಚಕ್ರುರ್ಜನಾರ್ದನಂ**"॥ ಆ ಪಂಚಪಾಂಡವರೂ ದ್ರೌಪದಿಯೊಂದಿಗೆ ಶ್ರೀಕೃಷ್ಣನಿಗೆ ಪ್ರಣಾಮವನ್ನೆಸಗಿದರು ಎಂದು ಹೇಳಲ್ಪಟ್ಟಿರುತ್ತದೆ. ಆದುದರಿಂದ ನಮಸ್ಸು ಆತ್ಮನಿಕ್ಷೇಪ ಪರವಾಯಿತು. ನಮಸ್ಸಿಗೆ ಪರ್ಯಾಯ ಪದವಾದ **ಪ್ರಣಿಪಾತ** ಶಬ್ದವೂ ಆತ್ಮನಿಕ್ಷೇಪ ಪರವೆಂದು ಹಿಂದೆಯೇ "**ಪ್ರಣಿಪಾತ ಪ್ರಸನ್ನಾಹಿ ವೈಥಿಲೀ ಜನಕಾತ್ಮಜಾ**" ಎಂಬಲ್ಲಿ ಹೇಳಲ್ಪಟ್ಟಿರುತ್ತದೆ, ಇಲ್ಲಿನೆಯ ಪುಟ ಮೂರನೆಯ ಪಂಕ್ತಿಯನ್ನು ನೋಡಿ

ಆದರೆ ಪ್ರಣಾಮರೂಪವಾದ ನಮಸ್ಸು ಸರ್ವವಿಧ ಫಲಕ್ಕಾಗಿಯೂ ಆಗಬಹುದಾದುದರಿಂದ, ಮೋಕ್ಷಾರ್ಥಿಯು ಮಾಡುವ ಆತ್ಮ ಹವಿಸ್ಸಮರ್ಪಣರೂಪ ಅಜ್ಞೆಯನ್ನು ಹೇಗೆ ಬೋಧಿಸುತ್ತದೆ ಎಂಬಾಕ್ಷೇಪಕ್ಕೆ ಸಮಾಧಾನರೂಪವಾಗಿ, ಶ್ರೀ ವೈಕುಂಠಗದ್ಯದಲ್ಲಿ ಆತ್ಮ ಹವಿಸ್ಸಮರ್ಪಣವು ಪ್ರಣಾಮರೂಪವಾದುದೆಂಬ ಅಭಿಪ್ರಾಯ ಬರುವಹಾಗೆ ಅಪ್ಪಣೆ ಕೊಡಿಸಿರುತ್ತಾರೆಂದು ಹೇಳುತ್ತಾರೆ ಆದುದ

ರಿಂದ "ಶ್ರೀ ಭಾಷ್ಯಕಾರರ ಅಭಿಪ್ರಾಯದ ಪ್ರಕಾರ, ಪ್ರಪತ್ತಿಯು ವಿಶ್ವಾಸಮಾತ್ರವೇ ಅಲ್ಲವು; ಮತ್ತು ವಿಶ್ವಾಸ ಪೂರ್ವಕ ಪ್ರಾರ್ಥನೆಯೂ ಇಲ್ಲವು; ವಿಶ್ವಾಸ ಪೂರ್ವಕ ಯಾಚ್ಞೆಯೊಂದಿಗೆ ಪ್ರಣಾಮವಾಡಿ ಆತ್ಮಹವಿಸ್ಸನ್ನು ಶ್ರೀ ಲಕ್ಷ್ಮೀ ಪತಿಯ ಪಾದಾರವಿಂದದಲ್ಲಿ ಸಮರ್ಪಿಸೋಣವೇ ಪ್ರಪತ್ತಿ" ಎಂದು, ಮುಂದಿನ ವಾಕ್ಯದಿಂದ ತಿಳಿಸುತ್ತಾರೆ

ಶ್ರೀ ಭಾಷ್ಯಕಾರರು ರಚಿಸಿದ ಶ್ರೀ ವೈಕುಂಠ ಗದ್ಯದಲ್ಲಿ ಪ್ರಪತ್ತಿಯ ಸ್ವರೂಪವು ಪ್ರಾರ್ಥನಾ ಪೂರ್ವಕಾತ್ಮ ನಿಕ್ಷೇಪಸಮ್ - ಪ್ರಾರ್ಥನಾ ಪೂರ್ವಕವಾದ ಆತ್ಮನಿವೇದನವೆಂದು, ಕಂಠೋಕ್ತವಾಯ್ತು - ಅನುಮಾನ, ಊಹೆ ಮೊದಲಾದವುಗಳ ಆವಶ್ಯಕತೆ ಇಲ್ಲದೇನೇ ಸಾಕ್ಷಾತ್ತಾಗಿಯೇ ಹೇಳಲ್ಪಟ್ಟಿರುತ್ತದೆ ಎಂಬ ಭಾವವು. ಎಲ್ಲಿ ಹೇಳಿದೆ ಎಂದರೆ "ಮಾಮೈಕಾಂತಿಕಾತ್ಯಂತಿಕ ಪರಿಚರ್ಯಾ ಕರಣಾಯ ಪರಿಗೃಹ್ಣೀಷ್ವೇತಿ ಯಾಚಮಾನಃ ಪ್ರಣವಮ್ಯಾತ್ಮಾನಂ ಭಗವತೇ ನಿವೇದಯೇತ್" ಎಂದು ಕಂಠೋಕ್ತವಾಗಿ ಹೇಳಲ್ಪಟ್ಟಿರುತ್ತದೆ, "ನನ್ನನ್ನು ನಿನಗೇನೇ ಪ್ರಯೋಜನವಾಗಿಯೂ ಯಾವಾಗಲೂ ನಿರಂತರವಾಗಿ ಕೈಂಕರ್ಯಕ್ಕಾಗಿ ಅಜ್ಞೀಕರಿಸು ಎಂದು ವಾರ್ಥಿಸುವನಾಗಿ ನವ ಸ್ವರೂಪಿ ಆತ್ಮಾವನ್ನು ಭಗವಂತನಲ್ಲಿ ನಿವೇದನಮಾಡತಕ್ಕದ್ದು ಎಂದಾಗಿ ಈ ವಾಕ್ಯದ ಅರ್ಥವು, ಆದುದರಿಂದ ಆತ್ಮನಿಕ್ಷೇಪವೇ ಆಜ್ಞಾ ಎಂದು ಕಂಠೋಕ್ತವಾಗಿ ಹೇಳಲ್ಪಟ್ಟಿರುವುದರಿಂದ, ಇತರ ಸ್ಥಳಗಳಲ್ಲಿ, "ಪ್ರಪತ್ತಿರ್ವಿಶ್ವಾಸಃ" ಎಂದೂ "ನಿತ್ಯಕಿಙ್ಕರತಾಂ ಪ್ರಾರ್ಥಯೇ" ಎಂದೂ ಹೇಳಲ್ಪಟ್ಟಿದ್ದರೂ, ಈ ಕಂಠೋಕ್ತವಾದ ಭರನ್ಯಾಸ ಸ್ವರೂಪವನ್ನು ಮನಸ್ಸಿನಲ್ಲಿಟ್ಟು ಈ ವಾಕ್ಯಗಳನ್ನು ಅನ್ವಯಿಸತಕ್ಕದ್ದು. ವಿಶ್ವಾಸಪೂರ್ವಕ ಯಾಚ್ಞಾ ಇದ್ದರೇನೇ ಪ್ರಪತ್ತಿಗೆ ಸ್ವರೂಪಪ್ರಾಪ್ತಿಯು ಎಂದು ತಿಳಿಸುವದಕ್ಕಾಗಿಯೇ ಹಾಗೆ ಹೇಳಲ್ಪಟ್ಟಿತೆಂಬ ಜ್ಞಾನವು, ಆದುದರಿಂದ ಪ್ರಪತ್ತಿಯು ವಿಶ್ವಾಸವೆಂದೂ ಯಾಚ್ಞಾ ಎಂದೂ ಹೇಳುವದು ಔಪಚಾರಿಕವು.

ಆತ್ಮನಿಕ್ಷೇಪವೇ ಆಜ್ಞಾ ಎಂಬುದೇ ಶ್ರೀ ಭಾಷ್ಯಕಾರಾಭಿಪ್ರಾಯವೆಂಬುದಕ್ಕೆ ಏನು ಪ್ರಮಾಣವು?

ಹೀಗೆ ಶ್ರೀ ಭಾಷ್ಯಕಾರರು ಆಜ್ಞಾ ಸ್ವರೂಪವನ್ನು ನಿಷ್ಕರ್ಷಿಸಿದುದಕ್ಕೆ ಪ್ರಮಾಣಗಳೇನಾದರೂ ಉಂಟೋ ಎಂದರೆ ಎರಡು ಪ್ರಮಾಣಗಳನ್ನು ಉದಾಹರಿಸುತ್ತಾರೆ:—**ಅಗ್ನೆಯಾಲ್** - ಶ್ರೀ ವೈಕುಂಠ ಗದ್ಯದಲ್ಲಿ "ಯಾಚಮಾನಃ" ಎಂದು ವಿಶ್ವಾಸಪೂರ್ವಕವಾಗಿ ಪ್ರಾರ್ಥನೆಯನ್ನೂ ತಿಳಿಸಿ, ಅದಕ್ಕಿಂತಲೂ ಬೇರೆ

ಆತ್ಮನಿಕ್ಷೇಪ ಏವಾಜ್ಞೇತಿ ಶ್ರೀ ಭಾಷ್ಯಕಾರಾಭಿಪ್ರಾಯೇ ಕಿಂ ಪ್ರಮಾಣಂ ?

ಶ್ರೀ ವೈಕುಂಠ ಗದ್ಯತ್ತಿಲೇ ಪ್ರಾರ್ಥನಾಪೂರ್ವಕಾ ತ್ಮನಿಕ್ಷೇಪನ್ ಕಂಠೋಕ್ತ್ಯಾಯ್ತು. ಆಗ್ಯೆಯಾಲ್ (೧) "ಅನೇನೈವತು ಮನ್ತ್ರೇಣ ಸ್ವಾತ್ಮಾನಂ ಮಯಿ ನಿಕ್ಷಿಪೇತ್" (೨) "ಆತ್ಮಾತ್ಮೀಯ ಭರನ್ಯಾಸಃ" ಇತ್ಯಾದಿಗಳಿಲೇ ಅಜ್ಞಾವಿಧಾನನುಂ. ಇಪ್ಪಡಿ ಯಲ್ಲಾದಪೋದು, (೩) ಷಡ್ವಿಧಾ

ಯಾಗಿ ಆತ್ಮನಿವೇದನರೂಪ ನಿಕ್ಷೇಪವೂ ಸಿದ್ಧವಾಯಿತಾದರಿಂದ (೧) "ಈ ಮಂತ್ರದ ಮೂಲಕವಾಗಿಯೇ ಆತ್ಮಾನನ್ನು ನನ್ನಲ್ಲಿಡತಕ್ಕದ್ದು" ಎಂಬ ಸಾತ್ಯಕಿ ತಂತ್ರ ಪ್ರಮಾಣ ವಾಕ್ಯ (೨) "ಆತ್ಮಾತ್ಮೀಯ ಭರನ್ಯಾಸೋ ಹ್ಯಾತ್ಮನಿಕ್ಷೇಪ ಉಚ್ಯತೇ" "ತನ್ನ ಮತ್ತು ತನ್ನವರ ರಕ್ಷಣೆಯ ಭರವನ್ನು ಪರಮಾತ್ಮನಲ್ಲಿಡುವುದೇ ಆತ್ಮನಿಕ್ಷೇಪವು" ಎಂಬ ನಾಶ್ವತ ಪ್ರಮಾಣ, ಇತ್ಯಾದಿಗಳಿಲೆ - ಇವೇ ಮೊದಲಾದವುಗಳಲ್ಲಿ, ಇಲ್ಲಿ ಆದಿ ಶಬ್ದದಿಂದ "ಆತ್ಮಾತ್ಮೀಯಭರಂ ಸರ್ವಂ ನಿಕ್ಷಿಪ್ಯ ಶ್ರೀಪತೇಃಪದೇ" ಇವೇ ಮೊದಲಾದ ಇನ್ನೂ ಪ್ರಮಾಣಗಳಿವೆ ಎಂಬ ಭಾವವು ಸೂಚಿಸಲ್ಪಟ್ಟಿತು, ಅಜ್ಞಾ ವಿಧಾನನುಂ - ಅಂಗಿ ಯಾವುದೆಂದು ವಿಧಿಸೋಣವು, ನಿರ್ಣೀತಂ ಎಂದು ಇಟ್ಟುಕೊಳ್ಳತಕ್ಕದ್ದು, ನಿರ್ಣಯಿಸಲ್ಪಟ್ಟಿತು. ಈ ಪ್ರಮಾಣಗಳ ಮೂಲಕ ಪ್ರಪತ್ತಿಯ ಅಂಗಿಯು ಆತ್ಮನಿಕ್ಷೇಪವೆಂಬುದು ಸಿದ್ಧವೆಂದು ಹೇಳಲ್ಪಟ್ಟಿತು.

ಆದರೆ "ಪ್ರಪತ್ತಿರ್ವಿಶ್ವಾಸಃ" ಎಂಬ ಯತಿರಾಜರ ವಾಕ್ಯದಲ್ಲೂ, "ತದೇ ಕೋಪಾಯತಾ ಯಾಚ್ಞಾ, ಪ್ರಪತ್ತಿಶ್ಚರಣಾಗತಿಃ" ಎಂಬ ಭರತಮುನಿಯ ವಾಕ್ಯದಲ್ಲೂ, ಔಪಚಾರಿಕಾಭಿಪ್ರಾಯಕಲ್ಪನೆಯು ನ್ಯಾಯವೋ ? ಮಹಾ ವಿಶ್ವಾಸವೂ, ಪ್ರಾರ್ಥನಾ, ಆತ್ಮನಿಕ್ಷೇಪವೂ ಈ ಮೂರನ್ನೂ ಅಜ್ಞಾಯಾಗಿಯೇ ಏಕೆ ಭಾವಿಸಕೂಡದು ? ಎಂದು ಪ್ರಶ್ನಿಸಿದರೆ, ಆಗ ಉಂಟಾಗುವ ದೋಷವನ್ನು ಸೂಚಿಸುತ್ತಾರೆ. ಇಪ್ಪಡಿಯಲ್ಲಾದ ಪೋದು-ವಿಶ್ವಾಸ ಪ್ರಾರ್ಥನೆಗಳು ಅಜ್ಞಾಗಳೆಂದೂ, ಆತ್ಮನಿಕ್ಷೇಪವೇ ಅಜ್ಞೆಯೆಂದೂ ಒಪ್ಪಿಕೊಳ್ಳದಿದ್ದರೆ, ಷಡ್ವಿಧಾ ಶರಣಾಗತಿಃ ಎನ್ಗಿರ ವಾಕ್ಯತ್ತಿಲ್ - ಎಂಬ ವಾಕ್ಯದಲ್ಲಿ, ಆಪಾತಪ್ರತೀತಿಯೈ ಕೊಂಡು-

---

(೧) ಮಂತ್ರರಾಜ ಪದ ಸ್ತೋತ್ರಂ. (೨) ಶ್ರೀ ಸಾತ್ವ ೧೨ ೪೨
(೩) ಅಹಿ. ೩೭.೨.೨೭,

ಶರಣಾಗತಿಃ" ಎಜ್ಜರ ವಾಕ್ಯೆತ್ತಿಲ್ ಆಪಾತಪ್ರತೀತಿಯ್ಯೆಕ್ಕೊಂಡು, (೨) "ಸ್ನಾನಂ ಸಪ್ತವಿಧಂ ಸ್ಮೃತಂ" ಇತ್ಯಾದಿಗಳಿರ್ ಶೊನ್ನ ಸ್ನಾನಾದಿ ಭೇದ

ಮೇಲೆ ತೋರುವ ಅರ್ಥವನ್ನು ಸ್ವೀಕರಿಸಿ, ಮೇಲಕ್ಕೆ ತೋರುವರ್ಥವು ಯಾವುದೆಂದರೆ ಶರಣಾಗತಿಯು ಆರು ವಿಧವಾದದ್ದು ಎಂಬುದು, **"ಸ್ನಾನಂ ಸಪ್ತವಿಧಂ ಸ್ಮೃತಮ್" ಇತ್ಯಾದಿಗಳಿಲ್** - ಸ್ನಾನವು ಶಾಸ್ತ್ರದಲ್ಲಿ ಹೇಳಲ್ಪಟ್ಟಿರುವದು ಏಳುವಿಧವು ಎಂಬಿವೇ ಮೊದಲಾದವುಗಳಲ್ಲಿ, **ಶೊನ್ನ ಸ್ನಾನಾದಿ ಭೇದಜ್ಗಳ್ ಪೋಲೇ**-ಹೇಳಲ್ಪಟ್ಟ ಸ್ನಾನವೇ ಮೊದಲಾದ ಭೇದಗಳ ಹಾಗೆ, **ತನಿತ್ತನಿಯೇ**-ಬೇರೆ ಬೇರೆಯಾಗಿ, **ಪ್ರಪತ್ತಿ ವಿಶೇಷಜ್ಗಳಾಗ** - ಪ್ರಪತ್ತಿ ಭೇದಗಳಾಗಿ, **ಪ್ರಸಜ್ಗಿಕ್ಕುಮ್** - ಉಂಟಾಗಬಹುದು ಸ್ನಾನಗಳು ಏಳು ವಿಧವೆಂದು ಹೇಳಿರುವ ಹಾಗೆ, **ಷಡ್ವಿಧಾ ಶರಣಾಗತಿಃ** ಎಂದರೆ ಪ್ರಪತ್ತಿಯು ಆರು ವಿಧಗಳೆಂದು **ಈ** ವಾಕ್ಯಕ್ಕೆ ಮೇಲೆ ಮೇಲೆ ತೋರುವ ಅರ್ಥವನ್ನು ಹೇಳಿಬಿಟ್ಟು ಪ್ರಪತ್ತಿಯು ವಿಶ್ವಾಸವೆಂದೂ ಪ್ರಾರ್ಥನೆಯೆಂದೂ, ಆತ್ಮ ನಿಕ್ಷೇಪವೆಂದೂ ಹೀಗೆ ಪ್ರಪತ್ತಿ ಭೇದಗಳೆಂದು ಅರ್ಥಮಾಡಿಬಿಟ್ಟರೆ,

"ಆನುಕೂಲ್ಯಸ್ಯ ಸಜ್ಕಲ್ಪಃ ಪ್ರಾತಿಕೂಲ್ಯಸ್ಯ ವರ್ಜನಂ।
ರಕ್ಷಿಷ್ಯತೀತಿ ವಿಶ್ವಾಸೋ ಗೋಪ್ತೃತ್ವವರಣಂ ತಥಾ।
ಆತ್ಮ ನಿಕ್ಷೇಪ ಕಾರ್ಪಣ್ಯೇ ಷಡ್ವಿಧಾ ಶರಣಾಗತಿಃ"

ಎಂದು ಹೇಳಿರುವದರಿಂದ ಆನುಕೂಲ್ಯಸ್ಯ ಸಂಕಲ್ಪವೇ ಒಂದು ವಿಧ ಶರಣಾಗತಿಯೆಂದೂ, ಪ್ರಾತಿಕೂಲ್ಯಸ್ಯ ವರ್ಜನವೇ ಇನ್ನೊಂದು ವಿಧವೆಂದೂ ಹೀಗೆಲ್ಲಾ ಅರ್ಥಮಾಡಬೇಕಾಗಿ ಬರುವದರಿಂದಲೂ, ಮತ್ತು **ನ್ಯಾಸಃಪಂಚಾಂಗ ಸಂಯುತಃ** ಇತ್ಯಾದಿ ಅನೇಕ ಪ್ರಮಾಣಗಳಿಗೆ ವಿರುದ್ಧವಾಗುವದರಿಂದಲೂ ಅಪಾರ್ಥವು; **ಆದುದರಿಂದ ಷಡ್ವಿಧಾ ಶರಣಾಗತಿಃ ಎಂದರೆ** ಶರಣಾಗತಿಯು, ಐದು ಅಂಗಗಳು ಒಂದು ಅಂಗಿಯು ಹೀಗೆ ಆರು ಅಂಶಗಳುಳ್ಳದು ಎಂದು, ಬಹುವ್ರೀಹಿ ಅರ್ಥವನ್ನು ಹೇಳುವದೇ ಸರ್ವ ಸಮಂಜಸವೆಂಬ ಭಾವವು, ಇದರ ಉಪಪಾದನೆಗೆ ಈಚಿ-ಳನೆಯ ಪುಟಗಳನ್ನ ಪರಾಂಬರಿಸಿ. ಆದುದರಿಂದ ಪ್ರಾರ್ಥನೆಯೇ ಪ್ರಪತ್ತಿಯು ಎಂಬ ಕೆಲವರಭಿಪ್ರಾಯವು ಇದರಿಂದ ಸಮಂಜಸವಾದುದಲ್ಲವೆಂದು ಸ್ಥಾಪಿಸಲ್ಪಟ್ಟಿತು.

"ಷಡ್ವಿಧಾ ಶರಣಾಗತಿಃ" ಎಂಬಲ್ಲಿ ಪ್ರಪತ್ತಿಯು ಆರುವಿಧಗಳೆಂದರೆ ಆನುಕೂಲ್ಯಸ್ಯ ಸಂಕಲ್ಪಾದಿಗಳೂ ಪ್ರಪತ್ತಿಗಳೆಂದು ಹೇಳಬೇಕಾಗುತ್ತದೆಂದು

ಜ್ಞಗಳ್ ಪೋಲೆ ತನಿತ್ತನಿಯೇ ಪ್ರಪತ್ತಿ ವಿಶೇಷಜ್ಞಗಳಾಗ ಪ್ರಸಜ್ಞಕ್ಕುಮ್ (೧) "ಪ್ರಪತ್ತಿಂ ತಾಂ ಪ್ರಯುಂಜೀತ ಸ್ವಾಜ್ಞೈಃ ಪಂಚಭಿರಾವೃತಾಮ್" ಇತ್ಯಾದಿ ವಚನಾಂತರ ಬಲತ್ತಾಲೆ ನಿಯಮಿಕ್ಕ ಪಾರ್ಕಿಲ್, ಅಪ್ಪಡಿಯೇ ಪ್ರಾರ್ಥನಾ ವಿಶ್ವಾಸಾದಿಗಳೈ ಪ್ರಪತ್ತಿಯೆನ್ರು ಶೊಲ್ಲುಗಿರ ವಚನಜ್ಞಳೈಯುಮ್ ನಿಯಮಿತ್ತು (೨) "ನ್ಯಾಸಃ ಪಂಚಾಜ್ಞ ಸಂಯುತಃ" ಇತ್ಯಾದಿಗಳಿರ್ ಪಡಿಯೇ ನಿಕ್ಷೇಪಮೊನ್ರನೇ ಅಜ್ಞ, ಇತರಜ್ಞಳ್ ಆಜ್ಞಗಳೆನ್ಗೈಯುಚಿತಮ್

ದೋಷ ಉಂಟಾಗುತ್ತದೆ, ಆದುದರಿಂದ ಪ್ರಾರ್ಥನೆಯು ಪ್ರಪತ್ತಿಯಲ್ಲವೆಂದು ಹೇಳಲ್ಪಟ್ಟಿತು. ಈ ವಾದಕ್ಕೆ ಪ್ರತಿಕ್ಷೇಪವು ಸಮಾಧಾನ ಹೇಳುವರು: ಏನಂದರೆ, "ಪ್ರಪತ್ತಿಂ ತಾಂ ಪ್ರಯುಂಜೀತ ಸ್ವಾಜ್ಞೈಃ ಪಂಚಭಿರಾವೃತಾಮ್" ಎಂಬ ಲಕ್ಷ್ಮೀತಂತ್ರ ಪ್ರಮಾಣಾನುಸಾರವಾಗಿ ಐದು ಅಜ್ಞಗಳು ಒಂದು ಆಜ್ಞೀ ಎಂದು ಭಾವಿಸುವದೇ ಯುಕ್ತವು; ಆದುದರಿಂದ ಪ್ರಾರ್ಥನೆಯೇ ಆಗೀ, ಮಿಕ್ಕವುಗಳೆಲ್ಲಾ ಆತ್ಮನಿಕ್ಷೇಪವೊಂದಿಗೆ ಅಂಗಗಳೆಂದು ಹೇಳುವೆವು ಎಂದರೆ ಅದಕ್ಕೆ ಸಮಾಧಾನವನ್ನು ಮುಂದಿನವಾಕ್ಯವಾದ "ಪ್ರಪತ್ತಿಂ ತಾಂ ಪ್ರಯುಂಜೀತ" ಎಂಬುದರಿಂದ ಹೇಳುತ್ತಾರೆ

"ಪಂಚಭಿಃ - ಐದಾದ, ಸ್ವಾಜ್ಞೈಃ - ತನ್ನ ಅಜ್ಞಗಳಿಂದ, ಆವೃತಾಂ - ಕೂಡಿದ, ತಾಂ ಪ್ರಪತ್ತಿಂ - ಆ ಪ್ರಪದನವನ್ನು, ಪ್ರಯುಂಜೀತ - ಪ್ರಯೋಗಿಸತಕ್ಕದ್ದು," ಇತ್ಯಾದಿ ವಚನಾಂತರ ಬಲತ್ತಾಲೇ - ಇವೇ ಮೊದಲಾದ ಬೇರೆ ಪ್ರಮಾಣಗಳ ಬಲದಿಂದ, ನಿಯಮಿಕ್ಕ ಪಾರ್ಕಿಲ್ - ಷಡ್ವಿಧಾ ಶರಣಾಗತಿ ಎಂಬಲ್ಲಿ ಆರು ವಿಧಗಳೆಂಬ ಅರ್ಥ ಹೇಳದೆ ಆರು ಅಂಶಗಳುಳ್ಳದ್ದೆಂದೇ ಹೇಳುವದು ವಿಧಾಯಕವಾಗಿ ಕಂಡರೆ, ಅಪ್ಪಡಿಯೇ - ಆದರ ಹಾಗೆಯೇ, ಪ್ರಾರ್ಥನೆ ವಿಶ್ವಾಸ ಮೊದಲಾದವುಗಳನ್ನೂ ಪ್ರಪತ್ತಿ ಎಂದು ಹೇಳುವ ಪ್ರಮಾಣವಚನಗಳನ್ನೂ ಸಹ, ನಿಯಮಿತ್ತು-ಅವುಗಳು ಅಜ್ಞಗಳೆಂದು ಹೇಳುವ ಇತರ ಪ್ರಮಾಣ ಬಲದಿಂದ ಖಂಡಿಸಿ "ನ್ಯಾಸಃ ಪಂಚಾಜ್ಞಸಂಯುತಃ - ನಿಕ್ಷೇಪರೂಪವಾದ ಪ್ರಪತ್ತಿಯು ಐದು ಅಂಗಗಳಿಂದ ಕೂಡಿದುದು" ಇತ್ಯಾದಿಗಳಿಲ್ ಪಡಿಯೇ - ಇವೇ ಮೊದಲಾದ ಪ್ರಮಾಣಗಳಲ್ಲಿ ಹೇಳಿರುವ ಹಾಗೆ, ನಿಕ್ಷೇಪ ಮೊನ್ರುಮೇ ಅಜ್ಞ - ನಿಕ್ಷೇಪ ಒಂದೇ ಅಜ್ಞಿಯು, ಒಂದೇ ಎಂದು ಹೇಳಿದುದರಿಂದ ವಿಶ್ವಾಸ

---

(೧) ಲಕ್ಷ್ಮೀ ತಂತ್ರ. ೨೮. ೧೧. ೬: (೨) ಅಹಿ. ೧೭. ೭೪.

ಪ್ರಾರ್ಥನೆಗಳು ಅಜ್ಞಿಗಳಾಗಲಾರವೆಂಬ ಭಾವವು. **ಇತರಜ್ಞಳ್** - ಆರರಲ್ಲಿ ಮಿಕ್ಕ ಐದೂ ಅಜ್ಞಗಳು, **ಎನ್ಗೈ ಯುಚಿತನ್** - ಎಂದು ಹೇಳುವದೇ ಸಮಂಜಸವು. ಇಲ್ಲಿ ವಾಕ್ಯಗಳಿಗೆ ನಿಯಮನ ಹೇಗೆ ಎಂದರೆ, ಅಜ್ಞಿಯಾದ ಪ್ರಪತ್ತಿಯು ಮಹಾ ವಿಶ್ವಾಸ ಪೂರ್ವಕವಾದ ಪ್ರಾರ್ಥನೆಯಿಂದ ವಿಶಿಷ್ಟವಾದುದು ಎಂದು ಕೆಲವು ವಾಕ್ಯಗಳು ಹೇಳುತ್ತವೆ ಎಂದೂ, ಇನ್ನು ಕೆಲವು ಮಹಾವಿಶ್ವಾಸವು ಪ್ರಧಾನವಾದ ಅಜ್ಞವಾಗಿ, ಅದರಿಂದ ವಿಶಿಷ್ಟವಾಗಿರಬೇಕೆಂದೂ ನಿಯಮನವೆಂಬ ಭಾವವು. **"ಪ್ರಪತ್ತಿಂ ತಾಂ ಪ್ರಯುಂಜೀತ ಸ್ವಾಜ್ಞೈಃ ಪಂಚಭಿರಾವೃತಾಂ"** ಎಂಬ ಬೇರೇ ಪ್ರಮಾಣಾನುಸಾರವಾಗಿ **"ಷಡ್ವಿಧಾ ಶರಣಾಗತಿಃ"** ಎಂಬ ವಾಕ್ಯವನ್ನು ಅನ್ವಯಿಸತಕ್ಕದ್ದು ನ್ಯಾಯವಾದುದರಿಂದ, ಒಂದೇ ಅಜ್ಞಿಯು, ಐದು ಅಜ್ಞಗಳೆಂದು ಅರ್ಥ ಮಾಡುವದೇ ಯುಕ್ತವೆಂದು ಒಪ್ಪಿ, ಪ್ರಾರ್ಥನೆಯೇ ಅಜ್ಞಿಯು, ಇನ್ನು ಮಿಕ್ಕ ಐದೂ ಅಜ್ಞಗಳೆಂದು ಹೇಳುತ್ತೇವೆ. **"ಸ್ನಾನಂ ಸಪ್ತವಿಧಂ"** ಎಂಬ ಪ್ರಮಾಣದಲ್ಲಾದರೋ ಏಳುವಿಧವಲ್ಲವೆಂದು ತೋರುವ ಪ್ರಮಾಣಬಲವ್ಯಾವುದೂ ಇಲ್ಲವಾದುದರಿಂದ, ಸ್ನಾನವು ಏಳುವಿಧವೆಂದೇ ಅರ್ಥ ಮಾಡತಕ್ಕದ್ದು. **"ಷಡ್ವಿಧಾ ಶರಣಾಗತಿಃ"** ಎಂಬುವ ವಾಕ್ಯಾರ್ಥಕ್ಕಾದರೋ **ಪ್ರಪತ್ತಿಂ ತಾಂ ಪ್ರಯುಂಜೀತ** ಇತ್ಯಾದಿ ಇತರ ಪ್ರಮಾಣ ಬಲವಿರುವದರಿಂದ ಐದು ಅಜ್ಞಗಳು, ಒಂದು ಅಜ್ಞಿ ಎಂದೇನೋ ನೀವು ಹೇಳುವಹಾಗೆ ಹೇಳುವೆವು. ಆದರೆ ಪ್ರಾರ್ಥನೆಯು ಅಜ್ಞಿ, ಇತರಗಳು ಅಜ್ಞಗಳೆಂದು ಹೇಳುವೆವು ಎಂಬುದು ಇಲ್ಲಿ ಪೂರ್ವ ಪಕ್ಷವು. ಇದಕ್ಕೆ ಸಮಾಧಾನವು ಹೇಗೆಂದರೆ—ಐದು ಅಜ್ಞಗಳು ಒಂದು ಅಜ್ಞಿ ಎಂದು ಇತರ ಪ್ರಬಲಪ್ರಮಾಣದಿಂದ ಒಪ್ಪಿಕೊಂಡನಂತರ, ಹಾಗೆಯೇ **"ನ್ಯಾಸಃ ಪಂಚಾಂಗ ಸಂಯುತಃ"** ಎಂಬ ಪ್ರಬಲಪ್ರಮಾಣವಾದ ಅಹಿರ್ಬುಧ್ನ್ಯ ಸಂಹಿತಾವಾಕ್ಯ ಸಾಮರ್ಥ್ಯದಿಂದ **ನ್ಯಾಸ**ವೆಂದರೆ **ಆತ್ಮನಿಕ್ಷೇಪ** ವೆಂಬ ಪ್ರಪತ್ತಿಯು ಐದು ಅಜ್ಞಗಳುಳ್ಳದ್ದೆಂದು ತೋರಿ ಬರುವದರಿಂದ **ಆತ್ಮನಿಕ್ಷೇಪ**ವೇ ಅಜ್ಞಿಎಂದೂ, ಇತರಗಳು ಅಜ್ಞಗಳೆಂದೂ ಒಪ್ಪಿಕ್ಕೊಳ್ಳಲು ಅಭ್ಯಂತರವೇನು? ಎಂಬ ಭಾವವು.

ಇವರಮೇಲೆ ಇನ್ನೊಂದು **ಪೂರ್ವಪಕ್ಷವೇನೆಂದರೆ :—" ಭೂಯಸಾಂ ನ್ಯಾಯ್ಯಾದ್ಪಲೀಯಸ್ತ್ವಂ"** ಎಂಬ ಭೂಯಸಾಂ ನ್ಯಾಯದಪ್ರಕಾರ, ಒಂದು ವಿಷಯದಲ್ಲಿ ಅನೇಕ ಪ್ರಮಾಣಗಳಿದ್ದರೆ, ಅದು ಒಂದೆರಡು ಶಾಸ್ತ್ರವಾಕ್ಯಗಳಿಗೆ ವಿರೋಧವಾಗಿ ತೋರಿಬಂದರೂ ಇವುಗಳನ್ನು ಬೇರೇ ವಿಧವಾಗಿ ಅನ್ವಯಿಸಿಬಿಟ್ಟು ಆ ವಿಷಯವೇ ಉಪಾದೇಯವೆಂದು ಭಾವಿಸತಕ್ಕದ್ದು. ಹೀಗೆ ಪ್ರಾರ್ಥನೆಯೇ ಪ್ರಪತ್ತಿಯೆಂಬುದಕ್ಕೆ ಅನೇಕ ಪ್ರಮಾಣಗಳಿರುವಾಗ, ಅವುಗಳನ್ನೆಲ್ಲಾ ತಿರಸ್ಕರಿಸಿ, ಆತ್ಮ

ಭೂಯಸಾಂ ನ್ಯಾಯರೀತ್ಯಾ ನಿಕ್ಷೇಪ ಏವ ಆಜ್ಞೀ ನ ತು ಪ್ರಾರ್ಥನಾ.

ಭೂಯಸಾಂ ನ್ಯಾಯತ್ತೈ ಪ್ಪಾರಾತ್ತಲುಮ್ ಸಾತ್ಯಕಿತನ್ತ್ರ ಲಕ್ಷ್ಮೀ ತನ್ತ್ರಾಹಿರ್ಬುಧ್ನ್ಯ ಸಂಹಿತಾದಿಗಳಿಲ್ ಪ್ರಪತ್ತ್ಯಧ್ಯಾಯಙ್ಗಳಿಲೇ ನಿಕ್ಷೇಪಮಞ್ಞಿಯೆನ್ರೇ ಪ್ರಸಿದ್ಧಮ್.

ನಿಕ್ಷೇಪವೇ ಅಙ್ಞ ಎಂದು ಭಾವಿಸುವದು ಹೇಗೆ? ಪ್ರಾರ್ಥನೆಯೇ ಪ್ರಪತ್ತಿ ಎಂದು ಹೇಳುವ ಪ್ರಮಾಣಗಳು ಯಾವುವೆಂದರೆ—

೧. **ತ್ವಮೇವೋಪಾಯಭೂತೋ ಮೇ ಭವೇತಿ ಪ್ರಾರ್ಥನಾಮತಿಃ ।**
ಶರಣಾಗತಿರಿತ್ಯುಕ್ತಾ ಸದ್ಭೇವೇ ಸ್ಮಿನ್ಪ್ರಯುಜ್ಯತಾಂ ॥ ಅಹಿ.

೨. **ಅನನ್ಯಸಾಧ್ಯೇ ಸ್ವಾಭೀಷ್ಟೇ ಮಹಾವಿಶ್ವಾಸಪೂರ್ವಕಂ ।**
ತದೇಕೋಪಾಯತಾ ಯಾಚ್ಞಾ ಪ್ರಪತ್ತಿಶ್ಶರಣಾಗತಿಃ ॥ ಭರತಮುನಿ ವಾಕ್ಯವು.

೩. **ಉಪಾಯಂ ವೃಣುಲಕ್ಷ್ಮೀಶಂ ತಮುಪೇಯಂ ವಿಚಿಂತ್ಯಚ ।** ಇತ್ಯಾದಿ.

ಈ ಪೂರ್ವಪಕ್ಷಕ್ಕೆ ಸಮಾಧಾನವಾಗಿ ಹೇಳುತ್ತಾರೇನೆಂದರೆ :—ನೀವು ಹೇಳುವ ಭೂಯಸಾಂ ನ್ಯಾಯಪ್ರಕಾರವಾಗಿಯೇ ಆತ್ಮನಿಕ್ಷೇಪವೇ ಪ್ರಪತ್ತಿಯು ಅಜ್ಞಿ ಎಂದು ಹೇಳುವದರಿಂದ ಆತ್ಮನಿಕ್ಷೇಪವೇ ಅಙ್ಞಿಯೇ ವಿನಾ ಪ್ರಾರ್ಥನೆಯಲ್ಲವೆಂದು ಹೇಳುತ್ತಾರೆ.

ಭೂಯಸಾಂ ನ್ಯಾಯಪ್ರಕಾರ ನಿಕ್ಷೇಪವೇ ಅಙ್ಞಿಯು, ಪ್ರಾರ್ಥನೆಯಲ್ಲವು

ಭೂಯಸಾಂ ನ್ಯಾಯತ್ತೈ ಪ್ಪಾರಾತ್ತಲುಮ್ - "ಭೂಯಸಾಂ ಸ್ಯಾದ್ಬಲೀಯಸ್ತ್ವಂ" ಬಹು ಪ್ರಮಾಣಗಳಿರುವದಕ್ಕೇನೇ ಪ್ರಬಲವಾರ್ಥ್ಯವು ಎಂಬ ನ್ಯಾಯದ ಪ್ರಕಾರ ನೋಡಿದರೂ, ಸಾತ್ಯಕಿ ತಂತ್ರ,ಲಕ್ಷ್ಮೀತಂತ್ರ, ಅಹಿರ್ಬುಧ್ನ್ಯ ಸಂಹಿತೆಗಳಲ್ಲಿರುವ ಪ್ರಪತ್ತ್ಯಧ್ಯಾಯಗಳಲ್ಲಿ, ನಿಕ್ಷೇಪವೇ, **ಆಜ್ಞಿಯನ್ರೇ ಪ್ರಸಿದ್ಧಮ್** - ಅಜ್ಞಿಯೆಂಬುದೇ ಪ್ರಸಿದ್ಧವಾದ ವಿಷಯವು ಆಪ್ರಮಾಣಗಳು ಯಾವುವೆಂದರೆ—

೧ "ಸ್ವಾತ್ಮಾನಂ ಮಯಿ ನಿಕ್ಷಿಪೇತ್" ಸಾತ್ಯಕಿ ತಂತ್ರವಾಕ್ಯವು ೧೦೬ನೆಯ ಪುಟವನ್ನು ನೋಡಿ. ೨. "**ಆತ್ಮಾತ್ಮೀಯ ಭರನ್ಯಾಸೋ ಹ್ಯಾತ್ಮ**

ಆಜ್ಞಸ್ಯ ಪ್ರಾಧಾನ್ಯಾತ್ ಆಜ್ಞಾಜ್ಞಿನೋರಭೇದಃ,
ವಿಷಃ ಲೋಕಸಿದ್ಧಃ

"ತ್ವಮೇವೋಪಾಯ ಭೂತೋ ಮೇ ಭವೇತಿ ಪ್ರಾರ್ಥನಾಮತಿಃ । ಶರಣಾಗತಿರಿತ್ಯುಕ್ತಾ" ಎಬ್ಬಿರದುವುದು ತತ್ಪ್ರಕರಣತ್ತಿಲೆ ಪ್ರಧಾನವಾಗ

ನಿಕ್ಷೇಪ ಉಚ್ಯತೇ" ಲಕ್ಷ್ಮೀತಂತ್ರ ವಾಕ್ಯವು. ೩ ತೇನ ಸಂರಕ್ಷ್ಯಮಾಣಸ್ಯ ಫಲೇ ಸ್ವಾಮ್ಯ ವಿಯುಕ್ತತಾ । ಕೇಶವಾರ್ಪಣ ಪರ್ಯಂತಾ ಹ್ಯಾತ್ಮ ನಿಕ್ಷೇಪ ಉಚ್ಯತೇ" ॥ ಲಕ್ಷ್ಮೀತಂತ್ರವಾಕ್ಯವು ೧೦೬೩-ಳನೆಯ ಪುಟಗಳನ್ನು ನೋಡಿ ೪. "ನ್ಯಾಸಃ ಪಂಚಾಂಗ ಸಂಯುತಃ" ಅಹಿರ್ಬುಧ್ನ್ಯ ಸಂಹಿತಾವಾಕ್ಯವು. ೫. "ಅನೇನೈವತು ಮನ್ತ್ರೇಣ ಸ್ವಾತ್ಮಾನಂ ಮಯಿ ನಿಕ್ಷಿಪೇತ್" ಮಯಿ ನಿಕ್ಷಿಪ್ತ ಕರ್ತವ್ಯಃ ಕೈತಕೈತ್ಯೋ ಭವಿಷ್ಯತಿ" ॥ ಸಾತ್ಯಕಿ ತಂತ್ರವಾಕ್ಯವು. ೧೧೦೨ನೆಯ ಪುಟವನ್ನು ನೋಡಿ. ೬ "ಯದ್ಯೇನ ಕಾಮು ಕಾನೇನ ನ ಸಾಧ್ಯಂ ಸಾಧನಾಂತರೈಃ । ತೇನ ತೇನಾಸ್ಯತೇ ತತ್ತನ್ನಾಸ್ಯೇನೈವ ಮಹಾಮುನೇ"॥ ೭ "ಓಮಿತ್ಯಾತ್ಮಾನಂ ಯುಂಜೀತ" ಲ. "ಆತ್ಮಾತ್ಮೀಯ ಭರಂ ಸರ್ವಂ ನಿಕ್ಷಿಪ್ಯ ಶ್ರೀಪತೇಃ ಪದೇ" ೯. "ಏಧಾಯಾತ್ಮ ನಿವೇದನಂ" ೧೦ "ನಿವೇದಯತ ಮಾಂ ಕ್ಷಿಪ್ರಂ ವಿಭೀಷಣ ಮುಪಸ್ಥಿತಮ್"

ಹೀಗೆ ಪ್ರಾರ್ಥನಾವ್ಯತಿರಿಕ್ತಾತ್ಮನಿಕ್ಷೇಪಕ್ಕೆ ಅನೇಕ ಪ್ರಮಾಣಗಳಿರುವುದರಿಂದ ಆತ್ಮನಿಕ್ಷೇಪವೇ ಆಜ್ಞೆಯು. ಹೀಗೆ ಆತ್ಮ ನಿಕ್ಷೇಪವೆ ಆಜ್ಞೆ ಎಂದು ಹೇಳುವ ದಾದರೆ, "ತ್ವಮೇವೋಪಾಯ ಭೂತೋ ಮೇ" ಎಂಬ ವಾಕ್ಯದಲ್ಲಿ ಭವೇತಿ ಪ್ರಾರ್ಥನಾಮತಿಃ ಎಂದು ಪ್ರಾರ್ಥನಾ ಬುದ್ಧಿಯುಳ್ಳದೇ ಶರಣಾಗತಿ ಎಂದು ಹೇಳುವದಕ್ಕೆ ಸರಿಯಹುದು ಹೇಗೆ? ಆ ವಾಕ್ಯದ ತಾಪರ್ಯವೇನು? ಎಂದು ಕೇಳಿದರೆ ಅದರ ತಾತ್ಪರ್ಯವನ್ನು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ.

ತ್ವಂ - ನೀನು, ಮೇ - ಅನನ್ಯಗತಿಕನಾದ ನನಗೆ, ಉಪಾಯ ಭೂತ ಏವ - ಉಪಾಯ ರೂಪನೇ ಎಂದರೆ ಉಪಾಯಾನ್ತರವಾದ ಉಪಾಸನಸ್ಥಾನದಲ್ಲಿ ನೀನೆ ನಿಲ್ಲುವನು ಭವ - ಆಗು, ಇತಿ - ಎಂಬುದಾಗಿ ಪ್ರಾರ್ಥನಾಮತಿಃ - ಪ್ರಾರ್ಥಿಸುವ ಜ್ಞಾನವುಳ್ಳದೇ, ಶರಣಾಗತಿರಿತ್ಯುಕ್ತಾ-ಶರಣಾಗತಿ ಎಂದು ಹೇಳಲ್ಪಟ್ಟದು, ಸಾದೇವೇಷ್ಟಿ ಪ್ರಯುಜ್ಯತಾಂ - ಎಂದು ಶ್ಲೋಕ ಪೂರಣವು

ಚ್ಛೊನ್ನ ಭರನ್ಯಾಸ ಪರ್ಯಂತ ಮೆನ್ನು ಮಿಡನುಂ ಅವಧಾರಣ ಸಹ ಕೃತೋ ಪಾಯ ಶಬ್ದತ್ತಾಲೇ ವ್ಯಂಜಿತವುಂ. ಓರೋರು ವಿವಕ್ಷೈಗ ಳಾಲೇ ಅಜ್ಜಗ್ಗಳ್ಕೆ ಪ್ರಧಾನನುಂಗ ಚೊಲ್ಲುಗೈ ಲೋಕತ್ತಿಲು ಮುಂಡು.

ಸಾ - ಅಂತಹ ಶರಣಗತಿಯು, **ಅಸ್ಮಿನ್ ದೇವೇ** - ಈ ಕ್ರೀಡಾಪರನಾದ ಸರ್ವೇಶ್ವರನಲ್ಲಿ, **ಪ್ರಯುಜ್ಯತಾಂ** - ಪ್ರಯೋಗಿಸಲ್ಪಡಲಿ, ಎಜ್ಜಾರದುವುನ್- ಎಂದು ಹೇಳಿರುವದೂ, **ತತ್ಪ್ರಕರಣತ್ತಿಲೆ** - ಆ ಸಂದರ್ಭದಲ್ಲಿ, **ಪ್ರಧಾನವಾಗ ಚ್ಛೊನ್ನ** - ಮುಖ್ಯವಾಗಿ ಹೇಳಲ್ಪಟ್ಟ, **ಭರನ್ಯಾಸಪರ್ಯಂತವುನ್ನು ಮಿಡನ್**- ಭರನ್ಯಾಸ ಪರ್ಯಂತವಾಗುವು ಎನ್ನುವ ಸಂದರ್ಭವು, **ಅವಧಾರಣ ಸಹಕೃತ ಏವ** ಎಂಬ ಅವಧಾರಣದಿಂದ ಸೇರಿದ, **ಉಪಾಯ ಶಬ್ದತ್ತಾಲೇ**-ಉಪಾಯ ಭೂತ ಎಂಬ ಶಬ್ದದಿಂದ, **ವ್ಯಂಜಿತಮ್**- ವ್ಯಕ್ತವು, ಸರ್ವೇಶ್ವರನೇ ಉಪಾಯವಾಗಬೇಕೇ ವಿನಾ ಅನ್ಯಥಾ ಇಷ್ಟವು ಎಂಬ ಚ್ಛಾಸನವಳ್ಳದ್ದು ಎಂದು ಹೇಳಿರುವದರಿಂದ ಈ ವ್ಯಾಖ್ಯಾನವು ವಿಚಾರವು ಶರಣಾಗತಿಯು ಭರನ್ಯಾಸ ಪರ್ಯಂತವೆಂದು ಭಾವಿಸುವದೇ ನ್ಯಾಯವೆಂದು ತೋರಿಬರುತ್ತದೆ ಇಲ್ಲಿ ಏವ ಎಂಬ ಅವಧಾರಣವನ್ನು ಉಪಾಯಭೂತನೆಂಬುದರೊಂದಿಗೆ ಅನ್ವಯಿಸತಕ್ಕದ್ದು ಹೀಗೆ ಉಪಾಯವಾಗು ಎಂದು ಪ್ರಾರ್ಥಿಸಿ ಶರಣಾಗತಿಯನ್ನು ನಡಿಸತಕ್ಕದ್ದೆಂಬ ಭಾವವು; **ಸಾದೇವೇಸ್ಮಿನ್ ಪ್ರಯುಜ್ಯತಾಂ** – ಎಂದು ಉತ್ತರಾರ್ಧ ವಾಕ್ಯದಲ್ಲಿ ಹೇಳಿರುವದರಿಂದ ಉಪಾಯರೂಪ ಪ್ರಾರ್ಥನೆಗಿಂತ ಪ್ರಯೋಗವು, ಬೇರೆಯಾದುದೆಂಬುದೂ ತೋರಿಬರುತ್ತದೆ.

ಇನ್ನು ಕೆಲವು ಸ್ಥಳಗಳಲ್ಲಿ, "ಕ್ಷಮೇವೋಪಾಯ ಭೂತೋ ಮೇ" ಎಂಬ ಪ್ರಮಾಣದಲ್ಲಿರುವ ಹಾಗೆ ಅವಧಾರಣ ಸಹಕೃತ ಉಪಾಯಶಬ್ದರೂಪ ಸಹಾಯವಿಲ್ಲದಿರುವ ಸಂದರ್ಭದಲ್ಲಿ ಅಜ್ಜವಸ್ಥೈ ಎಂಬುದಾಗಿ ಅಜ್ಞಿಯಾಗಿ ಹೇಳಲ್ಪಟ್ಟಪಕ್ಷವನ್ನು ಹೇಗೆ ಎ ದರೆ ಲೌಕಿಕ ವಾಡಿಕೆಯಲ್ಲಿ ಮುಖ್ಯವಾದ ಅಜ್ಞದ ಪ್ರಾಧಾನ್ಯವನ್ನು ನಿರ್ದೇಶಿಸುವದಕ್ಕಾಗಿ ಅಜ್ಞಾತ್ಮೈವ ಭಾವನೆಯುಂಟೆಂದು ತಿಳಿಸುತ್ತಾರೆ.

ಆಜ್ಞಾನಾದಥವಾ ಜ್ಞಾನಾದಪರಾಧೇಷು ಸತ್ಸ್ವಪಿ ।
ಪ್ರಾಯಶ್ಚಿತ್ತಂ ಕ್ಷಮಸ್ವೇತಿ ಪ್ರಾರ್ಥ್ಯಸ್ಯೈಕ್ಯೇವ ಕೇವಲನುಂ॥

ಇಲ್ಲಿ ಕ್ಷಮಿಸ್ಯೈಯಾ ಎಂಬ ಪ್ರಾರ್ಥನೆಯೇ ಮುಖ್ಯವಾದ ಪ್ರಾಯಶ್ಚಿತ್ತವೆಂದು ಹೇಳಿರುವದು, ಈ ಪ್ರಾರ್ಥನಾರೂಪವಾದ ಅಜ್ಞದ ಮಾಹಾತ್ಮ್ಯವನ್ನು ತಿಳಿಸುವ

"ಶರಣಂವ್ರಜ" ಇತ್ಯಾದಿ ವಿಶ್ವಾಸಾಜ್ಞಾಪರವಾಕ್ಯೇಷು ಆತ್ಮ ಸಮರ್ಪಣ ಪರ್ಯಂತತ್ವ ಸಿದ್ಧಿಃ

ಆಲಂಭ ಶಬ್ದವು ಯಾಗಪರ್ಯಂತ ವಾನಾರ್ಭೀಲೆ, "ಶರಣಂ

ದಕ್ಕಾಗಿ ಆಜ್ಞೆಯೊಂದಿಗೆ ಅಭಿಂದವು ಹೇಳಲ್ಪಟ್ಟಿರುತ್ತದೆ. ಓರೋರು ವಿವಕ್ಷೈಗಳಾಲೇ - ಒಂದೊಂದು ವಿಷಯವನ್ನು ಮುಖ್ಯವಾಗಿ ತಿಳಿಸುವ ಆಪೇಕ್ಷೆಯಿಂದ, ಆಜ್ಞಾಜ್ಞೆಳೆ - ಆಜ್ಞೆಗಳನ್ನು, ಪ್ರಧಾನವಾಗಿ ಚೊಲ್ಲುಗೈ - ಮುಖ್ಯವಾಗಿ ಹೇಳೋಣವು, ಲೋಕತ್ರಿಲು ಮುಂಡು-ಲೋಕವಾಡಿಕೆಯಾಗಿರಲು ಉಂಟು. ಕಾರ್ಯಸಹಾಯಕನಾದ ರಾಜಭಟನನ್ನೆ "ಇವನೇ ರಾಜನು" ಎಂದು ಉಪಚಾರ ರೂಪವಾಗಿ ಪ್ರಯೋಗವು ಉಂಟು ಹಾಗೆಯೇ ಕ್ಷಮಸ್ವ ಎಂಬ ಪ್ರಾರ್ಥನೆಯು ಆಜ್ಞೆವು; ಈ ಪ್ರಾರ್ಥನೆಯು ಪ್ರಧಾನರೂಪ ಆಜ್ಞೆವಾದುದರಿಂದ ಇದಕ್ಕೂ ಪ್ರಪದನಕ್ಕೂ ಅಭೇದವು ಹೇಳಲ್ಪಟ್ಟಿರುತ್ತದೆಂಬ ಭಾವವು

ಶರಣಂ ವ್ರಜ ಇವೇ ಮೊದಲಾದ ವಿಶ್ವಾಸದ್ಯೋತಕ ವಾಕ್ಯ ದಲ್ಲೂ ಆತ್ಮಸಮರ್ಪಣ ರೂಪಾಜ್ಞೆಯು ಸಿದ್ಧಿಯು.

ಹಿಂದೆ ಲೋಕದೃಷ್ಟಾಂತದಿಂದ ಪ್ರಧಾನಾಜ್ಞೆಕ್ಕೆ ಆಜ್ಞಾತ್ವೇನ ನಿರ್ದೇಶ ಉಂಟೆಂದು ಹೇಳಿದರು ಈ ಮುಂದಿನ ವಾಕ್ಯದಿಂದ **"ಲೋಕೇ ವೇದೇಚ"** ಎಂದು ಹೇಳಿರುವಹಾಗೆ ವೇದಗಳಲ್ಲಿ ವಿಧಿಸಲ್ಪಟ್ಟಿರುವದೇ ಲೋಕಸಂಮತವಾದುದರಿಂದ ವೈದಿಕ ಮರ್ಯಾದೆಯೂ ಹಾಗೆ ಉಂಟೆಂಬುದಕ್ಕೆ ಒಂದು ದೃಷ್ಟಾಂತವನ್ನು ದಯಪಾಲಿಸುತ್ತಾರೆ **"ಮಾಮೇಕಂ ಶರಣಂ ವ್ರಜ"**, **"ತಮೇವ ಶರಣಂ ಗಚ್ಛ"** ಇತ್ಯಾದಿ ವಾಕ್ಯಗಳಲ್ಲಿ ಮಹಾವಿಶ್ವಾಸಮಾತ್ರವೇ ತೋರಿಬರುತ್ತದೇ ವಿನಾ, ಆತ್ಮನಿಕ್ಷೇಪರೂಪ ಆಜ್ಞೆಯು ತೋರಿಬರವದಿಲ್ಲವಲ್ಲಾ ಎಂದರೆ ವ್ರಜ, ಗಚ್ಛ, ಎಂಬವುಗಳಲ್ಲಿರುವ ಧಾತುಗಳಿಂದ ತೋರಿಬರುವ ಅರ್ಥ ಪ್ರಕರಣಗಳಿಂದ ಆತ್ಮನಿಕ್ಷೇಪವೂ ಹೇಳಲ್ಪಟ್ಟಿತೆಂದು ಉಪದೇಶಿಸುತ್ತಾರೆ

ಆಲಂಭ ಶಬ್ದವು - "ವಾಯವ್ಯಾಂ ಶ್ವೇತಮಾಲಭೇತ", ಅಗ್ನೀಷೋಮೀಯಂ ಪಶುಮಾಲಭೇತ", ಇತ್ಯಾದಿ ಸಂದರ್ಭಗಳಲ್ಲಿ ಪ್ರಯೋಗಿಸಲ್ಪಟ್ಟ ಆ ಪಶುಹಿಂಸೆಯನ್ನು ಬೋಧಿಸುವ ಆಲಂಭಶಬ್ದವು, **ಯಾಗ ಪರ್ಯಂತ ವಾನಾರ್ಭೀಲೆ** - ಪಶುಹಿಂಸೆ ಮಾತ್ರವನ್ನೇ ಬೋಧಿಸದೇ, ಪೂರಾ ಅಗ್ನೀಷೋಮೀಯ ಯಾಗವನ್ನೆಲ್ಲಾ ಹ್ಯಾಗೆ ಬೋಧಿಸುತ್ತದೋ ಹಾಗೆ, **"ಶರಣಂ ವ್ರಜ"**

ವ್ರಜ" ಇತ್ಯಾದಿಗಳಲ್ಲಿ ಧಾತುಗಳ್ ನ್ಯಾಸ ನಿಕ್ಷೇಪತ್ಯಾಗಾದಿ ಶಬ್ದಜಾಲೇ ಶೊಲ್ಲಪ್ಪಟ್ಟ ಆತ್ಮಯಾಗತ್ತೈ ಚೊಲ್ಲುಗೈ ವೈದಿಕ ಮುರ್ಯಾದೈಕ್ಕುಮ್ ಅನುಗುಣಮ್.

ಇತ್ಯಾದಿಗಳಲ್ಲಿ, ಶರಣನ್ನು ಕೊಂದು ಇನೇ ಮೊದಲಾದವುಗಳಲ್ಲಿ, ಇಲ್ಲಿ ವಿಧಿಪದದಿಂದ **"ತಮೇವ ಶರಣಂ ಗಚ್ಛ"** ಇತ್ಯಾದಿಗಳು ಬೋಧಿಸಲ್ಪಟ್ಟವು **ಧಾತುಗಳ್** - ವ್ರಜ, ಗಚ್ಛ, ಪ್ರಣ ಎಂಬಿನೇ ಧಾತುಗಳ, ನ್ಯಾಸ, ನಿಕ್ಷೇಪ, ತ್ಯಾಗ ಮೊದಲಾದ ಶಬ್ದಗಳಿಂದ, **ಶೊಲ್ಲಪ್ಪಟ್ಟ ಆತ್ಮಯಾಗತ್ತೈ** - ಹೇಳಲ್ಪಟ್ಟ ಆತ್ಮ ಹವಿಸ್ಸರ್ಪಣ ರೂಪಯಾಗವನ್ನು, **ಶೊಲ್ಲುಗೈ** - ಹೇಳೋಣವು, **ವೈದಿಕ ಮುರ್ಯಾದೈಕ್ಕುಮ್** - ಶಾಸ್ತ್ರಮರ್ಯಾದೆಗೂ, **ಅನುಗುಣಮ್** - ಅನುರೂಪವಾದುದು, **ಆಗ್ನೀಷೋಮೀಯಾಯಂ ಪಶುಮಾಲಭೇತ** ಎಂಬ ವಾಕ್ಯದಿಂದ ಪಶುಹನನ ಮಾತ್ರವೇ ಹೇಳಲ್ಪಡಲಿ ಆ ಯಾಗವೇ ಹೇಗೆ ಹೇಳಲ್ಪಡುತ್ತದೋ, ಹಾಗೆಯೇ **ಶರಣಂ ವ್ರಜ** ಇತ್ಯಾದಿ ವಾಕ್ಯದಿಂದ ಶರಣಾಗತಿಯಾದ ಆತ್ಮನಿಕ್ಷೇಪವೇ ಹೇಳಲ್ಪಟ್ಟಿತೆಂಬ ಭಾವವು. ಏಕೆಂದರೆ ಪಶುವಿನ ಆಲಂಭವು ಯಾಗದ ಏಕದೇಶವು ಹೇಗೋ, ಹಾಗೆ ಶರಣವನ್ನು ಹೊಂದುವುದೂ ಸಹ, ಆತ್ಮಯಾಗದ ಏಕದೇಶವು. ಈ ಆತ್ಮ ನಿಕ್ಷೇಪವೂ ಆತ್ಮಯಾಗವಹಾಗೆ ಎಲ್ಲಿ ಹೇಳಲ್ಪಟ್ಟಿರುತ್ತದೆ? ಎಂದರೆ

೧. **"ನಮಸಾ ಯೋ ಕರೋದ್ವೇವೇ ಸಸ್ವಧ್ವರಇತೀರಿ ತೇ"** ಇಲ್ಲಿ ಭರನ್ಯಾಸಾನುಷ್ಠಾತೃವು ಸವಿಾಚೀನವಾದ ಅಧ್ವರವೆಂದರೆ ಯಾಗಾನುಷ್ಠಾತೃವೆಂದು ಹೇಳಲ್ಪಟ್ಟಿರುತ್ತದೆ.

೨ **"ಬ್ರಹ್ಮಣೇತ್ವಾ ಮಹಸ ಓವಿುತ್ಯಾತ್ಮಾನಂ ಯುಂಜೀತ "** ಮಹಾತೇಜೋರೂಪನಾದ ಪರಬ್ರಹ್ಮನಾದ ನಿನಗೆ ಈ ಆತ್ಮಹವಿಸ್ಸನ್ನು ಸಮರ್ಪಿಸುವೆನು ಎಂಬುದಾಗಿ, ಆತ್ಮಾವನ್ನು ಸ್ವಾಮಿಪಾದಾರವಿಂದದಲ್ಲಿಡತಕ್ಕದ್ದು.

೩. **"ಹವಿರ್ಗೃಹೀತ್ವಾತ್ಮರೂಪಂ ವಸುರಣ್ಯೇತಿ ಮುಂತ್ರತಃ।**
ಜುಹುಯಾತ್ಪ್ರಣವೇನಾಗ್ನಾವಚ್ಯುತಾಖ್ಯೇ ಸನಾತನೇ"॥

ವಸುರಣ್ಯೋವಿಭೂರಸಿ ಎಂಬ ಮಂತ್ರಮೂಲಕವಾಗಿ, ಆತ್ಮರೂಪವಾದ ಹವಿಸ್ಸನ್ನು ತೆಗದುಕೊಂಡು ಅನಾದಿಯಾದ ಅಚ್ಯುತನೆಂಬ ಅಗ್ನಿಯಲ್ಲಿ, ಓಂ ಎಂಬ ಪ್ರಣವವನ್ನು ಉಚ್ಚರಿಸುತ್ತಾ ಹೋಮ ಮಾಡತಕ್ಕದ್ದು. **ಆ "ವಸುರಣ್ಯೋ"** ಎಂಬ ಪ್ರಪದನ ಕರಣಮಂತ್ರವು ಯಾವುದೆಂದರೆ—

"ವಸುರಣ್ಯೋ ವಿಭೂರಸಿ । ಪ್ರಾಣೇ ತ್ವಮಸಿ ಸಂಧಾತಾ । ಬ್ರಹ್ಮ ತ್ವಮಸಿ ವಿಶ್ವಸೃಕ್ । ತೇಜೋದಾ ಸ್ತ್ವಮಸ್ಯಗ್ನೇ, ವರ್ಚೋದಾ ಸ್ತ್ವಮಸಿ ಸೂರ್ಯಸ್ಯ, ದ್ಯುಮ್ನೋದಾ ಸ್ತ್ವಮಸಿ ಚಂದ್ರಮಸಃ। ಉಪ ಯಾಮ ಗೃಹೀತೋಸಿ । ಬ್ರಹ್ಮಣೇ ತ್ವಾಮಹಸ ಓಮಿತಾತ್ಮಾನಮ್ ಯುಂಜೀತ । ಏತದ್ವೈ ಮಹೋಪನಿಷದಂ ದೇವಾನಾಂ ಗುಹ್ಯಂ, ಯ ಏನಂ ವೇದ ಬ್ರಹ್ಮಣೋ ಮಹಿಮಾನಮಾಪ್ನೋತಿ ತಸ್ಮಾ ದ್ಬ್ರಹ್ಮಣೋ ಮಹಿಮಾನಮಿತ್ಯುಪನಿಷತ್" ತೈ ನಾ ೪. ೫೧

ವಸುರಣ್ಯಃ – ವಸುಗಳಿಂದ ಪ್ರಾಪ್ಯನು ಎಂದರೆ ವಸು ಶಬ್ದದಿಂದ ಉಪ ಲಕ್ಷಿತರಾದ ಸಮಸ್ತ ದೇವತೆಗಳಿಗೂ ಉಪಾಸ್ಯನು, **ವಿಭೂರಸಿ** - ಸರ್ವವ್ಯಾಪಕ ನಾಗಿದ್ದೀ, **ಪ್ರಾಣೇ** - ಪ್ರಾಣಶಬ್ದದಿಂದ ಹೇಳಲ್ಪಟ್ಟ ಕಾರ್ಯಕಾರಣದಲ್ಲಿ, **ತ್ವಮಸಿ ಸಂಧಾತಾ** - ನೀನು ಸಂಯೋಜಕನಾಗಿದ್ದೀ, **ಬ್ರಹ್ಮ ತ್ವಮಸಿ ವಿಶ್ವಸೃಕ್**-ಓ ಪರಬ್ರಹ್ಮನೇ ನೀನೇ ಸಮಸ್ತ ವಿಶ್ವಕ್ಕೂ ಸೃಷ್ಟಿಕರ್ತಾ, **ತೇಜೋದಾಸ್ತ್ವಮಸ್ಯಗ್ನೇಃ**-ಅಗ್ನಿಗೆ ನೀನೇ ತೇಜಸ್ಸನ್ನು ಕೊಟ್ಟವನು, **ವರ್ಚೋದಾ ಸ್ತ್ವಮಸಿ ಸೂರ್ಯಸ್ಯ** – ಸೂರ್ಯನಿಗೆ ತೇಜಸ್ಸನ್ನು ಕೊಟ್ಟವನೂ ನೀನೇ **ದ್ಯುಮ್ನೋದಾ ಸ್ತ್ವಮಸಿ ಚಂದ್ರಮಸಃ** - ಚಂದ್ರನಿಗೆ ಕಾಂತಿಯನ್ನು ಕೊಟ್ಟ ವನೂ ನೀನೇ, **ಉಪಯಾಮ** - ನಿನ್ನನ್ನು ಶರಣು ಹೊಂದೋಣ, **ಗೃಹೀತೋಸಿ**-ಬಹುಕಾಲಕ್ಕೆ ಕಣ್ಣಿಗೆ ಬಿದ್ದಿರುವೆ ಯಾವ ಪ್ರಯೋಜನಕ್ಕಾಗಿ ಎಂದರೆ ಹೇಳಲ್ಪಡುತ್ತದೆ, **ಬ್ರಹ್ಮಣೇತ್ವಾಮಹಸೇ** - ಮಹತ್ತಾದ ಮಹಿಮೆಯುಳ್ಳ ಪರ ಬ್ರಹ್ಮನಾದ ನಿನಗೆ ಎಂದರೆ ನಿನ್ನ ಪ್ರಾಪ್ತಿಗಾಗಿ, **ಓಂ** ಎಂಬ ಪ್ರಣವಮಂತ್ರ ವನ್ನುಚ್ಚರಿಸುವದು ಮಾತ್ರವೇ ಅಲ್ಲದೆ **ಆತ್ಮಾನಂ ಯುಂಜೀತ** - ಆತ್ಮಸಮ ರ್ಪಣರೂಪ ಶರಣಾಗತಿಯನ್ನು ಅನುಷ್ಠಿಸತಕ್ಕದ್ದು. ಈ ಸಂದರ್ಭದ ಭಾಷ್ಯ ದಲ್ಲಿ ಶ್ರೀ ರಂಗರಾಮಾನುಜಸ್ವಾಮಿಗಳು **"ಓಮಿತಿ ಮುಂತ್ರೇಣಾಪಿ ಭಗವ ಚ್ಛೇಷತ್ವ ಪ್ರತಿಪಾದಕೇನ ಪುನರಾತ್ಮಸಮರ್ಪಣಂ ಕರ್ತವ್ಯ ಮೇವೇ ತ್ಯರ್ಥಃ"** ಎಂದು ಬರೆದಿರುತ್ತಾರೆ ಇದರಿಂದ ಬರೀ ಪ್ರಾರ್ಥನಾ ಸಾಲದು, ಶರ ಣಾಗತಿಯ ಅನುಷ್ಠಾನವೂ ಆವಶ್ಯಕವೆಂಬುದು ಸಿದ್ಧವು.

೪. ತೈತ್ತರೀಯ ನಾರಾಯಣೀಯದ ಮುಂದಿನ ಅನುವಾಕವಾದ **"ತಸ್ಯೇ ವಂ ವಿದುಷೋ ಯಜ್ಞಸ್ಯಾತ್ಮಾ ಯಜಮಾನಃ"** ಎಂದಾರಂಭಿಸಿ ಇದು ವಿದ್ವಾಂಸನಿಂದ ಮಾಡಲ್ಪಡುವ ಆತ್ಮಹವಿಸ್ಸಮರ್ಪಣರೂಪವಾದ ಯಜ್ಞವು, ಇತರೆ ಪ್ರಸಿದ್ಧವಾದ ಯಜ್ಞಗಳಿಗಿಂತಲೂ ವಿಶೇಷ ಮಹಿಮೆಯುಳ್ಳದ್ದೆಂದು ರೂಪಕಮಾಡಿ ಅದರ ಪ್ರಾಶಸ್ತ್ಯವು ತೋರಿಸಲ್ಪಡುತ್ತದೆ.

ಆತ್ಮ ಸಮರ್ಪಣಂ ಆತ್ಮಯಾಗಃ.

ಯಾಗಪೂರ್ವದು ? ಇನ್ನ ದೇವತೈಕ್ಕಿನ್ನ ಹವಿಸ್ಸೈನ್ರಿಜ್ಞನೇ ಯೊರು ಬುದ್ಧಿವಿಶೇಷನುಂ. ಇಪ್ಪಡಿಯಿನಾನ್ನಾತ್ಮಾವಾಗಿರ ಸ್ವಾದುತಮವುಮಾನ ಹವಿಸ್ಸು ಶ್ರೀ ಮಾನಾನ ನಾರಾಯಣನ್ ಪೊರುಟ್ಟಿನ್ರಿಜ್ಞನೇ ಯಿರುಪ್ಪ ದೊರು ಬುದ್ಧಿವಿಶೇಷಮುಂ ಇನ್ವಿಡತ್ತಿಲ್ ಆತ್ಮಯಾಗಮುಂ.

ಹೀಂಗೆ ಆತ್ಮ ಹವಿಸ್ಸನುರ್ಪಣವೂ ಕೂಡ ಒಂದು ಯಾಗವೆಂದೇ, ಆತ್ಮ ಯಾಗವೆಂದೇ ಹೇಳಲ್ಪಟ್ಟಿರುತ್ತದೆ. ವ್ರಜ, ಗಚ್ಛ ಇತ್ಯಾದಿಗಳೂ ಕೂಡ ಆತ್ಮ ಯಾಗವನ್ನೇ ಅನುಷ್ಠಿಸತಕ್ಕದ್ದೆಂದು ಬೋಧಿಸುತ್ತವೆ ಎಂಬುದು ಮುಖ್ಯ ತಾತ್ಪರ್ಯವು.

ಆಗಲಿ, ಆತ್ಮಯಾಗನೆಂದು ಇಲ್ಲಿ ಯಾಗರಬ್ಬವು ಕೂಡುತ್ತದೋ ? ಮುಖ್ಯವಾಗಿ ಯಾಗವೋ ? ಇಲ್ಲವೇ ಬರೀ ಭಾವನೆಯೋ ? ಎಂದರೆ ಭಾವನೆ ಮಾತ್ರವೇ ಅಲ್ಲವು; ಇದೂ ಒಂದು ವಿಲಕ್ಷಣ ಯಾಗವೇ ಎಂದು ಹೇಳಲು ಹೊರಟು ಯಾಗ ಶಬ್ದಾರ್ಥವನ್ನು ಉಪದೇಶಿಸುತ್ತಾರೆ ವಿತಕ್ಕಾಗಿ ಎಂದರೆ ಫರನ್ಯಾಸವು ಬರೀ ಪ್ರಾರ್ಥನೆ ಮಾತ್ರವೇ ಅಲ್ಲವು. ವಿಷದ ಹಾವು ಕಚ್ಚಿರುವನಿಗೆ ಗರುಡಧ್ಯಾನಮಾತ್ರದಿಂದಲೇ ಅಲ್ಲದೆ ಅದರೊಂದಿಗೆ ವಿಷಾಪಹಾರಿ ಚಿಕಿತ್ಸೆಯೂ ಹೇಗೆ ಅವಶ್ಯಕವೋ, ಹಾಗೆ ಪಾಪಗಳಿಂದ ಹಿಂಡಿತನಾದ ಈ ಬದ್ಧಚೇತನನಿಗೆ ಪರಮಾತ್ಮನ ಸನ್ನಿಧಿಯಲ್ಲಿ ವಿಶ್ವಾಸಪೂರ್ವಕ ಪ್ರಾರ್ಥನೆಯೊಂದಿಗೆ ಪಾಪಗಳನ್ನೆಲ್ಲಾ ಹೋಗಲಾಡಿಸುವ ಶರಣಾಗತಿಯೂ ಅವಶ್ಯಕವೆಂಬ ಭಾವವು

ಆತ್ಮಸಮರ್ಪಣವು ಆತ್ಮಯಾಗವು.

ಯಾಗಪೂರ್ವದು - ಯಾಗವೆಂಬುದು ಯಾವುದು ? **ಇನ್ನ ದೇವತೈಕ್ಕಿನ್ನ ಹವಿಸ್ಸಿನ್ರು** - ಈ ದೇವತೆಗೆ ಉದ್ದಿಶ್ಯವಾವುದು ಈ ಹವಿಸ್ಸು ಎಂದು, **ಇಜ್ಞನೆ ಯೊರು ಬುದ್ಧಿ ವಿಶೇಷಮುಂ** - ಇರುವ ಒಂದು ಬುದ್ಧಿ ವಿಶೇಷವು, **ಇಪ್ಪಡಿ** - ಈ ಪ್ರಕಾರವಾಗಿಯೇ, **ಎನ್ನಾತ್ಮಾವಾಗಿರ** - ನನ್ನ ಆತ್ಮಾವಾಗಿರುವ, **ಸ್ವಾದುತನುವಮಾನ** - ಅಪಹತ ಪಾಪ್ಮತ್ವಾದಿ ಗುಣಾಷ್ಟಕಗಳಿಂದಲೂ, ಆನಂದಾದಿ ಗುಣಗಳಿಂದಲೂ ಪರಿಶುದ್ಧನಾಗಿ ಶ್ರುತಿಯಲ್ಲಿ **"ಅಹಮನ್ನಂ ಅಹಮನ್ನಂ"** ಎಂದು ಹೇಳಿರುವಹಾಗೆ, ಬಹು ಭೋಗ್ಯಭೂತವಾದ, **ಹವಿಸ್ಸು ಶ್ರೀ ಮಾನಾನ** - ಲಕ್ಷ್ಮೀಯುಕ್ತನಾದ, **ನಾರಾಯಣನ್ ಪೊರುಟ್ಟೇ** - ನಾರಾ

ಯಣಸಿಗಾಗಿಯೇ, **ಎನ್ನು** – ಎಂಬದಾಗಿ, **ಇಜ್ಞನೇ** - ಈ ಸಂದರ್ಭದಲ್ಲಿ, **ಇರುಪ್ಪದು** - ಇರುವಂತಹ, **ಒರುಬುದ್ಧಿ ವಿಶೇಶಮ್** – ಒಂದು ಜ್ಞಾನವಿಶೇಷವು, **ಇಪ್ಪಿಡತ್ತಿಲ್** - ಈ ಪ್ರಕರಣದಲ್ಲಿ, **ಆತ್ಮಯಾಗಮ್** - ಆತ್ಮಯಾಗವೆಂದು ಹೇಳಿಸಿಕೊಳ್ಳುವಂತಾದ್ದು ; ಸಾಧಾರಣವಾಗಿ ಯಾಗಗಳಲ್ಲಿ ಒಂದು ದೇವತೆಯ ಉದ್ದಿಶ್ಯವಾಗಿ ಒಂದು ವಿಧವಾದ ಹವಿಸ್ಸಿನ ಸಮರ್ಪಣವು, ಇದನ್ನು ಅಗ್ನಿಮುಖದಲ್ಲಿ ದ್ರವ್ಯತ್ಯಾಗಮೂಲಕ ಸಮರ್ಪಿಸತಕ್ಕದ್ದು ; ಈ ಸಂದರ್ಭದಲ್ಲಾದರೋ ಆತ್ಮಯಾಗವು ತುಂಬಾ ವಿಲಕ್ಷಣವಾದುದು: —(೧) ಯಜಮಾನನು ಹವಿಸ್ಸನ್ನು ಇತರ ಯಾಗಗಳಲ್ಲಿ ಸಮರ್ಪಿಸುವನು, ಇಲ್ಲಾದರೋ "**ಯಜ್ಞಸ್ಯಾತ್ಮಾ ಯಜಮಾನಃ**" ಎಂದು ಹೇಳಿರುವಹಾಗೆ ಸಮರ್ಪಿಸುವ ಯಜಮಾನನೂ ತಾನೇ, ಹವಿಸ್ಸೂ ತಾನೇ ; ತಾನೇ ತನ್ನನ್ನೇ ಸಮರ್ಪಿಸಿಕೊಳ್ಳುವದು. (೨) ಸಾಧಾರಣವಾಗಿ ಒಂದು ಹವಿಸ್ಸು ಒಂದು ದೇವತೆಗೆ ಮಾತ್ರವೇ ಸಮರ್ಪಿಸಲ್ಪಡುತ್ತದೆ. ಇಲ್ಲಿಯಾದರೋ ಈ ಆತ್ಮಹವಿಸ್ಸು ಲಕ್ಷ್ಮೀನಾರಾಯಣರಿಬ್ಬರಿಗೂ ಉದ್ದೇಶಿಸಿ ಸಮರ್ಪಿಸಲ್ಪಡುತ್ತದೆ ನಿಗಮಾಂತ ದೇಶಿಕರು ಇದನ್ನು ಶ್ರೀಸ್ತುತಿಯಲ್ಲಿ "**ಉದ್ದೇಶ್ಯತ್ವಂ ಜನನಿ ಭಜತೋರುಜ್ಝಿತೋಪಾಧಿ ಗಂಧಂ ಪ್ರತ್ಯಗ್ರೂಪೇ ಹವಿಷಿ ಯುವಯೋರೇಕಶೇಷಿತ್ವಯೋಗಾತ್**" ಎಂಬ ಶ್ಲೋಕದಲ್ಲಿ ಉಪಪಾದಿಸಿರುತ್ತಾರೆ (ದಾಸನು ಬರೆದಿರುವ ಶ್ರೀ ಸ್ತುತಿಯ ಟಿನೆಯ ಶ್ಲೋಕವನ್ನು ನೋಡಿ.) ಆದರೆ ಒಂದು ಹವಿಸ್ಸಿಗೆ ಇಬ್ಬರು ದೇವತೆಗಳು ಉದ್ದೇಶವಾಗಿರಬಹುದೋ ಎಂದರೆ ಅನೇಕ ಸಂದರ್ಭಗಳಲ್ಲಿ ಹಾಗೆ ಉಂಟು. "ತ್ವನ್ನೋ ಅಗ್ನೇ" ಎಂದಾರಂಭಿಸಿ ಆಜ್ಯಾಹುತಿಯನ್ನು "**ಅಗ್ನೀ ವರುಣಾಭ್ಯಾಂ ಇದಂ ನಮಮ**" ಎಂದು ಕೊಡುವದುಂಟು. (೩) ಯಾಗದಲ್ಲಿ ಹವಿಸ್ಸಮರ್ಪಣೆಯು ಮುಖ್ಯವಾಗಿ ಕಾರ್ಯರೂಪವಾದುದು. ಈ ಯಾಗದಲ್ಲಾದರೋ ಕರ್ಮವಿದ್ದರೂ ಮುಖ್ಯವಾಗಿ ಜ್ಞಾನರೂಪವಾದುದು. ಹೀಗೆ ಆತ್ಮಯಾಗವು ವಿಲಕ್ಷಣವಾದುದು ಎಂಬ ಭಾವವು.

ಮುಮುಕ್ಷುವು ಮಾಡುವ ಆತ್ಮಹವಿಸ್ಸಮರ್ಪಣವೇನೋ ಸರಿ ಎಂದು ಒಪ್ಪಿಕೊಳ್ಳಬಹುದು. ಇತರ **ಪುರಷಾರ್ಥ**ಗಳಿಗಾಗಿ ಮಾಡುವ **ಪ್ರಪತ್ತಿ**ಯಲ್ಲಿ ಆಜ್ಞೆಯು ಆತ್ಮಹವಿಸ್ಸಮರ್ಪಣವಲ್ಲವಷ್ಟೇ ಆ ಸಂದರ್ಭದಲ್ಲಿ ಹೇಗೆ ಎಂದು ಪ್ರಶ್ನಿಸಬಹುದೆಂದು ಭಾವಿಸಿ ತಾವೇ ಸಮಾಧಾನವನ್ನು ಹೇಳುತ್ತಾರೆ. ಸರ್ವಫಲಾರ್ಥಿಗಳಿಗೂ ಸಾಧಾರಣವಾದ ಆತ್ಮನಿಕ್ಷೇಪರೂಪವಾದ ಆಜ್ಞೆಯು **ರಕ್ಷಾಭರನ್ಯಾಸ**ವೆಂದು ಹಿಂದೆಯೇ "**ಅತ್ರ ರಕ್ಷಾ ಭರನ್ಯಾಸ**" ವೆಂಬ ಕಾರಿಕೆಯ ಮೂಲಕ ಸಾಜ್ಞಪ್ರಪದನಾಧಿಕಾರದಲ್ಲಿ ಹೇಳಲ್ಪಟ್ಟಿತ್ತೇವೆ ಎಂದು ಹೇಳುತ್ತಾರೆ ೧೦೬ನೆಯ ಪುಟ ನೋಡಿ. ಅಲ್ಲಿ ಆತ್ಮನಿಕ್ಷೇಪವು ಮೂರು ಅಂಶಗಳುಳ್ಳದು,

ಇವ್ವಾತ್ಮ ನಿಕ್ಷೇಪತ್ತಿಲ್ ಸರ್ವಫಲಾರ್ಥಿಗಳುಕ್ಕುಮ್ ಸಾಧಾರಣ ಮಾನ ಕರ್ತವ್ಯಸ್ವರೂಪಮುಮ್ ರಕ್ಷಾಭರನ್ಯಾಸ ಮೆನ್ನು ಮಿಡಮ್ ಮುನ್ಪೇ ಶೊನ್ನೋಮ್.

ಸ್ವರೂಪ ಫಲ, ರಕ್ಷಾಭರಸಮರ್ಪಣವುಳ್ಳದು. ಮೋಕ್ಷಾರ್ಥಿಯಾಗಿದ್ದರೆ ಇವು ಮೂರೂ ಆತ್ಮನಿಕ್ಷೇಪದಲ್ಲಿಯುಂಟು, ಮೋಕ್ಷಾರ್ಥಿಯಲ್ಲದಿದ್ದರೆ ರಕ್ಷಾಭರ ಸಮರ್ಪಣಮಾತ್ರವೇ, ಆದುದರಿಂದ ರಕ್ಷಾಭರಸಮರ್ಪಣವು, ಎಲ್ಲಾ ಪ್ರಪತ್ತಿಗಳಿಗೆ ಸಾಧಾರಣವಾದುದು ಎಂದು ಹಿಂದೆ ಹೇಳಿರುತ್ತದೆಂದು ತಿಳಿಸುತ್ತಾರೆ—**ಇವ್ವಾತ್ಮನಿಕ್ಷೇಪತ್ತಿಲ್** – ಈ ಪ್ರಪತ್ತಿಯ ಅಜ್ಞಿಯಲ್ಲಿ, **ಸರ್ವ ಫಲಾರ್ಥಿಗಳುಕ್ಕುಮ್** - ಚತುರ್ವಿಧ ಪುರುಷರ್ಥಗಳನ್ನು ಪ್ರಾರ್ಥಿಸುವವರಿಗೂ, **ಸಾಧಾರಣ ಮಾನ** - ಸಾಧಾರಣವಾದ, **ಕರ್ತವ್ಯಸ್ವರೂಪಂ** – ಅನುಷ್ಠಾನವು, ರಕ್ಷಾ ಭರ ನ್ಯಾಸವು, **ಎನ್ನುಮಿಡಂ** - ಎಂಬ ಸಂದರ್ಭವನ್ನು, **ಮುನ್ಪೇಶೊನ್ನೋಮ್** - ಹಿಂದೆ ಸಾಧ್ಯಪ್ರಪದನಾಧಿಕಾರದಲ್ಲಿ, **ಶೊನ್ನೋಮ್** - **"ಅತ್ರರಕ್ಷಾ ಭರ ನ್ಯಾಸ"** ವೆಂಬ ಕಾರಿಕೆಯ ಮೂಲಕ ಹೇಳಿದೆವು ಮೋಕ್ಷಾರ್ಥ ನಿಕ್ಷೇಪವು, ಸ್ವರೂಪ, ಫಲ ರಕ್ಷಾಭರನ್ಯಾಸವು, ಈ ಮೂರನ್ನೂ ಒಳಗೊಂಡುದೆಂದೂ, ವಿಕ್ಕ ಫಲಾಂತರಕ್ಕಾಗಿ ಮಾಡಿದ ನಿಕ್ಷೇಪವು ರಕ್ಷಾಭರನ್ಯಾಸಮಾತ್ರವುಳ್ಳದಿಂದ ಹಿಂದೆ ಹೇಳಲ್ಪಟ್ಟಿತೆಂಬ ತಾತ್ಪರ್ಯವು ಆದುದರಿಂದ ರಕ್ಷಾಭರನ್ಯಾಸರೂಪನಿಕ್ಷೇಪವು ಸರ್ವಫಲಾರ್ಥಿಗಳ ಪ್ರಪತ್ತಿಗಳಲ್ಲೂ ಅಜ್ಞಿಯಾದುದರಿಂದ **ಸರ್ವಫಲಾರ್ಥಿಗಳುಕ್ಕುಮ್ ಸಾಧಾರಣಮ್** ಎಂದು ಹೇಳಲ್ಪಟ್ಟಿರುತ್ತದೆ.

ಪ್ರಪತ್ತಿಯ ಅಜ್ಞಿ ಸ್ವರೂಪ ವಿಷಯದಲ್ಲಿ ಈಗ ಉಪಪಾದಿಸಲ್ಪಟ್ಟಿದ್ದು ಏನೆಂದರೆ—

೧ ಕೆಲವರು ಉಪಾಯತ್ವ ಪ್ರಾರ್ಥನೆಯೇ ಶರಣಾಗತಿಎಂದು ಹೇಳುತ್ತಾರೆ. ಇವರಿಗೆ ಪ್ರಮಾಣಗಳು :—

"ತ್ವಮೇವೋಪಾಯ ಭೂತೋ ಮೇ ಭವೇತಿ ಪ್ರಾರ್ಥನಾಮತಿಃ ।
ಶರಣಾಗತಿರಿತ್ಯುಕ್ತಾ ಸಾದೇನೇ ಸ್ಮಿ ಪ್ರಯುಜ್ಯತಾಂ" ॥

"ಅನನ್ಯಸಾಧ್ಯೇ ಸ್ವಾಭೀಷ್ಟೇ ಮಹಾವಿಶ್ವಾಸಪೂರ್ವಕಂ ।
ತದೇಕೋಪಾಯತಾ ಯಾಚ್ಞಾ ಪ್ರಪತ್ತಿಶ್ಶರಣಾಗತಿಃ" ॥

ಯಾಚ್ಞಾರೂಪ ಅಜ್ಞಿದ ಪ್ರಾಧಾನ್ಯವನ್ನು ಪ್ರದರ್ಶಿಸುವದಕ್ಕಾಗಿ ಈ ಪ್ರಮಾಣಗಳು ಅಜ್ಞವನ್ನು ಅಜ್ಞಿಯಾಗಿ ಹೇಳಿದವೆಂಬ ಸಮಾಧಾನವು.

ಹವಿಸ್ಸಮರ್ಪಣಾದತ್ರ ಪ್ರಯೋಗ ವಿಧಿ ಶಕ್ತಿತಃ ।
ಆತ್ಮರಕ್ಷಾ ಭರನ್ಯಾಸೋ೭ಕಿಂಚನಸ್ಯಾತಿರಿಚ್ಯತೇ ॥೩೭॥

೨. ಇನ್ನು ಕೆಲವರು, ಅಜ್ಞಾವಾದ ಮಹಾ ವಿಶ್ವಾಸವನ್ನೇ ಅಜ್ಞಾ ಎಂದು ಹೇಳುತ್ತಾರೆ. ಇವರಿಗೆ ಪ್ರಮಾಣವು—

ನಾರಾಯಣಂ ಸಲಕ್ಷ್ಮೀಕಂ ಪ್ರಾಪ್ತುಂ ತಚ್ಚರಣದ್ವಯಂ ।
ಉಪಾಯ ಇತಿ ವಿಶ್ವಾಸೋ ದ್ವಯಾರ್ಥ್ಯ ಶರಣಾಗತೇಃ ॥

ಇಲ್ಲಿಯೂ ಸಮಾಧಾನ ಹೇಗೆಂದರೆ—ಮಹಾ ವಿಶ್ವಾಸದ ಪ್ರಾಮುಖ್ಯತೆಯನ್ನು ಹೇಳುವದಕ್ಕೋಸ್ಕರ ಹಾಗೆ ಪ್ರಯೋಗವು.

ಆದುದರಿಂದ ಆತ್ಮನಿಕ್ಷೇಪವೇ ಅಜ್ಞಾಯೆ ವಿನಾ ಅನ್ಯಥಾ ಇಲ್ಲವೆಂದು ಹಿಂದೆ ಅನೇಕ ಪ್ರಮಾಣಗಳು (ಹತ್ತು) ಉದಾಹರಿಸಲ್ಪಟ್ಟವು ಮೋಕ್ಷಾರ್ಥಿಯು ಮಾಡುವಪ್ರಪತ್ತಿಯಲ್ಲಿ ಆತ್ಮರಕ್ಷಾಭರಸಮರ್ಪಣವೇ ಅಜ್ಞಾ ಎಂದೂ ಆದೂ ಒಂದು ಆತ್ಮಹವಿಸ್ಸಮರ್ಪಣರೂಪಯಾಗವೆಂದೂ, ಈ ಹವಿಸ್ಸಿಗೆ ಲಕ್ಷ್ಮೀನಾರಾಯಣರಿಬ್ಬರೂ ಉದ್ದೇಶ್ಯರೆಂದೂ ಹೇಳಲ್ಪಟ್ಟಿತು.

ಸ್ವತಂತ್ರಪ್ರಪತ್ತಿನಿಷ್ಠನಲ್ಲವ ಭಕ್ತ್ಯುಪಾಯನಿಷ್ಠನಿಗೂ ಆತ್ಮನ್ಯರೂಪ ಸಮರ್ಪಣವಿಲ್ಲವು. ಮತ್ತು ಮುಮುಕ್ಷುವಲ್ಲದ ಇತರರು ಮಾಡುವ ಶರಣಾಗತಿಯಲ್ಲೂ ಇಲ್ಲವು ಆದುದರಿಂದ ಎಲ್ಲಾ ಪ್ರಪತ್ತಿಗಳಿಗೂ ಸಾಧಾರಣವಾದ ಅಜ್ಞಾಯು ರಕ್ಷಾಭರ ಸಮರ್ಪಣವೆಂದು ಹೇಳಲ್ಪಟ್ಟಿತು.

ಇದರಮೇಲೆ ಇನ್ನೊಂದು ಆಕ್ಷೇಪವು ತೋರಿಬರುತ್ತದೆ. ಜ್ಯೋತಿಷ್ಟೋಮಾದಿಗಳಲ್ಲಿ ಹವಿಸ್ಸಮರ್ಪಣೆಯಿದ್ದರೂ ರಕ್ಷಾಭರಸಮರ್ಪಣೆಯಿಲ್ಲವು ಹೀಗಿರುವಾಗ ಈ ಪ್ರಪತ್ತಿಯಲ್ಲಿ ರಕ್ಷಾಭರಸಮರ್ಪಣೆಯನ್ನು ಏಕೆ ಅಜ್ಞಾಯಾಗಿ ಅಜ್ಞೀಕರಿಸತಕ್ಕದ್ದು ಎಂಬಾಕ್ಷೇಪಣೆಗೆ ೩೦ನೆ ಕಾರಿಕೆಯ ಮೂಲಕ ಸಮಾಧಾನವನ್ನು ಹೇಳುತ್ತಾರೆ.

ಅರ್ಥ— ಅತ್ರ - ಈ ಪ್ರಪತ್ತಿ ಪ್ರಕರಣದಲ್ಲಿ, ಆತ್ಮರಕ್ಷಾಭರನ್ಯಾಸಃ - ಆತ್ಮರಕ್ಷಣ ಭರನ್ಯಾಸವು, ಅಕಿಂಚನಸ್ಯ - ಅಕಿಂಚನನಾಗಿ ಮೋಕ್ಷಾರ್ಥಿಯಾಗಿ ಪ್ರಪತ್ತಿಮಾಡಿದವನಿಗೆ, ಹವಿಸ್ಸಮರ್ಪಣಾತ್ - ಹವಿಸ್ಸಮರ್ಪಣವಾದ ಆತ್ಮಯಾಗಕ್ಕಿಂತಲೂ ಅಧಿಕನಾ ಎನ್ನಾನಿನ ಹವಿಸ್ಸಮರ್ಪಣವಿರುವ ಯಾಗಕ್ಕಿಂತಲೂ, ಅತಿರಿಚ್ಯತೇ - ಅಧಿಕವಾದುದು, ಶ್ರೇಷ್ಠವಾದುದು, ಏಕೆಂದರೆ ಹೇಳುತ್ತಾರೆ. ಪ್ರಯೋಗವಿಧಿಶಕ್ತಿತಃ - ಪ್ರಯೋಗವಿಧಿ ಸಾಮ

ರ್ಯ್ಯದಿಂದ, ಪ್ರಯೋಗಪ್ರಕಾರವನ್ನು ವಿಧಿಸುವ ವಿಧಿಯು ಪ್ರಯೋಗವಿಧಿಯು; ಪ್ರಪದನಾನುಷ್ಠಾನಪ್ರಕಾರವನ್ನು ಬೋಧಿಸುವ ವಿಧಿಯು ಯಾವುದೆಂದರೆ:—

(೧) "ಆತ್ಮಾತ್ಮೀಯಭರಂ ಸರ್ವಂ ನಿಕ್ಷಿಪ್ಯ ಶ್ರೀಪತೇಃ ಪದೇ।
ಉಪಾಯಂ ವರಣಂ ಲಕ್ಷ್ಮೀಕಂ ತಮುಪೇಯುಂ ವಿಚಿಂತ್ಯ ಚ"॥

ಆತ್ಮಾತ್ಮೀಯ ಉಪಾಯ ಫಲಾದಿಗಳ ಸಮಸ್ತಭರವನ್ನೂ ಲಕ್ಷ್ಮೀ ಪತಿಯ ಪಾದಾರವಿಂದದಲ್ಲಿ ಸಮರ್ಪಿಸಿ ಆತನನ್ನೇ ಪ್ರಾಪ್ಯನೆಂದು ನಂಬಿ, ಆ ಲಕ್ಷ್ಮೀಪತಿಯನ್ನೇ ಉಪಾಯವಾಗಿ ವರಿಸು ಎಂಬುದು ಇದರರ್ಥವು

(೨) ಇನ್ನೊಂದು ಪ್ರಯೋಗವನ್ನು ವಿಧಿಸುವ ಪ್ರಮಾಣವೂ ಉಂಟು

"ಹವಿರ್ಗೃಹೀತ್ವಾತ್ಮರೂಪಂ ವಸುರಣ್ಯೇತಿ ಮಂತ್ರತಃ।
ಜುಹುಯಾತ್ಪ್ರಣವೇನಾಗ್ನೌ ವಚ್ಮಿತಾಖ್ಯೇ ಸನಾತನೇ"॥

ಆತ್ಮರೂಪವಾದ ಹವಿಸ್ಸನ್ನು ತೆಗೆದುಕೊಂಡು "ವಸುರಣ್ಯೋ ವಿಭೂರಸಿ" ಎಂಬ ಮಂತ್ರಮೂಲಕವಾಗಿ ಸನಾತನನಾದ ಲಚ್ಮಿತನೆಂಬ ಅಗ್ನಿಯಲ್ಲಿ ಓಂ ಎಂದು ಪ್ರಣವವನ್ನು ಚ್ಚರಿಸುತ್ತಾ ಹೋಮಮಾಡತಕ್ಕದ್ದು.

ಈ ಎರಡರಲ್ಲಿ ಒಂದನೆಯ ಪ್ರಯೋಗವಿಧಿಯಲ್ಲಿ "ಭರಂ ನಿಕ್ಷಿಪ್ಯ" ಎಂದು ಕಂಠೋಕ್ತವಾಗಿರುತ್ತದೆ ಎರಡನೆಯದರಲ್ಲಿ ಪ್ರಕರಣವನ್ನು ಪರ್ಯಾಲೋಚಿಸಿದರೆ "ಓಮಿತ್ಯಾತ್ಮಾನಂ ಯುಂಜೀತ" ಎಂದು ಕಿಂಚನಾಧಿಕಾರಿಯ ವಿಷಯವಾದುದರಿಂದ, ರಕ್ಷಾಭರನ್ಯಾಸವಿಲ್ಲದೆ ಉಪಾಯತ್ವವೇ ಸಿದ್ಧಿಸುವುದಿಲ್ಲವಾದುದರಿಂದ ಈ ಪ್ರಯೋಗವಿಧಿಯಲ್ಲಿಯೂ ರಕ್ಷಾಭರನ್ಯಾಸವು ಹೇಳಲ್ಪಟ್ಟಿತೆಂದು ಗ್ರಹಿಸಬಹುದು ಹೇಗೆಂದರೆ.—"ಓಂ ಇತ್ಯಾತ್ಮಾನಂ ಯುಂಜೀತ" ಎಂದಿರುವುದರಿಂದ ಓಂ ಎಂಬ ಪ್ರಣವ ಮಂತ್ರವು ಹವಿಸ್ಸಮರ್ಪಣಕ್ಕೆ ಕರಣಮಂತ್ರವಾಯಿತು ಆ ಪ್ರಣವದಲ್ಲಿ ಕಾರವಾಚ್ಯನಾದ ಲಕ್ಷ್ಮೀ ವಿಶಿಷ್ಟ ಶ್ರೀಮಹಾವಿಷ್ಣುವಿನಲ್ಲಿ ಮಕಾರವಾಚ್ಯನಾದ ಜೀವನು ಸಮರ್ಪಣವು ತೋರಿಬರುತ್ತದೆ. ಅಕಾರದಲ್ಲಿ ತೋರುವ ಅವರಕ್ಷಣೆ ಎಂಬ ಧಾತ್ವರ್ಥ ವ್ಯುತ್ಪತ್ತಿಯಮೂಲಕ ರಕ್ಷಣೆಯಲ್ಲಿ ಸರ್ವ ಸಮರ್ಥನಾದವನಲ್ಲಿ ರಕ್ಷ್ಯವಸ್ತುವಾದ ಆತ್ಮನನ್ನು ಸಮರ್ಪಿಸುವೆನೆಂದು ಅನುಸಂಧಾನದಿಂದ, ರಕ್ಷಾಭರನ್ಯಾಸವು ಕಂಠೋಕ್ತವಾಗಿಯಿಲ್ಲದಿದ್ದರೂ ಅರ್ಥವಾಗಿ ಭಾವಿಸಬಹುದು. ಇನ್ನೊಂದು ಪ್ರಯೋಗ ವಿಧಿಯು ಕಠವಲ್ಲಿಯಲ್ಲಿ "ಸತ್ಯಂ ತದ್ಧ್ಯಯಂ ಸಕೃದುಚ್ಚರ್ಯೋ ಭವತಿ" ಎಂದು ಹೇಳಿರುವ ಹಾಗೆ ದ್ವಯೋಚ್ಚಾರಣೆಯು ಮೂಲಕ ಶರಣಾಗತಿಯು; ಪ್ರಪದ ಉತ್ತರ ಖಂಡದಲ್ಲಿ ಆತ್ಮಸಿದ್ಧೇಪವು ಸೂಚಿತವು.

ಹೀಗೆ ಈ ಪ್ರಯೋಗವಿಧಿಗಳ ಆತ್ಮಾತ್ಮೀಯ ಭರನ್ಯಾಸವು ಹೇಳಲ್ಪ

ಸ್ವಪ್ರವೃತ್ತಿನಿವೃತ್ತಿರೇವ ಪ್ರಪತ್ತಿರಿತಿ ವಾಕ್ಯಸ್ಯ ತಾತ್ಪರ್ಯಂ

ಅತಃ ಶ್ರೀ ರಾಮಮಿಶ್ರಾದ್ಯೈ ರ್ಭರನ್ಯಾಸ ವಿವಕ್ಷಯಾ
ಸ್ವಪ್ರವೃತ್ತಿನಿವೃತ್ತ್ಯಂಶಃ ಪ್ರಪತ್ತಿರಿತಿ ಲಕ್ಷಿತಃ ॥೩೮॥

ಟ್ಟಿತೆಂದು ಭಾವಿಸಬಹುದು. ಇತರ ಯಾಗಗಳಲ್ಲಿ ಹವಿಸ್ಸಮರ್ಪಣವಿದ್ದರೂ ಈ ರಕ್ಷಾಭರನ್ಯಾಸವು ಇಲ್ಲವು ಆದುದರಿಂದ ಇತರ ಯಾಗಗಳಿಗಿಂತ ಈ ಆತ್ಮ ಯಾಗದಲ್ಲಾದರೋ ಆತ್ಮರಕ್ಷಾಭರಸಮರ್ಪಣವು ಅಧಿಕವೆಂದು ಪ್ರಯೋಗವಿಧಿ ಪ್ರಮಾಣಗಳ ಸಾಮರ್ಥ್ಯದಿಂದ ಗ್ರಹಿಸಬಹುದೆಂಬುದು ತಾತ್ಪರ್ಯವು

ಅವತಾರಿಕೆ. ಆತ್ಮರಕ್ಷಾಭರನ್ಯಾಸವೇ ಪ್ರಪತ್ತಿಯು ಸ್ವರೂಪವೂ; ಅದೇ ಅಙ್ಗಿ ಎಂದು ಸ್ಥಾಪಿಸಲ್ಪಟ್ಟಿತು. ಆದರೆ ಶ್ರೀರಾಮಮಿಶ್ರರೇ ಮೊದಲಾದ ಪೂರ್ವಾಚಾರ್ಯರುಗಳು, ಸ್ವಪ್ರವೃತ್ತಿನಿವೃತ್ತಿಯೇ ಪ್ರಪತ್ತಿ ಎಂದು ಹೇಳಿದರಲ್ಲಾ ಅದು ಹೇಗೆ? ಅವರುಗಳ ಅಭಿಪ್ರಾಯವು ಈ ಅಭಿಪ್ರಾಯಕ್ಕೆ ವಿರೋಧವೇ ಹೇಗೆ ಎಂಬ ಶಙ್ಕೆಗೆ ಈ ಕಾರಿಕೆಯು ಸಮಾಧಾನವನ್ನು ಹೇಳುತ್ತದೆ. ಅವರುಗಳ ಅಭಿಪ್ರಾಯವೂ ಸಹ ಈ ರಕ್ಷಾಭರನ್ಯಾಸವೇ ಪ್ರಪತ್ತಿ ಎಂಬುದನ್ನೇ ಸಮರ್ಥಿಸುತ್ತದೆ ಎಂದು ತಿಳಿಸುತ್ತಾರೆ.

ಸ್ವಪ್ರವೃತ್ತಿನಿವೃತ್ತಿಯೇ ಪ್ರಪತ್ತಿ ಎಂಬ ವಾಕ್ಯದತಾತ್ಪರ್ಯವು.

ಅತಃ-ಆ ಕಾರಣದಿಂದಲೇ ಎಂದರೆ ಹಿಂದೆ ಉದಾಹರಿಸಲ್ಪಟ್ಟ ಅನೇಕ ಪ್ರಮಾಣಗಳಿಂದಲೂ, ಈ ಪ್ರಯೋಗವಿಧಿ ಸಾಮರ್ಥ್ಯದಿಂದಲೂ ಆತ್ಮರಕ್ಷಾಭರನ್ಯಾಸವೇ ಅಕಿಂಚನನ ಪ್ರಪತ್ತಿಯಲ್ಲಿ ಅಙ್ಗಿಯಾದುದರಿಂದಲೇ **ಶ್ರೀರಾಮಮಿಶ್ರಾದ್ಯೈಃ** - ಶ್ರೀರಾಮಮಿಶ್ರರೇ ಮೊದಲಾದ ಪೂರ್ವಾಚಾರ್ಯರುಗಳಿಂದ, **ಭರನ್ಯಾಸ ವಿವಕ್ಷಯಾ** - ಆತ್ಮರಕ್ಷಾಭರನ್ಯಾಸವೇ ಪ್ರಪತ್ತಿಯು ಎಂದು ಹೇಳಬೇಕೆಂಬ ತಾತ್ಪರ್ಯದಿಂದ, **ಸ್ವಪ್ರವೃತ್ತಿ ನಿವೃತ್ತ್ಯಂಶಃ ಪ್ರಪತ್ತಿರಿತಿ** - ಭರನ್ಯಾಸ ಮಾಡಿದನಂತರ ಉತ್ತರಕಾಲದಲ್ಲಿ ಬೇರೇ ಉಪಾಯಾನುಷ್ಠಾನರೂಪ ಪ್ರಪತ್ತಿಯಿಂದ ನಿವೃತ್ತಿ ಎಂಬ ವಿಷಯವೇ ಪ್ರಪತ್ತಿಯೆಂದೂ ಅಥವಾ ಉಪಾಯಾಂತರ ಪ್ರವೃತ್ತಿಗೆ ಸಾಮರ್ಥ್ಯವಿಲ್ಲದುದರಿಂದ ಅದರಿಂದ ನಿವೃತ್ತಿರೂಪವಾದ ಆಕಿಂಚನ್ಯವೇ ಪ್ರಪತ್ತಿ ಎಂದೂ, **ಲಕ್ಷಿತಃ** - ಲಕ್ಷಣವಾಗಿ ಹೇಳಲ್ಪಟ್ಟಿತು. ಇದರಭಿಪ್ರಾಯವು ಇಷ್ಟೇ. ದೇಹವನ್ನು ಧರಿಸಿರುವ ಆತ್ಮನಿಗೆ ಎಲ್ಲಾ ಸ್ವವೃತ್ತಿಯಿಂದ ನಿವೃತ್ತಿ ಎಂಬುದು ಸಾಧ್ಯವೇ ಇಲ್ಲವು. ನಿತ್ಯನೈಮಿತ್ತಿಕ ಕರ್ಮತ್ಯಾಗವು

ಸ್ವಪ್ರವೃತ್ತಿ ನಿವೃತ್ತಿ ಎಂಬುದರಿಂದ ಎಂದಿಗೂ ಸರಿಯಾದುದಿಲ್ಲವಷ್ಟೇ. ಆದುದರಿಂದ ಸ್ವಪ್ರವೃತ್ತಿ ನಿವೃತ್ತಿ ಶಬ್ದದಿಂದ ಭಗವದ್ವ್ಯತಿರಿಕ್ತಗಳಾದ, ಮತ್ತು ಉಪಾಯಾಂತರಗಳಾದ ಪ್ರವೃತ್ತಿಗಳಿಂದ ನಿವೃತ್ತಿ ಎಂದು ಅರ್ಥಮಾಡತಕ್ಕದ್ದು. ಇಂತಹ ಪ್ರವೃತ್ತಿ ನಿವೃತ್ತಿಯು, ಭಗವಂತನೇ ಉಪಾಯವೇ ವಿನಾ ಇತರರಲ್ಲ ವೆಂದು ನಂಬಿ, ಅವನಲ್ಲೇ ಸಮಸ್ತ ಭರವನ್ನು ಸಮರ್ಪಿಸಿದುದಲ್ಲದೇ ಉಂಟಾಗಲಾರದು ಎಲ್ಲೆಲ್ಲ ಸ್ವವ್ಯಾಪಾರತ್ಯಾಗವುರಬೇಕೋ ಅಲ್ಲಿಲ್ಲಿ ರಕ್ಷಾಭರನ್ಯಾಸವಿದ್ದೇ ಇರಬೇಕು ಎಂದು ವ್ಯಾಪ್ತಿಯನ್ನೂ ಹೇಳಬಹುದು ಆದುದರಿಂದ ಶ್ರೀರಾಮ ಮಿಶ್ರಾದಿಗಳು ಪ್ರಪತ್ತಿಲಕ್ಷಣವನ್ನುಪದೇಶಿಸಿದುದು ಆತ್ಮರಕ್ಷಾ ಭರನ್ಯಾಸಾಭಿಪ್ರಾಯಕ್ಕೆ ವಿರೋಧವಿಲ್ಲದೆ ಆ ಅಭಿಪ್ರಾಯವನ್ನೇ ಚನ್ನಾಗಿ ಸಮರ್ಥಿಸಿ ಹೇಳಿದ ರೆಂಬ ಭಾವವು ಭರನ್ಯಾಸವನ್ನು ಮಾಡದೆ ರಕ್ಷಾಪೇಕ್ಷೆಯನ್ನು ಮಾಡಿದರೆ ಸ್ವಪ್ರವೃತ್ತಿ ನಿವೃತ್ತಿಯು ಎಂದಿಗೂ ಸಿದ್ಧಿಸದು ಒಂದು ಅಮೋಘಾಭರಣವನ್ನು ರಕ್ಷಿಸುವ ಶಕ್ತಿಯಿಲ್ಲದವನು ಆಭರಣವನ್ನು ತನ್ನಲ್ಲಿಯೇ ಇಟ್ಟುಕೊಂಡು ಇನ್ನೊಬ್ಬ ಶಕ್ತನನ್ನು ಕಾಪಾಡು ಎಂದು ಪ್ರಾರ್ಥಿಸುವದರಿಂದ ತನ್ನ ಮನೋರಥವೂ ಸಿದ್ಧಿಸದು, ಮತ್ತು ಆಭರಣವು ತನ್ನಲ್ಲಿಯೇ ಇರುವದರಿಂದ ಸ್ವಪ್ರವೃತ್ತಿ ನಿವೃತ್ತಿಯೂ ಸಿದ್ಧಿಸದು. ಶಕ್ತನು ಅವನ್ನು ಕಾಪಾಡಬೇಕಾದರೆ ಆಭರಣವನ್ನು ಅವನಲ್ಲಿ ಸಮರ್ಪಿಸಿಬಿಟ್ಟು ರಕ್ಷಾಭರವನ್ನೂ ಅವನಲ್ಲಡತಕ್ಕದ್ದು. ಶ್ರೀರಾಮ ಮಿಶ್ರಾದಿಗಳು ಹೇಳಿದುದು ಸ್ವಪ್ರವೃತ್ತಿ ನಿವೃತ್ತಿಯೇ ಪ್ರಪತ್ತಿ ಎಂದು; ಇಲ್ಲಿ ಕಾರಿಕೆಯಲ್ಲಾದರೋ ಸ್ವಪ್ರವೃತ್ತಿ ನಿವೃತ್ತ್ಯಂಶಃ ಪ್ರಪತ್ತಿಃ ಎಂದು; ಹೀಗೆ ಹೇಳಿರುವದರಭಿಪ್ರಾಯವು, ಪ್ರಪತ್ಯುತ್ತರಕಾಲದಲ್ಲಿ ಯಾವದೊಂದು ತದ್ವಿಷಯಿಕ ಪ್ರವೃತ್ತಿಯೂ ಬೇಡವೆಂದು ಸೂಚಿಸುತ್ತದೆ ಅದೀಗ ಅವರುಗಳ ತಾತ್ಪರ್ಯವೆಂಬ ಭಾವವು ಈ ಶ್ಲೋಕದಲ್ಲಿ ಹೇಳಿರುವ ಶ್ರೀ ರಾಮಮಿಶ್ರರು ಯಾರು ಎಂಬುದರಲ್ಲಿ ಶ್ರೀ ಶೆಟ್ಟಲೂರು ನರಸಿಂಹಾಚಾರ್ಯರವರು ಉಯ್ಯಕೊಂಡಾರರು ಎಂದು ಬರೆದಿರುತ್ತಾರೆ. ಉಯ್ಯಕೊಂಡಾರರು ನಾಥಮುನಿಗಳ ಶಿಷ್ಯರು. ಇವರಿಗೆ ಪುಂಡರೀಕಾಕ್ಷರೆಂಬ ಹೆಸರುಂಟು. ಶ್ರೀ ರಾಮ ಮಿಶ್ರರೆಂಬ ಹೆಸರುಂಟೆಂಬುದು ತಿಳಿಯದು. ಸಾರದೀಪಿಕೆ ವ್ಯಾಖ್ಯಾತೃವು ಶೋಮಾಶಿಯಾಂಡ್ಯಿ ಎಂದು ಬರೆದಿರುತ್ತಾರೆ. ಇದೀಗ ಸರಿಯಾದ ಅಭಿಪ್ರಾಯವಾಗಿ ತೋರುತ್ತದೆ ಯಾಮುನೇಯರ ಗುರುವಾದ ಮಣಕ್ಕಾಲ್ ನಂಬಿಗೂ ಶ್ರೀರಾಮ ಮಿಶ್ರರೆಂಬ ಹೆಸರುಂಟು.

ಈ ಅಭಿಪ್ರಾಯಗಳು ಮುಂದಿನ ಕಾರಿಕೆಯಲ್ಲಿ ಸ್ಫುಟವಾಗಿ ಉಪಪಾದಿಸಲ್ಪಡುತ್ತವೆ. ರಕ್ಷಾಪೇಕ್ಷೆಯೇ ಸಾಲದೇ? ಭರನ್ಯಾಸವು ಹೇಗೆ ಆವಶ್ಯಕವು? ಎಂಬುದು ಕೆಲವರ ಆಕ್ಷೇಪವು ರಕ್ಷಾಪೇಕ್ಷೆಯನ್ನು ಯಾಚಿಸಿದನಂತರ, ಸ್ವಪ್ರ

ಭರನ್ಯಾಸಸ್ಯ ಆವಶ್ಯಕತ್ವೇಂ

ಅಕೃತೇತು ಭರನ್ಯಾಸೇ ರಕ್ಷಾಪೇಕ್ಷಣ ಮಾತ್ರತಃ ।
ಪಶ್ಚಾತ್ಸ್ವಯತ್ನ ವಿರತಿರ್ನಪ್ರಸಿಧ್ಯತಿ ಲೋಕವತ್ ॥೮೯॥

ವೃತ್ತಿ ನಿವೃತ್ತಿಯುಂಟಾಗಬೇಕೆಂದೂ ಅದೇ ಪ್ರಪತ್ತಿಎಂದೂ **ಪೂರ್ವಾ**ಚಾರ್ಯರುಗಳು ಹೇಳಿದರು. ಇದು ಆತ್ಮನಿವೇದನೆಯು ಭರನ್ಯಾಸವಿಲ್ಲದೆ ಉಂಟಾಗುವುದೆಂದು ಮುಂದಿನ ಕಾರಿಕೆಯಿಂದ ಉಪದೇಶಿಸುತ್ತಾರೆ.

ಭರನ್ಯಾಸದ ಆವಶ್ಯಕತೆಯು.

ಅರ್ಥ:—**ಭರನ್ಯಾಸೇ** - ಭರನ್ಯಾಸವು, **ಅಕೃತೇತು** - ಮಾಡಲ್ಪಡದೇ ಇರಲಾಗಿ, ಇಲ್ಲಿ ತು ಶಬ್ದವು ಪಕ್ಷಾಂತರವನ್ನು ವ್ಯಾವರ್ತಿಸುತ್ತದೆ; ಇಲ್ಲಿ ಶಬ್ದಾಯಾವುದೆಂದರೆ ಭರನ್ಯಾಸವಿಲ್ಲದೆ ಸ್ವಪ್ರಯತ್ನ ನಿವೃತ್ತಿರೂಪವಾದ ನಿರ್ಭರತ್ವವು **ಉಂ**ಟಾಗುವದಿಲ್ಲವೆಂದು ಹೇಳಲ್ಪಟ್ಟಿತು; ಹಾಗಾದರೆ ಹೇಗೆ ಭರನ್ಯಾಸವಿಲ್ಲದೆ **ಬರೀ** ರಕ್ಷಾಪೇಕ್ಷಣಮಾತ್ರದಿಂದ ಸ್ವಪ್ರಯತ್ನ ನಿವೃತ್ತಿಯುಂಟಾಗುತ್ತದೆ? ಎಂಬುದು ಶಬ್ದಾ; ಈ ಶಬ್ದಾನ್ವಾವೃತ್ತಿಯು ಇಲ್ಲಿ ಹೇಳಲ್ಪಡುತ್ತದೆ, ಭರನ್ಯಾಸವು ಮಾಡಲ್ಪಡದೇ ಹೋದರೆ, **ರಕ್ಷಾಪೇಕ್ಷಣ ಮಾತ್ರತಃ**-ರಕ್ಷಾಪೇಕ್ಷೆಯನ್ನು ಮಾಡ ವದರ ಮಾತ್ರದಿಂದಲೇ, **ಸ್ವಯತ್ನವಿರತಿಃ** - ಸ್ವಪ್ರಯತ್ನದಿಂದ ನಿವೃತ್ತಿಯು, **ನ ಪ್ರಸಿಧ್ಯತಿ** - ಸಿದ್ಧಿಸುವದಿಲ್ಲವು; ಹೇಗೆಂದರೆ ಹೇಳುತ್ತಾರೆ, **ಲೋಕವತ್** - ಲೋಕದೃಷ್ಟಾಂತದಲ್ಲಿ ಹೇಗೋ ಹಾಗೆಯೇ ಈ ಸಂದರ್ಭದಲ್ಲೂ ಎಂಬ ಭಾವವು. ಒಬ್ಬನು ತನ್ನ ಧನವನ್ನು ಈ ಆಪತ್ಕಾಲದಲ್ಲಿ ತನ್ನ ಆಪೇಕ್ಷೆಯಿಲ್ಲದೇನೆ ನೀನೇ ರಕ್ಷಿಸತಕ್ಕದ್ದೆಂದು ಪ್ರಾರ್ಥಿಸಿ ತನ್ನ ಧನವನ್ನು ಒಬ್ಬ ಸಮರ್ಥನಲ್ಲಿಟ್ಟು ಬಿಟ್ಟರೆ ತಾನು ನಿರ್ಭರನಾಗಿ ಆ ಧನದ ರಕ್ಷಣೆಯಲ್ಲಿ ಏನೊಂದೂ ಪ್ರವರ್ತಿಸದೆ ನಿಶ್ಚಿಂತೆಯಿಂದ ಇರಬಹುದು. ಆದರೆ ಹಾಗೆಮಾಡದೆ ಧನವನ್ನು ತನ್ನಲ್ಲಿಯೇ ಇಟ್ಟುಕೊಂಡು ಅದನ್ನು ರಕ್ಷಿಸು ಎಂಬ ಪ್ರಾರ್ಥನೆಮಾತ್ರದಿಂದ, ಸ್ವಪ್ರವೃತ್ತಿನಿವೃತ್ತಿರೂಪ ನಿರ್ಭರತ್ವವುಂಟಾಗಲಾರದು. ಯಾವಾಗ ಕಳ್ಳರು ಬಂದು ಕದ್ದೊಯ್ವರೋ ಎಂಬ ಭೀತಿಯೂ ಚಿಂತೆಯೂ, ಅದಕ್ಕಾಗಿ ಪ್ರವೃತ್ತಿಯೂ ತಪ್ಪಿದ್ದಲ್ಲವು,

೧ ಆದುದರಿಂದ ಶ್ರೀ ರಾ ಮಿಶ್ರರ ಸ್ವಪ್ರವೃತ್ತಿ ನಿವೃತ್ತಿಯೇ ಪ್ರಪತ್ತಿಯು, ಎಂದು ಹೇಳಿದ ಲಕ್ಷಣವಾಕ್ಯದ ತಾತ್ಪರ್ಯವೇನೆಂದರೆ :—**ಆತ್ಮರಕ್ಷಾ**

ಭರವು, ಓ ಕೃಪಾಸಾಗರನೇ ನಿನ್ನದೇ ವಿನಾ ನನಗೆ ಅದರಲ್ಲಿ ಸ್ವಲ್ಪವೂ ಸಂಬಂಧ ವಿಲ್ಲವು ಎಂದು ಹೇಳಿ ಭರನ್ಯಾಸವನ್ನು ಮಾಡಿದರೆ, ಅನಂತರ ಅದರಿಂದ ಸ್ವಪ್ರವೃತ್ತಿಯ ನಿವೃತ್ತಿಯುಂಟಾಗಿ ತನಗೆ ಆಕಿಂಚನ್ಯವು ಪ್ರಾಪ್ತವಾಗುತ್ತದೆಂಬ ತಾತ್ಪರ್ಯವು.

೨. ಹಾಗೆಯೇ ಭರತಮುನಿಗಳ ಲಕ್ಷಣವಾಕ್ಯವಾದ

ಅನನ್ಯಸಾಧ್ಯೇ ಸ್ವಾಭೀಷ್ಟೇ ಮಹಾವಿಶ್ವಾಸಪೂರ್ವಕಂ।

ತದೇಕೋಪಾಯತಾ ಯಾಚ್ಞಾ ಪ್ರಪತ್ತಿಶ್ಶರಣಾಗತಿಃ॥ ಎಂಬುದರ ತಾತ್ಪರ್ಯವೇನೆಂದರೆ, ಗೋಪ್ತೃತ್ವ ವರಣರೂಪವಾದ ಅಜ್ಞೆಯಿಲ್ಲದೆ ಸಮರ್ಪಿಸಿದ ಭರನ್ಯಾಸವನ್ನು ಅಜ್ಞೀಕರಿಸುವುದಿಲ್ಲವಾದುದರಿಂದ, ಈ ಆವಶ್ಯಕವಾದ ಅಜ್ಞೆಯಾಗಿರುವ ಉಪಾಯತ್ವ ಪ್ರಾರ್ಥನೆಯಿಂದ ಭರಸ್ವೀಕಾರ ಸಿದ್ಧಿಯುಂಟಾಗುತ್ತದೆ ಎಂಬುದು (೧೦೫ನೆಯ ಪುಟನೋಡಿ)

೩ ಹಾಗೆಯೇ ಲಕ್ಷ್ಮೀತಂತ್ರದ ಲಕ್ಷಣವಾಕ್ಯವಾದ **"ಆತ್ಮಾತ್ಮೀಯ ಭರನ್ಯಾಸೋ ಹ್ಯಾತ್ಮನಿಕ್ಷೇಪ ಉಚ್ಯತೇ"** ಆತ್ಮ ಭರನ್ಯಾಸವೂ ಮತ್ತು ಉಪಾಯ ಫಲಾದಿಗಳ ಭರನ್ಯಾಸವೂ, ಆತ್ಮ ನಿಕ್ಷೇಪರೂಪ ಅಜ್ಞೆ ಎಂದು ಹೇಳಿಸಿಕೊಳ್ಳುತ್ತದೆ. ಹೀಗೆಯೇ ಅಹಿರ್ಬುಧ್ನ್ಯ ಸಂಹಿತೆ, ಸಾತ್ವತಿಕತಂತ್ರ ಮೊದಲಾದ ಬಹು ಪ್ರಮಾಣಗಳು ಭರನ್ಯಾಸವೇ ಲಕ್ಷಣವಾಗಿ ಹೇಳುತ್ತವೆ. ಆದುದರಿಂದ ಇದೇ ಅಜ್ಞೆ ಎಂದು ಭಾವಿಸಿ, ಇದಕ್ಕೆ ವಿರೋಧವಿಲ್ಲದೆ ಇತರ ಲಕ್ಷಣ ವಾಕ್ಯಗಳನ್ನು ಅನ್ವಯಿಸತಕ್ಕದ್ದು ನ್ಯಾಯವೆಂಬ ಭಾವವು. ಈ "ಆತ್ಮಾತ್ಮೀಯ ಭರನ್ಯಾಸಃ" ಎಂಬುದಕ್ಕೆ ತನ್ನ ಮತ್ತು ತನಗೆ ಸೇರಿದವರ ರಕ್ಷಾಭರವೆಂದು ೧೦೬ನೆಯ ಪುಟದಲ್ಲಿ ಬರೆದಿರುತ್ತದೆ. ಸ್ವಾಮಿ ನಿಗಮಾಂತ ದೇಶಿಕರ ನ್ಯಾಸವಿಂಶತಿಯ ೧೦ನೆಯ ಶ್ಲೋಕ ವ್ಯಾಖ್ಯಾನದಲ್ಲಿ **ಆತ್ಮೀಯ** ಎಂಬುದಕ್ಕೆ **ಉಪಾಯಫಲಾದಿ** ಎಂದು ವ್ಯಾಖ್ಯಾನ ಮಾಡಿರುವುದರಿಂದ ಆತ್ಮಭರವೇನು ಆತ್ಮೀಯವಾದ ಉಪಾಯ ಫಲಗಳೇನು ಇವುಗಳ ಭರನ್ಯಾಸವೆಂದು ಅರ್ಥಮಾಡುವುದೂ ಸರಿಯಾದುದರಿಂದ ಇವೂ ಕೂಡ ಅಲ್ಲಿಯೂ ಅಂತರ್ಗತವು ಇದು ಯಥಾಶ್ರುತ ಭರನ್ಯಾಸ ಪರವಾದ ವಾಕ್ಯವು ಈ ಮೂರು ಲಕ್ಷಣವಾಕ್ಯಗಳಿಗೂ ಅರ್ಥಹೇಳಿ ಸಮನ್ವಯಮಾಡಿ ಪರಸ್ಪರ ವಿರೋಧ ವಿಲ್ಲವೆಂದು ತೋರಿಸುವುದೇ ಮುಖ್ಯವು. ಮೂರನೆಯದರಲ್ಲಿ ಅಜ್ಞೆಯು ಸಾಕಾಙ್ಕ್ಷತ್ವಾಗಿ ಹೇಳಲ್ಪಟ್ಟಿತು. ಮೊದಲನೆಯದರಲ್ಲಿ ಸ್ವಪ್ರವೃತ್ತಿ ನಿವೃತ್ತಿಗೂ ಭರನ್ಯಾಸಕ್ಕೂ ವ್ಯಾಪ್ಯ ವ್ಯಾಪಕ ಭಾವರೂಪದಲ್ಲಿ ಅಜ್ಞಾಜ್ಞಿಭಾವವಿರುವುದರಿಂದ ಅಜ್ಞೇ ದವು ಹೇಳಲ್ಪಟ್ಟಿತೆಂದು ಭಾವಿಸತಕ್ಕದ್ದು. ಎಲ್ಲಿ ಭರನ್ಯಾಸವಿದೆಯೋ ಅಲ್ಲಿ ಸ್ವಪ್ರವೃತ್ತಿ ನಿವೃತ್ತಿಯುಂಟು. ಎಲ್ಲಿ ಭರನ್ಯಾಸವಿಲ್ಲವೋ, ಅಲ್ಲಿ ಸ್ವಪ್ರವೃತ್ತಿ ನಿವೃತ್ತಿ

ಪ್ರಪತ್ತಿ ಲಕ್ಷಣ ವಾಕ್ಯಾನಾಂ ಐಕಕಂಠ್ಯಂ ಸಿದ್ಧಮ್

ಆಕಿಂಚನ್ಯ ಭರನ್ಯಾಸೋಪಾಯತ್ವ ಪ್ರಾರ್ಥನಾತ್ಮನಾಂ।
ತ್ರಯಾಣಾಂ ಸೌಹೃದಂ ಸೂಕ್ಷ್ಮಂ ಯಃ ಪಶ್ಯತಿ ಸ ಪಶ್ಯತಿ॥೪೦॥

ಯಿರುವವಿಲ್ಲವೆಂದು ಎರಡಕ್ಕೂ ಸಾಮಂಜಸ್ಯವನ್ನು ಹೇಳತಕ್ಕದ್ದು. ಮತ್ತು ಎರಡನೆಯದರಲ್ಲಿ ಉಪಾಯತ್ವ ಪ್ರಾರ್ಥನೆಗೂ ಭರನ್ಯಾಸಕ್ಕೂ ಜನ್ಯ ಜನಕಭಾವ ವಿರುವದರಿಂದ ಅಙ್ಗಾಙ್ಗಿ ಭಾವದಿಂದ ಎರಡಕ್ಕೂ ಅಭೇದ ಹೇಳಲ್ಪಟ್ಟಿತೆಂದು ಭಾವಿಸುವದರಿಂದ ಸಾಮಂಜಸ್ಯವುಂಟಾಗುತ್ತದೆ.

ಹೀಗೆ ಈ ಮೂರು ಲಕ್ಷಣವಾಕ್ಯಗಳು ಪರಸ್ಪರ ವಿರುದ್ಧವಾದವಲ್ಲವು, ಮೂರೂ ಐಕಕಂಠ್ಯದಿಂದ ಭರನ್ಯಾಸನೇ ಅಙ್ಗಿ ಎಂದು ಸ್ಥಾಪಿಸುತ್ತವೆಂದು ತಿಳಿಸುವದಕ್ಕಾಗಿ, ಮುಂದಿನ ಕಾರಿಕೆಯನ್ನು ಅನುಗ್ರಹಿಸುತ್ತಾರೆ. ಹೀಗೆ ಮೂರು ವಾಕ್ಯಗಳ ತಾತ್ಪರ್ಯಗಳನ್ನು ಚನ್ನಾಗಿ ವಿಮರ್ಶಿಸಿ ತಿಳಿದು ಐಕಕಂಠ್ಯವನ್ನು ಸ್ಥಾಪಿಸುವನೇ ಜ್ಞಾತಾ ಎಂದು ಹೇಳುತ್ತಾರೆ.

ಈ ಮೂರುವಿಧ ಪ್ರಪತ್ತಿ ಲಕ್ಷಣವಾಕ್ಯಗಳಿಗೂ ಐಕಕಂಠ್ಯವು ಸಿದ್ಧವು

ಆಕಿಂಚನ್ಯಭರನ್ಯಾಸೋಪಾಯತ್ವ ಪ್ರಾರ್ಥನಾತ್ಮನಾಂ – ಶ್ರೀರಾಮ ವಿಶ್ವರ ವಾಕ್ಯದಲ್ಲಿ ತೋರುವ ಆಕಿಂಚನ್ಯನೇನು, ಲಕ್ಷ್ಮೀಕಂತ್ರವಾಕ್ಯದಲ್ಲಿ ಹೇಳಲ್ಪಟ್ಟ ಭರನ್ಯಾಸನೇನು, ಭರತಮುನಿಯ ವಾಕ್ಯದಲ್ಲಿ ತೋರುವ ಉಪಾಯ. ಪ್ರಾರ್ಥನೆ ಏನು, ಈ ರೂಪಗಳಾಗಿರುವ, **ತ್ರಯಾಣಾಂ** – ಮೂರಕ್ಕೂ **ಸಹ**, **ಸೂಕ್ಷ್ಮಂ** – ಮಂದಮತಿಗಳಿಗೆ ತೋರಲು ಅಸಾಧ್ಯವಾದ, **ಸೌಹೃದಂ** – ಪರಸ್ಪರ ಐಕಕಂಠ್ಯರೂಪ ಮೈತ್ರಿಯನ್ನು, **ಯಃ** – ಯಾವನು, **ಪಶ್ಯತಿ** – ತಿಳಿಯುತ್ತಾನೋ, **ಸಃ** – ಅವನೇ, **ಪಶ್ಯತಿ** – ಸರಿಯಾದರ್ಥವನ್ನು ಗ್ರಹಿಸಿದ ಬುದ್ಧಿವಂತನು **ಆಕಿಂಚನ್ಯ** ವೆಂದರೆ ಸ್ವರಕ್ಷಣಾರ್ಥವಾಗಿ ಉಪಾಯಾಂತರದಲ್ಲಿ **ಪ್ರವೃತ್ತಿಯಿಲ್ಲದೇ** ಎಂಬದಾಗಿ ತನ್ನ ಅಶಕ್ತಿ ಪ್ರದರ್ಶನವು; **ಭರನ್ಯಾಸ**ವೆಂದರೆ ಸ್ವರಕ್ಷಣಾರ್ಥವಾಗಿ ಉಪಾಯಾಂತರದಲ್ಲಿ ಪ್ರವೃತ್ತಿಗೆ ತಾನು ಅಶಕ್ತನಾಪೆನೇ ಎಂದು ಸ್ವರಕ್ಷಾಭರವನ್ನು ಶಕ್ತನಲ್ಲಿ ಸಮರ್ಪಿಸುವದು; **ಉಪಾಯತ್ವ ಪ್ರಾರ್ಥನೆ** ಎಂದರೆ ಸ್ವರಕ್ಷಣಾರ್ಥವಾಗಿ ಉಪಾಯಾಂತರದಲ್ಲಿ ಪ್ರವೃತ್ತಿಗೆ ತಾನು **ಅಶಕ್ತನಾಗಿದ್ದೇನೆಯಾದುದರಿಂದ** ಆ ಉಪಾಯಾಂತರ ಸ್ಥಾನದಲ್ಲಿ ನೀನೇ ನಿಂತು **ರಕ್ಷಿಸಬೇಕೆಂಬ ಪ್ರಾರ್ಥನೆಯು**; ಹೀಗೆ ಮೂರೂ ಒಂದೇ **ಅಭಿಪ್ರಾಯ**ವು ಉಳ್ಳವೇ

ವಿನಾ ಬೇರೆ ಬೇರೆಯಲ್ಲವು ; ಅಕಿಂಚನ್ಯ ಪ್ರದರ್ಶನದಲ್ಲೂ ಉಪಾಯ ಪ್ರಾರ್ಥನೆಯಲ್ಲೂ ಅಭಿಪ್ರಾಯಗಳು ಒಂದೇಯಾಗಿ ಇನ್ನೂ ಭರವನ್ನು ಸಮರ್ಪಿಸದೇ ಇರುವ ಸ್ಥಿತಿಯು, ಇಷ್ಟೇ ವ್ಯತ್ಯಾಸವೇ ಬೇರೆ ಯಿಲ್ಲವಾದುದರಿಂದ ಮೂರಕ್ಕೂ ಅಭಿಪ್ರಾಯದಲ್ಲಿ ವ್ಯತ್ಯಾಸವೇನೂ ಇಲ್ಲವು. ಇವೆರಡರೊಂದಿಗೂ ಭರಸಮರ್ಪಣವಾವಶ್ಯಕವಾಗಿ ಅವುಗಳ ಪ್ರಾಧಾನ್ಯವನ್ನು ತಿಳಿಸುವದಕ್ಕಾಗಿ ಹಾಗೆ ಶ್ರೀ ರಾಮ ಮಿಶ್ರರೂ ಭರತಮುನಿಗಳೂ ಹೇಳಿದರೇ ವಿನಾ ಅನ್ಯಥಾ ಇಲ್ಲವು. ಎಲ್ಲಾ ಒಂದೇ ಅಭಿಪ್ರಾಯಗಳುಳ್ಳವೆಂಬ ಭಾವವು ಅಕಿಂಚನ್ಯವಿದ್ದರೇನೆ ಭರನ್ಯಾಸವು. ಎಲ್ಲಿ ಅಕಿಂಚನ್ಯವಿದೆಯೋ ಅಲ್ಲಿ ಭರನ್ಯಾಸವು, ಅಕಿಂಚನ್ಯವಿಲ್ಲದಿದ್ದರೆ ಭರನ್ಯಾಸವಿಲ್ಲವೆಂದು ತೋರಿಸುವದಕ್ಕಾಗಿ ಹಾಗೆ ಹೇಳಿದರು ಎಂಬ ಭಾವವು. ಭರನ್ಯಾಸ ಪೂರ್ವಕಾಲಿಕ ಸ್ವಪ್ರವೃತ್ತಿ ನಿವೃತ್ತಿ ಎಂದರೆ ಉಪಾಯಾಂತರ ಪ್ರವೃತ್ತಿಗೆ ಅಶಕ್ತನೇ, ಆದುದರಿಂದ ಅದರಿಂದ ತಾನು ನಿವೃತ್ತಿಯನ್ನು ಹೊಂದಿದ್ದೇನೆಂದು ಅಕಿಂಚನ್ಯವನ್ನು ಪ್ರದರ್ಶಿಸಿ, ನೀನೇ ಆ ಸ್ಥಾನದಲ್ಲಿ ನಿಂತು ಅದರ ಫಲವನ್ನುಂಟುಮಾಡತಕ್ಕದ್ದು ಎಂಬ ಭಾವವುಂಟಾಗುತ್ತದೆ. ಸ್ವಪ್ರವೃತ್ತಿ ನಿವೃತ್ತಿಯು ಭರನ್ಯಾಸ ಉತ್ತರಕಾಲಿಕವೆಂದರೆ, ಭರನ್ಯಾಸವನ್ನು ಅಙ್ಗೀಕರಿಸಿದಂತಾಯಿತು; ಆಗ ಸ್ವಪ್ರವೃತ್ತಿ ನಿವೃತ್ತಿ ಎಂದರೆ ಉಪಾಯಾನುಷ್ಠಾನಮಾಡಿ ತಾನು ಕೃತಕೃತ್ಯನಾದುದರಿಂದ ಅದಕ್ಕಾಗಿ ಮುಂದಕ್ಕೆ ಯಾವ ಪ್ರವೃತ್ತಿಯೂ ಯಿಲ್ಲದ ಅವಸ್ಥೆಯೇ ಪ್ರಪತ್ತಿ ನಿವೃತ್ತಿ ಎಂಬುದರ ಅರ್ಥವು

ಭರತಮುನಿಯ ವಾಕ್ಯದಲ್ಲಾದರೋ ಉಪಾಯತ್ವ ಪ್ರಾರ್ಥನೆಯಿಂದಲೇ ಭರನ್ಯಾಸಕಾರ್ಯ ಉಂಟಾಗುವದರಿಂದ ಹಾಗೆ ಹೇಳಲ್ಪಟ್ಟಿತೇ ವಿನಾ, ಗೋಪ್ತೃತ್ವ ವರಣರೂಪ ಅಙ್ಗಕ್ಕಿಂತಲೂ ಇದು ಬೇರೆಯಾದುದಲ್ಲವು. ಹೀಗೆ ಈ ವಾಕ್ಯಗಳಲ್ಲಡಗಿರುವ ಸೂಕ್ಷ್ಮಾರ್ಥವನ್ನು ಗ್ರಹಿಸಿದವನೇ ಕುಶಲಿಯೇ ವಿನಾ, ಅಙ್ಗಗಳಾದ ಇವುಗಳನ್ನು ಅಙ್ಗಿ ಎಂದು ಭಾವಿಸುವವನು ಕುಶಲಿಯಲ್ಲವೆಂಬ ಭಾವವು.

ಆದುದರಿಂದ ಶ್ರೀ ರಾಮಮಿಶ್ರರ ವಾಕ್ಯಕ್ಕೂ, ಭರತಮುನಿಗಳ ವಾಕ್ಯಕ್ಕೂ ಮತ್ತು ಲಕ್ಷ್ಮೀತಂತ್ರ, ಅಹಿರ್ಬುಧ್ನ್ಯ ಸಂಹಿತಾ ಮೊದಲಾದ ವಾಕ್ಯಗಳಿಗೂ ಅತ್ಯಂತ ಸಾಮಂಜಸ್ಯ ಉಂಟೇ ವಿನಾ ಪರಸ್ಪರವಿರೋಧವಿಲ್ಲವು. ಈ ಸೂಕ್ಷ್ಮವನ್ನು ಎಲ್ಲರೂ ಗ್ರಹಿಸಲಾರರೆಂಬ ಭಾವವು. ಅಂತಹ ಸೂಕ್ಷ್ಮವನ್ನು ಗ್ರಹಿಸಿದವರೇ ಬಲ್ಲವರು ಎಂದು ಯಃ ಪಶ್ಯತಿ ಸ ಪಶ್ಯತಿ ಎಂದು ಹೇಳುತ್ತಾರೆ.

ಈ ಮೂರು ಲಕ್ಷಣವಾಕ್ಯಗಳಿಗೂ ಏಕಕಂಠ್ಯವು ಸಾಙ್ಗ ಪ್ರಪದನಾಧಿಕಾರದ ಆದಿ ಶ್ಲೋಕದಲ್ಲಿ ಸಹ ವ್ಯಕ್ತವು. ಹೇಗೆಂದರೆ ಭರನ್ಯಾಸಂ ಯಾಚ್ಞಾನ್ವಿತ ಮುಭಿವದನ್ತಿ ಪ್ರಪದನಂ ಎಂದು ಯಾಚ್ಞಾಯೊಂದಿಗೆ ಭರನ್ಯಾಸವು ಸೇರಿರುವದರಿಂದ

ಅಥ ಪ್ರಪತ್ತಿ ಸ್ವರೂಪಂ ನಿಗಮಯತಿ

ಇಪ್ಪಡಿ ಅಞ್ಜು ಪಞ್ಚಕ ಸಂಪನ್ನಮಾನ ಆತ್ಮರಕ್ಷಾ ಭರನ್ಯಾಸಮೇ ಪ್ರಪತ್ತಿ ಶಾಸ್ತ್ರಮೆಲ್ಲಾತ್ತಿಲುಮ್ ಪ್ರಧಾನವಿಧೇಯಮೆನ್ನು ಶ್ರೀ ವಿಷ್ಣುಚಿತ್ತ ವಾದಿಹಂಸಾಂಬುವಾಹ ವರದಾಚಾರ್ಯಾದಿಗಳ್ ಸಙ್ಗ್ರಹಿತ್ತಾರ್ಗಳ್.

ಭರತಮುನಿಗಳ "ತದೇಕೋಪಾಯತಾ ಯಾಚ್ಞಾ ಪ್ರಪತ್ತಿಶ್ಶರಣಾಗತಿಃ" ಎಂಬ ವಾಕ್ಯಕ್ಕೂ ಲಕ್ಷ್ಮೀತಂತ್ರವಾಕ್ಯಕ್ಕೂ ಅಭೇದವು ಏರ್ಪಟ್ಟಿತು. ಇತಃ ಪಶ್ಚಾದಸ್ಮದ್ಯತನ ನಿರಪೇಕ್ಷಣ ಭವತಾ ಸಮರ್ಥ್ಯಃ ಎಂಬ ಮತಿ ವಿಶೇಷವು ಇರುವದರಿಂದ ಶ್ರೀ ರಾಮಮಿಶ್ರರ ವಾಕ್ಯದಲ್ಲಿರುವ ಸ್ವಸ್ವವೃತ್ತಿ ನಿವೃತ್ತಿಗೂ ಲಕ್ಷ್ಮೀತಂತ್ರವಾಕ್ಯಕ್ಕೂ ಅಭೇದವು ಏರ್ಪಟ್ಟಿತು.

ಪ್ರಪತ್ತಿ ಸ್ವರೂಪವನ್ನು ನಿಗಮನಮಾಡಿ ಹೇಳುತ್ತಾರೆ

ಇಪ್ಪಡಿ ಈ ಮೇಲೆ ಉಪಪಾದಿಸಿದ ರೀತಿಯಲ್ಲಿ, ಅಞ್ಜುಪಂಚಕ ಸಂಪನ್ನಮಾನ-ಅಞ್ಜು ಪಞ್ಚಕಗಳಿಂದ ಕೂಡಿದ, ಆತ್ಮರಕ್ಷಾ ಭರನ್ಯಾಸಮೇ, ಪ್ರಪತ್ತಿ ಶಾಸ್ತ್ರಮೆಲ್ಲಾತ್ತಿಲುಮ್ - ಪ್ರಪತ್ತಿ ಶಾಸ್ತ್ರಗಳೆಲ್ಲಾದರೆಲ್ಲೂ, ಪ್ರಧಾನ ವಿಧೇಯಮೆನ್ನು - ಮುಖ್ಯವಾಗಿ ವಿಧಿಸಿರುವದು ಎಂದು ಶ್ರೀವಿಷ್ಣು ಚಿತ್ತರ, ವಾದಿಹಂಸಾಂಬುವಾಹರು, ವರದಾಚಾರ್ಯರೇ ಮೊದಲಾದವರು, ಸಙ್ಗ್ರಹಿತ್ತಾರ್ಗಳ್ - ಪ್ರಪನ್ನ ಪಾರಿಜಾತ ಮೊದಲಾದ ಗ್ರಂಥಗಳಲ್ಲಿ ಸಙ್ಗ್ರಹಿಸಿ ತೋರಿದರು. ಇಲ್ಲಿ ಇಪ್ಪಡಿ ಎಂದು ಹೇಳಿದುದರಿಂದ ಶಾಸ್ತ್ರ ವುತ್ತು ಸತ್ಸಂಪ್ರದಾಯ ಸನ್ಮತವಾದುದು ಈಗ ತಾವು ಮಾಡಿರುವ ಪ್ರಪತ್ತಿಸ್ವರೂಪ ನಿರೂಪಣವೆಂಬ ಭಾವವು. ಅಞ್ಜು ಪಞ್ಚಕ ಸಂಪನ್ನಮಾನ ಆತ್ಮರಕ್ಷಾಭರನ್ಯಾಸವೆಂದು ಹೇಳಿರುವದರಿಂದ ಭರನ್ಯಾಸಕಾಲದಲ್ಲಿ ಅಞ್ಜು ಪಞ್ಚಕಗಳೂ ಇದ್ದರೇನೇ ಭರನ್ಯಾಸ ಸಿದ್ಧಿಯು ಎಂಬ ಮತಿ ತಿಳಿಸಲ್ಪಟ್ಟಿತು. ಎಲ್ಲೋ ಒಂದು ಪ್ರಮಾಣವನ್ನು ಮನಸ್ಸಿನಲ್ಲಿಟ್ಟು ಹೇಳಿದಭಿಪ್ರಾಯವಲ್ಲವು. ಎಲ್ಲಾ ಪ್ರಪತ್ತಿ ಶಾಸ್ತ್ರಗಳಲ್ಲೂ ಇಂತಹ ಅಞ್ಜುಪಞ್ಚಕಯುಕ್ತವಾದ ರಕ್ಷಾಭರನ್ಯಾಸವೇ ಅಙ್ಗಿ ಎಂದು ಹೇಳಲ್ಪಟ್ಟಿರುತ್ತದೆಂದು ಉಪದೇಶಿಸಿರುತ್ತಾರೆ ಆಗಲಿ ಸತ್ಸಂಪ್ರದಾಯ ಸನ್ಮತಿ ಈ ಅಭಿಪ್ರಾಯಕ್ಕೆ ಉಂಟೋ ಎಂದರೆ ಉಂಟು ಎಂದು ಮೂರು ಮಹನೀಯರುಗಳಾದ ಪೂರ್ವಾಚಾರ್ಯರು ಹಾಗೆಯೇ ಅಪ್ಪಣೆ ಕೊಡಿಸಿರುತ್ತಾರೆಂದು ತಿಳಿಸುತ್ತಾರೆ.

ಅಥ ಕರ್ತವ್ಯತ್ವ ಶಙ್ಕಾ ಪರಿಹಾರಃ- ಶೇಷತ್ವ ಜ್ಞಾನಮಾತ್ರಂ ನಾಲಮ್.

ಇವ್ವಿಡತ್ತಿಲ್ ಶಿಲರ್ ಶಾಸ್ತ್ರಾರ್ಥ ತತ್ವಮ್ ತೆಳಿನ್ದ ಪೋದೇ ಶೇಷತ್ವಾನು ಸಂಧಾನವ್ ಪಣ್ಣಿನಾನನ್ರೋ ? (೧) "ಸ್ವೋಜ್ಜೀವನೇಚ್ಛಾ

ಶ್ರೀ ವಿಷ್ಣುಚಿತ್ತ ರೆಂಬುವರು ಶ್ರೀ ಭಾಷ್ಯಕಾರರ ಪ್ರಶಿಷ್ಯರು, ಶ್ರೀ ವರದಾಚಾರ್ಯರಿಗೆ (ನಡಾದೂರ್ ಅಮ್ಮಾಳ್ವರಿಗೆ) ಆಚಾರ್ಯರು. ಇದರಿಂದ ಈ ಅಭಿಪ್ರಾಯವು ಶ್ರೀ ಭಾಷ್ಯಕಾರರಿಗೂ ಸಮ್ಮತವಾಗಿ ಪರಂಪರಯಾ ಬಂದುದೆಂದೂ ಊಹಿಸಬಹುದು. ಶ್ರೀವಾದಿ ಹಂಸಾಂಬುವಾಹರು ಶ್ರೀ ನಿಗಮಾಂತ ದೇಶಿಕರಿಗೆ ಸೋದರನಾನಂದಿರು ಮತ್ತು ಆಚಾರ್ಯರು, ಇವರು ನಡದೂರ್ ಅಮ್ಮಾಳ್ವರವರ ಶಿಷ್ಯರು. ವರದಾಚಾರ್ಯರಿಗೆ ನಡದೂರ್ ಅಮ್ಮಾಳ್ ಎಂದು ಅಪರನಾಮಧೇಯವು. ಶ್ರೀ ನಿಗಮಾಂತದೇಶಿಕರಿಗೆ ಪ್ರಾಚಾರ್ಯರು. ಇಲ್ಲಿ ಆದಿ ಪದದಿಂದ ಪರಾಶರ ಭಟ್ಟರು ಸುದರ್ಶನಾಚಾರ್ಯರು ಮೊದಲಾದವರು ಹೇಳಲ್ಪಟ್ಟರು. ಆಚ್ಚಿಯಾವುದು, ಅದರ ಸಮರ್ಪಣವನ್ನು ಹೇಗೆ ಮಾಡತಕ್ಕದೆಂಬುದನ್ನು ಸ್ವಾಮಿ ದೇಶಿಕರವರು ನ್ಯಾಸದಶಕದಲ್ಲಿ ಸ್ಪುಟವಾಗಿ ತಿಳಿಸಿರುತ್ತಾರೆ.

ಮುಂದೆ ಕರ್ತವ್ಯಾಂಶದಲ್ಲಿನ ಶಙ್ಕಾ ಪರಿಹಾರವು, ಶೇಷತ್ವ ಜ್ಞಾನಮಾತ್ರ ಪ್ರಪತ್ತಿಯಲ್ಲವು.

ಮುಂದೆ ಶೇಷತ್ವಜ್ಞಾನ ಮಾತ್ರವೇ ಪ್ರಪತ್ತಿಯ, ಇಷ್ಟುಮಾತ್ರವಿದ್ದರೆ ಸಾಕು, ಬೇರೆ ಯಾವ ಅನುಷ್ಠಾನವೂ ಬೇಕಾಗಿಲ್ಲವೆಂಬ ಕೆಲವರ ಮತವನ್ನು ಪೂರ್ವಪಕ್ಷರೂಪದಲ್ಲಿ ಅನುವಾದಮಾಡಿ ಹೇಳಿ, ಆ ಅಭಿಪ್ರಾಯವು ಸರಿಯಲ್ಲವೆಂದು ಉಪದೇಶಿಸುತ್ತಾರೆ. ಇವ್ವಿಡತ್ತಿಲ್ - ಪ್ರಪತ್ತಿ ಸ್ವರೂಪವನ್ನು ನಿರ್ಧರಿಸುವ ಸಂದರ್ಭದಲ್ಲಿ, ಶಿಲರ್ - ಕೆಲವರು. ಇದಕ್ಕೆ ಕ್ರಿಯಾಪದವು ಶೊಲ್ಲುವರ್ಗಳ್ ಎಂದು ಮುಂದೆ ಇದೆ. ಏನನ್ನು ಹೇಳುತ್ತಾರ ಎಂದರೆ ತಿಳಿಸುತ್ತಾರೆ:— "ಶಾಸ್ತ್ರಾರ್ಥ ತತ್ವಮ್ ತೆಳಿನ್ದಪೋದೆ - ಶಾಸ್ತ್ರಾರ್ಥದ ಯಾಥಾತ್ಮ್ಯವು ತಿಳಿದಾಗಲೇ, ಶೇಷಿತ್ವಾನುಸಂಧಾನಂ - ಸರ್ವೇಶ್ವರನು ಶೇಷಿಯು ತಾನು ಅವನಿಗೆ ಶೇಷನು ಎಂದು ಅನುಸಂಧಾನವನ್ನು, ಪಣ್ಣಿನಾನನ್ರೋ - ಮಾಡಿದವನಲ್ಲವೋ ಎಂದರೆ ಮಾಡಿದರೆ ಸಾಲದೋ ? ಮುಂದೆ ಪೂರ್ವಪಕ್ಷಿಯು ಉದಾ

(೧) ವಿಷ್ಣು ತತ್ವ.

ಯದಿ ತೇ ಸ್ವಸತ್ತಾಯಾಂ ಸ್ಪೃಹಾಯದಿ ಆತ್ಮದಾಸ್ಯಂ ಹರೇ ಸ್ವಾಮ್ಯಂ ಸ್ವಭಾವಂ ಚ ಸದಾ ಸ್ಮರ" ಎನ್ನದುವುದು ಪರಮ ಪುರುಷಾರ್ಥ ತದುಪಾಯಜ್ಞಳೈ ವೇಣ್ಡೆಯಿರುನ್ದಾಯಾಗಿಲ್ ನೀ ದಾಸನಾಯ್ ಈಶ್ವರನ್ ಸ್ವಾಮಿಯಾಯ್ ಇರುಕ್ಕಿರದು ಸ್ವಭಾವ ಸಿದ್ಧಮೆನ್ಱು ತತ್ವತ್ತಿಲ್ ತೆಳಿವೋಡೆ ವರ್ತಿ ಯೆನ್ಱು ಪಡಿಯನ್ರೋ? ಆನಾಲಿಪ್ಪೋದು ಆತ್ಮ ಸಮರ್ಪಣ ಮೆನ್ರೊರು ವಿಧೇಯ ಮುಂಡೋ ವೆನ್ಱು ಶೊಲ್ಲುವರ್ಗಳ್.

ಹಿಗಿಸಬಹುದಾದ ಪ್ರಮಾಣವನ್ನು ಹೇಳಿ ಅದಕ್ಕೆ ಅವರುಗಳು ಹೇಳಬಹುದಾದ ಆರ್ಥವನ್ನು ಅನುವದಿಸುತ್ತಾರೆ. **ತೇ** - ನಿನಗೆ, **ಸ್ವೋಜ್ಜೀವನೇಚ್ಛಾ ಯದಿ** ಚೆನ್ನಾಗಿ ಉತ್ಕೃಷ್ಟ ದೆಶೆಯಲ್ಲಿ ಬಾಳಬೇಕೆಂಬ ಆಪೇಕ್ಷೆಯಿದ್ದುದಾದರೆ, ಪರಮ ಪುರುಷಾರ್ಥವನ್ನು ಹೊಂದಬೇಕೆಂಬ ಆಪೇಕ್ಷೆ ಇದ್ದುದಾದರೆ ಅದಕ್ಕಾಗಿ, **ಸ್ವಸತ್ತಾಯಾಂ ಸ್ಪೃಹಾ ಯದಿ** - ಬ್ರಹ್ಮಜ್ಞಾನದಿಂದ ನೀನು ಸತ್ತೆಯನ್ನು ಹೊಂದಬೇಕೆಂಬ ಆಶೆಯಿದ್ದರೆ, ಅದನ್ನು ಹೊಂದಲು ಮಾಡಬೇಕಾದ ಉಪಾಯದಲ್ಲಿ ಆಶೆಯಿದ್ದರೆ ಎಂಬರ್ಥವು, **ಆತ್ಮದಾಸ್ಯಂ** - ನೀನು ಪರಮಾತ್ಮನಿಗೆ ದಾಸನಾಗಿರುವದನ್ನೂ, **ಹರೇಸ್ವಾಮ್ಯಂ ಚ** - ಶ್ರೀಹರಿಯು ಸ್ವಾಮಿಯಾಗಿರುವನು ಎಂಬ ಭಾವವನ್ನೂ, ಸಹ, **ಸ್ವಭಾವಂ** - ಇದು ಸ್ವಭಾವಸಿದ್ಧವಾದುದೆಂಬುದನ್ನು **ಸದಾ ಸ್ಮರ** - ಯಾವಾಗಲೂ ಸ್ಮರಿಸು. ಈ ಶ್ಲೋಕಾರ್ಧವನ್ನು ಸ್ವಾಮಿ ದೇಶಕರೇ ಮುಂದೆ ಅನುವಾದಮಾಡಿ ಹೇಳುತ್ತಾರೆ, **ಎನ್ರದುವುಮ್** - ಎಂದು ಹೇಳಿರುವದೂ, ಪರಮ ಪುರುಷಾರ್ಥವೇನು, **ತದುಪಾಯಜ್ಞಳೈ** ಅದನ್ನು ಹೊಂದುವ ಉಪಾಯವೇನು, ಇವುಗಳನ್ನು, **ವೇಣ್ಡೆಯಿರುನ್ದಾ ಯಾಗಿಲ್** - ನೀನು ಆಪೇಕ್ಷಿಸಿದುದಾದರೆ, **ನೀ ದಾಸನಾಯ್** - ನೀನು ದಾಸನಾಗಿ, **ಈಶ್ವರನ್ ಸ್ವಾಮಿಯಾಯ್** - ಈಶ್ವರನು ಸ್ವಾಮಿಯಾಗಿ, **ಇರುಕ್ಕಿರದು** - ಇರುವದು ಸ್ವಭಾವಸಿದ್ಧವಾದುದೆಂದು **ತತ್ವತ್ತಿಲ್ ತೆಳಿವೋಡೆ** - ಯಥಾರ್ಥಜ್ಞಾನದೊಂದಿಗೆ **ವರ್ತಿ** - ಸದಾ ಇರು, **ಯೆನ್ರಪಡಿಯನ್ರೋ** - ಎಂದು ಹೇಳಿದರಾಗಲ್ಲವೋ **ಆನಾಲ್** - ಹೀಗಾದನಂತರ, **ಇಪ್ಪೋತು** - ಈ ಸಂದರ್ಭದಲ್ಲಿ, **ಆತ್ಮಸಮರ್ಪಣವೆಂದ**, **ಒರುವಿಧೇಯ ಮುಣ್ಡೋ** - ಒಂದು ಅನುಷ್ಠಾನಕ್ರಮ ಉಂಟೋ? **ಎನ್ರು** - ಎಂಬದಾಗಿ **ಶೊಲ್ಲುವರ್ಗಳ್** - ಹೇಳುವರು, ಎಂದರೆ ಆಕ್ಷೇಪಿಸುವರು ಎಂಬರ್ಥವು. ಈ ಮೇಲಿನ ಪ್ರಮಾಣಪ್ರಕಾರ ಮುಖ್ಯತತ್ವನೇನು **ಎಂದರೆ** ಶ್ರೀ ಹರಿಯು ಸಹಜ ಸ್ವಾಮಿಯು, ನಾವು ಅತನಿಗೆ ಸಹಜ ದಾಸ

ಇದುವುನ್ ವಾಕ್ಯಜನ್ಯಜ್ಞಾನ ಮಾತ್ರತ್ತಾಲೇ ಮೋಕ್ಷವೆನ್ಗೈಪ್ಪೋಲೆ ಅನಾದರಣೀಯಮುನ್

ಭೂತರು, ಈ ಜ್ಞಾನವು ಪರಮ ಪುರುಷಾರ್ಥ ಪ್ರಾಪ್ತಿಗೂ ತದುಪಾಯಕ್ಕೂ ಅತ್ಯಾವಶ್ಯಕವು, ಇದರ ಅನುಸಂಧಾನವು ಯಾವಾಗಲೂ ಇರತಕ್ಕದ್ದು. ಇಷ್ಟು ಮಾತ್ರ ಈ ಪ್ರಮಾಣಾನುಸಾರ ಸಾಲದೇ, ಇನ್ನು ಬೇರೇ ಭರನ್ಯಾಸಾನುಷ್ಠಾನ ವೆಂಬುದು ಯಾವುದು? ಎಂದು ಆಕ್ಷೇಪವು ಇದಕ್ಕೆ ಮುಂದಿನ ವಾಕ್ಯದಿಂದ ಸಮಾಧಾನವನ್ನು ಹೇಳುತ್ತಾರೆ:—**ಇದುವುನ್** - ಈ ಅಭಿಪ್ರಾಯರೂಪಾಕ್ಷೇಪವೂ ಸಹ, **ಇದುವುನ್** ಎಂದಿರುವದರಿಂದ ಮೇಲೆಅನುವದಿಸಿದ ಇತರ ಆಕ್ಷೇಪಗಳಹಾಗೆ, ಎಂಬ ಭಾವವು; **ವಾಕ್ಯಜನ್ಯ ಜ್ಞಾನಮಾತ್ರತ್ತಾಲೆಮೋಕ್ಷವುನ್**- ತತ್ತ್ವಮಸಿ" ಇತ್ಯಾದಿ ಉಪನಿಷದ್ವಾಕ್ಯದಿಂದುತ್ಪನ್ನವಾದ ಜ್ಞಾನಮಾತ್ರ ದಿಂದಲೇ ಮೋಕ್ಷವು, **ಎನ್ಗೈಪ್ಪೋಲೆ** - ಎಂದು ಶಾಂಕರರು ಹೇಳುವಹಾಗೆ, **ಅನಾದರಣೀಯೆನುನ್**-ಗಮನಿಸಲು ಅರ್ಹವಾದುದಲ್ಲವು. ಸರ್ವೇಶ್ವರನು ಸ್ವಾಮಿ ನಾವು ಅವನಿಗೆ ದಾಸರು ಎಂಬ ಶಾಸ್ತ್ರದಿಂದುಂಟಾಗುವ ಜ್ಞಾನವೇ ಮೋಕ್ಷ ಸಾಧಕವು, ಬೇರೆ ಪ್ರಪತ್ತ್ಯನುಷ್ಠಾನದ ಆವಶ್ಯಕತೆ ಏನು? ಎಂದರೆ ಅಪ್ಪಿಲ್ಲೈಯ ಸಿದ್ಧಾಂತಕ್ಕೂ ಈ ಅಭಿಪ್ರಾಯಕ್ಕೂ ಏನೂ ವ್ಯತ್ಯಾಸವಿಲ್ಲವೆಂದು ಹೇಳುತ್ತಾರೆ. ಅಪ್ಪಿಲ್ಲೈಗಳು ತತ್ತ್ವಮಸಿ ಎಂಬ ವಾಕ್ಯಾರ್ಥಜ್ಞಾನದಿಂದಲೇ ಮೋಕ್ಷವೆಂದು ಹೇಳುತ್ತಾರೆ. ಅದರ ಹಾಗೆ, ಶಾಸ್ತ್ರಜನ್ಯವಾದ ಶೇಷತ್ವಜ್ಞಾನದಿಂದಲೇ ಮೋಕ್ಷ ವೆಂದು ಹೇಳಿದಂತಾಗುತ್ತದೆ. ವಾಕ್ಯಜನ್ಯ ಜ್ಞಾನದಿಂದ ಮೋಕ್ಷವೆಂದಿಗೂ ಉಂಟಾಗಲಾರದೆಂದೂ, ಉಪಾಯಾನುಷ್ಠಾನದಿಂದಮಾತ್ರವೇ ಮೋಕ್ಷವೆಂದೂ ಶ್ರೀ ಭಾಷ್ಯಕಾರರು ತೋರಿಸಿರುತ್ತಾರೆ ವಾಕ್ಯಜನ್ಯಜ್ಞಾನದಿಂದಲೇ ಮೋಕ್ಷ ವೆಂದರೆ ಉಪಾಸನ ವಿಧಿಗೆ ವೈಯರ್ಥ್ಯವುಂಟಾಗುತ್ತದೆ; ಹಾಗೆಯೇ ಇಲ್ಲಿಯೂ ಪ್ರಪತ್ತಿಯನ್ನು ವಿಧಿಸುವ ಬಹು ಪ್ರಮಾಣಗಳಿಗೆ ವೈಯರ್ಥ್ಯವುಂಟಾಗುತ್ತದೆ ಎಂಬ ಭಾವವು; ಶೇಷತ್ವಜ್ಞಾನವೇ ಸಾಕು, ಭರನ್ಯಾಸವು ಆವಶ್ಯಕವಲ್ಲವು ಎಂಬ ಅಭಿಪ್ರಾಯವು ಅನಾದರಣೀಯವೆಂದು ಹೇಳಿದರು. ಏತಕ್ಕಾಗಿ ಅನಾದರಣೀಯ ವೆಂದರೆ ತಿಳಿಸುತ್ತಾರೆ:—ಇದೂ ಅಲ್ಲದೆ ಆತ್ಮನಿಕ್ಷೇಪದಲ್ಲೂ ಶೇಷತ್ವಜ್ಞಾನವೂ ಆವಶ್ಯಕವಾದುದರಿಂದ, ಅದಕ್ಕೂ ಶೇಷತ್ವಜ್ಞಾನಕ್ಕೂ ಏನೂ ವ್ಯತ್ಯಾಸವಿಲ್ಲ ವೆಂಬಾಕ್ಷೇಪಕ್ಕೂ ಕೂಡ ಸಮಾಧಾನವನ್ನು ಹೇಳುತ್ತಾರೆ.

ಪ್ರಪತ್ತಿಃ ಪ್ರಾಯಶ್ಚಿತ್ತರೂಪೇತಿ ವಿಧೇಯಾ

ಜಿತ ಕೌಸ್ತುಭಚಾರ್ಯಸ್ಯ ಸರ್ವಾಜ ಸ್ಸರ್ವಪಾಪ್ಮನಾಂ ।
ಶಿಷ್ಟಂ ಹ್ಯಾತ್ಮಾಪಹಾರಸ್ಯ ನಿಷ್ಕೃತಿಸ್ಸ್ವಭರಾರ್ಪಣಮ್ ॥೪೧॥

ಪ್ರಪತ್ತಿಯು ಪ್ರಾಯಶ್ಚಿತ್ತರೂಪವೆಂದು ಶಾಸ್ತ್ರದಲ್ಲಿ ವಿಧಿಸಿರುವದು.

ಜಿತಕೌಸ್ತುಭಚಾರ್ಯಸ್ಯ - ಕೌಸ್ತುಭರತ್ನದ ಚೌರ್ಯವು ಯಾವುದಕ್ಕೆ ಜಿತವೋ ಅದು ಎಂದರೆ ಕೌಸ್ತುಭರತ್ನಚೌರ್ಯವು ಆತ್ಮಚೌರ್ಯದಿಂದ ಜಿತವು. ಕೌಸ್ತುಭರತ್ನವು ಭಗವಂತನ ಆಭರಣವು ಅಚೇತನವು; ತತ್ಸ್ಥಾನೀಯನಾಗಿರುವವನು ಚೇತನನಾದ ಜೀವಾತ್ಮನು, ಯಾವಾಗ ಆತ್ಮಚೌರ್ಯಮಾಡಿ ಸ್ವತಂತ್ರಾತ್ಮಭ್ರಾಂತಿಯುಂಟಾಯಿತೋ ಆಗ ಸರ್ವೇಶ್ವರನ ದಿವ್ಯಾಭರಣವಾದ ಕೌಸ್ತುಭರತ್ನ ಚೌರ್ಯಮಾಡಿದಂತಾಯಿತೆಂಬ ಭಾವವು. ಇಂತಹ ಅತಿಶಯವಾದ ಚೌರ್ಯವೆಂಬ ಭಾವವು, ಜಿತಕೌಸ್ತುಭ ಚೌರ್ಯಸ್ಯ ಎಂಬುದು **ಆತ್ಮಾಪಹಾರಸ್ಯ** ವೆಂಬುದಕ್ಕೆ ವಿಶೇಷಣವು, ಆತ್ಮಾಪಹಾರಚೌರ್ಯವು ಇನ್ನೂ ಎಂತಾದ್ದೆಂದರೆ **ಸರ್ವಪಾಪ್ಮನಾಂ ಸಮ್ರಾಜಃ** - ಸರ್ವಪಾಪಗಳಿಗೂ ಈ ಆತ್ಮಾಪಹಾರ ಚೌರ್ಯವು ಮೂಲಕಾರಣವಾದುದರಿಂದ ಸಮಸ್ತ ಪಾಪಗಳಿಗೂ ರಾಜವಾದ, **ಆತ್ಮಾಪಹಾರಸ್ಯ**-ಅಹಂ ನೇ ಎಂಬ ತಿಳುವಳಿಕೆಯಿಂದಮಾಡಿದ ಆತ್ಮಾಪಹಾರಕ್ಕೆ **ನಿಷ್ಕೃತಿಃ**-ಪ್ರಾಯಶ್ಚಿತ್ತವು, **ಸ್ವಭರಾರ್ಪಣಮ್**-ಸ್ವರೂಪ ಫಲಸಮರ್ಪಣಗಳಿಂದ ಸೇರಿದಆತ್ಮರಕ್ಷಾಭರಸಮರ್ಪಣವು ಎಂದು, ಶಿಷ್ಟಂ ಹಿ-ಶಾಸ್ತ್ರದಲ್ಲಿ ವಿಧಿಸಿರುತ್ತದೆಯಷ್ಟೇ? **"ಯೋನ್ಯಥಾ ಸಂತಮಾತ್ಮಾನಮನ್ಯಥಾ ಪ್ರತಿಪದ್ಯತೇ । ಕಿಂ ತೇನ ನಕೃತಂ ಪಾಪಂ ಚೋರೇಣಾತ್ಮಾಪಹಾರಿಣಾ"** ಎಂದು ಹೇಳಿರುವದರಿಂದ ಪಾಪಗಳಲ್ಲೆಲ್ಲಾ ತುಂಬಾ ಅತಿಶಯವಾದ ಪಾಪವು. **"ಮಾಮೇಕಂ ಶರಣಂ ವ್ರಜ । ಅಹಂತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ"** ಇತ್ಯಾದಿ ಅನೇಕ ಪ್ರಮಾಣಗಳಿಂದ ಪ್ರಾಯಶ್ಚಿತ್ತವಾಗಿ ವಿಧಿಸಿರುತ್ತದೆ.

ಅಥವಾ, **ಜಿತಕೌಸ್ತುಭ ಚೌರ್ಯಸ್ಯ** - ಕೌಸ್ತುಭ ಚೌರ್ಯವು ಯಾವ ಪುರುಷನಿಂದ ಜಯಿಸಲ್ಪಟ್ಟಿತೋ ಎಂದರೆ ಕೌಸ್ತುಭಚೌರ್ಯಕ್ಕಿಂತ ಹೆಚ್ಚಾದ ಚೌರ್ಯ ಕೃತ್ಯವನ್ನು ಮಾಡಿದವನಿಗೆ, ಆ ಆತ್ಮಾಪಹಾರಿಗೆ ನಿಷ್ಕೃತಿಯು **ಸ್ವಭರಾರ್ಪಣವು** ಎಂದೂ ಅರ್ಥಮಾಡಬಹುದು.

ಕೌಸ್ತುಭವೂ ಭಗವಂತನ ಸ್ವತ್ತು. ತತ್ಸಂಬಂಧೀಯನಾದ ಆತ್ಮನೂ ಅವನ ಸ್ವತ್ತು. ಆತ್ಮನು ಪರಮಾತ್ಮನಿಗೆ ಸದಾ ಕೈಂಕರ್ಯಮಾಡಿ ಆನಂದವನ್ನು ಹೊಂದುವನು. ಅಂತವನು ಸ್ವತಂತ್ರನೆಂದು ಭಾವಿಸಿ ಅಹಂ ಮಮ ಎಂದು ಆತ್ಮಾಪಹಾರ ಮಾಡುವವನನು,ಕೌಸ್ತುಭ ಚೋರನಿಗಿಂತ ಹೆಚ್ಚು ಪಾತಕಿಯು ಎಂಬರ್ಥವು ಅಂತವನಿಗೆ, ನಿಷ್ಕೃತಿಃ-ಪ್ರಾಯಶ್ಚಿತ್ತವು, ಸ್ವಭರಾರ್ಪಣವೆಂದೂ ಅರ್ಥಮಾಡಬಹುದು. ಒಬ್ಬ ರಾಜನ ಆಭರಣವನ್ನು ಅಪಹರಿಸಿ ವೇಶ್ಯಾಸ್ತ್ರೀಗೆ ಕೊಡುವದರಿಂದ ಉಂಟಾದ ನಿಗ್ರಹವು, ಅದನ್ನು ಪುನಃ ಪಡೆದು ರಾಜನಿಗೇನೇ ಸಮರ್ಪಿಸುವದರಿಂದ ನಿಗ್ರಹವು ಹೇಗೆ ತಪ್ಪುತ್ತದೋ, ಮತ್ತೆ ಅದರೊಂದಿಗೆ ತನ್ನ ರಕ್ಷಾರೂಪ ಸರ್ವ ಭರವನ್ನು ಅತನಲ್ಲಿ ಇಟ್ಟುಬಿಟ್ಟರೆ, ಅಂತಹ ದಾಸನನ್ನು ರಾಜನು ಹೇಗೆ ಕೈಬಿಡದೆ ರಕ್ಷಿಸುವನೋ, ಹಾಗೆಯೇ ಆತ್ಮಸಮರ್ಪಣೆ ಆತ್ಮೀಯ ಸಮರ್ಪಣೆಗಳಿಂದ ಸರ್ವೇಶ್ವರನು ಆತ್ಮಾಪಹಾರಚೌರ್ಯವನ್ನು ಮನ್ನಿಸಿ, ಇಂತಹ ಪ್ರಪನ್ನನನ್ನು ಕೈಬಿಡದೆ ರಕ್ಷಿಸುವನೆಂಬ ಭಾವವು ಸರ್ವೇಶ್ವರನಿಗೆ ತಾನು ದಾಸನು ಎಂಬ ಜ್ಞಾನವುಂಟಾದುದರಿಂದಲೇ ಆತನು ತನ್ನನ್ನು ರಕ್ಷಿಸಲಾರನು. ಆತ್ಮಾಪಹಾರ ಚೌರ್ಯಕ್ಕೆ ಇದೀಗ ಪ್ರಾಯಶ್ಚಿತ್ತವೆಂದು ವಿಧಿಸಿರುವದರಿಂದ ಆ ವಿಧಿಗನುಸಾರವಾಗಿ ನಡೆದರೇನೇ ನುಸ್ಸಿಸುವನು ಮತ್ತು ಅನುಗ್ರಹಿಸುವನು ಸರ್ವೇಶ್ವರನು ಮಹಾ ಕೃಪಾಶಾಲಿಯಾಯಿತಲ್ಲಾ, ಈ ಪ್ರಾಯಶ್ಚಿತ್ತವನ್ನು ತಾನೇ ಏಕೆ ಎಷ್ಟಂತೆ ನೋಡುವದು? ಏಕೆ ನುಸ್ಸಿಸಕೂಡದು? ಎಂದರೆ ತನಗೆ ವೈಷಮ್ಯಾದಿಗಳ ಸಂಘನವಿಲ್ಲದೆ ಇರುವದಕ್ಕಾಗಿ ವ್ಯಾಜಗಳು ಆವಶ್ಯಕವು; ತನ್ನ ಕಾನೂನಿಗೆ ಭಗನುಸಾರವಾಗಿಯಲ್ಲವೇ ರಾಜನೂ ಕೂಡ ಸ್ರವರ್ತಿಸುವನು.

ಹೀಗೆ ಈ ಪ್ರಾಯಶ್ಚಿತ್ತದಿಂದಲೇ ಸರ್ವವೂ ಸಿದ್ಧಿಸುವ ಪಕ್ಷದಲ್ಲಿ, ಶೇಷತ್ವ ಜ್ಞಾನದಿಂದೇನೂ ಪ್ರಯೋಜನವಿಲ್ಲವೋ? ಶಾಸ್ತ್ರದಲ್ಲೂ ಮೂಲ ಮಂತ್ರಾದಿಗಳಲ್ಲೂ ಶೇಷತ್ವಜ್ಞಾನಕ್ಕೆ ತುಂಬಾ ಪ್ರಾಧಾನ್ಯವು ತೋರಿಬರುತ್ತದೆಯಲ್ಲಾ? ಎಂದರೆ ಆ ಶೇಷತ್ವಜ್ಞಾನವು ಭರನ್ಯಾಸಕ್ಕೆ ಪೂರ್ವಭಾವಿಯಾಗಿಯೂ ಅನುಷ್ಠರವೂ, ಹೇಗೆ ಪ್ರಯೋಜಕವೆಂಬುದನ್ನು ಮುಂದಿನ ಕಾರಿಕೆಯಿಂದ ತಿಳಿಸುತ್ತಾರೆ

ಶೇಷತ್ವ ಜ್ಞಾನದ ಪ್ರಯೋಜನವು ಹೇಳಲ್ಪಡುತ್ತದೆ

ಪರಶೇಷತ್ವೆ ಧೀಮಾತ್ರಮ್- ತಾನು ಭಗವಂತನಿಗೆ ಶೇಷಭೂತನು ಎಂಬ ಶಾಸ್ತ್ರದಿಂದುಂಟಾಗುವ ಜ್ಞಾನಮಾತ್ರವು,ತಾನು ಭಗವಂತನ ಸ್ವತ್ತಾಗಿ, ಆತನಿಗೆ ದಾಸನಾಗಿ, ಆತನ ಪ್ರಯೋಜನಕ್ಕಾಗಿಯೇ ಎಂಬ,ಭರನ್ಯಾಸವಿಲ್ಲದೆ ಬರೀ ಶಾಸ್ತ್ರಜ್ಞಾನವು, **ಅಧಿಕಾರವಿಶೇಷಣ(ಕ)ಮ್**-ಭರನ್ಯಾಸಕ್ಕೆ ಅಧಿಕಾರವನ್ನುಂಟುಮಾಡುವಂಥಾದ್ದು. **ಮಾತ್ರಮ್** ಎಂಬ ಪದದಿಂದ ಭರನ್ಯಾಸವಿಲ್ಲದೆ ಬರೀ ಜ್ಞಾನ ಮಾತ್ರ

ಶೇಷತ್ವ ಜ್ಞಾನಸ್ಯ ಪ್ರಯೋಜನಮಾಹ

ಪರಶೇಷತ್ವಧೀಮಾತ್ರ ಮಧಿಕಾರ ವಿಶೇಷಣ(ಕ)ಮ್ ।
ಪಶ್ಚಾದಾತ್ಮಾಪಹಾರಸ್ಯ ನಿರೋಧಾಯ ಚ ಕಲ್ಪತೇ ॥೪೨॥

ಶೇಷತ್ವಾದಿ ವಿಶಿಷ್ಟವಮಾನ ಆತ್ಮತತ್ತ್ವತ್ತೈ ಶಾಸ್ತ್ರತ್ತಾಲೆ ತೆಳಿನ್ದವನುಕ್ಕು ಅಧಿಕಾರ ವಿಶೇಷತ್ತೋಡುಮ್, ಪರಿಕರ ವಿಶೇಷತ್ತೋಡುಮ್

ಎಂಬರ್ಥವು ತೋರಿಬರುತ್ತದೆ ಇದರಿಂದಲೂ ತಾನು ಅತನ ಸ್ವತ್ತು, ತಾನು ಅತನಿಗಾಗಿಯೇ ಎಂದು ತಿಳಿಯಬೆ ಆತ್ಮಾಪಹಾರ ಚಾರ್ಯವು ನಾಡಲ್ಪಟ್ಟಿತು, ಈಗ ತಿಳಿದುದರಿಂದ,ಆಕಿಂಚನ್ಯ ಅನನ್ಯಗತಿತ್ವಗಳುಂಟಾಗಿ ಅಧಿಕಾರಿಯಾಗಲು ಅರ್ಹತೆಯುಂಟಾಯಿತೆಂಬ ಭಾವವು. ಹೀಗೆ ಶೇಷತ್ವಜ್ಞಾನವು ಭರನ್ಯಾಸಕ್ಕೆ ಉಪಕಾರಕವು ಉತ್ತರಾರ್ಧದಿಂದ ಆ ಶೇಷತ್ವಜ್ಞಾನವು ಭರನ್ಯಾಸಾನಂತರವೂ ಹೇಗೆ ಉಪಕಾರಕವೆಂಬುವನ್ನು ತಿಳಿಯಪಡಿಸುತ್ತಾ ಶಾಸ್ತ್ರ-ಆತ್ಮತತ್ತ್ವೀಯ ಭರಸಮರ್ಪಣವಾದನಂತರ, **ಆತ್ಮಾಪಹಾರಸ್ಯ** - ಆತ್ಮಾನುಪಾದೇಯರೂಪಜಹೌರ್ಯದ ಎಂದರೆ ತಾನು ಸ್ವತಂತ್ರನು ಎಂಬಜ್ಞಾನದ, **ನಿರೋಧಾಯ** - ಪ್ರತಿಬಂಧಕ್ಕಾಗಿ, **ಕಲ್ಪತೇ** ಉಪಯುಕ್ತವಾಗುತ್ತದೆ ಹೀಗೆ ಶೇಷತ್ವಜ್ಞಾನವು ಭರನ್ಯಾಸಪೂರ್ವಕಾಲಿಕವಾಗಿಯೂ ಉತ್ತರ ಕಾಲಿಕವಾಗಿಯೂ ಪ್ರಯೋಜನವುಳ್ಳದು. ಮುಂದಿನ ವಾಕ್ಯದಲ್ಲಿ ಭರನ್ಯಾಸ ಪ್ರಕಾರವನ್ನು ಅನುವದಿಸುವುದರಾಗಿ ಭರನ್ಯಾಸಕಾಲದಲ್ಲೂ ಸಹ ಶೇಷತ್ವಜ್ಞಾನವು ಆವಶ್ಯಕವೆಂದು ಹೇಳುತ್ತಾ ಹೀಗೆ ಮೋಕ್ಷಾರ್ಥಿಗೆ ಶೇಷತ್ವಜ್ಞಾನವು ಸದಾ ಉಪಯುಕ್ತವಾಗಿದ್ದರೂ ಶೇಷತ್ವಜ್ಞಾನವೇ ನಾಕು, ಭರನ್ಯಾಸವು ಬೇಕಾಗಿಲ್ಲ ಎಂದುಹೇಳಲು ನಾವ್ಯಪಿಲ್ಲವು, ಎಂದುಹೇಳಿ ಭರನ್ಯಾಸಕ್ರಮವನ್ನು ಸಙ್ಗ್ರಹಿಸುತ್ತಿರುವದರಮೂಲಕ,ಮೇಲಿನ ಎರಡು ಕಾರಿಕೆಗಳ ಅರ್ಥವನ್ನು ತಿಳಿಸುತ್ತಾರೆ; **ಶೇಷತ್ವಾದಿ ವಿಶಿಷ್ಟವಮಾನ ಆತ್ಮತತ್ತ್ವತ್ತೈ** ೃ **"ದಾಸಭೂತಾಸ್ಸತಸ್ಸರ್ವೇ ಹ್ಯಾತ್ಮನಃ ಪರಮಾತ್ಮನಃ"** ಎಂಬಲ್ಲೂ, ಪ್ರಣವದಲ್ಲೂ ತೋರಿಬರುವ ಶೇಷತ್ವವೇ ಮೊದಲಾದ ವಿಶೇಷಣಗಳಿಂದ ಕೂಡಿದ ಜೀವಾತ್ಮ ತತ್ವವನ್ನು, **ಶಾಸ್ತ್ರತ್ತಾಲೆ ತೆಳಿನ್ದವನುಕ್ಕು** - ಇವುಗಳು ಪ್ರತ್ಯಕ್ಷಾದಿ ಪ್ರಮಾಣಗಳಿಂದ ತಿಳಿಯುವದು ಸಾಧ್ಯವಲ್ಲವಾದರಿಂದ ಶಾಸ್ತ್ರಮೂಲಕವಾಗಿಯೇ ತಿಳಿದವನಿಗೆ, **ಅಧಿಕಾರ ವಿಶೇಷತ್ತೋಡುಂ** - ಅಧಿಕಾರವಿಶೇಷಣಗಳಾದ ಆಕಿಂಚನ್ಯಾನನ್ಯಗತಿತ್ವಗಳೊಂದಿಗೆ, **ಪರಿಕರವಿಶೇಷತ್ತೋಡುಂ** - ಅನುಕೂಲ್ಯಾದಿ ಅಙ್ಗಪಞ್ಚಕಗಳೊಂದಿಗೆ, **ಫಲ**

ಫಲಸಙ್ಕಲ್ಪ ವಿಶೇಷತೊ್ತೀಡುಮ್ ಕೂಡಿನ ಶೇಷತ್ವ ಪ್ರತಿಸಂಧಾನ ಗರ್ಭಮಾನ ಸ್ವಾತ್ಮರಕ್ಷಾಭರನ್ಯಾಸಮಿರೆ, ಅನಾದ್ಯಪರಾಧ ಮೂಲ ನಿಗ್ರಹ ನಿವೃತ್ತಿಕ್ಕು ಉಪಾಯಮಾಗ ವಿಧಿಕ್ಕಪ್ಪಡುಗಿರ ಆತ್ಮ ಸಮರ್ಪಣಮ್.

ಸಙ್ಕಲ್ಪವಿಶೇಷತೊ್ತೀಡು - ತದರಿಂದಮಂಟಾಗುವ ಮೋಕ್ಷಫಲಪ್ರಾಪ್ತಿಯೂ ಕೂಡ ಭಗವಂತನಿಗೇ ಎಂದು ಫಲತ್ಯಾಗ ಸಙ್ಕಲ್ಪವಾಗಿರುವುದರಿಂದ, ಇವುಗಳಿಂದಿಲ್ಲಾ **ಕೂಡಿನ** - ಸೇರಿದ, **ಶೇಷತ್ವಪ್ರತಿಸಂಧಾನ ಗರ್ಭಮಾನ** - ತಾನು ಭಗವಂತನಿಗೆ **ಶೇಷ**ಭೂತನು ಎಂಬ ಅನುಸಂಧಾನವನ್ನು ಒಳಗೊಂಡಿರುವ, **ಸ್ವರಕ್ಷಾಭರನ್ಯಾಸಮಿರೆ** - ತನ್ನ ಆತ್ಮಫಲ ರಕ್ಷಣೆಗಳ ಭರನ್ಯಾಸವನ್ನು ಈಗ, **ಅನಾದ್ಯಪರಾಧಮೂಲ ನಿಗ್ರಹ ನಿವೃತ್ತಿಕ್ಕು** - ಅನೇಕಾನೇಕ ಅಪರಾಧಗಳ ಮೂಲಕ ಪ್ರಾಪ್ತವಾದ ಭಗವನ್ನಿಗ್ರಹಕ್ಕೆ ಉಪಾಯವಾಗಿ **ವಿಧಿಕ್ಕಪ್ಪಡುಗಿರ** - "**ಮುಮುಕ್ಷುರ್ವೈ ಶರಣ ಮಹಂ ಪ್ರಪದ್ಯೇ**", "**ತಮಿತ್ಯೇವಾತ್ಮಾನಂ ಯುಂಜೀತ**" "**ಬ್ರಹ್ಮಣೋ ಮಹಿಮಾನ ಮಾಪ್ನೋತಿ,**" "**ಮಾಮೇಕಂ ಶರಣಂವ್ರಜ ಅಹಂತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ**" ಎಂಬಿವೇ ಮೊದಲಾದ ವಾಕ್ಯಗಳಲ್ಲಿ ವಿಧಿಸಲ್ಪಟ್ಟಿರುವ ಆತ್ಮ ಸಮರ್ಪಣವು ಶೇಷತ್ವಜ್ಞಾನದ ಅನುಸಂಧಾನವು ಭರನ್ಯಾಸಮರ್ಪಣಕಾಲಕ್ಕಿಂತ ಮೊದಲು, ಅವಕ್ಕೆ ಪೂರ್ವಭಾವಿಯೋಗಿಯೂ ಬೇಕು, ಉತ್ತರಕಾಲದಲ್ಲಿಂತ ಮೊದಲು, ಹೀಗಿದ್ದರೂ ಅದು ಭರನ್ಯಾಸದ ಸ್ಥಾನವನ್ನು ವಹಿಸಲಾರದು ಶೇಷತ್ವಾದಿ ವಿಶಿಷ್ಟವಾದ ಆತ್ಮತತ್ವತ್ತೈ ತೆಳಿನ್ದು ಎಂಬುದರಿಂದ ಪೂರ್ವಭಾವಿಯಾಗಿ ಶೇಷತ್ವಜ್ಞಾನವು ಅವಶ್ಯಕವೆಂದುಹೇಳಲ್ಪಟ್ಟಿತು. **ಶೇಷತ್ವ ಪ್ರತಿಸಂಧಾನ ಗರ್ಭಮಾನ** ವೆಂಬುದರಿಂದ ತತ್ಕಾಲದಲ್ಲೂ ಅನುಸಂಧಾನಪರವೇಕೆಂದು ತೋರಿ ತಾಯಿತು ಆದರೂ ಭರನ್ಯಾಸವು ವಿಧೇಯವಾದುದರಿಂದ ಅನುಷ್ಠಿಸದು ಅವಶ್ಯಕವು, ಅದೇ ಆತ್ಮ ಸಮರ್ಪಣರೂಪ ಪ್ರಪತ್ತಿಯು ಎಂಬ ತಾತ್ಪರ್ಯವು

ಆದರೆ ಭರನಮರ್ಪಣವೂ ಜ್ಞಾನರೂಪವೇ ಆಗಿರುವಾಗ ಶೇಷತ್ವಜ್ಞಾನವೇ ಸಾಲದೋ? "**ತತ್ತ್ವಜ್ಞಾನಾನ್ಮೋಕ್ಷಃ**" ಎಂದು ಶಾಸ್ತ್ರಗಳಲ್ಲಿ ಉಪಪಾದಿಸಲ್ಪಟ್ಟಿರುವುದರಿಂದ ಶೇಷತ್ವಜ್ಞಾನವು ತುಂಬಾ ಅವಶ್ಯಕವಾಗಿರುವಾಗ ಶಾಸ್ತ್ರಜನ್ಯ ಶೇಷತ್ವ ಜ್ಞಾನದಿಂದಲೇ ಮೋಕ್ಷವೆಂದು ಹೇಳುವುದು ಯುಕ್ತವಲ್ಲವೋ? ತತ್ತ್ವ ಜ್ಞಾನದಿಂದ ಮೋಕ್ಷವೆಂಬುದಕ್ಕೆ ಅನೇಕ ಪ್ರಮಾಣಗಳನ್ನು ಉದಾಹರಿಸಬಹುದು :— "**ಜ್ಞಾತ್ವಾ ಏವಂ ಮುಚ್ಯತೇ ಸರ್ವಪಾಪ್ಮೈಃ**", "**ಬ್ರಹ್ಮವೇದ**

"ತತ್ವಜ್ಞಾನಾನ್ಮೋಕ್ಷ" ಇತಿ ವಾಕ್ಯಸ್ಯಾಭಿಪ್ರಾಯಃ

"ತತ್ವಜ್ಞಾನತ್ತಾಲೇವೋಕ್ಷ" ಮೆಜ್ಞರ ವಿದುವುಮ್ ಒರು ಉಪಾಯಾನುಷ್ಠಾನತ್ತೈ ಮುನ್ನಿಟ್ಟಿನ್ನು ಮಿಡಮ್ (೧) "ಭಜಸ್ವಮಾಂ" (೨) "ಮಾಮೇಕಂ ಶರಣಂ ವ್ರಜ" ಇತ್ಯಾದಿ ವಿಧಿಬಲ ಪ್ರಾಪ್ತಮ್

ಬ್ರಹ್ಮೈವ ಭವತಿ", "ಪೃಥಗಾತ್ಮಾನಂ ಪ್ರೇರಿತಾರಂ ಚ ಮತ್ವಾ" "ಭೋಕ್ತಾ ಭೋಗ್ಯಂ ಪ್ರೇರಿತಾರಂಚ ಮತ್ವಾಜುಷ್ಟಸ್ತತಸ್ತೇನಾ ಮೃತತ್ವಮೇತಿ" ಈ ಪೂರ್ವ ಪಕ್ಷಕ್ಕೆ ಸಮಾಧಾನವನ್ನು "ತತ್ವಜ್ಞಾನತ್ತಾಲೆ" ಎಂದಾರಂಭಿಸಿ ಹೇಳುತ್ತಾರೆ.

ತತ್ವ ಜ್ಞಾನದಿಂದ ಮೋಕ್ಷವೆಂಬ ವಾಕ್ಯದ ತಾತ್ಪರ್ಯವು

ತತ್ವಜ್ಞಾನವು ಆವಶ್ಯಕವೆಂಬುದನ್ನೇನೋ ಅಙ್ಗೀಕರಿಸುವೆವ, ಆದರೆ ಅದು ಉಪಾಯಾನುಷ್ಠಾನಕ್ಕೆ ಉಪಕಾರಕವಾಗಿ ಉಪಾಯಾನುಷ್ಠಾನದ್ವಾರಾ ಮೋಕ್ಷಪ್ರಾಪ್ತಿಗೆ ಹೇತುವಾಗುತ್ತದೆಂದು ಉಪದೇಶಿಸುತ್ತಾರೆ. ತತ್ವಜ್ಞಾನದಿಂದ ಮೋಕ್ಷವು, **ಎಜ್ಞರ ವಿದುವುಮ್** - ಎಂದು ಹೇಳುವದೂ ಕೂಡ, **ಒರು ಉಪಾಯಾನುಷ್ಠಾನತ್ತೈ ಮುನ್ನಿಟ್ಟಿನ್ನು ಮಿಡಮ್** - ಭಕ್ತಿ ಪ್ರಪತ್ತಿಗಳಲ್ಲಿ ಯಾವುದಾದರೂ ಒಂದು ಉಪಾಯಾನುಷ್ಠಾನಮೂಲಕವಾಗಿ ಎಂದು ಹೇಳುವ **ಸಂದರ್ಭವು** (೧) "ಭಜಸ್ವ" (೨) "ಮಾಮೇಕಂ ಶರಣಂ ವ್ರಜ" ಎಂಬಿವೇ ಮೊದಲಾದ, **ವಿಧಿ ಬಲಪ್ರಾಪ್ತಮ್** - ವಿಧಿವಾಕ್ಯಗಳ ಸಾಮರ್ಥ್ಯದಿಂದುಂಟಾದುದು, ಹಾಗೆ ಹೇಳದೇ ಹೋದರೆ ಉಪಾಯಾನುಷ್ಠಾನವನ್ನು ವಿಧಿಸುವ ವಾಕ್ಯಗಳು ನಿರರ್ಥಕಗಳಾಗುತ್ತವೆ; ಭಕ್ತಿ ಪ್ರಪತ್ತಿ ಶಾಸ್ತ್ರಗಳಿಗೆ ವೈಯರ್ಥ್ಯವುಂಟಾಗುತ್ತದೆಂಬ ತಾತ್ಪರ್ಯವು "ಜ್ಞಾತ್ವಾದೇವಂ ಮುಚ್ಯತೇ" ಸರ್ವೇಶ್ವರನನ್ನ ಹೀಗೆ ತಿಳಿದು (ಉಪಾಸನ ಮೂಲಕ) ಮೋಕ್ಷವನ್ನು ಹೊಂದುವನು. "ಸರ್ವ ಪಾಪೈಸ್ತಮೇನಂ ವಿದಿತ್ವಾತಿ ಮೃತ್ಯುಮೇತಿ" ಆತನನ್ನು ಹೀಗೆ(ಉಪಾಸನೆ ಮೂಲಕ) ತಿಳಿದು ಸರ್ವಪಾಪಗಳಿಂದಲೂ ಬಿಡಲ್ಪಟ್ಟವನಾಗಿ ಮೃತ್ಯು ಎಂದರೆ ಸಂಸಾರವನ್ನು ದಾಟುವನು. "ಅನುವಿದ್ಯ ವಿಜಾನಾತಿ" "ವಿಜ್ಞಾಯ ಪ್ರಜ್ಞಾಂ ಕುರ್ವೀತ" ಎಂಬ ವಿಶೇಷ ವಿಧಿಗಳಿರುವದರಿಂದ ಶೇಷ ಶೇಷಿತ್ವ ಸಂಬಂಧಜ್ಞಾನ

---

(೧) ಗೀ ೯ ೩೪. (೨) ಗೀ ೧೮ ೬೬.

ಜ್ಞಾನಾನ್ಮೋಕ್ಷೋಪದೇಶೇ(ಶೋ)ಹಿ ತಶ್ಚೂರ್ವೋಪಾಸನಾದಿನಾ।
ಉಪಾಸನಾದಿ ರೂಪಾದ್ವಾ ಜ್ಞಾನಾನ್ಮೋಕ್ಷೋ ವಿವಕ್ಷಿತಃ॥ ॥೪೩॥

ಮಾತ್ರವೇ ಸಾಕ್ಷಾತ್ತಾಗಿ ಮೋಕ್ಷಹೇತುವಾಗಲಾರದು. ಆದುದರಿಂದ **"ಭಜಸ್ವ"** ಇತ್ಯಾದಿ ವಿಧಿಗಳಲ್ಲಿ ತೋರಿಬರುವ ಉಪಾಯಾನುಷ್ಠಾನದ್ವಾರಾ ಮೋಕ್ಷವೇವಿನಾ ಅನ್ಯಥಾ ಇಲ್ಲವೇಂಬ ಭಾವವು. **"ಕಿಂಪುನ ಬ್ರಾಹ್ಮಣಾಃ ಪುಣ್ಯಾ ಭಕ್ತಾ ರಾಜರ್ಷಯಸ್ತಥಾ। ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವಮಾಂ"** ॥ ಎಂಬುದು **ಪೂರ್ವಶ್ಲೋಕವು** ಅರ್ಜುನನಿಗೆ ಉಪದೇಶಿಸುತ್ತಾರೆ; ನೀನು ಇರುವ ಲೋಕವು ಅನಿತ್ಯವಾಗಿ ಸುಖವಿಲ್ಲದುದಾಗಿ ತಾಪತ್ರಯಗಳಿಂದ ಕೂಡಿರುವುದರಿಂದ ನನ್ನನ್ನು ಭಜಿಸು ಎಂದು ಹಿತೋಪದೇಶಮಾಡಿದರು. ಆಭಜನವು ಎಂಬುದಕ್ಕೆ **"ಮನ್ಮನಾಭವ"** ಎಂದು ವಿವರಿಸಿ, **ಮಾಮೈವೇಷ್ಯಸಿ** ಎಂದು ಹೇಳುತ್ತಾರೆ ಇದಕ್ಕೆ ವ್ಯಾಖ್ಯಾನದಲ್ಲಿ **ಶ್ರೀ** ಯತಿರಾಜರು, **"ಉಕ್ತಲಕ್ಷಣ ಮಿದಂ ಮದುಪಾಸನಂ ಮದುಪಾದದಾನೋ ಮಾಮೇವ ಪ್ರಾಪ್ಸ್ಯಸಿ"** ಎಂದು ಮುಗಿಸಿರುವುದರಿಂದ ಸರಿಪೂರ್ಣ ಶೇಷತ್ವಜ್ಞಾನವೇ ಸಾಲದು, ಅದರೊಂದಿಗೆ ಉಪಾಯಾನುಷ್ಠಾನವೂ **ಆವಶ್ಯಕವೆಂಬುದು ಶ್ರೀ** ಯತಿರಾಜರ ದಿವ್ಯಸಂಕಲ್ಪವು ಮೂಲಕ ಸಿದ್ಧಾಂತಿತವು

ಹೀಗೆ **ತಶ್ಚಜ್ಞಾನಾನ್ಮೋಕ್ಷಃ** ಎಂಬುದಕ್ಕೆ ಎರಡುವಿಧವಾಗಿ ಉಪಪತ್ತಿಯನ್ನು ಕಲ್ಪಿಸಿದರು — (೧) ಶೇಷತ್ವಜ್ಞಾನವೂರ್ವಕೋಪಾಸನಾದಿಗಳಿಂದ ಯುಕ್ತವಾದ ಜ್ಞಾನದಿಂದಲಾಗಲಿ ಅಥವಾ (೨) ಉಪಾಸನಾದಿರೂಪಜ್ಞಾನದಿಂದಲಾಗಲಿ ಮೋಕ್ಷಪ್ರಾಪ್ತಿಯುಂಟಾಗುತ್ತದೆಂದು ತಾತ್ಪರ್ಯವನ್ನು ಕಲ್ಪಿಸುವದರಲ್ಲಿ ಏನೊಂದೂ ಬಾಧಕವಿಲ್ಲವೆಂಬ ಒಂದು ಸೂಕ್ಷ್ಮವನ್ನು ತಿಳಿಸುತ್ತಾರೆ.

ಜ್ಞಾನಾನ್ಮೋಕ್ಷೋಪದೇಶೇ - ಜ್ಞಾನದಿಂದ ಈ ಸಂದರ್ಭದಲ್ಲಿ ಶೇಷತ್ವಜ್ಞಾನದಿಂದ ಮೋಕ್ಷವುಂಟಾಗುತ್ತದೆಂದು ಉಪದೇಶಿಸುವದರಲ್ಲಿ, **ತಶ್ಚೂರ್ವೋಪಾಸನಾದಿನಾ** - ಶಾಸ್ತ್ರವಿಹಿತಜ್ಞಾನ ಪೂರ್ವಕವಾಗಿ ಪ್ರಾಪ್ತವಾದ ಉಪಾಸನವೇ ಮೊದಲಾದ ಉಪಾಯಗಳಿಂದಲಾಗಲಿ. ಇಲ್ಲಿ ಮೊದಲಾದ ಎಂದು ಹೇಳಿದುದರಿಂದ ಭರನ್ಯಾಸವೂ ಹೇಳಲ್ಪಟ್ಟಿತು, **ಉಪಾಸನಾದಿ ರೂಪಾದ್ವಾ-** ಉಪಾಸನ ಭರನ್ಯಾಸರೂಪವಾದ **ಜ್ಞಾನ**ದಿಂದಲಾಗಲಿ, ಜ್ಞಾನದಿಂದ ಮೋಕ್ಷವೆಂಬುದು, **ವಿವಕ್ಷಿತಃ** - ಹೇಳಲ್ಪಟ್ಟಿತು. **ಜ್ಞಾನಾನ್ಮೋಕ್ಷಃ** ಎಂಬುದನ್ನೇನೋ ಒಪ್ಪಿಕೊಳ್ಳತಕ್ಕದ್ದೇ, ಆದರೆ ವಿಧಿಸಿರುವ ಉಪಾಯಗಳಿಂದ ಭಕ್ತಿ ಪ್ರವತ್ತಿಗಳಿಗೆ

ಶಾಸ್ತ್ರಜನ್ಯಮಾನ ಶೇಷತ್ವಜ್ಞಾನ ಮಾತ್ರಂ ನಿವೃತ್ತಿ ಧರ್ಮಜ್ಞಾನ ನ್ಯಾಸೋಪಾಸನಾದಿಗಳೆಲ್ಲಾತ್ತುಕ್ಕುಮ್ ಪೊದುವಾಯಿರುಕ್ಕುಮ್ ; ಶೇಷ

ವೈಯರ್ಥ್ಯವುಂಟಾಗದ ಹಾಗೆ ಅದರಭಿಪ್ರಾಯವನ್ನು ಗ್ರಹಿಸತಕ್ಕದ್ದು. ಶಾಸ್ತ್ರ ಜನ್ಯಜ್ಞಾನಪೂರ್ವಕವಾದ ಉಪಾಸನ ಭರನ್ಯಾಸಗಳಿಂದ ಮೋಕ್ಷವು ಎಂದಾದರೂ ಅರ್ಥಹೇಳತಕ್ಕದ್ದ್ದ; ಅಥವಾ, ಉಪಾಸನ ಭರನ್ಯಾಸರೂಪ ಜ್ಞಾನದಿಂದ ಮೋಕ್ಷವೇದಾದರೂ ಅರ್ಥಹೇಳತಕ್ಕದ್ದ್ದು, ಎಂಬುದ ಈ ಶ್ಲೋಕತಾತ್ಪರ್ಯವು ಹಾಗಲ್ಲದೆ, ಅಪ್ಸೈತಿಗಳು ವಾಕ್ಯಜನ್ಯ ಜ್ಞಾನವಿಂದ ಮೋಕ್ಷವೆಂದು ಹೇಳುವ ಹಾಗೆ, ಸಾಕ್ಷಾತ್ ಶಾಸ್ತ್ರಜನ್ಯ ಶೇಷತ್ವ ಜ್ಞಾನವಿಂದಲೇ ಮೋಕ್ಷವೆಂಬ ವಾದವನ್ನು ತಂದರ, ಶ್ರೀ ಭಾಷ್ಯ, ಗೀತಾಭಾಷ್ಯಗಳ ಉಪದೇಶಕ್ರಮ, ಉಪಾಸನ ಶರಣಾಗತಿ ರೂಪೋಪಾಯಗಳನ್ನು ಪ್ರತಿಪಾದಿಸುವ ಇತಿಹಾಸ ಪುರಾಣಗಳಿಗೂ, ಪ್ರತ್ಯಕ್ಷ ವಿರುದ್ಧವಾಗುವುದರಿಂದ, ಶೇಷತ್ವಜ್ಞಾನವು ಎಂದಿಗೂ ಉಜ್ಜೀವ್ಯವಲ್ಲವು, ಇನ್ನು ಯಾವುದು ಎಂದರೆ, ಅಂತಹ ಜ್ಞಾನವಿಂದ ಕೂಡಿದ ನಿತ್ಯಕರ್ಮಾ ಭರಸವರ್ಪಣವೇ ಉಜ್ಜೀವ್ಯವು ಎಂಬುದೇ ಸಿದ್ಧಾಂತವು

"ಸ್ವೋಜ್ಜೀವನೇಚ್ಛಯಾದಿತೀ" ಎಂಬ ಶ್ಲೋಕದಲ್ಲಿ ಶೇಷತ್ವಜ್ಞಾನವು ಮೋಕ್ಷ ಹೇತುವೆಂದು ಅದಕ್ಕೆ ಪ್ರಾರಶ್ಯವನ್ನು ಸೇರುವದರಿಂದ ಅದು ಮೋಕ್ಷಕ್ಕೆ ಸಾಕ್ಷಾತ್ ಹೇತುವಲ್ಲವೆಂದರೂ, ಹೇಗೆ ಉಪಕಾರಕವೆಂಬುದನ್ನು **ಜ್ಞಾನಾನ್ಮೋಕ್ಷೋಪದೇಶೇ** ಎಂಬ ಕಾರಿಕೆಯ ಮೂಲಕ ವಿಕಲ್ಪಿಸಿ ತಿಳಿಸಿಸುವದನ್ನೆಂ, ಮುಂದಿನ ಎರಡು ವಾಕ್ಯಗಳ ಮೂಲಕ ಉಪದೇಶಿಸುತ್ತಾರೆ **ಶಾಸ್ತ್ರಜನ್ಯಮಾನ** ಶೇಷತ್ವ ಜ್ಞಾನಮಾತ್ರಂ-ಶಾಸ್ತ್ರಗಳೆಂದುಂಟಾದ ಶೇಷತ್ವ ಜ್ಞಾನವಾದರೋ, **ನಿವೃತ್ತಿ ಧರ್ಮಜ್ಞಾನ** - ಫಲಾಭಿಸಂಧಿಯಿಲ್ಲದೆ ಅಂತ್ಯದಲ್ಲಿ ಸಾತ್ವಿಕ ತ್ಯಾಗವನ್ನು ಹೇಳಿ ಅನುಷ್ಠಿಸಿದ ಧರ್ಮಗಳಿಂದ, **ಭರನ್ಯಾಸ ಉಪಾಸನ** ಮೊದಲಾದ ಎಲ್ಲಾ ವಿಧಿವಾಕ್ಯಾನುಸಾರ ನಡೆಸಿದ ಕರ್ಮಾನುಷ್ಠಾನಗಳಿಗೂ, **ಪೊದುವಾಯಿರುಕ್ಕುಮ್** - ಸಾಧಾರಣವಾಗಿರುತ್ತವೆ ಶಾಸ್ತ್ರದ ವಿಧಿ ವಾಕ್ಯಗಳಿಗನುಸಾರವಾಗಿ ನಡೆಸುವ ಕರ್ಮಗಳಿಗೆ ಧರ್ಮವೆಂಬ ಹೆಸರು. ಫಲಾಭಿಸಂಧಿ ಪೂರ್ವಕವಾಗಿ ಅನುಷ್ಠಿಸಿದ ಧರ್ಮಕ್ಕೆ ಪ್ರವೃತ್ತಿ ಧರ್ಮವೆಂದೂ ಫಲಾಭಿ ಸಂಧಿಯನ್ನು ತೊರೆದು ತ್ಯಾಗಪೂರ್ವಕವಾಗಿ ಅನುಷ್ಠಿಸಿದ ಧರ್ಮಕ್ಕೆ **ನಿವೃತ್ತಿ** ಧರ್ಮವೆಂದೂ, ಹೆಸರು. ಪ್ರವೃತ್ತಿಧರ್ಮವು ಬಂಧಕವು, ನಿವೃತ್ತಿಧರ್ಮವು ಮೋಕ್ಷಕ್ಕೆ ಉಪಕಾರಕವು; ಆದರಿಂದಲೇ ಮೋಕ್ಷಧರ್ಮದಲ್ಲಿ '**ಪ್ರವೃತ್ತಿಃ ಪುನರಾ**

ವೃತ್ತಿರೂಪವಮಾನ ಕೈಙ್ಕರ್ಯಮೇ ಮುಮುಕ್ಷುವುಕ್ಕು ಪುರುಷಾರ್ಥಕಾಷ್ಠೈಯಾಗೈಯಾಲೇ ಶೇಷತ್ವ ಮರಿಯಾದ ಮೋಕ್ಷೋಪಾಯಂ ಅನುಷ್ಠಿಕ್ಕ ಘಟಿಯಾದಿರೆ.

ವೃತ್ತಿರ್ನಿವೃತ್ತಿಃ ಪರಮಾಗತಿಃ" ಎಂದು ಹೇಳಲ್ಪಟ್ಟಿರುತ್ತದೆ. ಇಂತಹ ನಿವೃತ್ತಿ ಧರ್ಮಗಳಾದ ನ್ಯಾಸೋಪಸನಾದಿಗಳಿಗೆಲ್ಲಾ ತುಂಬಾ ಉಪಕಾರಕವು ಈ ಶಾಸ್ತ್ರಜನ್ಯ ಶೇಷತ್ವಜ್ಞಾನವೆಂಬಭಿಪ್ರಾಯವು. ಉತ್ತರಾರ್ಧದ ಅರ್ಥವನ್ನು ವ್ಯಕ್ತಪಡಿಸುತ್ತಾರೆ. ಶೇಷವೃತ್ತಿ ರೂಪವಮಾನ ಕೈಙ್ಕರ್ಯಮೇ - ಶೇಷವೃತ್ತಿಗೆ ಸ್ವರೂಪವಾದ ಕೈಙ್ಕರ್ಯವೇ, ಮುಮುಕ್ಷುವುಕ್ಕು - ಮೋಕ್ಷಾರ್ಥಿಗೆ, ಪುರುಷಾರ್ಥಕಾಷ್ಠೈಯಾಗೈಯಾಲೇ - ಪುರುಷಾರ್ಥವು ಮೋಕ್ಷವು, ಅದರ ಪರಾಕಾಷ್ಠೈಯು ಕೈಙ್ಕರ್ಯವು, ಮೋಕ್ಷವು ಏತಕ್ಕೆಂದರೆ ದಾಸಭೂತನಾದ ತಾನು ತನ್ನ ಸ್ವಾಮಿಯಾದ ಶ್ರೀವಾಸುದೇವನಿಗೆ ಕೈಙ್ಕರ್ಯವನ್ನು ಮಾಡುವದಕ್ಕಾಗಿ, ಆದುದರಿಂದ ಕೈಙ್ಕರ್ಯವು ಪುರುಷಾರ್ಥ ಕಾಷ್ಠೆಯೆಂದು ಹೇಳಲ್ಪಟ್ಟಿತು, ಶೇಷತ್ವ ಮರಿಯಾದ - ಶೇಷತ್ವಜ್ಞಾನವಿಲ್ಲದ, ಮೋಕ್ಷೋಪಾಯಂ -ಮೋಕ್ಷೋಪಾಯಗಳಾದ ನ್ಯಾಸೋಪಸನೆಗಳಲ್ಲಿ ಒಂದನ್ನು, ಅನುಷ್ಠಿಕ್ಕ - ಅನುಷ್ಠಿಸೋಣವು, ಘಟಿಯಾದಿರೇ - ಸಂಘಟಿಸಲಾರದಷ್ಟೇ; ಶೇಷತ್ವ ಜ್ಞಾನವಿಲ್ಲದವನಿಗೆ ಮೋಕ್ಷೋಪಾಯವನ್ನು ಅನುಷ್ಠಿಸಲು ಅಭಿರುಚಿಯು ಉಂಟಾಗುವದಿಲ್ಲವು. ಮೋಕ್ಷದಲ್ಲಿ ತನಗುಂಟಾಗುವ ನಿರತಿಶಯ ಸಂಪತ್ತು ಯಾವುದೆಂದರೆ, ಕಿಂಕರ ತ್ವಾಧಿರಾಜ್ಯಂ ಎಂದು ಪ್ರಥನ ಶ್ಲೋಕದಲ್ಲಿ ಹೇಳಲ್ಪಟ್ಟಿತು; ಆದುದರಿಂದ ಕೈಙ್ಕರ್ಯವೇ ತನಗೆ ಪುರುಷಾರ್ಥಕಾಷ್ಠೆ ಎಂಬಜ್ಞಾನ ಯುಕ್ತವಾದವು, ನ್ಯಾಸೋಪಸನೆಗಳು ಎಂಬ ಭಾವವು,

ಆದುದರಿಂದ ಶೇಷತ್ವಜ್ಞಾನವು ಸಾಕ್ಷಾತ್ತಾಗಿ ಮೋಕ್ಷದಾಯಕವಲ್ಲವು; ಮೋಕ್ಷಪ್ರಾಪ್ತಿಗೆ ಉಪಕಾರಕವೆಂದು ನಿಗಮನವಮಾಡಿ ಮುಂದಿನ ವಾಕ್ಯವಾದ "ಶೇಷತ್ವಜ್ಞಾನ" ವೆಂಬುವ ವಾಕ್ಯದ್ವಯದಿಂದ ತಿಳಿಸುತ್ತಾರೆ- ಹಾಗೆ ಉಪಕಾರಕ ಮಾತ್ರನಾದರೆ, ಶೇಷತ್ವಜ್ಞಾನವಿಲ್ಲದೆ ಉಪಾಯಾನುಷ್ಠಾದಲ್ಲಿ ಪ್ರವೃತ್ತಿಯುಂಟೋ ಎಂದರೆ ಉಂಟು ಎಂದು ಹೇಳಿ, ಆಗ ಶೇಷತ್ವಜ್ಞಾನವಿಲ್ಲದಿದ್ದರೂ ಅಂತಹ ಧರ್ಮಾನುಷ್ಠಾನಬಲದಿಂದ ಶೇಷತ್ವಜ್ಞಾನ ಉಂಟಾಗಿ, ಉಪಾಯಾನುಷ್ಠಾನ ಪೂರ್ತಿಯಿಂದ ಮೋಕ್ಷಪ್ರಾಪ್ತಿಯುಂಟಾಗುತ್ತದೆಂದು ಹೇಳುತ್ತಾರೆ.

ಅತಃ ಶೇಷತ್ವಜ್ಞಾನಮಾತ್ರಂ ನಾಲಮಿತಿ ನಿಗಮನಂ.

ಶೇಷತ್ವಜ್ಞಾನ ಮನ್ರಿಕ್ಕೇ ಮೊಕ್ಷಾರ್ಥಮಾಗ ವಿಧಿತ್ತ ಧರ್ಮ ಙ್ಗಳೈ ಅನುಷ್ಠಿತ್ತಾ ನಾಗಿಲುಮ್ ಇವ್ವರ್ಮಙ್ಗಳ್ ತಾನೇ, ಶೇಷತ್ವ ಜ್ಞಾನತ್ತೈಯುಮ್ ಉಣ್ಡಾಕ್ಕಿ, ಪೂರ್ಣಾನ ಷ್ಠಾನ ಮುಖತ್ತಾಲೇಯಿರೆ ಮೋಕ್ಷಹೇತುವಾವದು

ಅದುದರಿಂದ ಶೇಷತ್ವಜ್ಞಾನಮಾತ್ರವೇ ಸಾಲದು ಭರನ್ಯಾಸವೂ ಆವಶ್ಯಕವೆಂದು ನಿಗಮನವು.

ಶೇಷತ್ವಜ್ಞಾನ ಮನ್ರಿಕ್ಕೇ - ಶೇಷತ್ವಜ್ಞಾನವಿಲ್ಲದೇನೇ, **ಮೋಕ್ಷಾರ್ಥಮಾಗವಿಧಿತ್ತಧರ್ಮಙ್ಗಳೈ** - ಮೋಕ್ಷಕ್ಕೆ ಸಾಧ್ಯೋಪಾಯಗಳೆಂದು ವಿಧಿಸಿದ ನ್ಯಾಸೋಪಾಸನೆಗಳನ್ನು, **ಅನುಷ್ಠಿತ್ತಾ ನಾಗಿಲುಮ್** - ಅನುಷ್ಠಿಸಿದರೂ ಕೂಡ, ಇವ್ವರ್ಮಙ್ಗಳ್ ತಾನೇ - ಈ ಭರನ್ಯಾಸ ಮತ್ತು ಕರ್ಮಯೋಗಾದಿ ಧರ್ಮಗಳೇ, **ಶೇಷತ್ವಜ್ಞಾನವನ್ನು, ಉಂಡಾಕ್ಕಿ** - ಉಂಟು ಮಾಡಿ, **ಪೂರ್ಣಾನುಷ್ಠಾನ ಮುಖತ್ತಾಲೇಯಿರೆ** - ಅನುಷ್ಠಾನಪೂರ್ತಿದ್ವಾರಾವಾಗಿ **ತಾನೇ, ಮೋಕ್ಷಹೇತುವಾವದು** - ಮೋಕ್ಷಹೇತುವಾಗುತ್ತವೆ ಇದರಿಂದ ಮೋಕ್ಷಕ್ಕೆ ಸಾಕ್ಷಾತ್ತಾಗಿ ಹೇತುವು ನ್ಯಾಸೋಪಾಸನರೂಪ ಉಪಾಯಾನುಷ್ಠಾನವೇವಿನಾ ಅನ್ಯಥಾ ಯಿಲ್ಲವೆಂಬ ಭಾವವು ಶೇಷತ್ವ ಜ್ಞಾನವಾದರೋ ಉಪಾಯಾನುಷ್ಠಾನಕ್ಕೆ ಪೂರ್ವಭಾವಿಯಾಗಿ ಇಲ್ಲದಿದ್ದರೂ ಪರಂಪರಯಾ ಉತ್ಪನ್ನವಾಗಿ, ಉಪಾಯಾನುಷ್ಠಾನಪೂರ್ತಿಯನ್ನುಂಟುಮಾಡಿ, ಮೋಕ್ಷಹೇತುವಾಗುತ್ತದೆಂಬ ಭಾವವು ಸುಕೃತ ಪರಿಪಾಕಮೂಲಕವಾಗಿ, **"ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋಭಯಾತ್"** ಎಂದು ಹೇಳಿರುವ ಪ್ರಕಾರ ಭಕ್ತಿಮಾರ್ಗದಲ್ಲೇನೋ ಕರ್ಮಯೋಗಾರಂಭ ಉಂಟಾದನಂತರ, ತನ್ಮೂಲಕವಾಗಿ ಈತನಿಗೆ ಪರಂಪರಯಾ ಶೇಷತ್ವಜ್ಞಾನವೂ, ಉಪಾಸನ ನಿಷ್ಪತ್ತಿಮೂಲಕ ಉಪಾಯಾನುಷ್ಠಾನಪೂರ್ತಿಯೂ ಉಂಟಾಗಬಹುದು. ಆದರೆ ಭರನ್ಯಾಸವು ಸಕೃದನುಷ್ಠೇಯವಾಗಿರುವಾಗ, **"ಶೇಷತ್ವ ಜ್ಞಾನತ್ತೈಯುಮ್ ಉಣ್ಡಾಕ್ಕಿ ಪೂರ್ಣಾನುಷ್ಠಾನ ಮುಖತ್ತಾಲೆ"** ಎಂಬುದು, ಹೇಗೆ ಪ್ರಪತ್ತಿ ಧರ್ಮಕ್ಕೆ ಅನ್ವಯಿಸುತ್ತದೆ ಎಂದು ಪ್ರಶ್ನಿಸಬಹುದು. ಭರನ್ಯಾಸವೂ ಆಚಾರ್ಯಮುಖೇನ ನಡೆಯುವದರಿಂದ ಅವರುಗಳ ಮೂಲಕ ಶೇಷತ್ವಜ್ಞಾನೋಪದೇಶ ಉಂಟಾಗಿ

ಆಗ್ಯೈಯಾಲ್ ಇಜ್ಞ ವಿಧೇಯಮಾನ ಸಮರ್ಪಣಂ ಶೇಷತ್ವಜ್ಞಾನ ಮಾತ್ರವನ್ನು ; ಮುಂದಿನದೆನ್ನಿಲ್, ಶೇಷತ್ವಜ್ಞಾನಾದಿ ಯುಕ್ತವಾನ ಸ್ವರಕ್ಷಾ ಭರನ್ಯಾಸವು.

ಉಪಾಯಪೂರ್ತಿಯಾಗುತ್ತದೆಂಬ ಭಾವವು. ಅಸಹ್ಯನ ಕರಣಮಂತ್ರವೇ ಈ ಜ್ಞಾನವನ್ನು ಉಂಟುಮಾಡುತ್ತದೆ

ಆಗ್ಯೈಯಾಲ್ - ಆ ಕಾರಣದಿಂದ ಎಂದರೆ ಶೇಷತ್ವಜ್ಞಾನವು ಅಧಿಕಾರ ವಿಶೇಷಣವಾದುದರಿಂದಲೂ, ಆಕಿಂಚನ್ಯದಿಂದ ಕೂಡಿದ ಉಪಾಯಾನುಷ್ಠಾನವು ವಿಧಿಸಲ್ಪಟ್ಟಿರುವದರಿಂದಲೂ, **ಇಜ್ಞ** -- ಈ ಸಂದರ್ಭದಲ್ಲಿ ಎಂದರೆ ಪ್ರಪನನಕ್ಕೆ ಆಜ್ಞಾಯಾವುದೆಂದು ನಿರ್ಧರಿಸುವ ಪ್ರಕರಣದಲ್ಲಿ, **ವಿಧೇಯಮಾನ ಸಮರ್ಪಣವು** - **"ಆತ್ಮಾನಂ ಮಯಿನಿಕ್ಷಿಪೇತ್"** ಇತ್ಯಾದಿಗಳಲ್ಲಿ ವಿಧಿಸಲ್ಪಟ್ಟ ಸಮರ್ಪಣವು, **ಶೇಷತ್ವಜ್ಞಾನಮಾತ್ರವನ್ನು** - ಬರೀ ಶೇಷತ್ವ ಜ್ಞಾನವಲ್ಲವು ; **ಮುಂದಿನದೆನ್ನಿಲ್** -- ಇನ್ನು ಯಾವುದು ಎಂದರೆ, **ಶೇಷತ್ವ ಜ್ಞಾನಾದಿಯುಕ್ತವಾನ** - ಶೇಷತ್ವಜ್ಞಾನವೇ ಮೊದಲಾದುದರಿಂದ ಕೂಡಿದ, **ಸ್ವರಕ್ಷಾ ಭರನ್ಯಾಸವು** - ತನ್ನ ರಕ್ಷಾ ಭರನ್ಯಾಸವು ; ಇದರಲ್ಲಿ ಉಪಾಯ ಫಲಗಳ ಭರನ್ಯಾಸವೂ ಅಂತರ್ಗತವು. ಇದೀಗ ಆಜ್ಞಾಯು ಎಂಬ ಭಾವವು.

ಭಗವಂತನಲ್ಲಿ ಉಪಾಯತ್ವಜ್ಞಾನಮಾತ್ರವೇ ಪ್ರಪತ್ತಿಯು ಎಂಬ ವಾದದ ಖಂಡನವು

ಈ ಶ್ಲೋಕಕ್ಕೆ ಎರಡು ವಿಧವಾಗಿ ತಾತ್ಪರ್ಯವನ್ನು ಹೇಳುತ್ತಾರೆ.

(೧) ಹಿಂದೆ ಶೇಷತ್ವ ಜ್ಞಾನವೇ ಪ್ರಪತ್ತಿಯು ಎಂಬ ಕೆಲವರ ಅಭಿಪ್ರಾಯವನ್ನು ಖಂಡಿಸಿ, ಭಗವಂತನೇ ನಮಗೆ ಸಿದ್ಧೋಪಾಯನೆಂಬ ಜ್ಞಾನವೇ ಪ್ರಪತ್ತಿಯು ಎಂಬ ಪಕ್ಷವನ್ನು ಮುಂದಿನ ಕಾರಿಕೆಯಿಂದ ನಿರಾಕರಿಸುತ್ತಾರೆ. ಈ ಕಾರಿಕೆಯಲ್ಲಿ ಪೂರ್ವಪಕ್ಷವನ್ನು ಅನುವಾದಮಾಡಿ, ನಾಲ್ಕನೆಯ ಪಾದದಿಂದ ಸಮಾಧಾನವನ್ನು ಹೇಳುತ್ತಾರೆ :—

ವಾಕ್ಯಮಾತ್ರೇಣ ಸಿದ್ಧತ್ವಾತ್ - ಚರಮಶ್ಲೋಕದ ವಾಕ್ಯವಾದ **"ಶರಣಂ ವ್ರಜ"** ಎಂಬುದರಿಂದ ಮಾತ್ರ ಎಂದರೆ ಯಾವ ಅನುಷ್ಠಾನದ ಆವಶ್ಯಕತೆಯೂ ಇಲ್ಲದೆ ಸಿದ್ಧಿಸುವದರಿಂದ ಎಂದು ಸಾರದೀಪಿಕೆ ಸಾರವಿವರಣೆಯವರು ಅರ್ಥಮಾಡಿರುತ್ತಾರೆ, ಸಾರಸಂಗ್ರಹದವರು **"ನ್ಯಾಸ ಇತಿ ಬ್ರಹ್ಮ"** ಎಂದು ಸಮಾನಾಧಿಕರಣ್ಯವು ಶಾಸ್ತ್ರದಲ್ಲಿ ಹೇಳಿರುವದರಿಂದ ಪರಬ್ರಹ್ಮನು ಹೇಗೆ ಸಿದ್ಧೋಪಾಯನೋ ಹಾಗೆಯೇ

ಭಗವತ್ಯುಪಾಯತ್ವ ಜ್ಞಾನಮಾತ್ರಮೇವ ಪ್ರಪತ್ತಿರಿತಿಪಕ್ಷಸ್ಯ ನಿರಸನಂ

ವಾಕ್ಯಮಾತ್ರೇಣ ಸಿದ್ಧತ್ವಾತ್ಸಿದ್ಧೋಪಾಯಇಹೋಚ್ಯತೇ (ತಾಂ) ।
ಪ್ರಪತ್ತಿರಿತಿ ವಾದೋಪಿ ವಿಧಿನಾತ್ರ ವಿಹನ್ಯತೇ ॥೪೪॥
"ಶರಣಂ ವ್ರಜ" ಎಜ್ಞಾರವಿದು "ಇನು ಮರ್ಥಂ ಜಾನೀಹಿ"

ಪ್ರಪತ್ತಿಯೂ ಸಿದ್ಧೋಪಾಯವೆಂಬುದು ವಾಕ್ಯದಿಂದ ಸಿದ್ಧಿಸುವದರಿಂದ, ಅಥವಾ **ಪ್ರಪತ್ತಿ**ಯೆಂದು ಶಾಸ್ತ್ರದಲ್ಲಿ ತೋರಿಬರುವ **ವಾಕ್ಯ**ಮಾತ್ರದಿಂದಲೇ ಸಿದ್ಧಿಸುವದರಿಂದ, **ಪ್ರಪತ್ತಿಃ** - ಪ್ರಪತ್ತಿಯು, **ಇಹ** – ಈ **ಪ್ರಪತ್ತಿ** ಶಾಸ್ತ್ರದಲ್ಲಿ, **ಸಿದ್ಧೋಪಾಯ ಇತಿ** - ಸಿದ್ಧೋಪಾಯವೆಂದು, **ಉಚ್ಯತೇ** - ಹೇಳಲ್ಪಡುತ್ತದೆ, **ಇತಿ ವಾದೋಪಿ** – ಎಂಬ ವಾದವೂ ಕೂಡ, **ಅತ್ರ** - ಈ ಸಂದರ್ಭದಲ್ಲಿ, **ವಿಧಿನಾ-ವ್ರಜ** ಎಂಬ ಧಾತುವಿನಲ್ಲಿರುವ ವಿಧಿ ಪ್ರತ್ಯಯದಿಂದ, **ವಿಹನ್ಯತೇ**-ಹೊಡೆಯಲ್ಪಡುತ್ತದೆ, ನಿರಸನ ಮಾಡಲ್ಪಡುತ್ತದೆ. **ಮಾಮೇಕಂ ಶರಣಂ ವ್ರಜ** - ಶರಣವನ್ನು ಹೊಂದು ಎಂಬ ವಿಧಿಸೂಚಕವಾಗಿ ಕೃತಿಯಿಂದ ಸಾಧ್ಯವಾದ ಒಂದು ಸಾಧ್ಯೋಪಾಯವು ಬೋಧಿತವಾಗುವದರಿಂದ "ಅನುಷ್ಠಾನ ಬೇಕಿಲ್ಲವು, ವಾಕ್ಯ **ಜ್ಞಾನ**ಮಾತ್ರವೇ ಪ್ರಪತ್ತಿ" ಎಂಬ ವಾದವು ನಿರಸನ ಮಾಡಲ್ಪಟ್ಟಿತು

(೨) ಕಾರಿಕಾ ದರ್ಪಣದಲ್ಲಿ ಬೇರೇ ವಿಧವಾಗಿ **ಅನ್ವಯಿ**ಸಿರುತ್ತಾರೆ

ವಾಕ್ಯಮಾತ್ರೇಣ ಸಿದ್ಧತ್ವಾತ್-ಯಾವುದು ವಾಕ್ಯಮಾತ್ರದಿಂದ ಸಿದ್ಧಿಸಲ್ಪಟ್ಟಿದುದು ಎಂದರೆ, **ಪ್ರಪತ್ತಿಃ** - ಎಂದು ಉತ್ತರಾರ್ಧದಲ್ಲಿರುವದಕ್ಕೆ ಇತರರು ಅನ್ವಯಿಸಿದರು, ಇನ್ನರು ಶೇಷತ್ವಜ್ಞಾನಂ ಎಂದು ಅಧ್ಯಾಹಾರ ಮಾಡಿಕೊಂಡು ಶೇಷತ್ವಜ್ಞಾನವು ಶಾಸ್ತ್ರಜನ್ಯಜ್ಞಾನದಿಂದ ಸಿದ್ಧಿಸುವದರಿಂದ ಈ ಶೇಷತ್ವಜ್ಞಾನವು ಭಗವಂತನಹಾಗೆ ಸಿದ್ಧೋಪಾಯವೆಂದೇ, **ಉಚ್ಯತೇ** ಅಥವಾ **ಉಚ್ಯತಾಂ** - ಹೇಳಲ್ಪಡಲಿ, ಆ ಸಿದ್ಧೋಪಾಯವಾದ ಶೇಷತ್ವಜ್ಞಾನವೇ, **ಪ್ರಪತ್ತಿಃ** - ಪ್ರಪತ್ತಿಯು, **ಇತಿ ವಾದಃ** - ಎಂಬವಾದವು, **ವಿಧಿನಾ** – ಕೃತಿಸಾಧ್ಯವಾದ ವಿಧಿವಾಕ್ಯವಾದ **ಶರಣಂವ್ರಜ ಎಂಬು**ದರಿಂದ, **ವಿಹನ್ಯತೇ**-ಹೊಡೆಯಲ್ಪಡುತ್ತದೆ.

ಈ ಕಾರಿಕಾ ವ್ಯಾಖ್ಯಾನ್ಯವಿನ ಅಭಿಪ್ರಾಯಪ್ರಕಾರ ಜ್ಞಾನರೂಪವಾದ ಸಿದ್ಧೋಪಾಯವೇ ಸಾಲದು, **ಶರಣಂ ವ್ರಜ** ಎಂಬ ವಿಧಿವಾಕ್ಯವಿರುವದರಿಂದ, ಕೃತಿಸಾಧ್ಯವಾದ ಒಂದು ಸಾಧ್ಯೋಪಾಯವಾದ ಭರಸಮರ್ಪಣವು ಅವಶ್ಯಕವೆಂದುಸಾಧಿಸಲ್ಪಟ್ಟಿತು. ಇದರಮೇಲೆ ಪುನಃ ಇನ್ನೊಂದು **ಪೂರ್ವಪಕ್ಷವೇ**ನೆಂದರೆ, **ವ್ರಜ** ಶಬ್ದವು ಗತ್ಯರ್ಥ

ಎಜ್ಞಾರ ಮಾತ್ರವಾಯ್ ಒರು ಕರ್ತವ್ಯೋಪಾಯ ವಿಧಿ ಪರ ವಃನ್ರಿಕ್ಕೇ ಯೊಳಿನ್ವಾಲೋ ವೆನ್ನಿಲ್ ? ಇದು ತಬ್ದಸ್ವಾರಸ್ಯ ವಿರುದ್ಧಮ್.

ವಾದುದು, ಗತ್ಯರ್ಥವುಳ್ಳವುಗಳೆಲ್ಲಾ ಬುದ್ಧ್ಯರ್ಥದಲ್ಲೂ ಪ್ರಯೋಗವುಳ್ಳವುಗಳಾದುದರಿಂದ, **ಶರಣಂವ್ರಜ** ಎಂಬಲ್ಲಿ ಕೃತಿಸಾಧ್ಯವಾದುದು ಯಾವುದೂ ಇಲ್ಲವು, **ಶರಣಂ ವ್ರಜ** ಎಂದರೆ **ಶರಣಮಿತಿ ಜಾನೀಹಿ**, ಶರಣವೆಂದು ತಿಳಿಯತಕ್ಕದ್ದೆಂಬರ್ಥವು, ಆದುದರಿಂದ ಪ್ರಪತ್ತಿಗೆ ಅನುಷ್ಠಾನ ಬೇಕಿಲ್ಲವು, ಬರೀ ಜ್ಞಾನ ಮಾತ್ರವೇ ಎಂಬದಾಗಿ ಪೂರ್ವಪಕ್ಷವು, ಇದಕ್ಕೆ ಸಮಾಧಾನವನ್ನು ಹೇಳ್ತಾರೆ. **ಶರಣಂ ವ್ರಜ ಎಜ್ಞಾರುವುದು** - ಶರಣಂವ್ರಜ ಎಂದು ಹೇಳಿರುವುದು, "**ಇನು ಮರ್ಥಂಜಾನೀಹಿ**" - "ಶ್ರೀಕೃಷ್ಣನಾದ ನಾನು **ಶರಣ**ವೆಂಬಭಿಪ್ರಾಯವನ್ನು ಅರ್ಜುನನಾದ ನೀನು ತಿಳಿಯತಕ್ಕದ್ದು" **ಎಜ್ಞಾರಮಾತ್ರಮಾಯ್** - ಇಷ್ಟು ಮಾತ್ರ ಅಭಿಪ್ರಾಯವುಳ್ಳದಾಗಿ, ಮಾತ್ರಶಬ್ದದಿಂದ ಅನುಷ್ಠಾನ ಪರವಲ್ಲವೆಂಬ ಭಾವವು, ಇದನ್ನೇ ಮುಂಪೆ ವಿವರಿಸುತ್ತಾರೆ, **ಒರುಕರ್ತವ್ಯೋಪಾಯ ವಿಧಿ ಪರಮನ್ರಿಕ್ಕೇ** - ಒಂದು ಮಾಡಬೇಕಾಗಿರುವ ಉಪಾಯವನ್ನು ವಿಧಿಸುವದಿಲ್ಲವಾಗಿ, **ಒಳಿನ್ವಾಲೋ ವೆನ್ನಿಲ್**-ಪ್ರಾಪ್ತವಾದುದು ಎಂದರೋ, ಹೀಗೆ ಪೂರ್ವಪಕ್ಷ ತಂದರೆ ಎಂಬ ಭಾವವು, **ಮಾನೇಕಂ ಶರಣಂ** - ನಾನೊಬ್ಬನೇ ನಿನಗೆ ಉಪಾಯವು ಎಂದು **ವ್ರಜ** - ತಿಳಿ ಎಂಬುದೀಗ ಅರ್ಥವಾಗಿ, ಆ ಕಾರಣದಿಂದ ಅನುಷ್ಠಿಸಬೇಕಾದ ಯಾವ ಸಾಧ್ಯೋಪಾಯವೂ ಬೇಕಿಲ್ಲವೆಂದು ಅರ್ಥಮಾಡಿದರೆ ಎಂಬರ್ಥವು, ಹೀಗೆ ಅರ್ಥಮಾಡಿದರೆ ಇದು, **ಶಬ್ದಸ್ವಾರಸ್ಯ ವಿರುದ್ಧಮ್** - ವ್ರಜ ಎಂಬುದು ಲೋಟ್, ಆದಕ್ಕೆ ಕೃತಿಸಾಧ್ಯವಾದ ವಿಧಿಯಲ್ಲೇ ಅರ್ಥಸ್ವಾರಸ್ಯ ವಿರುವದರಿಂದ, ಅದಕ್ಕೆ ವಿರುದ್ಧವಾಯಿತು ಎಂಬ ಭಾವವು. **ಶರಣಂ ವ್ರಜ** ವೆಂಬುದಕ್ಕೆ ಶರಣಾಗತ್ಯನುಷ್ಠಾನದಲ್ಲಿ ಅರ್ಥಸ್ವಾರಸ್ಯವೇ ವಿನಾ, ಜ್ಞಾನಮಾತ್ರೋಪದೇಶದಲ್ಲಿ ಸ್ವಾರಸ್ಯವಿಲ್ಲವೆಂಬ ಭಾವವು. ಇಷ್ಟುಮಾತ್ರವೇ ಅಲ್ಲವು, ಇನ್ನೂ ಒಂದು ದೋಷವುಂಟು, ಅದೇನಂದರೆ ಪ್ರಪತ್ತಿಯನ್ನು ಸ್ಪುಟತರವಾಗಿ ವಿಧಿಸುವ ಅನೇಕ ಪ್ರಮಾಣಗಳಿಗೆ ವಿರುದ್ಧವಾದುದೂ ಆಗುತ್ತದೆಂದು ಮುಂದೆ ಹೇಳುತ್ತಾರೆ

"**ತಾಂ ಪ್ರಪತ್ತಿಂ** - ಅಂತಹ ಪರಿಕರಗಳುಳ್ಳ ಪ್ರಪತ್ತಿಯನ್ನು, **ಪ್ರಯುಂಜೀತ** - ಅನುಷ್ಠಿಸತಕ್ಕದ್ದು" ಇತ್ಯಾದಿಗಳಾನ - ಇವೇ ಮೊದಲಾದ, **ಸಪರಿಕರ ಸ್ಫುಟತರ ಪ್ರಪತ್ತಿ ವಿಧಿಗಳೋಡುಮ್** - ಐದು ಅಂಗಗಳಿಂದ ಕೂಡಿ

(೧)"ಪ್ರಪತ್ತಿಂ ತಾಂ ಪ್ರಯುಂಜೀತ ಸ್ವಾಜ್ಞೈಃ ಪಂಚಭಿರಾವೃತಾಂ" ಇತ್ಯಾದಿಗಳಾನ ಸಪರಿಕರ ಸ್ಫುಟತರ ಪ್ರಪತ್ತಿ ವಿಧಿಗಳೋಡುಮ್ ವಿರೋಧಿಕ್ಕುಮ್. ಈಶ್ವರ್ಕ ನೋಕ್ಷೋಪಾಯ ನೆಜ್ಞಿರ ವಿವ್ವಳವೇ ಇಜ್ಞು ವಕ್ತವ್ಯಮಾಯ್, ನೋಕ್ಷಾಧಿಕಾರಿಕ್ಕು ವಿಧೇಯಾಂತರ ನುನ್ರಿಕ್ಕೇ ಯೊಳಿಂದಾಲ್, ಇನ್ನಿಡನ್ ಪ್ರಸ್ತುತನಾನ ಭಕ್ತಿಯೋಗತ್ತು ಕ್ಕಪೇಕ್ಷಿತನಾನ ತತ್ಪೋಷದೇಶ ಮಾತ್ರಮಾಮ್.

ಬಹು ವ್ಯಕ್ತವಾಗಿ ತೋರುವ ಪ್ರಪತ್ತಿ ವಿಧಿಗಳಿಗೂ ಸಹ, ವಿರೋಧಿಕ್ಕುಮ್ – ವಿರುದ್ಧವಾದುದಾಗುತ್ತದೆ. ಯಾವುದು ಎಂದರೆ "ಶರಣಂ ವ್ರಜ ಎಂಬಲ್ಲಿ ವ್ರಜ ಎಂಬ ವಿಧಿಗೆ ಬುದ್ಧ್ಯರ್ಥವನ್ನು ಕಲ್ಪಿಸೋಣವ್ರ" ಎಂದು ಇಟ್ಟುಕೊಳ್ಳತಕ್ಕದ್ದು ಲಕ್ಷ್ಮೀತಂತ್ರದಲ್ಲಿರುವ ಪೂರಾವಾಕ್ಯವು, "ಪ್ರಪತ್ತಿಂ ತಾಂ ಪ್ರಯುಂಜೀತ ಸ್ವಾಂಗೈರ್ಪಂಚಭಿ ರಾವೃತಾಂ" ಎಂದಿರುವರಿಂದ ಸಪರಿಕರ ಸ್ಫುಟತರ ಪ್ರಪತ್ತಿ ಎಂದು ಹೇಳಿರುತ್ತಾರೆ ಇಲ್ಲಿ ಇತ್ಯಾದಿ ಎಂದು ಆದಿ ಪದದಿಂದ ಪ್ರಪತ್ತಿಯನ್ನು ಬೋಧಿಸುವ ಇತರ ವಿಧಿವಾಕ್ಯಗಳೆಲ್ಲಾ ಸೂಚಿಸಲ್ಪಟ್ಟವು (ನೆಯ ಪುಟವನ್ನು ನೋಡಿ) ಶರಣಂ ವ್ರಜ ಎಂಬಲ್ಲಿ ಕಷ್ಟಪಟ್ಟು ವ್ರಜ ಶಬ್ದಕ್ಕೆ ಜಾನೀಹಿ ಎಂದು ಅರ್ಥಮಾಡಿದಿರಿ ; ಪ್ರಯುಂಜೀತ ಎಂಬ ವಿಧಿಗೆ ಹಾಗೆ ಅರ್ಥ ಕಲ್ಪಿಸೋಣವು ಸಾಧ್ಯವಿಲ್ಲವಷ್ಟೇ ಎಂಬಭಿಪ್ರಾಯವು. ಪ್ರಸ್ತುತವಾಗುವ ಮೂರನೆಯ ದೋಷವನ್ನು ಹೇಳುತ್ತಾರೆ, ಈಶ್ವರ್ಕ - ಸರ್ವೇಶ್ವರನು, ನೋಕ್ಷೋಪಾಯವು, ಎಜ್ಞಿರ - ಎಂದು ಹೇಳುವ, ಇನ್ನಿಡವೇ - ಇಷ್ಟೂನಾತ್ರವೆ, ವಕ್ತವ್ಯಮಾಯ್-ಹೇಳತಕ್ಕದ್ದಾಗಿ, ನೋಕ್ಷಾಧಿಕಾರಿಗೆ, ವಿಧೇಯಾಂತರ ನುನ್ರಿಕ್ಕೇ-ಬೇರೆ ವಿಧಿರೂಪದಲ್ಲಿ ವಿಧಿಸಲಕ್ಕದ್ದು ಯಾವುದೂ ಇಲ್ಲದಿರೋಣ ಹೇಗೊಂಡಾಗೆ, ಒಳಿಂದಾಲ್ - ಬಿಟ್ಟು ಬಿಟ್ಟರೆ, ಇನ್ನಿಡಂ - ಈ ಸಂದರ್ಭವು ಎಂದರೆ ಶರಣಂ ವ್ರಜ ಎಂಬ ಪ್ರಕರಣವು, ಪ್ರಸ್ತುತನಾನ ಭಕ್ತಿಯೋಗತ್ತುಕ್ಕು - ಈಗ ಉದ್ದಿಶ್ಯವಾವ ಭಕ್ತಿಯೋಗಕ್ಕೆ, ಅಪೇಕ್ಷಿತನಾನ - ಬೇಕಾಗಿರುವ, ತತ್ಪೋಷದೇಶಮಾಮ್ - ಪ್ರಪತ್ತಿರೂಪ ಸಾಧ್ಯೋಪಾಯ ವಿಧಿಯನ್ನು ಬೋಧಿಸುವದಕ್ಕೆ ಬದಲಾಗಿ ನುಮ್ಮನೆ ತತ್ಪೋಷಸೇಶವನ್ನು ಮಾತ್ರ ಮಾಡಿದಹಾಗಾಗುತ್ತದೆ ಶ್ರೀ ಭಾಷ್ಯಕಾರರು ಇದನ್ನು ಮೋಕ್ಷೋಪಾಯ ವಿಧಿಯೆಂಬದಾಗಿ ವ್ಯಾಖ್ಯಾನ ಮಾಡಿರುತ್ತಾರೆ. ಅದಕ್ಕೆ ವಿರೋಧಿಸುತ್ತದೆ ಎಂಬ ಭಾವವು.

---

(೧) ಲಕ್ಷ್ಮೀ ತಂತ್ರ ೨೮. ೧೧ ೭

ಸ್ವಯತ್ನ ನಿವೃತ್ತಿರೇವ ಪ್ರಪತ್ತಿರಿತಿ ಪಕ್ಷಸ್ಯ ಪ್ರತಿಕ್ಷೇಪಃ.

ಇಜ್ಯಾ ತತ್ಪ್ರಜ್ಞಾನ ಮುಡ್ಡೈಯವನುಕ್ಕು ಸ್ವರಕ್ಷಣಾರ್ಥ ಸ್ವವ್ಯಾಪಾರ ನಿವೃತ್ತಿಯೇ ಪ್ರಪತ್ತಿಯಾಯ್. ಸರ್ವಧರ್ಮ ಸ್ವರೂಪತ್ಯಾಗ ಮಾತ್ರಮ್ ಸಾಧ್ಯಮಾಗ ವಿಧಿಕ್ಕ ಪಡುಗಿರದೆನ್ಬಾರುಕ್ಕು, ನಿವೃತ್ತಿರೂಪ ಮೇಯಾಗಿಲುಮ್, ಸಾಧ್ಯಮಾಗ ವಿಧಿಕ್ಕಪ್ಪಟ್ಟ ಸರ್ವಧರ್ಮತ್ಯಾಗಮ್ ತಾನ್, ಸ್ವರಕ್ಷಣಾರ್ಥ ಸ್ವವ್ಯಾಪಾರ ಮಾಗೈಯಾಲೇ, ಸ್ವವಚನ ವಿರೋಧ ಮುಮ್, ಸಾಜ್ಞಪ್ರಪತ್ತಿ ವಿಧಾಯಕವಾನ ವಾಕ್ಯ ವಿರೋಧಮುಮ್, ವರುಮ್

ಸ್ವಯತ್ನ ನಿವೃತ್ತಿಯೇ ಪ್ರಪತ್ತಿಯು ಎಂಬ ಅಭಿಸಾಯದ ಖಂಡನವು

ಇಜ್ಯಾ - ಈ ಸಂದರ್ಭದಲ್ಲಿ. ತತ್ಪ್ರಜ್ಞಾನವಿರವ ಮೋಕ್ಷಾರ್ಥಿಗೆ, **ಸ್ವರಕ್ಷಣಾರ್ಥ**-ಸ್ವರಕ್ಷಣೆಗೆ ಪ್ರಯೋಜನವಾಗಿ ಮಾಡಿ, **ಸ್ವವ್ಯಾಪಾರ ನಿವೃತ್ತಿಯೇ**-ತನ್ನ ವ್ಯಾಪಾರಗಳನ್ನು ತ್ಯಜಿಸುವದೇ, **ಪ್ರಪತ್ತಿಯಾಯ್** - ಪ್ರಪತ್ತಿ ಎಂದು ಹೇಳಿಕೊಂಡು, **ಸರ್ವಧರ್ಮ ಸ್ವರೂಪತ್ಯಾಗ ಮಾತ್ರಮ್** - **ಸರ್ವಧರ್ಮಾನ್ ಪರಿತ್ಯಜ್ಯ** ಎಂಬ ನಿಧಿಯ ಮೂಲಕ **ಸಮಸ್ತ** ಫಲಗಳ ಸ್ವರೂಪತ್ಯಾಗ **ಮಾತ್ರವೇ**, **ಸಾಧ್ಯಮಾಗ** - ಸಾಧ್ಯವಾದುದಾಗಿ, **ವಿಧಿಕ್ಕಪಡುಗಿರದು** - ವಿಧಿಸಲ್ಪಡುವದು, **ಎನ್ಬಾರುಕ್ಕು** - ಎಂದು ಹೇಳುವವರಿಗೆ, **ನಿವೃತ್ತಿ ರೂಪಮೇಯಾಗಿಲುಮ್** - ನಿವೃತ್ತಿ ರೂಪ ವಿದೆ ಬರಿ ತ್ಯಾಗರೂಪವಾದುದಾದರೂ, **ಸಾಧ್ಯಮಾಗ ವಿಧಿಕ್ಕಪ್ಪಟ್ಟ**-ಸಾಧ್ಯವಾಗುವಂತು ವಿಧಿಸಿರುವ, ಸರ್ವಧರ್ಮಗಳ ತ್ಯಾಗವೂ ಕೂಡ, **ಸ್ವರಕ್ಷಣಾರ್ಥ ಸ್ವವ್ಯಾಪಾರ ಮಾಗೈಯಾಲೇ** - ಸ್ವರಕ್ಷಣೆಗಾಗಿ ಮಾಡಿದ ನಿವೃತ್ತಿರೂಪ ವ್ಯಾಪಾರವಾದುದರಿಂದ, **ಸ್ವವಚನ ವಿರೋಧಮುಮ್** - ತ್ಯಾಗ ಮಾಡಿಸೆ ಎಂಬ ವಚನಕ್ಕೆ ವಿರೋಧವೂ, **ಸಾಜ್ಞಪ್ರಪತ್ತಿ ವಿಧಾಯಕವಾನ ವಾಕ್ಯ ವಿರೋಧಮುಮ್** ವರುಮ್ - ಇದು ಅಜ್ಞಗಳಿಂದ ಕೂಡಿದ ಅಜ್ಞಾರೂಪ ಆತ್ಮನಿಕ್ಷೇಪವನ್ನು ವಿಧಿಸುವ ಪ್ರಮಾಣ ವಾಕ್ಯಗಳಿಗೂ ವಿರೋಧ ಉಂಟಾಗುತ್ತದೆ. **ಸರ್ವಧರ್ಮಾನ್ ಪರಿತ್ಯಜ್ಯ** ಎಂದು ವಿಧಿಸುವದರಿಂದ, ಸ್ವರಕ್ಷಣೆಗಾಗಿ ಎಲ್ಲಾ ಪ್ರವೃತ್ತಿಗಳನ್ನೂ ಬಿಡತಕ್ಕದ್ದು ಎಂದ ಏರ್ಪಟ್ಟಿತು ; ಇದೇ ಪ್ರಪತ್ತಿಯೆಂದೇ ಭಾವಿಸತಕ್ಕದ್ದೇ ವಿನಾ, ಬೇರೆ ಇನ್ನು

ಪ್ರಪತ್ತಿಕ್ಕು ಸಾಧನತ್ವಮಾದಲ್ ಸಿದ್ಧಸಾಧನ ಸಹಕಾರಿತ್ವ ಮಾದಲ್ ಕೊಳ್ಳಿಲ್, ಸಿದ್ಧೋಪಾಯನಾನ ಈಶ್ವರನುಡೈಯ ಏಕತ್ವಂ, ಸಿದ್ಧತ್ವಂ, ಪರಮಚೇತನತ್ವಂ, ಪರಮ ಕಾರುಣಿಕತ್ವಂ, ಸರ್ವಶಕ್ತಿತ್ವಂ, ನಿರಪೇಕ್ಷತ್ವಂ, ಮುದಲಾನ ಸ್ವಭಾವ ವಿಶೇಷಜ್ಞಳುಕ್ಕು ವಿರುದ್ಧಮಾನೆನ್ನುಮ್ ಪ್ರಸಜ್ಞಗಳ್, ಶ್ರುತಿ ಸ್ಮೃತಿ ವಿರೋಧ, ವ್ಯಾಪ್ತಿ ಶೂನ್ಯತ್ವಾದಿ ದೋಷಜ್ಞಳಾಲೇ ತರ್ಕಾಭಾಸಜ್ಞಳ್.

ಯಾವ ಪ್ರವೃತ್ತಿರೂಪವಾದ ಪ್ರಪತ್ತ್ಯನುಷ್ಠಾನವೂ ಸರಿಯಲ್ಲವೆಂದು ಕೆಲವರ ಮತವು ಈ ಅಭಿಪ್ರಾಯ ಸರಿಯಲ್ಲವೆಂದು ಎರಡು ಕಾರಣಗಳಿಂದ ತಿಳಿಸುತ್ತಾರೆ. (೧) ಸ್ವರಕ್ಷಣ ದವಾಗಿ ಸ್ವಾಧರ್ಮಸ್ವರೂಪ ತ್ಯಾಗವೂ ಕೂಡ ಸ್ವರಕ್ಷಣಾರ್ಥವಾಗಿ ಮಾಡಿದ ಒಂದು ಉಪಾಯವಾಗಲಿಲ್ಲವೋ? ಆಗ ಸ್ವರಕ್ಷಣಾರ್ಥ ಸ್ವವ್ಯಾಪಾರ ನಿವೃತ್ತಿಯಾಗಲಿಲ್ಲವೇ? ಸ್ವವಚನ ವಿರೋಧ ಉಂಟಾಯಿತಲ್ಲವೇ ಎಂಬ ಭಾವವು (೨) ನಾಜ್ಞಪ್ರಪದನವನ್ನು ವಿಧಿಸುವ ಅನೇಕ ಪ್ರಮಾಣಗಳಿವೆ, ಅವುಗಳಿಗೆಲ್ಲಾ ವಿರೋಧವಾಗುವುದೂ ಆಗುತ್ತದೆ

ಹೀಗೆ ಎರಡು ಕಾರಣಗಳಿಂದ ಸ್ವರಕ್ಷಣಾರ್ಥ ಸ್ವವ್ಯಾಪಾರ ನಿವೃತ್ತಿಯೇ ಪ್ರಪತ್ತಿಯೆಂಬ ಅಭಿಪ್ರಾಯವು ಸರಿಯಲ್ಲವೆಂದು ತೋರಿಸಿ, ಈ ಪಕ್ಷವಾದವರು ತಮ್ಮ ಅಭಿಪ್ರಾಯದ ಮೇಲೆ ಆಪಾದಿಸುವ ದೋಷಗಳಿಗೆ ಸಮಾಧಾನಗಳನ್ನು **"ಪ್ರಪತ್ತಿಕ್ಕು"** ಎಂಬ ಮುಂದಿನ ವಾಕ್ಯದಿಂದ ಹೇಳುತ್ತಾರೆ

ಪ್ರಪತ್ತಿಕ್ಕು - ಪ್ರಪದನಕ್ಕೆ, **ಸಾಧನತ್ವ ಮಾದಲ್** - ಸಾಧ್ಯೋಪಾಯ ರೂಪದಲ್ಲಿ ಸಾಧನತ್ವವನ್ನಾಗಲಿ, ಅಥವಾ, **ಸಿದ್ಧಸಾಧನ ಸಹಕಾರಿತ್ವ ಮಾದಲ್** - ಸಿದ್ಧೋಪಾಯತ್ವಕ್ಕೆ ಸಹಕಾರಿಯಾಗಿರವದನ್ನಾಗಲಿ **ಕೊಳ್ಳಿಲ್** - ಅಜ್ಞೀಕರಿಸಿದರೆ, ಸಿದ್ಧೋಪಾಯವಾದ **ಸರ್ವೇಶ್ವರನ್, ಏಕತ್ವ** - ಒಬ್ಬನೇ ಎನ್ನುವದಕ್ಕೂ, **ಸಿದ್ಧತ್ವಂ** - ಸಿದ್ಧೋಪಾಯನೆಂಬ ಭಾವಕ್ಕೂ, **ಪರಮಚೇತನತ್ವಂ**- ಆತನ ಸರ್ವೋತ್ಕೃಷ್ಟ ಚೇತನ ಭಾವಕ್ಕೂ, **ಪರಮ ಕಾರುಣಿಕತ್ವಂ** - ಪರಮ ಕಾರುಣಿಕನೆಂಬ ಭಾವಕ್ಕೂ, **ಸರ್ವಶಕ್ತಿತ್ವಂ** - ಸರ್ವಶಕ್ತಿಯುಳ್ಳ ಭಾವಕ್ಕೂ, **ನಿರಪೇಕ್ಷತ್ವಂ** - ಆತನು ಯಾವುದನ್ನೂ ಅಪೇಕ್ಷಿಸದೇ ಇರುವ ಭಾವಕ್ಕೂ, **ಮುದಲಾನ ಸ್ವಭಾವ ವಿಶೇಷಜ್ಞಳುಕ್ಕು** - ಇವೇ ಮೊದಲಾದ ಗುಣವಿಶೇಷಗಳಿಗೆ ಇವೇ ಮೊದಲಾದ ಎಂಬುದರಿಂದ **ಪೂರ್ಣತ್ವ**ಕ್ಕೂ ವಿರೋಧವು, ಸಾಧ್ಯೋಪಾಯ ಸಾಪೇಕ್ಷತ್ವವಿರುವದರಿಂದ **ಈಶ್ವರನ ಪರಿಪೂರ್ಣತ್ವ**ಕ್ಕೆ ವಿರೋಧವೆಂಬ ಭಾವವೂ,

ವಿರುದ್ಧವಾಮ್ - ವಿರುದ್ಧವಾಗುತ್ತದೆ, **ಎನ್ನುವ್ ಪ್ರಸಜ್ಗಗಳ್** - ಎನ್ನುವ ಆಕ್ಷೇಪಗಳು, ಶ್ರುತಿ ಸ್ಮೃತಿಗಳಿಗೆ ವಿರೋಧವೇನು, **ವ್ಯಾಪ್ತಿ ಶೂನ್ಯತ್ವ**-ಪಕ್ಷದಲ್ಲಿ ಹೇತುವಿಲ್ಲದಿರುವ ವ್ಯಾಪ್ತಿಯಿಲ್ಲದಿರೋಣವೇನು, **ಆದಿ** - ಇವೇ ಮೊದಲಾದ, **ದೋಷಜ್ಞಾಳಲೇ**-ದೋಷಗಳ ಮೂಲಕವಾಗಿ, **ತರ್ಕಾಭಾಸಜ್ಞಳ್** - ಕುತರ್ಕಗಳು, ಪ್ರಪತ್ತಿ ಬೇರೆ ಬೇಕಾದುದಲ್ಲವು, ಸ್ವರಕ್ಷಣ ಪ್ರವೃತ್ತಿ ನಿವೃತ್ತಿಯೇ ಪ್ರಪತ್ತಿ ಎಂದು ಕೆಲವರು ಅಭಿಪ್ರಾಯಪಡುವರು, ಇದು ಸ್ವವಚನ ವಿರೋಧವಾದುದೆಂದೂ ಅನೇಕ ವಿಧಿಪ್ರಮಾಣಗಳಿಗೂ ವಿರೋಧವಾದುದೆಂದೂ ಹೇಳಿದರು. ಅವರುಗಳು ಪ್ರಪತ್ತಿಯನ್ನು ನಿರಾಕರಿಸಲು ಕಾರಣವನ್ನು ಹೇಳುತ್ತಾರೇನೆಂದರೆ— ಪ್ರಪತ್ತಿಯನ್ನು ಅಂಗೀಕರಿಸುವದರಿಂದ ಆತನ ಅನೇಕ ಮಹತ್ವಗಳಿಗೆ ಕುಂದಕವಾಗುತ್ತದೆ ಹೇಗೆಂದರೆ : —

(೧) ಸಾಧ್ಯೋಪಾಯವೂ ಒಂದು ಬೇಕು ಎಂಬುದರಿಂದ ಸಿದ್ಧೋಪಾಯನಾಗಿ ಒಬ್ಬನೇ ಎಂಬುದಕ್ಕೆ ಕುಂದಕವು (೨) ಸಾಧ್ಯೋಪಾಯವೂ ಒಂದು ಬೇಕು ಎಂದರೆ, ಸಿದ್ಧತ್ವಕ್ಕೆ ಹಾನಿಯು. (೩) ಗೋಪ್ತೃತ್ವನರಣದ ಮೂಲಕ ಸಾಧ್ಯಪಾಯವನ್ನು ತಿಳಿಸಬೇಕು ಎಂದರೆ ಸರ್ವೋತ್ಕೃಷ್ಟ ಚೇತನತ್ವಕ್ಕೆ ಕುಂದಕವು, ಸರ್ವಜ್ಞನಾದುದರಿಂದ ತಾನೇ ತಿಳಿಯುತಕ್ಕದ್ದು. (೪) ಸಾಧ್ಯೋಪಾಯದಿಂದ ಆತನನ್ನು ವಶಮಾಡಿಕೊಳ್ಳಬೇಕು ಎಂದರೆ, ಆತನ ಪರಮಕಾರುಣಿಕತ್ವಕ್ಕೆ ಭಂಗವು (೫) ಪ್ರಪತ್ತಿಯ ಸಹಕಾರಿತ್ವವಿಲ್ಲದೆ ರಕ್ಷಿಸುವನಲ್ಲವು ಎಂದರೆ ಪ್ರಪತ್ತಿಯಿಲ್ಲದೆ ಆತನಿಗೆ ರಕ್ಷಿಸಲು ಶಕ್ತಿಯಿಲ್ಲವೆಂದಾಗಿ ಸರ್ವಶಕ್ತಿತ್ವಕ್ಕೆ ವಿರೋಧವು. (೬) ಶಕ್ತನಾಗಿದ್ದರೂ ಪ್ರಪತ್ತಿಯ ಸಹಕಾರಿತ್ವವನ್ನು ಅಪೇಕ್ಷಿಸುವನೆಂದರೆ ಆತನ ನಿರಪೇಕ್ಷತ್ವಕ್ಕೆ ಕುಂದಕವು, ಹೀಗೆ ಅವರ ಆಕ್ಷೇಪಗಳು. ಇವುಗಳೆಲ್ಲಾ ಶ್ರುತಿ ಸ್ಮೃತಿ ವಿರೋಧವೇನು, ವ್ಯಾಪ್ತಿಶೂನ್ಯತೆ ಏನು, ಇಂತಹ ದೋಷಯುಕ್ತಗಳಾದುದರಿಂದ ಸತ್ತರ್ಕಗಳಲ್ಲವೆಂದು ಹೇಳುತ್ತಾರೆ. ಹೇಗೆಂದರೆ—

(೧) "ಬ್ರಹ್ಮಣೇತ್ವಾಮಹಸ ಓಮಿತ್ಯಾತ್ಮಾನಂ ಯುಂಜೀತ"ತೈ.ನಾರಾ (ಹಿಂದೆ ನೆಯ ಪುಟ ನೋಡಿ) ಎಂಬ ಶ್ರುತಿಗೆ ವಿರೋಧವು.

(೨) "ಹವಿರ್ಯದಿಹಿತ್ವಾತ್ಮರೂಪಂ ವಸುರಣ್ಯೇತಿ ಮುಂತ್ರತಃ ।
ಜುಹುಯಾತ್ಪ್ರಣವೇನಾಗ್ನಾ ವಚ್ಮ್ಯತಾಖ್ಯೇ ಸನಾತನೇ ॥

(೩) ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ" ಇದಕ್ಕೂ ವಿರೋಧವು

(೪) "ಭಕ್ತ್ಯಾ ಪರಮುಯಾವಾಪಿ ಪ್ರಪತ್ತ್ಯಾವಾ ಮಹಾಮತೇ"
ಪ್ರಾಪ್ಯೋಹಂ ನಾನ್ಯಥಾ ಪ್ರಾಪ್ಯೋ ಮುನಿಕೈಜ್ಯರ್ಮಲಿಪ್ಸುಭಿಃ

ಎಂಬ ಸ್ಮೃತಿಗೆ ವಿರೋಧವು.

ವಿಭೀಷಣ, ಗಜೇಂದ್ರ, ಕಾಕ, ಕಾಳೀಯನು ಪ್ರಪದನವನ್ನ ಅನುಷ್ಠಿಸಿದರೆಂದು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ ಭಗವಂತನ ಏಕತ್ವ ಸಿದ್ಧತ್ವ, ಪರಮ ಚೇತನತ್ವ, ಪರಮ ಕಾರುಣಿಕತ್ವ, ಸರ್ವ ಶಕ್ತಿತ್ವ, ನಿರಪೇಕ್ಷತ್ವಗಳಿಗೆ ಏನೊಂದೂ ವಿರೋಧವಿಲ್ಲವು. ಹಾಗೆ ವಿರುದ್ಧವಾಗಿದ್ದರೆ ಮಹರ್ಷಿಗಳು ಉಪಪಾದಿಸುವರೇ ? ಹಾಗೆಯೇ ಸರ್ವೇಶ್ವರನು ಸರ್ವಜ್ಞನಾಗಿ, ಪರಮಕಾರುಣಿಕನಾಗಿ ಯಿದ್ದರೂ ಧ್ರುವನು ತಪಸ್ಸನ್ನು ಮಾಡಿದನಂತರವೇ, ಅದನ್ನು ಸಾಧನವೆಂದು ಭಾವಿಸಿ ಆತನ ಅಭೀಷ್ಟವನ್ನು ನಡೆಸಿಕೊಟ್ಟನು.

೧. ಎಲ್ಲಿ ಸಹಕಾರಿ ಸಾಪೇಕ್ಷತ್ವವಿದೆಯೋ ಅಲ್ಲಿ ಏಕತ್ವವಿರುವದಿಲ್ಲವೆಂದು ಹೇಳಬೇಕಾಗುತ್ತದೆ. ಸಹಕಾರಿಸಾಪೇಕ್ಷತ್ವವಿದ್ದರೂ ಏಕತ್ವವಿರುವದುಂಟು. ಭಗವಂತನು ಒಬ್ಬನಾಗಿಯೂ ಅನೇಕ ನಿತ್ಯಸೂರಿಗಳ ಸಹಕಾರಿತ್ವವನ್ನು ಹೊಂದಿರುವನು.

೨ ಎಲ್ಲಿ ಸಹಕಾರಿ ಸಾಪೇಕ್ಷತ್ವವಿದೆಯೋ ಅಲ್ಲಿ ಸಿದ್ಧತ್ವವಿಲ್ಲವೆಂದು ಹೇಳಬೇಕಾಗುತ್ತದೆ ಆದರೆ ಸಿದ್ಧತ್ವವಿದ್ದೂ ಸಹಕಾರಿ ಸಾಪೇಕ್ಷತ್ವವುಂಟು ರಾಜರುಗಳು ಸಿದ್ಧರಾಗಿದ್ದರೂ ವಿಶೇಷ ಸಹಕಾರಿ ಸಾಪೇಕ್ಷತ್ವವುಳ್ಳವರಾಗಿರುತ್ತಾರೆ.

೩. ಹಾಗೆಯೇ ಎಲ್ಲಿ ಸಹಕಾರಿ ಸಾಪೇಕ್ಷತ್ವವಿದೆಯೋ, ಅಲ್ಲಿ ಪರಮ ಚೇತನತ್ವವಿಲ್ಲವು, ಅಲ್ಲಿ ಪರಮ ಕಾರುಣಿಕತ್ವವಿರುವುದಿಲ್ಲವು. ಅಲ್ಲಿ ಸರ್ವಶಕ್ತಿತ್ವವಿಲ್ಲವು, ಹೀಗೆಲ್ಲಾ ಹೇಳಬೇಕಾಗುತ್ತದೆ. ಪರಮ ಚೇತನನಾದ, ಪರಮ ಕಾರುಣಿಕನಾದ, ಸರ್ವಶಕ್ತನಾದ ಶ್ರೀರಾಮನು, ಸುಗ್ರೀವಾದಿಗಳ ಸಹಕಾರಿತ್ವವನ್ನು ಬಯಿಸಿದನು **ಪಿಶಾಚಾನ್ ದಾನವಾನ್ ಯಕ್ಷಾನ್ ಅಂಗುಳ್ಯಗ್ರೇಣತಾನ್ ಹನ್ಯಾಮಿಚ್ಛನ್ ಹರಿಗಣೇಶ್ವರ** । ಎಂದು ಶ್ರೀರಾಮನು ಹೇಳಿಯೂ ಕೂಡ, **ಲೋಕನಾಥಃ ಪುರಾಭೂತ್ವಾ ಸುಗ್ರೀವಂ ನಾಥಮಿಚ್ಛತಿ** । ಎಂದು ಹೇಳಿರುವಹಾಗೆ ಸುಗ್ರೀವಾದಿಗಳ ಸಹಾಯವನ್ನು ಬಯಿಸಿದನು. ಹೀಗೆ ವ್ಯಾಪ್ತಿ ಶೂನ್ಯತೆ ಎಂಬ ದೋಷವೂ ಉಂಟಾಗುವದರಿಂದ ತರ್ಕಾಭಾಸವೆಂಬ ಭಾವವು.

ಇದೂ ಅಲ್ಲದೆ, ಸಹಕಾರಿ ಸಾಪೇಕ್ಷತ್ವವೂ ಏಕತ್ವಾದಿ ಅನು ಧರ್ಮಗಳೂ ಪರಸ್ಪರ ವಿರೋಧವಾದುವು ಎಂದು ಹೇಳಿದರೆ, ಶಾಸ್ತ್ರಗಳಲ್ಲೂ ಸರ್ವೇಶ್ವರನಿಗೆ ಪರಸ್ಪರ ವಿರುದ್ಧಭಾವಗಳು ಹೇಳಲ್ಪಟ್ಟಿವೆ. ಹೇಗೆಂದರೆ :—ಒಂದು ಕಡೆಯಲ್ಲಿ **ಅರಸಂ ಅರೂಪಂ ಗಂಧವರ್ಜಿತಂ** ಎಂದೂ, ಇನ್ನೊಂದು ಕಡೆಯಲ್ಲಿ **ಸ್ವರ ಗಂಧಸ್ಪರ್ಶರಸಃ** ಎಂದೂ, ಹೇಳಲ್ಪಟ್ಟಿದೆ; ಹಾಗೆಯೇ ಒಂದು ಕಡೆಯಲ್ಲಿ ಸಗುಣನೆಂದೂ ಇನ್ನೊಂದು ಕಡೆಯಲ್ಲಿ ನಿರ್ಗುಣನೆಂದೂ ಹೇಳಲ್ಪಟ್ಟಿದೆ. ಇವುಗಳಿಗೆ ಸಾಮಂಜಸ್ಯ ಉಂಟಾಗುವಹಾಗೆ, ಹೇಗೆ ಅರ್ಥಗಳನ್ನು ಹೇಳುತ್ತೇವೋ, ಹಾಗೆಯೇ

ಇಲ್ಲಿಯೂ ಭಾವಿಸತಕ್ಕದ್ದು. ಕಲ್ಯಾಣಗುಣಾಕರನಾಗಿ ಸಗುಣನು, ಪ್ರಾಕೃತ ಹೇಯಗುಣ ರಹಿತನಾಗಿ ನಿರ್ಗುಣನು ಎಂದು ಹೇಗೆ ಹೇಳುತ್ತೇವೋ, ಹಾಗೆಯೇ ಇಲ್ಲಿಯೂ ತನಗೆ ಸ್ವಾಧೀನವಾದ ಸಹಕಾರಿಯನ್ನು ಅಪೇಕ್ಷಿಸಿದರೂ, ಅಂತಾದ್ದನ್ನು ಅಪೇಕ್ಷಿಸದೆಯೂ ಇರಬಹುದಾದುದರಿಂದ ನಿರಪೇಕ್ಷತ್ವ, ಏಕತ್ವ, ಸಿದ್ಧತ್ವ ಯಾವುದಕ್ಕೂ ಕುಂದಕವಿಲ್ಲವು. ತನಗೆ ಸ್ವಾಧೀನವಾದ ವಿಶೇಷ ಸಹಕಾರಿಯನ್ನು ಹೊಂದಿದ್ದರೂ ಸರ್ವಶಕ್ತತೆಗೆ ಕುಂದಕವಿಲ್ಲವು, ಹಾಗೆ ನೋಡಿದರೆ ಸರ್ವ ಶಕ್ತತೆಯಿಲ್ಲದಿದ್ದರೇನೇ ಸ್ವಾಧೀನವಾದ ಸಹಕಾರಿತ್ವವನ್ನು ಹೊಂದಲು ಸಾಧ್ಯವಿಲ್ಲವು ತನ್ನ ಕರುಣೆಯು ಅನೇಕರಿಗೆ ಉಪಯೋಗವಾಗಲೆಂದು ಅನೇಕ ಸಾಧನಗಳನ್ನು ಏರ್ಪಡಿಸಿಕೊಂಡಿರೋಣವೇ ಪರಮ ಕಾರುಣಿಕ ಲಕ್ಷಣವು, ಹಾಗೆಯೇ ಈ ಪ್ರಪತ್ತಿ ಎಂಬ ಸುಲಭೋಪಾಯವನ್ನವಲಂಬಿಸಿದವರನ್ನೆಲ್ಲಾ ರಕ್ಷಿಸಿ ಬಿಡುವೆನೆಂದು ಏರ್ಪಡಿಸಿರುವದೇ ಪರಮಕಾರುಣಿಕತ್ವದ ಮಾಹಾತ್ಮ್ಯವು, ಸರ್ವಜ್ಞನಾಗಿ ಶರಣಾಗತನ ಅಭಿಲಾಷೆ ಏನಿರಬಹುದು ಎಂದು ತಿಳಿದಿದ್ದರೂ, ಫಲವು ಪುರುಷಾರ್ಥವೆಂದು ತಿಳಿಯುವದಕ್ಕಾಗಿಯೂ, ಲೋಕದಲ್ಲಿ ಭಕ್ತಾಭೀಷ್ಟವನ್ನು ಭಗವಂತನು ಸಲ್ಲಿಸಿದನೆಂಬ ಪ್ರತೀತಿಯುಂಟಾಗುವದಕ್ಕಾಗಿಯೂ, ಗೋಪ್ತೃತ್ವವರಣವು; ಇದರಿಂದ ಸರ್ವಜ್ಞತ್ವವುಳ್ಳ ಪರಮಚೇತನತ್ವಕ್ಕೇನೂ ಕುಂದಕವಿಲ್ಲವು. ವ್ಯಾಪ್ತಿ ಶೂನ್ಯತ್ವಾದಿ ದೋಷಜ್ಞಿಳ್ ಎಂಬಲ್ಲಿ ಆದಿಪದದಿಂದ ವೈಷಮ್ಯ ನೈರ್ಘೃಣ್ಯದೋಷವೂ ಕೂಡ ಸರ್ವೇಶ್ವರನಿಗೆ ಆರೋಪಿಸದಂತಾಗುತ್ತದೆ ಉಪಾಯಾನುಷ್ಠಾನವಾಡಿದ ಪರಮಭಕ್ತನನ್ನೂ, ವಹಾ ಪಾಪಿಯಾದವನನ್ನೂ, ಉಪಾಯದ ಆವಶ್ಯಕತೆಯಿಲ್ಲದೆ ರಕ್ಷಿಸಿಬಿಟ್ಟರೆ, ಸರ್ವೇಶ್ವರನು ಪಕ್ಷಪಾತಿಯೆಂದೆನಿಸಲ್ಪಡುವನು. ಇಂತಹ ದೋಷಗಳೆಲ್ಲಾ ಪ್ರಾಪ್ತವಾಗುವದರಿಂದ ತರ್ಕಾಭಾಸಗಳು.

ಹೀಗೆ ಮೇಲೆ ಹೇಳಿದ ಪೂರ್ವಪಕ್ಷಗಳೆಲ್ಲಾ ದೋಷಯುಕ್ತಗಳೆಂದು ತೋರಿಸಿದರು ಶ್ರುತಿ ಸ್ಮೃತಿಗಳಿಗೆ ವಿರೋಧವೂ, ತರ್ಕಗಳಲ್ಲಿ ಆಭಾಸವೂ, ಸರ್ವೇಶ್ವರನು ಪಕ್ಷಪಾತಿಯೂ, ಇತ್ಯಾದಿ ದೋಷಗಳು ಪ್ರಾಪ್ತವಾಗುತ್ತವೆ ಎಂದು ಹೇಳಿದರು. ಅವರುಗಳು ಹೇಳಿರುವ ತರ್ಕಗಳಲ್ಲಿ ಏನೊಂದೂ ದೋಷವಿಲ್ಲವೆಂದೂ ಅವುಗಳು ಆ ಕಾರಣದಿಂದ ಸತ್ತರ್ಕಗಳೆಂದೂ ಒಪ್ಪಿಕೊಂಡರೂ ಆಗಲೂ ಉಂಟಾಗುವ ಭಾದಕಗಳನ್ನು ತಿಳಿಸುತ್ತಾರೆ.

ಇವತ್ತೈ - ಮೇಲೆ ಹೇಳಿದ ಆಕ್ಷೇಪಣೆಗಳನ್ನು, ಸತ್ತರ್ಕಜ್ಞಿಳಾಗ - ನ್ಯಾಯವಾದವುಗಳೆಂದು, ನಿನೈಕ್ಕಿಲ್ – ಒಪ್ಪಿಕೊಂಡರೂ, ಎಂದರೆ ಉಪಾಯದ ಆವಶ್ಯಕತೆಯನ್ನು ಒಪ್ಪಿಕೊಂಡರೆ, ಸರ್ವೇಶ್ವರನ ಏಕತ್ವ, ಸಿದ್ಧತ್ವ, ಪರ

ಇವಶ್ಶೈ ಸತ್ತರ್ಕಜ್ಞಾಗ ನಿನ್ಯೆಕ್ಕಿಲ್ ಉಪಾಸನತ್ತುಕ್ಕಿಶೈನ್ದ ಸಾಧನಭಾವಾದಿಗಳಿಲುಮ್ ಇಪ್ರಸಜ್ಞಜ್ಞಳ್ ವರುಮ್.

ಉಪಾಸನಂ ತಾನುಮ್ ಸಾಧನ ಮನ್ರೆನ್ನಿಲ್, "ಸರ್ವಧರ್ಮಾ ಪರಿತ್ಯಜ್ಯ" ಎಜ್ಞಿರ ವಿಡತ್ತಿಲ್ ಉಪಾಸನತ್ತೈಯುಮ್ ಧರ್ಮಶಬ್ದಾರ್ಥಮಾಗ ವ್ಯಾಖ್ಯಾನವುಮ್ ಪಣ್ಣುಗೈಯಾಲೇ ಸ್ವವಚನ ವಿರೋಧ ಮುಣ್ಡಾವುಮ್.

ಮಕಾರುಣಿಕತ್ವಾದಿಗಳಿಗೆ ವಿರೋಧವಾಗುತ್ತದೆ ಎಂಬ ವಾಕ್ಯವು ಸಮುಂಜಸವಾದುದೆಂದು ಒಪ್ಪಿದರೂ, **ಉಪಾಸನತ್ತುಕ್ಕು** - ಉಪಾಸನಕ್ಕೆ, **ಇಶೈನ್ದ** - ಪ್ರತಿಕ್ಷೇಪಗಳಪೇಕ್ಷಿಸುವ, **ಸಾಧನ ಭಾವಾದಿಗಳಿಲುಮ್** - ಸಾಧನ ಭಾವವೇ ಮೊದಲಾದುವುಗಳಲ್ಲೂ, **ಇಪ್ರಸಜ್ಞಜ್ಞಳ್** - ಈ ಆಕ್ಷೇಪಗಳು, **ವರುಮ್** - ಪ್ರಾಪ್ತವಾಗುತ್ತವೆ ಪ್ರಪತ್ತಿಗೆ ಸಾಧನತ್ವವನ್ನು ಅಜ್ಞೀಕರಿಸದವರು ಉಪಾಸನಕ್ಕೆ ಮಾತ್ರ ಸಾಧನತ್ವವನ್ನು ಅಜ್ಞೀಕರಿಸಿರುತ್ತೀರಲ್ಲಾ, ಆಗಲೂ ಏಕತ್ವ, ಸಿದ್ಧತ್ವ, ಪರಮಚೇತನತ್ವ ಪರಮಕಾರುಣಿಕತ್ವ, ಸರ್ವಶಕ್ತಿತ್ವ, ನಿರಪೇಕ್ಷತ್ವ ಮೊದಲಾದ ಸ್ವಭಾವ ವಿಶೇಷಗಳಿಗೆ ವಿರುದ್ಧವಾಗುವದಿಲ್ಲವೇ ? ಇಲ್ಲಿ ವಿರುದ್ಧವಲ್ಲವಾದರೆ, ಪ್ರಪತ್ತಿ ವಿಷಯದಲ್ಲೂ ವಿರುದ್ಧವಲ್ಲವೆಂದು ಹೇಳಲು ಅಭ್ಯಂತರವೇನೆಂಬ ಭಾವವು ಈ ಆಕ್ಷೇಪಣೆಯಿಂದ ತಪ್ಪಿಸಿಕೊಳ್ಳುವದಕ್ಕಾಗಿ, ಉಪಾಸನವೂ ಸಾಧನವಲ್ಲವೆಂದೇ ಹೇಳುತ್ತೇವೆ ಎಂದರೆ ಆಗಲೂ ದೋಷ ತಪ್ಪಿದ್ದಲ್ಲವೆಂದು ತೋರಿಸುತ್ತಾರೆ.

ಉಪಾಸನಮ್ ತಾನುಮ್ - ಉಪಾಸನವೂ ಕೂಡ ಪ್ರಪತ್ತಿಯ ಹಾಗೆ **ಸಾಧನ ಮನ್ರೆನ್ನಿಲ್** - ಸಾಧನವಲ್ಲವೆಂದು ನೀವು ಒಂದು ವೇಳೆ ಹೇಳಿದರೆ, **ಸರ್ವಧರ್ಮಾ ಪರಿತ್ಯಜ್ಯ ಎಜ್ಞಿರ ವಿಡತ್ತಿಲ್** - ಎಂದು ಹೇಳುವ ಸ್ಥಳದಲ್ಲಿ **ಉಪಾಸನತ್ತೈಯುಮ್** - ಉಪಾಸನವನ್ನೂ ಕೂಡ, **ಧರ್ಮಶಬ್ದಾರ್ಥಮಾಗ**- ಧರ್ಮ ಶಬ್ದಕ್ಕೆ ಅರ್ಥವಾಗಿ, ಎಂದರೆ ಅಲೌಕಿಕ ಶ್ರೇಯಸ್ಸಾದ ಮೋಕ್ಷವನ್ನು ಸಾಧಿಸುವದು ಎಂಬ ಅರ್ಥವಾಗಿ, **ವ್ಯಾಖ್ಯಾನಮ್ ಪಣ್ಣುಗೈಯಾಲೇ** - ನೀವೇ ವ್ಯಾಖ್ಯಾನ ಮಾಡಿರುವದರಿಂದ, **ಸ್ವವಚನ ವಿರೋಧಮುಣ್ಡಾವುಮ್** - ನಿಮ್ಮ ಅಭಿಪ್ರಾಯವೇ ನಿಮಗೆ ವಿರುದ್ಧವಾದುದು ಆಗುತ್ತದೆ ಹೇಗೆಂದರೆ, ಉಪಾಸನವು ಸಾಧ್ಯೋಪಾಯವೆಂದು ಒಪ್ಪಿಕೊಂಡಿರುತ್ತೀರಿ, ಯಾವ ಸಂದರ್ಭದಲ್ಲಿ ಎಂದರೆ **ಸರ್ವಧರ್ಮಾ** ಎಂಬುದಕ್ಕೆ ವ್ಯಾಖ್ಯಾನ ಮಾಡುವಾಗ ಧರ್ಮಶಬ್ದವು ಅಲೌಕಿಕ ಶ್ರೇಯಸ್ಸಾಧನ ಉಪಾಸನವನ್ನು ಬೋಧಿಸುತ್ತೆಂದು ವ್ಯಾಖ್ಯಾನ ಮಾಡಿರು

ಶರುಕ್ಕೆ ಡಕ್ಕುಗ್ಗೈಕ್ಕಾಗ ವೇಣ್ಡಾಚ್ಚುವ್ಮೈಗಳೈ ಯಿಡುಪ್ಪಿಕ್ಕೇಯಾಲೆ ಅನ್ಯಪರನಾನ ಉಪದೇಶತ್ತಾಲೆ ಪಿರನ್ದ ಅರ್ಜುನ ಬುದ್ಧಿಯಾಲೆ ಧರ್ಮ ವೆನ್ರು ತೋತ್ತಿನವತ್ತೈ "ಸರ್ವಧರ್ಮಾನ್ ಎನ್ರು ಅನುವದಕ್ಕಿರದೆನ್ನಿಲ್,

---

ತ್ತೀರಿ. ಹಾಗೆ ಮಾಡಿರುವವರು ಯಾರು ಎಂಬುದು ಇಲ್ಲಿ ಹೇಳಲ್ಪಡಲಿಲ್ಲವು ಶ್ರೀ ಪಿಳ್ಳೈಲೋಕಾಚಾರ್ಯರು ಪ್ರಭೃತಿಗಳು ಎಂಬಭಿಪ್ರಾಯವು; ಅವರು ಬರೆದಿರುವ ರಹಸ್ಯವಾದ ಶ್ರೀವಚನ ಭೂಷಣ ಮುಂತಾದವುಗಳಲ್ಲಿ, ಹಾಗೆ ವ್ಯಾಖ್ಯಾನ ಮಾಡಿರುತ್ತಾರೆಂಬ ತಾತ್ಪರ್ಯವು. ಅಲ್ಲಿ ಮೋಕ್ಷ ಸಾಧನವೆಂದು ಹೇಳಿ, ಈಗ ಸಾಧನವಲ್ಲವೆಂದರೆ ಸ್ವವಚನ ವಿರೋಧವೆಂಬ ಭಾವವು. ಸ್ವವಚನ ವಿರೋಧವನ್ನು ತಪ್ಪಿಸಿಕೊಳ್ಳುವುದಕ್ಕಾಗಿ, ಧರ್ಮಶಬ್ದಕ್ಕೆ ಸಾಧನವಾದ ಉಪಾಯವೆಂಬರ್ಥವಲ್ಲವು; ಅರ್ಜುನನು ಅನುಪಾಯವಾದುದನ್ನು ಉಪಾಯವೆಂದು ಭ್ರಮಿಸಿದ ಧರ್ಮವೆಂದು ಅರ್ಥ ಹೇಳುವೆನು; ಅರ್ಜುನನು ಧರ್ಮವಲ್ಲದುದನ್ನು ಧರ್ಮವೆಂದು ಭ್ರಮಿಸಿದನಲ್ಲಾ ಅಂತಹ ಧರ್ಮವೀಗ "ಸರ್ವಧರ್ಮಾನ್ ಪರಿತ್ಯಜ್ಯ" ಎಂಬಲ್ಲಿ ಧರ್ಮಶಬ್ದದಿಂದ ಹೇಳಲ್ಪಟ್ಟಿತು, ಆ ಕಾರಣದಿಂದ ಸ್ವವಚನ ವಿರೋಧವೆಂದು ಹೇಳಲು ಸಾಧ್ಯವಲ್ಲವು, ಎಂದರೆ ಹೇಳುತ್ತಾರೆ. ಆಗಲೂ ದೋಷವು ತಪ್ಪಿದ್ದಲ್ಲವೆಂದು ತೋರಿಸುತ್ತಾರೆ:—

ಶರುಕ್ಕು - ಗಶ್ತನನ್ನು, **ಆಡಕ್ಕುಗ್ಗೈಕ್ಕಾಗ** - ಅಡಗಿಸುವದಕ್ಕಾಗಿ ಎಂದರೆ ಪರಿಹರಿಸುವದಕ್ಕಾಗಿ, **ವೇಣ್ಡಾಚ್ಚುವ್ಮೈಗಳೈ** - ಬೇಡದ ಎಂದರೆ ನಿರರ್ಥಕಗಳಾದ ಹೊರೆಗಳನ್ನು, **ಯಿಡುಪ್ಪಿಕ್ಕೈಯಾಲೆ** - ಹೊರಿಸುವವರಿಂದ, ಇದು ಹೇಗೆಂದರೆ ಮದಸಿಹ ಗೂಳಿತು ಗರ್ವವನ್ನು ಮುರಿಯುವದಕ್ಕಾಗಿ ಅದರ ಮೇಲೆ ತುಂಬಾ ಭಾರವಾದ ಮರಳು ತುಂಬಿದ ಚೀಲಗಳನ್ನು ಹೊರಿಸುವ ಹಾಗೆ ಎಂಬ ತಾತ್ಪರ್ಯವು; **ಅನ್ಯಪರವಾನ ಉಪದೇಶತ್ತಾಲೆ ಪಿರನ್ದ ಅರ್ಜುನಬುದ್ಧಿಯಾಲೇ** - ಹಾಗೆ ನಿರರ್ಥಕವಾದ ಉಪದೇಶದಿಂದ ಹುಟ್ಟಿದ ಅರ್ಜುನ ಬುದ್ಧಿಯಿಂದ, ನಿರರ್ಥಕ ಹೇಗೆಂದರೆ, ಉಪಾಯಗಳಲ್ಲದ ಕರ್ಮಯೋಗಾದಿಗಳನ್ನು ಉಪಾಯವೆಂದು ಉಪದೇಶಮಾಡುವದರಿಂದ ಹುಟ್ಟಿದ ಅರ್ಜುನ ಬುದ್ಧಿಯಿಂದ, **ಧರ್ಮಮೆನ್ರು ತೋತ್ತಿನವತ್ತೈ** - ಧರ್ಮವೆಂದು ತೋರಿದವನ್ನು, **"ಸರ್ವಧರ್ಮಾನ್"** - ಇಲ್ಲಿ ಸರ್ವ ಧರ್ಮವೆಂದು, **ಅನುವದಕ್ಕಿರದು** - ಅನುವಾದ ಮಾಡಿ ಹೇಳುತ್ತದೆ. ಸರ್ವಧರ್ಮಾನ್ ಎಂಬಲ್ಲಿರುವ ಧರ್ಮಶಬ್ದವು ನಿರರ್ಥಕವಾದ ಕರ್ಮಯೋಗ ನೊದಲಾದ ಜ್ಞಾನಕ್ಕೆ ಭಾರವನ್ನು ಹೊರಿಸಿ, ಅರ್ಜುನ ಬುದ್ಧಿಗೆ ಧರ್ಮವಾಗಿ

(೧) "ಇಜ್ಯಾಚಾರ ದಮೂ ಹಿಂಸಾ ದಾನ ಸ್ವಾಧ್ಯಾಯ ಕರ್ಮಣಾಂ। ಅಯಂತು ಪರಮೋಧರ್ಮೋ ಯದ್ಯೋಗೇನಾತ್ಮದರ್ಶನಮ್" (೨) "ಸರ್ವೇಷಾ ಮೇವ ಧರ್ಮಾಣಾಂ ಮುತ್ತಮೋ ವೈಷ್ಣವೋ ವಿಧಿಃ"

ತೋರಿದುದನ್ನು ಬೋಧಿಸುತ್ತದೆ ಎಂದರೆ ಆಗ, ಶಾಸ್ತ್ರವು ಬೋಧಿಸುವ ಕರ್ಮ ಯೋಗಾದಿ ರೂಪವಾದ ನಿವೃತ್ತಿ ರೂಪಧರ್ಮವೇ ಧರ್ಮವಲ್ಲದಿರುವದರಿಂದ ಪ್ರವೃತ್ತಿ ರೂಪ ಧರ್ಮವೂ ಧರ್ಮವಲ್ಲದುದಾಗಿ, ಶಾಸ್ತ್ರವೇ ಪ್ರಮಾಣವಲ್ಲವೆ ನಿರರ್ಥಕವಾಗಿ ಬಾಹ್ಯಕುದೃಷ್ಟಿಗಳ ಅಭಿಪ್ರಾಯಕ್ಕೆ ಸಮಾನವಾಗುತ್ತದೆಂದು ಹೇಳುತ್ತಾರೆ ಇಲ್ಲಿ ಪೂರ್ವಪಕ್ಷಿಗಳು ಕರ್ಮಯೋಗಾದಿ ಸಾಧನಗಳನ್ನು ಧರ್ಮವಲ್ಲವೆಂದು ಸಮಾಧಾನ ಹೇಳಿದರು. ಆದರೆ ಶಾಸ್ತ್ರಗಳಲ್ಲಿ ಈ ಕರ್ಮಯೋಗಾದಿ ಧರ್ಮಗಳು ಪರಮ ಧರ್ಮ ಗಳಾಗಿ ಹೇಳಲ್ಪಟ್ಟಿವೆ ಎಂದು ತೋರಿಸಲು ಮೂರು ಪ್ರಮಾಣಗಳನ್ನು ಉದಾಹರಿಸುತ್ತಾರೆ.

(೧) "ಇಜ್ಯಾ - ಭಗವದಾರಾಧನವೂ, ಆಚಾರ - ನಿತ್ಯ ನೈಮಿತ್ತಿಕ ಕರ್ಮಾ ನುಷ್ಠಾನವೂ, ದಮ - ಇಂದ್ರಿಯ ನಿಗ್ರಹವೂ ಅಹಿಂಸಾ - ಪ್ರಾಣಹಿಂಸೆ ಮಾಡ ದಿರೋಣವೂ, ದಾನ - ತನ್ನಲ್ಲಿರುವ ದ್ರವ್ಯ ಮೊದಲಾದವುಗಳನ್ನು ಸತ್ಪಾತ್ರದಲ್ಲಿ ಉಚಿತವಾಗಿ ಪ್ರತಿಫಲಾಪೇಕ್ಷೆಯಿಲ್ಲದೆ ಅರ್ಪಿಸೋಣವೂ, ಸ್ವಾಧ್ಯಾಯ - ವೇದಾ ಧ್ಯಯನ ಮಾಡೋಣವೂ ಕರ್ಮಣಾಂ - ಸಪ್ತವ್ಯರ್ಥದಲ್ಲಿ ಷಷ್ಠಿಯು, ಕರ್ಮಗಳ ಮಧ್ಯದಲ್ಲಿ, ಯತ್ - ಯಾವುದು, ಯೋಗೇನ - ಕರ್ಮಯೋಗಾದಿ ಭಕ್ತಿಯೋಗ ಗಳ ಮೂಲಕ, ಆತ್ಮದರ್ಶನಮ್ - ಮೊದಲು ಆತ್ಮಾವಲೋಕನ ಉಂಟಾಗಿ ಅನಂತರ ಪರಮಾತ್ಮ ಸಾಕ್ಷಾತ್ಕಾರ ಉಂಟಾಗುತ್ತದೋ, ಅಯಂ - ಇದು, ಪರಮೋಧರ್ಮಃ - ಸರ್ವೋತ್ಕೃಷ್ಟವಾದ ನಿವೃತ್ತಿರೂಪಧರ್ಮವು. ಆದುದರಿಂದ ಅರ್ಜುನ ಬುದ್ಧಿಗೆ ತೋರಿಸುವುದು ಪರಮಧರ್ಮವೇ ವಿನಾ ಅನ್ಯಥಾ ಅಲ್ಲವೆಂಬ ಭಾವವು.

(೨) ಸರ್ವೇಷಾಂ ಮೇವ ಧರ್ಮಾಣಾಂ - ಸಮಸ್ತವಾದ ಧರ್ಮಗಳಲ್ಲೆಲ್ಲಾ, ವೈಷ್ಣವೋ: ವಿಧಿಃ - ಪರತತ್ವವಾದ ಶ್ರೀ ಮಹಾವಿಷ್ಣುವನ್ನು ಕುರಿತು ಮಾಡುವ ಧರ್ಮವು, ಉತ್ತಮಃ - ಸರ್ವೋತ್ಕೃಷ್ಟವಾದುದು ಅದು ಯಾವುದೆಂದರೆ ಇಹ ಲೋಕದ ಸಂಸಾರವನ್ನು ಪುನಃ ಹೊಂದದಹಾಗೆ ಅತನನ್ನು ಹೊಂದುವ ಉಪಾಯ

---

(೧) ಯಾಜ್ಞವಲ್ಕ್ಯಸ್ಮೃತಿ. ೧.೮ (೨) ಭಾರತ ಆನು. ೩೬.೨೪,

(೩) "ನವಿಷ್ಣ್ವಾರಾಧನಾತ್ಪುಣ್ಯಂ ವಿದ್ಯತೇ ಕರ್ಮವೈದಿಕಮ್" ಇತ್ಯಾದಿಗಳಾಲೇ ಪರಮ ಧರ್ಮಜ್ಞಾಪಕ ಪ್ರಸಿದ್ಧಜ್ಞಾನ ನಿವೃತ್ತಿ ಧರ್ಮಜ್ಞೆಳೆ ಧರ್ಮಜ್ಞಳನ್ನೆನ್ನಾಲ್ ಕೈಮುತಿಕ ನ್ಯಾಯತ್ತಾಲೆ ಪ್ರವೃತ್ತಿ ಧರ್ಮಜ್ಞಳುವುಂ ಧರ್ಮಜ್ಞಳನ್ನಿಕ್ಕೇ ಸರ್ವ ಶಾಸ್ತ್ರಜ್ಞಳುಕ್ಕುಮ್ ಪ್ರಾಮಾಣ್ಯಮಿಲ್ಲಾದ ಪಡಿಯಾಯ್ ಪರಬಾಹ್ಯ ಕುದೃಷ್ಟಿ ಪಕ್ಷಜ್ಞಳಿಲೇ ಪ್ರವೇಶವುಮ್.

ರೂಪವಾದ ಉಪಾಸನವು. ಇದರ ಉತ್ತರಾರ್ಧವು:—"ರಕ್ಷತೇ ಭಗವಾನ್ ವಿಷ್ಣು ರ್ಭಕ್ತಮಾತ್ಮ ಶರೀರವತ್" ಭಗವಂತನಾದ ವಿಷ್ಣುವು ತನ್ನ ಶರೀರವನ್ನೋಪಾದಿಯಲ್ಲಿ ಭಕ್ತನನ್ನು ರಕ್ಷಿಸುವನು ಎಂಬರ್ಥವು. ಶ್ರುತಿಯ ಪ್ರಕಾರ ಎಲ್ಲಾ ಜೀವಾತ್ಮರೂ ಆತನಿಗೆ ಶರೀರವು, ಆದ.ದರಿಂದ ಸರ್ವರೂ ರಕ್ಷ್ಯ ವರ್ಗಕ್ಕೆ ಸೇರಿದವರೆಂ, ಆತನೇ ರಕ್ಷಕನೇ ಸರಿ. ಆದರೂ ಮುಕ್ತಿಯನ್ನು ಕೊಟ್ಟು ರಕ್ಷಿಸಬೇಕಾದರೆ ಉತ್ತಮ ವೈಷ್ಣವ ವಿಧಿರೂಪವಾದ ಧರ್ಮವನ್ನು ಅವಲಂಬಿಸಿದವರನ್ನು ರಕ್ಷಿಸುತ್ತಾನೆಯೇ ವಿನಾ, ಅನ್ಯಥಾ ಅಲ್ಲವು. ಹಾಗೆ ಮಾಡದೆ ಎಲ್ಲರನ್ನೂ ರಕ್ಷಿಸಿಬಿಟ್ಟರೆ, ವೈಷಮ್ಯಾದಿಗಳು ಪ್ರಾಪ್ತವಾಗುತ್ತವೆ ಎಂಬ ಭಾವವು.

(೩) ವಿಷ್ಣ್ವಾರಾಧನಾತ್–ದೈವಯಜ್ಞವಾದ ವಿಷ್ಣುವಿನ ಆರಾಧನೆಗಿಂತಲೂ, ವೈದಿಕಮ್–ವೇದೋದಿತವಾದ, ಪುಣ್ಯಂ ಕರ್ಮ-ಪವಿತ್ರಕರವಾದ ಶ್ರೇಯಸ್ಕರವಾದ ಕರ್ಮವು, ನವಿದ್ಯತೆ - ಇರುವದಿಲ್ಲವು. ಇತ್ಯಾದಿಗಳಾಲೇ ಇವೇ ಮೊದಲಾದ ಪ್ರಮಾಣಗಳ ಮೂಲಕವಾಗಿ, ಪರಮಧರ್ಮಜ್ಞಾಪಕ ಸರ್ವೋತ್ಕೃಷ್ಟ ಧರ್ಮಗಳೆಂದು, ಪ್ರಸಿದ್ಧಗಳಾದ ನಿವೃತ್ತಿ ಧರ್ಮಗಳನ್ನೇ, ಧರ್ಮಜ್ಞಳನ್ನೆನ್ನಾಲ್ - ಧರ್ಮಗಳಲ್ಲವೆಂದು ಹೇಳಿಬಿಟ್ಟರೆ, ಕೈಮುತಿಕ ನ್ಯಾಯದಿಂದ, ಪ್ರವೃತ್ತಿ ಧರ್ಮಗಳೂ ಕೂಡ, ಧರ್ಮಜ್ಞಳನ್ನಿಕ್ಕೇ - ಧರ್ಮಗಳಲ್ಲದವುಗಳಾಗಿ, ಸರ್ವಶಾಸ್ತ್ರಜ್ಞಳುಕ್ಕುಮ್-ಸಮಸ್ತ ಶಾಸ್ತ್ರಗಳಿಗೂ, ಪ್ರಾಮಾಣ್ಯಮಿಲ್ಲಾದ ಪಡಿಯಾಯ್ - ಪ್ರಾಮಾಣ್ಯವಿಲ್ಲದಹಾಗಾಗಿ, ಎಂದರೆ ನಿವೃತ್ತಿ ಧರ್ಮಗಳೂ ಪ್ರವೃತ್ತಿ ಧರ್ಮಗಳೂ ಇವುಗಳ ವಿಷಯವೇ ಶಾಸ್ತ್ರಗಳಲ್ಲಿ ಹೇಳಿರುವದು, ಇವೆರಡೂ ಧರ್ಮಗಳಲ್ಲದೆ ಹೋದರೆ ಶಾಸ್ತ್ರದಿಂದ ಪ್ರಮಾಣರೂಪದಲ್ಲಿ ಗ್ರಹಿಸತಕ್ಕದ್ದು ಯಾವುದೂ ಇಲ್ಲವಾಗುತ್ತದೆ, ಆದುದರಿಂದ ಶಾಸ್ತ್ರವು ನಿರರ್ಥಕವಾದುದಾಗಿ, ಪರಬಾಹ್ಯಕುದೃಷ್ಟಿಪಕ್ಷಜ್ಞಳಿಲೇ ಪ್ರವೇಶಮಾಯ್ - ಪ್ರತ್ಯಕ್ಷಗಳಾದ ವೇದಬಾಹ್ಯರು ಮತ್ತು ವೇದಗಳಿಗೆ ಅಪಾರ್ಥ

---

(೩) ವ್ಯಾಸಸ್ಮೃತಿ.

ಪ್ರಪತ್ತೇಸ್ಸಾಧನತ್ವೇ ಸಿದ್ಧಸಾಧನ ಸಹಕಾರಿತ್ವೇವಾ ಚರಮಶ್ಲೋಕೇ ವಿರೋಧ ಇತಿ ಶಙ್ಕಾ ನಿರಾಸಃ

ಆನಾಲುಮ್ ಉಪಾಸನಾದಿಗಳ್ ಪೋಲೆ ಶರಣವರಣಂ ಧರ್ಮಶಬ್ದ ವಾಚ್ಯವುಮಾಗೈಯಾಲೇ ಇಙ್ಗ ಸರ್ವಶಬ್ದ ಸಙ್ಕೋಚಮ್ ವಾರಾಮೈಕ್ಕಾಗ

ಗಳನ್ನು ಹೇಳುವವರು, ಇವರ ಅಭಿಪ್ರಾಯದಲ್ಲಿ ಪ್ರವೇಶ ಉಂಟಾಗುತ್ತದೆ; ಎಂದರೆ ಇವರುಗಳಿಗೆ ಶಾಸ್ತ್ರಗಳು ಹೇಗೆ ನಿರರ್ಥಕವೋ ಹಾಗೆಯೇ ಪ್ರವೃತ್ತಿ ನಿವೃತ್ತಿ ಧರ್ಮಗಳೆಲ್ಲಾ ಧರ್ಮಗಳಲ್ಲವೆಂದು ಹೇಳುವವರಿಗೂ ಶಾಸ್ತ್ರಗಳು ನಿರರ್ಥಕವಾಗುತ್ತವೆಂಬ ಭಾವವು ಶಾಸ್ತ್ರಗಳಲ್ಲಿ ಧರ್ಮಗಳೇ ಇಲ್ಲದುದರಿಂದ ವಿಧೇಯಾಂಶವೇ ಇಲ್ಲವಾಗಿ ನಾವು ಧರ್ಮೋಪದೇಶವನ್ನು ಯೊಂದಿ ಧರ್ಮಾನುಷ್ಠಾನವನ್ನು ಮಾಡತಕ್ಕದ್ದು ಯಾವುದೂ ಇರುವದಿಲ್ಲವಾಗುತ್ತದೆಂಬ ಭಾವವು

ಪ್ರವತ್ತಿಗೆ ಸಾಧನತ್ವವನ್ನಾಗಲಿ ಸಿದ್ಧ ಸಾಧನ ಸಹಕಾರಿತ್ವವನ್ನಾಗಲಿ ಸ್ವೀಕರಿಸಿದರೆ ಚರಮಶ್ಲೋಕ ವಿರೋಧವೆಂಬ ಶಙ್ಕಾ ಪರಿಹಾರವು.

ಆದರೆ ಪ್ರಪತ್ತಿಗೆ ಸಾಧನತ್ವವನ್ನಾಗಲಿ, ಸಿದ್ಧ ಸಾಧನಕ್ಕೆ ಸಹಕಾರಿ ಎಂಬುದನ್ನಾಗಲಿ ಸ್ವೀಕರಿಸಿದರೆ, ಚರಮಶ್ಲೋಕದ "ಸರ್ವಧರ್ಮಾ ಪರಿತ್ಯಜ್ಯ" ಎಂಬಲ್ಲಿ ಸರ್ವಶಬ್ದದಲ್ಲಿ ಇರೂ ಸೂಡ ಸೇರಿ ಇರೂ ತ್ಯಾಜ್ಯವಲ್ಲವೋ? ಇದು ಎಲ್ಲವು ಎಂದರೆಲಗ ಸರ್ವ ಶಬ್ದಕ್ಕೆ ಸಙ್ಕೋಚಾರ್ಥವನ್ನು ಹೇಳದಂತಾಗಲಿಲ್ಲವೋ? ಇವೇ ಮೊದಲಾದ ಆಕ್ಷೇಪಣೆಗಳನ್ನು ಉಪಪಾದಿಸಿ ಅವುಗಳಿಗೆ ಸಮಾಧಾನವನ್ನು ಹೇಳುತ್ತಾರೆ.

ಆನಾಲುಮ್ - ಪ್ರಪತ್ತಿಗೆ ಸಾಧನತ್ವವನ್ನಾಗಲಿ ಸಿದ್ಧ ಸಾಧನ ಸಹಕಾರಿತ್ವವನ್ನಾಗಲಿ ಅಙ್ಗೀಕರಿಸದಿದ್ದರೆ ಮೇಲೆ ಹೇಳಿದ ದೋಷಗಳುಂಟಾಗುತ್ತವೆಂದು ಒಪ್ಪಿಕೊಂಡರೂ **ಉಪಾಸನಾದಿಗಳ್ ಪೋಲೆ** - ಉಪಾಸನಾದಿಗಳು ಧರ್ಮಗಳೆಂದು ಅಙ್ಗೀಕರಿಸಿರುವ ಹಾಗೆ, **ಶರಣವರಣಂ** - ಶರಣಾಗತಿಯು ಮೂಲಕ ಪ್ರಾರ್ಥನೆಯೂ ಕೂಡ ಎಂದರೆ ಪ್ರಪತ್ತಿಯೂ, **ಧರ್ಮಶಬ್ದ ವಾಚ್ಯ ಮಾಗೈಯಾಲೇ** - ಧರ್ಮಶಬ್ದದಿಂದ ಹೇಳಿಸಿಕೊಳ್ಳುವದರಿಂದ, **ಇಙ್ಗ** - ಈ ಚರಮ ಶ್ಲೋಕದಲ್ಲಿ, **ಸರ್ವಶಬ್ದ ಸಙ್ಕೋಚಮ್ ವಾರಾಮೈಕ್ಕಾಗ** - "ಸರ್ವಧರ್ಮಾ" ಎಂಬಲ್ಲಿರುವ ಸರ್ವಶಬ್ದಕ್ಕೆ ಸಙ್ಕೋಚವು ಬಾರದೆ ಇರುವದಕ್ಕಾಗಿ,

ಇದುವುಮ್ ಸಾಧನತ್ವ ವೇಷತ್ತಾಲೆ ತ್ಯಾಜ್ಯಮನ್ನೋ ? ಆಗೈಯಾಲ್ ಪ್ರಪತ್ತಿಕ್ಕು ಸಾಧನತ್ವಮಾದಲ್ ಸಿದ್ಧಸಾಧನ ಸಹಕಾರಿತ್ವಮಾದಲ್ ಕೊಳ್ಳುಗೈ, ಇವ್ವಚನಮ್ ತನಕ್ಕು ವಿರುದ್ಧಮನ್ನೋ ವೆನ್ನಿಲ್ ? ಇಙ್ಗು ಸಾಕ್ಷಾತ್ಸಾಧನತ್ವಬುದ್ಧಿಯೈ ವಿಡವೇಣುಮೆನ್ನುಮ್ ಪೋದು, ಭಕ್ತಿಯೋಗಾದಿಗಳಿಲುಮ್ ತುಲ್ಯಮ್.

ಇದುವುಮ್ - ಈ ಪ್ರಪತ್ತಿಯೂ, **ಸಾಧನತ್ವ ವೇಷತ್ತಾಲೇ** – ಸಾಧನತ್ವ ರೂಪದಲ್ಲಿ, **ತ್ಯಾಜ್ಯಮನ್ನೋ ?** ಪರಿತ್ಯಜ್ಯ ಎಂದು ಹೇಳಿರುವದರಿಂದ ತ್ಯಾಜ್ಯವಲ್ಲವೋ? **ಆಗೈಯಾಲೇ** - ಹೀಗೆ ಸಾಧನತ್ವ ರೂಪದಲ್ಲಿ ತಾಜ್ಯವಾದುದರಿಂದ, **ಪ್ರಪತ್ತಿಕ್ಕುಮ್** - ಪ್ರಪತ್ತಿಗೂ ಕೂಡ ಉಪಾಸನದಂತಾಗೆ, **ಸಾಧನತ್ವಮಾದಲ್** - ಸಾಧನತ್ವವನ್ನಾದರೂ, ಸಿದ್ಧಸಾಧನಕ್ಕೆ ಸಹಕಾರಿತ್ವವನ್ನಾದರೂ, **ಕೊಳ್ಳುಗೈ** - ಅಙ್ಗೀಕರಿಸೋಣವು, ಇವ್ವಚನಮ್ - ಹೀಗೆ ಪ್ರಪತ್ತ್ಯನುಷ್ಠಾನವು ಆವಶ್ಯಕವೆಂದು ಹೇಳೋಣವು, ತನಕ್ಕೇ ವಿರುದ್ಧಮನ್ನೋ - ತನೆಗೇನೇ ವಿರುದ್ಧವಾದುದಲ್ಲವೋ, **ಎನ್ನಿಲ್** - ಎಂದು ಆಕ್ಷೇಪವನ್ನು ತಂದರೆ, ಇಙ್ಗು - ಈ ಪ್ರಪತ್ತಿಯ ಸಂದರ್ಭದಲ್ಲಿ, **ಸಾಕ್ಷಾತ್ಸಾಧನತ್ವ ಬುದ್ಧಿಯೈವಿಡವೇಣುಮೆನ್ನುಮ್ ಪೋದು** - ಪ್ರಪತ್ತಿಯ ವಿಷಯದಲ್ಲಿ ಸಾಕ್ಷಾತ್ತಾಗಿ ಮೋಕ್ಷಕ್ಕೆ ಸಾಧನವೆಂಬ ಅಭಿಪ್ರಾಯವನ್ನು ಬಿಡಬೇಕೆಂದು ಹೇಳುವಾಗ, **ಭಕ್ತಿಯೋಗಾದಿಗಳಿಲುಮ್ ತುಲ್ಯಮ್** - ಭಕ್ತಿಯೋಗಾದಿಗಳಲ್ಲೂ ಅದು ಸಮಾನವಾದುದೇ ; ಎಂದರೆ, ಪ್ರಪತ್ತಿಯ ವಿಷಯದಲ್ಲಿ ಸಾಧನತ್ವಬುದ್ಧಿಯನ್ನು ಬಿಡತಕ್ಕದ್ದೆಂದರೆ, ಭಕ್ತಿಯೋಗವೂ ಪ್ರಪತ್ತಿಯಹಾಗೆ ಉಪಾಯವಾದುದರಿಂದ ಭಕ್ತಿಯೋಗದಲ್ಲೂ ಸಾಧನತ್ವ ಬುದ್ಧಿಯನ್ನು ಬಿಡಬೇಕಾಗುತ್ತದೆ ಎಂಬ ಭಾವವು; ಭಕ್ತಿಯೋಗಕ್ಕೆ ಸಾಧನತ್ವವನ್ನು ಅಙ್ಗೀಕರಿಸುವದಾದರೆ ಪ್ರಪತ್ತಿಗೂ ಏಕೆ ಅಙ್ಗೀಕರಿಸಕೂಡದೆಂಬ ಅಭಿಪ್ರಾಯವು. ಪೂರ್ವಪಕ್ಷಿಗಳು ಪ್ರಪತ್ತಿಗೆ ಸಾಧನತ್ವವನ್ನಾಗಲಿ ಸಿದ್ಧ ಸಾಧನ ಸಹಕಾರಿತ್ವವನ್ನಾಗಲಿ ಆಙ್ಗೀಕರಿಸಿದರೆ ಚರಮಶ್ಲೋಕಾರ್ಥಕ್ಕೆ ವಿರೋಧವಾದುದಾಗುತ್ತದೆ ; ಸರ್ವಧರ್ಮಾನ್ ಪರಿತ್ಯಜ್ಯ - ಎಂದು ಅಲ್ಲಿ ವಿಧಿಸಿರುವದರಿಂದ, ಪ್ರಪತ್ತಿಯೂ, ಧರ್ಮವಾದುದರಿಂದ ಪ್ರಪತ್ತಿಗೆ ಸಾಧನತ್ವ ಬುದ್ಧಿಯನ್ನು ಅಙ್ಗೀಕರಿಸುವದು ಯುಕ್ತವಲ್ಲವೆಂದು ಆಕ್ಷೇಪಿಸುತ್ತಾರೆ. ಅದಕ್ಕೆ ಸಮಾಧಾನವಾಗಿ ಪ್ರಪತ್ತಿಗೆ ಸಾಧನತ್ವಬುದ್ಧಿಯು ಸಲ್ಲದಿದ್ದಲ್ಲಿ ಉಪಾಸನೆಗೂ ಕೂಡದೆಂದಾಗುತ್ತದೆ, ಎಂದು ಹೇಳುತ್ತಾರೆ.

ಪ್ರಸಾದನತ್ವವೇಷತ್ತಾಲುಮ್ ಧರ್ಮತ್ವಮಿದುಕ್ಕು ವಿಡುವೇಣು ಮೆನ್ನಿಲ್, ಸರ್ವ ಶಬ್ದ ಸಙ್ಕೋಚಂ ವಾರಾಮೈಕ್ಕಾಗ "ಕೃಷ್ಣಂ ಧರ್ಮಂ ಸನಾತನಂ" ಇತ್ಯಾದಿಗಳಿರ್ಪಡಿಯೇ ಧರ್ಮಮಾನ ಸಿದ್ಧೋಪಾಯತ್ತಿ ಲುಮ್ ಸಾಧನತ್ವ ಬುದ್ಧಿಯೈ ವಿಡಪ್ರಸಙ್ಗಿಕ್ಕುಮ್. ಇವ್ವಾಕ್ಯತ್ತಿಲ್

ಸರ್ವ ಧರ್ಮಾ೯ ಪರಿತ್ಯಜ್ಯ - ಎಂದಿರುವದರಿಂದ ಪ್ರಪತ್ತಿಯೂ ಒಂದು ಧರ್ಮವಾದುದರಿಂದ ಪರಿತ್ಯಾಗಮಾಡತಕ್ಕದ್ದೆಂದು ಪೂರ್ವಪಕ್ಷ ತಂದುದರಿಂದ, ಆ ಪೂರ್ವಪಕ್ಷವನ್ನು ಎರಡಾಗಿ ವಿಕಲ್ಪಿಸಿ ಕೇಳುತ್ತಾರೆ. ಪ್ರಪತ್ತಿಯೂ ಧರ್ಮವಾದುದರಿಂದ ಪರಿತ್ಯಾಗವೆಂದು ಹೇಳಲ್ಪಟ್ಟತಲ್ಲಾ, ಅದೇನು ಸಾಕ್ಷಾತ್ಸಾಧನತ್ವ ಬುದ್ಧಿಯ ತ್ಯಾಗವೇ ಇಲ್ಲವೇ ಪ್ರಸಾದನತ್ವವೇಷದಿಂದ ತ್ಯಾಗವೇ ಎಂದು ವಿಕಲ್ಪಿಸಿ, ಸಾಕ್ಷಾತ್ಸಾಧನತ್ವಬುದ್ಧಿಯು ಕೂಡದೆಂದು ಹೇಳಿದರೆ, ಆಗ ಉಪಾಸನವೂ ಸಾಧನವಲ್ಲವಾಗುತ್ತದೆಂದು ಹೇಳಿದರು ಈಗ ಎರಡನೆಯ ವಿಕಲ್ಪವಾದ, ಪ್ರಸಾದನತ್ವವೇಷಧರ್ಮವಾಗುವದರಿಂದ ತ್ಯಾಜ್ಯವೆಂದು ಹೇಳಿದರೆ, ಸಿದ್ಧೋಪಾಯನೂ ಪ್ರಸಾದನತ್ವರೂಪಧರ್ಮವೆಂದು ಹೇಳಿರುವ ಪ್ರಮಾಣವಿರುವದರಿಂದ ಅದನ್ನೂ ಬಿಡಬೇಕೆಂದು ಆಗುವದರಿಂದ ಈ ವಾದಗಳು ಸರಿಯಲ್ಲವೆಂದು ಹೇಳುತ್ತಾರೆ.

ಪ್ರಸಾದನತ್ವವೇಷತ್ತಾಲುಮ್ - ಭಗವದನುಗ್ರಹ ಸಂಪಾದಕ ರೂಪದಿಂದಲೂ, ಧರ್ಮತ್ವವು, **ಇದುಕ್ಕು** - ಈ ಪ್ರಪತ್ತಿಗೆ, ಸಿದ್ಧಿಸುವದರಿಂದ **ವಿಡುವೇಣುಮೆನ್ನಿಲ್** - ಬಿಡಶಕ್ಯವಿದ್ದು ಎಂದರೂ, **ಸರ್ವಶಬ್ದ ಸಂಕೋಚಮ್ ವಾರಾಮೈಕ್ಕಾಗ** - "**ಸರ್ವಧರ್ಮಾ೯ ಪರಿತ್ಯಜ್ಯ**" ಎಂಬಲ್ಲಿರುವ ಸರ್ವ ಶಬ್ದಕ್ಕೆ ಸಂಕೋಚವು ಬಾರದೇ ಇರುವದಕ್ಕಾಗಿ, "**ಕೃಷ್ಣಂ ಧರ್ಮಂ ಸನಾತನಮ್**" ಶ್ರೀ ಕೃಷ್ಣನೂ ಅನಾದಿಯಾದ ಧರ್ಮವು" **ಇತ್ಯಾದಿಗಳಿರ್ಪಡಿಯೇ** - ಎಂಬಿವೇ ಮೊದಲಾದ ಪ್ರಮಾಣಗಳಲ್ಲಿ ಹೇಳಿರುವ ರೀತ್ಯಾ, **ಧರ್ಮಮಾನ ಸಿದ್ಧೋಪಾಯತ್ತಿಲುಮ್**. ಧರ್ಮವಾಗಿರುವ ಸಿದ್ಧೋಪಾಯದಲ್ಲೂ, **ಸಾಧನತ್ವ ಬುದ್ಧಿಯೈ ಉಪಾಯವೆಂಬ ಬುದ್ಧಿಯನ್ನು ವಿಡಪ್ರಸಙ್ಗಿಕ್ಕುಮ್** - ಬಿಡಬೇಕಾಗಿ ಬರುವದು. **ಸರ್ವಧರ್ಮಾ೯ ಪರಿತ್ಯಜ್ಯ** ಎಂದು ಹೇಳಿರುವದರಿಂದ ಪ್ರಪತ್ತಿಯು ಭಗವತ್ಪ್ರಸಾದನರೂಪಧರ್ಮವಾದುದರಿಂದ ಅದನ್ನೂ ಪರಿತ್ಯಾಗಮಾಡಬೇಕೆಂಬ ವಾದ ತಂದರೆ, **ಕೃಷ್ಣಂ ಧರ್ಮಂ ಸನಾತನಮ್** ಎಂದು ಸಿದ್ಧೋಪಾಯನೂ ಧರ್ಮವೆಂದು ಹೇಳಲ್ಪಟ್ಟಿರುವದರಿಂದ ಸಿದ್ಧೋಪಾಯನಲ್ಲೂ ಸಾಧನತ್ವಬುದ್ಧಿಯನ್ನು ಬಿಡಬೆಕೆದಂ ಹೇಳಬೇಕಾಗುತ್ತದೆ.

ಪ್ರತಿಪಾದ್ಯಮಾನ ಧರ್ಮತ್ತೈ ಯೊಳಿನ್ದ ಧರ್ಮಜ್ಞಳನ್ನೋ ತ್ಯಾಜ್ಯಜ್ಞಳಾವನ ವೆನ್ನಿಲ್, ಇಜ್ಞು ವಿಹಿತ್ತೈಯಾನ ಶರಣಾಗತಿಯಿಲುಮ್ ತುಲ್ಯಮ್.

ಈ ದೂಷಣವಿಂದ ತಪ್ಪಿಸಿಕೊಳ್ಳುವದಕ್ಕಾಗಿ, **ಸರ್ವಧರ್ಮಾ ಪರಿತ್ಯಜ್ಯ** ಎಂಬ ವಾಕ್ಯದಲ್ಲಿ ಹೇಳಲ್ಪಟ್ಟ ಧರ್ಮವನ್ನು ಬಿಟ್ಟ ಇತರ ಧರ್ಮಗಳೆಲ್ಲಾ ತಾಜ್ಯವೆಂದಲ್ಲವೇ ಅನ್ವಯಿಸತಕ್ಕದ್ದು; ಹಾಗೆ ಹೇಳುವದರಿಂದ ಸಿದ್ಧೋಪಾಯನೂ ಧರ್ಮವೆಂದಾವರೂ, ಸಿದ್ಧೋಪಾಯವೂ ತ್ಯಾಜ್ಯವಾಗುವದಿಲ್ಲವೆಂದು ಹೇಳುವೆವು; ಎಂದರೆ ಅವಕ್ಕೆ ಪುನಃ ಸಮಾಧಾನವನ್ನು ಹೇಳುತ್ತಾರೇನೆಂದರೆ— ಹಾಗಾದರೆ ಈ ಚರಮ ಶ್ಲೋಕದಲ್ಲೂ **ಮಾಮೇಕಂ ಶರಣಂವ್ರಜ** ಎಂದು ಶರಣಾಗತಿರೂಪ ಧರ್ಮವು ಹೇಳಲ್ಪಟ್ಟಿರುವದರಿಂದ ನಿನ್ನ ವಾದಕ್ಕೆ ಸಮಾನವಾಗಿ ಅದನ್ನು ಬಿಟ್ಟ ಮಿಕ್ಕ ಧರ್ಮಗಳೆಲ್ಲಾ ತಾಜ್ಯಗಳೆಂದು ನಾವು ಹೇಳುವೆವು ಎಂಬದಾಗಿ "ಇವ್ವಾಕ್ಯತ್ತಿಲ್" ಎಂಬ ವಾಕ್ಯದಿಂದ ತಿಳಿಸುತ್ತಾರೆ. **ಇವ್ವಾಕ್ಯತ್ತಿಲ್** - **ಸರ್ವಧರ್ಮಾ ಪರಿತ್ಯಜ್ಯ ಮಾಮೇಕಂ ಶರಣಂವ್ರಜ** ಎಂಬ ವಾಕ್ಯದಲ್ಲಿ, **ಪ್ರತಿಪಾದ್ಯಮಾನ ಧರ್ಮತ್ತೈ** - ಪ್ರತಿಪಾದಿಸಲ್ಪಟ್ಟ ಧರ್ಮವನ್ನು, **ಒಳಿನ್ದ** - ಬಿಟ್ಟ ಮಿಕ್ಕ, **ಧರ್ಮಜ್ಞಳನ್ನೋ** - ಕರ್ಮಾನುಷ್ಠಾನಗಳನ್ನಲ್ಲವೋ, **ತ್ಯಾಜ್ಯಜ್ಞಳಾವನ ವೆನ್ನಿಲ್** - ತಾಜ್ಯಗಳೆಂಬಿ ಹೇಳಿರುವುವು ಎಂದು ಒಂದು ವೇಳೆ ಸಮಾಧಾನ ಹೇಳಿದರೆ, ಇಜ್ಞು **ವಿಹಿತ್ತೈಯಾನ** - ಈ ವಾಕ್ಯದಲ್ಲಿ **ಶರಣಂವ್ರಜ** ಎಂಬದಾಗಿ ವಿಧಿಸಿರುವ, **ಶರಣಾಗತಿಯಿಲುಮ್** - ಪ್ರಪತ್ತ್ಯನುಷ್ಠಾನದಲ್ಲೂ, **ತುಲ್ಯಮ್** - ಸಮಾನವು; **ಸರ್ವಧರ್ಮಾ ಪರಿತ್ಯಜ್ಯ** ಎಂಬಲ್ಲಿ ಸರ್ವ ಶಬ್ದಕ್ಕೆ ಸಂಕೋಚವಿಲ್ಲದೆ ಅನ್ವಯಿಸಿ, ಎಲ್ಲಾ ಧರ್ಮಗಳನ್ನೂ ಬಿಡತಕ್ಕದ್ದೆಂದು ಹೇಳುವಹಾಗಾದರೆ, **ಕೃಷ್ಣಂ ಧರ್ಮಂ ಸನಾತನಂ** ಎಂಬಲ್ಲಿ ಸಿದ್ಧೋಪಾಯನಾದ **ಸರ್ವೇಶ್ವರನೂ** ಕೂಡ ಸಿದ್ಧೋಪಾಯ, ಶೋಧನಾಧಿಕಾರದಲ್ಲಿ ಧರ್ಮವೆಂದು ಸ್ಥಾಪಿತವಾಗಿರುವದರಿಂದಲೂ, ಅಲ್ಲಿ ಧರ್ಮಶಬ್ದವು ಔಪಚಾರಿಕವಲ್ಲದೆ ಮುಖ್ಯಾರ್ಥವನ್ನೇ ಉಳ್ಳದೆಂದು ವ್ಯಕ್ತಪಡಿಸಿರುವದರಿಂದಲೂ (ನೆಯ ಪುಟವನ್ನು ನೋಡಿ) **ಉಪಾಸನಾದಿಗಳೈಪ್ಪೋಲೆ** ಎಂದಾರಂಭಿಸಿದ ವಾಕ್ಯಮೂಲಕ ಸಿದ್ಧೋಪಾಯನನ್ನೂ ಬಿಡಬೇಕೆಂದಾಗುವದರಿಂದ, ಪ್ರತಿಕಕ್ಷಿಗಳ ಅಭಿಪ್ರಾಯವು ಸರಿಯಿಲ್ಲವೆಂದು ಹೇಳಿದುದಕ್ಕೆ ಸಮಾಧಾನವಾಗಿ ಎಲ್ಲಾ ಧರ್ಮವು ಎಂದು ಅರ್ಥ ಮಾಡತಕ್ಕದ್ದಲ್ಲವು, ಆ ವಾಕ್ಯದಲ್ಲಿ ಹೇಳಲ್ಪಟ್ಟ ಧರ್ಮವನ್ನು ಬಿಟ್ಟು ಇತರ ಎಲ್ಲಾ ಧರ್ಮಗಳನ್ನೂ ತ್ಯಜಿಸತಕ್ಕದ್ದೆಂದು ಅರ್ಥ ಹೇಳಬೇಕು; ಆಗ **ಕೃಷ್ಣಂ ಧ**

ಧರ್ಮಾ ಸನಾತನಂ ಎಂಬ ವಾಕ್ಯದಲ್ಲಿ ಹೇಳಲ್ಪಟ್ಟ ಸಿದ್ಧೋಪಾಯನು ತ್ಯಾಜ್ಯನಾಗುವದಿಲ್ಲವು **ಮಾಮೇಕಂ ಶರಣಂವ್ರಜ** ಎಂಬಲ್ಲಿ ಸಿದ್ಧೋಪಾಯನೇ ಹೇಳಲ್ಪಟ್ಟನೆಂದು **ಪೂರ್ವಪಕ್ಷ**ವನ್ನು ತಂದರೆ, ಇದಕ್ಕೆ ಸಮಾಧಾನವಾಗಿ **ಶರಣಂವ್ರಜ** ಎಂಬುದರಿಂದ ಸಾಧ್ಯೋಪಾಯವಾದ ಪ್ರಪತ್ತಿಯು ಹೇಳಲ್ಪಟ್ಟು **ಸರ್ವಧರ್ಮಾ ಪರಿತ್ಯಜ್ಯ** ಎಂಬಲ್ಲಿ ಈ ಶರಣಾಗತಿಯನ್ನು ಬಿಟ್ಟು ಮಿಕ್ಕ ಎಲ್ಲಾ ಧರ್ಮವನ್ನೂ ಬಿಡತಕ್ಕದ್ದೆಂದು ನಿಮ್ಮ ಅಭಿಪ್ರಾಯಕ್ಕೆ ಸಮಾನವಾಗಿ ನಾವೂ ಹೇಳುವೆವು ಆದುದರಿಂದ ಪ್ರಪತ್ತಿಯು ಸಾಧನತ್ವರೂಪದಲ್ಲಿಯಾಗಲಿ, ಸಿದ್ಧಸಾಧನಕ್ಕೆ ಸಹಕಾರಿ ರೂಪದಲ್ಲಿಯಾಗಲಿ, ಧರ್ಮವಾಗುವದರಿಂದ ತಾಜ್ಯವೆಂಬ ನಿಮ್ಮಗಳ ಅಭಿಪ್ರಾಯವು ಸಮಂಜಸವಲ್ಲವೆಂಬ ಭಾವವು.

ಸಿದ್ಧೋಪಾಯ ವಿಷಯದಲ್ಲಿ ಭಕ್ತಿ ಪ್ರಪತ್ತಿಗಳು ಹೇಗೆ ಉಪಕಾರಕಗಳು ?

ಇನ್ನೊಂದು ಪೂರ್ವಪಕ್ಷವೇನೆಂದರೆ :—ಸಿದ್ಧೋಪಾಯನು ನಿತ್ಯನು, ಹೀಗಿರುವಾಗ ಆ ಸಿದ್ಧೋಪಾಯವನ್ನೇನಾದರೂ ಈ ಸಾಧ್ಯೋಪಾಯಗಳು ಉಂಟುಮಾಡಬೇಕೇ? ಏನೂ ಇಲ್ಲವು; ಹೀಗಿರುವಾಗ ಸಾಧ್ಯೋಪಾಯಗಳ ಅಪೇಕ್ಷೆ ಏತಕ್ಕೆ ?

ಸಿದ್ಧೋಪಾಯನಿಗೆ ಉಪಚಯಾಪಚಯಗಳು ಎಂದರೆ ವೃದ್ಧಿ ಹ್ರಾಸಗಳು ಇಲ್ಲವು ಹೀಗಿರುವಾಗ ಈ ಸಾಧ್ಯೋಪಾಯಗಳೇನು ಸಿದ್ಧೋಪಾಯಕ್ಕೆ ವರ್ಧಕವೇ? ಹಾಗಲ್ಲವ ಪಕ್ಷದಲ್ಲಿ ಸಾಧ್ಯೋಪಾಯಗಳ ಅಪೇಕ್ಷೆ ಏತಕ್ಕೆ ?

ಸಿದ್ಧೋಪಾಯನು ಸರ್ವದಾ ಸಹಜಕಾರುಣ್ಯ ಪರಿಪೂರ್ಣನು, ಹೀಗಿರುವಾಗ ಅವನಿಗೆ ಯಾವ ಸಹಕಾರಿಯು ಅವಶ್ಯಕತೆಯೂ ಇಲ್ಲವು ಈ ಸಾಧ್ಯೋಪಾಯಗಳು ಸಹಕಾರಿಯಲ್ಲವ ಪಕ್ಷದಲ್ಲಿ ಅವುಗಳಪೇಕ್ಷೆ ಏತಕ್ಕೆ ?

ಸಿದ್ಧೋಪಾಯನು ಸತ್ಯಸಂಕಲ್ಪನು, ಯಾವುದರ ದ್ವಾರಾ ಇಲ್ಲವೆ ಸ್ವತಂತ್ರನಾಗಿ ಸಫಲ್ಯಪಡಿಸುವ ಶಕ್ತಿಯುಳ್ಳವನು. ಇಂತವನು ಸಾಧ್ಯೋಪಾಯಗಳ ದ್ವಾರಾ ಸಿಧ್ಧೋಪಾಯನಾಗಬೇಕೇ? ಹಾಗಿಲ್ಲದೆ ಪಕ್ಷವಶ್ಚಿ ಈ ಸಾಧ್ಯೋಪಾಯಗಳ ಅವಶ್ಯಕತೆ ಏನು ? ಇತ್ಯಾದಿ **ಪೂರ್ವಪಕ್ಷ**ಗಳನ್ನು ಮುಂದೆ ಅನುವಾದ ಮಾಡಿ ಇವೈ **ಅನಾದಿಯಾನ** ಎಂಬ ವಾಕ್ಯವುಖಲಕ ಸಮಾಧಾನವನ್ನು ಹೇಳುತ್ತಾರೆ. ಹೇಗೆ ಉಪಕಾರಕವೆಂದರೆ, ಈ ಚೇತನನು ಮಾಡಿರುವ ಅನಂತಾಪರಾಧಗಳಿಂದ ಭಗವನ್ನಿಗ್ರಹಕ್ಕೆ ಗುರಿಯಾಗಿರುತ್ತಾನೆ ಈ ಸಾಧ್ಯೋಪಾಯಗಳು ಅಂತಹ ನಿಗ್ರಹವನ್ನು ಶಮನಮಾಡಿ, ಅನುಗ್ರಹ ಸಂಪಾದಕಗಳಾಗುತ್ತವೆ; ಆದುದರಿಂದ ಅವ

ಭಕ್ತಿಃ ಪ್ರಪತ್ತ್ಯೋಃ ಸಿದ್ಧೋಪಾಯೋಪಕಾರಕತ್ವಂ

ಉಪಾಸನಾದಿಗಳೈಪ್ಪೋಲೆ ತನಕ್ಕು ಉತ್ಪಾದಕ ಮಾಗವಾದಲ್, ವರ್ಧಕಮಾಗವಾದಲ್, ಸಹಕಾರಿಯಾಗವಾದಲ್, ದ್ವಾರಮಾಗವಾದಲ್, ಒನ್ರಾಲಪೇಕ್ಷೈ ಯರುಮ್ಬಡಿ, ನಿತ್ಯಮಾಯ್, ಉಪಚಯಾಪಚಯ ರಹಿತಮಾಯ್, ಸರ್ವದಾ ಪರಿಪೂರ್ಣಮಾನ ಸಹಜ ಕಾರುಣ್ಯಾದಿಗಳೈ ಯುಡೈತ್ತಾಯ್, ಸಙ್ಕಲ್ಪ ಮುಂಡಾನಪೋದುದ್ವಾರ ನಿರಪೇಕ್ಷಮಾಗ ಕರ್ಯಂ ಪಿರುಕ್ಕುವ್ಮ್ಬಡಿ ಸತ್ಯಸಙ್ಕಲ್ಪವಮಾಯ್ ಇರುಕ್ಕಿರ ಸಿದ್ಧೋ

ಶ್ಯಕವೆಂದು ಹೇಳುತ್ತಾರೆ. ಇವುಗಳು ಸಿದ್ಧೋಪಾಯಕ್ಕೆ ಉತ್ಪಾದಕಗಳಾಗಲಿ, ವರ್ಧಕಗಳಾಗಲಿ, ಸಹಕಾರಿಗಳಾಗಲಿ, ದ್ವಾರಗಳಾಗಲಿ ಆಲ್ಲವು. ಪುನಃಪುನಃ ಸಂಸಾರ ಬಂಧಕ್ಕೆ ಹೇತು ಭೂತವಾದ ಸರ್ವೇಶ್ವರನ ನಿಗ್ರಹವನ್ನು ತಪ್ಪಿಸಿ, ಅನುಗ್ರಹವನ್ನು ಸಂಪಾದಿಸಿ ಕೊಡುತ್ತವೆಂದು ಹೇಳುತ್ತಾರೆ.

ಉಪಾಸನಾದಿಗಳೈಪ್ಪೋಲೆ - ಉಪಾಸನಾದಿಗಳ ಹಾಗೆ, ಇದು ವ್ಯತಿರೇಕ ದೃಷ್ಟಾಂತವು, ಹೇಗೆ ವ್ಯತಿರೇಕವೆಂಬುದು ಮುಂದೆ ವ್ಯಕ್ತಪಡಿಸಲ್ಪಡುತ್ತದೆ, **ತನುಕ್ಕು** - ಸಿದ್ಧೋಪಾಯನಾದ ಸರ್ವೇಶ್ವರನಿಗೆ, **ಉತ್ಪಾದಕ ಮಾಗವಾದಲ್** - ಉಂಟು ಮಾಡುವದಾಗಿಯಾಗಲಿ **ವರ್ಧಕಮಾಗಿಯಾದಲ್**-ಅಭಿವೃದ್ಧಿ ಮಾಡುವದಾಗಿಯಾಗಲಿ, **ಸಹಕಾರಿಯಾಗವಾದಲ್** - ಸಹಾಯ ಮಾಡುವ ದಾಗಿಯಾಗಲಿ, **ದ್ವಾರಮಾಗವಾದಲ್** - ಈ ಉಪಾಯಗಳ ಮೂಲಕವಾಗಿ ಯಾಗಲಿ, **ಒನ್ರಾಲಪೇಕ್ಷೈಯರುಂಬಡಿ** - ಹೀಗೆ ಯಾವದೊಂದು ವಿಧದಲ್ಲೂ ಅಪೇಕ್ಷೆ ಇಲ್ಲದಿರುವಹಾಗೆ, **ನಿತ್ಯಮಾಯ್** - ತಾನು ನಿತ್ಯನಾಗಿ ಆ ಕಾರಣದಿಂದ ಯಾವ ಉತ್ಪಾದಕದ ಅಪೇಕ್ಷೆಯೂ ಬೇಡದವನಾಗಿ, **ಉಪಚಯಾಪಚಯ ರಹಿತಮಾಯ್** - ವೃದ್ಧಿ ಹ್ರಾಸಗಳಿಲ್ಲದಿರುವದರಿಂದ ಯಾವುದರಿಂದಲೂ ವರ್ಧಕಾಪೇಕ್ಷೆಯಿಲ್ಲದವನಾಗಿ, **ಸರ್ವದಾ ಪರಿಪೂರ್ಣಮಾನ ಸಹಜ ಕಾರುಣ್ಯಾದಿಗಳೈ ಯುಡತ್ತಾಯ್** - ಯಾವಾಗಲೂ ಸಹಜಕಾರುಣ್ಯಪರಿಪೂರ್ಣನಾಗಿ ಕರುಣಾಸಾಗರನೆನಿಸಿರುವದರಿಂದ ಯಾವುದರ ಸಹಾಯಾಪೇಕ್ಷೆಯೂ ಇಲ್ಲದವನಾಗಿ, **ಸಙ್ಕಲ್ಪಮುಂಡಾನಪೋದು ದ್ವಾರನಿರಪೇಕ್ಷಮಾಗ ಕಾರ್ಯಂ ಪಿರುಕ್ಕುರಪಡಿ ಸತ್ಯಸಙ್ಕಲ್ಪವಮಾಯ್** - ಯಾವಾಗ ತಾನು ಸಙ್ಕಲ್ಪಿಸುತ್ತಾನೋ ಆಗಯಾವುದರ ದ್ವಾರಾ ಇಲ್ಲದೆ ತನ್ನ ಸಙ್ಕಲ್ಪಾನುಸಾರವಾಗಿ ಕಾರ್ಯವು

ಪಾಯತ್ತುಕ್ಕು ಭಕ್ತಿಪ್ರಪತ್ತಿಗಳ್ ಎನ್ವಾಕಾರತ್ತಾಲೆ ಉಪಕಾರಕಙ್ಗಳಾಗಿರನ ವೆನ್ನಿಲ್, ಇನ್ಮೈಯುನಾದಿಯಾನ ಅಪಚಾರ ಪರಂಪರೈಯಾಲೇ ಉತ್ಪನ್ನಮಾಯ್ ಸಂಸಾರ ಹೇತುವಾಯ್ಕ್ಕಿಡಕ್ಕಿರ ನಿಗ್ರಹತ್ತೈ ಶಮಿಪ್ಪಿತ್ತುಕೊಂಡು ಉಪಕರಿಕ್ಕಿರನ. ಇನ್ಮೈ ಫಲಾಂತರತ್ತುಕ್ಕು ಉಪಾಯ

ನಡೆಯುವಹಾಗೆ ಸತ್ಯಸಙ್ಕಲ್ಪನಾಗಿ, **ಇರುಕ್ಕಿರ ಸಿದ್ಧೋಪಾಯತ್ತುಕ್ಕು**- ಇರುವ ಸಿದ್ಧೋಪಾಯನಿಗೆ, ಭಕ್ತಿ ಪ್ರಪತ್ತಿಗಳು, **ಎನ್ವಾಕಾರತ್ತಾಲೇ ಉಪಕಾರಕಗಳಾಗಿರನ ಎನ್ನಿಲ್** - ಯಾವ ರೀತಿಯಲ್ಲಿ ಉಪಕಾರಗಳಾಗುತ್ತವೆ ಎಂದರೆ, **ಇನ್ಮೈ** - ಈ ಸಾಧ್ಯೋಪಾಯಗಳಾದ, ಭಕ್ತಿಪ್ರಪತ್ತಿಗಳು, **ಅಪಚಾರ ಪರಂಪರೈಯಾಲೆ** - ಭಗವಂತನ ವಿಧಿ ನಿಷೇಧವಾಕ್ಯಗಳಿಗೆ ವಿರೋಧವಾಗಿ ನಡೆದು ಮಾಡಿದ **ಅಕೃತ್ಯಕರಣ** ಕೃತ್ಯಾಕರಣ ರೂಪಗಳಾದ ಪಾಪಸಮೂಹಗಳಿಂದ, **ಉತ್ಪನ್ನಮಾಯ್** - ಉಂಟಾದ, **ಸಂಸಾರ ಹೇತುವಾಯ್ ಕಿಡಕ್ಕಿರ** - ಪುನಃ ಪುನಃ ಬಂಧಕಗಳಾಗಿ ಜನ್ಮ ಪರಂಪರೆಗಳನ್ನು ಎತ್ತುವುದಕ್ಕೆ ಕಾರಣಭೂತವಾಗಿರುವ, **ನಿಗ್ರಹತ್ತೈ** - ಭಗವಂತನ ಕೋಪರೂಪವಾದ ನಿಗ್ರಹವನ್ನು, **ಶಮಿಪ್ಪಿತ್ತುಕೊಂಡು** - ಶಮನಮಾಡಿ, **ಉಪಕರಿಕ್ಕಿರನ** ಉಪಕಾರಕಗಳಾಗುತ್ತವೆ. **ಉಪಾಸನಾದಿಗಳೈಪ್ಪೋಲೆ** ಎಂಬುದು ವ್ಯತಿರೇಕ ದೃಷ್ಟಾಂತ ಹೇಗೆ ಎಂದರೆ, ಉಪಾಸನವು ಕರ್ಮಯೋಗಾದಿಗಳಿಂದ ಉತ್ಪಾದ್ಯವು. ಅಹರಹರನುಷ್ಠಿಯಮಾಣವಾಗಿ ಅಭ್ಯಾಸವಿಂದ ವರ್ಧಿತವು, ನಿತ್ಯ ನೈಮಿತ್ತಿಕ ಕರ್ಮಗಳ ಸಹಕಾರಿಯನ್ನಪೇಕ್ಷಿಸುವಂತಾದ್ದು ಸರ್ವೇಶ್ವರದ್ವಾರಾ ಫಲಪ್ರದವು, ಎಂದೇ ಸಿದ್ಧೋಪಾಯನಿಗೆ ಉಪಾಸನೆಗೆ ಇರುವಹಾಗೆ ಉತ್ಪಾದಕವಿಲ್ಲವು ಇತ್ಯಾದಿ

- ಮೋಕ್ಷಪ್ರಾಪ್ತಿಗಾಗಿ ಮುಮುಕ್ಷುವು ಮಾಡುವ ಉಪಾಯಾನುಷ್ಠಾನವು ಭಗವನ್ನಿಗ್ರಹವನ್ನೇನೋ ಶಮನ ಮಾಡುತ್ತದೆಂದು ಒಪ್ಪಿಕೊಳ್ಳೋಣ, ಮುಮುಕ್ಷುವಲ್ಲದೆ ಇತರರು ಸ್ವರ್ಗಾದಿ ಫಲಾಂತರಕ್ಕಾಗಿ ಮಾಡುವ ಉಪಾಯಾನುಷ್ಠಾನಗಳಲ್ಲಿ ಅಂತಹ ಭಗವನ್ನಿಗ್ರಹಕ್ಕೆ ಕಾರಣವಿಲ್ಲವಲ್ಲಾ, ಆಗ ಈ ಸಾಧ್ಯೋಪಾಯಗಳು ಹೇಗೆ ಉಪಕಾರಕಗಳು ಎಂದರೆ "**ಇನ್ಮೈ ಫಲಾಂತರತ್ತುಕ್ಕು**" ಎ ದಾರಂಭಿಸಿದ ವಾಕ್ಯದಿಂದ ಹೇಳುತ್ತಾರೆ:—ನಿಗ್ರಹಕ್ಕೇನೋ ಕಾರಣವಿಲ್ಲವು, ಅನುಗ್ರಹಕ್ಕೆ ಕಾರಣವಾಗಕೂಡದೋ? ಆದುದರಿಂದ ಭಗವತ್ಪ್ರೀತಿಜನಕವಾಗಿ ಆ ಮೂಲಕ ಈ ಸಾಧ್ಯೋಪಾಯಗಳು **ಉಪಕಾರಕಗಳಾಗಬಹುದು** ಎಂದು ಹೇಳುತ್ತಾರೆ **ಇನ್ಮೈ** - ಈ ಉಪಾಯಗಳಾದ ಭಕ್ತಿ ಪ್ರಪತ್ತಿಗಳು, **ಫಲಾಂತರ**

ವಾಂಪೋದು ಜ್ಯೋತಿಷ್ಟೋಮಾದಿಗಳೈ ಪ್ಪೋಲೆ ತತ್ತದನುಗುಣ ಪ್ರೀತಿ ವಿಶೇಷಜ್ಞಳೈ ಉತ್ಪಾದಿತ್ತು ಕೊಂಡು ಅಮ್ಮುಖತ್ತಾಲೆ ಉಪಕಾರಕಜ್ಞಳಾವ್

ತ್ತುಕ್ಕು - ಮೋಕ್ಷೇತರವಾದ ಐಶ್ವರ್ಯ ಸ್ವರ್ಗಭೋಗಾದಿಗಳಿಗೆ, **ಉಪಾಯವಾಂಪೋದು** - ಉಪಾಯಗಳಾಗುವಾಗ, ಜ್ಯೋತಿಷ್ಟೋಮಾದಿಗಳಹಾಗೆ, **ತತ್ತದನುಗುಣ ಪ್ರೀತಿ ವಿಶೇಷಜ್ಞಳೈ**- ಆಯಾ ಫಲಗಳಿಗೆ ಬೇಕಾದ ಪ್ರೀತಿ ವಿಶೇಷಗಳನ್ನು, **ಉತ್ಪಾದಿತ್ತು ಕೊಂಡು** - ಉಂಟುಮಾಡಿಕ್ಕೊಂಡು, **ಅಮ್ಮುಖತ್ತಾಲೆ** - ಆ ಮೂಲಕವಾಗಿ, **ಉಪಕಾರಕಜ್ಞಳಾವ್** - ಸಹಾಯಕಗಳಾಗಬಹುದು. ಸಾಧ್ಯೋಪಾಯಗಳಿಂದ ಆಗತಕ್ಕ ಉಪಕಾರಗಳು ಎರಡು ವಿಧವು (೧) ಅನಿಷ್ಟ ನಿವೃತ್ತಿಯು. (೨) ಇಷ್ಟಪ್ರಾಪ್ತಿಯು ; ಮುಮುಕ್ಷುವಿನ ವಿಷಯದಲ್ಲಿ ಇಷ್ಟಪ್ರಾಪ್ತಿಗೆ ಅನಿಷ್ಟ ನಿವೃತ್ತಿಯು ಎಂದರೆ ಭಗವನ್ನಿಗ್ರಹರೂಪ ಪ್ರತಿಬಂಧಕ ನಿವೃತ್ತಿಯು ಅತ್ಯಾವಶ್ಯಕವು ಈ ಸಾಧ್ಯೋಪಾಯಗಳು ಈ ಎರಡು ಫಲಗಳನ್ನೂ ಉಂಟುಮಾಡುತ್ತವೆ ಆದರೆ ಮುಮುಕ್ಷುವಲ್ಲವೆ, ಸ್ವರ್ಗೈಶ್ವರ್ಯಾದಿ ಫಲಗಳನ್ನು ಅಪೇಕ್ಷಿಸುವನಿಗೆ ವ್ಯತಿಬಂಧಕ ನಿವೃತ್ತಿಯು ಆವಶ್ಯಕವಿಲ್ಲದುದರಿಂದ, ಭಗವತ್ಪ್ರೀತಿ ಅನುಗ್ರಹಗಳಿಗೆ ಮಾತ್ರವೇ ಸಂಪಾದಕಗಳಾಗಿ ಈ ಸಾಧ್ಯೋಪಾಯಗಳು ಉಪಕಾರಕಗಳೆಂಬ ತಾತ್ಪರ್ಯವು. **ಮೋಕ್ಷಕ್ಕಾಗಿ** ಸಾಧ್ಯೋಪಾಯಗಳನ್ನನುಷ್ಠಿಸುವವನಿಗೂ ಕೂಡ ಈತನು ಅಪೇಕ್ಷಿಸದಿದ್ದರೂ ಐಹಿಕ ಭೋಗಗಳನ್ನೂ, **ಪ್ರಿಯೋಹಿ ಜ್ಞಾನಿನೋತ್ಯರ್ಥಂ ಅಹಂ** ಎಂದು ಹೇಳಿರುವ ಹಾಗೆ ತನ್ನ ಪ್ರಿಯಭಕ್ತನಿಗೆ ಕಜ್ಜೆಲಾದಿಗಳಿಗೆ ಕೊಟ್ಟ ಹಾಗೆ ಐಹಿಕ ಭೋಗಗಳನ್ನೂ ಸಹ ಕೊಡಬಹುದು ದೇಹಾವಸಾನದಲ್ಲಿ ಮೋಕ್ಷವನ್ನು ಪ್ರಾರಿಸಿರುವದರಿಂದ ಸ್ವರ್ಗಾದಿ ಲೋಕಗಳ ಭೋಗಗಳನ್ನು ಕೊಡುವದಿಲ್ಲವು. ಏಕೆಂದರೆ ಅವುಗಳು ಬಂಧಕಗಳಾದುದರಿಂದ ಕೊಡವದಿಲ್ಲವು. ಮೋಕ್ಷೇತರ ಫಲಾರ್ಥಿಗಾದರೋ ಈ ಸಾಧ್ಯೋಪಾಯಗಳನ್ನು ವ್ಯಾಜಮಾಡಿಕ್ಕೊಂಡು ತತ್ತದಿಷ್ಟಾನುಸಾರ ಫಲಗಳನ್ನು ಅನುಗ್ರಹಿಸುವನು ಎಂಬ ತಾತ್ಪರ್ಯವು. ಆಂತೂ ಈ ಎಲ್ಲಾ ಸಂದರ್ಭಗಳಲ್ಲೂ ಸಾಧ್ಯೋಪಾಯಗಳ ಆವಶ್ಯಕತೆಯು ತಪ್ಪಿದ್ದಲ್ಲವು. ಆದುದರಿಂದಲೇ ಗೀತೆಯಲ್ಲಿ (೧) **ಚತುರ್ವಿಧಾ ಭಜಂತೇಮಾಂ ಜನಾಸ್ಸುಕೃತಿನೋz ರ್ಜುನ ।। ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀಚ ಭರತರ್ಷಭ ।।** ಎಂದು (ಗೀ. ೭ ೧೬ರಲ್ಲಿ) ಸಾಧ್ಯೋಪಾಯಗಳ ಆವಶ್ಯಕತೆಯು ಹೇಳಲ್ಪಟ್ಟಿರುತ್ತದೆ. ಇಲ್ಲಿ

ಮೋಕ್ಷ ಫಲಪ್ರದತ್ವೇ ಸಿದ್ಧೋಪಾಯ ಸಾಧ್ಯೋಪಾಯಯೋಃ ಉಪಕಾರಾಃ.

ಮುಮುಕ್ಷುವುಕ್ಕು ಸಾಧ್ಯೋಪಾಯಜ್ಞಾಗಿರ ವ್ಯಾಜಮಾತ್ರತ್ತಾಲೆ ಶಾಂತ ನಿಗ್ರಹಮಾನ ಸಿದ್ಧೋಪಾಯಮ್ ನಿಗ್ರಹಫಲಮಾನ ಜ್ಞಾನ ಸಜಿಕ್ಕೀಚಾದಿಗಳೈ ಕ್ಕಳಿತ್ತು ಪರಿಪೂರ್ಣ ಕೈಂಕರ್ಯ ಪರ್ಯಂತ ಫಲತ್ತೈ ಕೊಡುತ್ತು ಯಾವದಾತ್ಮಭಾವಿಯಾಗ ಉಪಕರಿಕ್ಕುಮ್.

ಜ್ಞಾನಿಯು ಮಾತ್ರ ಮುಮುಕ್ಷುವು. ಮಿಕ್ಕ ಮೂವರು ಫಲಾಂತರಾಪೇಕ್ಷಿಗಳು. ಸಾಧ್ಯೋಪಾಯವಾದ ಭಜನವು ಉಪಾಸನಾರೂಪವಾದುದು.

ಆದರೆ ಇಲ್ಲಿ ಸಾಧ್ಯೋಪಾಯವು ಫಲಪ್ರದವೇ ? ಸಿದ್ಧೋಪಾಯವು ಫಲಪ್ರದವೇ ? ಸಾಧ್ಯೋಪಾಯ ಸಿದ್ಧೋಪಾಯಗಳೆರಡೂ ಸೇರಿ ಫಲಪ್ರದವೇ ? ಎಂದು ವಿಕಲ್ಪಿಸಿದರೆ, ಒಂದೊಂದೇ ಫಲಪ್ರದವೆಂದರೆ ಮತ್ತೊಂದು ನಿರರ್ಥಕವಾಗುತ್ತದೆ. ಆದರೆ ಈಗ ಸಾಧ್ಯೋಪಾಯವು ಆವಶ್ಯಕವೆಂದು ಹೇಳಿದನಂತರ ಸಿದ್ಧೋಪಾಯವು ನಿರರ್ಥಕವೆಂದಾಗುತ್ತದೆ. ಇವೆರಡರಲ್ಲಿ ಸಿದ್ಧೋಪಾಯವೇ ಪ್ರಧಾನವಾದುದಾಗಿ, ಸಿದ್ಧೋಪಾಯ ಶೋಧನಾಧಿಕಾರದಲ್ಲಿ ಅದರ ಆವಶ್ಯಕತೆಯು ಹಿಂದೆಯೇ ಉಪಪಾದಿತವಾಗಿರುತ್ತದೆ. ಆದುದರಿಂದ ಎರಡೂ ಆವಶ್ಯಕವೆಂದು ಹೇಳಿದಂತೇ ಆಯಿತು. ಹಾಗೆ ಎರಡೂ ಆವಶ್ಯಕವಾದರೆ ಈ ಫಲಪ್ರದತ್ವದಲ್ಲಿ ಸಾಧ್ಯೋಪಾಯ ಕೃತ್ಯವು ಎಷ್ಟರಮಟ್ಟಿಗೆ, ಸಿದ್ಧೋಪಾಯಕೃತ್ಯವು ಎಷ್ಟರಮಟ್ಟಿಗೆ ಎಂಬುದನ್ನು ವಿಮರ್ಶಿಸಿ ಉಪದೇಶಿಸುತ್ತಾರೆ.

ಮೋಕ್ಷಫಲಕ್ಕೆ ಸಿದ್ಧೋಪಾಯ ಸಾಧ್ಯೋಪಾಯಗಳು ಎಷ್ಟರಮಟ್ಟಿಗೆ ಉಪಕಾರಕಗಳು.

ಮುಮುಕ್ಷುವುಕ್ಕು-ಮೋಕ್ಷಾರ್ಥಿಗೆ, ಸಾಧ್ಯೋಪಾಯಗಳಾಗಿರುವ, **ವ್ಯಾಜಮಾತ್ರತ್ತಾಲೆ** - ನೆಪಮಾತ್ರದಿಂದ, **ಶಾಂತನಿಗ್ರಹಮಾನ ಸಿದ್ಧೋಪಾಯಂ**-ಅನಂತಾಪರಾಧ ಮಾಡಿದುದರಿಂದ ಇದುವರೆಗೂ ಭಗವನ್ನಿಗ್ರಹಕ್ಕೆ ಗುರಿಯಾದುದು ತಪ್ಪಿ ನಿಗ್ರಹ ಮಾಡಬೇಕೆಂಬುದು ಶಮನವಾದ ಸಿದ್ಧೋಪಾಯನು, **ಜ್ಞಾನಸಜಿಕ್ಕೀಚಾದಿಗಳೈ ಕಳೈತ್ತು** - ಇವನಿಗೆ ಪ್ರಾಪ್ತವಾಗಿದ್ದ ಜ್ಞಾನಸಜಿಕ್ಕೀಚವು ತಪ್ಪಿ, ಪರಿಪೂರ್ಣ ಬ್ರಹ್ಮಾನುಭವವೇನು, ಸರ್ವೇಶ್ವರನಿಗೆ ಮಾಡುವ ವಿವಿಧ ಕೈಂಕರ್ಯಗಳೇನು, ಅವುಗಳ ಪರ್ಯಂತವಾದ ಫಲವನ್ನು,

ಕೊಡುತ್ತು - ಕೊಟ್ಟು, **ಯಾವದಾತ್ಮಭಾವಿಯೋಗ** - ಆತ್ಮನು ನಿತ್ಯನಾದುದರಿಂದ ಮುಂದೆ ಇರುವ ಕಾಲದಲ್ಲೆಲ್ಲಾ, **ಉಪಕರಿಕ್ಕುಮ್** – ಅನುಗ್ರಹಿಸುತ್ತಾನೆ; **ಸಾಧ್ಯೋಪಾಯಗಳು** ಜಡಗಳಾದುದರಿಂದ ಅವುಗಳು ಸಾಕ್ಷಾತ್ತಾಗಿ ಫಲಪ್ರದಗಳಲ್ಲವು, ಅವು ನಿಮಿತ್ತಮಾತ್ರವು; ಸರ್ವೇಶ್ವರನು ಈ ಭಕ್ತಿ ಪ್ರಪತ್ತಿ ರೂಪ ಉಪಾಯಾನುಷ್ಠಾನಮಾಡಿದವರಿಗೇನೆ ಮೋಕ್ಷಕೊಡುವದಾಗಿ ಸಙ್ಕಲ್ಪಿಸಿರುವದರಿಂದ, ಆ ಉಪಾಯಾನುಷ್ಠಾನಗಳು ವ್ಯಾಜಮಾತ್ರಗಳೆಂದು ಹೇಳಲ್ಪಟ್ಟವು. ವ್ಯಾಜಗಳಾದರೂ, ಸರ್ವೇಶ್ವರನು ಹಾಗೆ ವಿಧಿಸಿರುವದರಿಂದ ಅವುಗಳನ್ನು ಅನುಷ್ಠಿಸಲೇಬೇಕು. ಈ ಸಾಧ್ಯೋಪಾಯಾನುಷ್ಠಾನಗಳಿಂದ ಸುಪ್ರೀತನಾದ ಸರ್ವೇಶ್ವರನು ಇದುವರೆಗೂ ನಿಗ್ರಹಿಸಿ ಪುನಃಪುನಃ ಬಂಧನಕ್ಕೆ ಗುರಿಮಾಡಿದವನನ್ನು ಮನ್ನಿಸಿ, ಆತನಿಗುಂಟಾಗಿದ್ದ ಪ್ರಕೃತಿಸಂಬಂಧದಿಂದ ಪ್ರಾಪ್ತವಾದ ಜ್ಞಾನತಿರೋಹಿತತ್ವವನ್ನು ಹೋಗಲಾಡಿಸಿ, ಪ್ರಕೃತಿ ಸಂಬಂಧವನ್ನು ತಪ್ಪಿಸಿ, **ಸ್ವೇನರೂಪೇಣಾಭಿನಿಷ್ಪದ್ಯತೇ ಎಂದು** ಶ್ರುತಿಯಲ್ಲೂ, **ಸಂಪದ್ಯಾವಿರ್ಭಾವಸ್ಸ್ವೇನಶಬ್ದಾತ್** ಎಂದು ಬ್ರಹ್ಮಸೂತ್ರದಲ್ಲೂ, ಹೇಳಿರುವಹಾಗೆ ಸರ್ವಜ್ಞತೆಯನ್ನು ಹೊಂದಿದವನಾಗಿ, ಭಗವತ್ಕೈಙ್ಕರ್ಯಪ್ರಾಪ್ತಿಯವರೆಗೂ ಹೇಳಿರುವ ಮೋಕ್ಷಫಲವನ್ನು ಹೊಂದಿಸುವನು ಹೀಗೆ ಈ ಎರಡು ಉಪಾಯಗಳೂ ಆವಶ್ಯಕವು; ಎರಡೂ **ಉಪಕಾರಕ**ಗಳೂ ಎಂಬ ತಾತ್ಪರ್ಯವು. ಹೀಗೆ ಅಭಿಪ್ರಾಯಪಡುವದರಿಂದ ಸಾಧ್ಯೋಪಾಯದ ಆವಶ್ಯಕತೆಯೂ ಸಿದ್ಧೋಪಾಯದ ಪ್ರಾಧಾನ್ಯವೂ ಎರಡೂ ಸಾರ್ಥಕ್ಯವನ್ನು ಹೊಂದಿದವು.

ಮುಂದೆ ಹೀಗೆ ಅಭಿಪ್ರಾಯಪಟ್ಟರೇನೇ ಶಾಸ್ತ್ರಗಳಲ್ಲಿ ಕೆಲವುಕಡೆ ಸಾಧ್ಯೋಪಾಯಗಳು ಮೋಕ್ಷಪ್ರಾಪ್ತಿಗೆ ಆವಶ್ಯಕವೆಂದೂ, ಇನ್ನೂ ಕೆಲವು ಕಡೆ ಸಿದ್ಧೋಪಾಯವು ಆವಶ್ಯಕವೆಂದೂ ಹೇಳುವ ಪ್ರಮಾಣಗಳೆರಡೂ ಸುಸಙ್ಗತಗಳೆಂದು ತಿಳಿಸುತ್ತಾರೆ.

ಸಿದ್ಧ ಸಾಧ್ಯೋಪಾಯಗಳನ್ನು ಬೋಧಿಸುವ ಎರಡು ವಿಧ ಪ್ರಮಾಣಗಳೂ ಸುಸಙ್ಗತಗಳು.

ಆಗ್ಪೈಯಾಲ್ – ಹೀಗೆ ಸಾಧ್ಯೋಪಾಯ ಸಿದ್ಧೋಪಾಯಗಳೆರಡರಿಂದಲೂ ಮೋಕ್ಷಪ್ರಾಪ್ತಿಯೆಂದು ಹೇಳುವದರಿಂದ ಎಂದರೆ ಸಾಧ್ಯೋಪಾಯದಿಂದ ವಶೀಕೃತನಾದ ಸಿದ್ಧೋಪಾಯನಿಂದಲೇ ಮೋಕ್ಷವುಂಟಾಗುತ್ತದೆಂದು ಹೇಳುವದರಿಂದ, **ಮುಮುಕ್ಷುವಿನುಡ್ಡೈಯು** - ಮೋಕ್ಷಾರ್ಥಿಯು, ಸರ್ವಾನಿಷ್ಟ ನಿವೃತ್ತಿ ಪೂರ್ವಕವಾಗಿ ಪರಿಪೂರ್ಣ ಬ್ರಹ್ಮಾನುಭವ ತತ್ಕೈಙ್ಕರ್ಯಪ್ರಾಪ್ತಿಯವರೆಗೂ

ಸಿದ್ಧ ಸಾಧ್ಯೋಪಾಯ ಪರೋಭಯಪ್ರಮಾಣಾನಿ ಸುಸಙ್ಗತಾನಿ.

ಆಗೈಯಾಲ್ ಮುನುಕ್ಷುವಿನುಡೈಯ ಸರ್ವಾನಿಷ್ಟ ನಿವೃತ್ತಿ ಪೂರ್ವಕ ಮಾಯ್ ಪರಿಪೂರ್ಣಕೈಙ್ಕರ್ಯ ಪರ್ಯನ್ತಮಾನ ಫಲಪರಂಪರೈಯೆ ಎಲ್ಲಮ್ ಸಿದ್ಧೋಪಾಯ ಕಾರ್ಯಮೆನ್ನುಮ್, ಪ್ರಸಾದನಮಾನ ಸಾಧ್ಯೋಪಾಯ ಮಡಿಯಾಗ ವರುಗಿರದೆನ್ನುಮ್, ಪ್ರಮಾಣಗಳಿರಣ್ಡುಮ್ ಸುಸಙ್ಗತಙ್ಗಳ್.

ಉಂಟಾಗುವ ಫಲಪರಂಪರೆಗಳೆಲ್ಲಾ, ಸಿದ್ಧೋಪಾಯ ಕಾರ್ಯಮೆನ್ನುಮ್- ಸಿದ್ಧೋಪಾಯನ ಕಾರ್ಯವೆಂದೂ, ಪ್ರಸಾದನಮಾನ - ಭಗವನ್ನಿಗ್ರಹವನ್ನು ಹೋಗಲಾಡಿಸಿ, ಆತನ ಅನುಗ್ರಹವನ್ನು ಸಾಧಿಸಿಕೊಡುವ, ಸಾಧ್ಯೋಪಾಯ ಮಡಿಯಾಗ - ಸಾಧ್ಯೋಪಾಯದ ಮೂಲಕವಾಗಿ, ವರುಗಿರುದೆನ್ನುಮ್ - ಈ ಫಲಪರಂಪರೆಗಳೆಲ್ಲಾ ಬರುತ್ತವೆಂದೂ ಹೇಳುವ, ಪ್ರಮಾಣಗಳಿರಣ್ಡುಮ್ - ಎರಡುವಿಧ ಪ್ರಮಾಣಗಳೂ, ಸುಸಙ್ಗತಙ್ಗಳ್ - ಸಮಂಜಸವಾದವು ಪರಸ್ಪರ ವಿರುದ್ಧವೆಂದಿಗೂ ಅಲ್ಲವು ಎಂಬ ತಾತ್ಪರ್ಯವು.

ಆಂತಹ ಪ್ರಮಾಣಗಳು ಯಾವುವೆಂದರೆ :—

ಸಿದ್ಧೋಪಾಯನೇ ಮೋಕ್ಷಪ್ರದನೆಂಬುದಕ್ಕೆ :—

೧. ಅಮೃತಸ್ಯ ಪರಂ ಸೇತುಮ್. ೨ ಅಮೃತಸ್ಯೈಷಸೇತುಃ ೩ ಸಕಲ ಫಲ ಪ್ರದೋಹಿ ವಿಷ್ಣುಃ ೪ ಅಸತರ್ಗ ಪ್ರದೋಹರಿಃ ೫ ತೇಷಾಮಹಂ ಸಮುದ್ಧರ್ತಾ ಮೃತ್ಯು ಸಂಸಾರ ಸಾಗರಾತ್.
೬. ಯಮೈವೈಷವೃಣುತೇ ತೇನಲಭ್ಯಃ

ಸಾಧ್ಯೋಪಾಯಗಳು ಮುಕ್ತಿಪ್ರದಗಳೆಂಬುದಕ್ಕೆ :—

೧. ನಿಚಾಯ್ಯತಂ ಮೃತ್ಯು ಮುಖಾತ್ಪಮುಚ್ಯತೇ. ೨. ಜ್ಞಾತ್ವಾ ದೇನಂ ಮುಚ್ಯತೇ ಸರ್ವ ಪಾಶೈಃ. ೩, ತಮೇವಂ ವಿದ್ವಾ ನಮೃತ ಇಹ ಭವತಿ. ೪. ಮುಮುಕ್ಷು ರ್ವೈ ಶರಣ ಮಹಂ ಪ್ರಪದ್ಯೇ. ೫ ತಂಗಚ್ಛ ಶರಣಂ ಹರಿಂ. ೬ ಮಾಮೇಕಂ ಶರಣಂ ವ್ರಜ ೭. ಮಾಂ ಪ್ರಪದ್ಯೋ ವಿಮುಚ್ಯತೇ ೮ ಭಕ್ತ್ಯಾ ಪರಯಾ ತ್ವನನ್ಯಯಾ ಪ್ರಪತ್ತ್ಯಾವಾ ಮುಹಾಮತೇ। ಸಾಪ್ಯೋಹಂ ನಾನ್ಯಥಾ ಸ್ಪೃಹ್ಯಃ ಮುಮು ಕೈಙ್ಕರ್ಯ ಲಿಪ್ಸುಭಿಃ

ಚರಮಶ್ಲೋಕೋ ನವಿಧಿಃ, ಕಿಂತ್ವನುವಾದ ಇತಿ ವಾದಸ್ಯ ಖಂಡನಂ.

೪. ಆನಃಲುಮ್ ಇಪ್ರಪತ್ತಿಯಾಗಿರ ಉಪಾಯ ವಿಶೇಷತ್ತೈ ಶಾಸ್ತ್ರಂ

ಹೀಗಿರುವ ಎರಡು ವಿಧ ಪ್ರಮಾಣಗಳೂ ನಮಗೆ ಸಮಂಜಸವೇ. ಸಿದ್ಧೋಪಾಯನೇ ಸರ್ವಫಲಗಳನ್ನೂ ಕೊಡುವವನು. ಆದುದರಿಂದ ಸಿದ್ಧೋಪಾಯನೇ ಸರ್ವ ಫಲಪ್ರದನೆಂಬ ಪ್ರಮಾಣಗಳೇನೋ ಸಮಂಜಸವಾದುವೇ. ಆದರೆ ಸಿದ್ಧೋಪಾಯನು ಸಾಧ್ಯೋಪಾಯಗಳಿಂದ ವಶೀಕೃತನಾಗಿ ಸುಪ್ರೀತನಾಗಿ ಫಲಪ್ರದೋನ್ಮುಖನಾಗುವದರಿಂದ ಸಾಧ್ಯೋಪಾಯಗಳೇ ಫಲಪ್ರದಗಳೆಂಬ ಪ್ರಮಾಣಗಳೂ ಕೂಡ ಸಮಂಜಸವಾದುವೇ ಎಂಬ ತಾತ್ಪರ್ಯವು. ಆದುದರಿಂದ ಪ್ರಪತ್ತಿಯೂ ಒಂದು ಸಾಧ್ಯೋಪಾಯವು ಸಾಧ್ಯೋಪಾಯವಲ್ಲವೆಂಬ **ಪೂರ್ವಪಕ್ಷಿಗಳೆಲ್ಲಾ** ನಿರಸ್ತವಾದವು.

ಆದಕ್ಕಾಗಿ ಚರಮಶ್ಲೋಕದಲ್ಲಿ **"ಮಾಮೇಕಂ ಶರಣಂ ವ್ರಜ"** ಎಂಬ ವಾಕ್ಯವೇನು ವಿಧಿಯೇ? ಅನುವಾದವೇ? ಎಂದು ವಿಕಲ್ಪಿಸಿ, ಕೆಲವರು ಇದನ್ನು ವಿಧಿವಾಕ್ಯವೆಂದು ಒಪ್ಪುವದಿಲ್ಲವೆಂದೂ ಅನುವಾದಮಾತ್ರವೆಂದೂ ಹೇಳುವರು. ಪ್ರಪತ್ತಿಯು ಅನುಷ್ಠಿಸಶಕ್ಯವೆಂದು ಒಪ್ಪಿದರೂ, ಅಸಮರ್ಥನು ತನ್ನಿಷ್ಟವು ನೆರವೇರುವದಕ್ಕಾಗಿ ಸಮರ್ಥನನ್ನಾಶ್ರಯಿಸುವನೆಂಬುದು ಲೋಕಸಿದ್ಧವಾದುದನ್ನು ವಿಧಿಶಬ್ದಕೇ? ಯಾವಾಗ ವಿಧಿಯುಲ್ಲವೆ ಅನುವಾದ ಮಾತ್ರವೆಂದಾಯಿತೋ, ಆಗ ಭಕ್ತಿ ಸ್ಥಾನದಲ್ಲಿ ಪ್ರಪತ್ತಿಯು ಹೇಳಲ್ಪಟ್ಟಿತೆಂಬುದು ಸರಿಹೋಗುವದಿಲ್ಲವು; ಹೀಗೆ **ಪೂರ್ವಪಕ್ಷವನ್ನು** ಕೆಲವರು ಮಾಡುತ್ತಾರೆಂದು ಹೇಳಿ, ಅದನ್ನು ನಿರಸನ ಮಾಡುತ್ತಾರೆ. ಪ್ರಪತ್ತಿಯು ಚರಮ ಶ್ಲೋಕದಲ್ಲಿ ವಿಧೇಯವೆಂದು ಒಪ್ಪಿದರೆ ತಾನೇ, ಆಮ ಸಾಧ್ಯೋಪಾಯವೆಂದು ಇಲ್ಲಿ ವಿಧಿಸಲ್ಪಟ್ಟಿದೆ ಎಂದು ಹೇಳಬಹುದು. ಹಾಗೆ ವಿಧಿವಾಕ್ಯವೇ ಅಲ್ಲವು ಎಂದು **ಪೂರ್ವಪಕ್ಷವು.**

ಚರಮ ಶ್ಲೋಕವು ವಿಧಿವಾಕ್ಯವಲ್ಲವು, ಅನುವಾದ ಮಾತ್ರವೇ ಎಂಬ ವಾದದ ಖಂಡನವು.

೪. **ಆನಾಲುಮ್** - ಪ್ರಪತ್ತಿಯು ಅವಶ್ಯ ಕರ್ತವ್ಯವೆಂದು ಒಪ್ಪಿದರೂ, **ಇಪ್ರಪತ್ತಿಯಾಗಿರ ಉಪಾಯವಿಶೇಷತ್ತೈ** - ಈ ಪ್ರಪತ್ತಿ ಎಂಬುವ ಉಪಾಯ ವಿಶೇಷವನ್ನು, **ಶಾಸ್ತ್ರಂ** ವಿಧಿಕ್ಕ ವೇಣವೋ? - ಅಧ್ಯಾತ್ಮ ಶಾಸ್ತ್ರವು ವಿಧಿಸಬೇಕೇ? ವಿಧಿಸಬೇಕಾದುದೇನೂ ಇಲ್ಲವೆಂಬ ತಾತ್ಪರ್ಯವು; **ಲೋಕತ್ತಿಲ್-**

ವಿಧಿಕ್ಕವೇಣುನೋ? ಲೋಕತ್ತಿಲ್ ತನ್ನೈ ರಕ್ಷಿತ್ತುಕ್ಕೊಳ್ಳ ವಿರಗಿ ಲ್ಲಾದೆ ಯಳುನ್ದುವಾ ನೊರುವರ್ ಅಪ್ಪೋದು ಸನ್ನಿಹಿತನಾನ ರಕ್ಷಣ ಸಮರ್ಥನೈ ಪ್ಪತ್ತು ಮಾಪ್ಪೋಲೆ, ತನ್ನೈಯುಮ್ ಈಶ್ವರನೈಯುಮ್ ಸಿದ್ಧಪರವಾನ ಶಾಸ್ತ್ರತ್ತಾಲೆ ತೆಳಿನ್ದಾಲ್, ತಾನೇ ಯವನೈ ಶರಣಮಾಗ ಪ್ಪತ್ತಾನೋ? ಆಕ್ಕೈಯಾಲ್ ಅಕಿಂಚನನುಕ್ಕು ಭಕ್ತಿಸ್ಥಾನತ್ತಿಲೆ ಪ್ರಪ ತ್ತಿಯೈ ವಿಧಿಕ್ಕಿರದೆನ್ಗೈ ಕೂಡಾದೇ? ಎನ್ಗು ಶಿಲರ್ ಶೊಲ್ಲುವರ್ಗಳ್.

ಈ ಲೋಕದಲ್ಲಿ, **ತನ್ನೈ ರಕ್ಷಿತ್ತುಕ್ಕೊಳ್ಳ ವಿರಗಿಲ್ಲಾದೇ** - ತನ್ನ ರಕ್ಷಿಸಿ ಕೊಳ್ಳುವ ಮಾರ್ಗವು ಇಲ್ಲದೆ, **ಅಳುನ್ದುವಾ**-ಅಳುವವನು, ಶೋಕಿಸುವವನು, (**ಮಾಶುಚಃ** ಎಂಬ ವಾಕ್ಯ ತಾತ್ಪರ್ಯವನ್ನು ಮನಸ್ಸಿನಲ್ಲಿಟ್ಟು ಹೇಳಿದುದು), **ಒರುವರ್** - ಒಬ್ಬನು, **ಅಪ್ಪೋದು ಸನ್ನಿಹಿತನಾನ** - ಆಗಲೇ ಸಮೀಪಿಸಿ ಬಂದ, **ರಕ್ಷಣ ಸಮರ್ಥನೈಪ್ಪತ್ತುಮಾಪ್ಪೋಲೆ** - ರಕ್ಷಿಸಲು ಸಾಮರ್ಥ್ಯವಿರುವವನನ್ನು ಆಶ್ರಯಿಸುವ ಹಾಗೆ, **ತನ್ನೈಯುಮ್ ಈಶ್ವರನೈ ಯುಮ್** - ತನ್ನನ್ನೂ ಸರ್ವೇಶ್ವರನನ್ನೂ, **ಸಿದ್ಧಪರವಾನಶಾಸ್ತ್ರತ್ತಾಲೇ** - ಸ್ವರೂಪಶೋಧಕವಾಕ್ಯಗಳುಳ್ಳ ಶಾಸ್ತ್ರದಿಂದ, **ತೆಳಿನ್ದಾಲ್**—"ಈಶಾನೇಶಾ" ಎಂದು ಶ್ರುತಿಯಲ್ಲಿ ಹೇಳಿರುವಹಾಗೆ ತಾನು ಅಸಮರ್ಥನೆಂದೂ ಸರ್ವೇಶ್ವರನು ಸಮರ್ಥನೆಂದೂ ತಿಳಿದರೆ, **ತಾನೇ, ಅವನೈ** - ಅವನನ್ನು, **ಶರಣಮಾಗಪ್ಪ ತ್ತುನೋ?** - ಉಪಾಯವಾಗಿ ಆಶ್ರಯಿಸಲಾರನೋ? ಅದಕ್ಕೆ ಶಾಸ್ತ್ರದ ವಿಧಿ ವಾಕ್ಯ ಬೇಕೆ? ಎಂಬ ತಾತ್ಪರ್ಯವು. ಅಸಮರ್ಥನು ಸಮರ್ಥನನ್ನು ಆಶ್ರ ಯಿಸುವದು ಲೋಕಾನುಭವವಾದ ವಿಷಯವು, ಇವಕ್ಕೆ ಶಾಸ್ತ್ರ ವಿಧಿಯು ಬೇಕಿಲ್ಲ ವೆಂಬ ಭಾವವು, **ಆಗೈಯಾಲ್** - ಆದುದರಿಂದ, **ಅಕಿಂಚನನುಕ್ಕು** - ಬೇರೆ ಗತಿಯಿಲ್ಲದ ಅಸಮರ್ಥನಿಗೆ, ಭಕ್ತಿಸ್ಥಾನದಲ್ಲಿ ಎಂದರೆ ಉಪಾಸನದ ಸ್ಥಳದಲ್ಲಿ, ಪ್ರಪತ್ತಿಯನ್ನು, **ವಿಧಿಕ್ಕಿರದೆನ್ಗೈ ಕೂಡಾದು** - ವಿಧಿಸುತ್ತದೆ ಎಂದು ಹೇಳು ವದು ಸರಿಯಲ್ಲವು, **ಎನ್ಗು** - ಕೆಲವರು, **ಶೊಲ್ಲುವರ್ಗಳ್** - ಹೇಳುವರು, **ಪೂರ್ವಪಕ್ಷ** ತರುವರು ಎಂಬ ಭಾವವು. ಮುಂದೆ ಈ ವಾದವನ್ನು ಖಂಡಿಸುತ್ತಾರೆ. ಸಕ್ಕರೆ ಸೀಯಾಗಿದೆ ಎಂಬುದಕ್ಕೆ ಶಾಸ್ತ್ರವಿಧಿ ಬೇಕೇ ಎಂಬುದು ಅವರ ಆಕ್ಷೇಪವು

ಲೋಕಸಿದ್ಧವಾದ ಪ್ರಪತ್ತಿಗೆ ಶಾಸ್ತ್ರ ವಿಧಿ ಬೇಕಿಲ್ಲವೆಂಬ ವಾದದ ಖಂಡನವು.

ಇದುವುನ್ - ಹೀಗೆ ಸಮರ್ಥನನ್ನು ಅಸಮರ್ಥನು ತಾನಾಗಿಯೇ ವಿಧಿ

ಪ್ರಪತ್ತೇಃ ಲೋಕಸಿದ್ಧತ್ವಾತ್ ಅವಿಧೇಯತ್ವಮಿತಿ ವಾದಸ್ಯ ಖಂಡನಂ

ಇದುವು ಮೌಚಿತ್ಯ ಮೂಲವಾನ ವತಿವಾದವು :—ಎಜ್ಞನೇಯಿನ್ನಿಲ್ ಲೋಕತ್ತಿಲೆ ಒರುವನೈ ಒರುವರ್ ಆಶ್ರಯಿಕ್ಕುವ್ ಪೋದು, ಇನ್ನಪಡಿಯೇಯಾಶ್ರಯಿತ್ತಾಲ್ ಇವನಿರಜ್ಞು ಮೆನ್ನು ಮಿಡತ್ತೈಯೊರು ಪ್ರಮಾಣತ್ತಾಲೆ ಯರಿನ್ದಾಶ್ರಯಿಕ್ಕು ಮಾಪ್ಪೋಲೆ, ಇಜ್ಞು ಮಿಶ್ವರನೈಯಿನ್ನ ಪ್ರಕಾರತ್ತಾಲೆ ಯಿನ್ನವಧಿಕಾರಿ ಪತ್ತಿನಾಲ್, ಇವನೈ ಈಶ್ವರರ್ ರಕ್ಷಿಕ್ಕುವೆನ್ನುವಿಡವುಂ ಅರಿಯುಮೊಪ್ಪೋದು ಕರ್ತವ್ಯ ಪರಮಾನ ಶಾಸ್ತ್ರಮೊಳಿಯ ವೇರು ಪ್ರಮಾಣಮಿಲ್ಲೈ.

ಬಲದ ಆವಶ್ಯಕತೆಯಿಲ್ಲದೆ ಆಶ್ರಯಿಸುವನೆಂದು ಹೇಳುವದೂ ಕೂಡ, **ಔಚಿತ್ಯ ಮೂಲವಾನ** - ಸರ್ವೇಶ್ವರನು ಸರ್ವಶಕ್ತನೆಂದೂ, ಜೀವಾತ್ಮನು ಅತನಿಗೆ ಪರತಂತ್ರನೆಂದೂ, ಆ ಸಾಮರ್ಥ್ಯದೊಂದಿಗೆ ತನಗೆ ಪರತಂತ್ರನಾಗಿ ದೀನನಾದವನಲ್ಲಿ ಪೂರ್ಣದಯೆಯು ಸರ್ವೇಶ್ವರನಿಗೆ ಉಂಟೆಂದು ತೋರಿಸುವ ಔಚಿತ್ಯಮೂಲವಾದ, **ಅತಿವಾದವುಂ** - ಶಾಸ್ತ್ರವನ್ನು ಬಿಟ್ಟು ಮಾಡುವ ಯುಕ್ತಿವಾದವು. **ಎಜ್ಞನೇ ಯಿನ್ನಿಲ್** - ಅದು ಹೇಗೆ ಎಂದರೆ, ಈ ಲೋಕದಲ್ಲಿ ಒಬ್ಬನನ್ನು ಒಬ್ಬನು ಆಶ್ರಯಿಸುವಾಗ, **ಇನ್ನಪಡಿಯೇ ಆಶ್ರಯಿತ್ತಾಲ್** – ಈ ರೀತಿಯಲ್ಲಿ ಆಶ್ರಯಿಸಿದರೆ, **ಇವನಿರಜ್ಞುಮೆನ್ನುಮಿಡತ್ತೈ** - ಇವನು ರಕ್ಷಿಸುವನೆಂಬ ಸಂದರ್ಭದಲ್ಲಿ, **ಒರು ಪ್ರಮಾಣತ್ತಾಲ್ ಅರಿನ್ದು** - ಒಂದು ಪ್ರಮಾಣದಿಂದ ತಿಳಿದು, **ಆಶ್ರಯಿಕ್ಕುಮಾಪ್ಪೋಲೆ** - ಆಶ್ರಯಿಸುವಹಾಗೆ, **ಇಜ್ಞುಮ್**– ಈ ಸಂದರ್ಭದಲ್ಲೂ, ಎಂದರೆ ಪ್ರಪತ್ತ್ಯನುಷ್ಠಾನ ಸಂದರ್ಭದಲ್ಲೂ, **ಈಶ್ವರನೈ**- ಸರ್ವೇಶ್ವರನನ್ನು **ಇನ್ನ ಪ್ರಕಾರತ್ತಾಲೇ** - ಈ ಪ್ರಕಾರದಲ್ಲಿ ಎಂದರೆ ಗುರುಮುಖೇನ ಐದು ಅಜ್ಞಗಳಿಂದ ಕೂಡಿ, **ಇನ್ನವಧಿಕಾರಿ**-ಈ ಅಧಿಕಾರಿಯು ಎಂದರೆ, ಭಕ್ತ್ಯುಪಾಯಕ್ಕೆ ಅಸಮರ್ಥನಾವ ಅಧಿಕಾರಿಯು, **ಪತ್ತಿನಾಲ್** - ಆಶ್ರಯಿಸಿದರೆ, **ಇವನೈ** - ಈ ಅಕಿಂಚನ್ಯ, ಅನನ್ಯಗತಿತ್ವಗಳಿಂದ ಯುಕ್ತನಾದ ಇವನನ್ನು ಸರ್ವೇಶ್ವರನು ರಕ್ಷಿಸುವನು, **ಎನ್ನುಮಿಡವುಂ** -- ಹೇಳುವ ಸಂದರ್ಭವನ್ನು, **ಅರಿಯುವುಂ ವೋದು** – ತಿಳಿಯುವಾಗ, **ಕರ್ತವ್ಯ ಪರಮಾನ** – ವಿಧಿಪರವಾದ, **ಶಾಸ್ತ್ರ ಮೊಳಿಯ** - ಶಾಸ್ತ್ರವನ್ನು ಬಿಟ್ಟರೆ, **ವೇರು ಪ್ರಮಾಣಮಿಲ್ಲೈ**-ಬೇರೇ

ನಾಮ್ ಆಶ್ರಯಿಕ್ಕ ರಕ್ಷಿಕ್ಕುವ್ ಎನ್ನು ಅನುಮಾನತ್ತಾಲೆ ಯೆರುದಿ ಯಿಟ್ಟು ಆಶ್ರಯಿಕ್ಕಿಲ್ ಈಶ್ವರ ತತ್ವಜ್ಞಾನಮುಡ್ಡೈಯಾರಿಲ್ಲಾ

ಪ್ರಮಾಣವಿಲ್ಲವು ಶಾಸ್ತ್ರಪ್ರಮಾಣ ವಿನಾ ಪ್ರತ್ಯಕ್ಷಾನುಮಾನಗಳು ಯಾವುವೂ ಇಲ್ಲವು. ಈ ಹಿಂದಿನ ವಾಕ್ಯದ ಮೂಲಕ,ಲೋಕದಲ್ಲಿ ಪರಮಕಾರುಣಿಕನಾದ ಸಮರ್ಥನು ತನಗೆ ಅಧೀನನಾಗಿ ದೀನನಾದವನನ್ನು ರಕ್ಷಿಸುವದನ್ನು ಲೋಕದಲ್ಲಿ ಕಂಡಿರುವದರಿಂದ, ಇದಕ್ಕೆ ವಿಧಿವಾಕ್ಯ ಪ್ರಮಾಣನೇನೂ ಬೇಕಿಲ್ಲವೆಂಬುದನ್ನು ಲೋಕದಲ್ಲಿ ಪ್ರತ್ಯಕ್ಷವಾಗಿ ಕಂಡಿರುವೆವು ಎಂದು ತಂದ ಆಕ್ಷೇಪಕ್ಕೆ ಆ ಲೋಕ ದೃಷ್ಟಾಂತ ಮೂಲಕವಾಗಿಯೇ ಆಶ್ರಯಿಸುವದಕ್ಕೆ ಪ್ರಮಾಣ ಬಲವು ಅವಶ್ಯಕವೆಂದು ತೋರ್ಪಡಿಸುತ್ತಾರೆ. ಲೋಕದಲ್ಲೂ ಕಾರುಣಿಕನಾದ ಸಮರ್ಥನು ರಕ್ಷಿಸುವನೆಂಬ ಆಶಯದಿಂದ ಆಶ್ರಯಿಸುವಾಗಲೂ ಆತನನ್ನು ಎಂತವನು ಯಾವರೀತಿಯಲ್ಲಿ ಆಶ್ರಯಿಸಿದರೆ ರಕ್ಷಿಸುವನೆಂಬುದನ್ನು ಪ್ರಮಾಣಮುಖೇನ ತಿಳಿದು ಹೇಗೆ ಆಶ್ರಯಿಸುವನೋ, ಹಾಗೆಯೇ ಈ ಸಂದರ್ಭದಲ್ಲೂ ಎಂತಹ ಅಧಿಕಾರಿಯು ಯಾವ ಅಙ್ಗಗಳಿಂದ ಕೂಡಿ ಹೇಗೆ ಆಶ್ರಯಿಸಿದರೆ ಸರ್ವೇಶ್ವರನು ರಕ್ಷಿಸುವನು ಎಂಬುದನ್ನು ಶಾಸ್ತ್ರಪ್ರಮಾಣದ ವಿಧಿವಾಕ್ಯದ ಮೂಲಕ ತಿಳಿದು ಹಾಗೆಯೇ ಅನುಷ್ಠಿಸಿದರೆ ಮೋಕ್ಷಪ್ರಾಪ್ತಿಯುಂಟಾಗುತ್ತದೆ, ಅನ್ಯಥಾ ಇಲ್ಲವು. ವಿಧಿವಾಕ್ಯಗಳಾದ **"ಓಮಿತ್ಯಾತ್ಮಾನಂ ಯುಂಜೀತ ಏತದ್ವೈ ಮಹೋಪನಿಷದಂ ದೇವಾನಾಂ ಗುಹ್ಯಂ, ಯ ಏವಂ ವೇದ ಬ್ರಹ್ಮಣೋ ಮಹಿಮಾನ ಮಾಪ್ನೋತಿ"** ಇತ್ಯಾದಿಗಳಲ್ಲಿ ಪ್ರಪತ್ತಿಯು ವಿಧಿಸಿರುವದರಿಂದ, ಅದನ್ನು ಪರಿಕರಗಳೊಂದಿಗೆ ಅನುಷ್ಠಿಸಲೇಬೇಕೆಂಬ ತಾತ್ಪರ್ಯವು. ಹೀಗೆ ಪ್ರತ್ಯಕ್ಷ ಸಿದ್ಧವಾಗುವಕ್ಕೆ ಶಾಸ್ತ್ರವಿಧಿಬೇಕೇ ಎಂಬ ನ್ಯಾಯವನ್ನು ಆರೋಪಿಸಿ ಹೇಳಿದ ಪೂರ್ವಪಕ್ಷವು ನಿರಸನ ಮಾಡಲ್ಪಟ್ಟಿತು.

ಮುಂದೆ ಅನುಮಾನ ಪ್ರಮಾಣರೀತ್ಯಾ ನೋಡಿದರೂ ಸರ್ವೇಶ್ವರನು ಈ ಮೋಕ್ಷಾರ್ಥಿಯನ್ನು ರಕ್ಷಿಸುವನು, ಹೀಗಿರುವಾಗ ಇದಕ್ಕೆ **ಶರಣಂ ವ್ರಜ** ಎಂಬ ವಿಧಿವಾಕ್ಯ ಬೇಕೇ?ಎಂದುದರಿಂದ **ಶರಣಂ ವ್ರಜ** ಎಬುದು ಅನುವಾದವೇ ವಿನಾ ವಿಧಿಯಲ್ಲವು, ಎಂಬ ವಾದವು ನಿರಸನಮಾಡಲ್ಪಡುತ್ತದೆ. **ನಾಮ್ ಆಶ್ರಯಿಕ್ಕ ರಕ್ಷಿಕ್ಕುವ್**-ನಾವು ಆಶ್ರಯಿಸಿದರೆ ರಕ್ಷಿಸುವನು, ಸಾಮರ್ಥ್ಯವೂ ಕರುಣೆಯೂ ಇರುವದರಿಂದ ಎಂಬದಾಗಿ, **ಅನುಮಾನತ್ತಾಲೆ** - ಅನುಮಾನ ಪ್ರಮಾಣದಿಂದ **ಅರುದಿಯಿಟ್ಟು** - ನಿಶ್ಚಯಿಸಿ, **ಆಶ್ರಯಕ್ಕಿಲ್** – ಸರ್ವೇಶ್ವರನನ್ನು ಆಶ್ರಯಿ

ರ್ಮಮ್ ಇಪ್ಪಡಿ ಅನಷ್ಠಿಕ್ಕಲಾಮ್ಮೊಗ್ಗೆಯಾಲೇ ಉಪಾಸನ ವಿಧಾಯಕ ಶಾಸ್ತ್ರಜ್ಞಳ್ ನಿರರ್ಥಜ್ಞಳಾಮ್. ಸಮರ್ಥ ಉಪಾಸನಾದಿಗಳೈ ಪ್ಪಣ್ಣಿ, ಅವತ್ತಿಲ್ ಸಮರ್ಥನಲ್ಲಾದವರ್ ಪ್ರಪತ್ತಿಯೈಪ್ಪಣ್ಣವೆನ್ರು ವಿಶೇಷಿತ್ತು ನಿಯಮಿಕ್ಕೈ ಅನುಮಾನತ್ತಾಲ್ ಕಡಪ್ಪಡಾದು ಮತ್ತುಳ್ಳ ಉಪಾ

ಸಿದರೆ, **ಈಶ್ವರ ತತ್ವಜ್ಞಾನಮುಡೈಯಾರೆಲ್ಲಾರ್ಕುಮ್** - ಸಮರ್ಥನಾದ ಸರ್ವೇಶ್ವರನೊಬ್ಬನಿದ್ದಾನೆಂಬ **ಜ್ಞಾನವಿರುವರೆಲ್ಲರಿಗೂ**, **ಇಂತಹ ಜ್ಞಾನವು ನಾಸ್ತಿಕರಲ್ಲದೆ** ಇತರರಿಗೆಲ್ಲರಿಗೂ ಉಂಟು, ಆದುದರಿಂದ **ಉಪಾಯಾನುಷ್ಠಾನ** ಮಾಡದ ಎಲ್ಲರಿಗೂ, **ಇಪ್ಪಡಿ ಅನುಷ್ಠಿಕ್ಕ ವತ್ತಾಗೈಯಾಲೆ**-ಈ ರೀತಿಯಾಗಿ ನಡತೆಯುಂಟಾಗಬಹುದಾದುದರಿಂದ, **ಉಪಾಸನ ವಿಧಾಯಕ ಶಾಸ್ತ್ರಜ್ಞಳ್**-ಉಪಾಸನವನ್ನು ಉಪಾಯವಾಗಿ ವಿಧಿಸಿರುವ ಶಾಸ್ತ್ರಗಳು ಎಂದರೆ ಬ್ರಹ್ಮ ವಿದ್ಯೆಗಳೆಲ್ಲಾ, **ನಿರರ್ಥಜ್ಞಳಾಮ್** - ನಿರರ್ಥಕವಾದುವುಗಳಾಗುವವು, ಆದುದರಿಂದ ಇಲ್ಲಿ ಪ್ರತ್ಯಕ್ಷಾನುಮಾನ ಪ್ರಮಾಣಗಳು ನಿಷ್ಪ್ರಯೋಜನಗಳು, ಶಾಸ್ತ್ರ ಪ್ರಮಾಣವೇ ಉಪಾದೇಯವಾಗಿ ಪ್ರಪತ್ತಿ ವಿಧಾಯಕ ಶಾಸ್ತ್ರಗಳಿರುವದರಿಂದ ಅವುಗಳನ್ನನುಸರಿಸಿದ ಅನುಷ್ಠಾನವೇ ಶಿಷ್ಟಸಮ್ಮತವಾಗುವದರಿಂದ, **ಮಾಮೇಕಂ ಶರಣಂವ್ರಜ** ಎಂಬ ಗೀತೋಪನಿಷತ್ತಿನ ವಾಕ್ಯವು ವಿಧಿಯೇ ವಿನಾ ಅನುವಾದವಲ್ಲವೆಂಬ ತಾತ್ಪರ್ಯವು

ಈ ದೂಷಣವನ್ನು ತಪ್ಪಿಸಿಕೊಳ್ಳುವದಕ್ಕಾಗಿ **ಪೂರ್ವ ಪಕ್ಷಿಯು** "ಉಪಾಸನ ವಿಧಿವೈಯರ್ಥ್ಯಕ್ಕೆ ಕಾರಣವಿಲ್ಲವು, ಸಮರ್ಥನಿಗೆ **ಉಪಾಸನಾದಿಗಳನ್ನು** ಶಾಸ್ತ್ರವು ವಿಧಿಸಿರುತ್ತದೆಂದು ಒಪ್ಪಿಕೊಳ್ಳುವೆವ್ ; ಅಸಮರ್ಥನಾದರೋ ಅನುಮಾನಮೂಲಕವಾಗಿ ತನಗೆ ಪ್ರಪತ್ತಿ ಎಂಬದಾಗಿ ಊಹಿಸಬಹುದು; ಎಂದರೆ ಅಸಮರ್ಥನು ಸಮರ್ಥನನ್ನಾಶ್ರಯಿಸಿದರೆ ರಕ್ಷಿಸುವನು ಎಂಬುದನ್ನು **ಅನುಮಾನ** ಮೂಲಕ ಸಾಧಿಸಬಹುದು" ಎಂದು ಹೇಳಬಹುದೆಂದು ಭಾವಿಸಿ, ಅದನ್ನು **ಅನುವಾದಮಾಡಿ ಖಂಡಿಸುತ್ತಾರೆ. ಸಮರ್ಥ ಉಪಾಸನಾದಿಗಳೈಪ್ಪಣ್ಣ** - ಸಮರ್ಥನಾದವನು ಉಪಾಸನಾದಿಗಳನ್ನೂ, **ಪಣ್ಣ** - ಶಾಸ್ತ್ರರೀತ್ಯಾ ವಿಧಿಯನ್ನನುಸರಿಸಿ ಮಾಡಬಹುದು, **ಅವತ್ತಿಲ್** - ಆ ಉಪಾಸನಾದಿಗಳಲ್ಲಿ, **ಸಮರ್ಥನಲ್ಲಾದವರ್** - ಅಸಮರ್ಥನು, **ಪ್ರಪತ್ತಿಯೈಪ್ಪಣ್ಣ** - ಸಮರ್ಥನನ್ನು ಆಶ್ರಯಿಸಬಹುದು, **ಎನ್ರು** - ಎಂಬದಾಗಿ, **ವಿಶೇಷಿತ್ತು ನಿಯಮಿಕ್ಕೈ** - ಹೀಗೆ ವ್ಯತ್ಯಾಸವನ್ನು ಪ್ರದರ್ಶಿಸಿ ನಿಯಮಿಸೋಣವು, ಅನುಮಾನ ಪ್ರಮಾಣದಿಂದ ಸಾಧಿಸು

ಯಜ್ಞಳಿಲ್ ಸಮರ್ಥನನ್ರಿಕ್ಕೇ ಯೊಳಿನ್ರಾಲ್ ಅವತ್ತಿನುಡೈಯ ಸ್ಥಾನತ್ತಿಲೇ ಪ್ರಪತ್ತಿಯೈ ಪಣ್ಣುವದೆನ್ರು ಶಾಸ್ತ್ರಮ್ ವಿಧಿಯಾದಪೋದು

ವದು, **ಕಡಪ್ಪಡಾದು** - ಸಾಧ್ಯವಲ್ಲವು, ಅನುಮಾನ ಪ್ರಮಾಣದಿಂದಲೇ ಹೇಳುತ್ತೇವೆ, ಶಾಸ್ತ್ರವಿಧಿಯು ಬೇಕಾಗಿಲ್ಲವು ಎಂದು ಹೀಗೆ ಹೇಳಿದರೆ, **ಭಕ್ತ್ಯುಪಾಯ ವಿಧಿವಾಕ್ಯಕ್ಕೆ ನೈರರ್ಥ್ಯಕ್ಯವು** ಉಂಟಾಗಲಾರದಷ್ಟೇ ಎಂದರೆ ಅದಕ್ಕೆ ಉತ್ತರವನ್ನು ಹೇಳುತ್ತಾರೆ. ಸಮರ್ಥನನ್ನು ಅಸಮರ್ಥನು ಆಶ್ರಯಿಸಿದರೆ ರಕ್ಷಿಸುವನೆಂಬುದನ್ನು ಊಹಿಸಿಯೇ ತೀರಬಹುದು ; ಇದಕ್ಕೆ ಶಾಸ್ತ್ರವಿಧಿಯು ಬೇಕಿಲ್ಲವು, ಶಾಸ್ತ್ರವೀಗ ಅಪ್ರಾಪ್ತವಿಷಯದಲ್ಲೇ ವಿನಾ ಇಂತಹ ಸಿದ್ಧವಿಷಯದಲ್ಲಿ ಬೇಕಿಲ್ಲವು, ಎಂದು ಪೂರ್ವಪಕ್ಷಿಯು ಹೇಳಿದುದಕ್ಕೆ ಸಮರ್ಥನು ಅಸಮರ್ಥನನ್ನು ರಕ್ಷಿಸುವನೆಂಬುದು ಅನುಮಾನ ಪ್ರಮಾಣದಿಂದಲೇ ಯಾವಾಗ ಏರ್ಪಟ್ಟತೋ, ಆಗ ಎಲ್ಲರೂ, ಸಮರ್ಥನೇ ಆಗಲಿ ಅಸಮರ್ಥನೇ ಆಗಲಿ ಹೀಗೆ ಆಶ್ರಯಿಸಿಯೇ ರಕ್ಷಣವನ್ನು ಹೊಂದುವದರಿಂದ, ಕಷ್ಟತರವಾದ ಉಪಾಸನವು ಯಾರಿಗೂ ಬೇಕಾಗದೆ, ಉಪಾಸನ ವಿಧಿಗೆ ನೈರರ್ಥ್ಯಕ್ಯವು ಪ್ರಾಪ್ತವಾಗುತ್ತದೆ ಎಂದು ದೂಷಣವನ್ನು ಹೇಳಿದರು ಇದಕ್ಕೆ ಪೂರ್ವಪಕ್ಷಿಯು ಉಪಾಸನ ಶಾಸ್ತ್ರ ನೈರರ್ಥ್ಯಕ್ಕೇನೂ ಕಾರಣವಿಲ್ಲವು ; ಸಮರ್ಥನಿಗೆ ಉಪಾಸನರೂಪ ಶಾಸ್ತ್ರವಿಧಿಯು, ಅಸಮರ್ಥನಿಗಾದರೋ ಶಾಸ್ತ್ರವಿಧಿಯು ಬೇಕಿಲ್ಲವು, ಲೋಕದಲ್ಲಿ ಸಮರ್ಥನು ಅಸಮರ್ಥನನ್ನು ರಕ್ಷಿಸುವದು ವ್ಯಕ್ತವಾಗಿರುವದರಿಂದ, ಅನುಮಾನ ಪ್ರಮಾಣದಿಂದಲೇ ಸಿದ್ಧವು, ಹೀಗೀಗ ನಿಯಮವು ಎಂದರೆ ಸಮರ್ಥನಿಗೆ ಶಾಸ್ತ್ರವಿಧಿಯೂ ಅಸಮರ್ಥನಿಗೆ ಇದು ಬೇಕಿಲ್ಲವು ಎಂಬುದನ್ನು ಅನುಮಾನದಿಂದ ಸಾಧಿಸುವದು ಸಾಧ್ಯವಿಲ್ಲವೆಂಬ ಭಾವವು. ಅದೇಕೆಂದರೆ ತಿಳಿಸುತ್ತಾರೆ. **ಮತ್ತುಳ್ಳ ಉಪಾಯಙ್ಗಳಿಲ್** - ಬೇರೇ ಉಪಾಯಗಳಲ್ಲಿ ಎಂದರೆ **ಉಪಾಸನೆಯಲ್ಲಿ, ಸಮರ್ಥನನ್ರಿಕ್ಕೈಯೊಳಿಂದಾಲ್** - ಸಮರ್ಥನಲ್ಲದೇ ಹೋದರೆ, **ಅವತ್ತಿನುಡೈಯ ಸ್ಥಾನತ್ತಿಲೆ** - ಆ ಉಪಾಸನೆಯ ಸ್ಥಾನದಲ್ಲಿ, **ಪ್ರಪತ್ತಿಯೈ ಪಣ್ಣುವದೆನ್ರು** - ಪ್ರಪತ್ತಿಯನ್ನನುಷ್ಠಿಸತಕ್ಕದ್ದೆಂದು, **ಶಾಸ್ತ್ರಮ್ ವಿಧಿಯಾದ ಪೋದು** - ಶಾಸ್ತ್ರವು ವಿಧಿಸದೆ ಹೋದರೆ, **ಮುನ್ನು ವಿಧಿತ್ತ ಉಪಾಯತ್ತುಕ್ಕು** - ಮೊದಲು ವಿಧಿಸಿದ ಉಪಾಯವಾದ ಉಪಾಸನೆಗೆ, **ಅನರ್ಹನಾನಪಡಿಯಾಲೇ** - ಸಮರ್ಥನಲ್ಲದೆ ಇರುವದರಿಂದ ಅನರ್ಹನಾದುದರಿಂದ, **ಅದಿಗಳತ್ತ್ರೈ** - ಅದರ ಫಲವು, **ಯಿಳಕ್ಕುಮ್ ಪಡಿಯಾಮ್** - ಸಿದ್ಧಿ

ಮುನ್ಪು ವಿಧಿತ್ತ ಉಪಾಯತ್ತುಕ್ಕನರ್ಹನಾನ ಪಡಿಯಾಲೇ ಯದಿನ್ ಫಲತ್ತೈ ಯಿಳಕ್ಕುಮ್ ಪಡಿಯಾವ್.

ಸದೇ ಹೋಗಬೇಕಾಯಿತು. ಸವರ್ಥನಿಗೆ ಉಪಾಸನೆಯನ್ನು ಹೇಳಿರುವ ಶಾಸ್ತ್ರವಿಧಿ ಎಂದು ಒಪ್ಪಿಕೊಳ್ಳುವದರಿಂದ, ಅತೀಂದ್ರಿಯ ವಿಷಯವಾದ ಮೋಕ್ಷಪ್ರಾಪ್ತಿಗೆ ವಿಧಿ ಬೇಕೆಂದು ಶಾಸ್ತ್ರ ಹೇಳಿದಂತಾಯಿತು ಅಸನರ್ಥನಿಗೆ ಶಾಸ್ತ್ರವಿಧಿ ಬೇಕಿಲ್ಲ ವೆಂದರೆ, ಅತೀಂದ್ರಿಯ ಮೋಕ್ಷಪ್ರಾಪ್ತಿಯೂ ಬೇಕಿಲ್ಲವೆಂದು ಹೇಳಿದಂತಾಯಿತು; ಆಗ ಅಸನರ್ಥನಿಗೆ ಮೋಕ್ಷನೇ ಇಲ್ಲನೆಂದೂ ಹೇಳಿದಂತಾಯಿತು. ಅತೀಂದ್ರಿಯ ವಿಷಯವಾದ ಮೋಕ್ಷವು ಅಸನರ್ಥನಿಗೆ ಎಲ್ಲಿಯಾದರೂ ಇಲ್ಲದೇ ಇರಬಹುದೋ ಎಂದರೆ ಆಗ ಅಸಮರ್ಥನಿಗೆ ಉಪಾಸನಕ್ಕೆ ಬದಲಾಗಿ ಪ್ರಪತ್ತಿಯನ್ನನುಷ್ಠಿಸಬಹುದು ಎಂಬ ಅಪ್ರಾಪ್ತವಿಷಯದಲ್ಲಿ ಶಾಸ್ತ್ರವಿಧಿಯು ಅವಶ್ಯಕವು, ಈ ಶಾಸ್ತ್ರವಿಧಿಯನ್ನು ನಾವು ಅಙ್ಗೀಕರಿಸಿ ಅಶಕ್ತನು ಪ್ರಪದನವನ್ನನುಷ್ಠಿಸುವನು, ಅದರಿಂದ ಮೋಕ್ಷನನ್ನು ಹೊಂದುವನು ಎಂದು ಹೇಳುವೆವು. ನೀವು ಈ ಶಾಸ್ತ್ರವಿಧಿಯನ್ನು ಅಙ್ಗೀಕರಿಸದೇ ಇರುವದರಿಂದ ಅಸಮರ್ಥನಿಗೆ ಮೋಕ್ಷನೇ ಇಲ್ಲವೆಂದು ಒಪ್ಪಬೇಕಾಯಿತು ಹಿಗೆಲ್ಲಾದರೂ ಉಂಟೋ? ಕೃಪಾಳುವಾದ ಸಮರ್ಥನಾದ ಸರ್ವೇಶ್ವರನು ಅಸಮರ್ಥನನ್ನು ರಕ್ಷಿಸಿಯೇ ರಕ್ಷಿಸುವನು ಎಂದರೆ ಆಗ ಈ ಮಾರ್ಗವನ್ನೇ ಎಲ್ಲರೂ ಅವಲಂಬಿಸುವದರಿಂದ ಉಪಾಸನ ಶಾಸ್ತ್ರವೈರರ್ಥ್ಯಕ್ಯವು ತಪ್ಪಿದ್ದಲ್ಲವೆಂಬ ಭಾವವು.

ಈಗ ಪೂರ್ವಪಕ್ಷಿಗಳು ಹೇಳಿದುದು ಹೇಗೆಂದರೆ, "ಉಪಾಸನ ವಿಧಿಯ ಬಲದಿಂದ ಸಮರ್ಥನಿಗೆ ಅದರಲ್ಲಿ ಪ್ರವೃತ್ತಿಯೂ, ಅಸಮರ್ಥನಿಗಾದರೋ ಲೋಕದೃಷ್ಟಿಯಂದ ಶಕ್ತನಾದವನನ್ನು ಆಶ್ರಯಿಸೋಣವೂ, ಎಂದು ಹೀಗೆ ಹೇಳಿದರೆ ಪ್ರಪತ್ತಿಯನ್ನು ಅನುಷ್ಠಿಸಲೇಬೇಕೆಂಬ ನಿರ್ಬಂಧವೂ ಇಲ್ಲವು, ಅಂತವನಿಗೆ ಮೋಕ್ಷದ ಸಿದ್ಧಿಯಿಲ್ಲವೆಂದು ಹೇಳಿದಂತೆಯೂ ಆಗಲಿಲ್ಲವು" ಎಂಬುದು. ಪ್ರಪತ್ತಿಗೆ ಶಾಸ್ತ್ರವಿಧಿ ಬೇಡವೆಂಬ ವಾದಕ್ಕೆ ಒಂದು ನಿದರ್ಶನದ ಮೂಲಕ ಪ್ರತಿದ್ವಂದಿರೂಪದಲ್ಲಿ ಭಗವತ್ಸೇವಾರೂಪಕೈಙ್ಕರ್ಯಾದಿಗಳಿಗೂ ಕೂಡ ಆಗ ಶಾಸ್ತ್ರವಿಧಿಯು ಬೇಕಿಲ್ಲವೆಂಬ, ಪೂರ್ವಪಕ್ಷಿಗೆ ಅನಭಿಮತವಾದುದು ಪ್ರಾಪ್ತವಾಗುತ್ತದೆಂದು, ಎಜ್ಞನೇ ಯೆನ್ನಿಲ್ ಎಂದಾರಂಭಿಸಿ ಹೇಳುತ್ತಾರೆ.

ಎಜ್ಞನೇ ಎನ್ನಿಲ್-ಅಸಮರ್ಥನು ಉಪಾಸನದ ಸ್ಥಾನದಲ್ಲಿ ಪ್ರಪದನಾನುಷ್ಠಾನವಾಡಬೇಕೆಂಬ ವಿಧಿಯು ಅವಶ್ಯಕವೆಂಬುದನ್ನು ಸದೃಷ್ಟಾಂತವಾಗಿ ತೋರಿ

ಎಜ್ಞನೇ ಯೆನ್ನಿಲ್-ಲೋಕತ್ತಿಲ್ ರಾಜಸೇವಾದಿಗಳುನುಂ ತತ್ಫಲ ಜ್ಞಳುವುಂ ಕಾಣಚ್ಚೆಯ್‌ದೇ, ಮಾಲಾಕರಣ ದೀಪಾರೋಪಣಸ್ತುತಿ ನಮಸ್ಕಾರಾದಿಗಳೈ ಶಾಸ್ತ್ರ ನಿರಪೇಕ್ಷವುಮಾಗ ಅನುಷ್ಠಿತ್ತಾಲ್ ಅಪಚಾರಜ್ಞಳ್ ವರುವ್ವುಡಿಯಾ ಯಿರುಕ್ಕೈಯಾಲೇ, ಪರಿಕರ ನಿಯಮಜ್ಞಳೋಡು ಕೂಡಿನ ಭಗವತ್ಸೇವಾದಿ ಪ್ರಕಾರಜ್ಞಳುಂ ತತ್ಫಲಜ್ಞಳುಂ ನಿಯತಜ್ಞಳಾಗ ಶಾಸ್ತ್ರಮ್ ಕೊಂಡರಿಗಿರಾಪ್ಪೋಲೆ, ಇಜ್ಞುಂ, ಲೋಕತ್ತಿಲ್ ಪ್ರಪತ್ತಿಯುಂ ತತ್ಫಲಂಗಳುನುಂ ಕಣ್ಣು ಪೊನ್ನಾಲುಂ, ಸದಾಚಾರ್ಯೋಪದೇಶ ಸಾಪೇಕ್ಷ ಮುಂತ್ರ ವಿಶೇಷಾದಿಗಳೋಡೇ ಕೂಡಿನ ಪ್ರಪತ್ತಿಕ್ಕುಮ್ ಫಲವಿಶೇಷಜ್ಞಳುಕ್ಕುಮ್ ಸಾಧ್ಯಸಾಧನ ಭಾವಮ್

ಸುವೆವು, ಹೇಗೆಂದರೆ ಹೇಳುತ್ತಾರೆ :—**ಲೋಕತ್ತಿಲ್** – ಲೋಕದಲ್ಲಿ, **ರಾಜಸೇವಾದಿಗಳುಮ್** – ರಾಜನಿಗೆ ಮಾಡುವ ಕೈಙ್ಕರ್ಯಗಳನ್ನೂ, **ತತ್ಫಲಜ್ಞಳುಮ್** - ಅದರಿಂದುಂಟಾಗುವ ಫಲಗಳನ್ನೂ ಸಹ, **ಕಾಣಚ್ಚೆಯ್‌ದೇ** - ನಾವು ಕಂಡೇ ಇದ್ದರೂ ಎಂದರೆ ಶಾಸ್ತ್ರ ನಿರಪೇಕ್ಷವಾಗಿರುವದನ್ನೂ ನಾವು ಕಂಡಿದ್ದರೂ ಕೂಡ, **ಮಾಲಾಕರಣ** - ಪುಷ್ಪಹಾರವನ್ನು ಮಾಡುವದು, **ದೀಪಾರೋಪಣ**-ದೀಪಗಳನ್ನು ಹಚ್ಚೋಣವು, **ಸ್ತುತಿ** - ಸ್ತೋತ್ರವು, ನಮಸ್ಕಾರ ಮೊದಲಾದವುಗಳು, ಇವುಗಳನ್ನು, **ಶಾಸ್ತ್ರನಿರಪೇಕ್ಷವುಮಾಗ ಅನುಷ್ಠಿತ್ತಾಲ್** - ಶಾಸ್ತ್ರದ ಪೇಕ್ಷೆಯಿಲ್ಲದಹಾಗೆ ಅನುಷ್ಠಿಸಿದರೆ, **ಅಪಚಾರಜ್ಞಳ್ ವರುವ್ವುಡಿಯಾ ಯಿರುಕ್ಕೈಯಾಲೇ** - ಭಗವದಪಚಾರಗಳು ಉಂಟಾಗಬಹುದಾಗಿರುವದರಿಂದ, **ಪರಿಕರನಿಯಮಜ್ಞಳೋಡೇ ಕೂಡಿನ** - ಆಯಾ ಸೇವೆಗಳಿಗೆ ಯಾವಯಾವ ಅಙ್ಗಗಳು ಬೇಕೋ ಆಯಾ ಅಙ್ಗಗಳಿಂದ ಸೇರಿದ, **ಭಗವತ್ಸೇವಾದಿ ಪ್ರಕಾರಜ್ಞಳುಮ್** - ಭಗವತ್ಸೇವೆ ಕೈಙ್ಕರ್ಯದ ಪ್ರಕಾರಗಳನ್ನೂ, ತತ್ಫಲಗಳನ್ನೂ, **ನಿಯತಜ್ಞಳಾಕ** -ಹೀಗೆಯೇ ಮಾಡಬೇಕೆಂಬ ನಿಯಮವಿರುವವನ್ನಾಗಿ, **ಶಾಸ್ತ್ರಮ್ ಕೊಂಡರಿಗಿರಾಪ್ಪೋಲೆ** - ಹೇಗೆ ಶಾಸ್ತ್ರದ ಮೂಲಕ ತಿಳಿಯುತ್ತೇವೋ ಹಾಗೆ, **ಇಜ್ಞುಮ್** – ಈ ಸಂದರ್ಭದಲ್ಲೂ, **ಲೋಕತ್ತಿಲ್ ಪ್ರಪತ್ತಿಯುಮ್ ತತ್ಫಲಜ್ಞಳುಮ್ ಕಂಡು ಪೊನ್ನಾಲುಮ್** - ಈ ಲೋಕದಲ್ಲೂ ಅಸಮರ್ಥನು ಸಮರ್ಥನನ್ನಾಶ್ರಯಿಸಿ ಅದಕ್ಕೆ ಫಲಗಳುಂಟಾಗಿರುವದನ್ನು ನಾವು ಕಂಡಿದ್ದರೂ, **ಸದಾಚಾರ್ಯೋಪದೇಶ ಸಾಪೇಕ್ಷ ಮುಂತ್ರ ವಿಶೇಷಾದಿಗಳೋಡೇ ಕೂಡಿನ**-ಕರ್ಮನಿಷ್ಠೆ ಜ್ಞಾನನಿಷ್ಠೆಗಳಿರುವ ಆಚಾರ್ಯರ ಉಪದೇಶ ಬೇಕಾಗಿರುವ ದ್ವಯಾದಿ

ಶಾಸ್ತ್ರಮ್ ಕೊಣ್ಡರಿಯುವೇಣ್ಡುಗೈಯಾಲ್ ಅವ್ವೋ ಫಲಜ್ಞಳುಕ್ಕಾಗ. ಸೇವಾ ವಿಶೇಷಜ್ಞಳೈ ವಿಧಿಕ್ಕಿರಾಪ್ಪೋಲೆಪ್ರಪತ್ತಿಯೈಯುಮ್ ವಿಧಿಕ್ಕಿರದು.

ಮಂತ್ರವಿಶೇಷಗಳಿಂದ ಸೇರಿವ, **ಪ್ರಪತ್ತಿಕ್ಕುಮ್ ಫಲವಿಶೇಷಜ್ಞಳುಕ್ಕುಮ್**- ಪ್ರಪತ್ತಿಗೂ ಅದರಿಂದ ಪ್ರಾರ್ಥಿಸಲ್ಪಟ್ಟ ಫಲವಿಶೇಷಗಳಿಗೂ, **ಸಾಧ್ಯ ಸಾಧನ ಭಾವವನ್ನು**, **ಶಾಸ್ತ್ರಮ್ ಕೊಂಡರಿಯುವೇಣ್ಡುಗೈಯಾಲ್** - ಶಾಸ್ತ್ರ ಮೂಲಕವಾಗಿಯೇ ತಿಳಿಯಬೇಕಾಗಿರುವದರಿಂದ, **ಆಗೈಯಾಲ್** - ಆ ಕಾರಣ ದಿಂದ, **ಅವ್ವೋಫಲಜ್ಞಳುಕ್ಕಾಕ** - ಆಯಾ ಫಲಗಳಿಗಾಗಿ, **ಸೇವಾ ವಿಶೇಷ ಜ್ಞಳೈ** - ಭಗವತ್ಕೈಙ್ಕರ್ಯ ವಿಶೇಷಗಳನ್ನು, **ವಿಧಿಕ್ಕಿರಾಪ್ಪೋಲೆ** - ಶಾಸ್ತ್ರವು ವಿಧಿಸಿರುವಹಾಗೆ, **ಪ್ರಪತ್ತಿಯುಮ್ ವಿಧಿಕ್ಕಿರದು** - ಶಾಸ್ತ್ರವು ಪ್ರಪತ್ತಿ ಯನ್ನೂ ವಿಧಿಸಿರುತ್ತದೆ, ಯಾವ ಯಾವ ಪರಿಕರಗಳೊಂದಿಗೆ ಯಾವ ರೀತಿಯಲ್ಲಿ ಯಾವ ಫಲಗಳಿಗಾಗಿ ಅನುಷ್ಠಿಸತಕ್ಕದ್ದೆಂಬುದನ್ನು ಶಾಸ್ತ್ರವು ವಿಧಿಸಿರುತ್ತದೆ. ಈ ಮೇಲಿನ ವಾಕ್ಯದ ತಾತ್ಪರ್ಯವು ಇಷ್ಟೇ :-- ಲೋಕದಲ್ಲಿ ರಾಜಸೇವೆಗಳು ನಡೆ ದಿರುವದನ್ನೂ ಅದರಿಂದ ರಾಜ ಕೈಙ್ಕರ್ಯವನ್ನು ಮಾಡಿದವರು ಫಲಗಳನ್ನು ಪಡೆ ದಿರುವದನ್ನೆನೋ ನಾವು ಕಂಡಿರುತ್ತೇವೆ ಇದು ಲೌಕಿಕ ವಿಷಯವು. ಈ ಲೋಕ ನ್ಯಾಯವು ಪಾರಲೌಕಿಕ ವಿಷಯದಲ್ಲಿ ಸರಿಹೋಗುವದಿಲ್ಲವೆಂದು ಹೇಳುವದಕ್ಕಾಗಿ **ಲೋಕತ್ತಿಲ್ ಕಾಣಚ್ಚೆಯ್ದೇ** ಎಂಬ ಪ್ರಯೋಗವು. ಯದ್ಯಪಿ ಲೋಕದಲ್ಲಿ ಅಸ ಮರ್ಥನು ಸಮರ್ಥನನ್ನು ಆಶ್ರಯಿಸಿ ಇಹಲೋಕ ಫಲಗಳನ್ನು ಹೊಂದಿರುವ ದನ್ನೆನೋ ಕಂಡಿರುವೆವು. ಇವುಗಳಿಗೇನೋ ಶಾಸ್ತ್ರದ ಆವಶ್ಯಕತೆಯಿಲ್ಲವು. ಈಗ ಭಗತತ್ಕೈಙ್ಕರ್ಯಗಳಾದ ಮಾಲಾಕರಣ ದೀಪಾರೋಪಣ, ಸ್ತುತಿ ನಮ ಸ್ಕಾರಾದಿಗಳವೆ. ಇವುಗಳನ್ನು ಶಾಸ್ತ್ರನಿರಪೇಕ್ಷವಾಗಿ ಮಾಡಬಹುದೋ ? ಹಾಗೆ ಶಾಸ್ತ್ರವಿರುದ್ಧವಾಗಿ ಈ ಕೈಙ್ಕರ್ಯಗಳನ್ನು ಮಾಡಿದರೆ, ಭಗವತ್ಪ್ರೀತಿ ಯುಂಟಾಗಿ ಶುಭಫಲವುಂಟಾಗುವದಕ್ಕೆ ಬದಲಾಗಿ ಭಗವದಪ್ರೀತಿಯುಂಟಾಗಿ ಅಶುಭ ಫಲವು ಪ್ರಾಪ್ತವಾಗುತ್ತದೆಂಬುದು ಹಿಂದೆಯೇ ಹೇಳಲ್ಪಟ್ಟಿರುತ್ತದೆ. ಶಾಸ್ತ್ರವಿಹಿತವಾದ ಪುಷ್ಪಗಳನ್ನು ಸಂಪಾದಿಸಿ ಹಾರವನ್ನು ಮಾಡಬೇಕು. ತುಳಸಿಯನ್ನು ಶಾಸ್ತ್ರ ನಿಷಿದ್ಧವಲ್ಲದ ದಿನಗಳಲ್ಲಿ ಎತ್ತಿತಂದು ಮಾಲೆಯನ್ನು ರಚಿಸಬೇಕು. ಇಲ್ಲದಿದ್ದರೆ ಪ್ರತ್ಯವಾಯ ಉಂಟು. ಶ.ಚಿರ್ಭೂತನಾಗಿ ಸ್ತುತಿಸ ಬೇಕು. ಜಲಸ್ಪರ್ಶಮಾಡಿ ಬಿಟ್ಟು ಸ್ತುತಿಸಬಾರದು ನಮಸ್ಕಾರವನ್ನು **"ಯುಗ್ಮಾ ನೇವತು ಕಾರಯೇತ್"** ಎಂಬ ಪ್ರಮಾಣವಿರುವಾಗ ಒಂದು ಸಲವಾಗಲಿ ಮೂರು

ಸಲವಾಗಲಿ ನಮಸ್ಕಾರ ಮಾಡಕೂಡದು ; ಮತ್ತು ಒಂದು ಕೈಯಿಂದ ನಮಸ್ಕಾರ ಮಾಡಕೂಡದು. ನಮಸ್ಕಾರವು ಅಷ್ಟಾಂಗ ಸಂಯುತವಾಗಿರಬೇಕು ಹೀಗೆ ಶಾಸ್ತ್ರದಲ್ಲಿ ಹೇಳಿರುವಹಾಗೆ ಭಗವತ್ಸೇವೆಗಳನ್ನು ಮಾಡತಕ್ಕದ್ದು. ಇಲ್ಲವಾದರೆ ಅಪಚಾರಕ್ಕೆ ಕಾರಣವಾಗುತ್ತದೆ ಎಂಬ ಭಾವವು. ಇಂತಹ ಭಗವತ್ಕೈಙ್ಕರ್ಯಗಳನ್ನು ನಡೆಸತಕ್ಕದ್ದೆಂಬುದನ್ನು ಶಾಸ್ತ್ರಮೂಲಕ ತಿಳಿದು ಹೇಗೆ ನಡೆಸುತ್ತೇವೋ, ಹಾಗೆಯೇ ಈ ಪ್ರಪತ್ತಿಯ ಸಂದರ್ಭದಲ್ಲೂ ಎಂದು ಹೇಳುತ್ತಾರೆ; ಲೋಕದಲ್ಲೂ ಅಸಮರ್ಥನು ಸಮರ್ಥನನ್ನು ಶರಣುಹೊಂದಿ ಫಲಗಳನ್ನು ಹೊಂದಿರುವದನ್ನು ಕಂಡಿದ್ದೇವೆ; ಆದರೂ ಅದೃಷ್ಟ ಫಲವನ್ನು ಕೊಡುವ ಪ್ರಪತ್ತಿಯು ಸದಾಚಾರ್ಯೋಪದೇಶ ಲಬ್ಧಶಾಸ್ತ್ರದಲ್ಲಿ ಹೇಳಿರುವ ಮಂತ್ರಾರ್ಥಜ್ಞಾನವೇನು, ಅನುಷ್ಠಾನವೇನು, ಇವುಗಳನ್ನು ಒಳಗೊಂಡಿರುತ್ತದೆ; ಆ ಪ್ರಪತ್ತಿಗೂ ಅದರ ಫಲಕ್ಕೂ ಸಾಧನ ಸಾಧ್ಯಭಾವಗಳು ಹೇಗೆ ಎಂಬುದನ್ನೂ ಶಾಸ್ತ್ರಮೂಲಕವಾಗಿಯೇ ತಿಳಿಯತಕ್ಕದ್ದು, ಆದುದರಿಂದ ಭಗವತ್ಸೇವಾರೂಪ ಕೈಙ್ಕರ್ಯಗಳು ಹೇಗೆ ಶಾಸ್ತ್ರವಿಹಿತಗಳಾಗಿ ಶಾಸ್ತ್ರನಿಯತ ಕ್ರಮದಲ್ಲಿ ನಡೆಸತಕ್ಕವೋ, ಹಾಗೆಯೇ ಪ್ರಪತ್ತಿಯೂ ಕೂಡ ಶಾಸ್ತ್ರವಿಹಿತವಾದ ಉಪಾಯವಾದುದರಿಂದ ಶಾಸ್ತ್ರವು ವಿಧಿಸಿದ ರೀತಿಯಲ್ಲಿ ಸದಾಚಾರ್ಯರ ಮೂಲಕ ನಡೆಸತಕ್ಕದ್ದು.

ಹಾಗೆ ಪ್ರಪತ್ತಿಗೆ ಶಾಸ್ತ್ರವಿಧಿಯು ಬೇಕಿಲ್ಲವೆಂದರೆ, ರಾಜಸೇವೆಗೆ ಹೇಗೆ ಶಾಸ್ತ್ರವಿಧಿ ಬೇಕಾಗಿಲ್ಲವೋ ಹಾಗೆಯೇ ಭಗವತ್ಸೇವಾರೂಪ ಕೈಙ್ಕರ್ಯಗಳಿಗೂ ಶಾಸ್ತ್ರವಿಧಿ ಬೇಕಾಗಿಲ್ಲವೆಂದು ಒಪ್ಪಬೇಕಾಗುತ್ತದೆ ಎಂದು ಪ್ರತಿದ್ವಂದಿರೂಪ ದೂಷಣವನ್ನು ಹೇಳುತ್ತಾರೆ. ರಾಜಸೇವೆಗೆ ಶಾಸ್ತ್ರವು ಬೇಕಿಲ್ಲವು, ಭಗವತ್ಸೇವೆಗೆ ಶಾಸ್ತ್ರವಿಧಿಯಾನಶ್ಯಕವು ; ಹೇಗೆಂದರೆ ಅಶುಚಿಯಾದ ಪುಷ್ಪದಿಂದ ರಚಿಸಿದ ಪುಷ್ಪಮಾಲೆಯು ಶಾಸ್ತ್ರನಿಷಿದ್ಧವಾಗಿ ಭಗವತ್ಸೇವೆಗೆ ಅನರ್ಹವು ; ನೋಡಲು ಚನ್ನಾಗಿದ್ದರೆ ರಾಜನಿಗೆ ಅರ್ಹವಾದುದು. ಹಾಗೆಯೇ ಮಿಕ್ಕ ಸೇವೆಗಳಲ್ಲೂ ಊಹಿಸಬಹುದು. ಈ ಅಭಿಪ್ರಾಯವು ಪ್ರತಿಕಕ್ಷಿಗಳಿಗೆ ಅನಭಿಮತವಾದ ವಿಷಯವು ಭಗವತ್ಕೈಂಕರ್ಯಗಳಿಗೆ ಅನರುಗಳು ತುಂಬಾ ಮಾಹಾತ್ಮ್ಯವನ್ನು ಹೇಳುವದರಿಂದ ಅವು ಶಾಸ್ತ್ರರೀತ್ಯಾ ನಡೆಯತಕ್ಕವುಗಳೆಂದು ಹೇಳುತ್ತಾರೆ **ಅಜ್ಞನಲ್ಲಾದಪೋದು** - ಪ್ರಪತ್ತಿಗೆ ಶಾಸ್ತ್ರವಿಧಿಯು ಬೇಕಿಲ್ಲವು, ಅನುಮಾನದಿಂದಲೇ ವ್ಯಕ್ತವೆಂದು ಅಭಿಪ್ರಾಯಪಟ್ಟರೆ, **ರಾಜಸೇನೆಯ್ಯಿಪ್ಪೋಲೆ** - ರಾಜಸೇವೆಗೆ ಹೇಗೆ ಶಾಸ್ತ್ರವಿಧಿ ಬೇಕಿಲ್ಲವೋ, ಹಾಗೆಯೇ, ಭಗವತ್ಸೇವೆಯೂ ಕೂಡ, **ವಿಧಿಕ್ಕವೇಂಡಾದೊಳಿಯುನು** - ಶಾಸ್ತ್ರವಿಧಿಮೂಲಕ ವಿಧಿಸಬೇಕಾದುದಿಲ್ಲವಾಗಿ ಹೋಗಬೇಕಾಗುತ್ತದೆ. ಭಗವತ್ಸೇವೆಗೆ

ಅಜ್ಞನಲ್ಲಾದಪೋದು ರಾಜಸೇವೈ ಯೈಪ್ಪೋಲೆ ಭಗವತ್ಸೇವೆಯುಮ್ ವಿಧಿಕ್ಕ ವೇಣ್ಡಾದೊಳಿಯುಮ್; ಪ್ರಪತ್ತಿಕ್ಕುಮ್ ಸದಾಚಾರ್ಯೋಪದೇಶಪೂರ್ವಕ ಮಂತ್ರ ಗ್ರಹಣಾದಿಗಳ್ ಅನಪೇಕ್ಷಿತಜ್ಞಳಾಗ ಪ್ರಸಙ್ಗಿಕ್ಕುಮ್.

ನೀವು ಹೇಗೆ ಶಾಸ್ತ್ರವಿಧಿಯು ಆವಶ್ಯಕವೆಂದು ಹೇಳುತ್ತೀರೋ ಹಾಗೆಯೇ ಪ್ರಪತ್ತಿಗೂ ಕೂಡ ಶಾಸ್ತ್ರವಿಧಿಯು ಆವಶ್ಯಕವು, ಅಸಮರ್ಥನ ವಿಷಯದಲ್ಲಿ ಅನುಮಾನ ಪ್ರಮಾಣದಿಂದಲೇ ವ್ಯಕ್ತವೆಂದು ಹೇಳುವ ವಾದವು ಅತೀಂದ್ರಿಯ ವಿಷಯದಲ್ಲಿ ನ್ಯಾಯವಲ್ಲವೆಂಬ ಭಾವವು.

ಹೀಗೆ ವಾದಿಸುವವರು ಪ್ರಪದನ ಮಂತ್ರವಾದ ದ್ವಯ ಮೊದಲಾದ ಮಂತ್ರಗಳ ಉಪದೇಶಮಾತ್ರ ಆಚಾರ್ಯ ಮೂಲಕವಾಗಿ ಶಾಸ್ತ್ರರೀತ್ಯಾ ನಡೆಸತಕ್ಕದ್ದೆಂದು ಹೇಳುವರು ಪ್ರಪದನಾನುಷ್ಠಾನಕ್ಕೆ ಶಾಸ್ತ್ರವಿಧಿ ಬೇಕಾಗಿಲ್ಲವೆಂದು ಹೇಳುವವರಿಗೆ, ಈ ಮಂತ್ರೋಪದೇಶಮಾತ್ರ ಶಾಸ್ತ್ರ ವಿಧಿಪ್ರಕಾರ ನಡೆಯ ಬೇಕೆಂಬುದು ತಾನೇ ಏಕೆ? ಎಂದು ಕೇಳಬೇಕಾಗುತ್ತದೆ. ಇದೂ ಕೂಡ ಶಾಸ್ತ್ರ ನಿರಪೇಕ್ಷವಾಗಿಯೂ ಸದಾಚಾರ್ಯೋಪದೇಶ ನಿರಪೇಕ್ಷವಾಗಿಯೂ ನಡೆಯಬಹುದಾಗಿ ಬರುತ್ತದೆಂದು ಮುಂದೆ ಹೇಳುತ್ತಾರೆ:—**ಪ್ರಪತ್ತಿಕ್ಕುಮ್** - ಪ್ರಪತ್ತಿಗೂ ಕೂಡ **ಸದಾಚಾರ್ಯೋಪದೇಶ ಪೂರ್ವಕವಾದ, ಮಂತ್ರಗ್ರಹಣಾದಿಗಳ್**- ಮೂಲಮಂತ್ರದ್ವಯ ಚರಮಶ್ಲೋಕಾದಿಗಳ ಉಪದೇಶಗಳೂ ಕೂಡ, **ಅನಪೇಕ್ಷಿತಜ್ಞಳಾಗ**-ಬೇಕಾಗಿಲ್ಲದವುಗಳಾಗಿ, **ಪ್ರಸಙ್ಗಿಕ್ಕುಮ್** - ಉಂಟಾಗಬಹುದು. ಯಾವಾಗ ಮಂತ್ರೋಪದೇಶಕ್ಕೆ ಮಾತ್ರ ಆಚಾರ್ಯೋಪದೇಶರೂಪವಾದ ಶಾಸ್ತ್ರವಿಧಿಯು ಆವಶ್ಯಕವೆಂದಾಯಿತೋ, ಮಂತ್ರಾರ್ಥೋಪದೇಶ ಮೂಲಕವಾದ ಪ್ರಪದನಕ್ಕೂ ಶಾಸ್ತ್ರವಿಧಿಯು ಅತ್ಯಾವಶ್ಯಕವು ಎಂಬ ಭಾವವು.

ಇದರಮೇಲೆ ಪೂರ್ವಪಕ್ಷಿಗಳು ಇನ್ನೊಂದು ವಾದವನ್ನು ತರಬಹುದು, ಹೇಗೆಂದರೆ:—ಪ್ರಪದನಕ್ಕೆ ಸರ್ವಾಧಿಕಾರತ್ವವುಂಟು. ಗೀತೆಯಲ್ಲಿ (೯—೩೨)

"ಮಾಂಹಿ ಪಾರ್ಥ ವ್ಯಪಾಶ್ರಿತ್ಯ ಯೇಪಿಸ್ಯುಃ ಪಾಪಯೋನಯಃ।
ಸ್ತ್ರಿಯೋವೈಶ್ಯಾ ಸ್ತಥಾಶೂದ್ರಾಃ ತೇಪಿಯಾನ್ತಿ ಪರಾಂಗತಿಂ"॥

ಎಂದು ಹೇಳಿರುವದರಿಂದ ಸ್ತ್ರೀಯರೂ ವೈಶ್ಯರೂ ಶೂದ್ರರೂ ಚಂಡಾಲರೂ ಸಹ ಪ್ರಪದನಾಧಿಕಾರಿಗಳೆಂದು ಹಿಂದೆಯೇ ಪ್ರಪತ್ತಿ ಯೋಗ್ಯಾಧಿಕಾರದಲ್ಲಿ ಶಾಸ್ತ್ರರೀತ್ಯಾ ಸ್ಥಾಪಿಸಲ್ಪಟ್ಟಿರುವದು ಸರಿಯಷ್ಟೇ, ಇವರಿಗೆ ಮಂತ್ರಗಳ ಉಪದೇಶವಿಲ್ಲವು, ಭಾಷಾಮಂತ್ರಕ್ಕೆ ಮಾತ್ರ ಅರ್ಹರು ಎಂದು ಅಙ್ಗೀಕರಿಸಿರುವದ

ಮಂತ್ರಾದ್ಯನರ್ಹರ್ಕ್ಕುಮ್ ಶರಣ್ಯವಿಶೇಷ ಫಲವಿಶೇಷಾನುಬಂಧಿಯಾನ ಅನ್ಯೂನಾನಧಿಕ ಕರ್ತವ್ಯ ವಿಶೇಷತ್ತನುಡ್ಡೈಯ ವಧ್ಯವಸಾಯತ್ತುಕ್ಕು ಅನನ್ಯಥಾ ಸಿದ್ಧಮಾನವನುಮಾನಞ್ಞುಡ್ಡೈಯಾದು.

ರಿಂದ ಹಾಗೆಯೇ, ಎಲ್ಲರಿಗೂ ಎಂದರೆ ವೈದಿಕ ಮಂತ್ರಕ್ಕೆ ಅರ್ಹರಿಗೂ ಕೂಡ, ಏಕೆ ಕೂಡದು ? ಶೂದ್ರಾದಿಗಳ ವಿಷಯದಲ್ಲಿ ಶಾಸ್ತ್ರನಿರಪೇಕ್ಷತ್ವವನ್ನು ಒಪ್ಪುವದಾದರೆ, ಎಲ್ಲಾ ಸಂದರ್ಭಗಳಲ್ಲೂ ಒಪ್ಪಬಹುದಲ್ಲಾ ಎಂದು ಆಕ್ಷೇಪಿಸಬಹುದೆಂದು ಯೋಚಿಸಿ ಅದಕ್ಕೆ ಸಮಾಧಾನವನ್ನು ಹೇಳುತ್ತಾರೆ.

ಮಂತ್ರಾದ್ಯನರ್ಹರ್ಕ್ಕುಮ್-ದ್ವಯಮೂಲ ಮೊದಲಾದ ವೈದಿಕ ಮಂತ್ರಾದಿಗಳಿಗೆ ಅನರ್ಹರಾದ ಶೂದ್ರ ಪಂಚಮರುಗಳಿಗೂ, **ಶರಣ್ಯವಿಶೇಷ**-ಸತ್ಯತ್ವಜ್ಞಾನತ್ವಾದಿಗಳಾದ ಸ್ವರೂಪ ನಿರೂಪಕಧರ್ಮವೇನು, ವಾತ್ಸಲ್ಯ ಕೃಪಾದಿಗಳಾಗಿ ಉಪಾಯನಾಗಿರುವದಕ್ಕೆ ಯೋಗ್ಯವಾದ ಗುಣಗಳುಳ್ಳ ಶರಣ್ಯ ವಿಶೇಷವು, **ಫಲವಿಶೇಷ**-ಮೋಕ್ಷೇತರ ಪ್ರಪನ್ನರಾಗಿ ಅಪೇಕ್ಷಿಸುವ ಫಲವಿಶೇಷವು ಮತ್ತು ಮೋಕ್ಷಾರ್ಥಿಗಳಿಗೆ ಬೇಕಾದುದು, ಇವುಗಳಿಗೆ, **ಅನುಬಂಧಿಯಾನ** - ಸಂಬಂಧಿಸಿಕೊಂಡಿರುವ, **ಅನ್ಯೂನಾನಧಿಕ** - ಕಮ್ಮಿಯೂ ಇಲ್ಲದೆ ಅಧಿಕವೂ ಇಲ್ಲದೆಯೂ, **ಕರ್ತವ್ಯ ವಿಶೇಷತ್ತಿನುಡ್ಡೈಯ** – ಮಾಡತಕ್ಕ ಪ್ರಪತ್ತ್ಯನುಷ್ಠಾನದ, **ಅಧ್ಯವಸಾಯತ್ತುಕ್ಕು** - ನಿಶ್ಚಯಜ್ಞಾನಕ್ಕೆ, **ಅನನ್ಯಥಾ ಸಿದ್ಧಮಾನ** - ಶಾಸ್ತ್ರವಿಧಿ ಬೇಕಾಗದೇ ಸ್ವತಂತ್ರವಾಗಿ ಉಂಟಾಗುವ, **ಅನುಮಾನಂ ಕಿಡಿಯಾದು** - ಅನುಮಾನ ಪ್ರಮಾಣವು ಇಲ್ಲವು ವೈದಿಕ ಮಂತ್ರೋಪದೇಶಗಳಿಗೆ ಅನರ್ಹರಾದ ಶೂದ್ರ ಪಂಚಮಾದಿಗಳು, ಮೋಕ್ಷಕ್ಕಾಗಿಯೂ ಇತರ ಫಲಗಳಿಗಾಗಿಯೂ ಶರಣಾಗತಿಯನ್ನು ಮಾಡುತ್ತಾರೆ. ಆ ಶರಣಾಗತಿಯನ್ನು ಮಾಡುವಾಗ ಶರಣ್ಯನು ಎಂತವನೆಂಬುದು ತಿಳಿದಿರಬೇಕು ಆತನ ಸ್ವರೂಪ ನಿರೂಪಕ ಧರ್ಮಗಳು ಯಾವವು ? ಆತನು ಸಿದ್ಧೋಪಾಯನಾಗಿರುವ ಉಪಯುಕ್ತ ಗುಣಗಳಾವುವು ? ಆತನು ಯಾವಾಗಲೂ ಲಕ್ಷ್ಮ್ಯಾಯೊಂವಿಗೇನೇ ಇರುವದರಿಂದಾಗುವ ಪ್ರಯೋಜನವೇನು ? ಇದೆಲ್ಲಾ ಅವಶ್ಯಕವಾಗಿ ತಿಳಿಯಬೇಕಾದ ವಿಷಯವು ಇದು ಶಾಸ್ತ್ರದಿಂದಲೇ ತಿಳಿಯಬೇಕಾದ ವಿಷಯವು. ಹಾಗೆಯೇ ಈ ಶರಣಾಗತಿಯಿಂದುಂಟಾಗುವ ಫಲಗಳು ಯಾವುವು ? ಮೋಕ್ಷಕ್ಕಾಗಿ ಮಾಡುವ ಶರಣಾಗತಿಗೂ ಇತರ ಫಲಗಳಿಗಾಗಿ ಮಾಡುವ ಶರಣಾಗತಿಗೂ, ಕ್ರಮದಲ್ಲಿ ವ್ಯತ್ಯಾಸವೇನು ? ಪರಿಕರಗಳು ಯಾವವು ? ಅಜ್ಞಿಯಾವುದು ? ಇವೆಲ್ಲಾ ತಿಳಿಯತಕ್ಕ

ಏವಂ ಪ್ರಪತ್ತೇಃ ಕರ್ತವ್ಯತ್ವಂ ವಿಧೇಯತ್ವಂಚ
ಸ್ಥಾಪಯಿತ್ವಾ ನಿಗಮಯತಿ

ಆಗ್ನೇಯಾಲ್ ಸಪರಿಕರ ಸೇವಾ ವಿಶೇಷಜ್ಞಾಳ್ ಪೋಲೆ ಸಪರಿಕರ ಭರಸಮರ್ಪಣವುಂ ವಿಧೇಯವಾಗಕ್ಕುರೈಯಿಲ್ಲೈ.

ವಿಷಯಗಳಾಗಿನೆ ಇವೆಲ್ಲಾ ಶಾಸ್ತ್ರದಿಂದ ತಿಳಿಯತಕ್ಕವುಗಳೇ ವಿನಾ ಕೇವಲ ಅನುಮಾನ ಪ್ರಮಾಣದಿಂದ ಸಾಧಿಸಲು ಅಸಾಧ್ಯವು ಎಂಬ ತಾತ್ಪರ್ಯವು.

ಪ್ರಪತ್ತಿಯು ಶಾಸ್ತ್ರ ವಿಧಿ ಬಲಾತ್ ಅವಶ್ಯಕವಾಗಿ ಕರ್ತವ್ಯವೆಂದು ನಿಗಮನವು

ಅತೀಂದ್ರಿಯ ಗೋಚರನಾದ ಶರಣ್ಯನಲ್ಲಿ ಅತೀಂದ್ರಿಯ ಫಲವಾದ ಮೋಕ್ಷಾದಿಗಳಲ್ಲಿ ಪ್ರತ್ಯಕ್ಷಾನುಮಾನ ಪ್ರಮಾಣಗಳು ದುರ್ಬಲಗಳಾದುದರಿಂದ ಶಾಸ್ತ್ರಪ್ರಮಾಣವಿಧಿ ಬಲದಿಂದಲೇ ಪ್ರಪತ್ತಿಯು ಅವಶ್ಯಕವಾಗಿ ಕರ್ತವ್ಯವು. ಇದು ಗುರುಮುಖೇನ ವರ್ಣಾಶ್ರಮೋಚಿತ ಕ್ರಮದಲ್ಲಿ ಪರಿಕರಗಳೊಂದಿಗೆ ಅನುಷ್ಠಿಸತಕ್ಕದ್ದು. ಅಧಿಕಾರಾನುಗುಣವಾಗಿ ಯಾವ ಮಂತ್ರದಮೂಲಕ ಅನುಷ್ಠಿಸತಕ್ಕದ್ದೆಂಬುದನ್ನು ಶಾಸ್ತ್ರವಿಧಿಮೂಲಕ ತಿಳಿಯತಕ್ಕದ್ದು. ಆದುದರಿಂದ **ಶರಣಂವ್ರಜ** ಎಂಬ ವಿಧಿಯೇ ವಿನಾ ಅನುವಾದವಲ್ಲವು **ಆಗ್ನೇಯಾಲ್**-ಹೀಗೆ ಪ್ರತ್ಯಕ್ಷಾನುಮಾನಗಳಿಂದ ಪ್ರಪತ್ತಿಯು ಸಿದ್ಧವಾದುದಲ್ಲವೆ ಶಾಸ್ತ್ರ ಮೂಲಕ ಕರ್ತವ್ಯತ್ವವೂ ವಿಧೇಯತ್ವವೂ ಅವಶ್ಯಕವಾಗಿರುವದರಿಂದ, **ಸಪರಿಕರ ಸೇವಾ ವಿಶೇಷಜ್ಞಾಳ್ ಪೋಲೇ**-ಭಗವತ್ಕೈಂಕರ್ಯಕಳೆಲ್ಲಾ ಶಾಸ್ತ್ರವಿಧೀತ್ಯಾ ಅಜ್ಞಾಗಳೆಂದಿಗೆ ಹೇಗೆ ಅನುಷ್ಠಿಸತಕ್ಕವೋ, ಹಾಗೆಯೇ, **ಇಜ್ಞುಂ**-ಈ ಪ್ರಪತ್ತಿಯು ಸಂದರ್ಭವಲ್ಲೂ ಆದು, **ವಿಧೇಯಮಾಗ**-ಶಾಸ್ತ್ರವಿಧೀತ್ಯಾ **ಅನುಷ್ಠಿಸತಕ್ಕ**ದ್ದಾಗಲು, **ಕುರೈಯಿಲ್ಲೈ**-ಯಾವ ನ್ಯೂನತೆಯೂ ಇಲ್ಲವು ಗುರುಮುಖೇನ ಭರಸಮರ್ಪಣವು ಅನಾವಶ್ಯಕವೆಂದು ಬಿಟ್ಟೆರುವದು ಸರಿಯಲ್ಲವೆಂದು, ತಮ್ಮ ಹಿತದಲ್ಲಿ ತನುಗೇನೇ ಮಮತೆಯಿಲ್ಲದೆ ಈ ಅನುಷ್ಠಾನವನ್ನು ಪರಿತ್ಯಜಿಸಿರುತ್ತಾರಲ್ಲಾ ಎಂಬ ಪರಿತಾಪದಿಂದ ಮಾಡಿದ ಹಿತೋಪದೇಶವಾಗಿರುತ್ತದೆ ಈ ಹಿತೋಪದೇಶವನ್ನರಿಯದೆ ತಪ್ಪಾಗಿ ವಾದವನ್ನು ಖಂಡಿಸಿರುತ್ತಾರಲ್ಲಾ ಎಂದು ಶ್ರೀ ದೇಶಿಕರವರನ್ನು ಕೆಲವರು ನಿಂದಿಸುವರು ಇದು ಸರಿಯಲ್ಲವು.

(೫) ಭಕ್ತ್ಯುಪಾಯಸ್ಸ್ವರೂಪ ವಿರುದ್ಧ ಇತಿವಾದಸ್ಯನಿರಾಸಃ

ಇಪ್ಪಡಿ ಯಥಾಧಿಕಾರಮುಂ ಶಾಸ್ತ್ರಮುಂ ವಿಧಿತ್ತವತ್ತಿಲುಮ್ ಉಪಾಸನಾದಿಗಳ್ ಸ್ವರೂಪ ವಿರುದ್ಧಜ್ಞಾನಿನ್ರು ಶಿಲರ್ ಶೊಲ್ಲುವರ್‌ಗಳ್.

ಭಕ್ತ್ಯುಪಾಯವು ಸ್ವರೂಪ ವಿರುದ್ಧ ವೆಂಬ ವಾದದ ಖಂಡನವು.

ಇದುವರೆಗೂ ಸಾಧ್ಯೋಪಾಯವಾದ ಪ್ರಪತ್ತಿಯ ಸ್ವರೂಪ ವಿಷಯದಲ್ಲಿ ಮಾಡಿದ ಆಕ್ಷೇಪಗಳಿಗೆ ಪರಿಹಾರಗಳನ್ನು ಹೇಳಿದರು ಪ್ರಾಸಙ್ಗಿಕವಾಗಿ ಸಾಧ್ಯೋಪಾಯವಾದ ಭಕ್ತಿಸ್ವರೂಪದಲ್ಲಿನ ಆಕ್ಷೇಪಗಳಿಗೆ ಸಮಾಧಾನವನ್ನು ಹೇಳುತ್ತಾರೆ. ಶಾಸ್ತ್ರವು ಉಪಾಯವಾಗಿ ವಿಧಿಸಿರುವದರಲ್ಲಿ ಪ್ರಪತ್ತಿಯಾದರೂ ಸರ್ವೇಶ್ವರನ ನಿರ್ಹೇತುಕ ಕೃಪೆಗೆ ಅನುರೂಪವಾಗುವೆಂದಾದರೂ ಒಪ್ಪಬಹುದು. ಪ್ರಪತ್ತಿಗೆ ಸರ್ವಾಧಿಕಾರತ್ವವೂ ಉಂಟು. ಹೀಗಿರುವಲ್ಲಿ ಸಮರ್ಥನಿಗೆ ಭಕ್ತಿರೂಪ ಸಾಧ್ಯೋಪಾಯವೂ, ಅಸಮರ್ಥನಿಗೆ ಪ್ರಪತ್ತಿಯೂ ಹೀಗೆಲ್ಲಾದರೂ ಉಂಟೋ? ಎಂಬುದು ಆಕ್ಷೇಪವು. ಶಾಸ್ತ್ರವು ಉಪಾಸನವನ್ನು ಒಂದು ಸಾಧ್ಯೋಪಾಯವೆಂದು ವಿಧಿಸಿದ್ದರೂ, ಅದು ಸ್ವರೂಪ ವಿರುದ್ಧವಾದುದೇ ಎಂದು ಕೆಲವರು ಹೇಳಬಹುದು.

ಇಪ್ಪಡಿ – ಹೀಗೆ ಎಂದರೆ ಹಿಂದೆ ಪ್ರಪತ್ತಿಯನ್ನು ಯಥಾಧಿಕಾರವಾಗಿ ಶಾಸ್ತ್ರವು ವಿಧಿಸಿರುವಂತಾದ್ದು ಎಂದು ಸ್ಥಾಪಿಸಿದ ಸಂದರ್ಭದಲ್ಲಿ, ಭಕ್ತಿ ಮಾರ್ಗವು ಸಮರ್ಥನಿಗೂ ಅಸಮರ್ಥನಾದ ಅಕಿಂಚನನಿಗೆ ಪ್ರಪದನವೂ ಎಂದು ಶಾಸ್ತ್ರವು ವಿಧಿಸಿರುವಾಗ ಎಂಬ ಭಾವವು, **ಯಥಾಧಿಕಾರಮುಂ** – ಬ್ರಾಹ್ಮಣ ಕ್ಷತ್ರಿಯ ವೈಶ್ಯರಾಗಿ ಸಮರ್ಥರಾಗಿರುವವರಿಗೆ ಭಕ್ತ್ಯುಪಾಯವೆಂದೂ, ಶೂದ್ರಾದಿಗಳೂ ಅಸಮರ್ಥರೂ ಇವರುಗಳಿಗೆ ಪ್ರಪತ್ತಿ ಎಂದೂ ಹೀಗೆ ಅಧಿಕಾರಾನುಗುಣವಾಗಿ, **ಶಾಸ್ತ್ರಮುಂ ವಿಧಿತ್ತವತ್ತಿಲುಮ್** – ಶಾಸ್ತ್ರವು ವಿಧಿಸಿರುವದರಲ್ಲೂ, **ಉಪಾಸನಾದಿಗಳ್** – ಉಪಾಸನ ಮತ್ತು ಆದಿಪದದಿಂದ ಅದಕ್ಕೆ ಸಹಕಾರಿಯಾದ ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗಾದಿಗಳು, **ಸ್ವರೂಪ ವಿರುದ್ಧಜ್ಞಾನಿನ್ರು** – ತನ್ನ ಪರತಂತ್ರವಾದ ಸ್ವರೂಪಕ್ಕೆ ವಿರುದ್ಧವಾದವುಗಳೆಂದು, **ಶಿಲರ್ ಶೊಲ್ಲುವರ್‌ಗಳ್** – ಕೆಲವರು ಹೇಳುವರು ಶ್ರೀ ಪಿಳ್ಳೈ ಲೋಕಾಚಾರ್ಯರು ಅವರನುಗ್ರಹಿಸಿರುವ ಶ್ರೀ ವಚನ ಭೂಷಣದಲ್ಲಿ ಹಾಗೆ ಹೇಳುತ್ತಾರೆ. ನಮಗೆ ಈ ಗ್ರಂಥವು ಹೇಗೋ, ಅವರಿಗೆ ಶ್ರೀವಚನ ಭೂಷಣವು

ಶ್ರೀವಚನಭೂಷಣದ ಮಾಹಾತ್ಮ್ಯವನ್ನು ಪ್ರದರ್ಶಿಸುವ ಉಪದೇಶ ಗ್ರಂಥವು. ಈ ಸಂದರ್ಭದಲ್ಲಿ ಅವರು ಹೇಳಿರುವದೇನೆಂದರೆ :—"ಪ್ರಾಪಕಾಂತರ ಪರಿತ್ಯಾಗ ತ್ತುಕ್ಕುಮ್ ಅಜ್ಞಾನಾಶಕ್ತಿಗಳನ್ನು; ಸ್ವರೂಪ ವಿರೋಧಮೇ ಪ್ರಧಾನಹೇತು. ಪ್ರಾಪಕಾಂತರೆಮ್ ಅಜ್ಞರ್‌ಕ್ಕುಪಾಯಮ್, ಜ್ಞಾನಿಗಳಕ್ಕುಪಾಯಮ್; ಅಪಾಯ ಮಾಯಿರ್ಪ್ಪ ದುಸ್ವರೂಪನಾಶಕವಾಗೈಯಾಲೆ **ವರ್ತತೇಮೇ ಮಹದ್ಭಯಮ್** ಎನ್ಗೈಯಾಲೇ ಭಯಜನಕಮ್; ಮಾಶುಚಃ ಎನ್ಗೈಯಾಲೇ ಶೋಕ ಜನಕವ್; ಮದಿರಾ ಬಿಂದುಮಿಶ್ರಮಾನ ಶಾತಕುಂಭನುಯ ಕುಂಭಗತ ತೀರ್ಥ ಸಲಿಲಮ್ಪೋಲೆ ಅಹಂಕಾರ ಮಿಶ್ರಂ; ರತ್ನತ್ತುಕ್ಕು ಪಲಕರೈಪ್ಪೋಲುವುಮ್; ರಾಜ್ಯತ್ತುಕ್ಕು ಎಲುಮಿಚ್ಚಮ್ಪಳ ಪೋಲುವುಮ್, ಫಲತ್ತುಕ್ಕು ಸದೃಶಮನ್ರು, ಔಷಧಸೇವೆ ಪಣ್ಣಾದವರ್‌ಗಳುಕ್ಕು ಅಭಿಮತವಸ್ತುಕ್ಕಳಿಲೆ ಅತ್ತೈ ಕಲಶಿಯಿಡು ವಾರೈಪೋಲೆ, ಈಶ್ವರನೈಕ್ಕಲನ್ದು ವಿಧಿಕ್ಕಿರ ವಿತ್ತನೈ; ಇತೈ ಪ್ರವರ್ತಿಪ್ಪಿತ್ತದು ಪರಹಿಂಸೆಯೈ ನಿವರ್ತಿಪ್ಪಿಕ್ಕೈ ಕಾರಣ ಇದುತಾನ್ ಪೂರ್ವವಿಹಿತ ಹಿಂಸೈ ಪೋಲೆ ವಿಧಿನಿಷೇದಜ್ಞರಂಡುಕ್ಕುಮ್ ಕುರೈಯಿಲ್ಲೈ ಅತ್ತೈ ಶಾಸ್ತ್ರ ವಿಶ್ವಾಸತ್ತುಕ್ಕಾಗ ವಿಧಿತ್ತದು, ಇತ್ತೈ ಸ್ವರೂಪ ವಿಶ್ವಾಸತ್ತುಕಾಗ ವಿಧಿತ್ತದು; ಅದು ತೋಲ್ ಪುರಯೈಪೋಮ್, ಇದುಮರ್ಮಸ್ಪರ್ಶೀ. ಇದುತಾನ್ ಕರ್ಮಸಾಧ್ಯ ಮಾಗೈಯಾಲೇ ದುಷ್ಕರಮುಮಾಯಿರುಕ್ಕುಮ್" ಸಂಗ್ರಹವಾಗಿ ಇದರ್ ತಾತ್ಪರ್ಯ ವೇನೆಂದರೆ (೧) ಪ್ರಾಪಕಾಂತರವಾದ ಭಕ್ತಿಮಾರ್ಗವನ್ನು ಈಗಿನವರು ತ್ಯಜಿಸಿರುವದಕ್ಕೆ ಅಜ್ಞಾನ ಮತ್ತು ಅಶಕ್ತಿಗಳೂ ಕಾರಣವೆಂದು ಹೇಳುವರು. ಹಾಗಲ್ಲವು ಪ್ರಪನ್ನರ ಸ್ವರೂಪಕ್ಕೆ ವಿರುದ್ಧವಾಗಿರುವದೇ ಕಾರಣವು. (೨) ಅದನ್ನು ಅಜ್ಞರಿಗೆ ಉಪಾಯವೆಂದು ಇಟ್ಟುಕೊಳ್ಳಬಹುದು. ಜ್ಞಾನಿಗಳಿಗೆ ಇದು ಅಪಾಯವು. ಜೀವನರ ಸ್ವರೂಪವು ಸರ್ವೇಶ್ವರನಿಗೆ ಅತ್ಯಂತ ಪರತಂತ್ರನಾಗಿರುವದು, ಇದು ಸ್ವಯತ್ನರೂಪವಾದುದರಿಂದ ಸ್ವರೂಪನಾಶಕವು. (೩) "**ವರ್ತತೇ ಮೇ ಮಹದ್ಭಯಂ**" ಎಂದಿರುವದರಿಂದ ತುಂಬಾ ಭಯಾವಹವೆಂಬ ಭಾವವು. (೪) "**ಮಾಶುಚಃ**" ಎಂದು ಹೇಳಿರುವದರಿಂದ ಅದು ಶೋಕಜನಕವು. (೫) ಹಾಗೆ ಸ್ವರೂಪನಾಶಕವೆಂದು ಒಪ್ಪಿಕ್ಕೊಳ್ಳದಿದ್ದರೆ, ಇದಕ್ಕೆ ಪ್ರಾಯಶ್ಚಿತ್ತವಿಧಿಯನ್ನು ಏಕೆ ವಿಧಿಸಿತು ಎಂದು ಕೇಳಬೇಕಾಗುತ್ತದೆ. (೬) ಶ್ರೀ ಭಾಷ್ಯಕಾರರ ಶಿಷ್ಯರಾದ ತಿರುಕ್ಕುರಿಗೈಪ್ಪಿರಾನ್ ಎಂಬುವರು ಇದು ಸುವರ್ಣದ ಕುಂಭದಲ್ಲಿಟ್ಟ ಪವಿತ್ರವಾದ ಗಂಗಾತೀರ್ಥಕ್ಕೆ ಒಂದು ಬಿಂದು ಹೆಂಡವು ಸೇರಿಸಿದಹಾಗೆ ಅಹಂಕಾರ ಮಿಶ್ರವಾದುದು. ಹೇಗೆಂದರೆ ಈ ಜೀವನನು ಸ್ವತಃ ಮಹಾ ಪರಿಶುದ್ಧನು ಕುಂಭಗತ ಗಂಗಾಜಲದಹಾಗೆ ಭಗವಚ್ಛೇಷತ್ವ ಜ್ಞಾನದಿಂದಲೂ ಪರಿಶುದ್ಧನು.

ಭಕ್ತ್ಯುಪಾಯವನ್ನು ಸ್ವತಂತ್ರಿಸಿ ಅನುಷ್ಠಿಸುವದರಿಂದ, ಗಂಗಾಜಲಕ್ಕೆ ಹೆಂಡದ ಸಂಬಂಧ ಬಂದಹಾಗೆ ಅಹಂಕಾರ ವಿಶ್ವನಾಯಿತು. (೭) ಎರಡು ನಿಂಬೆಯ ಹಣ್ಣುಗಳನ್ನು ಕೊಟ್ಟು ಪ್ರತಿಯಾಗಿ ರಾಜ್ಯವನ್ನು ಕೊಡು ಎಂದು ಕೇಳಿದಹಾಗೆ, ಅಲ್ಪವಾದ ಭಕ್ತ್ಯುಪಾಯವನ್ನು ಮಾಡಿಬಿಟ್ಟು ಅನೋಪಫಲವಾದ ಮೋಕ್ಷವನ್ನು ಪ್ರಾರ್ಥಿಸುವದು ಆ ಫಲಕ್ಕೆ ಸದೃಶವಾದ ಉಪಾಯವಲ್ಲದುದರಿಂದಲೂ ಸ್ವರೂಪ ವಿರುದ್ಧವಾದುದು (೮) ಆತನಿಗೆ ಕೊಡಲು ಯಾವುದೂ ತನ್ನಲ್ಲಿ ಲ್ಲವು. ಹೀಗಿದ್ದರೂ ಆತ್ಮವನ್ನು ಅವನು ಕೊಟ್ಟಿದ್ದನ್ನೇ ಹಿಂತಿರುಗಿಕೊಟ್ಟರೂ ಅಥವಾ ಸುಮ್ಮನೇ ಅವನಿಗೆ ಸಮರ್ಪಿಸಿದರೂ ಅದು ಉಪಾಯವಾಗಲಾರದು (ಅಜ್ಞಶರಣಾಗತಿ) ಹಾಗಲ್ಲದೆ ತನ್ನ ಆತ್ಮವನ್ನು ಸಮರ್ಪಿಸುತ್ತೇನೆಂಬ ಬುದ್ಧಿಯಿಂದ ಸಮರ್ಪಿಸಿದರೂ ಚೋರಕೃತ್ಯವಾಯಿತು. (೯) ಅಥವಾ ಭರ್ತೃಭೋಗ್ಯವನ್ನುಂಡು ಹೊಟ್ಟೆಹೊರಕ್ಕೊಳ್ಳುವ ಭಾರ್ಯೆಯ ಹಾಗೆ ಇಬ್ಬರ ಸ್ವರೂಪಕ್ಕೂ ಹಾನಿಯು. ಸತಿಯು ಭರ್ತೃವಿನ ಉಪಭೋಗಕ್ಕಾಗಿಯೇ ತಾನು ಮಾಡುವ ದೆಲ್ಲವು ಎಂದು ಭಾವಿಸದೇ ಇರುವದರಿಂದ ಸ್ವರೂಪ ಹಾನಿಯು ಅಂತವಳ ಸಂಬಂಧವಿರುವದರಿಂದ ಭರ್ತೃವಿಗೆ ಸ್ವರೂಪಹಾನಿಯು ಹಾಗೆಯೇ ಇಲ್ಲಿಯೂ ಎಂಬ ಭಾವವು. (೧೦) ಅವರೆ ಶಾಸ್ತ್ರವಿಧಿ ಏತಕ್ಕೆಂದರೆ ಔಷಧವನ್ನು ತೆಗೆದು ಕೊಳ್ಳದಿರುವವರಿಗೆ ಔಷಧವನ್ನು ಸಕ್ಕರೆಯಲ್ಲಿ ಕಲಿಶಿಕೊಡುವಹಾಗೆ ಈ ಭಕ್ತಿಯ ಈಶ್ವರನೊಂದಿಗೆ ಸೇರಿಸಲ್ಪಟ್ಟು ವಿಧಿಸಲ್ಪಟ್ಟಿರುತ್ತದೆ. (೧೧) ಇದು ಪಶ್ವಾಲಂಭನಾದಿಗಳಹಾಗೆ ಸುಕೃತ ಅಥವಾ ಪುಣ್ಯರೂಪವಾಗಿ ತೋರಿದರೂ, ಪುಣ್ಯವೂ ಪಾಪವೇ ಹೇಗೋ, ಹಾಗೆ ಉಪಾಸನವು ಪಾಪರೂಪವಾದುದು. (೧೨) ಇದು ಪಶ್ವಾಲಂಭನಕ್ಕಿಂತಲೂ ಕ್ರೂರವು ಅಮು ದುಃಖನಿಶ್ವಾಗಬಹುದು : ಇದಾದರೋ ಆತ್ಮಜ್ಞಾನ ಉಂಟಾದವನಿಗೆ ಭಗವದೇಕ ಪಾರತಂತ್ರ್ಯ ಸ್ವರೂಪ ನಾಶವೆಂಬ ಭಾವವು". ಈ ಅಭಿಪ್ರಾಯಗಳನ್ನೆಲ್ಲಾ ಶ್ರೀ ನಿಗಮಾಂತ ದೇಶಿಕರವರು ಮುಂದೆ ಖಂಡಿಸುತ್ತಾರೆ. ಉಪಾಸನವು ಸ್ವರೂಪ ವಿರುದ್ಧವೆಂದು ಉಪಪಾದಿಸಿರುವುದು ಸ್ವಾಮಿದೇಶಿಕರವರಿಗೆ ಶಾಸ್ತ್ರಪಜ್ಞಿಗಳಿಗೆ ವಿರುದ್ಧಾಭಿಪ್ರಾಯವಾಗಿ ಸರ್ವಾತ್ಮನಾ ಹಿತವಲ್ಲವು. ಹೀಗೆ ಬ್ರಹ್ಮವಿದ್ಯೆಗಳೆಲ್ಲಾ ಉಪಾಸನೆಯರೂಪದಲ್ಲಿ ಬ್ರಹ್ಮಸೂತ್ರಗಳಲ್ಲೂ ಗೀತೆಯಲ್ಲೂ ಪುರಾಣೇತಿಹಾಸಗಳಲ್ಲೂ ಉಪಬ್ರಹ್ಮಣವಾಗಿದ್ದರೂ, ಮತ್ತೂ ಶ್ರುತಿಯಲ್ಲೂ ಉಪಾಸನ ವಿಧಿಯು ಕೊಂಡಾಡಲ್ಪಟ್ಟಿದ್ದರೂ, ಅದು ಸ್ವರೂಪ ವಿರುದ್ಧವೆಂದು ಹೇಳಿಬಿಟ್ಟರೆ, ಶಾಸ್ತ್ರ ಮರ್ಯಾದೆಯಲ್ಲಿ ವಿಶೇಷ ಮಮತೆಯುಳ್ಳವರು ಸುಮ್ಮನಿರುವದು ಸರಿಯಲ್ಲವೆಂದು ಭಾವಿಸಿ, ಈ ವಿಷಯವು ತಮ್ಮ ಉಪಪಾದನೆಯಾದ ಪ್ರಪದನ ಧರ್ಮಕ್ಕೆ ಅನುಪಯುಕ್ತವಾಗಿದ್ದರೂ

ಇದುವುನ್ ಪ್ರಪತ್ತಿಯೈ ಸ್ತುತಿಕ್ಕೈಕ್ಕಾಗ ಅತಿವಾದನುಂ ಪಣ್ಣಿ ನಾರ್‌ಗಳ್, ಅದು ಎಜ್ಞನೇ ಎನ್ನಿಲ್—

(೧) ಭಕ್ತ್ಯುಪಾಯವು ಆತ್ಮನಾಶಕತಯಾ ಸ್ವರೂಪ ವಿರುದ್ಧತ್ವ ಮಿತಿವಾದ ನಿರಾಸಃ

ನಿತ್ಯಮಾನ ಆತ್ಮಸ್ವರೂಪತ್ತುಕ್ಕು ಇನೈ ನಾಶಕಜ್ಞಳಾಯ್‌ಕ್ಕೊಂಡು ಸ್ವರೂಪ ವಿರ ದ್ಧಜ್ಞಳೆನ್ನ ವೊಣ್ಣಾದು

"**ಅತಿವಾದನುಂ ಪಣ್ಣಿ ನಾರ್‌ಗಳ್**" ಎಂದು ಖಂಡಿಸಿ ಅದು ಹೇಗೆ ಶಾಸ್ತ್ರವನ್ನು ತಿರಸ್ಕರಿಸಿದ ಅತಿವಾದವೆಂಬುದನ್ನು ತೋರಿಸಿ ಖಂಡಿಸುತ್ತಾರೆ

ಇದುವುನುಂ - ಹೀಗೆ ಸ್ವರೂಪವಿರುದ್ಧವೆನ್ನುವ ದೋಷಾರೋಪಣವೂ ಕೂಡ, **ಪ್ರಪತ್ತಿಯೈ ಸ್ತುತಿಕ್ಕೈಕ್ಕಾಗ** - ಸುಲಭೋಪಾಯವಾದ ಪ್ರಪತ್ತಿಯನ್ನು ಸ್ತೋತ್ರಮಾಡುವದಕ್ಕಾಗಿ, ಎರಡು ಮಾರ್ಗವಿದ್ದು, ಒಂದು ಮಾರ್ಗವು ದೋಷಾವಹವಾದರೆ ಇನ್ನೊಂದು ಉತ್ತಮವಾದದೆಂದು ಏರ್ಪಡುತ್ತದೆ, ಆದುದರಿಂದ ಇನ್ನೊಂದುಪಾಯವಾದ ಪ್ರಪತ್ತಿಯನ್ನು ಶ್ಲಾಘಿಸುವದಕ್ಕಾಗಿ, **ಅತಿವಾದನುಂ ಪಣ್ಣಿನಾರ್‌ಗಳ್** - ಶಾಸ್ತ್ರಪ್ರಮಾಣವನ್ನು ದೂರೀಕರಿಸಿದ ವಾದವನ್ನು ಮಾಡಿದರು ಅದು ಹೇಗೆ ಎಂಬುದನ್ನು ಉಪಪಾದಿಸುತ್ತಾರೆ **ಎಜ್ಞನೇ ಎನ್ನಿಲ್** - ಅದು ಹೇಗೆ ಎಂದರೆ :—

(೧) ಭಕ್ತ್ಯುಪಾಯವು ಆತ್ಮನಾಶಕವಾಗಿ ಸ್ವರೂಪ ವಿರುದ್ಧವೆಂಬ ವಾದದ ಖಂಡನವು

ಆತ್ಮಸ್ವರೂಪಕ್ಕೇ ಭಕ್ತ್ಯುಪಾಯಾದಿಗಳು ವಿರುದ್ಧವೆಂದು ಹೇಳುವದೇನು, (೧) ಆತ್ಮಸ್ವರೂಪದಲ್ಲೇ ನಾಶಕತ್ವವೇ ಅಥವಾ (೨) ಅಸಂಭಾವಿತತ್ವವೇ ಅಥವಾ (೩) ಅನರ್ಥಾವಹತ್ವವೇ ಎಂದು ಮೂರು ವಿಧವಾಗಿ ವಿಕಲ್ಪಿಸಿ, ಮೊದಲನೆಯದನ್ನು ಮೊದಲು ಖಂಡಿಸುತ್ತಾರೆ **ನಿತ್ಯಮಾನ ಆತ್ಮ ಸ್ವರೂಪತ್ತುಕ್ಕು** - ನಿತ್ಯವಾದ ಆತ್ಮಸ್ವರೂಪಕ್ಕೆ, **ಇನೈ** - ಭಕ್ತ್ಯಾದಿ ಉಪಾಯಗಳು, **ನಾಶಕಜ್ಞಳಾಯ್‌ಕ್ಕೊಂಡು** - ನಾಶಕವಾದವುಗಳಾಗಿ, ಸ್ವರೂಪ ವಿರುದ್ಧವೆಂದು ಹೇಳಲು ಆಗುವದಿಲ್ಲವು ಆತ್ಮಸ್ವರೂಪವು ನಿತ್ಯವಾಗಿರುವಾಗ ಅವರ ಸ್ವರೂಪಕ್ಕೆ ನಾಶಕಗಳು ಹೇಗೆ ಆಗುತ್ತವೆ ಎಂಬ ತಾತ್ಪರ್ಯವು·

ಅಸಂಭಾವಿತತ್ವೇನ ಸ್ವರೂಪ ವಿರುದ್ಧಮಿತಿವಾದ ನಿರಾಸಃ

ಪ್ರಪತ್ತ್ಯನುಷ್ಠಾನತ್ತಿಲುಮ್ ಕೈಜ್ಕರ್ಯತ್ತಿಲುಮ್ ಪೋಲೆ ಭಕ್ತ್ಯಾದಿಗಳಿಲುಮ್ (೧) **"ಕರ್ತಾ ಶಾಸ್ತ್ರಾರ್ಥವತ್ತ್ವಾತ್"** (೨)**"ಪರಾತ್ತು**

ಮುಂದೆ **ಪ್ರಪತ್ತ್ಯನುಷ್ಠಾನತ್ತಿಲುಮ್** ಎಂದು ಆರಂಭಿಸಿದ ವಾಕ್ಯದಿಂದ ಎರಡನೆಯ ಪಕ್ಷವನ್ನು ದೂಷಿಸುತ್ತಾರೆ ಆ **ಪೂರ್ವ**ಪಕ್ಷವು ಹೇಗೆಂದರೆ :—ಜೀವನು ಅಣು ಸ್ವರೂಪನು, ಅಂತವನಿಗೆ ಕರ್ತೃತ್ವವು ದೇಹಮೂಲಕವಾಗಿಯೇ ವಿನಾ ಸ್ವರೂಪ ಮೂಲಕವಲ್ಲವು ಹಾಗೆಯೇ ಗೀತೆಯಲ್ಲೂ ಕರ್ಮ ಸನ್ಯಾಸವನ್ನು ಬೋಧಿಸುವ ಸಂದರ್ಭದಲ್ಲಿ **"ಬ್ರಹ್ಮಣ್ಯಾಧಾಯ ಕರ್ಮಾಣಿ"** (ಗೀ. ೫. ೧೦) ಕರ್ಮಗಳು ಜೀವಸ್ವರೂಪಕ್ಕೆ ಸೇರಿದವಲ್ಲವಾದುದರಿಂದ **ಬ್ರಹ್ಮಣಿ** ಎಂದರೆ ಪ್ರಕೃತಿಯಲ್ಲಿ ಸಮರ್ಪಿಸಿ ಎಂಬರ್ಥವು ಹೇಳಲ್ಪಟ್ಟಿರುತ್ತದೆ. ಹಾಗೆಯೇ **"ನಕರ್ತೃತ್ವಂ ನ ಕರ್ಮಾಣಿ ಲೋಕಸ್ಯ ಸೃಜತಿ ಪ್ರಭುಃ** (ಗೀ. ೫ ೧೦) ಈ ಜೀವಾತ್ಮ ಸ್ವರೂಪಕ್ಕೆ ಕರ್ತೃತ್ವವು ಸೇರಿದುದಲ್ಲವೆಂದು ಹೇಳಲ್ಪಟ್ಟಿರುತ್ತದೆ. ಇದೂ ಅಲ್ಲದೆ **"ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ । ಅಹಂಕಾರ ವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ"** ॥ (ಗೀ. ೩ ೨೭) ದೇಹಸಂಬಂಧವಿದ್ದುಂಟಾಗತಕ್ಕ ಕರ್ಮಗಳಿಗೆ ಸ್ವರೂಪತಃ ಕರ್ತೃತ್ವವು ಸಾಧ್ಯವಲ್ಲದ ಆತ್ಮನು ತಾನು ಆ ಕರ್ಮಗಳನ್ನು ಮಾಡಿದೆನೆಂದು ತನ್ನ ಈ ಅವಿಜ್ಞತೆಯಿಂದ ತಿಳಿಯುವನೆಂದೂ ಹೇಳಲ್ಪಟ್ಟಿರುತ್ತದೆ. ಮತ್ತು **"ಗುಣಾ ಗುಣೇಷು ವರ್ತಂತೇ ಇತಿಮತ್ವಾ ನ ಸಜ್ಜತೇ"** ಸತ್ವರಜಸ್ತಮೋಗುಣಗಳಿಂದ ಯುಕ್ತವಾದ ದೇಹವು ಸತ್ವರಜಸ್ತಮೋಗುಣರೂಪವಾದ ಕಾರ್ಯಗಳಲ್ಲಿ ಪ್ರವರ್ತಿಸುತ್ತದೆ ಎಂದು ತಿಳಿದು ಅವುಗಳಲ್ಲಿ ತಾನು ಸಂಬಂಧವನ್ನು ಇಟ್ಟುಕೊಳ್ಳುವದಿಲ್ಲವು ಇತ್ಯಾದಿ ಬಹು ಪ್ರಮಾಣಗಳಂತು ಆದುದರಿಂದ ಹೀಗೆ ಜೀವಸ್ವರೂಪಕ್ಕೆ ಕರ್ತೃತ್ವವಿಲ್ಲವಾದರಿಂದ ಭಕ್ತ್ಯಾದಿ ಕರ್ಮಗಳು ಅಸಂಭಾವಿತಗಳಾಗಿ ಸ್ವರೂಪ ವಿರುದ್ಧವು ಎಂಬುದು ಪೂರ್ವ ಪಕ್ಷಿಗಳ ತಾತ್ಪರ್ಯವು ಇದನ್ನು ಖಂಡಿಸುತ್ತಾರೆ : **ಪ್ರಪತ್ತ್ಯನುಷ್ಠಾನತ್ತಿಲುಮ್** - ಪ್ರಪತ್ತಿಯನ್ನು ಅನುಷ್ಠಿಸುವದರಲ್ಲೂ ಸಹ, **ಕೈಜ್ಕರ್ಯತ್ತಿಲುಮ್ ಪೋಲೆ**-ಕೈಂಕರ್ಯಮಾಡುವದರಲ್ಲಿ ಹೇಗೋ ಹಾಗೆ, **ಭಕ್ತ್ಯಾದಿಗಳಲ್ಲೂ** ಸಹ, **ಕರ್ತಾ ಶಾಸ್ತ್ರಾರ್ಥವತ್ತ್ವಾತ್** ಎಂದರೆ ಶಾಸ್ತ್ರದಲ್ಲಿ **ಯಜೇತ ಜುಹುಯಾತ್ ಉಪಾಸೀತ** - ಸ್ವರ್ಗಕಾಮನಾದರೆ ಯಜ್ಞವನ್ನು ಮಾಡು, ಮೋಕ್ಷಾರ್ಥಿಯಾದರೆ

---

(೧) ಬ್ರ. ಸೂ. ೨ ೩ ೩೩. (೨) ಬ್ರ. ಸೂ. ೨. ೩ ೪೦.

ತಚ್ಛ್ರುತೇಃ" ಎಜ್ಗ್ರಹಪಡಿಯೇ ಭಗವದಧೀನ ಕರ್ತೃತ್ವ ಮುಂಡಾ ಗೈಯಾಲುಮ್,

ಉಪಾಸನೆಯನ್ನು ಮಾಡು ಎಂಬ ಶಾಸ್ತ್ರಗಳಿಗೆ ಸಾರ್ಥಕ್ಯ ಉಂಟಾಗಬೇಕಾದುದ ರಿಂದ ಆತ್ಮಕರ್ತಾವೆಂದು ಒಪ್ಪತಕ್ಕದ್ದು ಎಂದೂ, **ಪರಾತ್ತು ತಚ್ಛ್ರುತೇಃ** ಎಂದರೆ **ಈ ಮೇಲೆ** ಹೇಳಿದ ಕರ್ತೃತ್ವವು ಭಗವಂತನಿಗೆ ಅಧೀನವಾದುದೆಂದೂ, **ಎಜ್ಗ್ರಹಪಡಿಯೇ**-ಎಂದು ಹೇಳಿರುವಹಾಗೆ ಭಗವದಧೀನವಾದ, **ಕರ್ತೃತ್ವ ಮುಂಡಾಗೈಯಾಲುಮ್** - ಜೀವನಿಗೆ ಕರ್ತೃತ್ವಉಂಟಾಗುವದರಿಂದಲೂ ; **ಪೂರ್ವಪಕ್ಷಿಗೆ** ಏನು ಸಮಾಧಾನವೆಂದರೆ, ಜೀವನಿಗೆ ಸ್ವರೂಪತಃ ಕರ್ತೃತ್ವವೇ ಇಲ್ಲವೆಂಬ ವಾದವೇ ನಿಜವಾದುದಲ್ಲವು; ಆತನಿಗೆ ಪರಾಯತ್ತ ಕರ್ತೃತ್ವ ಉಂಟೆಂದು ಶಾಸ್ತ್ರವು ಹೇಳುತ್ತದೆಂಬುದು ಈ ಎರಡು ಬ್ರಹ್ಮಸೂತ್ರಗಳಿಂದಲೂ ವ್ಯಕ್ತ ವೆಂಬ ಭಾವವು; ಆದರೆ ಇನ್ನೊಂದು ಪೂರ್ವಪಕ್ಷವು ಬರಬಹುದು, ಏನೆಂದರೆ, ಹೀಗೆ ಜೀವನ ಕರ್ತೃತ್ವವು ಪರಮಾತ್ಮಾಧೀನವಾದರೆ, **ಯಜೇತ ಉಪಾಸೀತ** ಇತ್ಯಾದಿ ವಿಧಿಗಳೆಲ್ಲಾ ಪರಮಪುರುಷನಿಗೆ ನ್ಯಾಯವೇ ವಿನಾ ಜೀವಾತ್ಮನಿಗೆ ಹೇಗೆ ಎಂದರೆ **"ಕೃತ ಪ್ರಯತ್ನಾಪೇಕ್ಷಸ್ತು ವಿಹಿತ ಪ್ರತಿಷಿದ್ಧಾ ನ್ಯೈರ್ಥ್ಯಾದಿ ಭ್ಯಃ"** ಎಂಬ ಬ್ರಹ್ಮಸೂತ್ರ (೨. ೩. ೪೧) ಪ್ರಕಾರ ಪ್ರಥಮ ಪ್ರವೃತ್ತಿಯಲ್ಲಿ ಸರ್ವೇಶ್ವರನು ಜೀವನನ್ನು ಸಜ್ಜುಲ್ಪಪ್ರಯತನಗಳಲ್ಲಿ ಸ್ವತಂತ್ರನಾಗಿಬಿಟ್ಟು ಬಿಡುವದರಿಂದ ಕರ್ತೃತ್ವವು ಜೀವಾತ್ಮನಿಗೆ ಕೂಡುತ್ತದೆ. ಆದುದರಿಂದ ಜೀವಾತ್ಮನಿಗೆ ಕರ್ತೃತ್ವವಿಲ್ಲವೆಂಬ ವಾದವು ಅಸಂಗತವು. ಆದರೆ ಗೀತೆಯಲ್ಲಿ ಹೇಳಿರುವ ಪ್ರಮಾಣಗಳಿಗೆಲ್ಲಾ ತಾತ್ಪರ್ಯವೇನೆಂದರೆ, ಈ ಕರ್ಮಗಳೆಲ್ಲಾ ಪೂರ್ವ ಕರ್ಮಾನುಸಾರವಾಗಿ ದೇಹಮೂಲಕವಾಗಿ ತನ್ನ ಕರ್ತೃತ್ವಮೂಲಕ ನಡೆದರೂ ದೇಹವೇ ನಡೆಸುತ್ತದೆ ಎಂಬ ಅನುಸಂಧಾನವಿರಬೇಕೆಂದೂ ಆ ಕರ್ಮಗಳಲ್ಲಿ ತನಗೆ ಸಂಬಂಧ ಉಂಟೆಂದು ಭಾವಿಸಬಾರದೆಂಬ ತಾತ್ಪರ್ಯವು ಶ್ರುತಿಯಲ್ಲೂ ಕೂಡ **"ಏಷಹಿ ದ್ರಷ್ಟಾ ಕರ್ತಾ ಭೋಕ್ತಾ ವಿಜ್ಞಾನಾತ್ಮಾಪುರುಷಃ"** ಆತ್ಮನಿಗೆ ಜ್ಞಾತೃತ್ವ, ಕರ್ತೃತ್ವ, ಭೋಕ್ತೃತ್ವಗಳುಂಟೆಂದು ಹೇಳುತ್ತದೆ, ಆದುದರಿಂದ ಅಸಂಭಾವಿತವಾದುದರಿಂದ ಸ್ವರೂಪವಿರುದ್ಧವೆಂಬ ವಾದವು ಕೂಡುವದಿಲ್ಲವೆಂಬ ತಾತ್ಪರ್ಯವು. ಈ ವಾಕ್ಯಾರಂಭದಲ್ಲಿ **ಪ್ರಹೃತ್ಯನುಷ್ಠಾನತ್ತಿಲುಮ್ ಕೈಂಕರ್ಯಂಪೋಲೆ**-ಭಗವದಧೀನ ಕರ್ತೃತ್ವ ಉಂಟು ಎಂದು ಏಕೆ ಹೇಳಲ್ಪಟ್ಟಿತೆಂದರೆ, ಈ ಪೂರ್ವ ಪಕ್ಷಿಗಳು ಭಗವಚ್ಛಾಗವತ ಕೈಙ್ಕರ್ಯಗಳು ಅವಶ್ಯಕವೆಂದು ಹೇಳುವರು. ಹಾಗಾದರೆ ಆತ್ಮನಿಗೆ ಕೈಙ್ಕರ್ಯಕ್ಕೆ ಕರ್ತೃತ್ವ

ಆತ್ಮಸ್ವರೂಪ ಮತ್ಯಂತ ನಿರ್ವ್ಯಾಪಾರ ಮೆನ್ನುವ್ಪೋದು ಸತ್ವಲಕ್ಷಣಮಾನ ಅರ್ಥಕ್ರಿಯಾಕಾರಿತ್ವ ಮಿಲ್ಲಾನ್ಮೆಯಾಲೇ ತುಚ್ಛತ್ವಂ ಪ್ರಸಜ್ಯಾಕ್ಕೈಯಾಲುಮ್,

---

ವಿದ್ದರೆ ಪ್ರಪತ್ತ್ಯನುಷ್ಠಾನಕ್ಕಾಗಲಿ ಭಕ್ತ್ಯುಪಾಯಾನುಷ್ಠಾನಕ್ಕಾಗಲಿ ಏಕೆ ಕರ್ತೃತ್ವವಿಲ್ಲವೆಂಬ ವಾದವು? ಎಂಬಭಿಪ್ರಾಯವು; ಅದಕ್ಕಾಗಿ ಹಾಗೆ ಪ್ರಯೋಗವು. ಮುಂದೆ ಇನ್ನೊಂದು ದೂಷಣವನ್ನು ಹೇಳುತ್ತಾರೆ.

(೨) **ಆತ್ಮಸ್ವರೂಪವು, ಅತ್ಯಂತ ನಿರ್ವ್ಯಾಪಾರನೆನ್ನುವ್ಪೋದು**-ಅಣುವಾಗಿರುವದರಿಂದ ಸರ್ವವ್ಯಾಪಾರಗಳಿಂದಲೂ ಶೂನ್ಯವಾದುದು ಎಂದು ಹೇಳುವಾಗ, **ಸತ್ವಲಕ್ಷಣಮಾನ** - ವಸ್ತುವಿನ ಸತ್ತೆಗೆ ಲಕ್ಷಣವಾದ, **ಅರ್ಥಕ್ರಿಯಾಕಾರಿತ್ವಂ** - ಪ್ರಯೋಜನರೂಪವಾದ ಒಂದು ವ್ಯಾಪಾರವನ್ನು ಮಾಡೋಣವು, **ಇಲ್ಲಾಮ್ಮೆಯಾಲೇ** ಈ ಆತ್ಮಾವಿಗೆ ಇಲ್ಲವೆಂದು **ಪೂರ್ವಪಕ್ಷಿಯು** ಅಭಿಪ್ರಾಯವಾಗುವದರಿಂದ, **ತುಚ್ಛತ್ವಂ ಪ್ರಸಜ್ಯಾಕ್ಕೈಯಾಲುಮ್**-ಗಗನಾರವಿಂದ ಶಶಶೃಂಗ ಇವುಗಳಹಾಗೆ ಸ್ವರೂಪವೇ ಇಲ್ಲದಹಾಗೆ ಆಗುವದರಿಂದಲೂ; ಇದು **ಎರಡನೆಯ** ದೋಷವು; ಆತ್ಮನು ಅಣುವಾಗಿರುವದರಿಂದ ಯಾವದೊಂದು **ವ್ಯಾಪಾರವು** ಆತನಿಗಿಲ್ಲವೆಂದು ಹೇಳಿಬಿಟ್ಟರೆ, ಆಗ ಆತ್ಮಾವಿಗೆ ಸತ್ತೆಯೇ ಇಲ್ಲವೆಂದು ಹೇಳಬೇಕಾಗುತ್ತದೆ. ಸತ್ತೆಗೆ ಲಕ್ಷಣವೇನೆಂದರೆ, ಅರ್ಥಕ್ರಿಯಾಕಾರಿತ್ವವು. ಪ್ರಯೋಜನರೂಪ ವ್ಯಾಪಾರವು, ಇದು ಆತ್ಮಾವಿಗೂ ಉಂಟು. ಮೇಲಿನ ಶ್ರುತಿವಾಕ್ಯಾನುಸಾರವಾಗಿ ಜ್ಞಾತೃತ್ವವೂ, ಇಚ್ಛಿಸೋಣವೂ, ಪ್ರಯತ್ನವೂ ಇವೆಲ್ಲಾ ಉಂಟು ಕರ್ತೃತ್ವಕ್ಕೆ ಇವುಗಳಿರಬೇಕು. ಇವು ಯಾವುದೂ ಇಲ್ಲವೆಂದರೆ ಗಗನ ಪುಷ್ಪದಹಾಗೂ ಮೊಲನ ಕೊಂಬಿನಹಾಗೂ ಸ್ವರೂಪಶೂನ್ಯವಾದ **ತುಚ್ಛತ್ವವು** ಪ್ರಾಪ್ತವಾಗುತ್ತವೆಂಬ ಭಾವವು ಹೀಗೆ ತುಚ್ಛತ್ವವಾವನನ್ನು ತಾದರೆ ಕಾಲವು ವಿಭುವಾದುದು, ಆಚೇತನವು, ಆದುದರಿಂದ ನಿರ್ವ್ಯಾಪಾರವಾದುದು, ಎಂದು ಹೇಳಿ ಆತ್ಮಕ್ಕೆ ತುಚ್ಛತ್ವವನ್ನು ಹೇಳುತ್ತಿರಾ ಎಂದರೆ, ಆತ್ಮಕ್ಕೆ ಕ್ಷಣ ಪರಿಣಾಮಾವಿರೂಪವ್ಯಾಪಾರವೂ ಉತ್ಪತ್ತಿ ವಿನಾಶರೂಪವ್ಯಾಪಾರವೂ ತನ್ಮೂಲಕ ಉಂಟಾಗುವದರಿಂದ ತುಚ್ಛತ್ವ ಪ್ರಸಜ್ಯಕ್ಕೆ ಕಾರಣವಿಲ್ಲವು ಅರ್ಥಕ್ರಿಯಾಕಾರಿತ್ವವೂ ಇಲ್ಲಿಯೂ ಉಂಟು.

(೩) **ಜ್ಞಾನ ಚಿಕೀರ್ಷಾ ಪ್ರಯತ್ನಾಶ್ರಯತ್ವರೂಪಮಾನ** - ಜ್ಞಾತೃತ್ವ, ಇಚ್ಛಾರೂಪ ಸಜ್ಜಲ್ಪ, ಪ್ರಯತ್ನ ಇವುಗಳಿಗೆ ಆತ್ಮಾ ಆಶ್ರಯವಾಗಿ

ಜ್ಞಾನ ಚಿಕೀರ್ಷಾ ಪ್ರಯತ್ನಾಶ್ರಯತ್ವ ರೂಪವಾನ ಕರ್ತೃತ್ವಮಿಲ್ಲೈ ಯಾಕ್ಕಿ ಆತ್ಮಾವುಕ್ಕು ಸನ್ನಿಧಿ ಮಾತ್ರಮೇ ವ್ಯಾಪಾರವೆನ್ನಿಲ್, ಭೋಕ್ತೃತ್ವಾದಿಗಳು ಮನ್ನಿಕ್ಕೇ ಇವನುಕ್ಕು ಸಂಸಾರಮುಮ್ ಮಿಥ್ಯಾವಾಯ್ ಮೋಕ್ಷೋಪಾಯ ನೈರಪೇಕ್ಷ್ಯಾದಿ ಪ್ರಸಙ್ಗಮ್ ವರುಗೈಯಾಲುಮ್,

---

ರುವದರಿಂದ ಅಂತಹ, **ಕರ್ತೃತ್ವಮಿಲ್ಲೈಯಾಕ್ಕಿ** - ಹೀಗೆ ಆತ್ಮಾವಿಗೆ ಇರುವ ಕರ್ತೃತ್ವವು ಇಲ್ಲವೆಂದು ಹೇಳಿ, **ಆತ್ಮಾವುಕ್ಕು** - ಆತ್ಮಾವಿಗೆ, **ಸನ್ನಿಧಿ ಮಾತ್ರಮೇ** - ಪ್ರಕೃತಿಯು ಹತ್ತಿರವಿರುವದೇ, **ವ್ಯಾಪಾರವೆನ್ನಿಲ್** - ವ್ಯಾಪಾರವು ಎಂದು ಪೂರ್ವಪಕ್ಷಿಗಳು ಭಾವಿಸಿದರೆ **ಭೋಕ್ತೃತ್ವಾದಿಗಳೂ, ಅನ್ನಿಕ್ಕೇ** - ಇಲ್ಲದವುಗಳಾಗಿ, **ಇವನುಕ್ಕು** - ಈ ಚೇತನನಿಗೆ, **ಸಂಸಾರವು ಮಿಥ್ಯೆಯಾಗಿ ಮೋಕ್ಷೋಪಾಯ ನೈರಪೇಕ್ಷ್ಯಾದಿ ಪ್ರಸಙ್ಗಮ್** - ಮೋಕ್ಷೋಪಾಯದ ಅನಾವಶ್ಯಕತೆ ಮೊದಲಾದವುಗಳ ಪ್ರಸಙ್ಗವು, **ವರುಗೈಯಾಲುಮ್** - ಉಂಟಾಗುವದರಿಂದಲೂ; ಇಲ್ಲಿ ಆದಿ ಪದದಿಂದ ನಿರರ್ಥಕವೆಂಬ ಭಾವವೂ ಸೂಚಿಸಲ್ಪಟ್ಟಿತು ಯಾವಾಗ ಸಂಸಾರವೇ ಸುಳ್ಳೋ ಆಗ ಪ್ರಯತ್ನವೂ ನಿರರ್ಥಕವೆಂಬ ಭಾವವೂ ತೋರುತ್ತದೆ. ಇದು ಮೂರನೆಯ ದೂಷಣವು ಆತ್ಮಸ್ವರೂಪದ ಗುಣಗಳು ಜ್ಞಾನ ಚಿಕೀರ್ಷಾಪ್ರಯತ್ನಗಳು, ಇವುಗಳಿಂದಲೇ ಆತ್ಮಾವಿಗೆ ಕರ್ತೃತ್ವವು ಉಪಾಧಿಯಾದ ಶರೀರ ಮೂಲಕವೂ ಇಲ್ಲದೆ, ಸ್ವರೂಪತಃ ಕೂಡ ಉಂಟು, ಈ ಕರ್ತೃತ್ವವು ಮುಕ್ತದೆಶೆಯಲ್ಲಿಯೂ ಉಂಟು. ಮುಕ್ತದೆಶೆಯಲ್ಲಿ ಈ ಆತ್ಮಾವಿಗೆ ದಿವ್ಯಮುಙ್ಗಳ ವಿಗ್ರಹವು ಉಂಟಾದರೆ, ತನ್ಮೂಲಕವಾಗಿಯೂ ಕರ್ತೃತ್ವವುಂಟು. ಆದರೂ ಇವು ಇಷ್ಟವೆಂದೂ, ಪ್ರಕೃತಿಯು ಸನ್ನಿಧಿಯಲ್ಲಿ ನಿರ್ವ್ಯಾಪಾರವಾಗಿ ಸುಮ್ಮನೆ ಇದ್ದಾನೆ ಎಂದೂ, ಪ್ರಕೃತಿಯಾದ ದೇಹವೇ ಸರ್ವವ್ಯಾಪಾರಗಳನ್ನೂ ನಡೆಸುತ್ತವೆ ಎಂದೂ ಸಾಂಖ್ಯನು ಹೇಳುವಹಾಗೆ ವಾದಿಸಿದರೆ, ಆಗ ಆತ್ಮಾವಿಗೆ ಭೋಕ್ತೃತ್ವವೂ ಇಲ್ಲವೆಂದಾಗಿ, ಸಂಸಾರವೆಂಬುದು ಸುಳ್ಳಾಗಿ, ಮೋಕ್ಷಕ್ಕಾಗಿ ಯಾವ ಉಪಾಯವೂ ಬೇಕಿಲ್ಲವೆಂಬದಾಗಿ ಆಗುತ್ತದೆ ಎಂದು ಆ ವಾದವನ್ನು ಖಂಡಿಸುತ್ತಾರೆ.

ಹೀಗೆ ಆತ್ಮಾವಿಗೆ **ಕರ್ತೃತ್ವವು** ಸಂಭಾವಿತವು. ಅದರಿಂದ ಆತ್ಮ ಸ್ವರೂಪಕ್ಕೆ ವಿರುದ್ಧವೆಂದು ತಂದ ಆಕ್ಷೇಪವನ್ನು ಮೂರು ದೂಷಣಗಳಿಂದ ನಿರಸನ ಮಾಡಿರುತ್ತಾರೆ ಹೇಗೆಂದರೆ :—

೧. **ಕರ್ತೃತ್ವವೇ ಆತ್ಮನಿಗೆ ಇಲ್ಲವೆಂದರೆ, ಕೈಂಕರ್ಯಾದಿಗಳಿಗೆ ಮಾತ್ರ**

ಸಾಂಖ್ಯಾದಿಗಳ್ ಶೊಲ್ಲುವಾಪ್ಪೋಲೆ ಸ್ವರೂಪತ್ತಿಲ್ ಕರ್ತೃತ್ವ ಮಿಲ್ಲಾನ್ಮೈಯಾಲೇ ಉಪಾಸನಾದಿಗಳ್ ಸ್ವರೂಪ ವಿರುದ್ಧಮ್ಗಳೆನ್ರು ಶೊಲ್ಲುವು ವೊಣ್ಣಾದು.

ಕರ್ತೃತ್ವವು ಹೇಗೆ? ಶ್ರುತಿಯಲ್ಲಿ ಕರ್ತೃತ್ವ, ಜ್ಞಾತೃತ್ವ, ಭೋಕ್ತೃತ್ವಾದಿಗಳುಂಟೆಂದು ಹೇಳುತ್ತದೆಯಲ್ಲಾ? ಬ್ರಹ್ಮಸೂತ್ರಗಳು ಈಶ್ವರಾಯತ್ತ ಕರ್ತೃತ್ವ ಉಂಟೆಂದು ಹೇಳುತ್ತದೆಯಲ್ಲಾ? ೨. ಆತ್ಮಾವಿಗೆ ಕರ್ತೃತ್ವವಿಲ್ಲವೆಂದರೆ, ಅದು ಸತ್ತಾಯುಕ್ತವಾದುದಲ್ಲವೆಂದು ಹೇಳಿದಂತಾಯಿತು. ಸತ್ತಾಯುಕ್ತ ವಸ್ತುವಿನ ಲಕ್ಷಣವು ಅರ್ಥಕ್ರಿಯಾಕಾರಿತ್ವವು. ಇದೇ ಇಲ್ಲವೆಂದು ಹೇಳಿದಂತಾಗುವದರಿಂದ ಆತ್ಮಾವಿಗೆ ತುಚ್ಛತ್ವವು ಏರ್ಪಟ್ಟೀತು. ೩. ಆತ್ಮಾವಿಗೆ ಕರ್ತೃತ್ವವಿಲ್ಲವು, ಪ್ರಕೃತಿಯ ಹತ್ತಿರವಿರುತ್ತದೆ, ಪ್ರಕೃತಿಯೇ ಕೆಲಸ ಮಾಡುತ್ತದೆ ಎಂದು ಹೇಳಿದಂತಾಯಿತು; ಆಗ ಆತ್ಮಾವಿಗೆ ಭೋಕ್ತೃತ್ವವಿಲ್ಲವೆಂದು ಹೇಳಬೇಕಾಗುತ್ತದೆ. ಈ ಸಂಸಾರವೆಲ್ಲಾ ಏನು ಎಂದರೆ ಮಿಥ್ಯೆ ಎಂದು ಅವಿದ್ಯೆಯು ಹೇಳಿದಂತೆ ಹೇಳಬೇಕಾಗುತ್ತದೆ. ಸಂಸಾರ ಸುಳ್ಳಾದರೆ ಮೋಕ್ಷಕ್ಕಾಗಿ ಏಕೆ ಪ್ರಯತ್ನವು? ಮೋಕ್ಷ ಶಾಸ್ತ್ರವೆಲ್ಲಾ ಆಗ ಬೇಕಾಗಿಲ್ಲವು. ಇಂತಹ ದೂಷಣಗಳುಂಟಾಗುತ್ತವೆ ಎಂಬ ತಾತ್ಪರ್ಯವು.

ಹೀಗೆ ದೂಷಣೆಗಳನ್ನು ಹೇಳಿ, ನಿಗಮನ ರೂಪದಲ್ಲಿ ವಾಕ್ಯ ಪೂರಣ ಮಾಡಿ ಹೇಳುತ್ತಾರೆ. ಹೀಗೆ ದೂಷಣೆಗಳುಂಟಾಗುವದರಿಂದ, **ಸಾಂಖ್ಯಾದಿಗಳ್ ಶೊಲ್ಲುವಾಪ್ಪೋಲೆ** - ಸಾಂಖ್ಯಾದಿಗಳು ಹೇಳುವಹಾಗೆ, ಅವರುಗಳು ಹೇಳುವದೇನೆಂದರೆ ಆತ್ಮಾ ಪ್ರಕೃತಿಯ ಹತ್ತಿರ ಸುಮ್ಮನೆ ಕಲ್ಲಿನ ಹಾಗೆ ನಿರ್ವ್ಯಾಪಾರ ಉಳ್ಳದ್ದಾಗಿರುತ್ತದೆ, ಕಾರ್ಯ ಮಾಡಪದೆಲ್ಲಾ ಪ್ರಕೃತಿಯೇ, ದೇಹವೇ ಎಂಬ ದಾಗಿ, **ಸ್ವರೂಪತ್ತಿಲ್** - ಆತ್ಮನ ಸ್ವರೂಪದಲ್ಲಿ ಕರ್ತೃತ್ವವಿಲ್ಲದಿರುವದರಿಂದ, **ಉಪಾಸನಾದಿಗಳು ಸ್ವರೂಪ** ವಿರುದ್ಧಗಳೆಂದು, **ಶೊಲ್ಲುವುಮ್ ವೊಣ್ಣಾದು**:- ಹೇಳಲು ಸಾಧ್ಯವಿಲ್ಲವು.

ಹೀಗೆ ಆತ್ಮನಿಗೆ ಕರ್ತೃತ್ವವಿರುವದರಿಂದ ಕರ್ತೃತ್ವವಿಲ್ಲವೆಂಬ ಪೂರ್ವ ಪಕ್ಷವನ್ನು ಖಂಡಿಸಿ ಉಪಾಯಾನುಷ್ಠಾನವು ಆತ್ಮಸ್ವರೂಪಕ್ಕೆ ಅಸಂಭಾವಿತವಾಗಿ ವಿರುದ್ಧವಲ್ಲವೆಂದು ಸ್ಥಾಪಿಸಿದರು. ಆದರೆ ಪೂರ್ವ ಪಕ್ಷಿಯು ಭಾರತ ಶಾಂತಿಪರ್ವ ಶ್ಲೋಕವನ್ನು ಉದಾಹರಿಸಿ, ಅಲ್ಲಿ ಆತ್ಮಾ ಏನೊಂದೂ ಪ್ರಯತ್ನ ಮಾಡದಿದ್ದರೂ ಈತನಿಗೇ ಐಶ್ವರ್ಯವು ಪ್ರಾಪ್ತವಾಗಬಹುದೆಂದು ಹೇಳಿದೆಯಲ್ಲಾ ಅದಕ್ಕೆ ಸಮಾಧಾನ ಹೇಗೆ ಎಂದರೆ ಅದನ್ನು ತಿಳಿಸುತ್ತಾರೆ.

(೧) "ಅಚೇಷ್ಟಮಾನ ಮಾಸೀನಮ್ ಶ್ರೀಃ ಕಂಚಿದುಪತಿಷ್ಠತಿ। ಕರ್ಮಾ ಕರ್ಮಾನು ಸೃತ್ಯಾನ್ಯೋ ನಪಾಶ್ಯಮುಧಿಗಚ್ಛತಿ॥" ಎನ್ನುದುವುಮ್, ಶಾಸ್ತ್ರಚೋದಿತೋಪಾಯಜ್ಞಳಿನುಡೈಯ ನೈರರ್ಥಕ್ಯಮಂ ಶೊನ್ನಪಡಿಯುನ್ರು; ಪೂರ್ವಾನುಷ್ಠಿತ ಕರ್ಮವಿಶೇಷಜ್ಞಳಿನುಡೈಯ ಫಲ ವಿಶೇಷಮ್ ಶೊನ್ನಪಡಿಯತ್ತನ್ಮೈ.

(೧) ಅಚೇಷ್ಟಮಾನಂ – ಏನೊಂದೂ ಪ್ರಯತ್ನ ಕ್ರಿಯೆ ಯಾವುದೂ ಇಲ್ಲದಿರುವ, ಆಸೀನಂ – ಸುಮ್ಮನೇ ಕುಳಿತಿರುವವನನ್ನು, ಶ್ರೀಃ – ಸಂಪತ್ತು, ಐಶ್ವರ್ಯವು, ಕಂಚಿತ್ - ಜಾತಿ ಕುಲ ಗುಣ ಯಾವುದೂ ಇಲ್ಲದ ಯಾವನೋ ಒಬ್ಬನನ್ನು, ಉಪತಿಷ್ಠತಿ - ಬಂದು ಎದುರಿಗೆ ನಿಲ್ಲುತ್ತದೆ, ಅಭಿಮುಖವಾಗಿ ಬರುತ್ತದೆಂಬ ತಾತ್ಪರ್ಯವು; ಕರ್ಮಾ - ಕರ್ಮಗಳನ್ನು ಶ್ರದ್ಧೆಯಿಂದ ಶಾಸ್ತ್ರಚೋದಿತ ಮಾರ್ಗದಲ್ಲಿ ಮಾಡುತ್ತಿರುವ, ಅನ್ಯಃ-ಇನ್ನೊಬ್ಬ ಧಾರ್ಮಿಕನು, ಕರ್ಮಾನುಸೃತ್ಯ - ಆತನು ಮಾಡಿದ ಕರ್ಮಗಳಿಗೆ ಅನುಗುಣವಾಗಿ, ಪಾಶ್ಯಂ- ಅನುಭವಿಸುವ ಫಲವನ್ನು ನಾಧಿಗಚ್ಛತಿ - ಹೊಂದುವದಿಲ್ಲವು, ಹಿಂದೆ ಮಾಡಿದ ಸುಕೃತವಿಶೇಷ ಮಹಿಮೆಯಿಂದ ಒಬ್ಬನಿಗೆ ವಿಶೇಷ ಪ್ರಯತ್ನಗಳು ಯಾವುದೂ ಇಲ್ಲದೆ ಪಿತ್ರಾರ್ಜಿತ ಪಿತಾಮಹಾರ್ಜಿತ ಭಾತೃ ಸುಹೃತ್ತುಗಳು ಸಂಪಾದಿಸಿದ ಅಥವಾ ಇನ್ನು ಯಾವುದೋ ಕಾರಣಮೂಲಕ ಸರ್ವೇಶ್ವರ ಸಙ್ಕಲ್ಪರೀತ್ಯಾ ಧನವು ಲಭಿಸಬಹುದು. ಇನ್ನೊಬ್ಬನಿಗೆ ಅಂತಹ ಸುಕೃತವಿಶೇಷ ಸ್ವಾಮಿಸಙ್ಕಲ್ಪಾದಿಗಳಿಲ್ಲ ವಾದುದರಿಂದ ಎಷ್ಟು ಪ್ರಯತ್ನಪಟ್ಟರೂ ತನ್ನಿಷ್ಟವು ಲಭಿಸದೆ ಹೋಗುತ್ತದೆ ಎಂಬ ತಾತ್ಪರ್ಯವು; ಈಶ್ಲೋಕಕ್ಕೆ ಪೂರ್ವಪಕ್ಷಿಗಳು ಅಚೇಷ್ಟಮಾನ ಮಾಸೀನಂ ಎಂದಿರುವದರಿಂದ ನಿರ್ವ್ಯಾಪಾರತ್ವವು ಇಲ್ಲಿ ಹೇಳಲಟ್ಟಿತು; ಹಾಗೆಯೇ ಭಕ್ತ್ಯಾದಿ ಉಪಾಯಾನುಷ್ಠಾನಗಳಿಲ್ಲದೇ ಇದ್ದರೂ ಸರ್ವೇಶ್ವರನು ನಮ್ಮ ಕೋರಿಕೆಯನ್ನು ಸಫಲಮಾಡುವನು ಎಂದು ಅಭಿಪ್ರಾಯಪಡಬಹುದೆಂದು ಭಾವಿಸಿ, ಇದು ನಿರ್ವ್ಯಾಪಾರವನ್ನು ಬೋಧಿಸಲು ಹೊರಟ ಶ್ಲೋಕವಲ್ಲವು, ಹಿಂದೆ ಮಾಡಿದ ಸುಕೃತ ವಿಶೇಷದ ಫಲನಿರ್ದೇಶಕ್ಕಾಗಿ ಹೇಳಿದ ಶ್ಲೋಕವೆಂದು ಸಮಾಧಾನವನ್ನು ಹೇಳ್ತಾರೆ. ಎನ್ನದುವುಮ್ - ಎಂಬ ಶ್ಲೋಕಾಭಿಪ್ರಾಯವು, ಶಾಸ್ತ್ರಚೋದಿತೋಪಾಯಜ್ಞಳಿನುಡೈಯ - ಶಾಸ್ತ್ರದಲ್ಲಿ ವಿಧಿಸಿದ ಉಪಾಯಗಳ, ನೈರರ್ಥಕ್ಯಮ್ - ಅನುಪಯೋಗವನ್ನು ಶೊನ್ನಪಡಿಯನ್ರು - ಹೇಳಿದಹಾಗಲ್ಲವು;

(೧) ಭಾರತ. ಶಾಂತಿ ೩೩೯-೧೩

(೬) ಅನರ್ಥಾವಹತ್ವರೂಪೇಣ ಸ್ವರೂಪ ವಿರುದ್ಧಮಿತಿವಾದ ನಿರಾಸಃ

ಮೋಕ್ಷಪ್ರತಿಕೂಲಜ್ಞಾನ ರಾಗಾದ್ಯುಪಾಧಿಗಳಿಂದಾಗ ವನ್ನ ಕಾಮ್ಯ ನಿಷಿದ್ಧಜ್ಞಳ್ ಪೋಲೆ ಬಂಧಕಜ್ಞಳಲ್ಲಾನ್ಮೈಯಾಲುಂ, ಮೋಕ್ಷಾರ್ಥೀ ತನಕ್ಕೇ ವಿಧಿಕ್ಕಪ್ಪಯಾಲುಂ, ಉಪಾಸನಾದಿಗಳುಕ್ಕು ಶಾಸ್ತ್ರ ಮುಖತ್ತಾಲೆ ಅನರ್ಥಾವಹತ್ವ ರೂಪನಾನ ಸ್ವರೂಪ ವಿರೋಧಮ್ ಶೊಲ್ಲವೊಣ್ಣಾದು.

ಹಾಗಾದರೆ ಅದರ ಅಭಿಪ್ರಾಯವಾದರೋ, **ಪೂರ್ವಾನುಷ್ಠಿತ** - ಹಿಂದಿನ ಜನ್ಮಗಳಲ್ಲಿ ಮಾಡಿದ, **ಕರ್ಮವಿಶೇಷಜ್ಞಳುಡೈಯ** - ಸುಕೃತ ವಿಶೇಷಗಳು **ಈಗ** ಪ್ರಾರಬ್ಧ ಕರ್ಮರೂಪದಲ್ಲಿರುವುದರ, **ಫಲವಿಶೇಷಮ್** - ಫಲವಿಶೇಷವನ್ನು, **ಶೊನ್ನಪಡಿಯತ್ತನ್ಮೈ** – ಹೇಳಿದುದು, ಇಷ್ಟುಮಾತ್ರವೇ ಎಂಬ ಭಾವವು. ಒಂದು ಫಲಕ್ಕಾಗಿ ಶಾಸ್ತ್ರವಿಧ್ಯನುಸಾರವಾಗಿ ಅನುಷ್ಠಿಸದೆ ನಿರ್ವ್ಯಾಪಾರತ್ವ ವಿದ್ದರೂ ಫಲವು ದೈವ ಸಹಾಯದಿಂದ ಸಿದ್ಧಿಸುತ್ತದೆ ಎಂಬರ್ಥವಲ್ಲವು. **ಪೂರ್ವಾರ್ಜಿತ** ಸುಕೃತ ದುಷ್ಕೃತ ತಾರತಮ್ಯಾನುಸಾರವಾಗಿ ಒಬ್ಬನಿಗೆ ತುಂಬಾ ಶ್ರಮವಿಲ್ಲದೇನೆ ಲಭಿಸುತ್ತದೆ; ಇನ್ನೊಬ್ಬನಿಗೆ ಎಷ್ಟು ಶ್ರಮಪಟ್ಟರೂ ಲಭಿಸುವದಿಲ್ಲವೆಂಬುದು ತಾತ್ಪರ್ಯವು

(೭) ಅನರ್ಥಾವಹನಾಗಿ ಸ್ವರೂಪವಿರುದ್ಧನೆಂಬ ವಾದದ ನಿರಸನವು.

ಮುಂದೆ ಮೂರನೆಯ ವಿಕಲ್ಪವನ್ನು ಖಂಡಿಸುತ್ತಾರೆ. ಉಪಾಸನಾದಿಗಳು ಅನರ್ಥವನ್ನುಂಟು ಮಾಡುವುವು; ಹೇಗೆಂದರೆ ಈ ಉಪಾಯಗಳ ಮೂಲಕ ಮೋಕ್ಷಪ್ರಾಪ್ತಿಯನ್ನು ಸಾಧಿಸಿಕೊಳ್ಳುವೆನು ಎಂಬ ಅಹಂಕಾರವನ್ನುಂಟುಮಾಡಿ ಈ ಉಪಾಸನಾದಿಗಳು ಅನರ್ಥವನ್ನುಂಟುಮಾಡುವುವು; ಆದುದರಿಂದ ಸ್ವರೂಪ ವಿರುದ್ಧವೆಂದು ಅವರುಗಳಭಿಪ್ರಾಯವು. ಮೂರು ಕಾರಣಗಳನ್ನು ಹೇಳಿ ಈ ಅಭಿಪ್ರಾಯವನ್ನು ಖಂಡಿಸುತ್ತಾರೆ

(೧) **ಮೋಕ್ಷಪ್ರತಿಕೂಲಜ್ಞಾನ** ಮೋಕ್ಷವಿರುದ್ಧವಾದ, **ರಾಗಾದ್ಯುಪಾಧಿಗಳಾಲೇ ವನ್ನ ಕಾಮ್ಯ ನಿಷಿದ್ಧಜ್ಞಳ್ ಪೋಲೆ**-ಕಾಮನೆಯೇ ಮೊದಲಾದ ಉಪಾಧಿಗಳ ಮೂಲಕವಾಗಿ ಆಚರಿಸುವ ಕಾಮ್ಯಕರ್ಮಗಳ ಮತ್ತು ನಿಷಿದ್ಧ ಕರ್ಮಗಳಹಾಗೆ, **ಬಂಧಕಜ್ಞಳಲ್ಲಾನ್ಮೈಯಾಲುಂ** - ಪುನಃಪುನಃ ಸಂಸಾರ ಬಂಧವನ್ನುಂಟುಮಾಡತಕ್ಕವು ಈ ಭಕ್ತ್ಯಾದಿ ಉಪಾಯಗಳಲ್ಲವಾದುದರಿಂದಲೂ,

(೨) **ಮೋಕ್ಷಾರ್ಥಿತನಕ್ಕೇ** - ಮೋಕ್ಷಾರ್ಥಿಗೇನೇ, **ವಿಧಿಕ್ಕೈಯಾಲುಮ್**- ಈ ಉಪಾಸನಾದಿ ಉಪಾಯಗಳನ್ನನುಷ್ಠಿಸಬೇಕೆಂದು **ಶಾಸ್ತ್ರವು** ವಿಧಿಸಿರುವದರಿಂದಲೂ, (೩) **ಉಪಾಸನಾದಿಗಳಿಗೆ**, **ಶಾಸ್ತ್ರಮುಖತ್ತಾಲೆ**-ಶಾಸ್ತ್ರಮೂಲಕವಾಗಿ, **ಅನರ್ಥಾವಹತ್ವರೂಪಮಾನ**-ಅನರ್ಥವನ್ನುಂಟುಮಾಡುತ್ತವೆ ಎಂದು ಕಂಠೋಕ್ತ ಪ್ರಮಾಣವಿಲ್ಲದುದರಿಂದ, ಅವು ಅನರ್ಥವನ್ನುಂಟುಮಾಡುವ ಸ್ವರೂಪ ವಿರೋಧವುಳ್ಳವು ಎಂಬ ದೋಷವನ್ನು, **ಶೊಲ್ಲವ್ವೊಣ್ಣಾದು** – ಹೇಳಲು ಸಾಧ್ಯವಿಲ್ಲವು. ಸ್ವಾಮಿಪಿಳ್ಳೈ **ಲೋಕಾಚಾರ್ಯರವರು** ಈ **ಉಪಾಸನಾದಿಗಳು ಜ್ಞಾನಿ**ಗಳಿಗೆ "ಅಪಾಯ" ವೆಂದೂ, "ಭಯಾವಹ"ವೆಂದೂ, "ಶೋಕ ಜನಕ" ವೆಂದೂ, "ಅಹಂಕಾರ ವಿಶ್ರ" ವೆಂದೂ ಹೀಗೆ ಅನರ್ಥಗಳನ್ನುಂಟುಮಾಡುವವೆಂದು ಹೇಳಿದ್ದರು. ಅಂತಹ ಅನರ್ಥಗಳನ್ನೇನೂ ಈ ಉಪಾಯಗಳು ಉಂಟುಮಾಡಲಾರವೆಂದು ಹೇಳುತ್ತಾರೆ ಏಕೆಂದರೆ (೧) ಐಹಿಕಾಭಿಲಾಷೆಗೋಸ್ಕರ ಮಾಡುವ ಕಾಮ್ಯ ನಿಷಿದ್ಧ ಕರ್ಮಗಳಿಗಾಗಿ ಇವು ಬಂಧಕಗಳಲ್ಲವು; ಬಂಧಕಗಳಾವರಲ್ಲವೇ ಅಪಾಯವೆಂದೂ ಭಯಾವಹವೆಂದೂ ಶೋಕ ಜನಕವೆಂದೂ ಅಹಂಕಾರ ವಿಶ್ರವೆಂದೂ ಹೇಳಬಹುದು. ಹಾಗೆ ಬಂಧಕಗಳಲ್ಲವಲ್ಲಾ ಎಂಬ ಭಾವವು. (೨) ಇವುಗಳನ್ನು ಮೋಕ್ಷಾರ್ಥಿಯು ಉಪಾಸಿಸತಕ್ಕದ್ದೆಂದು **ತಜ್ಜಲಾನಿತಿ ಶಾಂತ ಮುಪಾಸೀತ** (ಛಾಂ ೩. ೧೪. ೧) "ಬ್ರಹ್ಮವಿತ್ ಬ್ರಹ್ಮೈವ ಭವತಿ"( ) "ಬ್ರಹ್ಮವಿದಾಪ್ನೋತಿ ಪರಂ" (ತೈ ೩ ೧.೪)"ತಮೇವಂ ವಿದ್ವಾ೯ ಅಮೃತ ಇಹ ಭವತಿ" (ಪುರುಷಸೂಕ್ತ) "ತಂ ವಿದ್ಯಾ ಚ್ಛುಕ್ಲ ಮುತ್ಯಂ" (ಕಠ. ೨ ೬ ೧೨) "ಯ ಏವಂ ವಿದು ರನ್ಯತಾಸ್ತೇ ಭವಂತಿ" (ತೈ ೩೧) "ತದಾ ವಿದ್ವಾ೯ ಪುಣ್ಯಪಾಪೇ ವಿಧೂಯನಿರಂಜನಃ ಪರಮಂ ಸಾಮ್ಯ ಮುಪೈತಿ" (ಮುಂ.೩ ೧ ೩.) ಇಂತಹ ಅನೇಕ ಶ್ರುತಿಗಳಲ್ಲೆಲ್ಲಾ ಹೇಳಿರುವದರಿಂದಲೂ, ಉಪಾಸನವು ಉಪಾದೇಯವು ಹಾಗೆಯೇ ಗೀತೆಯಲ್ಲೂ "**ನಮಸ್ಯಂತ್ಶ್ಚ ಮಾಂ ಭಕ್ತ್ಯಾ ನಿತ್ಯಯುಕ್ತಾ ಉಪಾಸತೇ**" (ಗೀ ೯. ೧೪) "**ಅನನ್ಯಾಶ್ಚಿಂತ್ಯಯಂತೋ ಮಾಂ ಯೇಜನಾಃ ಪರ್ಯುಪಾಸತೇ। ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ**" (ಗೀ. ೯ ೨೨) "**ಯೇಮಾಂ ನಿತ್ಯ ಯುಕ್ತಾ ಉಪಾಸತೇ ತೇ ಪ್ರಾಪ್ನುವಂತಿ ಮಾಮೇವ**" (ಗೀ. ೧೨. ೨, ೪) **ಯೇಧ್ಯಾಯಂತ ಉಪಾಸತೇ ತೇಷಾಮಹಂ ಸಮುದ್ಧರ್ತಾ ಮೃತ್ಯು ಸಂಸಾರ ಸಾಗರಾತ್,**" (ಗೀ. ೧೨ ೭) ಹೀಗೆ ಅನೇಕ ಪ್ರಮಾಣಗಳಿರುವದರಿಂದ, ಉಪಾಸನಾದಿಗಳು ಅಪಾಯವೂ, ಅನರ್ಥಾವಹವೂ ಎಂದು ಹೇಳುವದು ಹೇಗೆ ಸಾಧ್ಯವೋ ತಿಳಿಯದು.

ಆಗ್ನೇಯಾಲ್ ಆತ್ಮಸ್ವರೂಪತ್ತೈ ಪ್ಪತ್ರ ಉಪಾಸನಾದಿಗಳುಕ್ಕು ನಾಶಕತ್ವ ಸಂಭಾವಿತತ್ವ ನಥರ್ಾವಹತ್ವಜ್ಞಿಳಿಲ್ಲಾನ್ಮೈಯಾಲೇ ಯೊರುಪಡಿಯಾಲುಮ್ ಸ್ವರೂಪ ವಿರೋಧ ಪ್ರಸಜ್ಞಿಮಿಲ್ಲೈ.

---

(೩) ಇದು ಅನರ್ಥಾವಹವೆಂದು ಶಾಸ್ತ್ರಗಳಲ್ಲಿ ಎಲ್ಲೂ ಹೇಳಿಲ್ಲವು ಆದರೆ ಹೇಳಿರುವದು **"ನಾನ್ಯಃಪಂಥಾ ವಿದ್ಯತೇ ಅಯನಾಯ"** ಇಂತಹ ಉಪಾಯಾನುಷ್ಠಾನವಿಲ್ಲದೆ ಪ್ರಾಪ್ಯನನ್ನು ಹೊಂದಲು ಬೇರೆ ಮಾರ್ಗವೇ ಇಲ್ಲವು. ಇದನ್ನೆಲ್ಲಾ ಮನಸ್ಸಿನಲ್ಲಿಟ್ಟೇ ಹಿಂದೆ **"ಪ್ರಪನ್ನಾದನ್ಯೇಷಾಂ ನದಿಶತಿ ಮುಕುಂದೋ ನಿಜಪದಂ"** ಎಂದು ನಮ್ಮವಿ ದೇಶಿಕರವರು ಉಪಾಯಾನುಷ್ಠಾನವಾಡದವರಿಗೆ ಮುಕ್ತಿಯೇ ಇಲ್ಲವೆಂದು ಹಿಂದೆಯೇ ಉಪದೇಶಿಸಿರುತ್ತಾರೆ.

ಮುಂದಿನ ವಾಕ್ಯದಿಂದ ಮೇಲೆ ಉಪಪಾದಿಸಿದುದನ್ನೆಲ್ಲಾ ಸಜ್ಞಿಹಿಸಿ **ನಿಗಮನಮಾಡಿ, ಆಗ್ನೇಯಾಲ್ ಆತ್ಮಸ್ವರೂಪತ್ತೈ** ಎಂಬ ವಾಕ್ಯಮೂಲಕ ಹೇಳುತ್ತಾರೆ **ಆಗ್ನೇಯಾಲ್** - ಆಕಾರಣದಿಂದ, ಯಾವಕಾರಣದಿಂದೆಂಬುದನ್ನು ತಾವೇ ಮುಂದೆ ವ್ಯಕ್ತಪಡಿಸುತ್ತಾರೆ; ಉಪಾಸನಾದಿಗಳಿಗೆ, **ಆತ್ಮಸ್ವರೂಪತ್ತೈ ಪತ್ತ** - ಜೀವಾತ್ಮ ಸ್ವರೂಪವನ್ನು ಕರಿತು, **ನಾಶಕತ್ವವೇನು, ಅಸಂಭಾವಿತತ್ವವೇನು, ಅನರ್ಥಾವಹತ್ವವೇನು,** ಇತರರು ಹೇಳುವ ಈ ಮೂರು ದೋಷಗಳು, **ಇಲ್ಲಾನ್ಮೈಯಾಲೇ** - ಇಲ್ಲವಾಮುದರಿಂದ, **ಒರುಪಡಿಯಾಲುಮ್** - ಯಾವ ಕಾರಣದಿಂದಲೂ, **ಸ್ವರೂಪ ವಿರೋಧ ಪ್ರಸಜ್ಞಿಮಿಲ್ಲೈ** - ಆತ್ಮಸ್ವರೂಪಕ್ಕೆ ವಿರೋಧವಾದುವು ಉಪಾಸನಾದಿಗಳು ಎಂಬ ವಾದಕ್ಕೆ ಅವಕಾಶವೇ ಇಲ್ಲವು.

ಭಕ್ತ್ಯಾದಿಗಳು ವರ್ಣಾಶ್ರಮ ನಿಬಂಧನೆಯುಳ್ಳವಾದುದರಿಂದ ಅಹಂಕಾರ ಗರ್ಭನೆಂಬ ವಾದದ ನಿರಸನವು.

ಮೊದಲು ಪೂರ್ವ ಪಕ್ಷವನ್ನುಪಪಾದಿಸಿ, ಅದನ್ನು ಖಂಡಿಸುತ್ತಾರೆ **ಆನಾಲುಮ್** - ಒಂದುವೇಳೆ ನಾಶಕತ್ವ, ಅಸಂಭಾವಿತತ್ವ, ಅನರ್ಥಾವಹತ್ವ ದೋಷಗಳಿಂದ ಆತ್ಮಸ್ವರೂಪಕ್ಕೆ ವಿರುದ್ಧವಲ್ಲವೆಂದು ಈಗ ಉಪಪಾದಿಸಿದುದನ್ನು ಒಪ್ಪಿದರೂ ಕೂಡ, ಇನ್ನೊಂದು ಪೂರ್ವಪಕ್ಷವು **ತಪ್ಪಿದ್ದಲ್ಲವೆಂಬುದು** ಪೂರ್ವಪಕ್ಷಿಯ ಅಭಿಪ್ರಾಯವಾಗಿ, **ಆನಾಲುಮ್** ಎಂದು ಅಧ್ಯಾಂಗೀಕಾರದಿಂದ ಹೇಳುವ ವಾಕ್ಯಾಗಿರುತ್ತದೆ; **ಆತ್ಮಾ** - ಈ ಜೀವಾತ್ಮನು, **ದೇಹಾದಿವಿಲಕ್ಷಣ ನಾಗೈಯಾಲೇ** - ದೇಹನೇ ಮೊದಲಾದವುಗಳಿಂತಲೂ ವಿಲಕ್ಷಣನಾದುದರಿಂದ, **ಇಲ್ಲಿ**

(೩) ಭಕ್ತ್ಯಾದೇಃ ವರ್ಣಾಶ್ರಮ ನಿಬಂಧನತ್ವಾದಹಂಕಾರ ಮಿಶ್ರತ್ವ ಮಿತಿವಾದ ನಿರಾಸಃ

ಆನಾಲುಮ್ ಆತ್ಮಾ ದೇಹಾದಿವಿಲಕ್ಷಣನಾಗೈಯಾಲೇ ಸ್ವರೂಪತ್ತಿಲ್ ವರ್ಣಾಶ್ರಮಾದಿಗಳಿಲ್ಲೈಯೆನ್ರು ತೆಳಿನ್ದವನುಕ್ಕು "ಬ್ರಾಹ್ಮಣೋಹಂ, ಕ್ಷತ್ರಿಯೋಹಂ" ಎನ್ಬಾರ್ಪೋಲೆ ವರುಮ್ ಅಭಿಮಾನಜ್ಞಳಿಡಿಯಾಗ ವರ್ಣಾಶ್ರಮಾದಿ ಧರ್ಮಜ್ಞಳುಮ್ ಅವತ್ತೋಡೆ ತುನಕ್ಕ್ಯಾನ ಉಪಾಯಾನ್ತರಜ್ಞಳುಮ್ ಅನುಷ್ಠೇಯಜ್ಞಳಲ್ಲಾಮೈಯಾಲೇ ಇವ್ವರ್ಣಾಶ್ರಮಾದಿ ನಿಬಂಧನಜ್ಞಾನ ಧರ್ಮಜ್ಞಳ್ ಸ್ವರೂಪವಿರುದ್ಧಜ್ಞಳೆನ್ಗ್ಗಿಕ್ಕು ಕುರೈ ಯಿನ್ನೆನ್ನಿಲ್, ಇದುವುಮ್ ಅನುಪಪನ್ನಮ್ ಎಜ್ಞನೇ ಎನ್ನಿಲ್,

---

ಆವಿಷಯದಲ್ಲಿ "ದೇಹೇನ್ದ್ರಿಯಮನಃಪ್ರಾಣಧೀಭ್ಯೋಽನ್ಯೋಽನನ್ಯಸಾಧನಃ" ಎಂಬ ಶ್ರೀ ಯಾಮುನಾಚಾರ್ಯರ ಶ್ರೀಸೂಕ್ತಿಯನ್ನನುಸರಿಸಿ, ಇಂದ್ರಿಯ, ಮನಸ್ಸು, ಪ್ರಾಣ, ಬುದ್ಧಿ, ಇವುಗಳಿಗಿಂತಲೂ ಆತ್ಮನಿಲಕ್ಷಣನು ಎಂಬ ಭಾವವು. ಸ್ವರೂಪತ್ತಿಲ್ - ಆತ್ಮನ ಸ್ವರೂಪದಲ್ಲಿ ಎಂದರೆ ಆ ಮತತ್ವಾದಿಗಳಲ್ಲಿ, ವರ್ಣಾಶ್ರಮಾದಿಗಳಿಲ್ಲೈಯೆನ್ರು - ವರ್ಣಾಶ್ರಮಾದಿ ಭೆದಗಳಲ್ಲ ಎಂದು, ತೆಳಿನ್ದವನುಕ್ಕು - ಜ್ಞಾನವನ್ನು ಹೊಂದಿದವನಿಗೆ, "ಬ್ರಾಹ್ಮಣೋಹಂ ಕ್ಷತ್ರಿಯೋಹಂ"- ನಾನು ಬ್ರಾಹ್ಮಣನು, ನಾನು ಕ್ಷತ್ರಿಯನು, ಎನ್ಬಾರ್ಪೋಲೇ ಪರುಮ್ - ಎಂದು ಹೇಳುವಹಾಗೆ ಉಂಟಾಗುವ, ಅಭಿಮಾನಜ್ಞಳಿಡಿಯಾಗ-ಅಹಂಭಾವದಮೂಲಕವಾಗಿ, ವರ್ಣಾಶ್ರಮಾದಿ ಧರ್ಮಗಳೂ, ಅವತ್ತೋಡೆಪಿನಕ್ಕುಂಡಾನ - ಅವುಗಳೊಂದಿಗೆ ಸಂಬಂಧಿಸಿಕೊಂಡಿರುವ, ಉಪಾಯಾಂತರಜ್ಞಳುಮ್ - ಭಕ್ತ್ಯಾದಿ ಉಪಾಸನಗಳೂ ಕೂಡ, ಅನುಷ್ಠೇಯಜ್ಞಳಲ್ಲಾಮೈಯಾಲೇ - ಅನುಷ್ಠಿಸತಕ್ಕವುಗಳಲ್ಲವಾದುದರಿಂದ, ಇವ್ವರ್ಣಾಶ್ರಮಾದಿ ನಿಬಂಧನಜ್ಞಾನ ಧರ್ಮಜ್ಞಳ್ - ಈ ವರ್ಣಾಶ್ರಮವೇ ಮೊದಲಾದವುಗಳನ್ನು ವಿಧಿಸುವ ಧರ್ಮಗಳು, ಸ್ವರೂಪವಿರುದ್ಧಜ್ಞಳ್ - ಆತ್ಮಸ್ವರೂಪಕ್ಕೆ ವಿರುದ್ಧವಾದವು, ಏನ್ಗ್ಗಿಕ್ಕುಕ್ಕುರೈ ಯಿನ್ನೆನ್ನಿಲ್ - ಎಂದು ಹೇಳಲು ಏನೂ ಕಮ್ಮಿ ಯಿಲ್ಲವು, ಎಂದರೆ ಧಾರಾಳವಾಗಿ ಹೇಳಬಹುದು ಎಂದು ಆಕ್ಷೇಪ ತುದರೆ, ಇದುವುಮ್ ಅನುಪಪನ್ನಮ್ - ಇದೂ ಕೂಡ ಸಮುಂಜಸವಲ್ಲವು ಏತಕ್ಕೆಂದರೆ ಮುಂದಿನ ವಾಕ್ಯದಿಂದ ತಿಳಿಸುತ್ತಾರೆ ಆಕ್ಷೇಪವೇನೆಂಗರೆ ಈ ಆತ್ಮನು ದೇಹ, ಇಂದ್ರಿಯ,

ಸ್ವರೂಪತ್ತಿಲ್ ಬ್ರಾಹ್ಮಣತ್ವಾದಿಗಳಿಲ್ಲೈ ಯೆನ್ ತೆಳಿನ್ವಾನೇ ಯಾಗಿ ಲುಮ್ ಕರ್ಮನಿಶೇಷಜ್ಞಳಡಿಯಾಗ ಬ್ರಾಹ್ಮಣತ್ವಾದಿ ವಿಶಿಷ್ಟವಾನ ಶರೀರತ್ತೋಡೆ ಸಂಬದ್ಧ ನಾಯಿರುಕ್ಕೈಯಾಲೇ ಅಶರೀರ ಸಂಬಂಧ ಮಡಿಯಾಗ ವರುಗಿರ ಕ್ಷುತ್ಪಿಪಾಸಾದಿಗಳುಕ್ಕು ಪರಿಹಾರಮ್ ಪಣ್ಣು

ವನಸ್ಸು, ಪ್ರಾಣ, ಬುದ್ಧಿಗಳಿಗಿಂತ ವಿಲಕ್ಷಣನು. ಅಣುಸ್ವರೂಪನು ಮತ್ತು ಜ್ಞಾನಸ್ವರೂಪನು. ವರ್ಣಾಶ್ರಮ ಧರ್ಮಗಳೆಲ್ಲಾ ದೇಹಕ್ಕೆ ನೇರಿದವೇ ವಿನಾ ಆತ್ಮನಿಗಲ್ಲವು. ಈಗ ಬ್ರಾಹ್ಮಣ ಯೋನಿಯಲ್ಲಿ ಜನಿಸಿದ್ದರೆ ಬ್ರಾಹ್ಮಣ ವರ್ಣಾಶ್ರಮಕ್ಕೆ ಅಧಿಕಾರಿಯು. ಈ ದೇಹವು ನಾಶವಾಗಿಹೋಗಿ ಶೂದ್ರಜನ್ಮವು ಪ್ರಾಪ್ತವಾದರೆ, ಆಗ ಶೂದ್ರ ಧರ್ಮಗಳಿಗೆ ಈತನು ಅಧಿಕಾರಿಯಾಗುತ್ತಾನೆ ಪಶು ವೃಕ್ಷಗಳಾಗಿ ಹುಟ್ಟಿದರೆ ಆಗ ವರ್ಣಾಶ್ರಮ ಧರ್ಮಗಳಿಗೆ ಅಧಿಕಾರಿಯೇ ಆಗುವ ದಿಲ್ಲವು. ಆದುದರಿಂದ ವರ್ಣಾಶ್ರಮಧರ್ಮಗಳು ಆತ್ಮನ ಸ್ವರೂಪಕ್ಕೆ ಸಂಬಂಧಿಸಿದಲ್ಲವು. ದೇಹಕ್ಕೆ ಸಂಬಂಧಿಸಿವೆ. ನಾನು ಬ್ರಾಹ್ಮಣ, ನಾನು ಕ್ಷತ್ರಿಯ ನೆಂದು ಹೇಳಿಕೊಳ್ಳುವದರಿಂದ ಅಹಂಕಾರವು ಉತ್ಪನ್ನವಾಗಿರುವದು ವ್ಯಕ್ತವು ಇಂತಹ ಬ್ರಾಹ್ಮಣ ಕ್ಷತ್ರಿಯ ವೈಶ್ಯರು ಮಾತ್ರವೇ ಅನುಷ್ಠಿಸುವ ಉಪಾಯ ವಾಗಿರುವದರಿಂದ ಉಪಾಸನವೂ ಕೂಡ ಅಹಂಕಾರ ಗರ್ಭಿತವು. ಆದುದರಿಂದ ಬ್ರಾಹ್ಮಣಾದಿಗಳುಮಾತ್ರವೇ ಅನುಷ್ಠಿಸುವ ವರ್ಣಾಶ್ರಮ ಕರ್ಮಗಳು, ಉಪಾ ಸನಾದಿ ಉಪಾಯಗಳೂ ಸಹ ಅನುಪಾದೇಯಗಳು. ಇದೀಗ **ಪೂರ್ವಪಕ್ಷವು ಈ ಪೂರ್ವಪಕ್ಷವೂ ಅನುವಪನ್ನವು, ಅಸಮಂಜಸವಾದುದು, ಶಾಸ್ತ್ರ ವಿರುದ್ಧವಲ್ಲದ ಪೂರ್ವ ಪಕ್ಷವೆಂಬ** ತಾತ್ಪರ್ಯವು **ಎಜ್ಞನೇ ಯೆನ್ನಿಲ್** - ಹೇಗೆ ಎಂದರೆ, **ಸ್ವರೂಪತ್ತಿಲ್ ಬ್ರಾಹ್ಮಣತ್ವಾದಿಗಳಿಲ್ಲೈ ಯೆನ್ವು ತೆಳಿನ್ವಾನೇ ಯಾಗಿಲುಮ್** - ಆತ್ಮಸ್ವರೂಪದಲ್ಲಿ ಬ್ರಾಹ್ಮಣತ್ವಾದಿಗಳಿಲ್ಲವೆಂದು ತಿಳಿದಿ ದ್ದರೂ ಕೂಡ, **ಕರ್ಮನಿಶೇಷಜ್ಞಳಡಿಯಾಗ** - ಪ್ರಾರಬ್ಧ ಕರ್ಮದ ಮೂಲಕವಾಗಿ, **ಬ್ರಾಹ್ಮಣತ್ವಾದಿ ವಿಶಿಷ್ಟವಾನ ಶರೀರತ್ತೋಡೆ ಸಂಬದ್ಧನಾಯಿರುಕ್ಕೈಯಾಲೇ** - ಬ್ರಾಹ್ಮಣತ್ವಾದಿಗಳೊಂದಿಗೆ ನೇರಿದ ಶರೀರದಿಂದ ಬದ್ಧನಾಗಿರುವದರಿಂದ ಎಂದರೆ ಬ್ರಾಹ್ಮಣ ಕ್ಷತ್ರಿಯಾದಿ ಯೋನಿಯಲ್ಲಿ ಜನಿಸಿರುವದರಿಂದ ಎಂಬ ಭಾವವು **ಅಶರೀರ ಮಡಿಯಾಗ** - ಆ ಪ್ರಾಪ್ತವಾಗಿರುವ ಶರೀರ ಮೂಲಕವಾಗಿ, **ವರುಗಿರ** - ಉಂಟಾಗುವ, **ಕ್ಷುತ್ಪಿಪಾಸಾದಿಗಳುಕ್ಕು** - ಹಸಿವು, ಬಾಯಾರಿಕೆ, ಆದಿಶಬ್ದದಿಂದ ಉಚ್ಛ್ವಾಸ, ನಿಶ್ವಾಸ, ಸ್ನಾನ, ವಸ್ತ್ರ

ಗಿರ ಕಣಕ್ಕಿಲೇ, ಅಶ್ಯರೀರವಮ್ ವಿಡುವಳವು ಮವ್ವೋ ವರ್ಣಾಶ್ರಮಾ ದಿಗಳುಕ್ಕುಮ್ ತರ್ಜಶಕ್ತಿಕ್ಕುಮ್ ಅನುರೂಪವಾಗ ಅನಿಷ್ಟ ನಿವೃ ತ್ತೀಷ್ಟಪ್ರಾಪ್ತಿಗಳೈಪ್ಪತ್ತ ಶಾಸ್ತ್ರಙ್ಗಳ್ ವಿಧಿತ್ತ ಧರ್ಮಙ್ಗಳೈ ವಿಡ ವೊ

ಧಾರಣಾದಿಗಳು ಹೇಳಲ್ಪಟ್ಟವು. **ಪರಿಹಾರಮ್ ಪಣ್ಣುಗಿರ ಕಣಕ್ಕಿಲೇ** - ಪರಿಹಾರ ಮಾಡಿಕೊಳ್ಳುವ ನ್ಯಾಯರೀತ್ಯಾ ಭೋಜನ, ಉದಕಪಾನಾದಿಗಳಿಂದ, **ಅಶ್ಯರೀರ ವಿಡುವಳೆವುಮ್** - ಆಶರೀರವನ್ನು ಬಿಡುವವರೆಗೂ, **ಅವ್ವೋ ವರ್ಣಾಶ್ರಮಾದಿ ಗಳುಕ್ಕುಮ್** - ಆಯಾವರ್ಣಾಶ್ರಮಾದಿಗಳಿಗೂ, **ತರ್ಜಶಕ್ತಿಕ್ಕುಮ್** - ತನ್ನಶಕ್ತಿಗೂ, **ಅನುರೂಪವಾಗ** - ಅನುರೂಪವಾಗಿ, **ಅನಿಷ್ಟನಿವೃತ್ತೀಷ್ಟಪ್ರಾಪ್ತಿಗಳೈ ಪ್ಪತ್ತ** - ಅಪರಾಧಗಳ ಪರಿಹಾರ ಮತ್ತು **ಪುರುಷಾರ್ಥಗಳ** ಪ್ರಾಪ್ತಿಗಳನ್ನು ಕುರಿತು, ಶಾಸ್ತ್ರಗಳು ವಿಧಿಸಿದ ಧರ್ಮಗಳನ್ನು, **ವಿಡವೊಣ್ಣಾದು** - ಬಿಡತಕ್ಕ ದ್ದಲ್ಲವು ಪೂರ್ವ ಪಕ್ಷಿಗಳು **ಹೇ**ದಕ್ಕಾಗಿ ಬ್ರಾಹ್ಮಣತ್ವಾದಿಗಳು ಶರೀರಕ್ಕೆ ಸಂಬಂಧಿಸಿದವೇ ವಿನಾ ಆತ್ಮಸ್ವರೂಪಕ್ಕೆ ಅಲ್ಲವೆಂಬುದೇನೋ ಎಲ್ಲರೂ ಅಙ್ಗೀ ಕರಿಸತಕ್ಕದ್ದೇಸರಿ. ಆದರೆ ಆತ್ಮನಿಗೆ ಈ ಶರೀರ ಸಂಬಂಧ ಬಂದಿರುವದರಿಂದ ಆ ಶರೀರವು ಕಳೆದು ಹೋಗುವವರೆಗೂ ಬ್ರಾಹ್ಮಣತ್ವಾದಿ ವರ್ಣಾಶ್ರಮಗಳನ್ನು ಶಾಸ್ತ್ರದಲ್ಲಿ ಹೇಳಿರುವಹಾಗೆ ನಡಿಸಿಯೇ ತೀರಬೇಕು, ಬಿಟ್ಟಿದ್ದಲ್ಲವು ಎಲ್ಲಾ ಶಾಸ್ತ್ರವಿಹಿತವಾದ ಧರ್ಮಗಳನ್ನು ನಡೆಸಲು ಶಕ್ತಿಯಿಲ್ಲದಿದ್ದರೂ, ತನ್ನ ವರ್ಣಾ ಶ್ರಮೋಚಿತ ಕರ್ಮಗಳನ್ನು ಯಥಾಶಕ್ತ್ಯಾ ನಡೆಸಬೇಕೆಂಬ ತಾತ್ಪರ್ಯವು. ಸ್ವರೂಪದಲ್ಲಿ ಬ್ರಾಹ್ಮಣತ್ವಾದಿಗಳಿಲ್ಲವು; ಆದುದರಿಂದ ಆಯಾ ವರ್ಣಾಶ್ರಮಗಳು ಬೇಕಿಲ್ಲವು ಎಂಬ ವಾದವನ್ನು ತಂದರೆ, ಕ್ಷುತ್ಪಿಪಾಸೆಗಳು ಆತ್ಮಸ್ವರೂಪಕ್ಕೆ ಸಂಬಂ ಧಿಸದೇ ಇರುವಾಗ, ಅವುಗಳ ಉಪಶಮನಕ್ಕಾಗಿ ಆಹಾರ ಸೇವನೆ ಜಲಪಾನಾದಿ ಗಳು ತಾನೇ ಏತಕ್ಕೆ ? ವಸ್ತ್ರಧಾರಣೆತಾನೇ ಏತಕ್ಕೆ ? ಇತ್ಯಾದಿ ಪ್ರತಿಬಂದಿ ತರ್ಕ ಗಳು ತಪ್ಪಿದಲ್ಲವು. ಆದುದರಿಂದ ಉಪಾಯಾನುಷ್ಠಾನವು ಬ್ರಾಹ್ಮಣಾದಿ ವರ್ಣಾ ಶ್ರಮಿಗಳಿಗೆ ಹೇಗೆ ಶಾಸ್ತ್ರವುವಿಧಿಸಿರತ್ತದೋ, ಆ ಪ್ರಕಾರವಾಗಿಯೇ ನಡೆಸಲೇ ಬೇಕೆಂಬ ತಾತ್ಪರ್ಯವು ಪ್ರಮಾಣಾನುಸಾರ ನಡೆಯಬೇಕಾದ ಸಂದರ್ಭಗಳಲ್ಲಿ ಬರೀ ವಾದಗಳನ್ನು ತಂದು ಆ ಪ್ರಮಾಣಗಳನ್ನು ನಿರಾಕರಿಸೋಣವು ಯುಕ್ತ ವಲ್ಲವೆಂದು ಹಿಂದೆಯೇ ತಿಳಿಸಿರುತ್ತಾರೆ. **"ಶರೀರಮಾದ್ಯಂ ಖಲು ಧರ್ಮ ಸಾ ಧನಂ"** ಎಂದು ಹೇಳಿರುವ ಹಾಗೆ, ಆಯಾ ವರ್ಣಾಶ್ರಮಾದಿಗಳನ್ವಯವಾಗಿ ಪುರುಷಾರ್ಥಸಾಧನಕ್ಕಾಗಿ ಶಾಸ್ತ್ರವಿಹಿತೋಪಾಯಾನುಷ್ಠಾನವನ್ನು ಆಚರಿಸಲೇ

ಣ್ಣಾದು. ಆಗೈಯಾಲ್ ಇದ್ದರ್ಮಜ್ಞಳೈ ದೇಹಾತ್ಮ ವಿವೇಕ ಮುಡಿಯಾಗ ಸ್ವರೂಪ ವಿರುದ್ಧಜ್ಞಳಾಕ್ಕಿ ಇವತ್ತುಕ್ಕು ತ್ಯಾಜ್ಯತೈ ಶೊಲ್ಲವೋಣ್ಣಾದು, ದೇಹಾತ್ಮ ವಿವೇಕ ಮುಡೈಯವನುಕ್ಕೇ ಪಾರಲೌಕಿಕ ಭೋಗ ಸಾಧನಮಾನ ಧರ್ಮತ್ತಿಲ್ ಅಧಿಕಾರಮಾಗೈಯಾಲ್, ಇದ್ದರ್ಮಜ್ಞಳುಡೈಯ

ಬೇಕೆಂಬುದು ಸ್ಥಾಪಿತವು. ಇದನ್ನೇ ಮುಂದಿನ ವಾಕ್ಯಗಳಿಂದ ನಿಗಮನಮಾಡಿ ಹೇಳುತ್ತಾರೆ. **ಆಗೈಯಾಲ್** - ತನಗೆ ಪ್ರಾರಬ್ಧ ಕರ್ಮಾನುಗುಣವಾಗಿ ಪ್ರಾಪ್ತವಾದ ಶರೀರ ಸಂಬಂಧಕ್ಕೆ ಶಾಸ್ತ್ರದಲ್ಲಿ ವಿಹಿತವಾದ ಧರ್ಮಗಳು ಅವಶ್ಯಾನುಷ್ಠೇಯಗಳಾದುದರಿಂದ, **ಇದ್ದರ್ಮಜ್ಞಳೈ** - ಈ ಬ್ರಾಹ್ಮಣ ಕ್ಷತ್ರಿಯಾದಿ ವರ್ಣಾಶ್ರಮಿಗಳಿಗೆ ವಿಧಿಸಿರುವ ಧರ್ಮಗಳನ್ನು. **ದೇಹಾತ್ಮ ವಿವೇಕ ಮುಡಿಯಾಗ** - ಇವು ದೇಹಕ್ಕೆ ಸಂಬಂಧಿಸಿದವು, ತನ್ನ ಆತ್ಮವಿಗಲ್ಲವು, ಎಂಬ ತಿಳುವಳಿಕೆಯ ಮೂಲಕವಾಗಿ, **ಇವತ್ತುಕ್ಕು** - ಈ ಶಾಸ್ತ್ರದಲ್ಲಿ ವಿಧಿಸಿರುವ ಕರ್ಮಗಳಾದ ನಿತ್ಯ ನೈಮಿತ್ತಿಕ ವರ್ಣಾಶ್ರಮ ಧರ್ಮಗಳಿಗೂ ಅವರ್ಗಳಿಗೆ ಸಂಬಂಧಿಸಿದ ಉಪಾಸನೆಗಳಿಗೂ, **ತ್ಯಾಜ್ಯತೈಶೊಲ್ಲವೋಣ್ಣಾದು** - ಪರಿತ್ಯಾಗವನ್ನು ಹೇಳುವದು ಯುಕ್ತವಲ್ಲವು. ಆದರೆ ಶಾಸ್ತ್ರಗಳಲ್ಲಿ ತ್ರೈವರ್ಣಿಕರಿಗೆ ಉಪಾಸನವು ವಿಹಿತವಾಗಿದಿಯಲ್ಲಾ, ಅದಕ್ಕೆ ಹಾಗಾದರೆ ಅಧಿಕಾರಿಗಳು ಯಾರೆಂಬ ಪ್ರಶ್ನೆಗೆ **ಪೂರ್ವಪಕ್ಷಿ**ಗಳು ಹೇಳಿರುವದೇನೆಂದರೆ, ದೇಹಾತ್ಮಭ್ರಮೆಯಿಲ್ಲದೆ ದೇಹಾತ್ಮ ವಿವೇಕವನ್ನು ಚನ್ನಾಗಿ ತಿಳಿದವರಿಗೆ ಈ ಧರ್ಮಗಳು ಯಾವುವೂ ಬೇಕಾಗಿಲ್ಲವು; ಆತ್ಮಸ್ವರೂಪದಲ್ಲೇ ಬ್ರಾಹ್ಮಣ್ಯಾದಿ ಭ್ರಮೆ ಇರುವವರಿಂಗ ಈ ಭಕ್ತಿಮಾರ್ಗವು ಎಂದು ಹೇಳಿರುತ್ತಾರೆ. **"ಪ್ರಾಪಕಾನ್ತರವ್ ಅಜ್ಞರ್‌ಕ್ಕು ಉಪಾಯಮ್, ಜ್ಞಾನಿಗಳಕ್ಕು ಅಪಾಯಮ್"** ಎಂಬುದು ಅವರಗಳ ಅಭಿಪ್ರಾಯವು ಇದು ಸರಿಯುಲ್ಲವೆಂದು ಮುಂದಿನ ವಾಕ್ಯಗಳಿಂದ ತೋರಿಸುತ್ತಾರೆ ಉಪಾಸನದಲ್ಲಿಯಾರಿಗೆ ಅಧಿಕಾರವೆಂಬುದನ್ನು ಪ್ರಥಮತಃ ಚರ್ಚಿಸುತ್ತಾರೆ ದೇಹಾತ್ಮ ವಿವೇಕವುಳ್ಳ ಜ್ಞಾನಿಗೇ ಅಧಿಕಾರವೇವಿನಾ, ಭ್ರಮವುಳ್ಳ ಅಜ್ಞಾನಿಗೆ ಅಧಿಕಾರವಿಲ್ಲವೆಂದು ಹೇಳುತ್ತಾರೆ.

ದೇಹಾತ್ಮವಿವೇಕ ಮುಡೈಯನನುಕ್ಕೇ - ಆತ್ಮದೇಹಕ್ಕಿಂತ ವಿಲಕ್ಷಣನೆಂಬ ಆತ್ಮನ ಯಥಾರ್ಥಸ್ವರೂಪವನ್ನು ಚನ್ನಾಗಿ ವಿವೇಕಿಸಿ ತಿಳಿದ ಜ್ಞಾನಿಗೇನೇ, (ಇಲ್ಲಿ ತ್ರೈವರ್ಣಿಕರೇ ಹೇಳಲ್ಪಟ್ಟರು, ಏಕೆಂದರೆ ಶೂದ್ರಾದಿಗಳಿಗೆ ಉಪಾಸನದಲ್ಲಿ ಅಧಿಕಾರವಿಲ್ಲವಾದುದರಿಂದ,) **ಪಾರಲೌಕಿಕ ಭೋಗಸಾಧನ**

ಅನುಷ್ಠಾನತ್ತುಕ್ಕು ಸ್ವರೂಪತ್ತಿಲ್ ಬ್ರಾಹ್ಮಣ್ಯಾದಿ ಭ್ರಮವುಮ್ ಅಧಿಕಾರವುಮ್ಮು; ಬ್ರಾಹ್ಮಣ್ಯಾದಿ ವಿಶಿಷ್ಟ ಶರೀರ ಸಂಬಂಧತ್ತಿನೇ ಅಧಿಕಾರಮ್. ಆಗೈಯಾಲ್ ಸರ್ವ ಧರ್ಮಾನುಷ್ಠಾನತ್ತುಕ್ಕುಮ್ ಉಪಯುಕ್ತಮಾನ ಪ್ರಕೃತ್ಯಾತ್ಮ ವಿವೇಕ ಮಡಿಯಾಗ ಉಪಾಸನಾದಿಗಳುಕ್ಕು ವಿರೋಧಮುಮ್ ಕಣ್ಡಿಲೋವುಮ್

ಮಾನ ಧರ್ಮತ್ತಿಲ್ - ಸ್ವರ್ಗಾದಿ ಭೋಗಗಳೆನ್ನು ದಿವ್ಯ ವೈಕುಂಠಲೋಕದ ಪರಿಪೂರ್ಣ ಬ್ರಹ್ಮಾನುಭವರೂಪಭೋಗವೇನ್ನು, ಇವುಗಳಿಗ ಸಾಧನರೂಪವಾದ ನಿತ್ಯ ನೈಮಿತ್ತಿಕಗಳೊಂದಿಗೆ ಸೇರಿದ ಉಪಾಸನಪರ್ಯಂತದಲ್ಲಿ, **ಅಧಿಕಾರ ಮಾಗೈಯಾಲ್** - ಅಧಿಕಾರವಸಗವದರಿಂದ, ಇದ್ದರ್ಮಜ್ಞಳುಡೈಯ **ಅನುಷ್ಠಾನತ್ತುಕ್ಕು** - ಈ ಧರ್ಮಗಳ ಅನುಷ್ಠಾನಕ್ಕೆ, **ಸ್ವರೂಪತ್ತಿಲ್ ಬ್ರಾಹ್ಮಣ್ಯಾದಿ ಭ್ರಮವುಮ್ ಅಧಿಕಾರಮನ್ರು** - ಆತ್ಮಸ್ವರೂಪಕ್ಕೇ ಬ್ರಾಹ್ಮಣ್ಯಾದಿ ಸೇರಿದವು ಎಂಬ ಭ್ರಮವೇ ಅಧಿಕಾರವನ್ನುಂಟುಮಾಡಲು ಕಾರಣವಲ್ಲವು; ಎಂದರೆ ತಾನು ಬ್ರಾಹ್ಮಣನು, ತಾನು ಕ್ಷತ್ರಿಯನು, ಈ ಬ್ರಾಹ್ಮಣ್ಯಾದಿಗಳು ತನ್ನ ಸ್ವರೂಪಕ್ಕೆಸೇರಿದವು ಎಂದು ಯಾರಿಗೆ ಭ್ರಮೆಯುಂಟೋ ಅವನಿಗ ಅಧಿಕಾರಿಯೆಂದುಹೇಳಲು ಸಾಧ್ಯವಿಲ್ಲವು. ಅಧಿಕಾರಿಯಾರು ಎಂದರೆ ದೇಹಾತ್ಮವಿವೇಕವಿದ್ದು ತಾನು ದೇಹಕ್ಕಿಂತ ವಿಲಕ್ಷಣನೆಂಬ ಜ್ಞಾನವಿದ್ದವನು ತಾನು ಪರಲೋಕಸಂಬಂಧವಾದ ಪುರುಷಾರ್ಥವನ್ನು ಹೊಂದಲು ತನಗೆ ಪ್ರಾರಬ್ಧಾನುಗುಣವಾಗಿ ಪ್ರಾಪ್ತವಾದ ಶರೀರವುಳ್ಳ ತನಗೆ ಶಾಸ್ತ್ರದಲ್ಲಿ ಏನು ವಿಧಿಸಲ್ಪಟ್ಟಿರುತ್ತದೆಂದು ತಿಳಿದು ಅನುಷ್ಠಿಸತಕ್ಕದ್ದಾಗಿರುತ್ತದೆ. ಆದ ದರಿಂದ ದೇಹಾತ್ಮವಿವೇಕಜ್ಞಾನಯುಕ್ತನೇ ಅಧಿಕಾರಿಯೇ ವಿನಾ, ಭ್ರಮೆಯುಳ್ಳ ಅಜ್ಞಾನಲ್ಲವೆಂಬ ಭಾವವು. ಈಗ ತಾವು ಸ್ಥಾಪಿಸಿದ ಅಭಿಪ್ರಾಯವನ್ನು ನಿಗನುನಮಾಡಿ **ಆಗೈಯಾಲ್** ಎಂಬ ಮುಂದಿನ ವಾಕ್ಯದಿಂದ ಹೇಳುತ್ತಾರೆ **ಆಗೈಯಾಲ್** – ಹೀಗೆ ದೇಹಾತ್ಮ ವಿವೇಕವುಳ್ಳವನೇ **ಈ ಉಪಾಸನಕ್ಕೆ** ಅಧಿಕಾರಿಯಾದುದರಿಂದ, **ಸರ್ವಧರ್ಮಾನುಷ್ಠಾನತ್ತುಕ್ಕುಮ್** – ನಿತ್ಯ ನೈಮಿತ್ತಿಕಾದಿಗಳಿಂದ ಕೂಡಿದ ಕರ್ಮಯೋಗಾದಿ ಅಂಗಗಳಿಂದ ಸೇರಿದ ಉಪಾಸನಾದಿ ಧರ್ಮಗಳ ಅನುಷ್ಠಾನಕ್ಕೂ, **ಉಪಯುಕ್ತಮಾನ** - ಬೇಕಾದ ಅಥವಾ ಉಪಯೋಗವಾದ, **ಪ್ರಕೃತ್ಯಾತ್ಮವಿವೇಕಂ** - ದೇಹಕ್ಕೂ ಆತ್ಮವಿಗೂ ಇರುವ ವೈಲಕ್ಷಣ್ಯದಜ್ಞಾನವು, ತನ್ಮೂಲಕವಾಗಿ, ಉಪಾಸನಾದಿಗಳುಕ್ಕು, **ವಿರೋಧಮುಮ್**- ವಿರೋಧವನ್ನು ಹೇಳಿರುವದು, **ಕಣ್ಡಿಲೋವುಮ್** - ಎಲ್ಲಿಯೂ ಕಣ್ಡಿಲ್ಲವು.ಸ್ವಾಮಿ

(೪) ಭಕ್ತ್ಯೊಯೋಗೋಽಹಂಕಾರ ಗರ್ಭತ್ವಾತ್ ಸ್ವರೂಪ ವಿರುದ್ಧ ಇತಿವಾದಸ್ಯ ನಿರಾಸಃ

ಉಪಾಸನಾದಿಗಳ್ ಅಹಂಕಾರಾದಿ ಗರ್ಭಜ್ಞೆನ್ನು ವಿಡಾ ಶಾಸ್ತ್ರ ವಿಶ್ವೆಯಾದಿರುಕ್ಕಚೆಯ್ದೇ ಆರೋಪಿತ್ತಾರ್‌ಗಳತ್ತನ್ನೈ-

ದೇಶಿಕರವರು ನೋಡಬೇ ಇರವ ಗ್ರಂಥವಿಲ್ಲವು, ೧೦೫ ವರುಷಗಳು ಜೀವಿಸಿದವರಾಗಿ, ಸದಾ ಗ್ರಂಥಾವಲೋಕನ ವತ್ತು ಗ್ರಂಥರಚನಾ ಇವುಗಳಲ್ಲೇ ಕಾಲವನ್ನು ಕಳೆದರು. ದೇಹಾತ್ಮ ಭ್ರಾಂತಿಯಿಲ್ಲದೆ ವಿವೇಕ ಜ್ಞಾನ ಉಂಟಾವವನಿಗೆ ಉಪಾಸನವು ಮೋಕ್ಷೋಪಾಯವಾಗಿ ಕೂಡದೆಂಬ ದಕ್ಕೆ ಪ್ರಮಾಣವನ್ನು ತಾವು ಎಲ್ಲೂ ಕಾಣಲಿಲ್ಲವೆಂದು ಹೇಳುತ್ತಾರೆ

ಭಕ್ತ್ಯೊಯೋಗವು ಅಹಂಕಾರ ಗರ್ಭವಾದುದರಿಂದ ಸ್ವರೂಪ ವಿರುದ್ಧವೆಂಬ ವಾದದ ಖಂಡನವು

ಉಪಾಸನಾದಿಗಳ್ - ಉಪಾಸನವೇ ಮೊದಲಾದವುಗಳು, ಇಲ್ಲಿ ಆದಿಪದದಿಂದ ಭರನ್ಯಾಸವೂ,ಕರ್ಮಯೋಗಾದಿಗಳೂ ಹೇಳಲ್ಪಟ್ಟವು **ಅಹಂಕಾರಾದಿಗರ್ಭಜ್ಞೆನ್ನುವಿಡಂ**-ಅಹಂಕಾರ ಮಮಕಾರಗಳಿಂದ ಕೂಡಿದವು ಎಂದು ಪೂರ್ವಪಕ್ಷವನ್ನು ತಂದಿರುವ ಸಂದರ್ಭದಲ್ಲಿ, **ಶಾಸ್ತ್ರವಿಶ್ವೆಯಾದಿರುಕ್ಕ ಚ್ಚೆಯ್ದೇ**-ಶಾಸ್ತ್ರವನ್ನು ಜ್ಞೀಕರಿಸದೇ ಇರುವವರಾಗಿ, **ಆರೋಪಿತ್ತಾರ್‌ಗಳತ್ತನ್ನೈ** - ಉಪಾಸನೆಗೆ ಅಹಂಕಾರ ಮಮಕಾರಗಳನ್ನು ಆರೋಪಿಸಿದರು, ಇಷ್ಟೇ ವಿನಾ ಬೇರೆ ಇಲ್ಲವೆಂಬ ಭಾವವು ನಿತ್ಯನೈಮಿತ್ತಿಕಾದಿ ಕರ್ಮಗಳಲ್ಲೂ ಉಪಾಸನಾದಿಕರ್ಮಗಳಲ್ಲೂ, ಸಙ್ಕಲ್ಪವನ್ನು ಹೇಳುವಾಗ, **ಅಹಂಕರಿಷ್ಯೇ** ಎಂದು ಹೇಳುವದರಿಂದಲೂ, ಸರ್ವೇಶ್ವರನ ಕೃಪೆಯು ತನಗೆ ಉತ್ತಾರಕವೆಂಬ ಜ್ಞಾನವಿಲ್ಲವೆ. ಮೋಕ್ಷಸಾಪ್ತಿಯನ್ನು **ಈ ಉಪಾಯ** ದ ಮೂಲಕ ಸಾಧಿಸುವನೆಂದು ಹೇಳಿಕ್ಕೊಳ್ಳುವದರಿಂದಲೂ, ಮತ್ತು ಕರ್ಮಗಳ ಪ್ರಧಾನ. ಪ್ರಯತ್ನದಲ್ಲಿ ಸರ್ವೇಶ್ವರನು ಕೊಟ್ಟಸ್ವಾತಂತ್ರ್ಯವನ್ನು ದುರುಪಯೋಗ ಮಾಡುವದರಿಂದ ಅಹಂಕಾರ ಮಮಕಾರ ಗರ್ಭಿತವೆಂದು ಭಾವಿಸಿ, **"ಮದಿರಾಬಿಂದು ಮಿಶ್ರವಾನ ಶತಕುಂಭನುಯಕುಂಭಗತ ಸಲಿಲಂಪೋಲಿ ಅಹಂಕಾರ ಮಿಶ್ರಂ"** ಎಂದು ಶ್ರೀ ವಚನ ಭೂಷಣದಲ್ಲಿ ಹೇಳಿರುತ್ತಾರೆ ಈ ಉಪನ್ಯಾಸದಲ್ಲಿ **"ಉಪಾಸನವು ತ್ಯಾಜ್ಯವು, ಅಹಂಕಾರಗರ್ಭವಾಗಿರುವದರಿಂದ"** ಎಂದು ಅನುವಾನನಮಾಡಿದರೆ, ಉಪಾಸನವೆಂಬ ಪಕ್ಷದಲ್ಲಿ ಅಹಂಕಾರ

ಗರ್ಭತ್ವವೆಂಬ ಹೇತುವೇ ಇಲ್ಲವು; ಆದುದರಿಂದ ಹೇತ್ವಸಿದ್ಧಿದೋಷವುಂಟಾಗುತ್ತ ದೆ ಹೇಗೆಂದರೆ:... **"ಸ್ವಶೇಷ ಭೂತೇನ ಮಯೂಪ್ಸೀಯೈಸ್ಸರ್ವೈ ಪರಿಚ್ಛದೈಃ। ವಿಧಾತುಂ ಪ್ರೀತಮಾತ್ಮಾನಂ ಶ್ರೀರ್ಮಾ ಪ್ರಕ್ರಮತೇ ಸ್ವಯಂ"** ಎಂದು ಅಹಂಕಾರ ಮಮಕಾರ ತ್ಯಾಗಪೂರ್ವಕವಾಗಿ ತನ್ನ ಸರ್ವವ್ಯಾಪಾರಗಳೂ ಭಗವದ ಧೀನವೆಂಬ ಅನುಸಂಧಾನ ಪೂರ್ವಕವಾಗಿಯೂ ಉಪಾಸನ ಪ್ರಾರಂಭ ಮಾಡಬೇಕೆಂಬದಾಗಿ ಶಾಸ್ತ್ರವು ವಿಧಿಸಿರುವದರಿಂದ, ಹೇತುವೇ ಪಕ್ಷದಲ್ಲಿಲ್ಲದ ವಾದವೆಂಬಭಿಪ್ರಾಯವು ಶಾಸ್ತ್ರಜ್ಞಾನವಿರುವರಿಗಾದರೋ ಶೇಷತ್ವಜ್ಞಾನವೇನು, **"ಪರಾತ್ತು ತಚ್ಛ್ರುತೇಃ"** ಎಂದು ಬ್ರಹ್ಮಸೂತ್ರದಲ್ಲಿ ತೋರುವ ಪಾರತಂತ್ರ್ಯವೇನು, ಇವುಗಳ ಜ್ಞಾನವಿರುವದರಿಂದ, ಸ್ವತಂತ್ರಕರ್ತೃತ್ವರೂಪ ಅಹಂಕಾರ ಜ್ಞಾನವು ಸುತರಾಂ ಉಂಟಾಗುವದಿಲ್ಲವೆಂಬುದು ಮುಖ್ಯಾಭಿಪ್ರಾಯವು. **"ಉಪಾಸೀತ"** ಇತ್ಯಾದಿ ವಿಧಿಗಳು ಇರುವಾಗಲೂ, ಆ ಉಪಾಸನೆಗಳು ನಾನಾವಿಧ ಬ್ರಹ್ಮವಿದ್ಯೆಗಳಲ್ಲಿ ನಾನಾವಿಧವಾಗಿ ಶಾಸ್ತ್ರದಲ್ಲಿ ವಿಧಿಸಿರುವದರಿಂದಲೂ ಈ ವಿಧಿಗಳನ್ನೆಲ್ಲಾ ನಿರಾಕರಿಸಿ ಅಹಂಕಾರಗರ್ಭವೆಂದು ದೂಷಿಸುವದು, **"ಶಾಸ್ತ್ರಮಿಶ್ಯೆಯಾದಿರುಕ್ಕ"** ವಿಷಯವಾಗಿರುತ್ತದೆ. ಅನೇಕ ಮಹರ್ಷಿಗಳೇ ಮೊದಲಾದವರು ಈ ಉಪಾಸನೆಗೆ ತುಂಬಾ ಮಹಿಮೆಯನ್ನು ಹೇಳಿ, ತಾವೂ ಅನುಷ್ಠಿಸಿ, ತಮ್ಮ ಶಿಷ್ಯರುಗಳಿಗೂ ವಿಶದವಾಗಿ ಉಪದೇಶಿಸಿ ಇದ್ದರೂ, ಅದು ಅಹಂಕಾರ ಮಿಶ್ರವಾಗಿ ಸ್ವರೂಪ ವಿರುದ್ಧವೆಂಬುದು ಶಾಸ್ತ್ರವನ್ನು ಜ್ಞೀಕರಿಸದೇ ಹೇಳಿದಮಾತಾಗಿದೆ. ಶ್ರೀ ನಾರದ ಭಗವದ್ಭಾರವರು ಪ್ರಹ್ಲಾದ ಧ್ರುವರುಗಳಿಗೂ, ಶ್ರೀ ಕಪಿಲಭಗವದ್ಭಾರವರು ತಮ್ಮ ತಾಯಿ ದೇವಹೂತಿಗೂ ಸಹ ಅಹಂಕಾರ ಗರ್ಭವಾದ ವಿಷಯವನ್ನು, ವಿವೇಕವಿಲ್ಲದೆ ಉಪದೇಶಿಸಿದರೆಂದು ಹೇಳಲು ಸಾಧ್ಯವೇ ? ಆದುದರಿಂದ ಶಾಸ್ತ್ರಾನುಗುಣವಾದ ವಾದವು ಉಪಾದೇಯವೇ ವಿನಾ, ಶಾಸ್ತ್ರವನ್ನು ದೂರೀಕರಿಸಿದ ವಾದವು ಸರಿಯಾದುದಲ್ಲ ವೆಂಬುದೂ ಈ ವಾಕ್ಯದಿಂದ ಗ್ರಹಿಸಬಹುದು. ಶಾಸ್ತ್ರಸಮ್ಮತವಾದುದು ಎಂದಿಗೂ ಸ್ವರೂಪ ವಿರುದ್ಧವಾಗಲಾರದು ಸ್ವರೂಪ ವಿರುದ್ಧವಲ್ಲದೆ ತನ್ನ ಸ್ವರೂಪಕ್ಕೆ ಮಹಿಮೆಯನ್ನುಂಟುಮಾಡುವದರಲ್ಲಿ ದೋಷವುಂಟೆಂದು ಹೇಳಿದುದನ್ನು ತಿಳಿಸುವದಕ್ಕಾಗಿಯೇ ಇಲ್ಲಿ **ಆರೋಪಿತಾರ್ಗಳಿತ್ತನೈ** ಎಂಬ ಪ್ರಯೋಗವು.

ಭಕ್ತಿಯೋಗಕ್ಕೆ ಶರೀರೋಪಾಧಿಯು ಅಪೇಕ್ಷೆ ಇರುವದರಿಂದ ಸ್ವರೂಪ ವಿರುದ್ಧವೆಂಬ ವಾದದ ಖಂಡನವು.

ಕರ್ಮೋಪಾರ್ಜಿತಜ್ಞಾನ - ಪ್ರಾರಬ್ಧಕರ್ಮದಿಂದ ಸಂಪಾದಿಸಲ್ಪಟ್ಟು ಪ್ರಾರಬ್ಧಕರ್ಮಾನುಭವಕ್ಕಾಗಿ ಉಂಟಾದ, **ಕರಣ ಕಳೇಬರಜ್ಞಾನಗಿರ**

ಭಕ್ತಿಯೋಗಃ ಔಪಾಧಿಕತ್ವೇನ ಸ್ವರೂಪವಿರುದ್ಧ ಇತಿವಾದಸ್ಯ ನಿರಾಸಃ.

ಕರ್ಮೋಪಾರ್ಜಿತಜ್ಞಾನ ಕರಣ ಕಳೇಬರಜ್ಞಾನಗಿರ ಉಪಾಧಿಗಳ್ಕೊಂಡು ಅನುಷ್ಠಿಕ್ಕ್ಯಯಾಲೆ ಕರ್ಮಯೋಗಾದಿಗಳ್ ನಿರುಪಾಧಿಕಸ್ವರೂಪ ವಿರುದ್ಧಜ್ಞಳಿನ್ಪಾರ್ಕ್ಕು ಸ್ವರೂಪಜ್ಞಾನ ದ್ವಯಶ್ರವಣಾದಿಗಳುಮ್ ಮನಃ ಪ್ರಭೃತಿ ಸಾಪೇಕ್ಷಜ್ಞಳಾಗೈಯಾಲೇ ತುಲ್ಯದೋಷಜ್ಞಳಾಮ್.

ಉಪಾಧಿಗಳ್ಕೊಂಡು - ಇಂದ್ರಿಯಗಳೂ ಶರೀರವೂ ಆಗಿರುವ ಉಪಾಧಿಗಳ ಮೂಲಕವಾಗಿ, **ಅನುಷ್ಠಿಕ್ಕ್ಯಯಾಲೇ** - ಉಪಾಸನವನ್ನು ಅನುಷ್ಠಿಸಬೇಕಾಗಿರುವುದರಿಂದ, **ಕರ್ಮಯೋಗಾದಿಗಳ್** - ಕರ್ಮಯೋಗವೇ ಮೊದಲಾದವುಗಳು, ಆವಪದದಿಂದ **ಜ್ಞಾನಯೋಗ** ಭಕ್ತಿಯೋಗಗಳೂ ಹೇಳಲ್ಪಟ್ಟವು, **ಇವುಗಳಿಗೂ** ಮನಸ್ಸು ಶರೀರಗಳು **ಅಪೇಕ್ಷಿತವು** **ನಿರುಪಾಧಿಕ ಸ್ವರೂಪ ವಿರುದ್ಧಜ್ಞಳ್** - ಉಪಾಧಿಗಳು ಯಾವುದೂ ಇಲ್ಲದ ಆತ್ಮಸ್ವರೂಪಕ್ಕೆ ವಿರುದ್ಧವಾದವುಗಳು, **ಎನ್ಪಾರ್ಕ್ಕು**-ಎಂದು **ಪೂರ್ವಪಕ್ಷನಾದವನ್ನು** ತರುವವರಿಗೆ, **ಸ್ವರೂಪಜ್ಞಾನ ದ್ವಯಶ್ರವಣಾದಿಗಳುಮ್** - ಆತ್ಮ ಸ್ವರೂಪದ ಯಥಾರ್ಥ ಜ್ಞಾನವೂ, ಗುರುಗಳ ಮೂಲಕ ಮಂತ್ರೋಪದೇಶ ರೂಪದಲ್ಲಿ ದ್ವಯಮಂತ್ರದ ಶ್ರವಣವೂ ಕೂಡ, **ಮನಃಪ್ರಭೃತಿ ಸಾಪೇಕ್ಷಜ್ಞಳಾಗೈಯಾಲೇ** - ಮನಸ್ಸೇ ಮೊದಲಾದ ಇಂದ್ರಿಯಗಳ ಅಪೇಕ್ಷೆ ಇರುವುದರಿಂದ, ಗುರುಗಳಿಂದ ಉಪದೇಶಕ್ಕೆ ಶ್ರೋತ್ರಾದಿಗಳೂ ಬೇಕಾಗಿರುವುದರಿಂದ ಎಂಬ ಭಾವವು. **ತುಲ್ಯದೋಷಜ್ಞಳಾಮ್** - ಪೂರ್ವಪಕ್ಷಿಗಳು ಆವಶ್ಯಕವೆಂದು ಹೇಳುವ ಉಪಾಯಗಳೂ ಕೂಡ ಸಮಾನ ದೋಷಯುಕ್ತವಾವವುಗಳೇ ಎಂದರೆ ಸೋಪಾಧಿಕ ಪ್ರವೃತ್ತಿಗಳೇ **ಪೂರ್ವಪಕ್ಷಿಯು** ಮುಖ್ಯವಾಗಿ ಕರ್ಮಯೋಗವನ್ನು ಇಲ್ಲಿ ತಂದಿರುವುದು ಅದಕ್ಕೆ ವಿಶೇಷವಾಗಿ ಕರಣ ಕಳೇಬರ ಸಾಪೇಕ್ಷವೆಂದು ತಿಳಿದು ಸೋಪಾಧಿಕವೆಂದು ಆಕ್ಷೇಪಿಸಿದರು. ಶರೀರೇಂದ್ರಿಯಗಳ ಸಹಾಯವನ್ನು ಅಪೇಕ್ಷಿಸುವುದರಿಂದ ಸ್ವರೂಪವಿರುದ್ಧವು ಏಕೆಂದರೆ ಆತ್ಮಸ್ವರೂಪವು ನಿರುಪಾಧಿಕವು ಎಂದು **ಪೂರ್ವಪಕ್ಷವನ್ನು** ತಂದರೆ, ನೀವು ಆವಶ್ಯಕವೆಂದು ಹೇಳುವ **ಪ್ರವೃತ್ತಿರೂಪವಾದ** ಶೇಷತ್ವಜ್ಞಾನಕ್ಕೆ **ಅತ್ಯಾವಶ್ಯಕವಾದ** ಆತ್ಮಸ್ವರೂಪದ ಯಥಾರ್ಥಜ್ಞಾನ, ಮತ್ತು ದ್ವಯಮಂತ್ರೋಪದೇಶ ಇವುಗಳಿಗೆ ಕರಣ ಕಳೇಬರದ ಸಾಪೇಕ್ಷತ್ವ ವಿಲ್ಲೆಯೋ ? **ಇವುಗಳಿಲ್ಲವೆ ಅವುಗಳೂ** ನಡೆಯದ ಬಳಿಕ ನೀವು ಆರೋಪಿಸಿದ ದೋಷವೇ ನಿಮಗೆ ಅಭಿಮುಖವಾದ ಪ್ರವೃತ್ತಿಗಳಲ್ಲೂ ಉಂಟೆ! **ಉ** ಟೆಂಬ ಭಾವವು ಯಾವ ಪ್ರವೃತ್ತಿಗಳಿಗೆಯಾಗಲಿ

(೬) ಭಕ್ತಿಯೋಗ ಶೇಷತ್ವ ಪಾರತಂತ್ರ್ಯರೂಪ ಸ್ವರೂಪ ವಿರುದ್ಧ ಇತಿವಾದಸ್ಯ ನಿರಾಸಃ

ಆನಾಲುಮ್ ಶೇಷಭೂತನಾಗ್ಯೆಯಾಲೇ ತನ್ನೈ ತಾಂ ರಕ್ಷಿತ್ತು ಕ್ಕೊಳ್ಳ ಪ್ರಾಪ್ತನು ಮನ್ರಿಕ್ಕೇ ಆತ್ಯನ್ತ ಪರತನ್ತ್ರ ನಾಗ್ಯೆಯಾಲೇ ತನ್ನೈ ತಾಂ ರಕ್ಷಿತ್ತುಕ್ಕೊಳ್ಳ ಶಕ್ತನು ಮನ್ರಿಕ್ಕೇ ಇರುಕ್ಕಿರ ಇವನುಕ್ಕು ಸ್ವರಕ್ಷಣಾರ್ಥಮಾಗ ಕರ್ತವ್ಯಮೆನ್ರೊರು ಉಪಾಯತ್ತೈ ವಿಧಿಕ್ಕೆಯುಮ್, ಅದಿವನಕ್ಕು ಸಾಧ್ಯಮಾಯ್ ಸಾಧ್ಯೋಪಾಯಮೆನ್ರು ಪೇರ್

ಕರಣ ಕಳೇಬರಗಳಿಲ್ಲದೆ ನಾಧ್ಯವೇ ಇಲ್ಲವೆಂಬ ಭಾವವೂ ತೋರಿಬರುತ್ತದೆ, ಹೇಗೆಂದರೆ, ಸರ್ವೇಶ್ವರನು ನಿರ್ಹೇತುಕ ಕೃಪಾಳುವಾದುದರಿಂದ ಶೇಷತ್ವಾನುಸಂಧಾನಪೂರ್ವಕವಾಗಿ ಸ್ವಯತ್ನ ನಿವೃತ್ತ್ಯುಪಾಯಾನುಸಂಧಾನದಿಂದಲೇ ರಕ್ಷಿಸುವನು ಎಂದು ಹೇಳುವಾಗ, ಇವುಗಳು ತಾನೇ ಕರಣ ಕಳೇಬರಗಳ ಸಹಾಯವಿಲ್ಲದೆ ನಡಿಯುತ್ತವೆಯೋ? ಇದುದರಿಂದ ಇವೆಲ್ಲಾ ತುಲ್ಯದೋಷಯುಕ್ತಗಳೆಂಬ ಭಾವವು

ಭಕ್ತಿಯೋಗವು ತನ್ನ ಶೇಷತ್ವ ಪಾರತಂತ್ರ್ಯರೂಪ ಸ್ವರೂಪ ಕ್ಕೆ ವಿರುದ್ಧವೆಂಬ ವಾದದ ನಿರಾಕರಣವು.

ಆನಾಲುಮ್- ಎಂಬುದು ಜಘಾರ್ಂಗೀಕಾರವನ್ನು ತೋರಿಸುತ್ತದೆ, ನೀವು ಹಿಂದೆ ಹೇಳಿದುದನ್ನು ಅಙ್ಗೀಕರಿಸಿದರೂ, ಈ ಮುಂದೆ ಹೇಳುವ ಪೂರ್ವಪಕ್ಷಕ್ಕೆ ಏನು ಸಮಾಧಾನವನ್ನು ಹೇಳುವಿರಿ ಎಂಬ ಭಾವವು ತೋರಿಬರುತ್ತದೆ. ಪೂರ್ವಪಕ್ಷಿಗಳು ಪುನಃ ದೂಷಣೆಯನ್ನು ಉಪಪಾದಿಸುತ್ತಾರೆ:—ಆನಾಲುಮ್ - ಹಾಗೆ ಒಪ್ಪಿದರೂ, ಶೇಷಭೂತ ನಾಗ್ಯೆಯಾಲೇ - ಈ ಆತ್ಮನು ಸರ್ವೇಶ್ವರನಿಗೆ ಶೇಷನಾದುದರಿಂದ ಎಂದರೆ, "ದಾಸಾಭೂತಾಸ್ಸ್ವತಸ್ಸರ್ವೇ" ಎಂದು ಹೇಳಿರುವ ಹಾಗೆ ದಾಸನಾದುದರಿಂದ, ತನ್ನೈ ತಾಂ ರಕ್ಷಿತ್ತು ಕ್ಕೊಳ್ಳಪ್ರಾಪ್ತನು ಮನ್ರಿಕ್ಕೇ - ಮತ್ತು ತನ್ನನ್ನು ತಾನೇ ರಕ್ಷಿಸಿಕೊಳ್ಳುವದಕ್ಕೆ ಯೋಗ್ಯತೆಯೂ ಇಲ್ಲದೆಯೂ, ಮತ್ತು ಆತ್ಯನ್ತ ಪರತನ್ತ್ರ ನಾಗ್ಯೆಯಾಲೇ - ಸರ್ವೇಶ್ವರನಿಗೆ ಸಂಪೂರ್ಣವಾಗಿ ಆಧೀನನಾಗಿರುವದರಿಂದ, ತನ್ನೈ ತಾಂ ರಕ್ಷಿತ್ತುಕ್ಕೊಳ್ಳ ಶಕ್ತನು ಮನ್ರಿಕ್ಕೇ - ತನ್ನನ್ನು ತಾನೇ ರಕ್ಷಿಸಿಕ್ಕೊಳ್ಳಲು ಶಕ್ತಿಯೂ ಇಲ್ಲದೆಯೂ, ಇರುಕ್ಕಿರ ಇವನುಕ್ಕು - ಹೀಗಿರುವ ಈ ಚೇತನನಿಗೆ, ಸ್ವರಕ್ಷಣಾರ್ಥಮಾಗ-ತನ್ನ ರಕ್ಷಣೆಗಾಗಿ, ಕರ್ತವ್ಯಮೆನ್ರು - ಮಾಡತಕ್ಕದ್ದೆಂದು, ಒರು ಉಪಾಯತ್ತೈ

ಪೆರುಗಿರದೆನ್ರು ಶೊಲ್ಲುಗೈ ಯುಪಪನ್ನವೋ? ಆನ ಪಿನ್ಬ ಭಕ್ತಿಯೋ ಗಾದಿಗಳ್ ಶೇಷತ್ವಾನುರೂಪಜ್ಞಳಲ್ಲಾ ಮೈಯಾಲೇ ಸ್ವರೂಪತ್ತುಕ್ಕು ಅನಿಷ್ಟಾವಹಜ್ಞಳೆನ್ನುಮ್, ಆತ್ಯನ್ತ ಪಾರತನ್ತ್ರ್ಯ ವಿರುದ್ಧಜ್ಞಳಾಗೈಯಾಲೇ ಅಸಂಭಾವಿತಜ್ಞಳೆನ್ರುಮ್ ಶೊಲ್ಲವೊಣ್ಣಾದೋ? ಎನ್ನಿಲ್:—

ವಿಧಿಕ್ಕೈಯುಮ್ - ಉಪಾಸನಾದಿ ರೂಪವಾದ ಒಂದು ಉಪಾಯವನ್ನು ವಿಧಿಸೋಣವೂ, **ನ್ಯತ್ತು ಅದು** - ಆ ಕರ್ತವ್ಯವೆಂದು ಹೇಳುವ ಉಪಾಯವು, ಸಾಧ್ಯವಾಗಿ, ಸಾಧ್ಯೋಪಾಯವೆಂದು, **ಅದು ಪೇರ್ ಪೆರುಗಿರದೆನ್ರು** - ಅದು ಹೆಸರನ್ನು ಹೊಂದುತ್ತದೆ ಎಂದೂ, **ಶೊಲ್ಲುಗೈ** - ಹೇಳೋಣವು, **ಉಪಪನ್ನಮೋ** - ಸಮಂಜಸವಾದುದೋ? ಇದು **ಪೂರ್ವ** ಪಕ್ಷಿಯ ಆಕ್ಷೇಪವು; ಈ ಚೇತನನು ಶೇಷಭೂತನು, ಅತ್ಯಂತ ಪರತಂತ್ರನು; ಶೇಷಭೂತನನ್ನು ಸರ್ವೇಶ್ವರನು, ತನ್ನಿಷ್ಟಾನುಸಾರ ವಿನಿಯೋಗಿಸಿಕೊಳ್ಳಬಹುದು, ಆದುದರಿಂದ ಈ ಚೇತನನಿಗೆ ತನ್ನನ್ನು ತಾನೇ ರಕ್ಷಿಸಿಕೊಳ್ಳುವ ಯೋಗ್ಯತೆಯಿಲ್ಲವು; ಅತ್ಯಂತ ಪರತಂತ್ರನೆಂದರೆ ಸರ್ವೇಶ್ವರನು ಈತನನ್ನು ತನ್ನಿಷ್ಟಾನುಸಾರ ಆಜ್ಞಾಪಿಸಬಹುದು; ಹೀಗೆ ಚೇತನನು ಪರಾಧೀನನಾಗುವುದರಿಂದ ಇಂತಹ ದೀನತ್ವ ಅಶಕ್ತಿಗಳಿರುವ ತನಗೆ ರಕ್ಷಣೋಪಯುಕ್ತನಾಗಿ ಈ ಅಶನಾರ್ಥನಿಗೆ ಸಾಧ್ಯನಾಗಿ ಒಂದುಸಾಯವು ಉಂಟೆಂದೂ, ಯಾವುದೂ ತನಗೆ ಸಾಧ್ಯವಿಲ್ಲವೆ ದುಸ್ಥಿತಿಯುಳ್ಳಿರುವವನಿಗೆ ಅದು ಸಾಧ್ಯೋಪಾಯವೆಂದು ನಾವುಕರಣನಾಡುವವೂ, ಹಾಸ್ಯಾಸ್ಪದವಲ್ಲವೋ ಎಂಬ ಭಾವವು. ಯಾವುದು ಸನ್ಮಾಜಸವಲ್ಲವೋ ಅದು ಹಾಸ್ಯಾಸ್ಪದವೆಂ, ಎಂಬ **ತಾತ್ಪರ್ಯವು** ಮುಂದಿನ ವಾಕ್ಯದಲ್ಲಿ ಈ ಪೂರ್ವಪಕ್ಷಿಯು ಮೇಲಿನ ಕಾರಣಗಳಿಂದ ಎರಡು ದೋಷಗಳನ್ನು ಆಪಾದಿಸುತ್ತಾರೆ; ಹೇಗೆಂದರೆ:—**ಅನಪಿನ್ಬು** - ಹೀಗೆ ಅನಪಪನ್ನವಾದಬಂತರ, **ಶೇಷತ್ವಾನುರೂಪಜ್ಞಳಲ್ಲಾ ಮೈಯಾಲೇ** - ಈ ಉಪಾಸನಾದಿ ಉಪಾಯೋನುಷ್ಠಾನಗಳು ತನ್ನ ಶೇಷತ್ವಕ್ಕೆ ಯೋಗ್ಯವಾದವುಗಳಲ್ಲದುದರಿಂದ, **ಸ್ವರೂಪಕ್ಕೆ ಅನಿಷ್ಟಾವಹಜ್ಞಳೆನ್ನುಮ್** - ತನ್ನ ಶೇಷವಾಗಿರುವ ಸ್ವರೂಪಕ್ಕೆ ವಿರುದ್ಧವಾಗಿ, ಅತನು ಹೇಗೆ ಉಪಯೋಗಿಸಿಕೊಳ್ಳಬೇಕೋ ಹಾಗಲ್ಲವೆ ಸ್ವತಂತ್ರಿಸಿ ನಡೆಯುವುದರಿಂದ ಭಗವನ್ನಿಗ್ರಹಕ್ಕೆ ಗುರಿಯಾಗಿ ಅನಿಷ್ಟವನ್ನುಂಟುಮಾಡುವುದೆಂದೂ, ಮತ್ತು ಅತ್ಯನ್ತ ಪಾರತನ್ತ್ರ್ಯ ವಿರುದ್ಧಜ್ಞಳಾಗೈಯಾಲೇ - ತಾನು ಅತ್ಯನ್ತ ಪರಾಧೀನವಾಗಿರುವ ಸ್ವರೂಪಕ್ಕೆ ಈ ಸಾಧ್ಯೋಪಾಯಾನುಷ್ಠಾನಗಳು ವಿರುದ್ಧಗಳಾದುದರಿಂದ, **ಅಸಂಭಾವಿತಜ್ಞಳೆನ್ರುಮ್** -

ಇದು ಸರ್ವಮೋಕ್ಷ ಪ್ರಸಙ್ಗಾದಿಗಳಾಲೇ ಮುನ್ಪೇ ಪರಿಹೃತವ್.

ಸರ್ವೇಶ್ವರನು ತನ್ನ ದಾಸನಿಗೆ ಹೇಗೆ ಆಜ್ಞಾಪಿಸಬೇಕೋ ಅದನ್ನು ಬಿಟ್ಟು ವಿರುದ್ಧವಾಗಿ ಸ್ವತಂತ್ರ ಪ್ರವೃತ್ತಿಯು ಅಯೋಗ್ಯವಾದ ದೆಂದೂ, **ಶೊಲ್ಲವೊಣ್ಣಾದೋ-ಹೇಳಬೇಡವೋ?**, **ಎನ್ನಿಲ್** - ಎಂದು ಆಕ್ಷೇಪಗಳನ್ನು ತಂದರೆ, ಮುಂದಿನ ವಾಕ್ಯಗಳಿಂದ ಈ ವಾದದಿಂದುಂಟಾಗುವ ದೋಷಗಳನ್ನು ಪ್ರದರ್ಶಿಸಿ, ಸ್ವಮತ ದಲ್ಲುಂಟಾಗುವ ಸಾಮಂಜಸ್ಯವನ್ನೂ ಹೇಳಿ, ಆ ಆಕ್ಷೇಪಗಳನ್ನು ಪರಿಹರಿಸುತ್ತಾರೆ. ಶೇಷಭೂತನಾಗಿ ಪರತಂತ್ರನಾಗಿರುವ ಈ ಜೀವನನು **ತಾನೇ ಸ್ವತಂತ್ರನು** ಹೀಗೆ ಸಾಧ್ಯೋಪಾಯಗಳನ್ನವಲಂಬಿಸುವದರಿಂದ ತನ್ನ ಸ್ವರೂಪಕ್ಕೆ (೧) ಅನಿಷ್ಟವಹವೆಂಬ ಮತ್ತು (೨) ಅಸಂಭಾವಿತನೆಂಬ ಎರಡು ದೋಷಗಳಿಗೂ ಗುರಿಯಾಗುವನೆಂದು ಪೂರ್ವ ಪಕ್ಷಿಗಳು ಹೇಳುತ್ತಾರೆ ಹೇಗೆಂದರೆ **ಶೇಷಭೂತನಾದವನನ್ನು** ಶೇಷಿಯು ತನ್ನ ಇಷ್ಟಾನುಸಾರ ವಿನಿಯೋಗಿಸಿಕೊಳ್ಳುವನು. **ಅದಕ್ಕೆ** ಬದಲಾಗಿ ಈತನು **ತನ್ನಿಷ್ಟಾನುಸಾರ ಸ್ವತಂತ್ರನು** ಉಪಾಯಾನುಷ್ಠಾನಮಾಡಿದರೆ ಭಗವದನುಗ್ರಹಕ್ಕೆ ಬದಲಾಗಿ ನಿಗ್ರಹಕ್ಕೆ ಒಳಗಾಗುತ್ತಾನಾದುದರಿಂದ ಅದು ಅನಿಷ್ಟಾವಹವು. ಈತನು ಪರಾಧೀನನು, **ಅಸ್ವತಂತ್ರನು**; ಅಂತವನು ಸರ್ವೇಶ್ವರಾಜ್ಞಾನುಸಾರವಾಗಿಯೇ ವರ್ತಿಸುವದು ತನ್ನ ಸ್ವರೂಪಕ್ಕೆ ಯೋಗ್ಯವಾದುದು; ಅದಕ್ಕೆ ಬದಲಾಗಿ ತಾನೇ ಸ್ವತಂತ್ರನು ಉಪಾಯಾನುಷ್ಠಾನ ಮಾಡುವದು ತನ್ನ ಯೋಗ್ಯತೆಗೆ ವಿರುದ್ಧವಾಗಿ ಅಸಂಭಾವಿತವಾದುದು ಎಂಬ **ತಾತ್ಪರ್ಯವು.**

ಈ ಮೇಲಿನ ಪೂರ್ವಪಕ್ಷಗಳಿಗೆ **"ಇದು ಸರ್ವ ಮೋಕ್ಷ"** ವೆಂಬ ವಾಕ್ಯದಿಂದ ಪರಿಹಾರವನ್ನು ತಿಳಿಸುತ್ತಾರೆ ಹೀಗೆ ವಾದ ತಂದರೆ ಸರ್ವರಿಗೂ ಸರ್ವೇಶ್ವರನು ಸ್ವಯಂ ಒಂದೇಸಲ ಮೋಕ್ಷಕೊಡಬೇಕಾಗಿ ಬರುತ್ತದೆ. ಹೇಗೆಂದರೆ ತಿಳಿಸುತ್ತಾರೆ **ಇದು** ಎಂದರೆ ಈ **ಪೂರ್ವ ಪಕ್ಷವು, ಸರ್ವಮೋಕ್ಷ ಪ್ರಸಙ್ಗಾದಿಗಳಾಲೆ ಮುನ್ಪೇ ಪರಿಹೃತಮ್** - ಸರ್ವರಿಗೂ ಮೋಕ್ಷವು ಉಂಟಾಗಬೇಕಾಗುತ್ತದೆ ಎಂಬ ದೋಷಯುಕ್ತವಾಗಿ, **ಮುನ್ಪೇ** - ಹಿಂದೆ ಸಿದ್ಧೋಪಾಯ ಶೋಧನಾಧಿಕಾರದಲ್ಲೇ, **ಪರಿಹೃತಮ್** - ಪರಿಹರಿಸಲ್ಪಟ್ಟಿತು ಸಾಧ್ಯೋಪಾಯದ ಆವಶ್ಯಕವಿಲ್ಲದೇನೇ ಸಿದ್ಧೋಪಾಯವು ರಕ್ಷಿಸಿಬಿಡುವನು, ಆದುದರಿಂದ ಸಿದ್ಧೋಪಾಯನೇ ಸಾಕು ಎಂದು ಮಾಡಿದ ವಾದವನ್ನು ನಿರಸನಮಾಡುವ ಸಂದರ್ಭದಲ್ಲಿ ಸರ್ವಮೋಕ್ಷ ಪ್ರಸಙ್ಗ ಉಂಟಾಗುತ್ತದೆಂದು ಸಮಾಧಾನವನ್ನು **ಹೇಳಿದ್ದೆವು.**

ಇವರ್ ಶೆಯ್ದದೊರು ವ್ಯಾಜವ್ ಕೊಳ್ಳಾದೇ ಮುಕ್ತನಾಕ್ಕಿಲ್, ಅನಾದಿಯಾಗ ಮುಕ್ತನಾಕ್ಕ ಪ್ರಸಜ್ಞಿಕ್ಕುವ್. ಈಶ್ವರ್ ಕೇವಲ ಸ್ವಾತಂತ್ರ್ಯತ್ತಾಲೆ ನಿನೈತ್ತಪೋದು ಮುಕ್ತನಾಕ್ಕಿಲ್, ವೈಷಿಮ್ಯ ನೈಘೃಣ್ಯಾದಿ ದೋಷಜ್ಞಳುವ್ ವರುವ್. ನೋಕ್ಷೋಪಾಯ ವಿಧಾಯಕ ಜ್ಞಾನ ಶಾಸ್ತ್ರಜ್ಞಳು ಮೆಲ್ಲಾವ್ ನಿರರ್ಥಕಜ್ಞಳುವಾವ್

(ನೆಯ ಪುಟನೋಡಿ). ಆ ದೋಷವೇ ಇಲ್ಲಿಯೂ ತಪ್ಪಿದ್ದಲ್ಲವೆಂಬ ಭಾವವು. ಸರ್ವಮೋಕ್ಷ ಪ್ರಸಜ್ಞ ಹೇಗೆ ಎಂಬುದನ್ನು ಉಪಪಾದಿಸಿ ತಿಳಿಸುತ್ತಾರೆ **ಇವರ್ ಶೆಯ್ದ ದೊರು ವ್ಯಾಜವ್ ಕ್ಕೊಳ್ಳಾದೇ** - ಈ ಮುಮುಕ್ಷುವು ಮಾಡಿದ ಒಂದು ಶಾಸ್ತ್ರಸಿದ್ಧವಾದ ವ್ಯಾಜರೂಪವಾದ ಭಕ್ತ್ಯುಪಾಯ ರೂಪವಾ ಭರಸಮರ್ಪಣವನ್ನು ಅಂಗೀಕರಿಸದೆ, **ಮುಕ್ತನಾಕ್ಕಿಲ್** - ಆತನಿಗೆ ಮೋಕ್ಷವನ್ನು ಕೊಟ್ಟರೆ, **ಅನಾದಿಯಾಗ ಮುಕ್ತನಾಕ್ಕ ಪ್ರಸಜ್ಞಿಕ್ಕುವ್** - ಅನಾದಿಯಾಗಿ ಬಹುಕಾಲಕ್ಕೆ ಮೊದಲೇ ಮೋಕ್ಷವನ್ನು ಕೊಡಬೇಕಾಗಿತ್ತು ಎಂಬ ಆಕ್ಷೇಪವು ಉಂಟಾಗುತ್ತದೆಂಬ ಭಾವವು. ಹಿಂದೆಯೇ ಶೇಷತ್ವ ಪಾರತಂತ್ರ್ಯ ಜ್ಞಾನವಿತ್ತಲ್ಲಾ ಆಗಲೇ ಸರ್ವೇಶ್ವರನು ಏತಕ್ಕೆ ಮುಕ್ತಿಯನ್ನು ಕೊಡಲಿಲ್ಲವು? ಹೀಗೆ ಎಲ್ಲರಿಗೂ ಮೊದಲೇ ಜ್ಞಾನವಿದ್ದುದರಿಂದ ಎಲ್ಲರೂ ಮುಕ್ತರಾಗಿರಬೇಕೆಂಬ ತಾತ್ಪರ್ಯವು. ಈ ಆಕ್ಷೇಪಣೆಗೆ ಸಮಾಧಾನವಾಗಿ ಪೂರ್ವಪಕ್ಷಿಯು ಹೇಳಬಹುದು. ಏನೆಂದರೆ, ಸರ್ವೇಶ್ವರನು ಸರ್ವಸ್ವತಂತ್ರನು, ಚೇತನರು ಅವನಿಗೆ ಅಧೀನರು, ತನಗೆ ಯಾವಾಗ ಇಷ್ಟಬಂತೋ, ಆಗ ಮುಕ್ತರನ್ನಾಗಿ ಮಾಡುವನು, ಈ ಸಂದರ್ಭದಲ್ಲಿ ಆಕ್ಷೇಪಣೆ ಏನಿದೆ ಎಂದು ಹೇಳಬಹುದೆಂದು ಭಾವಿಸಿ, ಆಗಲೂ ದೋಷ ತಪ್ಪಿದ್ದಲ್ಲವೆಂದು ತಿಳಿಸುತ್ತಾರೆ. **ಈಶ್ವರನು, ಕೇವಲ ಸ್ವಾತಂತ್ರ್ಯದಿಂದ ನಿನೈತ್ತಪೋದು** - ಇಷ್ಟಬಂದಾಗ, **ಮುಕ್ತನಾಕ್ಕಿಲ್** – ಮುಕ್ತನನ್ನಾಗಿ ಮಾಡುವನು ಎಂದರೆ, **ವೈಷಮ್ಯ ನೈಘೃಣ್ಯಾದಿಗಳುವ್ ವರುವ್** - ಸರ್ವೇಶ್ವರನು, ಮುಮುಕ್ಷುಗಳ ತಾರತಮ್ಯವನ್ನು ಪರಿಗಣಿಸದೇ ತನ್ನಿಷ್ಟಾನುಸಾರ ಅನುಗ್ರಹಿಸುವನು, ತನ್ನ ಶಾಸ್ತ್ರಾನುಸಾರ ವಿಹಿತ ಕರ್ತವ್ಯೋಪಾಯವನ್ನನುಷ್ಠಿಸಿದವನೂ ಅನುಷ್ಠಿಸದೇ ಇರುವನೂ, ಮಹಾಭಾಗವತನೂ ಮಹಾ ತಾಮಸನೂ ಎಲ್ಲರೂ ಒಂದೇಯಾಗುವದರಿಂದ ಪಕ್ಷಪಾತಾದಿ ದೋಷಗಳಿಗೆ ಗುರಿಯಾಗುವನು ಎಂಬ ಭಾವವು ಅದೂ ಅಲ್ಲದೆ ಇನ್ನೊಂದು ದೋಷವೂ ತಪ್ಪದು ಎಂದು ಮುಂದಿನ ವಾಕ್ಯದಿಂದ ತೋರಿಸುತ್ತಾರೆ. **ನೋಕ್ಷೋಪಾಯ ವಿಧಾಯಕಜ್ಞ**

ಆಗೈಯಾಲಿ ಶೈಷತ್ವಾತ್ ವಕುತ್ತ ವಿಷಯುತ್ತೈ ಪತ್ತು ಗೈಯಿಲ್

ಳಾನ - ಮೋಕ್ಷೋಪಾಯಗಳನ್ನು ವಿಧಿಸಿರುವ, **ಶಾಸ್ತ್ರಗಳೆಲ್ಲಾ, ನಿರರ್ಥಕ ಜ್ಞಳುವಾಮ್** - ವ್ಯರ್ಥಗಳೂ ಆಗ ವುವು ಸರ್ವೇಶ್ವರನೇ ಸ್ವತಂತ್ರಿಸಿ ತನಗೆ ಮನಸ್ಸು ಬಂದಹಾಗೆ ಮೋಕ್ಷವನ್ನು ಕೊಡುವನು ಎಂದರೆ ಆಗ ಮೋಕ್ಷೋಪಾಯಗಳನ್ನು ವಿಧಿಸುವ ಶಾಸ್ತ್ರಗಳೆಲ್ಲಾ ವ್ಯರ್ಥವಾದವು ಉಪನಿಷತ್ತುಗಳೂ ಬ್ರಹ್ಮಸೂತ್ರಗಳೂ, ಗೀತೋಪನಿಷತ್ತೂ, ಮಹಾಭಾರತ ಭಾಗವತ, ರಾಮಾಯಣಾದಿಗಳೂ, ಆಳ್ವಾರಾಚಾರ್ಯರುಗಳ ದಿವ್ಯ ಪ್ರಬಂಧಗಳೂ, ಎಲ್ಲವೂ ಆಗ ನಿರರ್ಥಕಗಳಾಗುತ್ತದೆಂಬ ಭಾವವು.

ಸರ್ವೇಶ್ವರನೇ ಉಪಾಯಾನುಷ್ಠಾನದ ಅಪೇಕ್ಷೆಯಿಲ್ಲದೆ ಮುಮುಕ್ಷುವನ್ನು ರಕ್ಷಿಸಿಬಿಡುವನು ಎಂಬ ವಾದಕ್ಕೆ ಮೂರು ದೋಷಗಳು ತಪ್ಪಿದ್ದಲ್ಲವೆಂದು ಹೇಳಿದರು.

೧. **ಅನಾದಿ** ಕಾಲದಲ್ಲೇ ಸರ್ವಮುಕ್ತಿ ಪ್ರಸಙ್ಗವು ಲೀಲಾ ವಿಭೂತಿಯೇ ಇಲ್ಲವಾಗಬೇಕು. ೨ ವೈಷಮ್ಯ ನೈರ್ಘೃಣ್ಯಾದಿ ದೋಷಗಳು ಸರ್ವೇಶ್ವರನಿಗೆ ಉಂಟಾಗಬೇಕು. ೩ ಮೋಕ್ಷಶಾಸ್ತ್ರಗಳೆಲ್ಲಾ ನಿರರ್ಥಕವಾಗಬೇಕು.

ಹೀಗೆ ದೋಷಗಳು ಪ್ರಾಪ್ತವಾದರೆ, ಈ ಚೇತನನ ಸ್ವರೂಪ ಯೋಗ್ಯವಾದ ಅಮೋಘ ಗುಣಗಳಾದ ಶೇಷತ್ವ ಪಾರತಂತ್ರ್ಯಗಳು ನಿರರ್ಥಕವಾದುವು ಆಗಲಿಲ್ಲವೋ ? ಅವುಗಳಿಂದೇನುಪಯೋಜನವು ? ಎಂದು ಪೂರ್ವಪಕ್ಷಿಗಳು ಕೇಳಬಹುದೆಂದಾಶಙ್ಕಿಸಿ ಸಮಾಧಾನವನ್ನು ಹೇಳುತ್ತಾರೆ ಹಾಗೆ ಹೇಳುವಾಗ (೧) ಉಪಾಯದೆಶೆಯಲ್ಲೂ (೨) ಫಲ ದೆಶೆಯಲ್ಲೂ ಆ ಶೇಷತ್ವ ಪಾರತಂತ್ರ್ಯಗಳ ಉಪಯೋಗವನ್ನು ಪ್ರದರ್ಶಿಸುತ್ತಾರೆ ಶಾಸ್ತ್ರವು ವಿಧಿಸಿರುವ ಹಾಗೆ ಸಾಧ್ಯೋಪಾಯಗಳ ಅನುಷ್ಠಾನದಿಂದಲೇ ಈ ಶೇಷತ್ವ ಪಾರತಂತ್ರ್ಯಗಳಿಗೆ ಮಹಿಮೆ ಎಂದು ಆಗೈಯಾಲ್ ಎಂದಾರಂಭಿಸಿ ಉಪದೇಶಿಸುತ್ತಾರೆ :—

ಆಗೈಯಾಲ್ - ಸಾಧ್ಯೋಪಾಯವು ಶೇಷತ್ವ ಪಾರತಂತ್ರ್ಯಗಳ ಮೂಲಕವಾಗಿ ಅನಿಷ್ಟಾವಹವೆಂದೂ ಅಸಂಭಾವಿತವೆಂದೂ ಹೇಳುವ ವಾದಗಳು ದೋಷಯುಕ್ತಗಳಾಗಿ ಸರಿಯಲ್ಲವಾದುದರಿಂದ, **ಆಶೈಷತ್ವತ್ತಾಲ್** - ಹೀಗೆ ತಾನು ಶೇಷನಾದುದರಿಂದಲೇ, **ವಕುತ್ತ ವಿಷಯುತ್ತೈ** - ಸರ್ವೇಶ್ವರನಿಗೆ ತುಂಬಾ ಇಷ್ಟವಾದ ವಿಷಯವನ್ನು ಎಂದರೆ ತಾನು ಶಾಸ್ತ್ರಗಳಲ್ಲಿ ಪರಮಕೃಪಯಾ ವಿಧಿಸುವ ಸಾಧ್ಯೋಪಾಯಗಳನ್ನು, **ಪತ್ತುಗೈಯಿಲ್** - ಆಶ್ರಯಿಸಿದವರಲ್ಲಿ ಎಂದರೆ ಅನುಷ್ಠಿಸು

ಔಚಿತ್ಯಮುಮ್ ಉಡ್ಯೆಯವ್ ಉಡನ್ಮೈಯೈ ರಕ್ಷಿಕ್ಕೈಯಿಲೌಚಿತ್ಯಮು ಮುಣ್ಡಾಮ್

ವದರಲ್ಲಿ, **ಔಚಿತ್ಯಮುಮ್**-ಯೋಗ್ಯತೆಯೂ, **ಉಡ್ಯೆಯವ್**-ಆಭರಣಕ್ಕೆ ಯುಜ ಮಾನನು, **ಉಡನ್ಮೈಯೈ**-ತನ್ನ ಆಭರಣವನ್ನು, **ರಕ್ಷಿಕ್ಕೈಯಿಲ್** - ರಕ್ಷಿಸು ವದರಲ್ಲಿ, **ಔಚಿತ್ಯಮುಂ** - ಯೋಗ್ಯತೆಯೂ, **ಉಣ್ಡಾಮ್** - ಉಂಟಾಗುತ್ತದೆ. ಹೀಗೆ ಶೇಷ ಶೇಷಿಗಳಿಬ್ಬರಿಗೂ ಈ ಉಪಾಯಾನುಷ್ಠಾನದಿಂದ ಔಚಿತ್ಯ ಉಂಟಾಗುತ್ತದೆಂದು ಹೇಳಿರುತ್ತಾರೆ ಶೇಷತ್ವ ಎಂದರೆ ಯಃಥೇಷ್ಟ ವಿನಿಯೋಗಾರ್ಹತ್ವವು ಆದುದರಿಂದ ಈ ಚೇತನನಿಗೆ ಕರಣ ಕಳೇಬರಾದಿಗಳನ್ನೂ, ಶಾಸ್ತ್ರವನ್ನೂ ಶಾಸ್ತ್ರ ಬೋಧಕರಾದ ಗುರುಗಳನ್ನೂ ಕೊಟ್ಟು, ಗುರು ಮುಖೇನ ತಾನು ಶಾಸ್ತ್ರಗಳಲ್ಲಿ ಬೋಧಿಸಿರುವಹಾಗೆ ಉಪಾಯಾನುಷ್ಠಾನಮಾಡಿ ತನ್ನ ಪ್ರೀತಿಯನ್ನು ಸಂಪಾದಿಸಿಕೊಳ್ಳಲೆಂದು ಈತನನ್ನು ವಿನಿಯೋಗಿಸಿರುತ್ತಾನೆ; ಹಾಗೆ ಆತನನ್ನು ಆ ಸಾಧ್ಯೋಪಾಯ ಮುಖೇನ ಆಶ್ರಯಿಸಿದರೆ, ಸುಪುತ್ರನು ಸುಚರಿತದಿಂದ ತಂದೆಯನ್ನು ಪ್ರೀತಿಗೊಳಿಸುವಹಾಗೆ ಈ ಶೇಷನಾದ ಪುತ್ರನು ಲೋಕ ಪಿತಾವನ್ನು ಆತನ ಶಾಸ್ತ್ರವಿಧಿಯ ಮೂಲಕ ಅನುಸರಿಸಿ ನಡೆಸಿದ ಸಾಧ್ಯೋಪಾಯದಿಂದ ಸರ್ವಶೇಷಿಯು ಸಂತುಷ್ಟನಾಗುವನು. ಹೀಗೆ ಶೇಷನಿಗೆ ಔಚಿತ್ಯವು. ಶೇಷಿಗೆ ಹೇಗೆ ಔಚಿತ್ಯವೆಂದರೆ, ಈ ಚೇತನನು ತನ್ನ ಆಭರಣವು, ತುಂಬಾ ಹೃದ್ಯವು, ಇದು ಕಾರಣಾಂತರದಿಂದ ತನ್ನಲ್ಲಿರದೆ ಬೇರೆಕಡೆಯಿತ್ತುವು, ಅಸಂಖ್ಯೇಯವಾದ ಆಭರಣಗಳನ್ನು ಹೊಂದಿರುವ ಒಬ್ಬ ರಾಜನು ಒಂದು ಆಭರಣವನ್ನು ಪ್ರತ್ಯೇಕಿಸಿ ತಾನು ಧರಿಸಿದರೆ ಅದರಲ್ಲೇನೋ ಒಂದು ವಿಶೇಷವು ಹೇಗೆ ಗೋಚರವಾಗುತ್ತದೋ, ಹಾಗೆಯೇ ಅನೇಕ ಬದ್ಧಚೇತನರೆಲ್ಲಾ ಶೇಷಭೂತರಾದರೂ, ತಾನು ಅನುಗ್ರಹಿಸಲು ಯೋಗ್ಯವಾಗಿ ರಕ್ಷ್ಯವಸ್ತುವಾಗಿರುವವನು ತನ್ನಿಷ್ಟಾನುಸಾರ ನಡೆಸಿದ ಸಾಧ್ಯೋಪಾಯವನ್ನು ಅನುಷ್ಠಿಸಿದವನೆಂದು ಆತನನ್ನು ಮುಖ್ಯವಾಗಿ ವರಿಸುವದರಿಂದ ಶೇಷಿಯಾದ ತನಗೆ ಔಚಿತ್ಯವುಂಟಾಯಿತೆಂಬ ಭಾವವು ಸಾಧ್ಯೋಪಾಯದಿಂದ ಔಚಿತ್ಯ ಹೊಂದಿದವನನ್ನೇ ಶೇಷಿಯಾದ ತಾನು ರಕ್ಷಿಸಿದುದರಿಂದ ತನಗೂ ಔಚಿತ್ಯವೆಂಬ ಭಾವವು

ಸಾಧ್ಯೋಪಾಯಾನುಷ್ಠಾನದಲ್ಲಿ ಪಾರತಂತ್ರ್ಯಕ್ಕೆ ಹಾನಿಯಿಲ್ಲವು, ವಸ್ತುತಃ ಅದರಿಂದ ಪ್ರಯೋಜನವುಂಟೆಂದು ತಿಳಿಸುತ್ತಾರೆ:—**ಅತ್ಯನ್ತ ಪಾರತನ್ತ್ರ್ಯತ್ತಾಲ್**-ಸರ್ವೇಶ್ವರನಿಗೆ ಸಂಪೂರ್ಣವಾಗಿ ಅಧೀನನಾಗಿರುವದರಿಂದ, **ಅವು ಕೊಡು**

ಅತ್ಯೈನ್ತ ಪಾರತನ್ತ್ರ್ಯತ್ತಾಲ್ ಅರ್ಜ ಕೊಡುತ್ತ ಸ್ವಾತಂತ್ರ್ಯತ್ತೈ ಚ್ಚುಮನ್ದು ಅವನುಕ್ಕು ಅಭಿನುತಜ್ಞಾನ ಉಪಾಯಜ್ಞೈ ಅನುಷ್ಠಿಕ್ಕೈಯುಮ್, ಫಲನ್ ಪೆರುಗೈಕ್ಕರ್ವ ಕೈಪಾರ್ತ್ತಿರುಕ್ಕ ವೇಣ್ಡುಗೈಯುಮ್, ಸಿದ್ಧಿಕ್ಕುಮ್. ಇತ್ಯೇಷತ್ವಪಾರತಂತ್ರ್ಯಜ್ಞಾಳ್ ಇರಣ್ಡುಮ್

ತ್ತಸ್ವಾತಂತ್ರ್ಯತ್ತೈ - ಆತನು ನಮಗೆ ಸರ್ವ ಕರ್ಮಗಳಲ್ಲೂ ಕೊಟ್ಟಿರುವ ಪ್ರಭುವು ಪ್ರವೃತ್ತಿಯಲ್ಲಿನ ಸ್ವಾತಂತ್ರ್ಯವನ್ನು, ಚುಮನ್ದು - ವಹಿಸಿ ಎಂದರೆ ಶಿರಸಾವಹಿಸಿ, ಅವನುಕ್ಕು ಅಭಿನುತಜ್ಞಾನ-ಸರ್ವೇಶ್ವರನಿಗೆ ತುಂಬಾ ಇಷ್ಟ ಗಳಾದ, ಉಪಾಯಜ್ಞೈ - ಸಾಧ್ಯೋಪಾಯಗಳಾದ ಭಕ್ತಿ ಪ್ರಪತ್ತಿಗಳನ್ನು, ಅನುಷ್ಠಿಕ್ಕೈಯುಮ್ - ಅನುಷ್ಠಿಸೋಣವೂ, ಫಲನ್ ಪೆರುಗೈಕ್ಕು - ಅದರ ಫಲವನ್ನು ಹೊಂದುವವರೆಗೂ, ಅರ್ಜ ಕೈಪಾರ್ತ್ತಿರುಕ್ಕೈ ವೇಣ್ಡುಗೆಯುಮ್ - ಸರ್ವೇಶ್ವರನ ಅನುಗ್ರಹವನ್ನು ಎದುರು ನೋಡುತ್ತಿರಬೇಕಾದುದೂ, ಎರಡೂ, ಸಿದ್ಧಿಕ್ಕುಮ್ - ಸಿದ್ಧಿಸತ್ತವೆ; ಅವನಿಗೆ ಅಭಿನುತವಾಗಿರುವದನ್ನನುಷ್ಠಿಸೋಣವು ಶೇಷತ್ವದ ಪ್ರಯೋಜನವೂ, ಮೋಕ್ಷಾದಿ ಫಲಪ್ರಾಪ್ತಿಯು ಅವನ ಅನುಗ್ರಹಾನುಸಾರವಾಗಿ ಉಂಟಾಗೋಣವೂ, ಪಾರತನ್ತ್ರ್ಯದ ಪ್ರಯೋಜನವೂ, ಎಂಬ ಭಾವವು ಸರ್ವೇಶ್ವರನು ಈ ಜೀವನನಿಗೆ ಕರುಣಿಸಿಬರುವ ಯೋಗ, ಜ್ಞಾನ ವಿವೇಕ ದಾನ, ಶಾಸ್ತ್ರಪ್ರದಾನ ದೊರವಲಾದ ಸಾಕಲ್ಯಗಳನ್ನಂಟುನೂಡಿ, ಪ್ರತಿ ಯೊಂದು ಕಾರ್ಯದಲ್ಲಿಯೂ "ಕೃತಪ್ರಯತ್ನಾಪೇಕ್ಷಸ್ತ್ರ" ಎಂಬ ಬ್ರಹ್ಮ ಸೂತ್ರದಲ್ಲಿ ಹೇಳಿರುವಹಾಗೆ, ಸ್ವಾತನ್ತ್ರ್ಯವನ್ನೂ ಕೊಟ್ಟು, ಸರ್ವೇಶ್ವರನು ತನಗೆ ಅಭಿನುತವಾಗುವದನ್ನು ಅವಲಂಬಿಸು ಎಂದರೆ ಆ ಸ್ವಾಮಿದತ್ತ ಸ್ವಾತನ್ತ್ರ್ಯವನ್ನು ಶಿರಸಾವಹಿಸಿ ಆ ಅಭಿನುತಾನುಷ್ಠಾನವು ಶೇಷತ್ವದಿಂದುಂಟಾದ ಪ್ರಯೋಜನವಲ್ಲವೇ ಎಂಬಭಿಪ್ರಾಯವು ಹಾಗೆ ಅನುಷ್ಠಿಸಿ ಬಿಟ್ಟ ಫಲ ಸಂಗದಲ್ಲಿ ಮಮತೆಯನ್ನಿಡದೆ ಇದ್ದು ಪೂರ್ಣ-ಪರತನ್ತ್ರನಾಗಿ ಇದ್ದುಕೊಂಡು, ಆತನು ಅನುಗ್ರಹಿಸಿದ ಫಲವನ್ನು ಹೊಂದುವಿಕೆಯು ಪಾರತನ್ತ್ರ್ಯ ಸಾಕಾಷ್ಠೆಯಲ್ಲವೇ ಎಂಬ ಭಾವವು ಈ ಸಾಧ್ಯೋಪಾಯಗಳನ್ನು ಶಾಸ್ತ್ರಚೋದಿತ ರೀತಿಯಲ್ಲಿ ಅನುಷ್ಠಿಸುವದರಿಂದ ಶೇಷತ್ವ ಪಾರತನ್ತ್ರ್ಯಗಳೆರೆಡೂ ಚೆನ್ನಾಗಿ ಪ್ರದರ್ಶಿಸಲ್ಪಟ್ಟವೇ ವಿನಾ, ಪೂರ್ವಪಕ್ಷಿಯು ಹೇಳುವಹಾಗೆ ಇವುಗಳು ದೂರೀಕೃತಗಳಾಗಿ, ಅಹಂಕಾರ ಮಮಕಾರಗಳು ಪ್ರದರ್ಶನವೆಂಬ ಭಾವನಲ್ಲವು. ಮುಂದೆ ಪ್ರಾಸಂಗಿಕವಾಗಿ ಫಲವೆಶಿಯುಲ್ಲಾ ಎಂದರೆ ಮೋಕ್ಷಾನುಭವವಲ್ಲಾ ಕೂಡ ಈ ಶೇಷತ್ವ ಪಾರತನ್ತ್ರ್ಯಗಳಿಗನುಗುಣವಾಗಿಯೇ ಈತನ ಪ್ರವೃತ್ತಿಯು ಎಂದು ತಿಳಿಸುತ್ತಾರೆ.

ಫಲದಶೈಯಿಲ್ ಅವನುಗನ್ದ ಕೈಙ್ಕರ್ಯತ್ತೈ ಯವನಿಟ್ಪ ವಳಕ್ಕಾಗ ನಡುತ್ತುಗೈಕ್ಕು ಮುರುಪ್ಪಾವಮ್. ಇವೈಯಡಿಯಾಗ ಸ್ವರಕ್ಷಣಾರ್ಥ ಸ್ವವ್ಯಾಪಾರ ವೂಗಾದೆನ್ಬಾರ್ಕ್ಕು, ತಾಜ್ಞಳ್ ಯಥಾಶಾಸ್ತ್ರಮ್ ಭಗವತ್ಪ್ರೀತ್ಯಾದಿ ಫಲತ್ತೈ ಕ್ಕೊಳ್ಳೀಲಿ ಅನುಷ್ಠಿಕ್ಕಿರ ಕೈಙ್ಕರ್ಯತ್ತಿಲುಮ್, ಸಾಧ್ಯವಾಗ ವಿಧಿಕ್ಕ ಪಡುಗಿರ ಪ್ರಪತ್ತಿ ತನ್ನಿಲುಮ್ ಸ್ವರೂಪ ವಿರೋಧಬುದ್ಧಿಯಾಲೇ ಅಧಿಕಾರಮಿಲ್ಲೈಯಾನುಮ್. ವಾಕ್ಯಜನ್ಯವಾನ ಸಂಬಂಧಜ್ಞಾನಾದಿ

ಈ ಶೇಷತ್ವಪಾರತನ್ತ್ರ್ಯಗಳಿರಡೂ, **ಫಲದಶೈಯಿಲ್** - ಮುಕ್ತನಾಗಿ ದಿವ್ಯ ವೈಕುಂಠದಲ್ಲಿರುವ ದೆಶೆಯಲ್ಲಿ, **ಅವನುಗನ್ದ ಕೈಙ್ಕರ್ಯತ್ತೈ** - ಶ್ರಿಯಃಪತಿಗೆ ಅಭಿಮತವಾದ ಕೈಙ್ಕರ್ಯವನ್ನು, (ಇದು ಶೇಷತ್ವದ ವೃತ್ತಿಯು) **ಅವನಿಟ್ಪವಳಕ್ಕಾಗ** - ಅವನು ಆಜ್ಞಾಪಿಸಿದರೀತಿಯಲ್ಲಿ. ಇದು ಪಾರತನ್ತ್ರ್ಯ ವೃತ್ತಿಯು, **ನಡುತ್ತುಗೈಕ್ಕುಮ್** - ನಡೆಸುವದಕ್ಕೆ, **ಉರಪ್ಪಾವುಮ್** - ಸಾಧನವಾಗುತ್ತವೆ. ಸರ್ವೇಶ್ವರನ ಅಭಿಮತಾನುಸಾರವಾಗಿಯೂ, ಆತನು ವಿಧಿಸಿರುವ ಮರ್ಯಾದೆಗಳಿಗೆ ಅಧೀನವಾಗಿಯೂ ಕೈಙ್ಕರ್ಯಗಳನ್ನೆಸಗುವದರಿಂದ ಶೇಷತ್ವ ಪಾರತನ್ತ್ರ್ಯಗಳ ಸ್ವರೂಪಕ್ಕೆ **ಅನುಗುಣವಾಗಿಯೇ** ಅನುಷ್ಠಿಸಿದಂತಾಯಿತೆಂಬಭಿಪ್ರಾಯವು

ಈ ಸಂದರ್ಭದಲ್ಲಿ ಪೂರ್ವಪಕ್ಷಿಗಳು ಹೇಳಬಹುದೇನೆಂದರೆ, ಶೇಷತ್ವಪಾರತನ್ತ್ರ್ಯಗಳು ಸಾರ್ಥಕ್ಯವನ್ನು ಹೊಂದಬೇಕಾದರೆ ಸ್ವರಕ್ಷಣಾರ್ಥವಾಗಿ ಯಾವವಿಧವಾದ ವ್ಯಾಪಾರವು ಕೂಡದು ಎಂದು ಊಹಿಸಿ, ಆಸಂದರ್ಭದಲ್ಲಿ ಉಂಟಾಗುವ ದೋಷಗಳನ್ನು ತಿಳಿಸುತ್ತಾರೆ. — **ಇವೈಯಡಿಯಾಗ**-ಈ ಶೇಷತ್ವ ಪಾರತನ್ತ್ರ್ಯಗಳ ಮೂಲಕವಾಗಿ, **ಸ್ವರಕ್ಷಣಾರ್ಥ ಸ್ವವ್ಯಾಪಾರ ವೂಗಾದೆನ್ಬಾರ್ಕ್ಕುಮ್** - ತನ್ನ ರಕ್ಷಣೆಗಾಗಿ ತಾನು ಏನೊಂದೂ ವ್ಯಾಪಾರವನ್ನು ಸ್ವತಂತ್ರಿಸಿ ಮಾಡಕೂಡದೆಂದು ಹೇಳುವವರಿಗೂ (ಹೀಗೆ ಹೇಳುವವರು ಪೂರ್ವಪಕ್ಷಿಗಳು), **ತಾಜ್ಞಳ್** - ತಾವು ಎಂದರೆ ಅಂತಹ **ಪೂರ್ವ ಪಕ್ಷಿಗಳೂ ಯಥಾಶಾಸ್ತ್ರಮ್ ಭಗವತ್ಪ್ರೀತ್ಯಾದಿ ಫಲತ್ತೈ ಕ್ಕೊಳ್ಳೀಲಿ** - ಶಾಸ್ತ್ರವು ವಿಧಿಸಿರುವ ರೀತಿಯಲ್ಲಿ ಸಙ್ಕಲ್ಪಿಸಿ, **ಭಗವತ್ಪ್ರೀತ್ಯರ್ಥನುಮ್** ಭಗವತ್ಕೈಙ್ಕರ್ಯರೂಪಂ ಎಂದು ಹೇಳಿ ಫಲವನ್ನು **ಕೊಳ್ಳಿ**-ಅಪೇಕ್ಷಿಸಿ, **ಅನುಷ್ಠಿಸವ ಕೈಙ್ಕರ್ಯವಲ್ಲಾ, ಸಾಧ್ಯವಾಗ ವಿಧಿಕ್ಕಪಡುಗಿರ ಪ್ರಪತ್ತಿ ತನ್ನಿಲುಮ್**–ಸಾಧ್ಯೋಪಾಯವಾಗಿ ವಿಧಿಸಲ್ಪಟ್ಟಿರುವ ಪ್ರಪತ್ತಿಯಲ್ಲೂ ಸಹ **ಸ್ವರೂಪ ವಿರೋಧಬುದ್ಧಿಯಾಲೇ** - ಈ ಕೈಙ್ಕರ್ಯವೂ, ಈ ಪ್ರಪತ್ತಿಯೂಸಹ ಪ್ರವೃತ್ತಿರೂಪವಾಗಿ ಶೇಷತ್ವ ಪಾರತನ್ತ್ರ್ಯ ಸ್ವರೂಪಕ್ಕೆ ವಿರೋಧ

ವಾದುದರಿಂದ, **ಅಧಿಕಾರವಿಲ್ಲೈಯಾನ್** - ಅಧಿಕಾರವಿಲ್ಲವು ಎಂದಾಗುತ್ತದೆ. ಶೇಷತ್ವಪಾರತಂತ್ರ್ಯಗಳಿಗೆ ಸ್ವರಕ್ಷಣಾರ್ಥವಾಗಿ ಯಾವ ವ್ಯಾಪಾರವು **ಕೂಡದು** ಎಂದು **ಪೂರ್ವಪಕ್ಷಿಗಳು ಹೇಳಿದರು.** ಅವರೇ ಭಗವತ್ಕೈಙ್ಕರ್ಯಗಳನ್ನು ಅನುಷ್ಠಿಸಬಹುದೂ ಎಂದೂ, ಸಾಧ್ಯೋಪಾಯವು ಪ್ರಪತ್ತಿಯೇವಿನಾ ಉಪಸನವಲ್ಲವೆಂದೂ, ಹೇಳುವರು. ಸ್ವರಕ್ಷಣಾರ್ಥವಾಗಿ ಯಾವ **ವ್ಯಾಪಾರವೂ ಕೂಡದು** ಎಂದರೆ, ಭಗವತ್ಪ್ರೀತ್ಯರ್ಥಂ ಭಗವತ್ಕೈಙ್ಕರ್ಯರೂಪಂ ಎಂದು ಸಙ್ಕಲ್ಪಿಸಿ ಕೈಙ್ಕರ್ಯಗಳನ್ನು ಮಾಡುವದೂ, ಪ್ರಪತ್ತಿಯನ್ನು ಅನುಷ್ಠಿಸುವದೂ ಸಹ **ಈ ಶೇಷತ್ವ**ಪಾರತಂತ್ರ್ಯ ರೂಪಸ್ವರೂಪಕ್ಕೆ ವಿರೋಧವಾದುದು; ಆದುದರಿಂದ ಇವುಗಳಿಗೂ ಕೂಡ ಅಧಿಕಾರವಿಲ್ಲವೆಂದು ಒಪ್ಪಿಕೊಳ್ಳಬೇಕಾಯಿತು ಎಂದು ಆಕ್ಷೇಪಗಳನ್ನು ಹೇಳಿರುತ್ತಾರೆ, ಈಮೇಲಿನ ಆಕ್ಷೇಪಣೆಗಳಲ್ಲಿ ಶ್ರೀನಿಗಮಾಂತ ದೇಶಿಕರವರು "**ಸಾಧ್ಯಮಾಗ ವಿಧಿಕ್ಕ ಪಡುಗಿರ ಪ್ರಪತ್ತಿ ತನ್ನಿಲುವು**" ಎಂದು ಹೇಳಿದರು. ಶಾಸ್ತ್ರದಲ್ಲಿ ಪ್ರಪತ್ತಿಯು ಸಾಧ್ಯೋಪಾಯವೆಂದು ವಿಧಿಶಲ್ಪಟ್ಟಿರುತ್ತದೆಂಬುದನ್ನು ಒಪ್ಪಿಕೊಳ್ಳುವರೆಂದು ಹಾಗೆ ಹೇಳಿದರು. ಅದಕ್ಕೆ **ಪೂರ್ವಪಕ್ಷಿಗಳು** ಪ್ರತಿಯಾಗಿ ಹೇಳುವದೇನಂದರೆ, (೧) **ತಾನು** ಕೆಷನು ಶಿಯಃಕರ್ತವ್ಯ ಶೇಷೀ **ಎಂಬ ಸಂಬಂಧ ಜ್ಞಾನವು** ಗುರುವಿನ ಮೂಲಕ **ಉಪದೇಶವನ್ನು** ಹೊಂದಿದ ವೇಳೆಯಲ್ಲೇ ಸಿದ್ಧಿಸಿದುದರಿಂದಲೂ, (೨) ಸ್ವರಕ್ಷಣೆಯಲ್ಲಿ ತನಗೆ ಯಾವುದೊಂದು **ವ್ಯಾಪಾರವು** ಇಲ್ಲವೆಂಬುದು ಅಶಕ್ತನಾದುದರಿಂದಲೇ ಸಿದ್ಧವಾದುದರಿಂದಲೂ, (೩) ಶಾಸ್ತ್ರ ಪ್ರಮಾಣದಲ್ಲಿ **ಸಕ್ತರಾಗಿರುವವರಿಗೆ "ಅಮೃತಸ್ಯೈಷ ಸೇತುಃ"** ಸಂಸಾರದಿಂದ ದಾಟಿಸಿ ಮೋಕ್ಷಕ್ಕೆ ಮಾರ್ಗ ತೋರಿಸುವವನು ಸರ್ವೇಶ್ವರನೆಂ, **ಇವೇ** ಮೊದಲಾದ **ಶಾಸ್ತ್ರವಾಕ್ಯ** ಶ್ರವಣ ಕಾಲದಲ್ಲೇ ಸರ್ವೇಶ್ವರನ ಉಪಾಯತ್ವದಲ್ಲಿ ಸಂಪೂರ್ಣ ನಂಬಿಕೆ ಸಿದ್ಧಿಸುವದರಿಂದಲೂ, **ಇವು** ಮೂರರಲ್ಲಿ ಯಾವುದಾದರೂ ಒಂದು ಭಾವನೆಯೇ ಅಧಿಕಾರಿ ವಿಶೇಷಣವಾಗಿ ಪ್ರಪತ್ತಿಯಾಗುವದರಿಂದ, ಕೃತಿಸಾಧ್ಯ ಭಾವನೆಯಿಂದ ವಿಧೇಯವಾದುದೂ ಯಾವುದೂ ಇಲ್ಲವಾದುದಾಗಿ ಏನೊಂದು ಅನುಷ್ಠಾನವೂ ಇಲ್ಲವಾದುದಾಗಿ, ಸ್ವರೂಪ ವಿರೋಧವೇನೂ **ಇಲ್ಲವು.** ಆದುದರಿಂದ ಸ್ವರಕ್ಷಣಕ್ಕಾಗಿ ಇಲ್ಲಿ ಯಾವ ಪ್ರವೃತ್ತಿಯೂ ಇಲ್ಲವೆಂದು **ಪೂರ್ವಪಕ್ಷಿಗಳು** ಹೇಳಬಹುದಾಗಿ ಭಾವಿಸಿ, ಹಿಂದೆಯೇ ಈ ಆಕ್ಷೇಪಕ್ಕೆ ಸಮಾಧಾನವನ್ನು **ವಿಶದ**ವಾಗಿ ಹೇಳಿರುತ್ತದೆ. **ಶರಣಂ ವ್ರಜ** ಎಂಬ ವಾಕ್ಯವು ಅನುವಾದವಲ್ಲವು, ವಿಧಿವಾಕ್ಯವೇ ಎಂದು ಸ್ಥಾಪಿಸಿರುತ್ತೇವೆ ಎಂದು **"ವಾಕ್ಯಜನ್ಯಮಾನ"** ಎಂಬಾರಂಭಿಸಿದ ವಾಕ್ಯದ ಮೂಲಕ ಹೇಳುತ್ತಾರೆ **ವಾಕ್ಯಜನ್ಯಮಾನ"ಅಮೃತಸ್ಯ ಏಷಸೇತುಃ"** ಏನು, ಎಂದರೆ **"ಆಯೈವ"** ಇತ್ಯಾದಿ ವಾಕ್ಯದಿಂದುಂಟಾದ, **ಸಂಬಂಧ**

ಮಾತ್ರತ್ತಿರ್ಕ್ಕಾಟ್ಟಿಲ್ ಅತಿರಿಕ್ತಮಾಗ "ಶರಣಂ ವ್ರಜ" ಎನ್ರು ವಿಧೇಯು ಮಾ ಗೈಯಾಲೇ ಸಾಧ್ಯಮಾಯಿರುಕ್ಕುಮ್ ಪ್ರಪತ್ತಿಸ್ವರೂಪ ಮೆನ್ನು ಮಿಡಮ್ ಮುನ್ಬೇ ಶೊನ್ನೋಮ್. ಆಗೈಯಾಲ್ ತೇಷಭೂತನುಮಾ ಯ್ ಪರತಂತ್ರನುಮಾನ ಇವನುಕ್ಕು ಯಥಾಧಿಕಾರಮ್ ಸ್ವರಕ್ಷಣಾರ್ಥ ವ್ಯಾಪಾರಂ ಪಣ್ಣಕ್ಕುರೈ ಯಿಲ್ಲೈ.

೭. ಭಕ್ತಿಯೋಗಃ ಸಾರವೈಕಾಂತ್ಯೈ ವಿರುದ್ಧತ್ವಾತ್
ಸ್ವರೂಪ ವಿರುದ್ಧ ಇತಿವಾದಸ್ಯ ನಿರಾಸಃ

ಆನಾಲುಮ್, ಎನನ್ಮಾರ್ಹ್ ಶೇಷಭೂತನಾಗ ತ್ತನ್ನೈ ತೆಳಿನ್ರು ಪರವೈಕಾಂತಿಯಾ ಯಿರುಕ್ಕಿರ ಇವನುಕ್ಕು ದೇವತಾಂತರದ್ವಾರಕಜ್ಞಾನ

ಜ್ಞಾನಾದಿ ಮಾತ್ರತ್ತಿಲ್ ಕಾಟ್ಟಿಲ್ - ಶೇಷ ಶೇಷಿರೂಪಸಂಬಂಧ ಜ್ಞಾನವೇ ಮೊದಲಾದುದಕ್ಕಿಂತ, ಅತಿರಿಕ್ತಮಾಗ - ಬೇರೆಯಾಗಿ, "ಶರಣಂವ್ರಜ" ಶರಣ ಹೊಂದು, ಎನ್ರ - ಎಂಬದಾಗಿ, ವಿಧೇಯ ಮಾಗೈಯಾಲೆ - ವಿಧಿವಾಕ್ಯಕ್ಕೆ ಸಂಬಂಧಪಟ್ಟದುದಾದದರಿಂದ, ಶರಣಂವ್ರಜವೆಂಬುದು ಅನುವಾದವಲ್ಲದೆ ವಿಧಿವಾಕ್ಯವಾಗಿರುವದರಿಂದ, ಪ್ರಪತ್ತಿಯಸ್ವರೂಪವು, ಸಾಧ್ಯಮಾಯಿರುಕ್ಕುಮ್ - ಸಾಧ್ಯೋಪಾಯವಾಗಿರುತ್ತದೆ, ಎನ್ನುವಿಡಮ್ - ಎಂಬುವ ಸಂದರ್ಭವನ್ನು, ಮುನ್ಬೇ - ಹಿಂದೆಯೇ. ಶೊನ್ನೋಮ್ - ಈ ಅಧಿಕಾರದಲ್ಲೇ ಹೇಳಿದವು (೨೬ನೆಯ ಪುಟ ನೋಡಿ) ಶರಣಂವ್ರಜ ಎಂಬುದು ಯಾವಾಗ ವಿಧಿ ವಾಕ್ಯವಾಯಿತೋ, ಪ್ರಪತ್ತಿಯೂ ಕೃತಿಸಾಧ್ಯವಾದ ಸ್ವರಕ್ಷಣಾರ್ಥವಾದ ಪ್ರವೃತ್ತಿಯು ಪ್ರಪತ್ತಿಯು ಆಗಬಹುದಾದರೆ, ಉಪಾಸನೆಯು ಏಕೆ ಕೂಡದು ? ಶೇಷತ್ವ ಪಾರತಂತ್ರ್ಯಗಳಿಗೆ ಪ್ರವೃತ್ತಿಯಿಂದ ಬಾಧಕವಿಲ್ಲದಿದ್ದರೆ, ಉಪಾಸನೆಯಿಂದಲೂ ಬಾಧಕವಿಲ್ಲವೆಂದೇ ಹೇಳಬೇಕಾಗುತ್ತದೆ

ಮುಂದಿನ ವಾಕ್ಯದಿಂದ ಈಗ ಸ್ಥಾಪಿಸಿದ ಅಭಿಪ್ರಾಯವನ್ನೇ ನಿಗಮನ ಮಾಡಿ ಹೇಳುತ್ತಾರೆ :—ಆಗೈಯಾಲ್ - ಆ ಕಾರಣದಿಂದ ಶೇಷಭೂತನಾಗಿಯೂ ಪರತಂತ್ರನಾಗಿಯೂ ಇರುವ, ಇವನುಕ್ಕು - ಈ ಮುಮುಕ್ಷುವಿಗೆ, ಯಥಾಧಿಕಾರಮ್ - ಅಧಿಕಾರಿಗೆ ಅನುಗುಣವಾಗಿ ಎಂದರೆ ಶಕ್ತಿಸಿಗೆ ಉಪಾಸನೆಯೂ, ಅಶಕ್ತಿಸಿಗೆ ಭರನ್ಯಾಸವೂ, ಸ್ವರಕ್ಷಣಾರ್ಥ ವ್ಯಾಪಾರಂ - ತನ್ನ ರಕ್ಷಣಾರ್ಥವಾಗಿ ಸಾಧ್ಯೋಪಾಯಾನುಷ್ಠಾನವನ್ನು, ಪಣ್ಣಕ್ಕುರೈ ಯಿಲ್ಲೈ - ಮಾಡುವದರಿಂದೇನೂ ಬಾಧಕವಿಲ್ಲವು. ಸಾಧ್ಯೋಪಾಯಗಳಾದ ಭಕ್ತಿ ಪ್ರಪತ್ತಿಗಳಲ್ಲಿ ಯಾವುದಾದರೂ ಒಂದನ್ನು ಅನುಷ್ಠಿಸಬೇಕಾದುದೇ ಯುಕ್ತವು.

ವರ್ಣಾಶ್ರಮ ಧರ್ಮಜ್ಞಾನಮ್, ಅವಶ್ಯೈ ಇತಿ ಕರ್ತವ್ಯತ್ವೈಯಾಗ ಪುಡ್ಯೈತ್ತಾನ ಭಕ್ತಿಯೋಗಾದಿಗಳುಮ್ ಐಕಾಂತ್ಯ ವಿರುದ್ಧಜ್ಞಾನಗಳ್ಳೋ ? ಶುದ್ಧ ಯಾಜಿಗಳಕ್ಕೆನ್ರೋ ಪರಮೈಕಾಂತಿತ್ವಮ್ ಕೂಡುವದೆನ್ನಿಲ್ ? ಇದು ಭಾಷ್ಯಾದಿಗಳಿಲ್ ನಿಷ್ಕರ್ಷಂ ತೆಳಿಯಾನ್ಮೈಯ ಡಿಯಾಗ ..ನ್ದಚೋದ್ಯಮ್.

೭ ಭಕ್ತಿಯೋಗವು ಪಾರಮೈಕಾಂತ್ಯಕ್ಕೆ ವಿರೋಧವಾದುದ ರಿಂದ ಸ್ವರೂಪ ವಿರುದ್ಧವೆಂಬ ವಾದದ ನಿರಾಸನವು.

ಅನಾಲಮ್ಬ - ಶೇಷತ್ವ ಪಾರತನ್ತ್ರ್ಯಸ್ವರೂಪಕ್ಕೆ ವಿರುದ್ಧವಲ್ಲವೆಂದು ಒಪ್ಪಿದರೂ, ಇನ್ನೊಂದು ಪ್ರಬಲ ಪೂರ್ವಪಕ್ಷ ಉಂಟೆಂದು ಹೇಳುತ್ತಾರೆ ಏನೆಂದರೆ :— **ಅನನ್ಯಾರ್ಹ ಶೇಷಭೂತನಾಗ** - ಪರಮಾತ್ಮನಲ್ಲದೆ ಇನ್ನು ಯಾವ ದೇವತೆಗೂ ಶೇಷಭೂತನಾಗಿರಲು ಅರ್ಹನಲ್ಲವೆಂದು, **ತನ್ನೈತೆಳಿನ್ದು** - ತನ್ನನ್ನು ತಿಳಿದು, ಪರಮೈಕಾಂತಿಯಾಗಿರವ, **ಇವನುಕ್ಕು** - ಈ ಜೀವನನಿಗೆ, **ದೇವತಾನ್ತರ ದ್ವಾರೇಜ್ಞಾನ** - ಬೇರೆ ದೇವತೆಗಳಾದ ಸೂರ್ಯಾಗ್ನಿಗಳೇ ಮೊದಲಾದವರುಗಳ ಮೂಲಕವಾಗಿ ಆರಾಧ್ಯದೇವತೆಗಳಾಗಿ, ವಿಧಿಸಿರುವ, **ವರ್ಣಾಶ್ರಮ ಧರ್ಮಜ್ಞಾನಮ್**-ತ್ರೈವರ್ಣಿಕರ ವಿಷಯದಲ್ಲಿ ಸ್ನಾನ ಸಂಧ್ಯಾವಂದನಾದಿ ನಿತ್ಯ ನೈಮಿತ್ತಿಕ ಕರ್ಮಗಳೂ, **ಅವತ್ತೈ**-ಆನಿತ್ಯನೈಮಿತ್ತಿಕ ಕರ್ಮಗಳನ್ನೇ **ಇತಿ ಕರ್ತವ್ಯತ್ವೈಯಾಗ ಪುಡ್ಯೈತ್ತಾನ** - ಆಜ್ಞಾವಾಗಿ ಅವಶ್ಯಾನುಷ್ಠೇಯಗಳಾಗಿರುವ ಭಕ್ತಿಯೋಗವೇ ಮೊದಲಾದವುಗಳು, **ಐಕಾನ್ತ್ಯ ವಿರುದ್ಧಜ್ಞಾನಗ್ಳೋ**-ಐಕಾಂತ್ಯಕ್ಕೆ ವಿರುದ್ಧವಲ್ಲವೋ ? ಈ ಪೂರ್ವಪಕ್ಷದ ಅಭಿಪ್ರಾಯವೇನೆಂದರೆ ;— ನಿತ್ಯನೈಮಿತ್ತಿಕಾನುಷ್ಠಾನಗಳು ಈ ಸಾಧ್ಯೋಪಾಯವೆಂದು ಹೇಳಲ್ಪಡುವ ಭಕ್ತಿಯೋಗಕ್ಕೆ ಅಜ್ಞವು. ಪರಮಾತ್ಮಧ್ಯಾನಕ್ಕೆ ಐಕಾಂತ್ಯವು ಆವಶ್ಯಕವು ನಿತ್ಯನೈಮಿತ್ತಿಕಗಳಲ್ಲಿ ಅನ್ಯದೇವತಾರಾಧನವು ವಿಹಿತವಾಗಿರುವದರಿಂದ ಇಂತಹ ಐಕಾಂತ್ಯಕ್ಕೆ ಹಾನಿಯು ಅನ್ಯದೇವತಾ ಭಜನವೂ ಇರುವದರಿಂದ ಐಕಾಂತ್ಯಕ್ಕೆ ವಿರೋಧವು ಆಮದರಿಂದ ಸ್ವರೂಪವಿರುದ್ಧವು ಎಂಬುದು **ಪೂರ್ವಪಕ್ಷವು ಶುದ್ಧಯಾಜಿಗಳಕ್ಕೆನ್ರೋ** — ಅನ್ಯದೇವತಾ ಸಂಬಂಧವಿಲ್ಲದೆ ಪರತತ್ವವನ್ನು ಮಾತ್ರ ಆರಾಧಿಸಿ ಧ್ಯಾನಮಾಡುವರಿಗಲ್ಲವೋ, **ಪರಮೈಕಾಂತಿತ್ವಮ್ ಕೂಡುವದು ಎನ್ನಿಲ್** - ಪರಮೈಕಾಂತಿತ್ವವು ಸಲ್ಲುತ್ತದೆ ಎಂದರೆ ? ಇದೂ ಪೂರ್ವಪಕ್ಷಿಯ ಜೋದ್ಯವೇ. ಭಕ್ತಿಯೋಗದ ಉಪಾಸನೆಗೆ **ಪರಮೈಕಾಂತಿ**

ಎಜ್ಞನೇ ಎನ್ನಿಲ್ ? ಪ್ರತರ್ದನಾದಿ ವಿದ್ಯೈಗಳಿಲ್ ಪರಮಾತ್ಮಾ ಇಂದ್ರಾದಿ ಶರೀರಕನಾಗ ಮುಮುಕ್ಷುವುಕ್ಕು ಉಪಾಸ್ಯನೆನ್ರುರುದಿಯಿಟ್ಟುವರ್.

ತ್ವವು ಆವಶ್ಯಕವಾದುದರಿಂದ ನಿತ್ಯನೈಮಿತ್ತಿಕಗಳಲ್ಲಿನ ದೇವತಾಂತರ ಭಜನವನ್ನು ತ್ಯಜಿಸಿ, ಪರತತ್ತ್ವೋಪಾಸನೆ ಮಾಡಿದರಲ್ಲವೇ ಪರಮೈಕಾಂತಿತ್ವವು ಸಿದ್ಧಿಸುತ್ತದೇ? ಎಂದು ಆಕ್ಷೇಪವು ಇದನ್ನು ಖಂಡಿಸುತ್ತಾರೆ. ಇದು ಶ್ರೀ ಭಾಷ್ಯದ ತಿಳುನಳಿಕೆಯಿಲ್ಲದ ಅಜ್ಞಾನದ ವಿಜೃಂಭಣೆಯೆಂದು ಹೇಳುತ್ತಾರೆ **ಇದು**-ಈ ಸ್ವರೂಪವಿರುದ್ಧವೆಂಬ ಆಕ್ಷೇಪವ, **ಭಾಷ್ಯಾದಿಗಳಿಲ್** - ಶ್ರೀ ಭಾಷ್ಯಕಾರರು ಒದಿರುವ ಶಾರೀರಕ ಸೂತ್ರಗಳ ಭಾಷ್ಯದಲ್ಲಿರುವ. **ನಿಷ್ಕರ್ಷೆ ತಿಳಿಯಾಮೈ** - ಇದು ಹೀಗೆಯೇ ಸರಿ ಎಂಬ ನಿಷ್ಕರ್ಷೆಯುಳ್ಳ ಜ್ಞಾನವಿಲ್ಲದಿರೋಣದರ, **ಆಡಿಯಾಗ-ಮೂಲಕವಾಗಿ, ವನ್ದಚೋದ್ಯವ್** - ಬಂದಾಕ್ಷೇಪವು. ಶ್ರೀ ಭಾಷ್ಯದಲ್ಲಿ ಶ್ರೀ ಭಾಷ್ಯಕಾರರ ಉಪದೇಶವನ್ನು ಜನ್ಮಾಗಿ ತೀರದಿದ್ದಪಕ್ಷದಲ್ಲಿ, ಇಂತಹ ಆಕ್ಷೇಪಕ್ಕೆ ಅವಕಾಶವಿರುತ್ತಿರಲಿಲ್ಲವೆಂಬ ಭಾವವ. **ಎಜ್ಞನೇ ಎನ್ನಿಲ್** - ಅದು ಹೇಗೆ ಎಂದರೆ, **ಪ್ರತರ್ದನಾದಿ ವಿದ್ಯೈಗಳಿಲೇ** - ಪ್ರತರ್ದನವೇ ಮೊದಲಾದ ಬ್ರಹ್ಮ ವಿದ್ಯೈಗಳಲ್ಲಿ, ಪರಮಾತ್ಮನು, **ಇಂದ್ರಾದಿ ಶರೀರಕನಾಗ**-ಇಂದ್ರನೇ ಮೊದಲಾದ ದೇವತೆಗಳ ಶರೀರವಾಗಿರುವುಳ್ಳವನಾಗಿ, **ಮುಮುಕ್ಷುವುಕ್ಕು ಮೋಕ್ಷಾರ್ಥಿಗೆ. ಉಪಾಸ್ಯನೆನ್ರು** - ಉಪಾಸ್ಯನೆಂದು, **ಉರುದಿಯಿಟ್ಟುವರ್**-ನಿರ್ಧರಿಸಿರುತ್ತಾರೆ, ಐಕಾಂತ್ಯ ಹಾನಿ ಎಂಬ ಪೂರ್ವಪಕ್ಷವನ್ನು ಎರಡು ವಿಧವಾಗಿ ವಿಕಲ್ಪಿಸಿ ಪರಿಹರಿಸುತ್ತಾರೆ (೧) ದೇವತಾಂತರ ದ್ವಾರವಾಗಿ ಉಪಾಸನಾದಿಗಳನ್ನು ಮಾಡುವುದರಿಂದ ಪಾರಮೈಕಾಂತ್ಯಕ್ಕೆ ವಿರೋಧವೇ (೨) ಇಲ್ಲವೇ ದೇವತಾಂತರ ದ್ವಾರಾ ಅನುಷ್ಠಿಸುವ ವರ್ಣಾಶ್ರಮಗಳು ಉಪಾಸನಕ್ಕೆ ಅಜ್ಞವಾಗಿರುವುದರಿಂದ ವಿರೋಧವೇ ಎಂದು ವಿಕಲ್ಪಿಸಿ, ಮೊದಲಿನ ಪಕ್ಷವನ್ನು ಪರಿಹರಿಸುತ್ತಾರೆ ಪ್ರತರ್ದನಾದಿ ವಿದ್ಯೈಗಳಲ್ಲಿ (ಆದಿ ಶಬ್ದದಿಂದ ಮಧು ವಿದ್ಯೆಯು ಹೇಳಲ್ಪಟ್ಟಿತ) ಈ ಪ್ರತರ್ದನ ವಿದ್ಯೆಯಲ್ಲಿ ಇಂದ್ರನು ನಾನು ಪ್ರಾಣ ಕಿಬ್ಬಿನು, ನನ್ನನ್ನು ಉಪಾಸನೆ ಮಾಡು ಎಂದು ಕೌಷೀತಕ್ಯುಪನಿಷತ್ತು ಖ. ೧ ರಲ್ಲಿ "**ತ್ವಮೇವ ಮೇವರಂ ವೃಣೀಷ್ವ ತಾ ತ್ವಾ ಪೃಚ್ಛಾಮಿ ಪ್ರಜ್ಞಾತ್ಯಾ, ಮಾ ಮಾಯುರಮೃತ ಮಿತ್ಯುಪಾಸ್ವ**" ಯೆಂದು ಇಂದ್ರನು ಹೇಳುವ ವಾಕ್ಯವಾಗಿರುತ್ತದೆ, **ಇಂದ್ರಪ್ರಾಣ** ಶಬ್ದದಿಂದ ಹೇಳಲ್ಪಟ್ಟವನು ಯಾರು ಎಂಬ ಚರ್ಚೆಯಲ್ಲಿ ಆನಂದತ್ವ, ಅಜರತ್ವ ಅಮೃತತ್ವಾದಿಗಳು ಹೇಳಲ್ಪಟ್ಟರುನದರಿಂದ **ಇಂದ್ರಪ್ರಾಣ** ಶಬ್ದದಿಂದ ಹೇಳಲ್ಪಟ್ಟವನು ಜೀವ

ನಾವ ಇಂದ್ರನಲ್ಲವೆಂದೂ ತಚ್ಛರೀರಕನಾದ ಪರಮಾತ್ಮನೆಂದೂ ನಿರ್ಧರಿಸಲ್ಪಟ್ಟಿರುತ್ತದೆ. ಆದರೆ ಇಂದ್ರನೇ ಇವನ್ನು **ಮಾನುಷಾಸ್ಯ** ಎಂದು ಹೇಳಿರುವದರಿಂದ ಆ ಉಪಾಸನೆಯು ಹೇಗೆ ಮೋಕ್ಷದಾಯಕವಾದ ಪರಮಾತ್ಮೋಪಾಸನೆಯಾಗುತ್ತದೆ ಎಂಬ ಶಙ್ಕೆಯಿನಲ್ಲಿ **ಜೀವ ಮುಖ್ಯಪ್ರಾಣ ಲಿಙ್ಗಾನ್ನೇತಿಚೇನ್ನ, ಉಪಾಸಾತ್ರೈವಿಧ್ಯಾತ್, ಆಶ್ರಿತತ್ವಾತ್, ಇಹತದ್ಯೋಗಾತ್** ಎಂಬ ಸೂತ್ರದ ಮೂಲಕ ಸಮಾಧಾನವು ಹೇಳಲ್ಪಟ್ಟಿರುತ್ತದೆ. ಇಲ್ಲಿ ತತ್ವಿಷ್ಣುವಷ್ಟೆ ಏನು, **ಎಲ್ಲಿವರೆಗೂ ಪ್ರಾಣವಿರುತ್ತದೋ ಅಲ್ಲಿವರೆಗೂ ಆಯುಸ್ಸೂ** ಎಂಬುದೇನು, ಹೀಗೆ ಜೀವನಾದ ಇಂದ್ರನೇ ಇಲ್ಲಿ ಉಪಾಸ್ಯನೆಂದು ಪೂರ್ವಪಕ್ಷತಂದರೆ ಹಾಗಲ್ಲವು. ಏಕೆಂದರೆ ಪರಮಾತ್ಮೋಪಾಸನವು ಮೂರುವಿಧವೆಂದು ಹೇಳಲ್ಪಟ್ಟಿರುತ್ತದೆಯಾವುದರಿಂದ; ಹೇಗೆಂದರೆ:—(೧) **ಸತ್ಯತ್ವ ಜ್ಞಾನತ್ವ ಆನಂದತ್ವ ದಿವ್ಯಮಙ್ಗಳವಿಗ್ರಹ ಇವುಗಳಿಂದ ಕೂಡಿದವನನ್ನೇ ಜಗತ್ಕಾರಣನಾದ ಪರಮಾತ್ಮನೆಂದು** ಉಪಾಸನೆಯು ಒಂದು ವಿಧವು (೨) ಭೋಕ್ತಾವಾಗಿರುವ, ಪ್ರಕೃತದಲ್ಲಿ ಇಂದ್ರಾದಿ ಶರೀರಕನಾಗಿರುವವನನ್ನೇ ಪರಮಾತ್ಮಾವೆಂದು ಉಪಾಸನೆಯು ಎರಡನೆಯ ವಿಧವು (೩) ಭೋಗ್ಯ ಭೋಗೋಪಕರಣ ಶರೀರಕನಾಗಿರುವವನ ಉಪಾಸನೆಯು ಮೂರನೆಯ ವಿಧವು **ಈ ಕೌಷೀತಕೀ ಉಪನಿಷತ್ತಿನಲ್ಲೂ ಈ ಮೂರು** ವಿಧ ಪರಮಾತ್ಮೋಪಾಸನೆಯೂ ಹೇಳಲ್ಪಟ್ಟಿರುತ್ತವೆ. **(೧) ಆನನ್ದೋ ಜರೋಽನ್ಯತಃ** ಎಂಬುದರಲ್ಲಿ ಸ್ವರೂಪವನು ನಂಧಾನವೂ **(೨) ಮಾನುಷಾಸ್ಯ** ಎಂದು ಇಂದ್ರನು ಹೇಳುವದರಿಂದ **ಭೋಕ್ತೃ** ಶರೀರಕನಾಗಿ ಉಪಾಸನವೂ, (೩) **ಪ್ರಾಣೋಽಸ್ಮಿ** ಎಂಬುವದರಿಂದ ಭೋಗ್ಯ ಭೋಗೋಪಕರಣ ಶರೀರಕತ್ವನುಸಂಧಾನವೂ **ಉಪದೇಶಿಸಲ್ಪಟ್ಟಿರುತ್ತವೆ.** ಇಂತಹ ಬ್ರಹ್ಮವಿದ್ಯೆಯಾದ ಪ್ರತರ್ದನ ವಿದ್ಯೆಯಲ್ಲಿ, ತಾನೇ ಪರಮಾತ್ಮ ಶರೀರನಾಗಿರುವದರಿಂದ ತನ್ನನ್ನೇ ಉಪಾಸನಮಾಡು ಎಂದು ಇಂದ್ರನು ಹೇಳಿರುವದು ಶಾಸ್ತ್ರೋಕ್ತವಾಗಿರುವದರಿಂದ ಇದರಲ್ಲಿ ಅನ್ಯದೇವತೋಪಾಸನರೂಪದೋಷಕ್ಕೆ ಕಾರಣವೇ ಇಲ್ಲವು ಆದುದರಿಂದ, **ಇಂದ್ರಾದಿ ಶರೀರಕನಾಗ ಮುನುಷ್ಯುವುಕ್ಕು ಉಪಾಸ್ಯ** ಎಂದು ಹೇಳಿರುತ್ತಾರೆ. ಹಾಗೆಯೇ ಮಧುವಿದ್ಯೆಯಲ್ಲೂ ಸಹ ಆದಿತ್ಯನ ಪೂರ್ವಾದಿ ಅಂಶಗಳು ಕ್ರಮವಾಗಿ ವಸುರುದ್ರಾದಿತ್ಯ ಮರುತ್ಸಾಧ್ಯರಿಗೆ ಮಧುವಾಗಿ ಬಹು **ಭೋಗ್ಯವೆಂದೂ ಉಪಾಸ್ಯನೆಂದೂ ಉಪದೇಶಿಸಲ್ಪಟ್ಟಿವೆ.** ವಸ್ವಾದಿಗಳಿಗೆ ಸ್ವಶರೀರಕ **ಪರಮಾತ್ಮನೇ** ಉಪಾಸ್ಯವಾದುದರಿಂದ ಅಂತಹ ಉಪಾಸನೆಯಲ್ಲಿ ಏನೊಂದು ವಿರೋಧವಿಲ್ಲವೆಂದೂ **ವಸ್ವಾದಿ** ದೇವತಾವಿಶೇಷಗಳಿಗೂ ಮಧು ವಿದ್ಯೆಯಲ್ಲಿ ಅಧಿಕಾರ ಉಂಟೆಂದು **ಶ್ರೀ** ಬಾದರಾಯಣರು,

ವಿದ್ಯಾಜ್ಞಾನಾನ ವರ್ಣಾಶ್ರವಾಧರ್ಮಜ್ಞಾಳಿಲಾವ್ ಅವ್ವೋ ದೇವತೈಗಳೈ ಶರೀರವಾಗಕೊಂಡುನಿರ್ಕಿರ ಪರವಾತ್ಮನೇ ಆರಾಧ್ಯನೆನ್ರು ನಿಷ್ಕರ್ಷಿತ್ತಾರ್.

"ಭಾವನ್ತು ಬಾದರಾಯಣೋಽಸ್ತಿಹಿ" ಎಂಬ ಸೂತ್ರದಲ್ಲಿ (೧ ೩ ೩೦) ಸ್ಥಾಪಿಸಿರುತ್ತಾರೆ ಇಲ್ಲಿಯೂ ದೇವತಾಂತರೋಪಾಸನೆ ಎಂಬ ವಿರೋಧವೇನೂ ಇಲ್ಲವು; ತಚ್ಛರೀರಕ ಪರವಾತ್ಮನೇ ಉಪಾಸ್ಯನಾಮದಿಂದ ಎಂಬ ಭಾವವು.

ಮುಂದೆ ಪೂರ್ವಪಕ್ಷವ ಎರಡನೆಯ ವಿಕಲ್ಪವಾದ ಉಪಾಸನೆಗೆ ಅಜ್ಞವಾದ ನಿತ್ಯನೈಮಿತ್ತಿಕಾನ ಷ್ಠಾನವಲ್ಲಿ ಅನ್ಯದೇವತಾ ಭಜನವಿರುವುದರಿಂದ, ಉಪಾಸನವು ಸ್ವರೂಪ ವಿರುದ್ಧವೆಂಬ ಆಕ್ಷೇಪವನ್ನು ಮುಂದಿನವಾಕ್ಯದಿಂದ ಖಂಡಿಸುತ್ತಾರೆ, **ವಿದ್ಯಾಜ್ಞಾನಾನ** - ಬ್ರಹ್ಮವಿದ್ಯಾರೂಪ ಉಪಾಸನೆಗೆ ಅಜ್ಞವಾದ, **ವರ್ಣಾಶ್ರವು ಧರ್ಮಜ್ಞಾಳಿಲಾವ್** - ವರ್ಣಾಶ್ರವು ಧರ್ಮಗಳಾದ ನಿತ್ಯ ನೈಮಿತ್ತಿಕ ಕವರ್ಾನುಷ್ಠಾನಗಳಲ್ಲಿ, **ಅವ್ವೋ ದೇವತೈಗಳೈ ಶರೀರ ವಾಗಕೊಂಡು ನಿರ್ಕಿರ ಪರವಾತ್ಮನೇ** - ಆವುವಾ ಸೂರ್ಯ ಅಗ್ನಿ ಮೊದಲಾದ ದೇವತೆಗಳನ್ನೇ ಶರೀರವಾಗಿ ಹೊಂದಿರುವ, ಸರ್ವೇಶ್ವರನೇ, **ಆರಾಧ್ಯನೆನ್ರು** - ಆರಾಧಿಸಲ್ಪಡುವನೆಂದು, **ನಿಷ್ಕರ್ಷಿತ್ತಾರ್** - ಶ್ರೀ ಭಾಷ್ಯಕಾರರು ಸ್ಥಾಪಿಸಿರುತ್ತಾರೆ. ನಿತ್ಯನೈಮಿತ್ತಿಕ ಕರ್ಮಗಳು ಕರ್ಮಯೋಗಕ್ಕೇ ಅಜ್ಞವೆಂದು ಗೀ ಜ ೩ನೆಯ ಶ್ಲೋಕದ ಅವತಾರಿಕೆಯುಲ್ಲ "**ನಿತ್ಯ ನೈಮಿತ್ತಿಕ ಕರ್ಮೇತಿಕರ್ತವ್ಯತಾಕಸ್ಯ ಕರ್ಮಯೋಗಸ್ಯ ಯೋಗಶಿರಸ್ಕಸ್ಯ**" ಎಂಬದಾಗಿ ಹೇಳಿರುವದರಿಂದ ಭಕ್ತಿಯೋಗನಿಷ್ಠನು ಎಂದಿಗೂ ಬಿಡಲು ಸಾಧ್ಯವಿಲ್ಲವು. ಹಾಗೆಯೇ ಸ್ವತಂತ್ರ ಪ್ರವೃತ್ತಿ ನಿಷ್ಠನಿಗೂ, ಪ್ರವೃತ್ತಿಗೇನೂ ಅಜ್ಞವಲ್ಲವಿದ್ದರೂ ನಿತ್ಯನೈಮಿತ್ತಿಕಗಳು ಜನ್ಮಕ್ಕೆ ಅಂಟಿರುವುದರಿಂದ ತ್ಯಜಿಸಲು ಸಾಧ್ಯವಿಲ್ಲವು ಈ ನಿತ್ಯ ನೈಮಿತ್ತಿಕಾನುಷ್ಠಾನಗಳಲ್ಲಿ ಅನ್ಯದೇವತೆಗಳು ಆರಾಧಿಸಲ್ಪಡುವವಿಲ್ಲವು ಅವರುಗಳನ್ನೇ ಶರೀರವಾಗಿ ಹೊಂದಿರುವ "**ಭೋಕ್ತಾರಂ ಯಜ್ಞ ತಪಸಾಂ**" ಎಂದು ಹೇಳಿರುವ ಪರವಾತ್ಮನೇ ಆರಾಧಿಸಲ್ಪಡುವನೆಂಬ ಸ್ವರೂಪ ವಿರುದ್ಧತ್ವಕ್ಕೇ ಕಾರಣವೇ ಇಲ್ಲವು ಇನ್ನೊಂದು ಕಡೆಯಲ್ಲೂ ಶ್ರೀಕೃಷ್ಣಭಗವಾನರು "**ತಹಂಕ್ರತು ರಹಂ ಯಜ್ಞಃ ಸ್ವಧಾಹಮಹಮ ಮೌಷಧಮ್** । **ಮಂತ್ರೋಽಹಮಹಮೇವಾಜ್ಯ ಮಹಮಗ್ನಿ ರಹಂಹುತಮ್**" ॥ (ಗೀ. ೯. ೧೬) ಸರ್ವೇಶ್ವರನು ವಿಶ್ವಶರೀರಕನಾನುವುದಂತ ವಿಶ್ವದ ವಸ್ತುಗಳೊಂದಿಗೆ ಸಾವಾನಾಧಿಕರಣ್ಯವು

ಇಲ್ಲಿ ಹೇಳಲ್ಪಟ್ಟಿದೆ. ನಿತ್ಯನೈಮಿತ್ತಿಕಗಳಲ್ಲೂ ಅನ್ಯದೇವತೆಗಳೇ ಶರೀರವಾಗಿವುಳ್ಳ ಪರಮಾತ್ಮನೇ ಆರಾಧಿಸಲ್ಪಡುವನೆಂಬ ಭಾವವು ಶ್ರೀ ಭಾಷ್ಯಕಾರರು ಹಾಗೆ ಎಲ್ಲಿ ಹೇಳಿರುತ್ತಾರೆ ಎಂದರೆ "**ಚರಾಚರ ವ್ಯಪಾಶ್ರಯಸ್ತು ಸ್ಯಾತ್ತದ್ವ್ಯಪದೇ ಶೋ೭ಭುಕ್ತಸ್ತದ್ಭಾವಭಾವಿತ್ವಾತ್**" (ಬ್ರ. ಸೂ. ೨ ೩ ೧೭) ಎಂಬುದರ ಭಾಷ್ಯದಲ್ಲಿ, ಸ್ಥಾವರ ಜಙ್ಗಮವಸ್ತುವನ್ನು ಬೋಧಿಸುವ ಸಮಸ್ತ ಶಬ್ದವೂ ಪರಬ್ರಹ್ಮವನ್ನು ಬೋಧಿಸುತ್ತದೆಂಬುದು ಮುಖ್ಯವೃತ್ತಿಯಿಂದಲೇ ಎಂದೇ ಭಾವಿಸತಕ್ಕದ್ದು; ಏಕೆಂದರೆ ತೇಜಸ್ಸೇ ಮೊದಲಾದ ಸಮಸ್ತ ವಸ್ತುಗಳಿಗೆ ಆತ್ಮಾವಾಗಿರುವದರಿಂದ ಪರಬ್ರಹ್ಮಭಾವವು ಇರುವದರಿಂದ, "**ಸರ್ವಸ್ಯ ವಸ್ತುನಃ ತಚ್ಛರೀರತಯಾ ತತ್ಪ್ರಕಾರತ್ವಾತ್ ತತ್ತದ್ವಾಚಿನಾಂ ಶಬ್ದಾನಾಂ ತತ್ಪರ್ಯವಸಾನಾತ್**" ಎಂದರೆ "ಸಮಸ್ತ ವಸ್ತುಗಳೂ (ಇನ್ನಿಂದು ಚೇತನಾಚೇತನವೆಲ್ಲಾ ಹೇಳಲ್ಪಟ್ಟಿತು) ಪರಮಾತ್ಮನಿಗೆ ಶರೀರವಾಗಿರುವದರಿಂದ, ಇವುಗಳೆಲ್ಲವೂ ಪ್ರಕಾರವು, ಪರಮಾತ್ಮನು ಪ್ರಕಾರಿಯು, ಆದುದರಿಂದ ಅವುಗಳನ್ನೆಲ್ಲಾ ಬೋಧಿಸುವ ಶಬ್ದಗಳಿಗೆ ಪರಮಾತ್ಮನಲ್ಲೇ ಅನ್ವಯವು" ಎಂದು ಶ್ರೀ ಭಾಷ್ಯದಲ್ಲಿ ಹೇಳಿರುತ್ತಾರೆಂಬ ಭಾವವು. ಆದುದರಿಂದ ಸೂರ್ಯ, ಅಗ್ನಿ ಮೊದಲಾದ ಶಬ್ದಗಳು ತತ್ತಚ್ಛರೀರಕ ಪರಮಾತ್ಮನನ್ನೇ ಬೋಧಿಸುತ್ತವೆ. ಈ ತಿರುಮಂತ್ರವನ್ನೇ ಸ್ವಾಮಿ ವೇದಾಂತದೇಶಿಕರು ಶರಣಾಗತಿ ದೀಪಿಕೆಯಲ್ಲೂ ವ್ಯಕ್ತಪಡಿಸಿರುತ್ತಾರೆ.

"ವಿಶ್ವಂ ಶುಭಾಶ್ರಯವದೀಶ ವಪುಸ್ತ್ವದೀಯಂ।
ಸರ್ವಾಗಿರ ಸ್ತ್ವಯಿ ಪತಂತಿ ತತೋ೭ಸಿ ಸರ್ವಃ॥
ಸರ್ವೇ ಚ ವೇದ ವಿಧಯ ಸ್ತ್ವದನುಗ್ರಹಾರ್ಥಾಃ।
ಸರ್ವಾಧಿಕಸ್ತ್ವಮಿತಿ ತತ್ತ್ವವಿದ ಸ್ತದಾಹುಃ॥

ನಿನಗೆ ದಿವ್ಯ ಮಙ್ಗಳ ವಿಗ್ರಹವು ಹೇಗೆ ಶರೀರವೋ ಹಾಗೆಯೇ ಸಮಸ್ತ ವಿಶ್ವವೂ ನಿನ್ನ ಶರೀರವು. ಶರೀರನನ್ನು ಬೋಧಿಸುವ ಶಬ್ದಗಳು ಶರೀರಿಯನ್ನೂ ಸಹ ಬೋಧಿಸುವದರಿಂದ ಎಲ್ಲವು ಗಳನ್ನು ವ್ಯವಹರಿಸುವ ಶಬ್ದಗಳು ನಿನ್ನನ್ನೂ ಬೋಧಿಸುತ್ತವೆ, ಆದುದರಿಂದ "**ಜ್ಯೋತಿರಂಶಿ ವಿಷ್ಣುರ್ಭುವನಾನಿ ವಿಷ್ಣುರ್ವರ್ನಾನಿ ವಿಷ್ಣುರ್ಗಿರಯೋ ದಿಶಶ್ಚ। ನನ್ಯಸ್ಯನುದ್ಯಾಶ್ಚ ಸವಿನ ಸರ್ವಂ ಯದಸ್ತಿಯನ್ನಾಸ್ತಿಚ ವಿಪ್ರವರ್ಯ**" (ವಿ ಪು ೨.೧೨.೩೮) ಎಂದು ಹೇಳಿರುವಹಾಗೆ ಸಮಸ್ತ ಚಿದಚಿತ್ತುಗಳೂ ವಿಷ್ಣುವಿಗೆ ಶರೀರವಾಗುವದರಿಂದ ಎಲ್ಲಾ ಶಬ್ದಗಳೂ ತತ್ತಚ್ಛರೀರಕ ಪರಮಾತ್ಮನನ್ನೇ ಬೋಧಿಸುವದರಿಂದ ಎಲ್ಲವೂ ವಿಷ್ಣುವೇ ಎಂಬ ಸಾಮಾನಾಧಿಕರಣ್ಯವು. ನಿತ್ಯನೈಮಿತ್ತಿಕಾದಿ ವೇದವಿಧಿಗಳಿಗೆ ಅನುಸಾರವಾದ ಅನುಷ್ಠಾನಗಳೆಲ್ಲಾ ವಿಷ್ಣುವಿನ ಅನುಗ್ರಹ ಸಾಧನಕಗಳೆಂದು ಹೇಳಲ್ಪಟ್ಟಿರುತ್ತವೆ. ಆದು

ಆಗೈಯಾಲ್ ಸ್ವತಂತ್ರವಾಗ ಶಿಲದೇವತೈಗಳೈಪ್ಪತ್ತಿನಾಲುಮ್, ಫಲಾಂತರ ಕಾಮುನೈಯಾಲೇ ತನ್ನುಡೈಯ ನಿತ್ಯನೈಮಿತ್ತಿಕಜ್ಞಳುಕ್ಕು ಪುರಮ್ಬಾನ ದೇವತಾಂತರಾನ್ಶಯಮ್ ವರಿಲುಮ್ ಪರಮೈಕಾಂತಿತ್ವಕ್ಕು ವಿರುದ್ಧಮಾಮ್.

ದರಿಂದ ನಿತ್ಯ ನೈಮಿತ್ತಿಕಗಳಲ್ಲಿ ಸೂರ್ಯ, ಅಗ್ನಿ, ಇಂದ್ರ ಮೊದಲಾದ ದೇವತೆಗಳು ಆರಾಧಿಸಲ್ಪಟ್ಟರೂ, ತತ್ತಚ್ಛರೀರಕ ಪರಮಾತ್ಮನೇ ಆರಾಧಿಸಲ್ಪಡುವದರಿಂದ ಪ್ರಪನ್ನನಿಗೇನೂ ಬಾಧಕವೇನೂ ಇಲ್ಲವೆಂಬ ಭಾವವು; ಇದೂ ಇಲ್ಲದೆ ಸಾತ್ವಿಕ ತ್ಯಾಗವೂ ನಡೆಯುವದರಿಂದ ಈಷದಪಿ ವಿರೋಧವಿಲ್ಲವೆಂಬುದು ಏರ್ಪಟ್ಟಿತು. ಆದರೆ ಅನ್ಯದೇವತೆಯ ಹೆಸರಿನಲ್ಲಿ ನಡೆಸಿದ ಆರಾಧನೆಯು ಪರಮಾತ್ಮನಿಗೆ ಹೇಗೆ ಸಲ್ಲುತ್ತದೆ ಎಂಬ ಶಙ್ಕಾವಿನಲ್ಲಿ ಹಿಂದೆ ಸ್ವಾಮಿ ದೇಶಿಕರವರು ಕೊಟ್ಟ ರ.ವ ದೃಷ್ಟಾಂತವನ್ನು ಇಲ್ಲಿ ಜ್ಞಾಪಕಕ್ಕೆ ತರಬಹುದು. ಒಬ್ಬ ರಾಜನು ಪೀತಾಂಬರ ಕವಚವನ್ನು ಧರಿಸಿದ್ದರೆ, ಆದರಮೇಲೆ ಒಂದು ಪುಷ್ಪಮಾಲೆಯನ್ನು ಹಾಕಿದರೆ, ಕವಚಕ್ಕೆ ಅನ್ವಯಿಸದೆ ಇದು ರಾಜನಿಗೆ ಹೇಗೆ ಅನ್ವಯಿಸುತ್ತದೋ ಹಾಗೆಯೇ ಸೂರ್ಯಾಗ್ನಿ ರುದ್ರೇಂದ್ರಾದಿ ವಿಶಿಷ್ಟ ಪರಮಾತ್ಮನನ್ನು ಆರಾಧಿಸಿದರೂ, ಪರಮಾತ್ಮನೇ ಆರಾಧಿಸಲ್ಪಡುವನು ಎಂಬ ತಾತ್ಪರ್ಯವು ಹೀಗೆ ನಿತ್ಯನೈಮಿತ್ತಿಕಜ್ಞಳ ಮೂಲಕ ಅನ್ಯದೇವತಾ ಹೆಸರಿನಲ್ಲಿ ನಡೆಸುವ ಪಂಚಮಹಾಯಜ್ಞಾದಿಗಳು ಪ್ರಪನ್ನನ ಪರಮೈಕಾಂತಿತ್ವಕ್ಕೆ ವಿರೋಧವಲ್ಲವೆಂದು ಹೇಳಲ್ಪಟ್ಟಿತು

ನಿತ್ಯನೈಮಿತ್ತಿಕಾದಿಗಳೇ **ಆಗಲಿ**, ಅಥವ ಇತರ ಕಾಮ್ಯಕರ್ಮಗಳ ರೂಪದಲ್ಲಿ ಅನ್ಯದೇವತಾಭಜನವಾಗಲಿ ಪ್ರಪನ್ನನ ಪರಮೈಕಾಂತಿತ್ವಕ್ಕೆ ಯಾವಾಗ ವಿರೋಧವಾಗಬಹುದೆಂಬುದನ್ನು, **ಆಗೈಯಾಲ್** ಎಂಬ ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. ಎರಡು ಸಂದರ್ಭಗಳಲ್ಲಿ ಮಾತ್ರ ವಿರೋಧವಾಗಬಹುದು ಎಂದು ಹೇಳುತ್ತಾರೆ ಹೇಗೆಂದರೆ—**ಆಗೈಯಾಲ್** – ಹೀಗೆ ನಿತ್ಯನೈಮಿತ್ತಿಕಾನುಷ್ಠಾನಗಳಲ್ಲಿ ತತ್ತದ್ದೇವತಾಶರೀರಕನಾದ ಪರಮಾತ್ಮನೇ ಆರಾಧಿಸಲ್ಪಡುವದರಿಂದ, (೧) **ಸ್ವತಂತ್ರವಾಗ ಶಿಲದೇವತೆಗಳೈಪ್ಪತ್ತಿನಾಲುಮ್** - ತತ್ತತ್ತಚ್ಛರೀರಕನೆಂಬ ಭಾವನೆಯಲ್ಲದೆ ಆ ಕೆಲವು ದೇವತೆಗಳನ್ನೇ ನಿತ್ಯ ನೈಮಿತ್ತಿಕಗಳಲ್ಲೇ ಆರಾಧಿಸಿದರೂ, (೨) ಅಥವಾ **ಫಲಾಂತರ ಕಾಮುನೈಯಾಲೇ** - ಮೋಕ್ಷೇತರ ಫಲಕಾಮನೆಯಿಂದ. **ತನ್ನುಡೈಯ ನಿತ್ಯನೈಮಿತ್ತಜ್ಞಳುಕ್ಕು ಪುರಮ್ಬಾನ** – ತನ್ನ ನಿತ್ಯ ನೈಮಿತ್ತಿಕಗಳಿಗೆ ಹೊರಗಾದ ಎಂದರೆ ಸೇರದ, **ದೇವತಾನ್ತರಾನ್ಶ**

ಯಮ್ ವರಿಲುಮ್ – ದೇವತಾಂತರ ಸಂಬಂಧ ಬಂದರೂ ಸಹ ಈ ಎರಡು ಸಂದರ್ಭದಲ್ಲೂ, **ಪರಮೈಕಾಂತಿತ್ವಕ್ಕು ವಿರುದ್ಧಮಾಮ್** ಪ್ರಪನ್ನನ ಪರಮೈಕಾಂತಿತ್ವಕ್ಕೆ ವಿರುದ್ಧವಾದುದಾಗುತ್ತದೆ. ನಿತ್ಯನೈಮಿತ್ತಿಕಗಳಲ್ಲೂ, ಅವುಗಳಲ್ಲಿ ಹೇಳಿರುವ ದೇವತೆಗಳನ್ನು ಕುರಿತು ಬೇರೆ ಫಲಗಳಿಗಾಗಿ ಸ್ವತಂತ್ರಿಸಿ ಆ ದೇವತೆಗಳನ್ನು ಆರಾಧಿಸಿದರೀಗ ಏಕಾಂತ್ಯಕ್ಕೆ ವಿರೋಧವು ಇತರ ಕಾಮ್ಯ ಕರ್ಮಗಳನ್ನು ಆಯಾ ಫಲಗಳಿಗಾಗಿ ಆ ಕಾಮ್ಯ ಕರ್ಮಗಳಲ್ಲಿ ಹೇಳಿರುವ ದೇವತೆಗಳನ್ನು ಸ್ವತಂತ್ರಿಸಿಯೇ ಆಗಲಿ, ಅಥವಾ ಪರಮಾತ್ಮ ಶರೀರಕವೆಂಬ ಭಾವನೆಯಿಂದಾಗಲಿ ಆರಾಧಿಸಿದರೂ, ಮೋಕ್ಷೇತರ ಕಾಮ್ಯಫಲಕ್ಕಾಗಿ ಆರಾಧಿಸುವದರಿಂದ ಏಕಾಂತ್ಯಕ್ಕೆ ವಿರುದ್ಧವೂ ಆಗುತ್ತದೆ. ಹಾಗೆ ಅನುಷ್ಠಿಸಿದ ನಿತ್ಯನೈಮಿತ್ತಿಕಗಳು ತನಗೆ ಆಜ್ಞಾ ಕೈಂಕರ್ಯಗಳಾದುದರಿಂದ ಮಾಡಿಯೇ ತೀರಬೇಕು, ಇಲ್ಲದಿದ್ದರೆ ಪ್ರತ್ಯವಾಯವು ಎಂಬ ಜ್ಞಾನದಿಂದ ಫಲಾಭಿಸಂಧಿಯಿಲ್ಲದೆ, ಈ ಅನುಷ್ಠಾನಗಳಿಂದ ಆಯಾದೇವತಾ ಶರೀರಕನಾದ ಪರಮಾತ್ಮನೇ ಆರಾಧಿಸಲ್ಪಡುವನೆಂಬ ದೃಢ ನಂಬಿಕೆಯಿಂದ ಸಾತ್ವಿಕ ತ್ಯಾಗಪೂರ್ವಕವಾಗಿ ಪರಮಾತ್ಮನಲ್ಲಿ ಸಮರ್ಪಿಸಿಬಿಟ್ಟರೆ, ಪರಮೈಕಾಂತಿತ್ವಕ್ಕೂ ವಿರೋಧವಿಲ್ಲವು, ಸ್ವರೂಪ ವಿರೋಧವೂ ಇಲ್ಲವು.

ಆದರೆ ಪ್ರಪನ್ನನಿಗೆ ಅನ್ಯದೇವತಾ ಸಂಬಂಧವೇ ಕೂಡದೆಂದು ಸ್ಥಾಪಿಸಿ, **ನಾನ್ಯಂದೇವಂ ನಮಸ್ಕುರ್ಯಾತ್** ಎಂದೂ **"ನಯಷ್ಟ್ವಾಮಯಾ ಯೂಯಮ್ ಕದಾಚಿದಪಿ ದೇವತಾಃ"** ಎಂದೂ ವಿಧಿಸಿಬಿಟ್ಟು, **ಯಾವಜ್ಜೀವಂ ಅಗ್ನಿಹೋತ್ರಂ ಜುಹೋತಿ"**, **ಅಹರಹಸ್ಸಂಧ್ಯಾಮುಪಾಸೀತ** ಇತ್ಯಾದಿ ವಿಧಿಗಳ ಮೂಲಕ ಅನ್ಯದೇವತಾ ಸಂಬಂಧವನ್ನೂ ವಿಧಿಸುವದು, ಪರಸ್ಪರ ವಿರೋಧವಲ್ಲವೇ ? ಎಂಬ ಆಕ್ಷೇಪ ತಂದರೆ, ಶ್ರೀ ವ್ಯಾಸ ಮಹರ್ಷಿಯು ತಮ್ಮ ಪ್ರಿಯಶಿಷ್ಯರಾದ ಜೈಮಿನ್ಯಾಚಾರ್ಯರು ಹೇಳಿದ ಸಮಾಧಾನವನ್ನು ಮುಂದೆ ಉದಾಹರಿಸುತ್ತಾರೆ. ಈ ನಿತ್ಯ ನೈಮಿತ್ತಿಕಾನುಷ್ಠಾನಗಳಲ್ಲೂ ಸೂರ್ಯ, ಅಗ್ನಿ, ರುದ್ರ, ಇಂದ್ರಾದಿ ಶಬ್ದಗಳೆಲ್ಲಾ ವ್ಯುತ್ಪತ್ತಿಮೂಲಕವಾಗಿ ಪರಮಾತ್ಮನನ್ನೇ ಬೋಧಿಸುವದರಿಂದ ದೇವತಾಂತರ ಸಂಬಂಧ ಪ್ರಸಜ್ಯವೇ ಇಲ್ಲವಾದುದಾಗುತ್ತದೆ. ಈ ಭಾವನೆಯಿಂದಲಾದರೂ ನಿತ್ಯನೈಮಿತ್ತಿಕ ಕರ್ಮಾನುಷ್ಠಾನವನ್ನು ನಡೆಸಿ, ಭಗವನ್ನಿಗ್ರಹಕ್ಕೆ ಪಾತ್ರರಾಗದೇ ಇರಿ ಎಂದು ಪರಮ ಸುಹೃತ್ತ್ವೇನ ಉಪದೇಶಿಸುತ್ತಾರೆ.

ಫಲಾಂತರ ಸಙ್ಗಮನಿಕ್ಕೇ – ಮೋಕ್ಷೇತರಗಳಾದ ಐಹಿಕ ಫಲಗಳ ಸಙ್ಗವನ್ನು ತ್ಯಜಿಸಿ, **ಪರಮಾತ್ಮನಿಗೆ**, ದೇವತೆಗಳನ್ನು ವಿಶೇಷಣವಾಗಿ, **ವೈತ್ತು-ಇಟ್ಟು** ಎಂದರೆ ಭಾವಿಸಿ, **ಅಗ್ನ್ಯಾದಿ ದೇವ** ವಿಶೇಷಣಜೈ - ಅಗ್ನಿ, ಆದಿ ಶಬ್ದ

ಫಲಾಂತರ ಸಜ್ಞಿಮು ಮನ್ಸಿಕ್ಕೇ ಪರಮಾತ್ಮಾವುಕ್ಕು ವಿಶೇಷಜ್ಞಿಕೈ ದೇವತೆಗಳ್ಕೈ ವೈತ್ತು ಅಗ್ನ್ಯಾದಿ ದೇವ ವಿಶೇಷಜ್ಞಿಗಳಿಲೇ ವಿಶೇಷ್ಯ ಪರ್ಯಂತ ಮಾಗ ಅನುಸಂಧಿತ್ತುಮ್, (೧) "ಸಾಕ್ಷಾದಪ್ಯವಿರೋಧಮ್ ಜೈಮಿನಿ." ಎಜ್ಜಿರ ನ್ಯಾಯತ್ತಾಲೆ ಅಗ್ನೀಂದ್ರಾದಿ ಶಬ್ದಜ್ಞಿಕೈ ಸಾಕ್ಷಾದ್ಭಗವದ್ವಾಚಕಜ್ಞಿಳಾಗ ಅನುಸಂಧಿತ್ತುಮ್, ಸ್ವಧರ್ಮಾನುಷ್ಠಾನ ಪಣ್ಣು ಮಿಡತ್ತಿಲ್, ವಿಧಿ ಬಲತ್ತಾಲೇ ಪರಮೈಕಾಂತಿತ್ವ ವಿರೋಧಮಿಲ್ಲೈ.

ದಿಂದ ಸೂರ್ಯ, ಇಂದ್ರಾದಿಗಳು ಹೇಳಲ್ಪಟ್ಟರೆ, ಅಗ್ನಿಯೇ ಮೊದಲಾದ ದೇವತಾ ವಿಶೇಷಗಳನ್ನು, ವಿಶೇಷ್ಯ ಪರ್ಯಂತಮಾಗ ಅನುಸಂಧಿತ್ತು – ವಿಶೇಷ್ಯನಾದ ಪರಮಾತ್ಮಪರ್ಯಂತವೆಂದು ಅನುಸಂಧಾನಮಾಡಿ, "ಸಾಕ್ಷಾದಪ್ಯವಿರೋಧಂ ಜೈಮಿನಿಃ" ಎಂದರೆ "ಈ ಸೂರ್ಯ, ಅಗ್ನಿ, ಬ್ರಹ್ಮ, ರುದ್ರೇಂದ್ರಾದಿ ಶಬ್ದಗಳೆಲ್ಲಾ ಪ್ರವೃತ್ತಿನಿಮಿತ್ತಮೂಲಕ ಸಾಕ್ಷಾತ್ತಾಗಿ ಪರಮಾತ್ಮನನ್ನೇ ಬೋಧಿಸುತ್ತವೆ ಎಂದು ಭಾವಿಸಿದರೂ, ಜೈಮಿನ್ಯಾಚಾರ್ಯರು ಏನೊಂದೂ ವಿರೋಧವಿಲ್ಲವೆಂದು ತಿಳಿದರು" **ಎಜ್ಜಿರನ್ಯಾಯತ್ತಾಲೆ** – ಎಂಬುವ ನ್ಯಾಯದ ಪ್ರಕಾರ ಅಗ್ನಿ, ಇಂದ್ರ, ಸೂರ್ಯ, ರುದ್ರ ಶಬ್ದಗಳನ್ನು, **ಸಾಕ್ಷಾದ್ಭಗವದ್ವಾಚಕಜ್ಞಿಳಾಕ** – ಸಾಕ್ಷಾತ್ತಾಗಿ ಭಗವನ್ನಾಮವನ್ನೇ ಬೋಧಿಸುವುದಾಗಿ, **ಅನುಸಂಧಿತ್ತು** – ಅನುಸಂಧಾನಮಾಡಿ, **ಸ್ವಧರ್ಮಾನುಷ್ಠಾನಮ್** – ತನಗೆ ವಿಹಿತವಾದ ವರ್ಣಾಶ್ರಮ ಧರ್ಮವನ್ನು, ಎಂದರೆ **ನಿತ್ಯನೈಮಿತ್ತಿಕ**ಗಳನ್ನು, **ಪಣ್ಣು ಮಿಡತ್ತಿಲ್**-ಅನುಷ್ಠಿಸುವ ಸಂದರ್ಭದಲ್ಲಿ, **ವಿಧಿಬಲತ್ತಾಲೆ** – ಶಾಸ್ತ್ರಪ್ರಮಾಣದ ಬಲದಿಂದ, **ಪರಮೈಕಾಂತಿತ್ವಕ್ಕೆ**, **ವಿರೋಧಮಿಲ್ಲೈ** – ವಿರೋಧವಿಲ್ಲವು. ಸಂಧ್ಯಾವಂದನಾದಿ ಭಾಷ್ಯಗಳಲ್ಲಿ ಈ ಜೈಮಿನ್ಯಾಚಾರ್ಯರ ಅಭಿಪ್ರಾಯವನ್ನೇ ಮನಸ್ಸಿನಲ್ಲಿಟ್ಟು, ಮಂತ್ರಗಳನ್ನೆಲ್ಲಾ ಆದಿತ್ಯಾಗ್ನಿ ದೇವತೆಗಳ ಪರವಾಗಿ ಅನ್ವಯಿಸದೆ ಸರ್ವೇಶ್ವರನ ಪರವಾಗಿಯೇ ಅನ್ವಯಿಸಿರುತ್ತಾರೆ, **ಸಾಕ್ಷಾದಪ್ಯವಿರೋಧಂ ಜೈಮಿನಿಃ** – ಎಂಬ ಸೂತ್ರಾಭಿಪ್ರಾಯವೇನೆಂದರೆ **"ಸ ಏಷೋಗ್ನಿರ್ವೈಶ್ವಾನರಃ"** ಎಂಬ ಪ್ರಮಾಣದಲ್ಲಿ ಅಗ್ನಿ ಶಬ್ದವು ಜಾಠರಾಗ್ನಿ ಶರೀರಕನಾದ ಪರಮಾತ್ಮನನ್ನು ವೈಶ್ವಾನರ ಶಬ್ದವು ಹೇಗೆ ಬೋಧಿಸುತ್ತದೋ, ಹಾಗೆಯೇ ಅಗ್ನಿ ಶಬ್ದವು ಉಪಾಸ್ಯವಾಗಿ ಹೇಳಿರುವದರಿಂದ ಅಗ್ನಿದೇವತೆಯಲ್ಲವು ಅಗ್ನಿಶರೀರಕನಾದ ಪರಮಾತ್ಮನೆಂದು ಶ್ರೀಬಾದರಾಯಣರು ಅಭಿಪ್ರಾಯಪಟ್ಟರು, ಅವರ ಶಿಷ್ಯ

---

(೧) ಬ್ರ. ಸೂ. ೧ ೨ ೩೯

ರಾದ ಜೈಮಿನ್ಯಾಚಾರ್ಯರಾದರೋ, **ಸಾಕ್ಷಾತ್** - ವ್ಯುತ್ಪತ್ತಿಮೂಲಕ ಸಾಕ್ಷಾತ್ತಾಗಿ ಪರಮಾತ್ಮನನ್ನೇ **ಈ** ವೈಶ್ವಾನರ ಶಬ್ದಕ್ಕೆ ಸಾಮಾನಾಧಿಕರಣ್ಯದಿಂದ ಹೇಳಲ್ಪಟ್ಟ ಅಗ್ನಿಶಬ್ದವೂ ಬೋಧಿಸುತ್ತದೆಂದೂ ಹೇಳಿದರೂ, **ಅವಿರೋಧಂ**-ವಿರೋಧವೇನೂ ಇಲ್ಲವು, ವ್ಯುತ್ಪತ್ತಿಯು ಹೇಗೆಂದರೆ, **ವಿಶ್ವೇಚ ನರಾಶ್ಚ-ವಿಶ್ವ ನರಾಃ, ವಿಶ್ವನರಾಣಾಂ ನೇತಾ ವೈಶ್ವಾನರಃ**, ಸಮಸ್ತ ಜೇತನಾಜೇತನರಿಗೂ ಯಾರು ನಿಯಂತ್ರವೋ, ಆತನು ವೈಶ್ವಾನರನು, ಈ ವ್ಯುತ್ಪತ್ತ್ಯಾಂತರಾನುಸಾರವಾಗಿ, ಇದು ಹೇಗೆ ಭಗವದ್ವಾಚಕವೋ ಹಾಗೆಯೇ **ಅಗ್ರಂ ನಯತೀತ್ಯಗ್ನಿಃ** ಎಂದು ನಿರುಪಾಧಿಕನಾಗಿ ಮುಂದೆ ನೀತು ಉಪಾಯನಾಗಿ ಕರೆದುಕೊಂಡು ಹೋಗುವವನು ಅಗ್ನಿಯು", ಎಂಬುದು ಸೂತ್ರಾರ್ಥವು. ಹೀಗೆ ಭಾವಿಸಿದುದಾದರೆ ಅನ್ಯದೇವತಾ ಸಂಬಂಧವೇ ನಿತ್ಯನೈಮಿತ್ತಿಕಾನುಷ್ಠಾನಗಳಲ್ಲಿಲ್ಲದಿರುವದರಿಂದ ಅಜ್ಞಾನಕೈಙ್ಕರ್ಯಗಳಾಗಿ ಅವಶ್ಯಾನುಷ್ಠೇಯಗಳೇ ಎಂಬ ತಾತ್ಪರ್ಯವು. ಹಾಗೆಯೇ ಸೂರ್ಯ, ಆದಿತ್ಯ ಶಬ್ದಗಳಿಗೂ ಪರಮಾತ್ಮಪರವಾಗಿಯೇ ಜ್ಞಾನಿಗಳು ವ್ಯಾಖ್ಯಾನ ಮಾಡಿರುತ್ತಾರೆ. ಹಾಗೆಯೇ ಸಂಧ್ಯಾವಂದನೆಯಲ್ಲೂ **"ಅಹಸ್ತದವಲುಂಪತು, ರಾತ್ರಿಸ್ತದವಲುಂಪತು"** ಅಹಸ್ಸು ರಾತ್ರ್ಯಭಿಮಾನದೇವತೆಗಳು ಪಾಪವನ್ನು ನಾಶ ಮಾಡಲಿ ಎಂದರ್ಥಹೇಳಿದೆ, ಅವುಗಳಲ್ಲಿ ತೋರಿಬರುವ ಧಾತ್ವರ್ಥಗಳಿಗನುಸಾರವಾಗಿ ಪರಮಾತ್ಮನೆಂದೇ ವ್ಯಾಖ್ಯಾನಮಾಡಿರುತ್ತಾರೆ, ಆದುದರಿಂದ ಪರಮೈಕಾಂತಿತ್ವಕ್ಕೆ ವಿರೋಧವೇ ಮೊದಲಾದ ಯಾವ ವಿಧ ದೋಷಗಳನ್ನಾಗಲಿ ಆರೋಪಿಸಿ ಅವುಗಳನ್ನು ಪರಿತ್ಯಾಗಮಾಡುವದು ಪ್ರಬಲ ಭಗವನ್ನಿಗ್ರಕ್ಕೆ ಸಿಕ್ಕಿದಹಾಗೆ ಆಗುತ್ತದೆಂಬುದು ಮುಖ್ಯತಾತ್ಪರ್ಯವು.

ಈ ಸಂದರ್ಭದಲ್ಲಿ ಇನ್ನೊಂದು ಪೂರ್ವಪಕ್ಷವನ್ನು ತರಬಹುದು; ಸೂರ್ಯ, ಅಗ್ನಿ ಮೊದಲಾದ ಶಬ್ದಗಳು ಮುಖ್ಯ ವೃತ್ತಿಯಿಂದ ರೂಢಿಯಲ್ಲಿ ಸೂರ್ಯದೇವತೆ ಅಗ್ನಿದೇವತೆಯನ್ನು ಬೋಧಿಸುವಾಗ ಅದನ್ನು ಬಿಟ್ಟು ಅವುಗಳನ್ನು ಪರಮಾತ್ಮನಲ್ಲಿ ಅನ್ವಯಿಸಿದರೆ, ಶಾಸ್ತ್ರಗಳಲ್ಲಿ, ಅವು ಒಂದುಕಡೆ ಪರಮಾತ್ಮನನ್ನೂ, ಇನ್ನೊಂದುಕಡೆ ತತ್ತದ್ದೇವತೆಗಳನ್ನೂ ಬೋಧಿಸಿದರೆ ಅವ್ಯವಸ್ಥೆಯಂಟಾಗುವದಿಲ್ಲವೇ? ಹಾಗೇನೂ ಇಲ್ಲವು, ಏಕೆಂದರೆ, ಪರಮಾತ್ಮನಲ್ಲಿ ಅನ್ವಯಿಸಿದ ತತ್ತದ್ದೇವತೆಗಳೆಂದು ಅರ್ಥಹೇಳಿದರೂ ಜಾರ್ವಾಕನು ದೇಹವೇ ಆತ್ಮ ಎಂದು ತಿಳಿದು ಚಂದನ ಹಾರಾದಿಗಳನ್ನು ಧರಿಸಿದರೆ, ಅದರ ಭೋಗವು ಆತ್ಮನಿಗೇನೆ ಹೇಗೆ ಸಲ್ಲುತ್ತದೋ, ಹಾಗೆಯೇ ತತ್ತಚ್ಛರೀರಕ ದೇವತೆ ಎಂದು ಹೇಳಿದರೂ ಅದೂ ಪರಮಾತ್ಮನಲ್ಲೇ ಅನ್ವಯಿಸುವದರಿಂದ ಎರಡುವಿಧವಾದ ಅರ್ಥಗಳಿಂದಲೂ ಅವ್ಯವಸ್ಥೆಯೇನೂ ಇಲ್ಲವು.

೮ ಭಕ್ತಿ ವಿಧಿಃ ಅಭಿಚಾರಾದಿ ವಿಧಿವತ್ ಪ್ರಪತ್ತಿ ಪ್ರಯೋಚನಾರ್ಥ ಇತಿ ಪಕ್ಷಂ ದೂಷಯತಿ

ಆನಾಲುಮ್ ಅಭಿಚಾರಾದಿಗಳೈ ವಿಧಿತ್ತ ಕಟ್ಟಳೈಯಿಲೆ ಶಾಸ್ತ್ರ ಪ್ರಯೋಚನಾದಿಗಳಿಲ್ ಅಭಿಸಂಧಿಯಾಲೆ ಅಧಿಕಾರಿ ವಿಶೇಷಣತ್ತಿಲೆ

ಅನ್ಯದೇವತೆಯಲ್ಲಿ ಮಾಡಿದ ಆರಾಧನೆ ಎಲ್ಲವೂ ಪರಮಾತ್ಮನನ್ನೇ ಹೋಗಿ ಸೇರುತ್ತವೆ ಎಂಬುದಕ್ಕೆ ಅನೇಕ ಶಾಸ್ತ್ರಪ್ರಮಾಣಗಳುಂಟು ಭಗವದ್ಗೀತೆಯಲ್ಲಿ

"ಯೇಪ್ಯನ್ಯ ದೇವತಾ ಭಕ್ತಾ. ಯಜಂತೇ ಶ್ರದ್ಧಯಾನ್ವಿತಾಃ।
ತೇಪಿ ಮಾಮೇವ ಕೌಂತೇಯ ಯಜನ್ತ್ಯವಿಧಿಪೂರ್ವಕಂ॥(ಗೀ೯.೨೩
ಯೋಯೋ ಯಾಂಯಾಂ ತನುಂಭಕ್ತ್ಯ ಶ್ರದ್ಧಯಾರ್ಚಿತು ಮಿಚ್ಛತಿ।
ತಸ್ಯತಸ್ಯಾಚಲಾಂ ಶ್ರದ್ಧಾಂ ತಾಮೇವ ವಿದಧಾಮ್ಯಹಂ॥ (ಗೀ೭.೨೧)
ಲಭತೇಚ ತತಃ ಕಾಮಾರ್ ಮಯೈವ ವಿಹಿತಾರ್ ಹಿತಾರ್"

"ಅನ್ಯದೇವತೆಗಳಲ್ಲಿ ಭಕ್ತಿಯನ್ನು ತೋರಿ ಆರಾಧಿಸುವವರೂ ಕೂಡ ನನ್ನನ್ನೇ ಆರಾಧಿಸುವರು, ಆದರೆ ಕ್ರಮತಪ್ಪಿ ಆರಾಧಿಸುವರು."ಎಂಬುದೂ "ಯಾರುಶ್ರದ್ಧೆಯಿಂದ ನನ್ನ ಶರೀರಗಳಾದ ಅನ್ಯದೇವತೆಗಳನ್ನು ಭಕ್ತಿಯಿಂದ ಆರಾಧಿಸಲು ಅಪೇಕ್ಷಿಸುವರೋ, ಅವರಿಗೆ ನಿಶ್ಚಲವಾದ ಶ್ರದ್ಧೆಯನ್ನುಂಟುಮಾಡುವವನೂ ನಾನೇ, ಆ ಭಕ್ತರು ಕೋರಿದ ಇಷ್ಟಪ್ರಾಪ್ತಿಗಳನ್ನು ಆ ದೇವತೆಗಳ ಮೂಲಕವಾಗಿ ಕೊಡುವವನೂ ನಾನೇ" ಎಂಬುದೂ, ಈ ಶ್ಲೋಕಗಳ ತಾತ್ಪರ್ಯವು. ಆದುದರಿಂದ ಶಾಸ್ತ್ರಾರ್ಥದ ಅವ್ಯವಸ್ಥೆಯೇನೂ ಇದರಿಂದ ಪ್ರಾಪ್ತವಾಗುವುದಿಲ್ಲವು.

ಭಕ್ತಿಯನ್ನು ವಿಧಿಸಿರುವದ, ಅಭಿಚಾರಾದಿಗಳು ಶಾಸ್ತ್ರ ಪ್ರಯೋಚನಾರ್ಥಕ್ಕಾಗಿ ಹೇಗೋ ಹಾಗೆ ಪ್ರಪತ್ತಿ ಪ್ರಯೋಚನಾರ್ಥಕ್ಕಾಗಿ ಎಂಬ ವಾದದ ನಿರಾಸವು.

ಮೊದಲು ಪೂರ್ವಪಕ್ಷವನ್ನು "ಆನಾಲುಮ್" ಎಂದಾರಂಭಿಸಿ "ನಿನ್ಮೈತ್ತು ನಿಂದಿತ್ತದು" ಎನ್ನುವವರೆಗೂ ಅನುವಾದಮಾಡಿ "ಇದುವುಮ್ ಅತ್ಯಂತಾನುಪಪನ್ನಂ" ಎಂದಾರಂಭಿಸಿ ಖಂಡಿಸುತ್ತಾರೆ. ಆನಾಲುಮ್- ಹಿಂದಿನ ಐಕಾಂತ್ಯಪಕ್ಷರೂಪ ಸ್ವರೂಪ ವಿರುದ್ಧ ತ್ವವಿಲ್ಲವೆಂದು ಒಪ್ಪಿಕ್ಕೊಂಡರೂ, ಅಭಿಚಾರಾದಿಗಳೈ ವಿಧಿತ್ತ ಕಟ್ಟಳೈಯಿಲೇ - ತನಗೆ ಶತ್ರುವಾಗಿರುವವರನ್ನು ವಧಿಸುವದಕ್ಕಾಗಿ, ವೇದದಲ್ಲಿ ವಿಧಿಸಿರುವ ಯೋಗಾದಿಗಳ ಮೂಲಕವಾಗಿ, ಶಾಸ್ತ್ರ ಪ್ರಯೋಚನಾದಿಗಳಿಲ್ - ಶಾಸ್ತ್ರಗಳಲ್ಲಿ ವಿಶ್ವಾಸ ಮೊದಲಾದವುಗಳನ್ನು ಹುಟ್ಟಿಸುವ, ಅಭಿ

ಉಪಾಸನಾದಿಗಳೈ ವಿಧಿತ್ತದತ್ತನೈಯನ್ನೋ? ಮುಮುಕ್ಷು ವುಕ್ಕು ಪ್ರಾಪ್ಯ ಪ್ರಾಪಕಙ್ಗಳ್ ಏಕನೂಗೈಯಾಲೇ ಪ್ರಾಪ್ಯನುರೂಪವಾಗ ಉಪಾಯಮ್ ಸರ್ವೇಶ್ವರ ಒರುವನುಮೇ; ಆಗೈಯಾಲನ್ನೋ, (೧) "ಅಥ ಪಾತಕ ಭೀತಸ್ತ್ವಂ ಸರ್ವಭಾವೇನ ಭಾರತ। ವಿಮುಕ್ತಾನ್ಯ ಸನೂಪಾರಂಭೋ ನಾರಾಯಣ ಪರೋಭವ" ॥ ಎನ್ರು ಧರ್ಮದೇವತೈಯೈ ಪುತ್ರನುಕ್ಕು ಉಪಾಸನಾದಿಗಳೈ ಪ್ರಾಪ್ಯ ವಿರೋಧಿಗಳೆನ್ರು ನಿನೈತ್ತು ನಿನ್ರಿತ್ತದೆನ್ನಿಲ್, ಅದುವುನ್ ಅತ್ಯನ್ತಾನುಪಪನ್ನಮ್;

ಸಂಧಿಯಾಲೇ - ನಿಶ್ಚಯ ಸಙ್ಕಲ್ಪಮೂಲಕ, ಅಧಿಕಾರಿ ವಿಶೇಷತ್ತಿಲೇ- ಪ್ರಪನ್ನಾಧಿಕಾರಿಯಾಗುವ ವಿಶೇಷದಲ್ಲಿ, ಉಪಾಸನಾದಿಗಳನ್ನು, ವಿಧಿತ್ತ ದತ್ತನೈಯನ್ರೋ – ವಿಧಿಸಿರುತ್ತವೆ ಇಷ್ಟುಮಾತ್ರವಲ್ಲವೋ? ಮುಮುಕ್ಷುವುಕ್ಕು- ಮೋಕ್ಷಾರ್ಥಿಗೆ, ಪ್ರಾಪ್ಯಪ್ರಾಪಕಙ್ಗಳ್ - ಉಪೇಯೋಪಾಯಗಳೆರಡೂ, ಏಕನೂಗೈಯಾಲೇ – ಸರ್ವೇಶ್ವರನೊಬ್ಬನೇಯಾಗಿರುವದರಿಂದ, ಪ್ರಾಪ್ಯನಾದ ಸರ್ವೇಶ್ವರನಿಗೆ, ಅನುರೂಪಮಾಗ - ಯೋಗ್ಯವಾದ, ಉಪಾಯವು, ಸರ್ವೇಶ್ವರ ಒರುವನುಮೇ - ಸರ್ವೇಶ್ವರನೊಬ್ಬನೇ; ಆಗೈಯಾಲನ್ನೋ – ಅದು ದರಿಂದಲ್ಲವೋ, "ಅಥ - ಹಾಗೆ ಆಲ್ಲದಿದ್ದರೆ, ತ್ವಂ - ನೀನು, ಪಾತಕಭೀತಃ - ಪಾಪಭೀತನಾಗಿ, ಉಪಾಸನಾದಿಗಳಿಂದ ಪಾತಕವು ತೊಲಗದೆ ಅದರಿಂದ ಪಾಪ ಭೀತನಾಗಿ ಎಂಬ ತಾತ್ಪರ್ಯವು, ಹೇ ಭಾರತ - ಓ ಧರ್ಮರಾಜನೇ, ವಿಮುಕ್ತಾನ್ಯಸನೂಪಾರಂಭಃ - ಬಿಡಲ್ಪಟ್ಟ ವಿಕ್ಕ ಎಲ್ಲಾ ಕಾರ್ಯಕಲಾಪವುಳ್ಳವನಾಗಿ, ಸರ್ವಭಾವೇನ - ಸಮಸ್ತ ಭಾವನೆಯಿಂದಲೂ ಎಂದರೆ ಪ್ರಾಪ್ಯ ಪಾಪಕ, ತಂದೆ ತಾಯಿ ಬಂಧು ಬಳಗ ಮುಂತಾದ ಭಾವನೆಗಳಿಂದಲೂ, "ಪಿತಾತ್ವಂ ಮಾತಾತ್ವಂ ದಯಿತ ತನಯಸ್ತ್ವಂ" ಎಂಬ ಶ್ಲೋಕದಲ್ಲಿ ಹೇಳಿರುವ ಸರ್ವ ಭಾವನೆಗಳಿಂದಲೂ, ನಾರಾಯಣ ಪರೋಭವ - ಶ್ರೀಮನ್ನಾರಾಯಣನನ್ನು ಆಶ್ರಯಿಸುವನಾಗು" ಎನ್ರು - ಎಂಬದಾಗಿ, ಧರ್ಮದೇವತೆಯು, ತೈ ಪುತ್ರನುಕ್ಕು - ತನ್ನ ಮಗನಾದ ಧರ್ಮರಾಯನಿಗೆ, ಉಪಾಸನಾದಿಗಳೈ – ಉಪಾಸನೆ ಮೊದಲಾದವುಗಳನ್ನು, ಪ್ರಾಪ್ಯ ವಿರೋಧಿಗಳೆನ್ರು ನಿನೈತ್ತು - ಪರಮಾತ್ಮ ಪ್ರಾಪ್ತಿಗೆ ವಿರೋಧವಾದವುಗಳೆಂದು ಭಾವಿಸಿ, ನಿಂದಿತ್ತದು - ಉಪಾಸನವನ್ನು ದೂಷಿಸಿದುದು ಎಂದರೆ ಉಪಾಸನವು ಎಂದಿಗೂ ಪರಮಾತ್ಮಪ್ರಾಪ್ತಿಗೆ ಹೇತುವಾಗಲಾರದೆಂದು ದೂಷಿಸಿರುತ್ತದೆ, ಎನ್ನಿಲ್ - ಎಂದು ಪೂರ್ವಪಕ್ಷವನ್ನು

---

(೧) ವಿ. ಧ. ೬೬-೭೨

ತುವರೆ, **ಇದುವುನು೯ ಅತ್ಯಂತಾನುಪಪನ್ನಮ್** - ಈ ಅಭಿಸಾಯವೂ ಕೂಡ ತುಂಬಾ ಅಸಮಂಜಸವಾದುದು, **ಪೂರ್ವಪಕ್ಷಾಭಿಸಾಯನೇನೆಂದರೆ** ವೇದಗಳಲ್ಲಿ ಶತ್ರುಪಕ್ಷನಿವನಕ್ಕಾಗಿ ಯಾಗಗಳು ವಿಹಿತಗಳಾಗಿವೆ ಇಂತಹ ಯಾಗಗಳನ್ನು ಮಾಡಿದರೆ ಶತ್ರುವು ಆ ಯಾಗದ ಫಲವಿಂದ ಸಾಯುವನು ಇದು ಪ್ರತ್ಯಕ್ಷಸಿದ್ಧವು ಇಂತಹ ಯಾಗಗಳಲ್ಲಿ ಒಂದಾದ ನಿಕುಂಭಳಾ ಯಾಗವನ್ನು ಇಂದ್ರಜಿತ್ತು ಮಾಡಲಾರಂಭಿಸಿದನು ಈ ವಾರ್ತೆ ಹೋನುವನ್ನು ವಿಭೀಷಣನು ತಿಳಿದು, ಈ ಯಾಗಕ್ಕೆ ವಿಘ್ನವನ್ನುಂಟುಮಾಡಿಸಿ, ಲಕ್ಷ್ಮಣನಿಂದ ಹತವಾಗುವಂತೆ ಮಾಡಿದನು. ಯಾವುದಾದರೂ ಒಂದು ವ್ಯಾಧಿಗೆ ಔಷಧ ಕೊಡುವದರಿಂದ ವ್ಯಾಧಿಯು ಗುಣವಾದರೆ ಅನುರ್ವೇದದಲ್ಲಿ ಹೇಗೆ ನಂಬಿಕೆಯನ್ನು ಹುಟ್ಟಿಸುತ್ತದೋ, ಹಾಗೆಯೇ ಈ ಅಭಿಚಾರಾದಿಗಳೂ ಶಾಸ್ತ್ರಗಳಲ್ಲಿ ನಂಬಿಕೆಯನ್ನು ಹುಟ್ಟಿಸುತ್ತವೆ ಆದರೆ ಹೀಗೆ ಯಾಗಗಳ ಮೂಲಕ ಶತ್ರುವನ್ನು ಕೊಲ್ಲುವದು ಕ್ಷತ್ರಿಯನ ಸ್ವರೂಪಕ್ಕೂ ಪರಾಕ್ರಮಕ್ಕೂ ಕುಂದಕವಾಗಿ ನಿಂತಿಕವು. ಹಾಗೆಯೇ ಅಸಮರ್ಥನಾಗಿ ಪರಾಧೀನನಾಗಿ ಅಕಿಂಚನನಾಗಿರುವ ಈ ಪ್ರಪನ್ನನು ತನ್ನನ್ನು ಸಮರ್ಥನನ್ನಾಗಿಯೂ ಸ್ವತಂತ್ರನಾಗಿಯೂ ಸಕಿಂಚನಾಗಿಯೂ ಭಾವಿಸಿಕೊಂಡು ಉಪಾಸನೆಯ ಮೂಲಕ ಪ್ರಾಪ್ಯವನ್ನು ಬಲಾತ್ಕರಿಸಿ ಸೇರುವನೆಂಬುದು ಸ್ವರೂಪ ವಿರುದ್ಧವೆಂಬ ತಾತ್ಪರ್ಯವು; ಹಾಗಾದರೆ ಉಪಾಸನೆಯನ್ನು ಶಾಸ್ತ್ರದಲ್ಲಿ ವಿಧಿಸಿರುವದು ಏತಕ್ಕೆಂದರೆ, ಪ್ರಪತ್ತಿಯಲ್ಲಿ ವಿಶ್ವಾಸವನ್ನುಂಟುಮಾಡುವದಕ್ಕಾಗಿ ಎಂದು ಭಾವಿಸತಕ್ಕದ್ದು ವಸ್ತುತಃ ಅದು ಸ್ವರೂಪ ವಿರುದ್ಧವಾದುದಾಗಿ ಗುರೂಪಾಯವಾಗಿರುವದರಿಂದ ಅವಕ್ಕೆ ಬದಲಾಗಿ ಪ್ರಪತ್ತಿಯು ಲಘುವಾಗಿರುವದರಿಂದ, ಇದರಲ್ಲಿ ವಿಶ್ವಾಸವು ಹೆಚ್ಚುತ್ತದೆ ಎಂಬ ಭಾವವು. **ಪೂರ್ವಪಕ್ಷಿಯು** ತಮ್ಮ ಅಭಿಸಾಯವನ್ನು ಸಮರ್ಥನೆ ಮಾಡುವದಕ್ಕಾಗಿ ವಿಷ್ಣುಧರ್ಮ ಪ್ರಮಾಣವನ್ನು ಉದಾಹರಿಸಿರುತ್ತಾರೆ. ಆ ಶ್ಲೋಕಾಭಿಸಾಯವು ಪೂರ್ವಪಕ್ಷಿಯ ಅಭಿಸಾಯಾನುಗುಣವಾಗಿ ಹೇಗೆಂದರೆ. **ಪಾತಕಭೀತಃ** ಎಂದಿರುವದರಿಂದ ಉಪಾಸನಾದಿಗಳನುಷ್ಠಾನದಿಂದ ಪಾತಕವು ಪ್ರಾಪ್ತವಾಗುತ್ತದೆಂಬ ಭೀತನಾಗಿರುವವನಾಗಿ, ಅದರಿಂದಲೇ **ವಿಮುಕ್ತಾನ್ಯ ಸಮಾರಂಭಃ** - ಈ ಉಪಸನಾದಿ ಸಕಲ ಕಾರ್ಯ ಕಲಾಪಗಳಿಂದಲೂ ಬಿಡಲ್ಪಟ್ಟವನಾಗಿ, **ನಾರಾಯಣ ಪರೋಭವ** - ಶ್ರೀಮನ್ನಾರಾಯಣನನ್ನೇ ಪ್ರಾಪಕನನ್ನಾಗಿಯೂ ಪ್ರಾಪ್ಯನನ್ನಾಗಿಯೂ ಆಶ್ರಯಿಸು; ಎಂಬುದು ಆದುದರಿಂದ ಉಪಾಸನೆಯೂ ಅಭಿಚಾರಾದಿಗಳಹಾಗೆ ಸ್ವರೂಪ ವಿರುದ್ಧವು ಎಂಬ ತಾತ್ಪರ್ಯವು. ಇವನ್ನು ನಾಲ್ಕು ವಿಘ್ನವಾಗಿ ವಿಕಲ್ಪಿಸಿ ಖಂಡಿಸುತ್ತಾರೆ:—

ಎಜ್ಞನೇ ಎನ್ನಿಲ್ :—(೧) ಅಭಿಚಾರಾದಿಗಳ್ ಫಲವಿಶೇಷ ಮಡಿಯಾಗವಿರೆ ಅನರ್ಥ ಹೇತುಕ್ಕಳಾಯಿರ್ಪ್ಪು ; ಇಜ್ಞ ಫಲಂ ಮೋಕ್ಷ ವಾನ ಪಡಿಯಾಲೇ ಅಮ್ಮುಖತ್ತಾಲ್ ಅನರ್ಥ ಪ್ರಸಜ್ಞ ಮಿಲ್ಲೈ. (೨) ವಿಕಾಧಿಕಾರಿ ವಿಷಯತ್ತಿಲೇ ವಿಕಫಲತ್ತುಕ್ಕು ಗುರು ವಾಯಿರುಪ್ಪ ದೊನ್ರೈ ಉಪಾಯವಾಗ ಕ್ಕಾಟ್ಟ್ವಲಘುವಾಯಿರುಪ್ಪದೊನ್ರಿಲೇ ರುಚಿಯ್ಕೈ

ಅಭಿಚಾರಾದಿಗಳ ಹಾಗೆ ಸ್ವರೂಪ ವಿರುದ್ಧವೆಂಬ ದು, ಅಭಿಚಾರವು ಅನರ್ಥ ಫಲ ಸಾಧಕವಾಗಿರುವಹಾಗೆ ಈ ಉಪಾಸನವೂ ಅನರ್ಥಫಲವನ್ನು ಸಾಧಿಸುವದ ರಿಂದ ಸ್ವರೂಪವಿರುದ್ಧವೇ ? ೨ ಭಕ್ತಿ ವಿಧಿಯ ಪ್ರಪತ್ತಿಯಲ್ಲಿ ವಿಶ್ವಾಸ ಹುಟ್ಟಿ ಸುವದಕ್ಕಾಗಿ ಎಂದರೆ, ಭಕ್ತಿಮಾರ್ಗವು ಸಾಧನವೇ ಅಲ್ಲದೆ ವ್ಯರ್ಥಾಯಾಸ ಜನಕ ವಾಗಿ ಸ್ವರೂಪವಿರುದ್ಧವೇ ? ೩ ಪ್ರಾಪ್ಯಸಿಗೆ ಅನುರೂಪವಾದ ಉಪಾಯವಲ್ಲ ದಿರುವದರಿಂದ ಸ್ವರೂಪ ವಿರುದ್ಧವೇ ? ೪. ಶಾಸ್ತ್ರದಲ್ಲಿ ನಿಂದಿತವಾಗಿ ಸ್ವರೂಪ ವಿರುದ್ಧವೇ ? ಪ್ರಥಮತಃ ಮೊದಲನೆಯ ವಿಕಲ್ಪವನ್ನು ಖಂಡಿಸುತ್ತಾರೆ

ಎಜ್ಞನೇ ಎನ್ನಿಲ್ - ಹೇಗೆಂದರೆ, **ಅಭಿಚಾರಾದಿಗಳ್** - ಶತ್ರುಕೊಲೆ ಮೊದಲಾದವುಗಳ, **ಅಡಿಯಾಗವಿರೆ** - ಮೂಲಕವಾಗಿ ತಾನೇ, **ಅನರ್ಥಹೇತು ಕ್ಕಳಾಯಿರ್ಪ್ಪು** - ಅನರ್ಥಕ್ಕೆ ಕಾರಣವಾದುದಾಯಿತು, **ಇಜ್ಞ** - ಈ ಸಂದ ರ್ಭದಲ್ಲಾದರೋ, **ಮೋಕ್ಷ ವಾನಪಡಿಯಾಲೆ**-ಮೋಕ್ಷವಾದುದರಿಂದ, **ಅಮ್ಮು ಖತ್ತಾಲ್** - ಆ ಮೂಲಕವಾಗಿ, ಅನರ್ಥ ಪ್ರಸಜ್ಞಕ್ಕೆ ಕಾರಣವಿಲ್ಲವು ಅಭಿಚಾ ರಾದಿಗಳು ಕೊಲೆಯಾವ ದುಷ್ಟಫಲಗಳಿಗೆ ಹೇತುಗಳು, ಆದುದರಿಂದ ಸ್ವರೂಪ ವಿರುದ್ಧಗಳೆಂದು ಹೇಳಿಕೊಂಡರೂ ಹೇಳಬಹುದು. ಉಪಾಸನವು ಅನರ್ಥವ ನ್ನುಂಟುಮಾಡವ ಫಲವನ್ನು ಕೊಡುವದಿಲ್ಲವು. ಮೋಕ್ಷಫಲದಾಯಕವೆಂದು ಪ್ರಮಾಣಪ್ರಸಿದ್ಧವು ಹೀಗೆ ಅನರ್ಥಫಲವನ್ನು ಭಕ್ತ್ಯುಪಾಯವು ಕೊಡದೇ ಇರುವದರಿಂದ ಸ್ವರೂಪ ವಿರುದ್ಧವು ಹೇಗಾದೀತು ಎಂಬ ತಾತ್ಪರ್ಯವು.

೨. ಮುಂದೆ ಎರಡನೆಯ ವಿಕಲ್ಪವನ್ನು ದೂಷಿಸುತ್ತಾರೆ :—**ಪ್ರಪತ್ತಿ** ಯಲ್ಲಿ ಅಭಿರುಚಿಯನ್ನು ಹುಟ್ಟಿಸುವದಕ್ಕಾಗಿ ಏರ್ಪಟ್ಟ ಮಾರ್ಗವು ಆದು ಉಪಾ ಯವೇ ಅಲ್ಲವು, ವ್ಯರ್ಥಾಯಾಸರೂಪವಾದುದು, ಆದುದರಿಂದ ಸ್ವರೂಪ ವಿರುದ್ಧ ವೆಂಬ ವಾದವನ್ನು ಖಂಡಿಸುತ್ತಾರೆ :—**ವಿಕಾಧಿಕಾರಿ ವಿಷಯತ್ತಿಲೆ** - ಒಬ್ಬ ಅಧಿಕಾರಿಯ ವಿಷಯದಲ್ಲಿ, **ವಿಕಫಲತ್ತುಕ್ಕು** - ಒಂದೇ ಫಲವಾದ ಮೋಕ್ಷ **ಪ್ರಾಪ್ತಿಗೆ, ಗುರುವಾಯಿರುಪ್ಪದೊನ್ರೈ ಉಪಾಯವಾಗಕ್ಕಾಟ್ಟ** - ಕಷ್ಟ

ಪ್ರಪಿಪ್ಪಿಕ್ಕಿರದೆನ್ಗೈ ವಿವಕ್ಷಿತ ವಿಪರೀತಮ್. ಅಜ್ಞಾತ್ತಿಲೇ ಅಜ್ಞಾಫಲ ನಿರ್ದೇಶನಮಾಯ್ ಸ್ತುತಿಮಾತ್ರ ಮಾಯಿರೇ ಅಪ್ಪೋದು ಫಲಿಪ್ಪದು ?

ತರವಾಗಿರುವದೊಂದನ್ನು ಉಪಾಯವೆಂದು ತೋರಿಸಿ, **ಲಘುವಾಯಿರುಪ್ಪ ದೊನ್ರಿಲೇ** - ಸುಲಭವಾಗಿರುವ ಇನ್ನೊಂದು ಉಪಾಯವಲ್ಲಿ, **ರುಚಿಯೈ** - ವಿಶ್ವಾಸವನ್ನು, **ಪಿರಪ್ಪಿಕ್ಕಿರದು ಎನ್ಗೈ**-ಹುಟ್ಟಿಸುತ್ತದೆಂಬುದು, **ವಿವಕ್ಷಿತ ವಿಪರೀತಮ್** - ಪೂರ್ವಪಕ್ಷಿಯು ಅಭಿಪ್ರಾಯಕ್ಕೇನೆ **ಪ್ರತ್ಯುತ** ವಿರುದ್ಧವಾದುದನ್ನೇ ಉಪಪಾದಿಸುವಂತಾದ್ದಾಗುತ್ತದೆಂಬ ಭಾವವು. **ಆದು ಹೇಗೆಂದರೆ**:—**ಪಪತ್ತಿ**, ಭಕ್ತಿ ಉಪಾಯಗಳು ಪರಸ್ಪರ ಪ್ರತ್ಯೇಕವಾದನಂತರ, ಪ್ರಪತ್ತಿಯು ಲಘೂಪಾಯವಾಗಿ ಭಕ್ತಿಯು ಗುರೂಪಾಯವಾದರೆ ಲಘೂಪಾಯವನ್ನೇ ಮೋಕ್ಷಾಧಿಕಾರಿಯು ಸ್ವತಃ ಅವಲಂಬಿಸುವನು ಗುರೂಪಾಯವನ್ನು ತೋರಿಸಿ ಲಘೂಪಾಯವನ್ನು ಅವಲಂಬಿಸುವದಕ್ಕಾಗಿ ಪ್ರಯೋಜನೆ ಏತಕ್ಕೆ ? ಲಘೂಪಾಯಕ್ಕೂ ಗುರೂಪಾಯಕ್ಕೂ ಒಂದೇ ಫಲವಾದರೆ ಗುರೂಪಾಯದ ಮೂಲಕ ಪ್ರಯೋಜನೆಯು ಲಘೂಪಾಯಕ್ಕೆ ಬೇಕಾಗಿರುವದಿಲ್ಲವು. ಇನ್ನೂ ಹಾಗೆ ನೋಡಿದರೆ **ಲಘೂಪಾಯವೂ** ನಿಷ್ಕರ್ಷೆಯಿಲ್ಲದ ಉಪಾಯವಾಗಿದ್ದರೂ ಅದನ್ನು **ಪ್ರದರ್ಶಿಸಿ**, ತನ್ಮೂಲಕ ಪ್ರಯೋಜನವಿಂದ ಇನ್ನೂ ಗುರೂಪಾಯದಲ್ಲಿ ಪ್ರವೃತ್ತಿಯನ್ನುಂಟು ಮಾಡಬಹುದೇ ವಿನಾ ಗುರೂಪಾಯಕ್ಕೆ ಎಂದಿಗೂ ಪ್ರಯೋಜನ ಭಾವವೂ ಕೂಡುವದೇ ಇಲ್ಲವೆಂಬ ಭಾವವು ಆದುದರಿಂದ ಲಘೂಪಾಯವು ಗುರೂಪಾಯ ಪ್ರಯೋಜನಾರ್ಥವಾಗಿ ಪರಿಣಮಿಸಬಹುದೇ ವಿನಾ, ಪೂರ್ವಪಕ್ಷಿಗಳು ಹೇಳುವ ಹಾಗೆ ಗುರೂಪಾಯವು ಲಘೂಪಾಯ ಪ್ರಯೋಜನಾರ್ಥವಾಗಿ ಎಂದಿಗೂ ಆಗಲಾರದು. ಆ ಕಾರಣದಿಂದ **ವಿವಕ್ಷಿತವಿಪರೀತಂ** ಎಂದು ಪ್ರಯೋಗಿಸಿರುತ್ತಾರೆ. ಆದೂ ಅಲ್ಲದೆ ಅಭಿಚಾರಾದಿಗಳಲ್ಲಿ ದೃಷ್ಟಫಲವಿರುವದರಿಂದ ಶಾಸ್ತ್ರಪ್ರಯೋಜನವೆಂದರೆ ಶಾಸ್ತ್ರವಲ್ಲಿ ವಿಶ್ವಾಸವು ಉಂಟಾಗಬಹುದು ಇಲ್ಲಿ ಪ್ರಪತ್ತಿಯಲ್ಲಿ ವಿಶ್ವಾಸ ಹುಟ್ಟುವದಕ್ಕೆ ಭಕ್ತಿಯಿಂದ ದೃಷ್ಟ ಫಲವೇನೂ ಇಲ್ಲವಲ್ಲಾ ಎಂಬುದೂ ತೋರಿಬರುತ್ತದೆ. ಇನ್ನೂ **ವಿವಕ್ಷಿತ ವಿಪರೀತವು** ಹೇಗೆ ಎಂಬುದನ್ನು ಇನ್ನೊಂದು ವಿಧವಾಗಿಯೂ **ಅಜ್ಞಾತ್ತಿಲೇ** ಎಂಬ ಮುಂದಿನ ವಾಕ್ಯದಿಂದಲೂ ಉಪಪಾದಿಸುತ್ತಾರೆ. **ಅಜ್ಞಾತ್ತಿಲೇ** - ಬ್ರಹ್ಮವಿದ್ಯೆಯು ಒಂದು ಅಜ್ಞದಲ್ಲಿ, **ಅಜ್ಞಾಫಲ ನಿರ್ದೇಶನಮಾಯ್** - ಅಜ್ಞಾಯ ಫಲ ಹೇಳಲ್ಪಟ್ಟು ಆಗ **ಸ್ತುತಿಮಾತ್ರ ಮಾಯಿರೇ** - ಅಜ್ಞದ ಮಾಹಾತ್ಮ್ಯವನ್ನು ಹೇಳುವದಕ್ಕಾಗಿ ಮಾತ್ರವೇ ವಿನಾ

(೩) ಪ್ರಾಪ್ಯತ್ತುಕ್ಕನ್ನದು ಅನುರೂಪನೆನ್ನುವಿಡವುಂ ಶಾಸ್ತ್ರೀಕ ವೇದ್ಯ ವಾಗೈಯಾಲೇ ಯುಕ್ತಿ ವಾತ್ರತ್ತಾಲೇ ಪ್ರಾಪ್ಯ ವಿರೋಧನುಂ ಶೊಲ್ಲವೊಣ್ಣಾದು. ಆಗವು ಸಿದ್ಧಜ್ಞಳಿಲೊನ್ರೈ ವಿರುದ್ಧ ತರ್ಕಜ್ಞಾಲೇ ಬಾಧಿಕ್ಕಿಲ್ ತುಲ್ಯ ನ್ಯಾಯತ್ತಾಲೇ ಸರ್ವಶಾಸ್ತ್ರಜ್ಞಳುಂ ಪ್ರಪತ್ತಿ ಶಾಸ್ತ್ರವುಂ ಪ್ರಮಾಣವುನ್ರಿಕ್ಕೇ ಯೊಳಿಯುವುಂ.

ನಿಶ್ಚಯವಾಗಿಯೂ ಫಲದಾಯಕವಲ್ಲವೆಂಬವಾಗಿ ಅಲ್ಲವೇ, **ಅಪ್ಪೋದು ಫಲಿಪ್ಪದು** - ಆಗಲೂ ಸಂಭವಿಸುವದು? ಇದರರ್ಥವೇನೆಂದರೆ ಭಕ್ತಿಮಾರ್ಗದಲ್ಲಿ ಪ್ರಪತ್ತಿಯು ಅಜ್ಞವು, ಉಪಾಸನವು ಅಜ್ಞವು; ಸಾಧಾರಣವಾಗಿ ಬ್ರಹ್ಮವಿದ್ಯೆಗಳಲ್ಲಿ ಅಜ್ಞವಾದ ಪ್ರಾಧಾನ್ಯವನ್ನು ಸೂಚಿಸುವವಕ್ಕಾಗಿ ಅಜ್ಞಗೆ ಯಾವ ಫಲವೋ, ಆ ಫಲವೇ ಅಜ್ಞಕ್ಕೂ ಹೇಳಿರುವದುಂಟು. ಇದರಿಂದ ಅಜ್ಞವು ಫಲವನ್ನೇ ಅಜ್ಞವೂ ಸಾಧಿಸಿಕೊಡುತ್ತವೆಂಬುದಿಸ್ಸಾಯವಲ್ಲವು. ಆ ಅಜ್ಞದ ಪ್ರಾಧಾನ್ಯರೂಪ ಸ್ತುತಿಯಿಂದ, ಭಾವಿಸತಕ್ಕದ್ದು ಹಾಗಲ್ಲದೆ ಆ ಅಜ್ಞವೂ ಅಜ್ಞಿ ಫಲನನ್ನೇ ಕೊಡುವನಾದರೆ ಅಜ್ಞವನ್ನು ಯಾರೂ ಅನುಲಂಬಿಸದೆ ಆ ಶಾಸ್ತ್ರದ ನೈರರ್ಥಕ್ಯವು ಪ್ರಾಪ್ತವಾಗುತ್ತದೆ. ಹಾಗೆಯೇ ಪ್ರಪತ್ತಿಯು ಅಜ್ಞವಾಗಿ, ಉಪಾಸನೆಯು ಅಜ್ಞವಾಗಿ ಇರುವದರಿಂದ ಎರಡಕ್ಕೂ ವೈಕಲ್ಪಿಕತ್ವವೆಂದು ಹೇಳಿದರೆ, ಮೇಲಿನ ನ್ಯಾಯದಸ್ಕಾರ ಅಜ್ಞವಾದ ಪ್ರಪತ್ತಿಗೆ ಸ್ತುತಿರೂಪವಾದ ಪ್ರರೋಚನವೂ, ಭಕ್ತಿಯೇ ವೈಕಲ್ಪಿಕವೆಂದೂ ವಿಪರೀತವಾದರಿಂದ ಪ್ರತಿಕಕ್ಷಿಯ ವಿವಕ್ಷಿತಕ್ಕೆ ವಿಪರೀತವೆಂಬ ಭಾವವು ಆಗ **ಮುನುಕ್ಷುರ್ವೈ ಶರಣ ಮಹಂ ಪ್ರಪದ್ಯೇ** ಇತ್ಯಾದಿಗಳು ಅಜ್ಞಸ್ತುತಿಯಾಗಿ ಅರ್ಥವಾದವಾಗಿ ವಿಪರೀತವರಿಂದ ಪ್ರಪತ್ತಿಗೆ ಅನುಪಾಯತ್ವವು ವಿಪರೀತವೆಂಬ ತಾತ್ಪರ್ಯವು

೩. ಮುಂಬೆ ಮೂರನೆಯ ವಿಕಲ್ಪವಾದ ಪ್ರಾಪ್ಯಕ್ಕೆ ಅನುರೂಪವಾದುದು ಭಕ್ತ್ಯುಪಾಯವು ಅಲ್ಲವು, ಆದುದರಿಂದ ಅದು ಸ್ವರೂಪ ವಿರುದ್ಧವೆಂಬ ಪಕ್ಷವನ್ನು ಖಂಡಿಸುತ್ತಾರೆ, **ಪ್ರಾಪ್ಯತ್ತುಕ್ಕು**-ಸರ್ವೇಶ್ವರನನ್ನು ಹೊಂದುವದಕ್ಕೆ, **ಇನ್ನದು ಅನುರೂಪಮೆನ್ನುವಿಡವುಂ** - ಇದೀಗ ಅನುರೂಪವಾದ ಉಪಾಯವು ಎಂದು ತಿಳಿಯುವ ಸಂದರ್ಭವು, **ಶಾಸ್ತ್ರವೇದ್ಯಮಾಗೈಯಾಲೇ** - ಶಾಸ್ತ್ರದಿಂದಲೇ ತಿಳಿಯತಕ್ಕದಾದುದರಿಂದ, **ಯುಕ್ತಿವಾತ್ರತ್ತಾಲೇ** - ಬರೀ ಯುಕ್ತಿ ನ್ಯಾಯದಿಂದ, **ಪ್ರಾಪ್ಯವಿರೋಧನೆಂದು, ಶೊಲ್ಲವೊಣ್ಣಾದು** - ಹೇಳಲಾಗುವದಿಲ್ಲವು, **ಆಗವು ಸಿದ್ಧಜ್ಞಳಿಲ್** - ಶ್ರುತಿಯಲ್ಲಿ ವಿಧಿಸಿರುವದರಲ್ಲಿ, **ಒನ್ರೈ** - ಒಂದನ್ನು,

ವಿರುದ್ಧವಾದ ತರ್ಕಗಳಿಂದ ಬಾಧಿಸಿದರೆ, ತುಲ್ಯನ್ಯಾಯತ್ವಾತ್ತಲೇ - ಅದಕ್ಕೆ ಸಮಾನವಾಗಿ ತರ್ಕಗಳಿಂದಲೇ, ಸರ್ವ ಶಾಸ್ತ್ರಗಳೂ ಹಾಗೆಯೇ ಪ್ರಸತ್ತಿಶಾಸ್ತ್ರವೂ ಕೂಡ, ಪ್ರಮಾಣವನ್ನಿಕ್ಕೇ - ಪ್ರಮಾಣವಲ್ಲದೇನೇ ಒಳಿಯುವ್-ಹೋಗ ಬಹುದು ಒಂದು ಉಪಾಯವು ಅನುರೂಪವೇ ಇಲ್ಲವೇ ಎಂದು ನಿರ್ಧರಿಸುವ ಸಂದರ್ಭದಲ್ಲಿ ಶಾಸ್ತ್ರವೇ ಪ್ರಮಾಣವು. ಬರೀ ವಾದದಿಂದ, "ತರ್ಕಾಪ್ರತಿಷ್ಠಾನಾದಪಿ ಎಂಬ ಬ್ರಹ್ಮಸೂತ್ರದಲ್ಲಿ ಹೇಳಿರುವಹಾಗೆ, ಉಪಯೋಗನಿಷ್ಠವು, ಶಾಸ್ತ್ರವೇಗಪ್ರಮಾಣವು. ಹೀಗಿರುವಾಗ ಭಕ್ತ್ಯುಪಾಯವು ಪ್ರಾಪ್ಯಕ್ಕೆ ಅನುರೂಪವಾಮುದಲ್ಲವು ಎಂಬ ವಾದವು ಸರಿಯಾದುದಲ್ಲವು, ಶಾಸ್ತ್ರವು ಭಕ್ತ್ಯುಪಾಯವನ್ನು "ತಮೇವಂ ವಿದ್ವಾನಮೃತ ಇಹ ಭವತಿ, ನಾನ್ಯಃಪಂಥಾ ವಿದ್ಯತೇ ಅಯನಾಯ" ಎಂಬುದರಿಂದ ಅನುರೂಪವಾದ ಉಪಾಯವೆಂದೇ ಹೇಳುತ್ತಿರುವಾಗ, ವಾದದಿಂದ ಪ್ರಮಾಣವನ್ನು ದೂರೀಕೃತ ಮಾಡಿದರೆ ಹಾಗೆಯೇ ಎಲ್ಲಾ ಸಂದರ್ಭಗಳಲ್ಲೂ ಶಾಸ್ತ್ರ ಪ್ರಮಾಣಗಳನ್ನು ಯುಕ್ತಿಯಿಂದ ಬಾಧಿಸಿ ಬಿಡಬಹುದು. ಪ್ರಾಪ್ಯನೂ ಪ್ರಾಪಕನೂ ಸರ್ವೇಶ್ವರನೇ ಆಗಿರುವಾಗ ಅನುರೂಪವಲ್ಲದ ಭಕ್ತ್ಯುಪಾಯವೆಂಬ ಸಾಧ್ಯೋಪಾಯ ಬೇರೆ ಏತಕ್ಕೆ? ಅನಾವಶ್ಯಕವಲ್ಲವೋ? ಇತ್ಯಾದಿ ವಾದಗಳ ಮೂಲಕ ಶಾಸ್ತ್ರಪ್ರಮಾಣದಿಂದ ವಿಶಿಷ್ಟವಾದ ಈ ಸಾಧ್ಯೋಪಾಯವನ್ನು ಬಾಧಿಸಿದರೆ, ಪ್ರಸತ್ತಿಯ ವಿಷಯವಲ್ಲೂ ಕೂಡ ಆ ವಾದನಸ್ನೇ ತಂದು ಅದನ್ನೂ ಕೂಡ ಬಾಧಿಸಿ ಬಿಡಬಹುದು ಎಂಬ ಭಾವನೆಯು ಪ್ರಸತ್ತಿಯು ಮಾತ್ರ ಅನುರೂಪವು ಭಕ್ತ್ಯುಪಾಯವಲ್ಲವು ಎಂಬುದಕ್ಕೆ ತಾನೇ ಪ್ರಮಾಣವೆಲ್ಲಿರುತ್ತದೆ? ಹಾಗೆ ಲಘೂಪಾಯವಾದ ಪ್ರಸತ್ತಿಯೇ ಅನುರೂಪವಾದರೆ, ಭಕ್ತ್ಯುಪಾಯವೂ ಗುರೂಪಾಯವಾಗಿ ಕೈಮುತಿಕ ನ್ಯಾಯದಿಂದ ಅನುರೂಪವಾಗುವುದೇ ಎಂದು ಹೇಳಬಹುದು. ಆದುದರಿಂದ ಈ ಕಾರಣದಿಂದಲೂ ಸ್ವರೂಪ ವಿರೋಧವೆಂದು ವಾದಿಸಲು ಸಾಧ್ಯವಲ್ಲವೆಂಬ ತಾತ್ಪರ್ಯವು.

ಳ ನಾಲ್ಕನೆಯ ವಿಕಲ್ಪವಾದ ಶಾಸ್ತ್ರನಿಂದಿತವೆಂಬುದನ್ನು ಖಂಡಿಸುತ್ತಾರೆ ಶಾಸ್ತ್ರಗಳಲ್ಲಿ ಭಕ್ತಿಯಾರ್ಗವು ವಿಧೇಯವಾಗಿವೆಯೇ ವಿನಾ, ನಿಂದಿತವಾಗಿಲ್ಲವು. ಬ್ರಹ್ಮವಿದ್ಯೆಗಳಲ್ಲೆಲ್ಲಾ ಉಪಾಸನವೇ ಸರ್ವೇಶ್ವರನನ್ನು ಹೊಂದುವ ನಿಶ್ಚಯ ಉಪಾಯವೆಂದು ಉಪನಿಷತ್ತುಗಳು ಉದ್ಘೋಷಿಸುತ್ತವೆ. ಸ್ವರೂಪ ವಿರುದ್ಧ ವಾದವುಗಳನ್ನು ಉಪನಿಷತ್ತುಗಳು ಪ್ರತಿಪಾದಿಸುತ್ತವೆಯೆ? ಅವುಗಳಹಾಗೆ ಸ್ವರೂಪ ವಿರುದ್ಧಗಳಾದರೆ ಅವುಗಳ ಸರಿಯಾದ ಅರ್ಥಗ್ರಹಣಕ್ಕಾಗಿ, ಶ್ರೀ ಬಾದರಾಯಣರು ಸೂತ್ರಗಳನ್ನು ಅನುಗ್ರಹಿಸುತ್ತಿದ್ದರೇ? ಹಾಗೆ ನಿರರ್ಥಕ ವಿಷಯಗಳಾದರೆ, ನಮ್ಮ ಸಿದ್ಧಾಂತಸ್ಥಾಪಕರು ಆ ಸೂತ್ರಾರ್ಥಗಳ ನಿರ್ಣಯಕ್ಕಾಗಿ ಶ್ರೀ

೪. "ಅಥ ಪಾತಕೆ ಭೀತಸ್ತ್ವಮ್" ಎಜ್ಜಾರ ವಿಡತ್ತಿಲುಮ್, "ಪಾತಕೆ" ಶಬ್ದತ್ತಾಲೆ ಉಪಾಸನಾದಿಗಳೈ ನಿಂದಿಕ್ಕಿರದೆನ್ಸೈಕ್ಕುಮ್

ಭಾಷ್ಯವನ್ನನುಗ್ರಹಿಸುವರೇ ? ಸ್ವರೂಪವಿರುದ್ಧವಾದಪಕ್ಷದಲ್ಲಿ ಕಪಿಲಮೂರ್ತಿಯು ತನ್ನ ತಾಯಿ ಯಾದ ದೇವಹೂತಿಗೆ ಉಪದೇಶಿಸುತ್ತಿದ್ದರೇ ? ಶ್ರೀಕೃಷ್ಣಭಗವಾನರವರು ಅರ್ಜುನನಿಗೆ ಅವನ್ನೇ ಬೋಧಿಸುತ್ತಿದ್ದರೇ ? ಶ್ರೀ ಭೀಷ್ಮರು ಯುಧಿಷ್ಠಿರನಿಗೆ ಅದನ್ನೇ ಉಪದೇಶಿಸುತ್ತಿದ್ದರೆ ? ಆದುದರಿಂದ ಶಾಸ್ತ್ರವು ಭಕ್ತಿಮಾರ್ಗವನ್ನು ಉಪಾಯವೆಂದು ವಿಧಿಸಿದಿಯೇವಿನಾ ನಿಂದಿಸಲಿಲ್ಲವು. **ಅಥಪಾತಕೆ ಭೀತಸ್ತ್ವಮ್** ಎಂಬ ಶ್ಲೋಕದಲ್ಲಿ ನಿಂದಿಸಿದೆಯಲ್ಲಾ ಎಂದರೆ ಅಲ್ಲಿ ಉಪಾಸನೆಯು ನಿಂದಿತವಲ್ಲವು ; ಅವರ ಸರಿಯಾದಫಲವನ್ನು ನೀವುಗಳು ಗ್ರಹಿಸಿಲ್ಲವೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ **ಅಥ ಪಾತಕೆ ಭೀತಸ್ತ್ವಮ್, ಎಜ್ಜಾರ ವಿಡತ್ತಿಲುಮ್** ಎಂದು ಹೇಳಿರುವ ಸಂದರ್ಭದಲ್ಲೂ, **ಪಾತಕೆ** ಶಬ್ದದಿಂದು ಉಪಾಸನಾದಿಗಳನ್ನು ಶಾಸ್ತ್ರವು, **ನಿಂದಿಕ್ಕಿರದೆನ್ಸೈಕ್ಕುಮ್** - ನಿಂದಿಸುತ್ತದೆಂಬುದಕ್ಕೂ, **ಪ್ರಮಾಣಮಿಲ್ಲೈ** - ಪ್ರಮಾಣವಿಲ್ಲವು ಹಾಗಾದರೆ ಈ ವಿಷ್ಣುಧರ್ಮಶ್ಲೋಕಾಭಿಪ್ರಾಯವೇನೆಂದರೆ :—**"ಧ್ಯಾಯಿತಾ" "ನಿದಿಧ್ಯಾಸಿತವ್ಯಃ", "ತಜ್ಜಲಾ ಇತಿ ಶಾಂತ ಉಪಾಸೀತ" "ಧ್ಯೇಯೋ ನಾರಾಯಣ ಸ್ಸದಾ" "ಹರಿರೇಕ ಸ್ಸದಾಧ್ಯೇಯಃ" "ಸ್ಮರ್ತವ್ಯ ಸ್ಸತತಂ ವಿಷ್ಣುಃ" "ಮನ್ಮನಾಭವ ಮದ್ಭಕ್ತೋ" "ವಿನಿಷ್ಪನ್ನ ಸಮಾಧಿಸ್ತು ಮುಕ್ತಿಂ ತತ್ರೈವ ಜನ್ಮನಿ। ಪ್ರಾಪ್ನೋತಿ ಯೋಗೀ ಯೋಗಾಗ್ನಿ ದಗ್ಧಕರ್ಮಚಯೋಚಿರಾತ್", ॥** (ವಿ ಪು ೬ ೭. ೫೫), ಇವೇ ಮೊದಲಾದ ಪ್ರಮಾಣಗಳಿಂದ ಭಕ್ತ್ಯುಪಾಯವು ಭಗವಂತನಿಗೆ ಪರಮಪ್ರಿಯವಾದ ಉಪಾಯವೆಂದು ಶ್ರುತಿ ಸ್ಮೃತಿ ಪುರಾಣೇತಿಹಾಸಗಳೆಲ್ಲಾ ಉದ್ಘೋಷಿಸುತ್ತವೆ. ಇಂತಹ ಉಪಾಯವನ್ನು ಧರ್ಮದೇವತೆಯು ತನ್ನ ಪುತ್ರನಾದ ಯುಧಿಷ್ಠಿರನಿಗೆ ನಿಂದಿಸಿ ಪಾತಕಕ್ಕೆ ಸಮಾನವೆಂದು ಹೇಳುವ ವಾದವು ಶುದ್ಧ ಅಸೈದಿಕವಾದುವೆಂದು ಭಾವಿಸತಕ್ಕದ್ದು. ಹಾಗಾದರೆ ಆಶ್ಲೋಕಾರ್ಧವೇನು ಎಂದರೆ, "ಹಾಗಾದರೆ, **ತ್ವಂ** - ನೀನು, **ಪಾತಕೆ ಭೀತ ಶ್ಚೇತ್** - ಅನಾದಿ ಕಾಲದಿಂದ ಸಂಚಿತ ಪಾಪಗಳ ಅನಂತ್ಯದಿಂದ ಭಕ್ತ್ಯುಪಾಯವು ಕೊನೆಗಾಣಿಸುತ್ತದೋ ಇಲ್ಲವೋ ಎಂದು ಭಯಪಟ್ಟವನಾದರೆ, **ವಿಮುಕ್ತಾನ್ಯ ಸಮಾರಂಭಃ** - ಅಂತಹ ಪಾತಕಗಳನ್ನು ಹೋಗಲಾಡಿಸುವ ಶಕ್ತಿಯುಳ್ಳ ಆದರೆ ಬಹು ಕಷ್ಟಸಾಧ್ಯವಾದ ಕೃಚ್ಛ್ರ, ಚಾಂದ್ರಾಯಣ, ಕೂಶ್ಮಾಂಡ, ವೈಶ್ವಾ

ಪ್ರಮಾಣಮಿಲ್ಲ್ಯ. ಆಗ್ನೇಯಾಲ್ ಮುಮುಕ್ಷುವುಕ್ಕು ವಿಹಿತಜ್ಞಾಗ್ನೇಯಾಲೇ ಭಕ್ತಿಪ್ರಪತ್ತಿಗಳಿರಣ್ಣುಮ್ ಯಥಾಧಿಕಾರಂ ಹರಿಗ್ರಾಹ್ಯಜ್ಞಳ್.

ನರ, ವ್ರಾತಪತಿ, ಪವಿತ್ರೇಷ್ಟಿ, ಪ್ರವ್ಯದಗ್ನಿಷ್ಟೋಮ ಮೊದಲಾದ ಇತರ ಕರ್ಮ ಸಮಾರಂಭಗಳನ್ನೆಲ್ಲಾ ತ್ಯಜಿಸುವವನಾಗಿ, **ಸರ್ವಭಾವೇನ "ಪಿತಾತ್ವಂ" ಇತ್ಯಾದಿಗಳಲ್ಲಿ ಹೇಳಿರುವ ಸಮುಸ್ತ ಭಾವನೆಯಿಂದಲೂ, ನಾರಾಯಣ ಪರೋಭವ- ಶ್ರೀಮನ್ನಾರಾಯಣನಲ್ಲಿ ಶರಣಾಗತಿಯನ್ನು ಮಾಡು" ಎಂಬುದೀಗ** ಸಮಂಜಸವಾಗ ಶ್ಲೋಕಾರ್ಧವು. ಇದರಿಂದ ಭಕ್ತ್ಯುಪಾಯವು ನಿಂದಿತವು **ಎಂಬುದಕ್ಕೆ ಪೂರ್ವ ಪಕ್ಷಿಗಳಿಂದ** ನಿಗೆ **ಪ್ರಮಾಣವೇ** ಇಲ್ಲವೆಂದು ಹೇಳಿರುತ್ತಾರೆ

ಹೀಗೆ ಸರ್ವಾಕ್ಷೇಪಗಳನ್ನು ಸಮುಂಜಸಗಳಾದ ಪ್ರಮಾಣ ಪೂರ್ವಕ ಸಮಾಧಾನಗಳನ್ನು ಹೇಳಿ, ತಾವು ಸ್ಥಾಪಿಸಿದ ವಸ್ತುವನ್ನು ನಿಗಮನಮಾಡಿ ಹೇಳುತ್ತಾರೆ. **ಆಗ್ನೇಯಾಲ್** - ಇಷ್ಟಪಟ್ಟ ಸಾಧ್ಯವು ಆಕ್ಷೇಪಗಳಿಗೆಲ್ಲಾ ಸಮಾಧಾನ ಹೇಳಿರುವುದರಿಂದ, **ಮುಮುಕ್ಷುವುಕ್ಕು** - ಮೋಕ್ಷಾರ್ಥಿಗೆ, **ವಿಹಿತಜ್ಞಾಗ್ನೇಯಾಲೇ**- ಶಾಸ್ತ್ರಗಳಲ್ಲಿ ವಿಧಿಸಿರುವುದರಿಂದ ಇದು ಉಪಾಯ ವಿಭಾಗಾಧಿಕಾರದಲ್ಲಿ ವಿಸ್ತರವಾಗಿ ಉಪಪಾದಿಸಲ್ಪಟ್ಟಿರುತ್ತದೆ. **ಭಕ್ತಿ ಪ್ರಪತ್ತಿಗಳಿರಡು ಯಥಾಧಿಕಾರಂ**- ಶಕ್ತನಿಗೆ ಭಕ್ತ್ಯುಪಾಯವೂ ಅಶಕ್ತನಿಗೆ ಪ್ರಪತ್ತಿಯೂ ಎಂದು ಅಧಿಕಾರಿ ನಿಷ್ಠಾಗಾಧಿಕಾರದಲ್ಲಿ ಹೇಳಿರುವಹಾಗೆ **ಹರಿಗ್ರಾಹ್ಯಜ್ಞಳ್** - ಉಪಾದೇಯಗಳು, ಎರಡರಲ್ಲಿ ಯಾವುದಾವರಣ ಒಂದನ್ನು ತನ್ನ ಶಕ್ತ್ಯನುಸಾರ ಅವಲಂಬಿಸಬಹುದೆಂಬ ಭಾವವು **"ವಿಕಲೇಷ್ವಪಿ ವಿಶಿಷ್ಟಫಲತ್ವಾತ್"** ಎಂಬ ಸೂತ್ರಾನುಸಾರ ಶಾಸ್ತ್ರಗಳಲ್ಲಿ ಎರಡರಲ್ಲಿ ಯಾವುದಾವರೂ ಒಂದು ಆಗಬಹುದೆಂದು ವಿಧಿಸಿರುವುದರಿಂದ ಎರಡಕ್ಕೂ ಫಲ ಒಂದೇ ಎಂಬಂಶವೂ ಕೂಡ ಈ ವಾಕ್ಯದಲ್ಲಿ **ಮುಮುಕ್ಷುವುಕ್ಕು** - ಮೋಕ್ಷಾರ್ಥಿಗೆ ಎಂಬ ವ್ಯಯೋಗದಿಂದ ಸೂಚಿತವು.

ಮುಂದೆ ಪೂರ್ವಪಕ್ಷಿಯು ಇನ್ನೊಂದಾಕ್ಷೇಪವನ್ನು ತರಬಹುದೆಂದು ಅನುವದಿಸಿ ಅದಕ್ಕೆ ಸಮಾಧಾನ ಹೇಳುತ್ತಾರೆ

ಭಕ್ತಿಯೋಗವು ಶಿಷ್ಟಪರಿಗ್ರಹವಲ್ಲದುದರಿಂದ ಸ್ವರೂಪ ವಿರುದ್ಧವೆಂಬಾದದ ನಿರಸನವು.

---

೯. ಹಿಂದೆ ಭಕ್ತಿ ಪ್ರಪತ್ತಿಗಳೆರಡೂ ಶಾಸ್ತ್ರಗಳಲ್ಲಿ ವಿಧಿಸಲ್ಪಟ್ಟ ಸಾಧ್ಯೋಪಾಯಗಳೆಂದ ಸ್ಥಾಪಿಸಿದುದನ್ನು ಅಬ್ಗೀಕರಿಸಿ, **ಪೂರ್ವಪಕ್ಷಿಯು ಪುನಃ ಬೇರೆ**

೯. ಭಕ್ತೇಃ ಶಿಷ್ಟಪರಿಗ್ರಹಾಭಾವಾತ್ ಸ್ವರೂಪ ವಿರೋಧ ಇತಿವಾದಸ್ಯ ನಿರಾಸಃ

ವಿಹಿತಜ್ಞಳೇ ಯಾಗಿಲುಮ್ ಆಚಾರ್ಯರುಚಿ ಪರಿಗೃಹೀತಜ್ಞಳೇ ಆಚಾರ್ಯರುಚಿ ಪರಿಗೃಹೀತಜ್ಞಳಲ್ಲಾದಪಡಿಯಾಲೇ ಅತಿಥಿ ಸತ್ಕಾರಜ್ಞಳಿಲ್ ವಿಹಿತಜ್ಞಳಾನ ಗವಾಲಂಭನಾದಿಗಳ್ ಪೋಲೆ, ಉಪಾಸನಾದಿಗಳ್ ಶಿಷ್ಟ ಪರಿಗ್ರಹ ವಿರುದ್ಧಜ್ಞಳಾಗೈಯಾಲೇ ಅನಾದರಣೀಯಜ್ಞಳನ್ರೋ? ಎಜಿಸ್ಞೈಯುಮ್ ನಿರೂಪಕ ವಾಕ್ಯವನ್ರು. ಸರ್ವಾಚಾರ್ಯ ಪರಿಗ್ರಹ ವಿಲ್ಲಾದ ಪೋದನ್ರೋ.(೧) "ಅಸ್ವರ್ಗ್ಯಂಲೋಕವಿದ್ವಿಷ್ಟಂ ಧರ್ಮ್ಯಮಪ್ಯಾಚರೇನ್ನತು"

ಆಕ್ಷೇಪವನ್ನು ಉಪಪಾದಿಸಿ ಹೇಳುತ್ತಾರೇನೆಂದರೆ—**ವಿಹಿತಜ್ಞಳೇಯಾಗಿಲುಮ್** - ಶಾಸ್ತ್ರದಲ್ಲಿ ಭಕ್ತ್ಯುಪಾಯವು ಮೋಕ್ಷದಾಯಕವೆಂದು ವಿಧಿಸಿದ್ದರೂ **ಆಚಾರ್ಯರುಚಿ ಪರಿಗೃಹೀತಜ್ಞಳಲ್ಲಾದಪಡಿಯಾಲೆ** - ಪೂರ್ವಾಚಾರ್ಯರುಗಳ ಅಭಿಮತಾನುಸಾರವಾಗಿ ಉಪಾದೇಯವಾಗಲ್ಲದಿರುವುದರಿಂದ, **ಅತಿಥಿ ಸತ್ಕಾರಗಳಲ್ಲಿ, ವಿಹಿತಜ್ಞಳಾನ ಶಾಸ್ತ್ರಗಳಲ್ಲಿ ಹೇಳಲ್ಪಟ್ಟ, ಗವಾಲಂಭನಾದಿಗಳ್ ಪೋಲೇ** - ಆಡಿನ ಮಾಂಸವನ್ನು ಸಮರ್ಪಿಸುವದಕ್ಕಾಗಿ ಪಶುವಾದ ಆಡನ್ನು ಛೇದಿಸುವದೇ ಮೊದಲಾದವುಗಳಹಾಗೆ, ಉಪಾಸನವೇ ಮೊದಲಾದವುಗಳು, **ಶಿಷ್ಟ ಪರಿಗ್ರಹಕ್ಕೆ** ವಿರುದ್ಧಗಳಾದುದರಿಂದ, **ಅನಾದರಣೀಯಜ್ಞಳೆನ್ರೋ** - ಅನುಪಾದೇಯಗಳಲ್ಲವೋ? **ಎಜಿಸ್ಞೈಯುಮ್** - ಎಂದು ಹೇಳುವ ಆಕ್ಷೇಪವೂ ಕೂಡ, **ನಿರೂಪಕ ವಾಕ್ಯವನ್ರು** - ಜ್ಞಾನಿಗಳಾದ ಪಂಡಿತರು ಹೇಳತಕ್ಕ ಮಾತಲ್ಲವು, ಪ್ರಮಾಣವೆಂದು ಅಙ್ಗೀಕರಿಸತಕ್ಕ ಮಾತಲ್ಲವು. ಉಪಾಸನವು ನಾಥಮುನಿ ಮೊದಲಾದವರುಗಳ ಕಾಲಕ್ಕೆ ಮುಂಚೆ ಬಹಳವಾಗಿ ಆಚರಣೆಯಲ್ಲಿತ್ತು; ಹೀಗೆ ಹೇಳಿದುದರಿಂದ ಪ್ರಪದನವು ಆಗ ಇರಲಿಲ್ಲವೆಂಬ ಭಾವವಲ್ಲವು **ವಾಲ್ಮೀಕಿಮಹರ್ಷಿಯೇ** ನಾನಾ ವಿಧವಾದ ಪ್ರಪದನಗಳನ್ನುಪಪಾದಿಸಿ ಗ್ರಂಥವನ್ನು ಬರೆದಿರುತ್ತಾರೆ. ಉಪಾಸನಾರೂಪ ಉಪಾಯಾನುಷ್ಠಾನವೂ ಹೆಚ್ಚಾಗಿಯೇ ಇತ್ತೆಂಬ ಭಾವವು. ಈಚಿಗೆ ಉಪಾಸನೆಯು ನಮ್ಮ ಆಚಾರ್ಯವರ್ಗದಲ್ಲಿ ಇಲ್ಲದುದರಿಂದ **ಈ ಆಕ್ಷೇಪವನ್ನು** ತಂದು ಸ್ವರೂಪ ವಿರುದ್ಧವೆಂದು **ಪೂರ್ವಪಕ್ಷಿಗಳು ಹೇಳಿರುತ್ತಾರೆ. ಅದಕ್ಕೆ** ಒಂದು **ನಿದರ್ಶನವನ್ನು ಹೇಳಿ ಪೂರ್ವಪಕ್ಷಿಗಳು** ದೂಷಿಸುತ್ತಾರೆ. ಅತಿಥಿ **ಸತ್ಕಾರದಲ್ಲಿ** ಆಡನ್ನು ಛೇದಿಸಿ ಆಡಿನಮಾಂಸವನ್ನು ಬಡಿಸತಕ್ಕದ್ದೆಂದು

---

(೧) ಯಾಜ್ಞ. ಸ್ಮೃ. ೧. ೧೫೬.

ಎನ್ನು ಕಳಿಕ್ಕಲಾವದು ಇಜ್ಜು (೨) "ತಸ್ಮೈ ನನೋ ಮುನಿವರಾಯ ಪರಾಶರಾಯ" ಎನ್ನುನ್ನುವ್ಡಿ ಶ್ಲಾಘ್ಯರಾನ ಶ್ರೀ ಪರಾಶರಾದಿ ಪೂರ್ವಾಚಾರ್ಯರುಗಳ್ ಅನುಷ್ಠಿಕ್ಕ್ಯಯಾಲ್ ಸರ್ವಶಿಷ್ಟ ಬಹಿಷ್ಕಾರಮ್ ಶೊಲ್ಲವೊಣ್ಣಾದು.

ಶಾಸ್ತ್ರದಲ್ಲಿ ಹೇಳಿರುತ್ತದೆ ಆಡನ್ನು ಛೇದಿಸುವದು ಶಾಸ್ತ್ರವಿಹಿತವಾಗಿದ್ದರೂ ಹೇಗೆ ಸ್ವರೂಪವಿರುದ್ಧವೋ, ಹಾಗೆಯೇ ಉಪಾಸನ ಎಂಬುದು ಅವರ ತಾತ್ಪರ್ಯವು ಈ ಗವಾಲಂಬನವು ಸರಿಯಲ್ಲವೆಂದು ಯಾಜ್ಞವಲ್ಕ್ಯಸ್ಮೃತಿಯಲ್ಲಿ "ಅಸ್ವರ್ಗ್ಯಂ ಲೋಕ ವಿದ್ವಿಷ್ಟಂ" ಎಂಬ ಶ್ಲೋಕದಲ್ಲಿ ಪೂಷಿಸಲ್ಪಟ್ಟಿರುತ್ತದೆ ಏಕೆಂದರೆ ಈ ಪಶ್ವಾಲಂಬನವು ಯುಗಾಂತರಗಳಲ್ಲಿ ಅನುಷ್ಠೇಯವು ಕಲಿಯುಗದಲ್ಲಿ ಬ್ರಾಹ್ಮಣಾತಿಥಿ ಸತ್ಕಾರದಲ್ಲಿ ನಿಂದಿತವು. ಈ ನಿದರ್ಶನವನ್ನು ಮನಸ್ಸಿನಲ್ಲಿಟ್ಟು ಭಕ್ತಿಮಾರ್ಗವನ್ನು ನಿಂದಿಸುವದು ಉಚಿತವಲ್ಲವೆಂದು ತೋರಿಸುತ್ತಾರೆ ಸರ್ವಾಚಾರ್ಯರೂ ಈ ಭಕ್ತಿಮಾರ್ಗವನ್ನವಲಂಬಿಸದಿದ್ದರೀಗ ಅದು ತ್ಯಾಜ್ಯವೇ ಸರಿ; ಹಾಗಿಲ್ಲವಲ್ಲಾ, ಅನೇಕ ಮಹನೀಯರು ಆ ಮಾರ್ಗವನ್ನು ಅವಲಂಬಿಸಿರುತ್ತಾರಲ್ಲಾ ಎಂದು ಹೇಳುತ್ತಾರೆ, **ಸರ್ವಾಚಾರ್ಯ ಪರಿಗ್ರಹ ವಿಲ್ಲಾದ ವೋದನ್ನೋ** - ಸಮಸ್ತ ಆಚಾರ್ಯರೂ ಅವಲಂಬಿಸದೇ ಹೋದರಲ್ಲವೋ, **"ಅಸ್ವರ್ಗ್ಯಂ** - ಸ್ವರ್ಗಭೋಗವನ್ನು ಕೊಡದೇ ಇರುವಂಥಾದ್ದಾಗಿಯೂ, **ಲೋಕವಿದ್ವಿಷ್ಟಂ** - ಲೋಕದ ಜನರಿಂದ ನಿಂದಿಸಲ್ಪಟ್ಟಿಂತಾದ್ದಾಗಿಯೂ, **ಧರ್ಮಮಪಿತು** - ಇರುವ ಶಾಸ್ತ್ರವಿಹಿತವಾದ ಕರ್ಮವಾಗಿದ್ದರೂಕೂಡ, **ನಾಚರೇತ್** - ಆಚರಿಸತಕ್ಕದ್ದಲ್ಲವು," **ಎನ್ರು** - ಎಂದು ಹೇಳಿ, **ಕಳಿಕ್ಕಲಾವದು** - ತ್ಯಜಿಸಬಹುದು, **ಇಜ್ಜು** - ಈ ಉಪಾಸನಗಳ ವಿಷಯದಲ್ಲಾದರೋ, **"ತಸ್ಮೈ** - ಶಾಸ್ತ್ರವಿಷಯಗಳನ್ನೆಲ್ಲಾ ಬಹು ವಿಶದವಾಗಿ, ತಮ್ಮ ಶಿಷ್ಯರಾದ ಮೈತ್ರೇಯರಿಗೆ **ಉಪದೇಶಿಸುವ** ವ್ಯಾಜದಿಂದ, ಲೋಕಕ್ಕೆಲ್ಲಾ ತಿಳಿಯಪಡಿಸಿ ಮಹಾ ಪ್ರಸಿದ್ಧಿಯನ್ನು ಪಡೆದಿರುವ, **ಮುನಿವರಾಯ ಪರಾಶರಾಯ** - ಭಗವದುಪಾಸಕರಲ್ಲಿ ಶ್ರೇಷ್ಠರಾದ ಪರಾಶರ ಮಹರ್ಷಿಗೆ ನಮಸ್ಕಾರವು," **ಎನ್ನುನ್ನುವ್ಡಿ** - ಎಂದು **ಶ್ರೀ ಯಾಮುನೇಯರು** ತಮ್ಮ ಸ್ತೋತ್ರ ರತ್ನದಲ್ಲಿ ಸ್ತುತಿ ಸುವಹಾಗೆ, ಶ್ಲಾಘ್ಯರಾದ ಶ್ರೀ ಪರಾಶರರೇ ಮೊದಲಾದ **ಪೂರ್ವಾಚಾರ್ಯರುಗಳು, ಅನುಷ್ಟಿಕ್ಕ್ಯಯಾಲ್**- ಅನುಷ್ಠಿಸಿದುದರಿಂದ, - **ಸರ್ವಶಿಷ್ಟ ಬಹಿಷ್ಕಾರಮ್** - ಸಮಸ್ತ ಶಿಷ್ಟರೂ ಈ

---

(೨) ಅಳ. ಸ್ತೋ. ೪.

ಭಕ್ತಿಯೋಗಕ್ಕೆ ಬಹಿಷ್ಕಾರವನ್ನು ಹಾಕಿದರು ಎಂದರೆ ಸಮಸ್ತ ಶಿಷ್ಟರೂ ತ್ಯಜಿಸಿದರು ಎಂದು, **ಶೊಲ್ಲವೊಣ್ಣಾದು** ಹೇಳಲು ಸಾಧ್ಯವಲ್ಲವು **ಶಿಷ್ಟ** ಪರಿಗ್ರಹವಿಲ್ಲ, ಆದುದರಿಂದಲೇ ಸ್ವರೂಪ ವಿರುದ್ಧವೆಂದು ಪೂರ್ವಪಕ್ಷ ತಂದಿರುವದಕ್ಕೆ, ಕೆಲವು ಮಹನೀಯರೂ ಈ ಉಪಾಯವನ್ನು ಅವಲಂಬಿಸಿರುತ್ತಾರೆಂದು ಶ್ರೀ ಪರಾಶರಾದಿಗಳನ್ನು ಉದಾಹರಿಸಿದರು. **ಈ** ಪರಾಶರರನ್ನೇ ಪರಮಾಚಾರ್ಯರನ್ನಾಗಿ ಭಾವಿಸಿ, ಆಚಾರ್ಯವರ್ಗಪ್ರಧಾನರಾದ ನಾಥಮುನಿ ನಮ್ಮಾಳ್ವಾರ್ರವರ ವಧ್ಯೆ **"ತಸ್ಮೈ ನಮೋ ಮುನಿವರಾಯ"** ಎಂದು ಯಾಮುನೇಯರು ಕೊಂಡಾಡಿ ನಮಸ್ಕರಿಸಿರುತ್ತಾರೆ **ಪರಾಶರಾದಿ** ಎಂಬಲ್ಲಿರುವ ಆದಿಪದವಿಂದ ವ್ಯಾಸ ವಾಲ್ಮೀಕಿಯೇ ಮೊದಲಾದ ಮಹರ್ಷಿಗಳೂ ಹೇಳಲ್ಪಟ್ಟರು. ಹಾಗೆಯೇ ಈ ಯುಗದಲ್ಲೂ ಭಕ್ತಿಸಾರ, ಪರಾಂಕುಶನಾಥಾದಿಗಳೂ ಭಕ್ತಿಮಾರ್ಗವನ್ನೇ ಉಪಾಯವಾಗಿ ಎಣಿಸಿದರು. ಹೀಗೆ ಕೆಲವರು **ಭಕ್ತ್ಯುಪಾಯವನ್ನು** ಅವಲಂಬಿಸಿರುತ್ತಾರೆ. ಪಾಂಡವರು ಸರ್ವೇಶ್ವರನ ಆಜ್ಞಾನುಸಾರ ಇಹಲೋಕ ವ್ಯಾಪಾರಗಳನ್ನೆಲ್ಲಾ ನೆರವೇರಿಸಿದ ನಂತರ ನರನಾರಾಯಣಾಶ್ರಮಕ್ಕೆ **ಉಪಾಸನಕ್ಕಾಗಿ** ತೆರಳಿದರೆಂಬ ತಿಳಿಯಬರುತ್ತದೆ, ಹಾಗೆಯೇ ಕೇತಿಧ್ವಜರು **ಯೋಗವೇ** ಪರಮೋಪಾಯವೆಂದು ತಾವು ಅನುಷ್ಠಿಸಿದವರಾಗಿ ಖಾಂಡಿಕ್ಯರಿಗೂ ಭಗವಂತನ ಶಂಖಾಶ್ರಯೋಪಾಸನೆಯೇ ಉಪಾಯವೆಂಬುದಾಗಿ ಉಪದೇಶಿಸಿರುತ್ತಾರೆ. ಎಲ್ಲೋ ಅಲ್ಪಸ್ವಲ್ಪ ಜನವು ಇದನ್ನು ಅಭಿಮಾನಿಸಿರುವದರಿಂದ ಅದು ಉಪಾದೇಯವೆಂದು ಹೇಳಲು ಹೇಗಾಗುತ್ತದೆಂದರೆ, **ಅಂತಹ ಆಕ್ಷೇಪವು** ಪ್ರಪತ್ತಿಯ ವಿಷಯದಲ್ಲೂ ಸಮಾನವಾದುದಾಗುತ್ತದೆ, ಎಂಬ ತಾತ್ಪರ್ಯವೂ ಸೂಚಿತವು **"ತಸ್ಮೈ ನಮೋ ಮುನಿವರಾಯ"** ಎಂಬ ಶ್ಲೋಕಾಭಿಪ್ರಾಯಕ್ಕೆ ಪರವೇವತಾ ಪಾರಮಾರ್ಥ್ಯಾಧಿಕಾರದಲ್ಲಿ ೭೪೦ ನೆಯ ಪುಟವನ್ನು **ನೋಡಿ.**

ಕಲಿಯುಗದಲ್ಲಿ ಭಕ್ತ್ಯಧಿಕಾರಿಗಳೇ ಇಲ್ಲವಾದುದರಿಂದ ಸ್ವರೂಪ ವಿರುದ್ಧವೆಂದಾಕ್ಷೇಪಿಸಿ, ಪರಿಹರಿಸುತ್ತಾರೆ.

ಮೊದಲು ಪೂರ್ವಪಕ್ಷವನ್ನು ಅನುವದಿಸುತ್ತಾರೆ.—**ಇಪ್ಪಡಿ** - ಮೇಲೆ ಸಿದ್ಧಾನ್ತಿಸಿ ಹೇಳಿದ ರೀತಿಯಲ್ಲಿ, **ಯುಗಾನ್ತರಙ್ಗಳಿಲ್** - ಇತರ ಯುಗಗಳಲ್ಲಿ, ಎಂದರೆ ಕೃತ, ತ್ರೇತಾ, ದ್ವಾಪರಗಳಲ್ಲಿ, **ಇವ್ಗೈ** - ಈ ಉಪಾಸನಾದಿಗಳು, **ಧರ್ಮಜ್ಞಾನಾಲುಮ್** – ಶಾಸ್ತ್ರದಲ್ಲಿ ಮೋಕ್ಷೋಪಾಯಗಳಾಗಿ ವಿಧಿಸಿದವುಗಳಾದರೂ, ಕಲಿಯುಗದಲ್ಲಾದರೋ, **ಯತ್ಥೋಕ್ತಮಾನ ಪರಮಾತ್ಮೋ ಪಾಸನಾದಿಗಳುಕ್ಕ** – ಶಾಸ್ತ್ರದಲ್ಲಿ ಹೇಳಿರುವಮೇರಿಗೆ ಪರ

೧೦ ಕಲೌ ಯುಗೇ ಭಕ್ತ್ಯಧಿಕಾರ್ಯಭಾವಾತ್ ಸ್ವರೂಪ ವಿರುದ್ಧತ್ವ ಮಾಕ್ಷಿಪ್ಯ ಪರಿಹರತಿ.

ಇಪ್ಪಡಿ ಯುಗಾಂತರಜ್ಞಳಿಲ್ ಇನ್ನೈ ಧರ್ಮಜ್ಞಳಾನಾಲುಮ್ ಕಲಿಯುಗತ್ತಿಲ್ ಯಥೋಕ್ತವಾನ ಪರಮಾತ್ಮೋಪಾಸನಾದಿಗಳುಕ್ಕು ಅಧಿಕಾರಿಗಳ್ ದುರ್ಲಭರಾಗ್ಯೆಯಾಲೇ ಇನ್ನೈಯಿಕ್ಕಾಲತ್ತುಕ್ಕು ಪೊರನ್ದುಮನೈ ಯನ್ಱು, ಆಗೈಯಾಲೇ ಯನ್ರೋ, (೧) "ಕಲೌ ಸಂಕೀರ್ತ್ಯ ಕೇಶವಮ್" ಎನ್ಱುಮ್ (೨) "ಕಲೇ ದೋಷನಿಧೇ ರಾಜನ್ನಸ್ತಿ ಹ್ಯೇಕೋ ಮಹಾನ್ ಗುಣಃ । ಕೀರ್ತನಾದೇವ ಕೃಷ್ಣಸ್ಯ ಮುಕ್ತಬಂಧಃ ಪರಂವ್ರಜೇತ್ ॥" ಎನ್ರುಮ್ ಶೊಲ್ಲುಗಿರದು ಎನ್ಱುವುನೋಕ್ಕಾದು.

ಮಾತೊಳೀ ಪಾಸನಾದಿಗಳಿಗೆ, ಅಧಿಕಾರಿಗಳು, ದುರ್ಲಭರಾಗ್ಯೆಯಾಲೇ - ಸಿಕ್ಕದಿರುವದರಿಂದ, ಇನ್ನೈ - ಈ ಉಪಸನಾದಿಗಳು, ಇಕ್ಕಾಲುತ್ತುಕ್ಕು - ಈ ಕಲಿಯುಗಕ್ಕೆ. ಪೊರನ್ದುಮನೈಯನ್ರು - ಉಚಿತವಾದವುಗಳಲ್ಲವು, ಆಗೈಯಾಲನ್ರೋ - ಆದುದರಿಂದಲ್ಲವೋ, "ಕಲೌಸಂಕೀರ್ತ್ಯ ಕೇಶವಂ" ಕಲಿಯುಗದಲ್ಲಿ ಕೇಶವನನ್ನು ಸಂಕೀರ್ತನವಮಾಡಿ ಎಂದೂ, ಎಂದರೆ ಕಲಿಯುಗದಲ್ಲಿ ಸರ್ವೇಶ್ವರನ ನಾಮ ಸಂಕೀರ್ತನವನ್ನೇ ಉಪಾಯವನ್ನಾಗಿ ಎಂಬ ಭಾವವು, "ಹೇ ರಾಜನ್ - ಓ ರಾಜನೇ, ದೋಷನಿಧೇಃ - ಅನೇಕ ದೋಷಗಳಿಗೆಲ್ಲಾ ಆಕರವಾಗಿರುವ, ಕಲೇಃ - ಕಲಿಯುಗಕ್ಕೆ, ಏಕಃ - ಒಂದಾದ, ಮಹಾನ್ ಗುಣಃ - ಪೊಕ್ಕ ಗುಣವು, ಅಸ್ತಿ - ಉಂಟು, ಹಿ - ಯಾಪಕಾರಣದಿಂದೆಂದರೆ, ಕೃಷ್ಣಸ್ಯ - ಕೃಷ್ಣ ಭಗವಾನನ, ಕೀರ್ತನಾದೇವ - ನಾಮಸಂಕೀರ್ತನಮಾತ್ರದಿಂದಲೇ, ಮುಕ್ತಬಂಧಃ - ಬಿಡಲ್ಪಟ್ಟ ಸಂಸಾರಬಂಧವುಳ್ಳವನಾಗಿ, ಪರಂ ವ್ರಜೇತ್ - ಪರತತ್ವವನ್ನು ಕುರಿತು ಹೋಗುವನು," ಎಂದರೆ ಕಲಿಯುಗವು ಅನೇಕ ದೋಷಗಳಿಗೆಲ್ಲಾ ಆಕರವೇನೋ ನಿಶ್ಚಯವು, ಆದರೂ ಕಲಿಯುಗಕ್ಕೆ ಒಂದು ದೊಡ್ಡ ಮಹಿಮೆಯುಂಟು; ಏನೆಂದರೆ ಹರಿಸಂಕೀರ್ತನದಿಂದಲೇ ಮನುಷ್ಯನು ಮೋಕ್ಷವನ್ನು ಈ ಕಲಿಯುಗದಲ್ಲಿ ಹೊಂದಬಹುದೆಂಬ ತಾತ್ಪರ್ಯವು. ಇಲ್ಲಿ ಕೀರ್ತನಾದೇವ ಎಂದು ಏನಕಾರವಿರುವದರಿಂದ ಕಲಿಯುಗದಲ್ಲಿ ಸಂಕೀರ್ತನವೇ ಉಪಾಯವೇ ವಿನಾ ಉಪಾಸನಾದಿಗಳಲ್ಲವೆಂಬುದು

---

(೧) ವಿ. ಪು. ೬ ೨ ೧೭ (೨) ಭಾಗ. ೧೨. ೩. ೫೧.

ಪೂರ್ವಪಕ್ಷಿಯ ತಾತ್ಪರ್ಯವು. ಎನ್ನುವ' ಶೊಲ್ಲುಗಿರದು - ಎಂದು ಹೇಳುತ್ತದೆ, ಎನ್ನುವು ನೊಱ್ಱಾದು - ಎಂದು ಹೇಳಲೂ ಸಾಧ್ಯವಿಲ್ಲವು. ಸರ್ವೇಶ್ವರನ ನಾಮ ಸಂಕೀರ್ತನವೇ ಈ ಕಾಲದಲ್ಲಿ ಮೋಕ್ಷೋಪಾಯವು; ಆದುದರಿಂದ ಪರಮಾತ್ಮೋಪಾಸನವು ಉಪಾಯವಾಗುವದಿಲ್ಲವೆಂಬುದು ಪೂರ್ವಪಕ್ಷವು ತಮ್ಮ ಪೂರ್ವಪಕ್ಷಕ್ಕನುಕೂಲವಾಗಿ ಎರಡು ಪ್ರಮಾಣಗಳನ್ನು ಉದಾಹರಿಸಿರುತ್ತಾರೆ. ವಿಷ್ಣು ಪುರಾಣದ ಶ್ಲೋಕವು ಯಾವುದೆಂದರೆ:-

"ಧ್ಯಾಯ್ಕೃತೇ ಯಜ್ಞಯಜ್ಞೈಸ್ತ್ರೇತಾಯಾಂ ದ್ವಾಪರೇಽರ್ಚಯ್।
ಯದಾಪ್ನೋತಿ ತದಾಪ್ನೋತಿ ಕಲೌ ಸಂಕೀರ್ತ್ಯ ಕೇಶವಂ"॥

ಕೃತಯುಗದಲ್ಲಿ ಉಪಾಸನ ಮಾಡುವನಾಗಿ ಯಾವ ಪ್ರಾಪ್ಯವನ್ನು ಹೊಂದುವನೋ, ಹಾಗೆಯೇ ತ್ರೇತಾಯುಗದಲ್ಲಿ ಯಜ್ಞಗಳನ್ನನುಷ್ಠಿಸಿ ಯಾವುದನ್ನು ಹೊಂದುವನೋ ಮತ್ತು ದ್ವಾಪರ ಯುಗದಲ್ಲಿ ಪರಮಾತ್ಮನನ್ನು ಅರ್ಚಿಸಿ ಯಾವುದನ್ನ ಹೊಂದುವನೋ, ಕಲಿಯುಗದಲ್ಲಿ ಆದನ್ನೇ ಕೇಶವನನ್ನು ಸ್ತೋತ್ರ ಮಾಡಿ ಹೊಂದುವನು ಎಂಬರ್ಥವು ಎರಡನೆಯ ಪ್ರಮಾಣವೂ ಹಾಗೆಯೇ ಹೇಳುತ್ತದೆ. ಕಲಿಯುಗದಲ್ಲಿ ಅಧರ್ಮವೇ ಧರ್ಮವಾದುದರಿಂದ ಅದು ಅನೇಕ ದೋಷಯುಕ್ತವಾಗಿರುತ್ತದೆ ಆದರೆ ಅದರಲ್ಲಿ ಒಂದು ದೊಡ್ಡ ಗುಣವುಂಟು. ಅದೇನೆಂದರೆ, ಉಪಾಸನ ಯಜ್ಞಾದಿಗಳಾದ ಕಷ್ಟತರವಾದ ಉಪಾಯಗಳೊಂದೂ ಬೇಕಾಗದೆ ಬರೀ ನಾಮ ಸಂಕೀರ್ತನದಿಂದಲೇ ಪರಮ ಪದವನ್ನು ಹೊಂದಬಹುದು ಎಂಬುದು ಆ ಶ್ಲೋಕಾಭಿಪ್ರಾಯವು ಶ್ರೀ ವಿಷ್ಣು ಪುರಾಣದಲ್ಲೂ ಹಾಗೆಯೇ ಹೇಳಿರುತ್ತದೆ. "ಅತ್ಯಂತ ದುಷ್ಟಸ್ಯ ಕಲೇ ರಯಮೇಕೋ ಮಹಾನ್ಗುಣಃ" (ವಿ. ಪು. ೬.೨ ೩೯) "ಸ್ವಲ್ಪೇ ನಹಿ ಪ್ರಯತ್ನೇನ ಧರ್ಮ ಸ್ಸಿಧ್ಯತಿ ವೈ ಕಲೌ" (ವಿ ಪು. ೬. ೨. ೩೪) ತುಂಬಾ ದುಷ್ಟವಾದ ಕಲಿಯುಗಕ್ಕೆ ಇದೊಂದು ದೊಡ್ಡ ಗುಣವುಂಟು, ನಾಮಸಂಕೀರ್ತನರೂಪ ಸ್ವಲ್ಪ ಪ್ರಯತ್ನದಿಂದ ಕಲಿಯುಗದಲ್ಲಿ ಧರ್ಮಸಿದ್ಧಿಯುಂಟು ಎಂದು ಹೇಳಲ್ಪಟ್ಟಿರುತ್ತದೆ.

ಪೂರ್ವಪಕ್ಷಿಯು ಕಲಿಯುಗದಲ್ಲಿ ನಾಮ ಸಂಕೀರ್ತನವೇ ಉಚಿತವಾದ ಉಪಾಯವೆಂದೂ ಪರಮಾತ್ಮೋಪಾಸನಕ್ಕೆ ಅಧಿಕಾರಿಗಳಿಲ್ಲವೆಂದೂ ಹೇಳಿದನು. ಈ ಪೂರ್ವಪಕ್ಷಕ್ಕೆ ಸಮಾಧಾನವನ್ನು ಹೇಳುವವರಾಗಿ ಅಂತಹ ಅಧಿಕಾರಿಗಳು ಈಗಲೂ ಉಂಟೆಂದು ಹೇಳುತ್ತಾರೆ. "ಯಸ್ಯ - ಯಾವ ಅಧಿಕಾರಿಗೆ, ಚೇತಸಿ ಗೋವಿಂದಃ - ಮನಸ್ಸಿನಲ್ಲಿ ಸದಾ ಗೋವಿಂದನಿರುವನೋ, ತಸ್ಯ - ಅವನಿಗೆ; ಕಲೌ - ಪಾಪ ಭೂಯಿಷ್ಠವಾದ ಕಲಿಯುಗದಲ್ಲೂ, ಕೃತಯುಗಂ - ಧರ್ಮವು ಪರಿಪೂರ್ಣವಾಗಿರುವ ಕೃತಯುಗವಾಗಿಯೇ ಆಗುತ್ತದೆ; ಯಸ್ಯ ಹೃದಯೇ -

(೧) ಕಲೌ ಕೃತಯುಗಂ ತಸ್ಯ ಕಲಿಸ್ತಸ್ಯ ಕೃತೇ ಯುಗೇ ।
ಯಸ್ಯ ಚೇತಸಿ ಗೋವಿಂದೋ ಹೃದಯೇ ಯಸ್ಯ ನಾಚ್ಯುತಃ ॥

ಎಜ್ಜಿರಪಡಿಯೇ ಇಕ್ಕಾಲತ್ತಿಲುಮ್ ಉಪಾಸನಾದಿಗಳುಕ್ಕಧಿಕಾರಿಗಳ್ ಸ್ವಯಂ ಪ್ರಯೋಜನ ಯೋಗನಿಷ್ಠರಾನ ಪೂರ್ವಾಚಾರ್ಯರ್‌ಗಳ್ ಪೋಲೆ ಸಂಭಾವಿತರಿರೇ.

ಯಾವನ ಹೃದಯದಲ್ಲಿ, ನಾಚ್ಯುತಃ - ಅಚ್ಯುತನಿರುವದಿಲ್ಲವೋ ಎಂಬರೆ ಯಾವನು ಪರಮಾತ್ಮನನ್ನು ಧ್ಯಾನಿಸುವದಿಲ್ಲವೋ, ತಸ್ಯ - ಅಂತವನಿಗೆ, ಕೃತಯುಗೇ - ಕೃತಯುಗದಲ್ಲೂ ಕೂಡ, ಕಲಿಃ-ಕಲಿಯುಗವೇ ಆಗುತ್ತದೆ," ಎಜ್ಜಿರಪಡಿಯೇ ಎಂದು ಹೇಳಿರುವ ಹಾಗೆ, ಇಕ್ಕಾಲತ್ತಿಲುಮ್-ಈ ಕಲಿಯುಗದ ಈಗಿನ ಕಾಲದಲ್ಲೂ, ಉಪಾಸನಾದಿಗಳುಕ್ಕು ಅಧಿಕಾರಿಗಳ್-ಉಪಾಸನ ಮೊದಲಾದವುಗಳಿಗೆ ಅಧಿಕಾರಿಗಳು, ಸ್ವಯಂ ಪ್ರಯೋಜನ ಯೋಗನಿಷ್ಠರಾನ ಪೂರ್ವಾಚಾರ್ಯರ್‌ಗಳ್‌ಪೋಲೇ-ಫಲಕಾಮನೆ ಇಲ್ಲದೇ ಭಗವತ್ಪ್ರೀತ್ಯರ್ಥವಾಗಿ ನಡೆಸಿದ ಆನುಷ್ಠಾನವೇ ಪ್ರಯೋಜನವಾಗಿವುಳ್ಳ, ಮತ್ತು ಭಗವಂತನ ಶರಣಾಶ್ರಯದ ಉಪಾಸನೆಯಲ್ಲಿ ನಿಷ್ಠರಾದ ಪೂರ್ವಾಚಾರ್ಯರುಗಳ ಹಾಗೆ ಎಂದರೆ ಶ್ರೀಮನ್ನಾಥಮುನಿ ಪುಂಡರೀಕಾಕ್ಷರ್ ಮೊದಲಾದವರುಗಳ ಹಾಗೆ, ಸಂಭಾವಿತರಿರೇ - ಸನ್ಮಾನಿಸಲು ಯೋಗ್ಯರೇಸರಿ. ಪೂರ್ವ ಪಕ್ಷಿಯನ್ನು ವಿಕಲ್ಪಿಸಿ ಕೇಳುತ್ತಾನೆ. ನೀವು ಕಲಿಯುಗದಲ್ಲಿ ಸಂಕೀರ್ತನವೇ ಉಪಾಯವು, ಅಧಿಕಾರಿ ದೌರ್ಲಭ್ಯದಿಂದ ಉಪಾಸನವಲ್ಲವೆಂದು ಹೇಳಿದಿರಲ್ಲಾ. (೧) ಈಗ ಭಕ್ತಿಯೋಗಾಧಿಕಾರಿಗಳಿಲ್ಲವೆಂಬುದರಿಂದಲೇ? (೨) ಇಲ್ಲವೇ ನೀವು ಉದಾಹರಿಸಿದ ಪ್ರಮಾಣ ಬಲದಿಂದಲೇ? (೩) ಅಥವಾ ಎರಡು ಕಾರಣಗಳಿಂದಲೋ ಎಂದು ಕೇಳಬೇಕಾಗುತ್ತದೆ ಅಧಿಕಾರಿಗಳು ಕಲಿಯುಗದಲ್ಲಿಲ್ಲವೆಂದು ಹೇಳಿದರೆ, ನಿಮ್ಮ ಅಭಿಪ್ರಾಯವೇ ತಪ್ಪು ಏಕೆಂದರೆ ಅಧಿಕಾರಿಗಳು ಸ್ವಲ್ಪ ವಿರಳವೆಂದು ಹೇಳಬಹುದೇವಿನಾ, ಇಲ್ಲವೇ ಇಲ್ಲವೆಂದು ಹೇಳಲಾಗುವದಿಲ್ಲವು. ಏಕೆಂದರೆ ಪೂರ್ವಾಚಾರ್ಯರುಗಳಲ್ಲಿ ಕೆಲವರೇ ಆ ಉಪಾಯವನ್ನು ಅನುಸ್ಥಿಸಿರುತ್ತಾರೆ. ಎರಡನೆಯ ವಿಕಲ್ಪವಾದ ಪ್ರಮಾಣ ಬಲದಿಂದ, ಸಂಕೀರ್ತನಾದೇವ ಎಂಬಲ್ಲಿ ಅವಧಾರಣವೂ ಇರುವದರಿಂದ ಕಲಿಯುಗಕ್ಕೆ ಸಂಕೀರ್ತನವೇ ಉಪಾಯವೂ ಉಪಾಸನವಲ್ಲವೆಂದರೆ ಪ್ರಪದನವನ್ನೂ ಕೂಡ ಉಪಾಯವಲ್ಲವೆಂದೂ ಹೇಳಬೇಕಾಗುತ್ತದೆಂದು "ಇಜ್ಞನಲ್ಲಾದ

---

(೧) ವಿ ಧ. ೧೦೯. ೫೭.

ಇ (ಅ) ಜ್ಞಾನಲ್ಲಾದ ಪೋದು ಸಂಕೀರ್ತನ ವ್ಯತಿರಿಕ್ತೈಯಾನ ಪ್ರಪತ್ತಿಕ್ಕುಮ್, (೧) "ಕಿಂನು ತಸ್ಯಚ ಮಂತ್ರಸ್ಯ ಕರ್ಮಣಃ ಕಮಲಾಸನ। ನಲಭ್ಯತೇzಧಿಕಾರೀವಾ" ಶ್ರೋತುಕಾಮೋಪಿ ವಾನರಃ" ಇತ್ಯಾದಿಗಳಿರ್ ಪಡಿಯೇ ಮಹಾವಿಶ್ವಾಸಾದಿಯುಕ್ತರಾನ ವಧಿಕಾರಿಗಳ್ ತೇಟ್ಟವಾಗೆಯಾಲೇ ಅನ್ವಿಡತ್ತಿಲುಮ್ ಇಪ್ಪ್ರಸಜ್ಜಮ್ ವರುಮ್.

ಪೋದು" ಎಂದಾರಂಭಿಸಿದ ವಾಕ್ಯದಮೂಲಕ ತಿಳಿಸುತ್ತಾರೆ. **ಇಜ್ಞಾನಲ್ಲಾದ ಪೋದು** - ಉಪಾಸನಾಧಿಕಾರಿಗಳೂ ಸಂಭಾವಿತರೆಂದು ಒಪ್ಪಿಕೊಳ್ಳದೇ ಹೋದರೆ, **ಸಂಕೀರ್ತನ ವ್ಯತಿರಿಕ್ತೈಯಾನ** - ಸಂಕೀರ್ತನಕ್ಕೆ ಬೇರೇ ಉಪಾಯವಾದ, ಪ್ರಪದನಕ್ಕೂ ಸಹ, "**ಕಮಲಾಸನ**-ಓ ಚತುರ್ಮುಖ ಬ್ರಹ್ಮನೇ,**ತಸ್ಯಚ ಮಂತ್ರಸ್ಯ** - ಅಂತಹ ಮಹಿಮೆಯುಳ್ಳ ದ್ವಯ ಮಂತ್ರದ ವಿಷಯದಲ್ಲೂ, **ಕರ್ಮಣಃ** - ಅದರ ಅನುಷ್ಠಾನದ ವಿಷಯದಲ್ಲೂ, **ಕಿಂ ನು** ಏನು ಹೇಳಲಪ್ಪಾ, **ಅಧಿಕಾರೀವಾ** - ಅದನ್ನು ಅನುಷ್ಠಿಸುವ ಅಧಿಕಾರಿಯಾಗಲಿ, **ಶ್ರೋತುಕಾಮೋಪಿವಾನರಃ** – ಅದರ ಮಾಹಾತ್ಮ್ಯವನ್ನು ಕೇಳಿ ತಿಳಿಯಬೇಕೆಂಬ ಅಪೇಕ್ಷೆಯುಳ್ಳ ಮನುಷ್ಯನೂ ಕೂಡ, **ನಲಭ್ಯತೇ** - ಸಿಕ್ಕುವದು ಕಷ್ಟವೈಯ್ಯಾ," **ಇತ್ಯಾದಿಗಳಿರ್ಪಡಿಯೇ** - ಇನೇ ಮೊದಲಾದ ಪ್ರಮಾಣಗಳಲ್ಲಿ ಹೇಳಿರುವಹಾಗೆ, ಮಹಾ ವಿಶ್ವಾಸ ಮೊದಲಾದವುಗಳಿಂದ ಯುಕ್ತರಾದ, ಅಧಿಕಾರಿಗಳು, **ತೇಟ್ಟವಾಗೈಯಾಲೇ** – ಮುರ್ಲಭವಾವುದರಿಂದ, **ಅನ್ವಿಡತ್ತಿಲುಮ್** – ಆ ಪ್ರಪದನದ ವಿಷಯದಲ್ಲೂ, **ಇಪ್ಪ್ರಸಜ್ಜಮ್ ವರುಮ್** - ನೀವು ಹೇಳಿದಾಕ್ಷೇಪವೂ ಬರುತ್ತದೆ ಪೂರ್ವಪಕ್ಷಿಗಳು **ಹೇಳಿದ** ಎರಡಾಕ್ಷೇಪಗಳೂ ದೋಷಯುಕ್ತವಾದವೆಂದು ಈ ವಾಕ್ಯದಿಂದ ತೋರಿಸಿರುತ್ತಾರೆ. ಹೇಗೆಂದರೆ, ಪ್ರಮಾಣದಲ್ಲಿ **ಕೀರ್ತನಾದೇವ** - ಎಂದಿರುವದರಿಂದ ಇತರೋಪಾಯಗಳನ್ನು ಇದು ವ್ಯಾವರ್ತಿಸಿ ಹೇಳುತ್ತದೆ, ಕೀರ್ತನ ಮಾತ್ರನೇ ಉಪಾಯವೆಂದರೆ ಪ್ರಪದನವೂ ಉಪಾಯವಲ್ಲವೆಂದು ಹೇಳಬೇಕಾಗುತ್ತದೆ. ಅಧಿಕಾರಿ ದೌರ್ಲಭ್ಯದಿಂದ ಎಂಬಾಕ್ಷೇಪ ತಂದರೆ, ಅಂತಹ ದೌರ್ಲಭ್ಯವೂ, ಪ್ರಪದನಾನುಷ್ಠಾನಕ್ಕೂ ಹೇಳಿರುತ್ತದೆಂದು ಪೌಷ್ಕರ ಸಂಹಿತಾ ಪ್ರಮಾಣವನ್ನು ಉದಾಹರಿಸಿರುತ್ತಾರೆ ಆ ಶ್ಲೋಕ ತಾತ್ಪರ್ಯವೇನೆಂದರೆ ದ್ವಯ ಮಂತ್ರವು ಅತಿಶಯವಾದ ಮಹಿಮೆಯುಳ್ಳದ್ದು ಹೀಗಿದ್ದರೂ ಆ ದ್ವಯಮಂತ್ರವನ್ನು ಅನುಷ್ಠಿಸುವ ಎಂದರೆ ಶರಣಾಗತಿಯನ್ನನುಷ್ಠಿಸುವ ಮೋಕ್ಷಾರ್ಥಿಯೂ

---

(೧) ಪೌ. ಸಂ.

ಆನಪಿನ್ನ ಉಪಾಸನಾದಿಗಳುಕ್ಕು ವೇರೊರು ವಿರೋಧಮಿಲ್ಲಾಮೈ ಯಾಲ್ ಯಥಾಶಾಸ್ತ್ರಂ ಆತುರಾದಿಗಳುಕ್ಕು ಅನಗಾಹನಾದಿಗಳಿಲ್ ಪೋಲೆ ಇವೈ, "ಅಕಿಞ್ಚನೋನ್ಯಗತಿಃ ಎನ್ರಿರುಕ್ಕುಮ್ ಮುಧಿಕಾರಿಕ್ಕು ಸ್ವಾಧಿಕಾರ ವಿರುದ್ಧಜ್ಞಾನೆನ್ನ ಪ್ರಾಪ್ತವುಮ್.

ದುರ್ಲಭವು, ಅವರ ಮಾಹಾತ್ಮ್ಯವನ್ನು ಕೇಳಿ ತಿಳಿಯಬೇಕೆಂಬಪೇಕ್ಷೆ ಇರುವನನ್ನೂ ದುರ್ಲಭವು ಎಂಬುರು. ಆವುದಾಂವ ಆಕ್ಷೇಪವು ಸರಿಯಾಮುವಲ್ಲವೆಂಬ ಭಾವವು. ಹಾಗಾದರೆ ಕೀರ್ತನಾವೇವ ಎಂಬುದರ ತಾತ್ಪರ್ಯವೇನೆಂದು ಕೇಳಬಹುದು. ಕೀರ್ತನವು ಬಹಳ ಸುಲಭೋಪಾಯವೆಂದು ತೋರಿಸುವದಕ್ಕಾಗಿ ಏನಕಾರವು. ಮತ್ತು ಆ ಪ್ರಮಾಣವಲ್ಲಿ ಸಂಕೀರ್ತನವನ್ನೇನೂ ಸಾಕ್ಷಾತ್ತಾಗಿ ಉಪಾಯವಾಗಿ ವಿಧಿಸಲಿಲ್ಲವು ಅದು ಮುಕ್ತಬಂಧನಾಗುವದಕ್ಕೆ ಉಪಾಯಕ್ಕೆ ಸಹಕಾರಿಯಾಗುವದರಲ್ಲಿ ಸಂದೇಹವಿಲ್ಲವೆಂಬ ತಾತ್ಪರ್ಯವು.

ಹಾಗಾವರೆ ಕೆಲವು ಆಪ್ತರು ಭಕ್ತಿಯೋಗವು ಸ್ವರೂಪವಿರುದ್ಧವೆಂದು ಹೇಳಿದುದರ ತಾತ್ಪರ್ಯವೇನು ? ಮತ್ತು ಈ ಕಲಿಯುಗದಲ್ಲಿ ಈಗ ಅನೇಕ ಪ್ರಪನ್ನರು ಉಪಾಸನವನ್ನು ಅವಲಂಬಿಸದೆ ಪ್ರಪದನವನ್ನು ಅಙ್ಗೀಕರಿಸಿರುವದರ ತಾತ್ಪರ್ಯವೇನು ? ಎಂದು ಕೇಳಬಹುದಾಗಿ ಅವಕ್ಕೆ ಉತ್ತರವನ್ನು **"ಆನಪಿನ್ನು"** ಎಂದಾರಂಭಿಸಿ ದಯಪಾಲಿಸಿರುತ್ತಾರೆ. **ಆನಪಿನ್ನ** - ಹಾಗಾವನಂತರ, ಹೇಗಾದನಂತರವೆಂದರೆ ಉಪಾಸನಾದಿಗಳು ಉಪಾಯವಾಗಲು ಏನೂ ವಿರೋಧವಿಲ್ಲದುದರಿಂದ, ಮುಂದೆ ಇದರರ್ಥವನ್ನು **"ಉಪಾಸನಾದಿಗಳುಕ್ಕು ವೇರೊರು ವಿರೋಧಮಿಲ್ಲಾಮೈಯಾಲೇ"** ಎಂದು ಅನುವಾದ ಮಾಡಿರುತ್ತಾರೆ. ಉಪಾಸನಾದಿಗಳಿಗೆ ಬೇರೆ ಏನೊಂದೂ ವಿರೋಧವಿಲ್ಲದುದರಿಂದ, **ಯಥಾಶಾಸ್ತ್ರಂ** - ಶಾಸ್ತ್ರದಲ್ಲಿ ಹೇಳಿರುವ ಮೇರೆಗೆ, **ಆತುರಾದಿಗಳುಕ್ಕು ಅನಗಾಹನಾದಿಗಳಿಲ್ ಪೋಲೆ** - ರೋಗಿಷ್ಠರೇ ಮೊದಲಾದವರುಗಳಿಗೆ ಒಂದು ಜಲಾಶಯಕ್ಕೆ ಹೋಗಿ ಮುಳುಗಿ ಸ್ನಾನಮಾಡವು ಹೇಗೆ ಸ್ವಾಧಿಕಾರ ವಿರುದ್ಧವೋ, ಹಾಗೆಯೇ, **ಇವೈ** - ಈ ಉಪಾಸನಾದಿಗಳು, **"ಅಕಿಂಚನೋನ್ಯಗತಿಃ" ಎನ್ರಿರುಕ್ಕುಮ್** - ಯಾವಸಾಧನೆಯೂ ಇಲ್ಲದೆ ಯಾರೂ ರಕ್ಷಕರೂ ಇಲ್ಲದೆ ಹೀಗೆ ಅಸಮರ್ಥನಾಗಿರುವ, **ಅಧಿಕಾರಿಕ್ಕು** - ಅಧಿಕಾರಿಗೆ, **ಸ್ವಾಧಿಕಾರ ವಿರುದ್ಧಜ್ಞಾನೆನ್ನ ಪ್ರಾಪ್ತವುಮ್** - ತನ್ನ ಅಧಿಕಾರವಾದ ಅಸಮರ್ಥತೆಗೆ ವಿರುದ್ಧವಾದವುಗಳು ಎಂಬ ಅಭಿಪ್ರಾಯವೆಂದು ಹೇಳುವದ ಉಚಿತವು. ಅನೇಕ ಪ್ರಪನ್ನರು ಅಸಮರ್ಥರಾದುದರಿಂದ ಉಪಾಸನೋಪಾಯ

ಅತಃ ಭಕ್ತಿಯೋಗಃ ಸ್ವರೂಪಾನುರೂಪ ಏವ.

ಇವ್ವಧಿಕಾರ ವಿರೋಧ ಮುರಿಯಾದೆ ಉಪಾಸನಾದಿಗಳಿಲೇ ಪ್ರವ

ವನ್ನು ಅಜ್ಞೀಕರಿಸಲು ಸಾಧ್ಯವಲ್ಲದುದರಿಂದ ಅಂತವರು ಇಂತಹ ಉಪಾಸನೆಗಳನ್ನವಲಂಬಿಸವದು ಅವರ ಅಧಿಕಾರಕ್ಕೆ ಉಚಿತವಲ್ಲವೆಂಬುದೀಗ ಅವರ ಅಭಿಪ್ರಾಯವೆಂದು ಹೇಳಿರುತ್ತಾರೆ. ಅಂತಹ ಅಸಮರ್ಥರು ಪ್ರಪದನೋಪಾಯವನ್ನು ಅಜ್ಞೀಕರಿಸವದೇ ಯುಕ್ತವೆಂಬ ತಾತ್ಪರ್ಯವು. ಇದಕ್ಕೆ ಒಂದು ದೃಷ್ಟಾಂತವನ್ನು ಕೊಟ್ಟಿರುತ್ತಾರೆ ಸಾಧಾರಣವಾಗಿ ಸಮರ್ಥನು ನಿತ್ಯವೂ ಅವಗಾಹನ ಸ್ನಾನವನ್ನು ಮಾಡಬೇಕೆಂಬ ವಿಧಿ ಇರುತ್ತದೆ. ಹಾಗೆ ಸಮರ್ಥನಲ್ಲದವನಿಗೆ ಅವಗಾಹನ ಸ್ನಾನವನ್ನು ನಿಷೇಧಿಸಿ ಉಷ್ಣೋದಕ ಸ್ನಾನವು ವಿಧಿಸಲ್ಪಟ್ಟಿರುತ್ತದೆ. "ಶೀತೋದಕಸ್ನಾನಾ ಸಮರ್ಥಸ್ಯ ಉಷ್ಣೋದಕ ಸ್ನಾನಂ" ಎಂದರೆ ಶೀತೋದಕದಲ್ಲಿ ಅವಗಾಹನ ಸ್ನಾನಕ್ಕೆ ಸಾಮರ್ಥ್ಯವಿಲ್ಲದ ರೋಗಿಗೆ ಉಷ್ಣೋದಕ ಸ್ನಾನವಾಡಬಹುದೆಂದು ಪಾಂಚರಾತ್ರ ರಕ್ಷೆಯಲ್ಲಿ ಶ್ರೀ ನಿಗಮಾಂತ ದೇಶಿಕರವರೇ ಹೇಳಿರುತ್ತಾರೆ. ರೋಗಿಗೆ ಹೇಗೆ ಅಸಮರ್ಥತೆಯಿಂದ ಅವಗಾಹನ ಸ್ನಾನಕ್ಕೆ ಅಧಿಕಾರವಿಲ್ಲವೋ, ಹಾಗೆಯೇ ಅಸಮರ್ಥನಾದ ಪ್ರಪನ್ನನಿಗೆ ಉಪಾಸನಕ್ಕೆ ಅಧಿಕಾರವಿಲ್ಲವು. ಇದೀಗ ಉಪಾಸನೋಪಾಯವನ್ನು ನಿಷೇಧಿಸಿದ ಮಹನೀಯರ ತಾತ್ಪರ್ಯವೆಂದುಪದೇಶಿಸಿರುತ್ತಾರೆ.

ಹೀಗೆ ಮಹನೀಯರ ಅಭಿಪ್ರಾಯವೆಂದು ಹೇಳಿದರೆ, ವಿಷ್ಣುಧರ್ಮ ಪ್ರಮಾಣದಲ್ಲಿ ಬುದ್ಧಿ ದೌರ್ಬಲ್ಯದಿಂದೀಗ ಉಪಾಯಾಂತರವಾದ ಉಪಾಸನೆಯನ್ನು ಅಪೇಕ್ಷಿಸುತ್ತಾನೆಂದು ಹೇಳಿದುದರ ಅಭಿಪ್ರಾಯವೇನೆಂದು ಪ್ರಶ್ನಿಸಬಹುದು. ಬುದ್ಧಿ ದೌರ್ಬಲ್ಯಶಬ್ದದಿಂದ ವಿವಕ್ಷಿತವಾದುದು ಅಜ್ಞಾನವೇ ವಿನಾ ಸ್ವರೂಪ ವಿರುದ್ಧವೆಂಬ ಭಾವವಲ್ಲವೆಂದು ಹೇಳುತ್ತಾರೆ. ಆದುದರಿಂದ ಸಾಮರ್ಥ್ಯವಿರುವ ಅಧಿಕಾರಾನುಗುಣವಾಗಿ ಭಕ್ತಿಮಾರ್ಗವೂ ಉಪಾದೇಯವೇ ಎಂದು ಸ್ಥಾಪಿಸುತ್ತಾರೆ.

ಭಕ್ತಿಯೋಗವು ಸ್ವರೂಪ ವಿರುದ್ಧವಲ್ಲವು ಸ್ವರೂಪಕ್ಕೆ ಅನುರೂಪ ವಾದುದೇ

ಇವ್ವಧಿಕಾರ ವಿರೋಧಮುರಿಯಾದೆ - ಅಶಕ್ತನಾದವನು ತನ್ನ ಅಧಿಕಾರಕ್ಕೆ ಈ ಭಕ್ತಿಯೋಗವು ವಿರೋಧವೆಂಬುದನ್ನು ತಿಳಿಯದೆ ಉಪಾಸನಾದಿಗಳಲ್ಲಿ, **ಪ್ರವರ್ತಿಕ್ಕು ವವನೈಪ್ಪತ್ತ** - ಪ್ರವರ್ತಿಸುವವನನ್ನು ಕುರಿತು, "**ನರಸ್ಯ ಬುದ್ಧಿ**

ರ್ತಿಕ್ಕು ಮವನೈಪ್ಪತ್ತ್ (೧) "ನರಸ್ಯ ಬುದ್ಧಿ ದೌರ್ಬಲ್ಯಾದುಪಾಯಾಂತರ ಮಿಷ್ಯತೇ" ಎನ್ರದು. ಆಗೈಯಾಲ್ ಇವ್ವುಪಾಸನಾದಿಗಳುಮ್ ಅಧಿಕಾರ್ಯಂತರತ್ತುಕ್ಕು ಯೆಥಾಧಿಕಾರಮುನುಗುಣಜ್ಞಳ್.

ದೌರ್ಬಲ್ಯಾದುಪಾಯಾಂತರಮಿಷ್ಯತೇ" ಮನುಷ್ಯನ ಬುದ್ಧಿ ದೌರ್ಬಲ್ಯದಿಂದ ಎಂದರೆ ತಾನು ಅಧಿಕಾರಿಯಾಗಲು ಸಾಧ್ಯವಿಲ್ಲವೆಂಬ ಜ್ಞಾನವಿಲ್ಲದೆ ಉಪಾಯಾಂತರವಾದ ಭಕ್ತಿಯೋಗವನ್ನಪೇಕ್ಷಿಸುವನು." **ಎನ್ನದು** - ಎಂದು ಹೇಳಿರುವದು. ಇಲ್ಲಿ ಬುದ್ಧಿ ದೌರ್ಬಲ್ಯವನ್ನು ಹೇಳಿರುವದು **ಪೂರ್ವಪಕ್ಷಿಯ** ಪ್ರಕಾರ ಸ್ವರೂಪ ವಿರುದ್ಧಮೂಲಕವಲ್ಲವು. ತಾನು ಅಧಿಕಾರಿಯಲ್ಲ ಎಂಬ ಜ್ಞಾನಶೂನ್ಯತೆಯು ಎಂಬ ಭಾವವು. ವಿಷ್ಣುಧರ್ಮ ಶ್ಲೋಕಗಳು ಯಾವುವೆಂದರೆ :—

"ಸಕೃದೇವಂ ಪ್ರಪನ್ನಸ್ಯ ಕೃತ್ಯಂ ನೈವಾನ್ಯದಿಷ್ಯತೇ ।
ಉಪಾಯೋಪಾಯ ಮುಕ್ತಸ್ಯ ವರ್ತಮಾನಸ್ಯ ಮಧ್ಯತಃ ।
ನರಸ್ಯ ಬುದ್ಧಿ ದೌರ್ಬಲ್ಯಾದುಪಾಯಾಂತರ ಮಿಷ್ಯತೇ" ॥

ಹೀಗೆ ದ್ವಯೋಚ್ಚಾರಣೆ **ಪೂರ್ವಕವಾಗಿ** ಒಂದು ಸಲ ಮಾಡಿದ ಶರಣಾಗತಿಯು ಇನ್ನು ಯಾವುದನ್ನೂ ಅಪೇಕ್ಷಿಸುವದಿಲ್ಲವು ಈ ಭರನ್ಯಾಸಾನುಷ್ಠಾತೃವು ಅನುಷ್ಠಿಸಿದ **ಉಪಾಯ**ದಲ್ಲಿ ಅಪಾಯವೇನೂ ಇಲ್ಲದವನಾಗಿ **ಮಧ್ಯತಃ ವರ್ತಮಾನಸ್ಯ** - ಉಪಾಯಾನುಷ್ಠಾನಕ್ಕೂ ಫಲಪ್ರಾಪ್ತಿಗೂ ಮಧ್ಯದಲ್ಲಿರುವ ಮನುಷ್ಯನಿಗೆ ಪ್ರಪನ್ನನ ಆಜ್ಞಾನವೆಂದುಂಟಾದ ಬುದ್ಧಿ ದೌರ್ಬಲ್ಯದಿಂದ ಭಕ್ತಿಯೋಗವನ್ನು ಅಪೇಕ್ಷಿಸುತ್ತಾನೆಂಬುದು ಈ ಶ್ಲೋಕ ತಾತ್ಪರ್ಯವು. ಇಷ್ಟು ದೂರ ಉದಾಹರಿಸಿದ ಅಭಿಪ್ರಾಯವನ್ನು ಸಿದ್ಧಾಂತಿಸಿ ನಿಗಮನರೂಪದಲ್ಲಿ ಹೇಳುತ್ತಾರೆ **ಆಗೈಯಾಲ್** - ಹೀಗೆ ಇತರರು ಹೇಳುವ ಕಾರಣಗಳು ಯಾವುದರಿಂದಲೂ ಭಕ್ತ್ಯುಪಾಯವು ಪ್ರಪನ್ನನ ಸ್ವರೂಪಕ್ಕೆ ವಿರುದ್ಧವಲ್ಲವಾದುದರಿಂದ, **ಇವ್ವುಪಾಸನಾದಿಗಳುಮ್** - ಭಕ್ತ್ಯುಪಾಯದ ವಿಷ್ಯೆಗಳಲ್ಲಿ ಹೇಳಿರುವ ಉಪಾಸನಾದಿಗಳೆಲ್ಲ. **ಅಧಿಕಾರ್ಯಂತರತ್ತುಕ್ಕು** - ಅಕಿಂಚನನಲ್ಲದೆ ಬೇರೆ ಅಧಿಕಾರಿಗೆ **ಯಥಾಧಿಕಾರಂ** - ಅಧಿಕಾರಾನುಗುಣಂ ಎಂದರೆ ಸಮರ್ಥನಾದ ಅಧಿಕಾರಿಗೆ, **ಅನುಗುಣಜ್ಞಳ್** - ಸ್ವರೂಪಕ್ಕೆ ವಿರುದ್ಧವಲ್ಲದವುಗಳೇ ಅನುರೂಪವೆಂದು ಹೇಳಿದ ಹಾಗೆ ಸ್ವರೂಪವಿರುದ್ಧವಲ್ಲವು ಸ್ವರೂಪಕ್ಕೆ ಅನುಗುಣವಾದುದೇ ಎಂದು ಉಪಪಾದಿಸಿದರು.

---

(೧) ವಿಷ್ಣುಧರ್ಮ. ೨೪. ೧೩.

ಸ್ವರೂಪಾವಿರುದ್ಧತ್ವೇ ಭಕ್ತಿಪ್ರಪತ್ತ್ಯೋಃ ತುಲ್ಯತ್ವೇಪಿ ಭಕ್ತ್ಯಪೇಕ್ಷಯಾ ಪ್ರಪತ್ತಿಶ್ರೇಯಸೀ.

ಅವನ್ಗಿಕ್ಕು ಸಾಮರ್ಥ್ಯಮಿಲ್ಲಾಮೈಯಾಲಾದಲ್, ವಿಳಂಬಕ್ಷಮನಲ್ಲಾಮೈಯಾಲಾದಲ್, ಇಪ್ಪ್ರಪತ್ತಿಯೈ ಸ್ವತಂತ್ರೋಪಾಯಮಾಗ ಪಟ್ರಿನವನೈ (೧) "ಶೆಯ್ದ ವೇಳ್ವಿಯರ್" ಎನ್ರುಮ್, (೨) "ಕೃತಕೃತ್ಯರ್" ಎನ್ರುಮ್, (೩) "ಅನುಷ್ಠಿತಕೃತು ಶರ್ತ" ಎನ್ರುಮ್, ಇವನುಕ್ಕು ಮರ

ಮೇಲೆ ಅವಗಾಹನ ಸ್ನಾನಕ್ಕೆ ಅನರ್ಹನಾಗಿ ರೋಗಪೀಡಿತನಾಗಿದ್ದರೆ ಮಂತ್ರಸ್ನಾನವು ಹೇಗೋ, ಹಾಗೆ ಭಕ್ತಿಮಾರ್ಗದ ಉಪಾಸನೆಗೆ ಅನರ್ಹನಾದವನಿಗೆ ಪ್ರಪತ್ತಿಯು ಎಂದು ಹೇಳಿದರೆ, ಸಮರ್ಥನಾದವನಿಗೆ ಭಕ್ತಿಮಾರ್ಗವೇ ಸರಿಯಾದ ಉಪಾಯವು, ಅದಕ್ಕೆ ಶಕ್ತಿಯಿಲ್ಲದ ಪ್ರಯುಕ್ತ ಪ್ರಪತ್ತಿ ಎಂದರೆ ಭಕ್ತಿಮಾರ್ಗಕ್ಕೇನೇ ಪ್ರಾಧಾನ್ಯವೂ, ಪ್ರಪತ್ತಿಗೆ ಗೌಣೋಪಾಯತ್ವವೂ ಹೇಳಿದಂತಾಗುತ್ತದೆ. ಈ ಎರಡು ಉಪಾಯಗಳೂ ಸ್ವರೂಪಕ್ಕೆ ವಿರುದ್ಧವಲ್ಲವುಗಳಾಗಿ ವಿಕಲ್ಪಿಸಿ ಹೇಳಿರುವದರಿಂದ ಫಲ ಒಂದೇಯಾದರೂ, ಪ್ರಪತ್ತಿಗೆ ಗೌಣಭಾವವು ತಪ್ಪಿದ್ದಲ್ಲವೆಂದು ಪೂರ್ವಪಕ್ಷವುಂಟಾಗಬಹುದು ಇದಕ್ಕೆ ಸಮಾಧಾನವನ್ನು ಹೇಳುವವರಾಗಿ, ಪ್ರಪತ್ತಿಗೇನೇ ಉತ್ಕರ್ಷವೂ ಪ್ರಾಶಸ್ತ್ಯವೂ ಉಂಟೆಂಬುದಕ್ಕೆ ಪ್ರಮಾಣಗಳನ್ನು ತೋರಿಸುತ್ತಾರೆ.

ಭಕ್ತಿಪ್ರಪತ್ತಿಗಳಿರಡೂ ಸ್ವರೂಪವಿರುದ್ಧವಲ್ಲದೆ ಸಮಾನವಾದರೂ ಭಕ್ತಿಗಿಂತಲೂ ಪ್ರಪತ್ತಿಯು ಶ್ರೇಷ್ಠವಾದುದು.

ಅವನ್ಗಿಕ್ಕು - ಆ ಭಕ್ತಿಮಾರ್ಗದ ಉಪಾಸನೆಗಳಿಗೆ, **ಸಾಮರ್ಥ್ಯಮಿಲ್ಲಾಮೈಯಾಲಾದಲ್**-ಸಾಮರ್ಥ್ಯವಿಲ್ಲದೆ ಇರುವದರಿಂದಲಾಗಲಿ, (ಇವರು ಯಾರು ಎಂಬುದು ಅಧಿಕಾರಿ ವಿಭಾಗಾಧಿಕಾರದ ಕೊನೆಯ ಶ್ಲೋಕದಲ್ಲಿ ಉಪಪಾದಿತವು) ಅಥವಾ, **ವಿಳಂಬಾಕ್ಷಮನಲ್ಲಾಮೈಯಾಲಾದಲ್** - ಇನ್ನೊಂದು ಜನ್ಮ ಮುಂತಾದ ವಿಳಂಬವನ್ನು ಸಹಿಸದೆ ಇರುವವನಾದುದರಿಂದಲೇ ಯಾಗಲಿ, **ಸ್ವತಂತ್ರೋಪಾಯವೆಂದು, ಪಟ್ರಿನವನೈ** - ಆಶ್ರಯಿಸಿದವನನ್ನು, (೧) **"ಶೆಯ್ದ ವೇಳ್ನಿಯರ್** - ಮಾಡಿದ ಯಜ್ಞವುಳ್ಳವರು" ಎಂದರೆ ಉಪಾಯಾನುಷ್ಠಾನ ಮಾಡಿ ಕೃತಕೃತ್ಯರಾದ ಪ್ರಪನ್ನರು, (೨) **"ಕೃತಕೃತ್ಯನೆನ್ರುಮ್** - ಉಪಾ

---

(೧) ತಿರು. ಚ. ೭. ೫. (೨) ಸಾತ್ವ. ತಂ. (೩) ಅಹಿ. ೩೭.

ಞಾನ್ತವಾಗ ನಡಕ್ಕಿರ ವ್ಯಾಪಾರಜ್ಞಳೈ ಅವಭೃಥ ಪರ್ಯನ್ತ ಕರ್ತವ್ಯ ಕಲಾಪಜ್ಞಳಾಗ ಸ್ತುತಿತ್ತುವ್, ಕೃತ್ವಂತರಾನುಷ್ಠಾನವ್ ಪಣ್ಣಿನವನುಕ್ಕು ಮೇಲುಳ್ಳ ನಿತ್ಯ ನೈಮಿತ್ತಿಕಜ್ಞಳ್ಪೋಲೆ ಇವನುಕ್ಕು ಸ್ವತಂತ್ರ ವಿಧಿಯಾಲೇ ವರ್ಣಾಶ್ರಮಾದಿ ಧರ್ಮಜ್ಞಳ್ ನಡವಾನಿರ್ಕ್ಕಚ್ಚೆಯ್ದೇ

ಯಾನುಷ್ಠಾನಮಾಡಿದ ಕೃತಕೃತ್ಯನೆಂದೂ, (೩) **ಅನುಷ್ಠಿತಕ್ರತುಶತರ್** ಅನುಷ್ಠಿಸಿದ ನೂರು ಯಜ್ಞಗಳಿಗೆ ಸಮಾನನೆಂದೂ, **ಇವನುಕ್ಕು** - ಈ ಭರನ್ಯಾಸವನ್ನನುಷ್ಠಿಸಿದ ಪ್ರಪನ್ನನಿಗೆ, **ಮರಣಾಂತನಾಗ ನಡಕ್ಕಿರ ವ್ಯಾಪಾರಜ್ಞಳೈ** - ಮರಣವೇ ಕೊನೆಯಾಗಿ ನಡೆಯುವ ವ್ಯಾಪಾರಗಳನ್ನೆಲ್ಲಾ, **ಅವಭೃಥ ಪರ್ಯನ್ತ ಕರ್ತವ್ಯ ಕಲಾಪಜ್ಞಳಾಗ** - ತೈತ್ತಿರೀಯದಲ್ಲಿ, **"ಯನ್ಮರಣಂ ತದವಭೃಥಃ"** ಪ್ರಪದನಾನ ಷ್ಠಾನವಾದನಂತರ ಮರಣದವರೆಗೂ ಎಂದು ನಡೆಯುವ ಪ್ರಪನ್ನನ ಸರ್ವ ಪ್ರವೃತ್ತಿಗಳನ್ನೆಲ್ಲಾ ಒಂದು ಅಗ್ನಿಹೋತ್ರವಾಗಿ ರೂಪಕ ಮಾಡಿ **"ತಸ್ಯೇವಂ ವಿದುಷೋ"** ಎಂಬ ಶ್ರುತಿಯಲ್ಲಿ ಹೇಳಿರುವ ಪ್ರಕಾರ, ಒಂದು ಯಜ್ಞವಾದನಂತರ ಕೊನೆಯಲ್ಲಿ ತದಜ್ಞವಾಗಿ ಅವಭೃಥ ಸ್ನಾನದವರೆಗೂ, ನಡೆಯಬೇಕಾದ ಕಾರ್ಯಕಲಾಪಗಳಾಗಿ, **ಸ್ತುತಿತ್ತುವ್**- ಪ್ರಶಂಸಿಸಿ, ಹೊಗಳಿ, **ಕೃತ್ವಂತರಾನುಷ್ಠಾನವ್** - ಈ ಆತ್ಮಹವಿಸ್ಸನ್ನು ಸಮರ್ಪಿಸುವ ಕ್ರತ್ವಂತರಗಳಿಂದ ತಲೂ ಬೇರೆ ಯಾಗವ ಅನುಷ್ಠಾನವನ್ನು, **ಪಣ್ಣಿನವನುಕ್ಕು** - ಮಾಡಿದ ಅಧಿಕಾರಿಗೆ, **ನಿತ್ಯನೈಮಿತ್ತಿಕಜ್ಞಳ್ಪೋಲೇ** - ನಿತ್ಯ ನೈಮಿತ್ತಿಕ ಕರ್ಮಗಳು ಹೇಗೆ ಅಜ್ಞಗಳಾಗಿಯೂ, ಆಜ್ಞಾ ಕೈಙ್ಕರ್ಯಗಳಾಗಿ ಆವಶ್ಯಕವೋ, ಹಾಗೆಯೇ **ಇವನುಕ್ಕು** - ಈ ಭರನ್ಯಾಸವನ್ನನುಷ್ಠಿಸಿದ ಪ್ರಪನ್ನನಿಗೂ, **ಸ್ವತಂತ್ರ ವಿಧಿಯಾಲೇ** - ಬೇರೇ ವಿಧಿಯಿಂದ ಎಂದರೆ ಕರ್ಮಕ್ಕೆ ಅಜ್ಞಗಳಾಗಿಯಲ್ಲದೆ, ಪ್ರಪದನಕ್ಕೆ ಸಂಬಂಧವಿಲ್ಲದೆ ಸ್ವತಂತ್ರವಾದ ಆಜ್ಞಾ ಕೈಙ್ಕರ್ಯಗಳನ್ನು ಆವಶ್ಯಕವಾಗಿ ಮಾಡಬೇಕೆಂಬ ವಿಧಿಯಿಂದ, ವರ್ಣಾಶ್ರಮಾದಿ ಧರ್ಮಗಳು, **ನಡವಾನಿರ್ಕ್ಕ ಚ್ಚೆಯ್ದೇಯುಮ್**, ಅನುಷ್ಠಿತಗಳಾಗಿರುವಾಗ, ಎಂದರೆ ಇತರಯಜ್ಞಾಧಿಕಾರಿಗೆ ನಿತ್ಯ ನೈಮಿತ್ತಿಕಗಳು ಆಜ್ಞಾ ಕೈಙ್ಕರ್ಯಗಳು ಮಾತ್ರವೇ ಅಲ್ಲದೆ ಕರ್ಮಾಜ್ಞಗಳು ; ಈ ಭರನ್ಯಾಸವನ್ನನುಷ್ಠಿಸಿದ ಕೃತಕೃತ್ಯನಿಗಾದರೋ ಈ ನಿತ್ಯ ನೈಮಿತ್ತಿಕಗಳು ಈತನ ಭರನ್ಯಾಸರೂಪ ಯಾಗಕ್ಕೆ ಸಂಬಂಧಿಸಿದವೇ ಅಲ್ಲವು ಆದರೆ ಈತನನುಷ್ಠಿಸಬೇಕೋ ಎಂದರೆ ಅವಶ್ಯಕವಾಗಿ ಅನುಷ್ಠಿಸಬೇಕು. ಆಜ್ಞಾ ಕೈಙ್ಕರ್ಯವಿಧಿಗನುಗುಣವಾಗಿ ಭಗವತ್ಪ್ರೀತ್ಯರ್ಥವಾಗಿ ಅನುಷ್ಠಿತಕರ್ಮವು ;

ಯುಮ್, ಅನುಷ್ಠಿತಾತ್ಮಯಾಗ ಫಲತ್ತೈಪ್ಪತ್ತ ಕರ್ತವ್ಯಾಂತರ ನಿರಪೇಕ್ಷ ನಾಗವುಮ್, ಆಳ್ವಾರ್‌ಗಳುಮ್, ಮಹರ್ಷಿಗಳುಮ್, ಭಗವಚ್ಛಾಸ್ತ್ರಜ್ಞ ಳುಮ್, ವೇದಜ್ಞಳುಮ್, ಘೋಷಿಯಾನಿನ್ರನ.

ಆದುದರಿಂದ ನಿತ್ಯ ನೈಮಿತ್ತಿಕ ಕರ್ಮಗಳು ಆಜ್ಞಾ ಕೈಙ್ಕರ್ಯಗಳೆಂದು ಭಾವಿಸಿ ಅವುಗಳನ್ನ ನಷ್ಠಿಸುತ್ತಾ, ಅನುಷ್ಠಿತಾತ್ಮ ಯಾಗ ಫಲತ್ತೈಪ್ಪತ್ತ - ಅನುಷ್ಠಿ ಸಲ್ಪಟ್ಟ, ಈ ತನ್ನ ಆತ್ಮಾವನ್ನು, "ಓಮಿತ್ಯಾತ್ಮಾನಂ ಯುಂಜೀತ" ಎಂದೂ, "ಪ್ರತ್ಯಗ್ರೂಪೇ ಹನಿಷಿ" ಎಂದೂ ಹೇಳಿರುವಹಾಗೆ ಲಕ್ಷ್ಮೀನಾರಾಯಣ ರಿಬ್ಬರಲ್ಲೂ ಸಮರ್ಪಿಸಿದ ನಿತ್ಯಯಾಗದ ಫಲವಾದ ಪರಿಪೂರ್ಣ ಬ್ರಹ್ಮಾನುಭವ ವನ್ನು ಕುರಿತ ವಿಷಯದಲ್ಲಿ, ಕರ್ತವ್ಯಾಂತರ ನಿರಪೇಕ್ಷನಾಗವುಮ್ - ಬೇರೇ ಇನ್ನು ಯಾವ ಕರ್ತವ್ಯದ ಎಂದರೆ ಇನ್ನು ಯಾವ ಉಪಾಯಾನುಷ್ಠಾನದ ಅಪೇಕ್ಷೆ ಯಿಲ್ಲವೆಂದು, ಆಳ್ವಾರ್‌ಗಳೂ, ಮಹರ್ಷಿಗಳೂ, ಭಗವಚ್ಛಾಸ್ತ್ರಜ್ಞಳೂ, ವೇದ ಜ್ಞಳೂ, ಘೋಷಿಯಾನಿನ್ರನ - ಉದ್ಘೋಷಿಸುತ್ತಾ ಇವೆ, ವಿಳಂಬವನ್ನು ಸಹಿ ಸತಕ್ಕವನಾ ಮತ್ತು ಸಾಮರ್ಥ್ಯವಿರುವವನೂ ಉಪಾಸನವನ್ನು ಅನುಷ್ಠಿಸತ ಕ್ಕದ್ದು. ಇವರಲ್ಲೇನಾ ನ್ನೂರೂಪವಿರುದ್ಧವಿಲ್ಲವು. ಸ್ವರೂಪಾನುಗುಣವಾದ ಉಪಾಯವೇ, ಆದರೆ ಅಸಮರ್ಥನಾಗಿಯೂ ಈ ಜನ್ಮಕ್ಕಿಂತ ಹೆಚ್ಚುಕಾಲ ವಿಳಂಬನನ್ನು ಸಹಿಸದವನಾಗಿಯೂ ಇದ್ದರೆ, ಅಂತವನಿಗೆ ಭರನ್ಯಾಸವೇ ಉಪಾಯವು ಸಕೃದನುಷ್ಠಾನರೂಪದಿಂದಲೇ ಈತನು ಕೃತಕೃತ್ಯನ, ಈತನು ಮೋಕ್ಷಪ್ರಾಪ್ತಿಗಾಗಿ ಇನ್ನೇನನ್ನೂ ಮಾಡತಕ್ಕದ್ದಿಲ್ಲವು ಆದರೆ ನಿತ್ಯನೈಮಿತ್ತಿಕ ಗಳಾದ ಆಜ್ಞಾ ಕೈಙ್ಕರ್ಯಗಳನ್ನು ಮಾತ್ರ ಅನುಷ್ಠಿಸತಕ್ಕದ್ದು. ಈ ಭರ ನ್ಯಾಸ ಸಾಧಕಕ್ಕಾಗಿ ಹಾಗೆ ಮಾಡತಕ್ಕದ್ದೇನೂ ಅಲ್ಲವು. ಭಗವತ್ಪ್ರೀತ್ಯರ್ಥ ವಾಗಿ ವರ್ಣಾಶ್ರಮ ಧರ್ಮಗಳನ್ನ ನಡೆಸುವದು ಆವಶ್ಯಕವೆಂದು ಬೇರೆ ವಿಧಿ ಯಿರುವದರಿಂದ ಅವುಗಳನ್ನು ಮಾತ್ರ ನಡೆಸಿಕೊಂಡು ಬರತಕ್ಕದ್ದು ಎಂಬುದು ತಾತ್ಪರ್ಯವು ಈ ಭರನ್ಯಾಸವು ಹೀಗೆ ಸಕೃದನುಷ್ಠೇಯವಾಗಿ ಸುಕರವಾಗಿ, ಪ್ರಮಾಣ ರಹಿತವಾಗಿ, ಕರ್ತವ್ಯಾಂತರ ನಿರಪೇಕ್ಷವಾದ ಉಪಾಯವೆಂದು ಆಳ್ವಾರ್‌ಗಳೂ, ಮಹರ್ಷಿಗಳೂ, ಭಗವಚ್ಛಾಸ್ತ್ರವೂ, ವೇದಗಳೂ, ಕೊಂಡಾ ಡಿರುತ್ತವೆಂದು ಒಂದೊಂದು ದಿವ್ಯಸೂಕ್ತಿಯನ್ನು ಉದಾಹರಿಸಿರುತ್ತಾರೆ

• ಆಳ್ವಾರ್ ಸೂಕ್ತಿಗೆ ಶೆಯ್ದ ನೇಳ್‌ವಿಯ್ಗ ಎಂಬ ಪಾಶುರವನ್ನು ಉದಾಹರಿಸುತ್ತಾರೆ. ಆ ಪೂರಾ ಪಾಶುರವು ಯಾವುದೆಂದರೆ :—

ಎಯ್ದ ಕ್ಕೂವಿದ ಲಾವದೇ ಯೆನಕ್ಕೆವ್ವ ತೆವ್ವತ್ತುಳಾಯ ಎಮೂಯ್ ನಿನ್ರು । ಕೈತವಜ್ಞಳ್ ಶೆಯ್ಯುಜ್ಞರುಮೇನಿಯವ್ಮಾನೇ ॥ ಶೆಯ್ದ ವೇಳ್ ವಿಯರ್ ವೈಯತ್ತೇವರ ರಾಚ್ಚಿರೀವರ ಮಜ್ಞಳ ನಗರ್ । ಕೈತೊಳ ವಿರುನ್ತಾಯದು ನಾನುಜ್ಞಣ್ಡೇನೆ ॥

ಆಶ್ರಿತರಿಗೆ, ಪ್ರತಿಕೂಲರಾದ ದುರ್ಯೋಧನ, ರಾವಣ, ಕಂಸಾದಿಗಳಿಗಿಲ್ಲವೋ ಅವರುಗಳ ಮಧ್ಯೆಯೇ ಇದ್ದುಕೊಂಡು ಕೃತ್ರಿಮಗಳನ್ನು ಮಾಡತಕ್ಕದ್ದು. ನಿನ್ನನ್ನಾಶ್ರಯಿಸಿಕೊಂಡು ನೀನಲ್ಲದೆ ಬೇರೆ ರಕ್ಷಕರಿಲ್ಲವೆಂದಿರುವ ನಮ್ಮಗಳಿಗೆ ಪುರುಷಾರ್ಥಪ್ರಾಪ್ತಿಗೆ ಸಾಧನವಾಗಿ ಅನುರೂಪವಾದುದು ಯಾವದೂ ಇಲ್ಲದಿದ್ದರೂ ನೀನೇ ನನ್ನ ಅನುಗ್ರಹಕ್ಕಾಗಿ ಬೇಕಾದ ಉಪಾಯವನ್ನು ಸಾಧಿಸಿಕೊಡತಕ್ಕದ್ದು. ಪ್ರತಿಪಕ್ಷದ ಸಂಬಂಧ ಸ್ವಲ್ಪವೂ ಇಲ್ಲದೆ ಸಾಧನಾನುಷ್ಠಾನಮಾಡಿ ಕೃತಕೃತ್ಯರಾಗಿ, ಈ ಲೋಕದಲ್ಲಿ ಜ್ಞಾನ ಸಂಪತ್ತಿನಿಂದ ನಿತ್ಯಸೂರಿಗಳಿಗೆ ಸಮಾನರಾದ ಶ್ರೀವೈಷ್ಣವರು ನಿರಂತರ ವಾಸಮಾಡುವ ಶ್ರೀವರಮಙ್ಗಲನಗರಿಂಬ ಹೆಸರನ್ನು ಧರಿಸಿರುವ ವಾನಮಾಮಲೆಯಲ್ಲಿ ಅವರುಗಳು ಆಶ್ರಯಿಸುವದಕ್ಕಾಗಿ ಬಿಸಮಾಡಿಸಿರುತ್ತೀಯೇ ಅವನ್ನು ನಾನು ಕಂಡಿರುತ್ತೇನೆ. ಇಲ್ಲಿ **ಶೆಯ್ದ ವೇಳ್ವಿಯರ್** ಎಂಬಲ್ಲಿ **"ಸರ್ವೇವೇದಾ ಸ್ಸರ್ವವಿದ್ಯಾ ಸ್ಸಶಾಸ್ತ್ರಾಸ್ಸರ್ವೇ ಯಜ್ಞಾ ಸ್ಸರ್ವ ಇಜ್ಯಶ್ಚ ಕೃಷ್ಣಃ । ವಿದುಃ ಕೃಷ್ಣಂ ಬ್ರಾಹ್ಮಣಾಸ್ತತ್ತ್ವತೋ ಯೇ ತೇಷಾಂ ರಾಜ್ಞ ಸರ್ವಯಜ್ಞಾ ಸ್ಸಮಾಪ್ತಾಃ"** ॥ (ಭಾರ) ಎಂಬ ಶ್ಲೋಕವು ಅನುಸಂಧೇಯವು. ಸಮಸ್ತ ವೇದಗಳೂ ವಿದ್ಯೆಗಳೂ ಶಾಸ್ತ್ರಗಳೂ ಯಜ್ಞಯಾಗಾದಿಗಳೂ ಹೀಗೆ ಸಮಸ್ತವಾದ ಉಪಾಯವೂ ಉಪಾಯ ಫಲಕರಣಿಗಳೂ ಎಲ್ಲವೂ ಶ್ರೀಕೃಷ್ಣನೇ. ಹೀಗೆ ಯಥಾರ್ಥವಾಗಿ ತಿಳಿದ ಬ್ರಹ್ಮವಿತ್ತುಗಳು ಯಾರೋ ಅವರಿಗೆ ಸಮಸ್ತಸಾಧನರೂಪ ಯಜ್ಞಗಳೂ ಸಮಾಪ್ತವಾದವೆಂದು ಭಾವಿಸತಕ್ಕದ್ದು. ಅವರು ಕೃತಕೃತ್ಯರು ಎಂಬ ಭಾವವು ಮಹರ್ಷಿ ಸೂಕ್ತಿಗೆ:—

"ಅನೇನೈನತು ಮನ್ತ್ರೇಣ ಸ್ವಾತ್ಮಾನಂ ಮಯಿನಿಕ್ಷಿಪೇತ್ ।
ಮಯಿನಿಕ್ಷಿಪ್ತ ಕರ್ತವ್ಯಃ ಕೃತಕೃತ್ಯೋ ಭವಿಷ್ಯತಿ" ॥

ಈ ಮನ್ತ್ರವು ಮಂತ್ರೋಚ್ಚಾರಣೆ ಪೂರ್ವಕವಾಗಿ ಆತ್ಮವನ್ನು ನನ್ನಲ್ಲಿ (ನನ್ನ ಪಾದದಲ್ಲಿ) ಇಡತಕ್ಕದ್ದು. ಹೀಗೆ ಆತ್ಮನಿಕ್ಷೇಪರೂಪವಾದ ಉಪಾಯಾನುಷ್ಠಾನವನ್ನು ಮಾಡಿದರೆ ಕೃತಕೃತ್ಯನಾಗುತ್ತೀಯೆ. ಎಂಬುದು ಈ ಶ್ಲೋಕಾರ್ಥವು. ಇದು ಹಿಂದೆ ಸಾಙ್ಗಪ್ರಪದನಾಧಿಕಾರದಲ್ಲಿ ಉಪಪಾದಿತವು ಭಗವಚ್ಛಾಸ್ತ್ರ ಪ್ರಮಾಣಕ್ಕೆ **"ಅನುಷ್ಠಿತ ಕ್ರತುಶತೋ ಭವತ್ಯೇವ ನಸಂಶಯಃ"** ಅಂತಹ ಕೃತಕೃತ್ಯನು ನೂರು ಕ್ರತುಗಳನ್ನು ಅನುಷ್ಠಿಸಿದವನಿಗೆ ಸಮಾನನು ಎಂದು

ಹೇಳಿರುತ್ತದೆ. ಹಾಗೆ ನೋಡಿದರೆ ಅವನಿಗಿಂತ ಅಧಿಕನು ಎಂದೇ ಅಭಿಪ್ರಾಯವು. ಮಹರ್ಷಿ ವಾಕ್ಯಕ್ಕೆ :—"ಸರ್ವೇವೇದಾ ಸ್ಸರ್ವವಿದ್ಯಾ ಸ್ಸಶಾಸ್ತ್ರಾಃ ಎಂಬುದು ಅನುಸಂಧೇಯವು, ವೇದಸ್ವರೂಪಣಕ್ಕೆ —"ತಸ್ಯೇವಂ ವಿದುಷೋ ಯಜ್ಞಸ್ಯಾತ್ಮಾ ಯಜಮಾನಾ ಶ್ರದ್ಧಾ ಪತ್ನೀ, ಶರೀರ ಮಿಧ್ಮಂ, ಉರೋವೇದಿ, ರ್ಲೋಮಾನಿ ಬರ್ಹಿ, ರ್ವೇದಶ್ಶಿಖಾ, ಹೃದಯಂ ಯೂಪಃ, ಕಾಮು ಮಾಜ್ಯಂ, ಮನುಃ ಪಶು, ಸ್ತಪೋಗ್ನಿ, ಶ್ಯಮುಯಿತಾ ದಕ್ಷಿಣಾ, ನಾಗೆ್ಹೀತಾ, ಪ್ರಾಣ ಉದ್ಗಾತಾ, ಚಕ್ಷುರಧ್ವರ್ಯು, ಮನೋ ಬ್ರಹ್ಮಾ, ಶ್ರೋತ್ರಮುಗ್ನೀ ದ್ಯಾವದ್ಧಿ ್ರಯತೇ ಸಾದೀಕಾಸ್ಸ, ಯದಶ್ನಾತಿ ಯತ್ಪಿ ಬತಿ ತದಸ್ಯ ಸೋಮಪಾನಂ, ಯದ್ರಮತೇ ತದುಪಸದೋ, ಯತ್ಸಂಚ ರಿತು ್ಯಪನಿಶತ್ಯು ್ಯತಿಷ್ಠತೇಚ ಸಪ್ರವರ್ಗ್ಯೇ, ಯನ್ಮುಖಂ ತದಾಹ ನೀಯೋ, ಯದಸ್ಯ ವಿಜ್ಞಾನಂ ಯಜ್ಜುಹೋತಿ ಯತ್ಸಾಯಂ ಪ್ರಾತರತ್ತಿ, ತತ್ಸಮಿಧೋ, ಯತ್ಸಾಯಂ ಪ್ರಾತರ್ಮಧ್ಯಂದಿನಂ ಚ ತಾನಿ ಸವನಾನಿ, ಯೇ ಅಹೋರಾತ್ರೇ ತೇ ದರ್ಶಪೂರ್ಣಮಾಸೌ, ಯೇರ್ಧಮಾಸಾಶ್ಚ ಮಾಸಾಶ್ಚತೇ ಚಾತುರ್ಮಾಸ್ಯಾನಿ, ಯಋತವಸ್ತೇ ಪಶುಬಂಧಾಃ, ಯೇ ಸಂವತ್ಸರಾಶ್ಚ ಪರಿವತ್ಸರಾಶ್ಚತೇ ಹರ್ಗಣಾಃ, ಸರ್ವವೇದಸಂವಾ ವಿತತ್ಸತ್ರಂ ಯನ್ಮರಣಂ ತದವಭೃಥ ವಿತದ್ವೈ ಜರಾಮರ್ಯಮಗ್ನಿ ಹೋತ್ರಂ ಸತ್ರಂ ಯವಿವಂ ವಿದ್ವಾ ನುದಗಯನೇ ಪ್ರವಿಾಯತೇ ದೇವಾ ನಾಮೇವ ಮಹಿಮಾನಂ ಗತ್ವಾ ದಿತ್ಯಸ್ಯ ಸಾಯುಜ್ಯಂ ಗಚ್ಛತ್ಯಥ ಯೋ ದಕ್ಷಿಣೇ ಪ್ರವಿಾಯತೇ, ಪಿತೃಣಾ ಮೇವ ಮಹಿಮಾನಂ ಗತ್ವಾಚಂದ್ರ ಮಸಸ್ಸಾಯುಜ್ಯಂ ಗಚ್ಛತ್ಯೇತಾವೈ ಸೂರ್ಯಾಚಂದ್ರಮಸೋರ್ಮಹಿ ಮಾನೌ ಬ್ರಾಹ್ಮಣೋ ವಿದ್ವಾ ನಭಿಜಯತಿ ತಸ್ಮಾದ್ಬ್ರಾಹ್ಮಣೋ ಮಹಿ ಮಾನ ಮಾಪ್ನೋತಿ ತಸ್ಮಾದ್ಬ್ರಾಹ್ಮಣೋಮಹಿಮಾನ ಮಿತ್ಯುಪನಿಷತ್" ಇಲ್ಲಿ ನ್ಯಾಸವಿದ್ಯೆಯು ಪರಮಾತ್ಮನನ್ನು ಕುರಿತು ಮಾಡುವ ಒಂದು ಯಜ್ಞದ ಹಾಗೆ ರೂಪಕದಿಂದ ಹೇಳಲ್ಪಟ್ಟು ಅದನ್ನನುಷ್ಠಿಸಿರುವ ಒಬ್ಬ ಮಹಾನು ಭಾವನ ಸ್ವರೂಪಸ್ಥಿತಿ ಪ್ರವೃತ್ತಿಗಳೆಲ್ಲಾ ಆ ಯಜ್ಞದ ಅಂಗಗಳೆಂದೂ ಆ ಮಹಾನುಭಾವನೂ ತತ್ಸಂಬಂಧಿಗಳೂ ಸಹ ಕೃತಕೃತ್ಯರೆಂದೂ ಉಪದೇಶಿಸ ಲ್ಪಟ್ಟಿರುತ್ತದೆ. ಈ ಯಜ್ಞದಲ್ಲಿ ಜೀವಾತ್ಮನೇ ಯಜಮಾನನು ಶ್ರದ್ಧೆಯೇ ಈ ಯಜಮಾನನ ಪತ್ನಿಯು, ಆಪತ್ನೀಕನು ಯಜ್ಞ ಮಾಡಲು ಸಾಧ್ಯವಿಲ್ಲವು ; ಪತ್ನಿಯು ಬೇಕು, ಶ್ರದ್ಧೆಯೇ – ಪ್ರಾಪ್ತಿಯಲ್ಲಿ ತ್ವರೆಯೇ ಪತ್ನಿಯು, **ಶರೀರ ಮಿಧ್ಮಂ** - ಶರೀರವೇ ಕಟ್ಟಿಗೆಯು, **ಉರೋವೇದಿಃ**–ವಕ್ಷಸ್ಥಳವೇ ವೇದಿಕೆಯು,

ಲೋಮಾನಿಬರ್ಹಿಃ - ಕೂದಲುಗಳೇ ಆಸ್ತರಣ ದರ್ಭೆಗಳು, **ವೇದಶಿರಾ** - ಶಿಖೆಯೇ ವೇದವು, **ಹೃದಯಂ ಯೂಪಃ** - ಹೃದಯವೇ ಪಶುವನ್ನು ಕಟ್ಟುವ ಯೂಪಸ್ತಂಭವು, **ಕಾಮ ಆಜ್ಯಂ** - ಪರಮಪದದಲ್ಲಿ ಪರಿಪೂರ್ಣ ಬ್ರಹ್ಮಾನು ಭವವೂ ತತ್ಕೈಂಕರ್ಯವೂ ಬೇಕೆಂಬ ಕಾಮನೆಯೇ ಆಜ್ಯಾಹುತಿಗೆ ಬೇಕಾದ ತುಪ್ಪವು, **ಮನ್ಯುಃ ಪಶುಃ** - ಪ್ರಪನ್ನನಿಗೆ ಸ್ವರೂಪ ವಿರುದ್ಧವಾಗಿ ಛೇದಿಸಲು ಅರ್ಹವಾದ ಕೋಪವೇ ಪಶುವು, **ಶಮಯಿತಾ ದಕ್ಷಿಣಾ** - ಪ್ರಪನ್ನನಿಗೆ ಸರ್ವ ಭೂತಗಳೂ ಅನುಕೂಲರಾದುದರಿಂದ ಶತ್ರು ಮಿತ್ರವರ್ಗಗಳ ಭಾವನೆಯೇ ಇಲ್ಲದೆ **ಶಾಂತತೆಯಿಂದಿರೋಣವೇ** ಯಜ್ಞಕ್ಕೆ ಬೇಕಾದ ದ್ರವ್ಯಸಹಾಯವು, **ವಾಕ್ ಹೋತಾ** - ಆ ಪ್ರಪನ್ನನ ವಾಕ್ಕೇ, ಸರ್ವೇಶ್ವರನ ಗುಣಚೇಷ್ಟಿತಗಳ ವಿಷಯವಾದ ವಾಕ್ಕೇ, ಋಗ್ವೇದ ಪಠನ ಮಾಡುವ ಹೋತೃವು. **ಪ್ರಾಣ ಉದ್ಗಾತಾ**-ಅವನ ನಿಶ್ವಾಸೋಚ್ಛ್ವಾಸ ಪ್ರಾಣವಾಯುವು ಸಾಮಗಾನ ಮಾಡುವ ಉದ್ಗಾತೃವು, **ಚಕ್ಷುರಧ್ವರ್ಯುಃ** - ಅತನ ಜ್ಞಾನವೇ ಯಜರ್ವೇದವನ್ನು ಪಠಿಸುವ ಅಧ್ವರ್ಯುವು, **ಮನೋ ಬ್ರಹ್ಮಾ** - ಅತನ ಮನಸ್ಸೇ ಈ ನ್ಯಾಸಯಜ್ಞ ನಿರ್ವಾಹಕನಾದ ಬ್ರಹ್ಮನು, **ಶ್ರೋತ್ರಮಗ್ನೀತ್** - ಭಗವತ್ಸ್ವರೂಪ ರೂಪ ಗುಣ ವಿಭವಾದಿಗಳನ್ನು ಶ್ರವಣಮಾಡುವ ಕಿವಿಯೇ ಆಗ್ನೀಧ್ರವು, **ಯಾವದ್ಧ್ರಿಯತೇ ಸಾದೀಕ್ಷ್ಯಾ** - ಅತನು ಜೀವಿಸಿರುವವರೆಗೂ ಯಜ್ಞದೀಕ್ಷೆಯು, **ಯದದಶ್ನಾತಿ ಯತ್ಪಿಬತಿ ತದಸ್ಯಸೋಮಪಾನಂ** - ಅತನು ಏನನ್ನು ಊಟ ಮಾಡುತ್ತಾನೋ ಏನನ್ನು ಕುಡಿಯುತ್ತಾನೋ ಅದೇ ಯಜ್ಞದಲ್ಲಿ ಮಾಡುವ ಸೋಮಪಾನವು, **ಯದ್ರಮತೇ ತದುಪಸದಃ** - ಅತನು ಭಗವಧ್ಯಾನರೂಪದಲ್ಲಿ ಆಸಕ್ತನಾಗಿ ರಮಿಸುವದೆಲ್ಲಾ ಆ ಯಜ್ಞದ ಉಪಸತ್ತುಗಳು, **ಯತ್ಸಂಚರತ್ಯುಪಶಿಕ್ಷತೇಚ ಸಪ್ರಯರ್ಕ್ಷಃ** - ತುಲಸೀ ಪುಷ್ಪಾದಿ ಹರಣಕ್ಕಾಗಿ ಮಾಡುವ ಸಂಚಾರವೂ ಮತ್ತು ಭಗವದಾರಾಧನರೂಪವಾಗಿ ಕೂಡುವದು ಏಳುವದು ಪ್ರದಕ್ಷಿಣ ನಮಸ್ಕಾರಾದಿಗಳೆಲ್ಲಾ ಈ ಯಜ್ಞದ ಪ್ರಣರ್ಗ್ಯವು, **ಯನ್ಮುಖಂ ತದಾಹವನೀಯಃ** - ಅತನ ಮುಖವೇ ಆಹವನೀಯಾಗ್ನಿಯು, **ಯದಸ್ಯ ವಿಜ್ಞಾನಂ ತಜ್ಜುಹೋತಿ** - ಪರಮಾತ್ಮನು ಸಿಮ್ಹೋಪಾಯನೆಂಬ ಜ್ಞಾನ ಯಾವುದೋ ಅದೇ ಹೋಮವು, **ಯತ್ಸಾಯಂ ಪ್ರಾತರತ್ತಿ ತತ್ಸಮಿಧಃ** - ಸಾಯಂಕಾಲ ಪ್ರಾತಃಕಾಲಗಳ ಊಟವೇ ಸಮಿತ್ತುಗಳು, **ಯತ್ಸಾಯಂ ಪ್ರಾತರ್ಮಧ್ಯಂದಿನಂ ಚ ತಾನಿ ಸವನಾನಿ** - ಸಾಯಂಕಾಲ ಪ್ರಾತಃಕಾಲ ಮಧ್ಯಾಹ್ನ ಹೀಗೆ ತ್ರಿಕಾಲದಲ್ಲೂ ಅನುಷ್ಠಿಸುವದೆಲ್ಲಾ ತ್ರಿಕಾಲ ಸವನಗಳು, **ಯೇ ಅಹೋರಾತ್ರೇ ತೇ ದರ್ಶಪೂರ್ಣಮಾಸೌ** - ಅಹಸ್ಸು ರಾತ್ರಿಗಳೇ ದರ್ಶ

ಪೂರ್ಣಮಾಸೆಗಳು, **ಯೇ ಅರ್ಧಮಾಸಾಶ್ಚ ಮಾಸಾಶ್ಚ ತೇ ಚಾತುರ್ಮಾಸ್ಯಾನಿ**- ಪಕ್ಷಪಕ್ಷಗಳಲ್ಲೂ ಅನುಷ್ಠಿಸುವದೆಲ್ಲಾ ಚಾತುರ್ಮಾಸ್ಯೆಗಳು, **ಯ ಋತವಸ್ತೇ ಪಶುಬಂಧಾಃ** - ಋತುಗಳಲ್ಲಿ ಅನುಷ್ಠಿಸುವದೆಲ್ಲಾ ಪಶುಬಂಧಗಳು, **ಯೇ ಸಂವತ್ಸರಾಶ್ಚ ಪರಿವತ್ಸರಾಶ್ಚ ತೇ ಅಹರ್ಗಣಾಃ** - ಸಂವತ್ಸರ ಪರಿವತ್ಸರಗಳೇ ಅಹರ್ಗಣಗಳು, **ಸರ್ವೇದ ಸಂವಾ ಏತತ್ಸತ್ರಂ** - ಈ ಪ್ರಪನ್ನನ ಸಮಸ್ತವೂ ಸತ್ರಪರಿಕರಗಳು, **ಯನ್ಮರಣಂ ತದವಭೃಥಃ** - ಈ ಪ್ರಪನ್ನನ ದೇಹವಿಯೋಗವೇ ಯಜ್ಞಪೂರ್ತಿಯಾದನಂತರ ನಡೆಸುವ ಅವಭೃಥವು, ಆದುದರಿಂದ **ಏತದ್ಧೈ ಜರಾಮರ್ಯಮಗ್ನಿಹೋತ್ರಂ**-ಈ ಪ್ರಪನ್ನನ ವಾರ್ಧಕ್ಯಕ್ಕೆ ಅನಂತರ ಮರಣಾಂತದವರೆಗೂ ಒಂದು ಅಗ್ನಿಹೋತ್ರವು, **ಯ ಏವಂ ವಿದ್ವಾ**ನ್ - ಯಾವ ಪ್ರಪನ್ನನು ಈ ನ್ಯಾಸವನ್ನು ಒಂದು ಯಜ್ಞವೆಂದು ತಿಳಿಯುವನೋ, ಅವನು **ಉದಗಯನೇ ಪ್ರಯಾಯತೇ**-ಉತ್ತರಾಯಣದಲ್ಲಿ ಮೃತಿ ಹೊಂದಿದರೆ, **ದೇವಾನಾ ..ಸಾಯುಜ್ಯಂಗಚ್ಛತಿ**-ದೇವಲೋಕದ್ವಾರ ಪರಬ್ರಹ್ಮಪ್ರಾಪ್ತಿಯನ್ನು ಹೊಂದುವನು ; **ಯೋ ದಕ್ಷಿಣೇ ...ಚಂದ್ರಮಸ ಸ್ಸಾಯುಜ್ಯಂ ಗಚ್ಛತಿ**-ದಕ್ಷಿಣಾಯನದಲ್ಲಿ ಮೃತನಾದ ಪ್ರಪನ್ನನು ಪಿತೃಲೋಕ ಚಂದ್ರದ್ವಾರಾ ಗಮನವುಳ್ಳವನಾಗಿ ಪರಬ್ರಹ್ಮ ಪ್ರಾಪ್ತಿಯನ್ನು ಹೊಂದುವನು. **ಏತಾವೈ.....ಮುಹಮಾನಾ** ಹೀಗೆ ಭರನ್ಯಾಸವನ್ನು ಅನುಷ್ಠಿಸಿದವನು **ಕರ್ತವ್ಯಾಂತರ ನಿರಪೇಕ್ಷನು**; ಇದಕ್ಕೆ **ಸಕೃದೇವಂ ಪ್ರಪನ್ನಸ್ಯ ಕೃತ್ಯಂನೈವಾನ್ಯ ದಿಷ್ಯತೇ**" ಎಂಬುದು ಅನುಸಂಧೇಯವು. ಈ ಪ್ರಕಾರವಾಗಿ ಸಕೃತ್ಪ್ರಪದನಾನುಷ್ಠಾನವನ್ನು ಮಾಡಿದ ಪ್ರಪನ್ನನ ಅನುಷ್ಠಾನವು, ಬೇರೆಬೇರೆ ಇನ್ನು ಯಾವ ಸಾಧನರೂಪ ಕೃತ್ಯವನ್ನೂ ಅಪೇಕ್ಷಿಸುವದಿಲ್ಲವು ಮತ್ತು **ಅನೇನೈವತು ಮನ್ತ್ರೇಣ ಸ್ವಾತ್ಮಾನಂ ಮಯಿ ನಿಕ್ಷಿಪೇತ್ । ಮಯಿನಿಕ್ಷಿಪ್ತ ಕರ್ತವ್ಯಃ ಕೃತಕೃತ್ಯೋ ಭವಿಷ್ಯಸಿ**॥ ಎಂಬ ಸಾತ್ವತ ಪ್ರಮಾಣವಾಕ್ಯವು ಕೃತಕೃತ್ಯನೆಂದು ಹೇಳುವದರಿಂದ ಅನುಸಂಧೇಯವು. ಹಿಂದಿನ ಪ್ರಮಾಣವು ಭಕ್ತಿಯೋಗ ನಿಷ್ಠನು ಕೃತಕೃತ್ಯನೆಂಬುದಕ್ಕೂ ಈ ಶ್ಲೋಕವು ಪ್ರಪತ್ತಿನಿಷ್ಠನು ಕೃತಕೃತ್ಯನೆಂಬುದಕ್ಕೂ ನಿದರ್ಶನಂಗಳಾಗಿ ಇಟ್ಟುಕೊಳ್ಳಬಹುದು. ಹೀಗೆ ಅನೇಕ ಶಾಸ್ತ್ರಪ್ರಮಾಣಗಳು ಉದ್ಘೋಷಿಸುತ್ತವೆ ಎಂಬ ಭಾವವು.

ಉಪಾಸನಕ್ಕಿಂತಲೂ ನ್ಯಾಸವು ಶ್ರೇಷ್ಠವಾದುದು.

ಆಗ್ನೇಯಾಲ್ - ಹೀಗೆ ಮಹರ್ಷಿಗಳೂ ಭಗವಚ್ಛಾಸ್ತ್ರಗಳೂ ವೇದಗಳೂ ಕೂಡ ಪ್ರಪತ್ತಿಯನ್ನನುಷ್ಠಿಸಿದವನು ಕೃತಕೃತ್ಯನೆಂದು ಉದ್ಘೋಷಿಸುವದರಿಂದ

ಉಪಾಸನಾತ್ ನ್ಯಾಸಸ್ಯ ಮಾಹಾತ್ಮ್ಯಮ್.

ಆಗ್ನೇಯಾಲ್, (೧) "ತಪಸ್ವಿಭ್ಯೋಽಧಿಕೋಯೋಗೀ ಜ್ಞಾನಿಭ್ಯೋಽಪಿ ಮತೋಽಧಿಕಃ । ಕರ್ಮಿಭ್ಯಶ್ಚಾಧಿಕೋಯೋಗೀ ತಸ್ಮಾದ್ಯೋಗೀ ಭವ

(೧) "ತಪಸ್ವಿಭ್ಯಃ" ಇತ್ಯಾದಿಗಳಾಲೀ - ಇವೇ ಮೊದಲಾದವುಗಳಿಂದ, **ಪ್ರವೃತ್ತಿಧರ್ಮನಿಷ್ಠರಿಲ್ ಕಾಟ್ಟಿಲ್, ನಿವೃತ್ತಿ ಧರ್ಮನಿಷ್ಠರ್ ಶ್ರೇಷ್ಠರ್ಗಳಾ ನಾರ್ಪ್ಪೋಲುವುನ್** - ಪ್ರವೃತ್ತಿ ಧರ್ಮಗಳಿಗಿಂತಲೂ ನಿವೃತ್ತಿ ಧರ್ಮಗಳು ಶ್ರೇಷ್ಠಗಳಾದಹಾಗೆ, ಈ ಶ್ಲೋಕಾರ್ಥವೇನೆಂದರೆ "ತಪಸ್ವಿಭ್ಯಃ"-ಫಲಕಾಮನೆಯಿಂದ ಮಾಡುವ ಕೇವಲ ಕೃಚ್ಛ್ರಚಾಂದ್ರಾಯಣ, ಉಪವಾಸಾದಿಗಳನ್ನನುಷ್ಠಿಸುವವರಿಗಿಂತಲೂ, **ಯೋಗೀ** - ತನ್ನ ಆತ್ಮೋಪಾಸನೆಯನ್ನು ಮಾಡುವನು, **ಅಧಿಕಃ** - ಶ್ರೇಷ್ಠನು, **ಜ್ಞಾನಿಭ್ಯೋಽಪಿ** - ಶಾಸ್ತ್ರಜ್ಞಾನನಿಷ್ಠನಿಗಿಂತಲೂ, ಯೋಗಿಯು ಶ್ರೇಷ್ಠನೆಂಬುದು, **ಮತಃ** - ನನ್ನ ಅಭಿಪ್ರಾಯವು, **ಕರ್ಮಿಭ್ಯಃ** - ಫಲಕಾಮನೆಯಿಂದ ಮಾಡುವ ಕರ್ಮನಿಷ್ಠರುಗಳಿಗಿಂತಲೂ ಕೂಡ, ಯೋಗಿಯೇ ಶ್ರೇಷ್ಠನು, ಎಂದರೆ ಈ ತಪಸ್ವೀ ಜ್ಞಾನೀ ಕರ್ಮಿ ಎಲ್ಲರೂ ಫಲಕಾಮನೆಯುಳ್ಳವರಾದುದರಿಂದ ಪ್ರವೃತ್ತಿಧರ್ಮನಿಷ್ಠರು, ಯೋಗಿಯಾದರೋ ನಿವೃತ್ತಿಧರ್ಮನಿಷ್ಠನು, ಆದುದರಿಂದ ಪ್ರವೃತ್ತಿಧರ್ಮವೂ ತನ್ನಿಷ್ಠರೂ ಇವರುಗಳಿಗಿಂತ ನಿವೃತ್ತಿಧರ್ಮವೂ ತನ್ನಿಷ್ಠರೂ ಶ್ರೇಷ್ಠರೆಂಬ ಭಾವವು. **ತಸ್ಮಾತ್** - ಆ ಕಾರಣದಿಂದ, **ಹೇ ಅರ್ಜುನ** - ಓ ಅರ್ಜುನನೇ, **ಯೋಗೀಭವ** - ಶ್ರುತಿಯಲ್ಲಿ ಪ್ರಜಾಪತಿವಾಕ್ಯದಿಂದ ಹೇಳಲ್ಪಟ್ಟ ಪ್ರತ್ಯಗಾತ್ಮೋಪಾಸಕನಾಗು" ಎಂಬುದು ಈ ಶ್ಲೋಕಾರ್ಥವು; ಈ ಉಪಾಸನಕ್ಕೆ ಅಙ್ಗವಾದ ಕರ್ಮಯೋಗದ ಪ್ರಭೇದಗಳಲ್ಲೂ

"ದ್ರವ್ಯಯಜ್ಞಾಸ್ತಪೋಯಜ್ಞಾ ಯೋಗಯಜ್ಞಾಸ್ತಥಾಪರೇ ।
ಸ್ವಾಧ್ಯಾಯ ಜ್ಞಾನಯಜ್ಞಾಶ್ಚ ಯತಯಃಸಂಶಿತವ್ರತಾಃ"॥ (ಗೀ.ಳ.೨೮), ರಲ್ಲಿ ಹೇಳಿರುವಹಾಗೆ ತನಿಷ್ಠಗಳೂ, ಜ್ಞಾನಿಗಳೂ, ಕರ್ಮಿಗಳೂ ಉಂಟು. ಇವರುಗಳು "ತಪಸ್ವಿಭ್ಯೋಽಧಿಕೋಯೋಗೀ" ಎಂಬಲ್ಲಿ ಹೇಳಿರುವ ತಪಸ್ವಿ ಮೊದಲಾದವರುಗಳು ಸೇರಲಿಲ್ಲವು. ಗೀ. ಳ. ೨೮. ರಲ್ಲಿ ತಪಸ್ವಿ ಮೊದಲಾದವರು ಫಲಾಪೇಕ್ಷೆಯಿಲ್ಲದೆ, ಭಗವತ್ಪ್ರೀತ್ಯರ್ಥವಾಗಿ ಮಾಡುವದರಿಂದ ನಿವೃತ್ತಿಧರ್ಮಪರರು; ತಪಸ್ವಿಭ್ಯೋಽಧಿಕೋಯೋಗೀ ಎಂದು ಯೋಗಿಗಿಂತ ನಿಕೃಷ್ಟರಾಗಿ ಭಾವಿಸಲ್ಪಟ್ಟವರು ಪ್ರವೃತ್ತಿಧರ್ಮನಿಷ್ಠರು ಆದುದರಿಂದ ಈ ತಪಸ್ವಿಗಳ

(೧) ಗೀ. ೬. ೪೬.

ರ್ಜುನ ॥ ಇತ್ಯಾದಿಗಳಾಲೇ ಪ್ರವೃತ್ತಿ ಧರ್ಮಜ್ಞಳಿರ್ಕಾಟ್ಟಿಲ್ ನಿವೃತ್ತಿಧರ್ಮ ಜ್ಞಳ್ ಶ್ರೇಷ್ಠಜ್ಞಳಾನಾರ್ಪ್ಪೋಲುವುಮ್, ಅವೈ ತನ್ನಿಲ್ ಆತ್ಮವಿಷಯ ಮಾನ ಯೋಗಮ್ ಶ್ರೇಷ್ಠಮಾನಾರ್ಪ್ಪೋಲವುಮ್, ಆತ್ಮವಿಷಯ ಯೋಗಜ್ಞಳಿರ್ಕಾಟ್ಟಿಲ್ (೨) "ಯೋಗಿನಾಮಪಿ ಸರ್ವೇಷಾಂ" ಎಜ್ಞ್ಞ

ಗಿಂತ, ಕರ್ಮಯೋಗದ ಆ ತಪಸ್ವಿಗಳು ಶ್ರೇಷ್ಠರು ಪ್ರವೃತ್ತಿ ಧರ್ಮಾನುಷ್ಠಾನದಲ್ಲಿ ಫಲಾಕಾಂಕ್ಷೆಯಿಂದ ಅಧಿಕಾರಿಯು ಕರ್ಮಾನುಷ್ಠಾನಮಾಡುತ್ತಾನೆ. ಫಲಾಕಾಮನೆಯಿಲ್ಲದೆ ಭಗವನ್ಮುಖೋಲ್ಲಾಸಕ್ಕಾಗಿ ಅನುಷ್ಠಿಸುವವನು ನಿವೃತ್ತಿ ಧರ್ಮಪರನು. "ನಿವೃತ್ತಿ ಲಕ್ಷಣಂ ಧರ್ಮಂ ವೃಷ್ಣಿನಾರಾಯಣೋಬ್ರವೀತ್। ಪ್ರವೃತ್ತಿ ಲಕ್ಷಣಂ ಧರ್ಮಂ ಪ್ರಜಾಪತಿ ರಥಾಬ್ರವೀತ। ಪ್ರವೃತ್ತಿಃ ಪುನರಾವೃತ್ತಿ ರ್ನಿವೃತ್ತಿಃ ಪರಮಾಗತಿಃ" ಎಂದು ಮೋಕ್ಷಧರ್ಮದಲ್ಲಿ ಹೇಳಿರುವಹಾಗೆ (೨೧೯. ೩೪) ಪ್ರವೃತ್ತಿಧರ್ಮಗಳು ಸಂಸಾರಕ್ಕೆ ಹೇತುವು, ನಿವೃತ್ತಿಧರ್ಮಗಳು ಮೋಕ್ಷಕ್ಕೆ ಹೇತುವು. ಆದುದರಿಂದಲೇ ಪ್ರವೃತ್ತಿ ಧರ್ಮಗಳಿಗಿಂತಲೂ ನಿವೃತ್ತಿ ಧರ್ಮಗಳುಶ್ರೇಷ್ಠವೆಂದು ಹೇಳಲ್ಪಟ್ಟಿತು, ಇದು ಹೇಗೋ ಹಾಗೆಯೇ ಪ್ರಪತ್ತಿಯು ಉಪಾಸನಕ್ಕಿಂತ ಶ್ರೇಷ್ಠವೆಂದು ಮುಂದೆ ಹೇಳುತ್ತಾರೆ. **ಅನ್ಯೈತನ್ನಿಲ್**-ಆ ನಿವೃತ್ತಿ ಧರ್ಮಗಳಿಗಿಂತಲೂ, **ಆತ್ಮವಿಷಯಮಾನ ಯೋಗಮ್ ಶ್ರೇಷ್ಠಮಾನಾರ್ಪ್ಪೋಲವುಮ್** - ತನ್ನ ಜೀವಾತ್ಮವಿಷಯವಾದ **ಉಪಾಸನೆಯು** ಹೇಗೆ ಶ್ರೇಷ್ಠವೋ ಹಾಗೆ, ಈ ಶ್ರೇಷ್ಠತೆಯೇ, "**ತಪಸ್ವಿಭ್ಯೋಧಿಕೋ ಯೋಗೀ**" ಎಂಬ ಗೀತಾ ಶ್ಲೋಕದಲ್ಲಿ ಉಪಪಾದಿತವು, ನಿವೃತ್ತಿ ಧರ್ಮರೂಪದಲ್ಲಿ ಕೇವಲ ತಪಸ್ಸು ಮೊದಲಾದವುಗಳನ್ನು ಮಾತ್ರ ಅನುಷ್ಠಿಸಿಕೊಂಡಿರುವವನಿಗಿಂತಲೂ ಪ್ರತ್ಯಗಾತ್ಮವಿಷಯವಾದ ಉಪಾಸನಾ ನಿರತನು ಹೇಗೆ ಶ್ರೇಷ್ಠನೋ ಹಾಗೆ ಎಂಬ ಭಾವವು; ಈ ಅಬ್ಜವಾದ ಜೀವಾತ್ಮವಿಷಯವಾದ ಉಪಾಸನೆಗಿಂತಲೂ, ಆಜ್ಞಯಾದ ಮತ್ತು ಭಕ್ತಿಯೋಗದಲ್ಲಿ ವಿಧಿಸಲ್ಪಟ್ಟ ಪರಮಾತ್ಮವಿಷಯವಾದ ಉಪಾಸನೆಯು ಹೇಗೆ ಶ್ರೇಷ್ಠವೋ ಹಾಗೆ ಎಂದು ಮುಂದಿನ ವಾಕ್ಯಖಂಡದಿಂದ ಉಪದೇಶಿಸುತ್ತಾರೆ:—**ಆತ್ಮವಿಷಯ ಯೋಗಜ್ಞಳಿರ್ಕಾಟಿಲ್** - ಈ ಜೀವಾತ್ಮ ವಿಷಯವಾದ ಯೋಗಾಭ್ಯಾಸಗಳಿಗಿಂತಲೂ, ಇಲ್ಲಿ ಬಹುವಚನವೇಕೆಂದರೆ, ಜ್ಞಾನಪರಿಪಕ್ವತೆಗೆ ಅನುಗುಣವಾಗಿ ಈ ಯೋಗಿಗಳು ಉತ್ತಮೋತ್ತರಾಧಿಕ್ಯದಿಂದ ನಾಲ್ಕುವಿಧವೆಂದು ಹೇಳಿರುತ್ತದೆ. (ಗೀ. ೬. ೨೯ರಿಂದ ನಾಲ್ಕು ಶ್ಲೋಕಗಳನ್ನು ಪರಾಂಬರಿಸಿ) "**ಯೋಗಿನಾಮಪಿ ಸರ್ವೇಷಾಂ**"(ಗೀ. ೬. ೪೭)

ಪಡಿಯೇ ವಸುದೇವನಂದನ ವಿಷಯವೂನ ಯೋಗವ್ ಶ್ರೇಷ್ಠವೂನಾ ರ್ಪೋಲುವುವ್ ಪರಮಾತ್ಮವಿದ್ಯಾ ವಿಶೇಷಜ್ಞಳಿಲ್ಲಾತ್ತಿಲುವ್, ನ್ಯಾಸ ನಿಕ್ಷೇಪಾದಿ ಶಬ್ದಜ್ಞಳಾಲೇ ಶೊಲ್ಲಪ್ಪಟ್ಟ ವಿದ್ಯಾವಿಶೇಷಮೇ ಸುಕರತ್ವ, ಸಕೃತ್ಕರ್ತವ್ಯತ್ವ, ಶೀಘ್ರಫಲ ಪ್ರದತ್ವಾದಿಗಳಾಲೇ ಶ್ರೇಷ್ಠತಮವುವ್.

ಎಜ್ಞರ ಶ್ಲೋಕತ್ತಿಲ್ ಪಡಿಯೇ - ಎಂದು ಹೇಳಿರುವ ಶ್ಲೋಕದಲ್ಲಿನ ಹಾಗೆ, **ವಸುದೇವನಂದನ ವಿಷಯವೂನ ಯೋಗವ್** - ಪರಮಾತ್ಮನಾದ ಶ್ರೀ ಕೃಷ್ಣ ಭಗವಾನ್ ಆಗಿ ವಸುದೇವನ ಕುಮಾರನಾಗಿ ಅವತರಿಸಿದವನನ್ನು ಕುರಿತ ಯೋಗಾಭ್ಯಾಸವು ಶ್ರೇಷ್ಠವಾದುದು ಹೇಗೋ ಹಾಗೆಯೇ; ಇದಕ್ಕಿಂತಲೂ ಸರ್ವೋತ್ಕೃಷ್ಟವಾಗಿ ಶ್ರೇಷ್ಠತಮವಾದುದುಎಂಬುದು ಮುಂದೆ ಹೇಳುತ್ತಾರೆ. **ಪರಮಾತ್ಮ ವಿದ್ಯಾ ವಿಶೇಷಜ್ಞಳಿಲ್ಲಾತ್ತಿಲುವ್** - ಪರಮಾತ್ಮನನ್ನು ಹೊಂದುವ ಮಾರ್ಗವನ್ನು ಉಪದೇಶಿಸುವ ಎಲ್ಲಾ ಬ್ರಹ್ಮವಿದ್ಯೆಗಳಿಗಿಂತಲೂ, **ನ್ಯಾಸ** ಮತ್ತು **ನಿಕ್ಷೇಪವೇ** ಮೊದಲಾದ ಶಬ್ದಗಳಿಂದ **ಶೊಲ್ಲಪ್ಪಟ್ಟ** - ಹೇಳಲ್ಪಟ್ಟ, ಇಲ್ಲಿನ ಆದಿಪದದಿಂದ, ಭರನ್ಯಾಸ, ಪ್ರಪದನ, ಶರಣಾಗತಿ ಮೊದಲಾದ ಶಬ್ದಗಳು ಸೂಚಿಸಲ್ಪಟ್ಟವು. **ವಿದ್ಯಾ ವಿಶೇಷಮೇ** - ನ್ಯಾಸ ವಿದ್ಯೆಯೇ **ಶ್ರೇಷ್ಠತಮ್-ಉಪಾಸನರೂಪ** ಬ್ರಹ್ಮವಿದ್ಯೆಗಳಿಗಿಂತಲೂ ಶ್ರೇಷ್ಠವಾದುದೂ, ಅಲ್ಲದೆ ಎಲ್ಲಾ ಉಪಾಯಗಳಿಗಿಂತಲೂ **ಶ್ರೇಷ್ಠತನು** ವಾದುದು ತೈತ್ತಿರೀಯದಲ್ಲಿ **"ವಸುರಣ್ಯೋ"** ಮತ್ತು **"ತಸ್ಯೇವಂ ವಿದುಷೋ"** ಎಂಬ ಮಂತ್ರಗಳಲ್ಲಿ ಉಪಪಾದಿಸಲ್ಪಟ್ಟ ನ್ಯಾಸವಿದ್ಯೆಯೇ ಪರಬ್ರಹ್ಮಪ್ರಾಪ್ತಿಗೆ ಸಾಧನವಾದ ಬ್ರಹ್ಮವಿದ್ಯೆಗಳಲ್ಲೆಲ್ಲಾ ಶ್ರೇಷ್ಠತಮವಾದುದು. ಎಲ್ಲಾ ಬ್ರಹ್ಮವಿದ್ಯೆಗಳೂ **"ವಿಕಲ್ಪೋ೭ವಿಶಿಷ್ಟಫಲತ್ವಾತ್"** ಎಂಬ ಬ್ರಹ್ಮಸೂತ್ರದಲ್ಲಿ ಉಪಪಾದಿಸಿರುವಹಾಗೆ ಒಂದೇ ಫಲವಾದ ಮೋಕ್ಷವನ್ನು ಕೊಡುವಾಗ ತರತಮ ಭೇದಗಳು ಹೇಗೆ ಎಂದರೆ ಅದಕ್ಕೆ ಮೂರು ಕಾರಣಗಳನ್ನು ಹೇಳಿರುತ್ತಾರೆ :—**ಸುಕರತ್ವ, ಸಕೃತ್ಕರ್ತವ್ಯತ್ವ, ಶೀಘ್ರಫಲತ್ವಾದಿಗಳಾಲೇ ಶ್ರೇಷ್ಠತಮುವುವ್, ಸುಕರತ್ವ**- ಪ್ರಪತ್ತಿಯು ತುಂಬಾ ಸುಲಭೋಪಾಯವು, ಇದಕ್ಕೆ ಅಜ್ಞಗಳೂ ಸುಲಭವಾದುವು ; ಪರಮಾತ್ಮೋಪಾಸನೆಯಾದರೋ ದುಷ್ಕರವು, ಅಜ್ಞಗಳನ್ನು ಸಾಧಿಸುವದೇ ಕಷ್ಟತರವಾದುದು ; **ಸಕೃತ್ಕರ್ತೃವ್ಯತ್ವ** - ಪ್ರಪತ್ತಿಯು ಒಂದೇಸಲ ಅನುಷ್ಠಿಸತಕ್ಕದ್ದು, ಉಪಾಸನವಾದರೋ ಯಾವಜ್ಜೀವವೂ ಅವ್ಯಾಹತಿಯಿಂದ ನಡೆಸತಕ್ಕದ್ದಾಗಿರುತ್ತದೆ, **ಶೀಘ್ರಫಲಪ್ರದತ್ವ** – ದೇಹಾವಸಾನದಲ್ಲಿ ಮೋಕ್ಷವನ್ನು ಕೊಡುವಂಥಾದ್ದು. ಆರ್ತನಿಗೆ ತಕ್ಷಣವಲ್ಲೇ ಫಲಪ್ರದವು, ಉಪಾ

ನ್ಯಾಸವಿದ್ಯೆಯಿಲೇ ಕಂಠೋಕ್ತನೂನ ಇವ್ವರ್ಥತ್ತೈ (೧) "ತೇಷಾಂತು

ಸನೆಯಾದರೋ ಉತ್ತರಜನ್ಮಉಂಟಾದರೂ ಉಂಟಾಗಬಹುದು, ಜಡಭರತಾದಿ ಗಳಿಗೆ ಪ್ರಾಪ್ತವಾದಹಾಗೆ ಶೀಘ್ರ ಫಲತ್ವಾದಿ ಎಂಬಲ್ಲಿರುವ ಆದಿ ಪದದಿಂದ ಅಧಿಕಾರಿ ವಿಭಾಗಾಧಿಕಾರದಲ್ಲಿ ಹೇಳಲ್ಪಟ್ಟ ಇತರ ಕಾರಣಗಳು (ಲಘಿಳ ನೆಯ ಪುಟವನ್ನು ನೋಡಿ) ಅನಭ್ಯುಗತ ಪ್ರಾರಬ್ಧವನ್ನು ಹೋಗಲಾಡಿಸುವ ಶಕ್ತಿಯೂ, ಅರ್ತನಾದರೆ ಅಭ್ಯುಪಗತ ಪ್ರಾರಬ್ಧ ಶೇಷವನ್ನು ಹೋಗಲಾಡಿಸುವಶಕ್ತಿಯೂ, ಸರ್ವಾಧಿಕಾರತ್ವವೂ, ಅನುಷ್ಠಾನಾನಂತರ ಪ್ರತಿಬಂಧಕಗಳಿಲ್ಲದಿರುವಿಕೆಯೂ ಹೇಳಲ್ಪಟ್ಟವು; ಇವು ಉಪಾಸನಕ್ಕೆ ಇಲ್ಲವು. ೧. ಪ್ರವೃತ್ತಿ ರೂಪ ಧರ್ಮಗಳಾದ ತಪೋನಿಷ್ಠೆ ಜ್ಞಾನನಿಷ್ಠೆ ಕರ್ಮನಿಷ್ಠೆಗಳಿಗಿಂತ ನಿವೃತ್ತಿರೂಪಧರ್ಮಗಳಾದ ತಪೋಜ್ಞಾನ ಕರ್ಮನಿಷ್ಠೆಗಳು ಶ್ರೇಷ್ಠಗಳು ೨. ಈ ನಿವೃತ್ತಿರೂಪ ಧರ್ಮಗಳಾದ ಇವುಗಳಿಗಿಂತ ಆತ್ಮೋಪಾಸನವು ಶ್ರೇಷ್ಠವು ೩. ಆತ್ಮೋಪಾಸನೆಗಳಿಗಿಂತ ಪರಮಾತ್ಮೋಪಾಸನವು ಶ್ರೇಷ್ಠವು. ೪. ಪರಮಾತ್ಮೋಪಾಸನೆಗಳಿಗಿಂತ ಭರನ್ಯಾಸವು ಶ್ರೇಷ್ಠವು ಆದುದರಿಂದ ಇದು ಶ್ರೇಷ್ಠತಮವೆಂಬ ಭಾವವು. "ಚತುರ್ವಿಧಾ ಭಜಂತೇಮಾಂ ಜನಾಸ್ಸುಕೃತಿ ನೋರ್ಜುನ । ಆರ್ತೋಜಿಜ್ಞಾಸು ರರ್ಥಾರ್ಥೀ ಜ್ಞಾನೀಚ ಭರತರ್ಷಭ" ಎಂಬ ಶ್ಲೋಕದಲ್ಲೂ ಪ್ರವೃತ್ತಿ ಧರ್ಮನಿಷ್ಠರಿಗಿಂತ ನಿವೃತ್ತಿಧರ್ಮನಿಷ್ಠರು ಶ್ರೇಷ್ಠರೆಂಬುದು ದ್ಯೋತಿತವು ಆರ್ತನೂ ಅರ್ಥಾರ್ಥಿಯೂ ಇಬ್ಬರೂ ಪ್ರವೃತ್ತಿ ಧರ್ಮನಿಷ್ಠರು, ಇವರಿಗಿಂತ ಜಿಜ್ಞಾಸುಃ, ಪ್ರತ್ಯಗಾತ್ಮೋಪಾಸಕನು ಶ್ರೇಷ್ಠನು, ಇವನಿಗಿಂತ ಜ್ಞಾನಿಯು ಪರಮಾತ್ಮೋಪಾಸಕನು ಶ್ರೇಷ್ಠನು. ಪ್ರಕರಣವು ಪರಮಾತ್ಮೋಪಾಸನೆಯಾದುದರಿಂದ ನ್ಯಾಸವಿದ್ಯಾನಿಷ್ಠನು ಹೇಳಲ್ಪಡಲಿಲ್ಲವು. ನ್ಯಾಸವಿದ್ಯಾನಿಷ್ಠನು ಉಪಾಸಕನಾದ ಬ್ರಹ್ಮವಿದ್ಯಾನಿಷ್ಠನಿಗಿಂತಲೂ ಶ್ರೇಷ್ಠನಾಗಿ ಶ್ರೇಷ್ಠತಮನು.

ಹೀಗೆ ಭರನ್ಯಾಸಕ್ಕೆ ಶ್ರೇಷ್ಠತಮತ್ವವನ್ನು ಹೇಳಲು ಪ್ರಮಾಣಗಳುಂಟೋ ಎಂದರೆ ಪ್ರಮಾಣಗಳನ್ನು ಉದಾಹರಿಸುತ್ತಾರೆ. ಶ್ರುತಿ ಸ್ಮೃತಿ ಭಗವಚ್ಛಾಸ್ತ್ರ ಪ್ರಮಾಣಗಳನ್ನು ಸೂಚಿಸುತ್ತಾರೆ. ನ್ಯಾಸವಿದ್ಯೆಯಿಲೆ – ನ್ಯಾಸ ವಿದ್ಯೆಯಲ್ಲಿ, ಕಂಠೋಕ್ತವಾನ - ಊಹೆ ಮೊದಲಾದವುಗಳ ಅವಶ್ಯಕತೆ ಯಿಲ್ಲದೆ ಕಂಠೋಕ್ತವಾಗಿ ಹೇಳಿರುವ, ಇವ್ವರ್ಥತ್ತೈ - ಭರನ್ಯಾಸವು ಬ್ರಹ್ಮವಿದ್ಯೆಗಳಲ್ಲೆಲ್ಲಾ ಶ್ರೇಷ್ಠತಮವೆಂಬ ಈ ಅಭಿಪ್ರಾಯವನ್ನು, "ತೇಷಾಂತು ತಪಸಾಂ" ಎಂದು

(೧) ಅಹಿ. ೩೬. ೩೮.

ತಪಸಾಂ ನ್ಯಾಸಮತಿರಿಕ್ತಂ ತಪಶ್ಶ್ರುತಮ್," (೨)**"ಸತ್ಕರ್ಮನಿರತಾಶ್ಶುದ್ಧಾ ಸ್ಸಂಖ್ಯಾಯೋಗವಿಧಸ್ತಥಾ । ನಾರ್ಹಂತಿ ಶರಣಸ್ಥಸ್ಯಕಲಾಮ್ ಕೋಟಿ ತಮೀಮಪಿ" ಎನ್ನು ಭಗವಚ್ಛಾಸ್ತ್ರಮ್ ಉಪಬೃಹ್ಮಿತ್ತದು.**

ಅಹಿರ್ಬುಧ್ನ್ಯಸಂಹಿತೆಯೂ, **"ಸತ್ಕರ್ಮನಿರತಾಶ್ಶುದ್ಧಾಃ"** ಎಂದು ಭಗವಚ್ಛಾಸ್ತ್ರವೂ, **ಉಪಬೃಹ್ಮಿತ್ತದು** - ಉಪಬೃಹ್ಮಣಮಾಡಿ ಹೇಳಿತು ಶ್ರುತಿಯಲ್ಲಿ ಎಲ್ಲಿ ಕಂಠೋಕ್ತವಾಗಿ ಹೇಳಿದೆ ಎಂದರೆ **"ತಸ್ಮಾನ್ನ್ಯಾಸ ಮೇಷಾಂ ತಪಸಾ ಮತಿರಿಕ್ತ ಮಾಹುಃ"** ಎಂದೂ **"ಏತದ್ಧ್ಯೆ ಮುಹೋಪನಿಷದಂ"** ಎಂದೂ ತೈತ್ತರೀಯ ನಾರಾಯಣೀಯದಲ್ಲಿ ಹೇಳಿರುವದರಿಂದ ಕಂಠೋಕ್ತವು ಇದರ ಥ್ರವು, ತಸ್ಮಾತ್ - **"ಜ್ಞಾತ್ವಾ ತಮೇವಂ ಮನಸಾ ಹೃದಾಚ ಭೂಯೋನಮೃತ್ಯು ಮುಪಯಾಹಿ ವಿದ್ವಾನ್"** ಎಂದು ಹಿಂದಿನ ವಾಕ್ಯದಲ್ಲಿ ಹೇಳಿರುವಮೆಂರೆಗೆ, ಈ ನ್ಯಾಸ ವಿದ್ಯೆಯ ಮೂಲಕ ಪಂಡಿತನಾದವನು ಪುನ ಸ್ಸಂಸಾರವನ್ನು ಹೊಂದುವದಿಲ್ಲವಾದುದರಿಂದ, **ಏಷಾಂತಪಸಾಂ** - ಈ ಮೇಲೆ ಹೇಳಿದ ಸತ್ಯ, ತಪಸ್ಸು, ದಮ, ಶಮ, ದಾನ, ಧರ್ಮ, ಪ್ರಜನನ, **ಅಗ್ನಿಹೋತ್ರ, ಮಾನಸ,ಇವೆಲ್ಲಾ ತಪಸ್ಸುಗಳಿಗಿಂತಲೂ ನ್ಯಾಸಂ**-ಭರನ್ಯಾಸವನ್ನು, **ಅತಿರಿಕ್ತಂ**-ಶ್ರೇಷ್ಠವಾದ ವಿದ್ಯೆ ಎಂಬುದನ್ನು, **ಆಹುಃ** - ಹೇಳುತ್ತವೆ, ಇದು ಪರಮ ರಹಸ್ಯವಾದ ಮಂತ್ರವು. ಈ ಶ್ರುತ್ಯರ್ಥವನ್ನೇ ಅಹಿರ್ಬುಧ್ನ್ಯ ಸಂಹಿತೆಯು ಉಪಬ್ರಹ್ಮಣ ಮಾಡಿ ಹೇಳುತ್ತದೆ ಏನೆಂದರೆ, (೧) **ತೇಷಾಂ ತಪಸಾಂ** - ಪೂರ್ವಾನುವಾಕಗಳಲ್ಲಿ ಹೇಳಲ್ಪಟ್ಟ, **ಸತ್ಯಂ** – ತಪಸ್ಸು ದಮ ಮೊದಲಾದ **ತಪಸ್ಸುಗಳಿಗಿಂತಲೂ, ನ್ಯಾಸಂ** - ದ್ವಿತೀಯಾದರೂ ಪ್ರಥಮಾರ್ಧವನ್ನು ಹೇಳಕ್ಕದ್ದು ನ್ಯಾಸವಿದ್ಯೆಯು, ಅಧನಾ ನ್ಯಾಸ ಶಬ್ದವು ಪುಲ್ಲಿಂಗವು ಅದಕ್ಕೆ ಬದಲಾಗಿ ನಪುಂಸಕಲಿಂಗವು ಆರ್ಷಪ್ರಯೋಗವೆಂದೂ ಭಾವಿಸಬಹುದು, ನಪುಂಸಕವಾದರೆ ಪ್ರಥಮಾಂತವಾಗಬಹುದು, **ಅತಿರಿಕ್ತಂ ತಪಃ** - ಸರ್ವೋತ್ಕೃಷ್ಟವಾದ ತಪಸ್ಸೆಂದು, **ಶ್ರುತಂ** - ತೈತ್ತರೀಯ ನಾರಾಯಣೀಯ ಶ್ರುತಿಯಲ್ಲಿ ಹೇಳಲ್ಪಟ್ಟಿರುತ್ತದೆ. (೨) **ಸತ್ಕರ್ಮನಿರತಾಃ** - ತಮ್ಮ ಆಶ್ರಮಕ್ಕೆ ಉಚಿತವಾದ ಕರ್ಮವಿಷಃ ಎಂದು ನಿತ್ಯ ನೈಮಿತ್ತಿಕ ಕರ್ಮಾನುಷ್ಠಾನದಲ್ಲಿ ನಿರತರಾದ, **ಶುದ್ಧಾಃ** - ಎಂದರೆ ನಿವೃತ್ತಿರೂಪ ಧರ್ಮಾಚರಣೆಯನ್ನು ಮಾಡಿ, **ಕಷಾಯೇ ಕರ್ಮಭಿಃ ಪಕ್ವೇತತೋ ಜ್ಞಾನಂ ಪ್ರವರ್ತತೇ** ಎಂದೂ, **ಅವಿದ್ಯಯಾ ಮೃತ್ಯುಂ ತೀರ್ತ್ವಾ** ಎಂದೂ, ಹೇಳಿರುವ

---

(೨) ಲಕ್ಷ್ಮೀತಂತ್ರ ೧೭. ೬೨

ಭರನ್ಯಾಸಸ್ಯ ಅಧಿಕ ಪ್ರಭಾವಂ ದೃಷ್ಟಾಂತೇನದ್ರುಢ ಯತಿ.

ಅನಗಾಹನಾದಿಗಳಿಲ್ ಸಮರ್ಥನಲ್ಲಾದವನುಕ್ಕು (೧) "ಮಾನಸಂ

ಹಾಗೂ ಪರಿಶುದ್ಧಾದ, **ಸಾಂಖ್ಯಯೋಗವಿದಃ** - ಹಾಗೆಯೇ, **ಸಂಖ್ಯಾ** ಎಂದರೆ ಬುದ್ಧಿಯು, **ಸಾಂಖ್ಯವಿದಃ**-ಎಂದರೆ **ಜ್ಞಾನಯೋಗ** ನಿಷ್ಠರೂ, **ಯೋಗ** ವೆಂದರೆ ಕರ್ಮಯೋಗವು, **ಯೋಗವಿದಃ**-ಕರ್ಮಯೋಗ ನಿಷ್ಠರೂ **ತಥಾ** ಎಂಬುದರಿಂದ ಭಕ್ತಿಯೋಗ ನಿಷ್ಠರೂ ಅಥವಾ **ಸತ್ಕರ್ಮನಿರತಾಃ** ಎಂಬುದರಿಂದ ಕರ್ಮಯೋಗ ನಿಷ್ಠರೂ, **ಸಾಂಖ್ಯವಿದಃ** ಎಂಬುದರಿಂದ ಜ್ಞಾನಯೋಗ ನಿಷ್ಠರೂ, **ಯೋಗ ವಿದಸ್ತಥಾ** - ಎಂಬುದರಿಂದ ಭಕ್ತಿಯೋಗ ನಿಷ್ಠರೂ ಹೇಳಲ್ಪಟ್ಟರೆಂದು ಭಾವಿಸ ಬಹುದು, ಅಥವಾ **ಯೋಗವಿದಃ** ಎಂಬುದರಿಂದ ಕರ್ಮಯೋಗ ಭಕ್ತಿಯೋಗ ಗಳೆರಡೂ ಹೇಳಲ್ಪಟ್ಟವೆಂದು ಭಾವಿಸಬಹುದೆಂಬ ಸಾರಸಂಗ್ರಹ ವ್ಯಾಖ್ಯಾತೃವಿನ ಅಭಿಪ್ರಾಯವು; **ಈ ಕರ್ಮಯೋಗ ಜ್ಞಾನಯೋಗ ಭಕ್ತಿಯೋಗ ನಿಷ್ಠರಾದ** ಉಪಾಸಕರು, **ಶರಣಸ್ಥಸ್ಯ** - ನ್ಯಾಸವಿದ್ಯೆಯಲ್ಲಿರುವ ಎಂದರೆ ಭರನ್ಯಾಸವನ್ನು ನಿಷ್ಠಿಸಿದವನಿಗೆ, **ಕಲಾಂಕೋಟಿತವಿಮಾಮಪಿ** – ಕೋಟಿ ಅಂಶದಲ್ಲಿ ಒಂದಂಶವನ್ನೂ ಕೂಡ, **ನಾರ್ಹಂತಿ** - ಹೋಲಲಾರರು," **ಎನ್ನು** - ಎಂದು ಭಗವಚ್ಛಾಸ್ತ್ರವು, **ಉಪಬೃಹ್ಮಿತ್ತದು** - ಉಪ ಬೃಹ್ಮಣಮಾಡಿ ಹೇಳಿತು, ಹೀಗೆ ಉಪಾಸನಕ್ಕಿಂತ ಭರನ್ಯಾಸವೇ ಉತ್ಕೃಷ್ಟವಿದ್ಯೆ ಎಂಬುದಕ್ಕೆ ಪ್ರಮಾಣಗಳನ್ನು ಉದಾಹರಿಸಿದರು.

ಆದರೆ ಇಲ್ಲಿ ಪ್ರಧಾನವಾದ ಉಪಾಯವು ಭಕ್ತಿಮಾರ್ಗವು, ಉಪಾಸನೆಯು; ಭರನ್ಯಾಸದಲ್ಲಿ ಉಪಾಸನೆಗೆ ತಾನು ಅನರ್ಹನಾದ ಪ್ರಯುಕ್ತ ಉಪಾಸನೆಯ ಸ್ಥಾನದಲ್ಲಿ ಸರ್ವೇಶ್ವರನನ್ನು ಇಟ್ಟು ಪ್ರಾರ್ಥಿಸುವ ವಿಷಯವು, ಆದುದರಿಂದ ಅಬಕ್ಕೆ ಪ್ರತ್ಯಾಮ್ನಾಯವಾಗಿ ಅಪ್ರಧಾನವಿಷಯವು ಹೀಗಿರುವಾಗ ಅಪ್ರಧಾನಕ್ಕೆ ಹೀಗೆ ಪ್ರಾಶಸ್ತ್ಯವನ್ನು ಹೇಳಬಹುದೋ? ಇದಕ್ಕೆ ಅಧಿಕ ಪ್ರಭಾವ ಹೇಗೆ? ಎಂಬ ಶಙ್ಕೆ ನಿವಾರಣಾರ್ಥವಾಗಿ ಸದೃಷ್ಟಾಂತವಾಗಿ ಸಮಾಧಾನವನ್ನು ದಯಪಾಲಿಸುತ್ತಾರೆ.

ಭರನ್ಯಾಸದ ಅಧಿಕೆ ಪ್ರಭಾವನನ್ನು ದೃಷ್ಟಾಂತಮೂಲಕ
ದೃಢಪಡಿಸುತ್ತಾರೆ.

ಅನಗಾಹನಾದಿಗಳಿಲ್ ಸಮರ್ಥನಲ್ಲಾದನನುಕ್ಕು - ಜಲಾಶಯಗಳಲ್ಲಿ

---

(೧) ಗಾರ್ಗ. ಸ್ಮೃತಿ.

ವಿಷ್ಣುಚಿಂತನಂ" ಎನ್ನು ಭಗವಚ್ಚಿಂತನತ್ತೈ ಸ್ನಾನನೂಗ ವಿಧಿತ್ತಾ ಲದು ಸ್ನಾನಾಂತರಜ್ಞಳ್ ಪಣ್ಣುಗಿರ ಶುದ್ಧಿಯೈಯುಮ್ ಪಣ್ಣೆ, ಪಾಪಾಂ ತರಂಗಳೈಯುಮ್ ಶಮಿಪ್ಪಿತ್ತು, ಅಪ್ಪೋದೆ ಭಗವದನುಭವ ರಸ ತ್ತೈ ಯು ಮುಣ್ಡಾಕ್ಕುವಾಪೋಲೆ, ಉಪಾಸನಾದಿಗಳಿಲ್ ಸಮರ್ಥನಲ್ಲಾ ದವನುಕ್ಕು ಪ್ರಪತ್ತಿಯೈ ವಿಧಿತ್ತಾಲುಮ್, ಇಪ್ಪ್ರಪತ್ತಿ ತಾನೇ ಅವೈ ಕೊಡು ಕ್ಕುಮ್ ಫಲತ್ತೈ ಯುಮ್, ಅವೈ ತನ್ನೈಯುಮ್ ಕೊಡಕ್ಕುವತ್ತಾಯ್

ವುಳುಗಿ, ರೋಗ ವಾರ್ಧಕ ಮೊದಲಾದವುಗಳಿಂದ ಸಮರ್ಥನಲ್ಲದಿರುವವನಿಗೆ "ಮಾನಸಂ ವಿಷ್ಣುಚಿಂತನಂ" "ವಿಷ್ಣುವಿನ ಧ್ಯಾನರೂಪವಾದ ಏಳುವಿಧ ಸ್ನಾನ ಗಳಲ್ಲೊಂದಾದ ಮಾನಸ ಸ್ನಾನವು" ಎಂದು ಹೇಳಿರುವಹಾಗೆ, **ಭಗವಚ್ಚಿಂತ ನತ್ತೈ** - ಭಗವದ್ಧ್ಯಾನವನ್ನು **ಸ್ನಾನನೂಗ ವಿಧಿತ್ತಾಲ್**-ಅವಗಾಹನಸ್ನಾನಕ್ಕೆ ಸಮಾನವೆಂದು ವಿಧಿಸಿದರೆ, ಅದು **ಸ್ನಾನಾಂತರಜ್ಞಳ್** - ಅವಗಾಹನವೇ ಮೊದಲಾದ ಇತರ ಸ್ನಾನಗಳು, **ಪಣ್ಣುಗಿರ ಶುದ್ಧಿಯೈಯುಮ್ ಪಣ್ಣೆ** - ಮಾಡುವ ದೇಹಶುದ್ಧಿಯನ್ನೂ ಉಂಟುಮಾಡಿ, **ಪಾಪಾಂತರಜ್ಞಳೈಯುಮ್ ಶಮಿಪ್ಪಿತ್ತು** - ವಿರೋಧಿ ಪಾಪಗಳನ್ನೂ ನಾಶಮಾಡಿ, **ಅಪ್ಪೋದೆ** - ಕೂಡಲೇ, **ಭಗವದನುಭವ ರಸತ್ತೈ ಯುಮ್** - ಭಗವದ್ಧ್ಯಾನಮಾಡಿದುದರಿಂದ ಭಗವದ ನುಭವರೂಪ ಆನಂದವನ್ನೂ; **ಉಣ್ಡಾಕ್ಕುವಾಪೋಲೇ** - ಹೇಗೆ ಉಂಟು ಮಾಡುತ್ತದೋ ಹಾಗೆಯೇ, **ಉಪಾಸನಾದಿಗಳಿಲ್ ಸಮರ್ಥನಲ್ಲಾದವ ನುಕ್ಕು** - ಉಪಾಸನೆ ಮೊದಲಾದವುಗಳಲ್ಲಿ ಸಮರ್ಥನಲ್ಲದೇ ಇರುವವನಿಗೆ, ಇಲ್ಲಿ **ಆದಿ** ಪದದಿಂದ ಉಪಾಯ ವಿರೋಧಿಪಾಪನಿವರ್ತನವು ಹೇಳಲ್ಪಟ್ಟಿತು **ಪ್ರಪ ತ್ತಿಯೈ ವಿಧಿತ್ತಾಲುಮ್** - ಭರನ್ಯಾಸವನ್ನು ವಿಧಿಸಿದರೂ, **ಇಪ್ಪ್ರಪತ್ತಿತಾನೇ**- ಈ ಭರನ್ಯಾಸವೇ, **ಅವೈಕೊಡುಕ್ಕುಮ್ ಫಲತ್ತೈಯುಮ್**-ಆ ಉಪಾಸನಾದಿ ಗಳು ಕೊಡುವ ಫಲವನ್ನು, **ಅವೈತನ್ನೈಯುಮ್ ಕೊಡುಕ್ಕವತ್ತಾಯ್**-ಅವೆಲ್ಲ ವನ್ನೂ ಕೊಡುವಂತಾದ್ದಾಗಿ, ಮುಂದಕ್ಕೆ ಈ ಭರನ್ಯಾಸದಲ್ಲಿರುವ ವೈಲಕ್ಷಣ್ಯವನ್ನು ತೋರಿಸುತ್ತಾರೆ, ಅದು ಕೊಡುವವನ್ನೂ ಕೊಟ್ಟು ಇನ್ನೂ ಹೆಚ್ಚುಪ್ರಭಾವವುಳ್ಳ ದ್ದೆಂದು ಪ್ರದರ್ಶಿಸುತ್ತಾರೆ; **ಅಕಿಂಚನನುಕ್ಕುತ್ತಾರಕಮಾಯ್**-ಇದು ಭಕ್ತಿ ಮಾರ್ಗದಹಾಗೆ ತ್ರೈವರ್ಣಿಕರಾದ ಸಕಿಂಚನರಿಗೆ ಮಾತ್ರವೇ ಅಲ್ಲದೆ ಅಕಿಂಚನ ರಾದ ಎಲ್ಲರಿಗೂ ರಕ್ಷಕವಾಗಿ, **ಅನ್ಯ ಅಪೇಕ್ಷಿತ್ತಕಾಲತ್ತಿಲೇ ಫಲಾವಿನಾ ಭಾವತ್ತೈ ಯುಡೈತ್ತಾಯ್**-ಭಕ್ತಿಮಾರ್ಗದಲ್ಲಿ ಉಪಾಸನೆಯ ವಿಪಾಕದೆಶೆಯು ಈ ಜನ್ಮದಲ್ಲುಂಟಾಗಲೂ ಆಗಬಹುದು ಅಥವಾ ಮುಂದಿನ ಜನ್ಮದಲ್ಲಾದರೂ ಆಗ

ಅಕಿಂಚನನುಕ್ಕು ಉತ್ತಾರಕಮಾಯ್ ಅವ್ವ ಅಪೇಕ್ಷಿತ್ತ ಕಾಲತ್ತಿಲೆ ಫಲಾವಿನಾ ಭಾವತ್ತೈಯುಮ್ ಉಡೈತ್ತಾಯ್, ಇರುಕ್ಕೈಯಾಲೆ ಅಧಿಕ ಪ್ರಭಾವ ಮಾಯಿರುಕ್ಕುಮ್.

ಬಹುದು, ಹಾಗೆ ವಿಳಂಬವಿಲ್ಲದೆ, **ಅವ್ವ** - ಆ ಭರನ್ಯಾಸ ನಿಷ್ಠನು, **ಅಪೇಕ್ಷಿತ್ತ ಕಾಲತ್ತಿಲೇ** - ಆರ್ತನಾಗಿ ಒಡನೆಯೇ ಬೇಕೆಂದಪೇಕ್ಷಿಸಿದರೆ ಹಾಗೂ, ಅಥವಾ ದೃಪ್ತನಾಗಿ ದೇಹಾವಸಾನವಾದ ಒಡನೆಯೇ ಎಂದರೆ ಆವಾಗಲೇ, **ಫಲಾವಿನಾ ಭಾವತ್ತೈಯುಡತ್ತಾಯ್** – ಫಲದೊಂದಿಗೇನೇ ಸೇರಿರುವದಾಗಿ, **ಇರುಕ್ಕೈಯಾಲೇ** - ಇರುವದರಿಂದ, **ಅಧಿಕಪ್ರಭಾವ ಮಾಯ್ ಇರುಕ್ಕುಮ್**-ಉಪಾಸನೆಗಿಂತ **ಹೆಚ್ಚು** ಪ್ರಭಾವವನ್ನು ಹೊಂದಿರುವದಾಗಿರುತ್ತದೆ. ಭಕ್ತ್ಯುಪಾಯವೂ ಒಂದು ಸಾಧನವೇ ಎಂದು ಹಿಂದೆ ಸ್ಥಾಪಿಸಿದರು ಈಗ ಆದಕ್ಕಿಂತ ಭರನ್ಯಾಸಕ್ಕೆ **ಶ್ರೈಷ್ಠ್ಯವು ಉಪಪನ್ನವು** ಯದ್ಯಪಿ ಭಕ್ತ್ಯುಪಾಯವೇ ಪ್ರಧಾನವಾಗಿದ್ದರೂ, ಅಸಮರ್ಥನಿಗೆ ಇದು ವಿಧಿಸಲ್ಪಟ್ಟ ಅಪ್ರಧಾನವಾದರೂ ಇದಕ್ಕೆ ಹೆಚ್ಚು ಮಹಿಮೆಯುಂಟು ಸ್ನಾನವು ಪ್ರಧಾನವಾಗಿ ಅವಗಾಹನರೂಪವಾಗಿಯೇ ಇರತಕ್ಕದ್ದು ; ಇದಕ್ಕೆ **ವ್ಯಾಧಿ** ನೊದಲಾದವುಗಳಿಂದ ಅಸಮರ್ಥನಾದರೆ ಆಗ ಗೌಣವಾಗಿ ವಿಷ್ಣು ಚಿಂತನವನ್ನು ಅವಗಾಹನ ಸ್ನಾನಕ್ಕೆ ಬದಲಾಗಿ ಸ್ಮೃತಿಯು ವಿಧಿಸಿರುತ್ತದೆ. ಹಾಗೆಯೇ **ಅಪವಿತ್ರಃ ಪವಿತ್ರೋವಾ** ಎಂಬ ಶ್ಲೋಕದಲ್ಲೂ ಪುಂಡರೀಕಾಕ್ಷನ ಸ್ಮರಣೆಯು ಬಾಹ್ಯಾಂತರ ಪವಿತ್ರತೆಯನ್ನುಂಟುಮಾಡುತ್ತದೆಂದು ಹೇಳಲ್ಪಟ್ಟಿರುತ್ತದೆ. ಮತ್ತು **"ಮಾನಸಂ ಪ್ರವರಂ ಸ್ನಾನಂ ಸರ್ವೇ ಶಂಸಂತಿ ಸೂರಯಃ"** ಎಲ್ಲಾ ಜ್ಞಾನಿಗಳೂ ಮಾನಸವಾದ ಈ ವಿಷ್ಣು ಚಿಂತನ ರೂಪಸ್ನಾನವು **ಪ್ರವರಂ** ತುಂಬಾ ಉತ್ಕೃಷ್ಟವಾದುದೆಂದು ಹೇಳುವರು. ಈ ಗೌಣಸ್ನಾನವು ಪ್ರಧಾನ ಸ್ನಾನಕ್ಕಿಂತ ಉತ್ಕೃಷ್ಟವಾದುದು ಹೇಗೆ ಎಂದರೆ, ಇದು ಅವಗಾಹನಸ್ನಾನ **ಮಾಡುವ**ಬಾಹ್ಯಪವಿತ್ರತೆಯನ್ನುಂಟುಮಾಡುವದೂ ಅಲ್ಲದೆ, ಈತನು **ಮಾಡುವ** ಕರ್ಮಾನುಷ್ಠಾನಗಳಿಗೆ ಪ್ರತಿಬಂಧಕಗಳಾದ ಪಾಪಗಳನ್ನೂ ಹೋಗಲಾಡಿಸಿ, ಭಗದನುಭವ ಜನಿತಾನಂದವನ್ನೂ ಕೂಡ ಉಂಟುಮಾಡುತ್ತದೆ. ಆದುದರಿಂದ ಅವಗಾಹನ ಸ್ನಾನಕ್ಕಿಂತ ವಿಷ್ಣುಚಿಂತನವು ಹೇಗೆ ಹೆಚ್ಚು ಪ್ರಭಾವ ಉಳ್ಳದೋ ಹಾಗೆಯೇ ಈ ಗೌಣವಾದ ಭರನ್ಯಾಸವೂ ಕೂಡ ತ್ರೈವರ್ಣಿಕನಿಗೂ ಸಮರ್ಥನಿಗೂ ಮಾತ್ರ ಯೋಗ್ಯವಾದ ಪ್ರಧಾನವಾದ ಭಕ್ತಿಮಾರ್ಗಕ್ಕಿಂತ **ಪರ್ಣಾಶ್ರಮ ಅಧಿಜಾತ್ಯಾದಿ ವೈತಕ್ಷಣಗಳಿಂದಲೂ** ಬೇಕಿಲ್ಲದೆ ಸರ್ವಾಧಿಕಾರತ್ವವುಳ್ಳದಾದ

ಇಪ್ಪಡಿ ಇವ್ವುಪಾಯತ್ತಿನ್ ಅಧಿಕಾರತ್ತಿಲುಮ್ ಸ್ವರೂಪತ್ತಿಲು ವರುಮ್ ಕೆಲಕ್ಕ್ಞಳ್ ಶಮಿಪ್ಪಿತ್ತೋಮ್, ಇನಿಮೇಲ್ ಪರಿಕರಞ್ಞಳಿಲ್ ಮ್ ವರುಮ್ ವ್ಯಾಮೋಹಂ ಶಮಿಪ್ಪಿಕ್ಕಿರೋಮ್—

ಅಥ ಪರಿಕರ ವಿಷಯ ಶಙ್ಕಾಃ ಪರಿಹರತಿ.

(೧) **ಪ್ರಪತ್ತೇಃ ಆನುಕೂಲ್ಯಾದಿ ಪರಿಕರಾಣಾ ಮಾವಶ್ಯಕತ್ವಂ ನಾಸ್ತೀತಿ ವಾದ ನಿರಾಸಃ.**

ಇವ್ವುಪಾಯತ್ತುಕ್ಕು ಆನುಕೂಲ್ಯ ಸಙ್ಕಲ್ಪಾದಿಗಳ್ ವೇಣುಮೋ ?

ಗಿಯೂ, ಭಕ್ತಿಮಾರ್ಗದಹಾಗೆ ವಿಳಂಬಕ್ಕೆ ಆಸ್ಪದವಿಲ್ಲದೆ ಅವಿಳಂಬಿತಫಲಪ್ರದವಾಗಿರುವದರಿಂದಲೂ ಪ್ರಾರಬ್ಧ ನಾಶಕತ್ವಾದಿಗಳಿರುವದರಿಂದಲೂ, **ಅಧಿಕ ಪ್ರಭಾವ** ಉಳ್ಳದ್ದೆಂಬ ತಾತ್ಪರ್ಯವು. ಭರನ್ಯಾಸಕ್ಕೆ ಇಂತಹ ಮಹಿಮೆ ಉಂಟೆಂಬುದನ್ನು **"ಸುದುಷ್ಕರೇಣ ಶೋಚೇದ್ಯೋ ಯೇನ ಯೇನೇಷ್ಟಹೇತುನಾ । ಸಸತಸ್ಯಾಹ ಮೇವೇತಿ ಚರಮಶ್ಲೋಕ ಸಙ್ಗ್ರಹಃ॥"** ಭರನ್ಯಾಸವನ್ನು ವಿಧಿಸುವ ಚರಮಶ್ಲೋಕದ ತಾತ್ಪರ್ಯವೇನೆಂದರೆ ಯಾವನು, ಆವನೆಂತವನೇಯಾಗಿರಲಿ, **ಹೊಂದಲು** ಕಷ್ಟತರವಾದ ಯಾವಯಾವ ಮನೋರಥಗಳನ್ನು ಮನಸ್ಸಿನಲ್ಲಿಟ್ಟು ಶೋಕಿಸಿ ದೈನ್ಯದಿಂದ ನನ್ನನ್ನು ಆಶ್ರಯಿಸುತ್ತಾನೋ ಅವನಿಗೆಲ್ಲಾ ಆಯಾನುನೋರಥ ಪ್ರಾಪ್ತಿಗೆ ನಾನೇ ಸಾಧನವೆಂಬುದು ಚರಮಶ್ಲೋಕಾರ್ಥವೆಂದು ಹೇಳಿರುವದರಿಂದ ಇದಕ್ಕೆ ಪ್ರಾಶಸ್ತ್ಯವು ಅಧಿಕವೆಂಬ ಭಾವವು

ಮುಂದಿನ ವಾಕ್ಯದಿಂದ ಇಷ್ಟುದೂರ ಉಪದೇಶಿಸಿದುದು ಯಾವವಿಷಯವು ? ಮುಂದೆ ಉಪದೇಶಿಸಲ್ಪಡುವದು ಯಾವದು? ಎಂದು ತಿಳಿಸುತ್ತಾರೆ **ಇಪ್ಪಡಿ** - ಹೀಗೆ ಮೇಲೆ ಉಪಪಾದಿಸಿದ ರೀತಿಯಲ್ಲಿ, **ಇವ್ವುಪಾಯತ್ತಿನ್** - ಈ ಭರನ್ಯಾಸರೂಪವಾದ ಉಪಾಯದ, **ಅಧಿಕಾರದಲ್ಲೂ ಸ್ವರೂಪದಲ್ಲೂ, ವರುಮ್ ಕೆಲಕ್ಕ್ಞಳ್** - ಬರುವ ಶಙ್ಕೆಗಳನ್ನು, **ಶಮಿಪ್ಪಿತ್ತೋಮ್** - ಪರಿಹಾರ ಮಾಡಿದೆವು; **ಇನಿಮೇಲ್** - ಇನ್ನು ನುಂಪೆ, **ಪರಿಕರಞ್ಞಳಿಲ್** - ಭರನ್ಯಾಸದ ಅಙ್ಗಗಳ ವಿಷಯದಲ್ಲಿ, **ವರುಮ್ ವ್ಯಾಮೋಹಮುಮ್** - ಉಂಟಾಗುವ ಭ್ರಮೆಗಳನ್ನು, **ಶಮಿಪ್ಪಿಕ್ಕಿರೋಮ್** - ಪರಿಹಾರಮಾಡುತ್ತೇವೆ. ಹೀಗೆ ಪ್ರತಿಜ್ಞಾವಾಕ್ಯವನ್ನು ದಯಪಾಲಿಸಿರುತ್ತಾರೆ

(೧) "ಆರ್ತ್ರೋವಾ ಯದಿವಾ ದೃಪ್ತಃ" ಎನ್ನುವ್, (೨) "ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂ ಕಥಂಚನ । ದೋಷೋ ಯದ್ಯಪಿ ತಸ್ಯ

ಪರಕರ ವಿಷಯಗಳಲ್ಲುಂಟಾಗುವ ಶಙ್ಕೆಗಳನ್ನು ಪರಿಹರಿಸುತ್ತಾರೆ.

(೧) ಮೊದಲು ಆನುಕೂಲ್ಯಾದಿ ಪರಿಕರಗಳ ಆವಶ್ಯಕತೆಯು ಬೇಕಿಲ್ಲವೆಂಬ ವಾದವನ್ನು ನಿರಸನ ಮಾಡುತ್ತಾರೆ.

ಇವ್ಹುಪಾಯತ್ಕ್ಕು - ಈ ಭರನ್ಯಾಸಕ್ಕೆ, **ಆನುಕೂಲ್ಯ ಸಙ್ಕಲ್ಪಾದಿಗಳ್** – ಹಿಂದೆ ಪರಿಕರ ವಿಭಾಗಾಧಿಕಾರದಲ್ಲಿ ಹೇಳಲ್ಪಟ್ಟ ಆನುಕೂಲ್ಯ ಸಙ್ಕಲ್ಪವೇ ಮೊದಲಾದ ಐದು ಅಙ್ಗಗಳೂ **ವೇಣುಮೋ ?**—ಆವಶ್ಯಕವೋ? ಈ ಪೂರ್ವ ಪಕ್ಷರೀತ್ಯಾ ಆವಶ್ಯಕವಿಲ್ಲವೆಂಬುದನ್ನು ಅನುವಾದ ಮಾಡುವದಕ್ಕೋಸ್ಕರ ಮೂರು ಪ್ರಮಾಣಗಳನ್ನು ಉದಾಹರಿಸುತ್ತಾರೆ. (೧) **ಆರ್ತ್ರೋವಾ ಯದಿವಾ ದೃಪ್ತಃ ಪರೇಷಾಂ ಶರಣಾಗತಃ । ಅರಿಃ ಪ್ರಾಣಾನ್ ಪರಿತ್ಯಜ್ಯ ರಕ್ಷಿತವ್ಯಃ ಕೃತಾತ್ಮನಾ ॥** ಎಂಬುದು ಪೂರಾ ಶ್ಲೋಕವು; **ಪರೇಷಾಂ** - ಇತರ ಶತ್ರುಗಳ ಮಧ್ಯೆ, **ಅರಿಃ** - ಶತ್ರುವು, **ಶರಣಾಗತಃ** - ರಕ್ಷಿಸೈಯ್ಯಾ ಎಂದು ಪ್ರಾರ್ಥಿಸಿ ಶರಣಾಗತನಾದವನು, **ಆರ್ತ್ರೋವಾ ಯದಿವಾದೃಪ್ತಃ** - ಬಹು ದೈನ್ಯವುಳ್ಳವನಾಗಿಯೇ ಆಗಲಿ ಅಥವಾ ಆ ಶರಣಾಗತಿ ಕಾಲದಲ್ಲೂ ಕೂಡ ಅಹಂಕಾರಯುಕ್ತನಾಗಿಯೇ ಆಗಲಿ ಇದ್ದರೂ ಸರಿಯೇ, ಅಥವಾ ಸಂಸಾರದಲ್ಲಿ ಜುಗುಪ್ಸೆಯಿಂದ ಶರಣಾಗತಿಯು ಉತ್ತರಕ್ಷಣದಲ್ಲಿಯೇ ಫಲಕಾಮುಕತೆಯುಳ್ಳವನೇಯಾಗಲಿ ಅಥವಾ ವಿಳಂಬಾವಿಳಂಬಗಳಿಗೆ ಮನಗೊಡದೆ ದೇಹಾವಸಾನದಲ್ಲಿ ಫಲಾಪೇಕ್ಷೆಯುಳ್ಳ ಮೋಕ್ಷಾರ್ಥಿಯೇ ಆಗಲಿ, **ಪ್ರಾಣಾನ್ ಪರಿತ್ಯಜ್ಯ** - ತನ್ನ ಶಕ್ತಿಯಸ್ನೆಲ್ಲಾ ವಿಾರಿ, **ಕೃತಾತ್ಮನಾ** - ಶಾಸ್ತ್ರವಿಚಾರಣೆಯಲ್ಲಿ ಮಾಡಲ್ಪಟ್ಟ ಮನಸ್ಸುಳ್ಳವನಿಂದ ಶಾಸ್ತ್ರಧರ್ಮಸೂಕ್ಷ್ಮವನ್ನು ಗ್ರಹಿಸಿರುವವನಿಂದ, **ರಕ್ಷಿತವ್ಯಃ** - ರಕ್ಷಿಸಲ್ಪಡತಕ್ಕವನೆಂದು ಶ್ರೀರಾಮನು ಹೇಳಿರುವದರಿಂದ, **ಪ್ರತಿಕೂಲನಾದ ಶತ್ರುವೂ ಕೂಡ ಶರಣಾಗತನಾದರೆ, ಆಗ ಆನುಕೂಲ್ಯಸಙ್ಕಲ್ಪ ಪ್ರಾತಿಕೂಲ್ಯದ ವರ್ಜನವೇ ಮೊದಲಾದ ಅಙ್ಗಗಳ ಆವಶ್ಯಕತೆ ಏನು ? ಎಂಬ ಭಾವವು, (೨) ಮಿತ್ರಭಾವೇನ ಸಂಪ್ರಾಪ್ತಂ** - "ಪ್ರಿಯೋಹಿ ಜ್ಞಾನಿನೋತ್ಯರ್ಥಂ ಅಹಂ" (ಗೀ. ೭ ೧೭.)ನಾನು ಜ್ಞಾನಿಗೆ ಅತ್ಯಂತ ಪ್ರಿಯಸಖನೆಂದು ಸ್ಮೃತಿ ಪರಮ

---

(೧) ರಾಮಾ ಯುದ್ಧ. ೧೮.೩೪. (೨) ರಾ. ಯು. ೧೮, ೩.

ಪುರುಷಾರ್ಥವನ್ನು ಹೊಂದಬೇಕೆಂದು ಬಂದವನನ್ನು, ಅಥವಾ ಮಿತ್ರಶಬ್ದವು ಸರ್ವಲೋಕ ರಕ್ಷಕನನ್ನು "ಮಿತ್ರಸ್ಯ **ಚರ್ಷಣೀಧೃತಃ**" ಎಂಬ ಮಂತ್ರದಲ್ಲಿನ ಹಾಗೆ ಸೂಚಿಸುತ್ತದೆ, ಆದುದರಿಂದ ಸರ್ವಲೋಕ ರಕ್ಷಕನಾದ ಸರ್ವೇಶ್ವರನೆಂದು ಭಾವಿಸಿ, ಅಥವಾ, "**ಸುಹೃದಂ ಸರ್ವಭೂತಾನಾಂ**" ಎಂದು ಹೇಳಿರುವ ಮೇರೆಗೆ ಸಮಸ್ತ ಪ್ರಾಣಿವರ್ಗಕ್ಕೂ ಪರಮ ಸುಹೃತ್ತೆಂದು ಭಾವಿಸಿ, ಅಥವಾ ಮಿತ್ರಭಾವೇನ - ಅನುಕೂಲ್ಯ ಸಙ್ಕಲ್ಪದಿಗಳೊಂದಿಗೆ, "**ತನ್ಮಿತ್ರಂ ಯತ್ರ ವಿಶ್ವಾಸಃ**" ಎಂದು ಹೇಳಿರುವಹಾಗೆ ವಿಶ್ವಾಸಕ್ಕೆ ಯೋಗ್ಯವಾದ ಸ್ಥಳವೆಂಬ ಭಾವನೆಯಿಂದ ಅಥವಾ "**ತೇನನ್ಯೈತ್ರೀ ಭವತುತೇಯದಿ ಜೀವಿತು ಮಿಚ್ಛಸಿ**" ನೀನು ಬದುಕಬೇಕೆಂಬ ಆಶೆಯಿದ್ದರೆ ಅವನೊಂದಿಗೆ ಶರಣಾಗತಿ ರೂಪ ಸಂಬಂಧವನ್ನು ಬೆಳೆಸು ಎಂದು ಸೀತೆಯು ರಾವಣನಿಗೆ ಉಪದೇಶಮಾಡಿದ ಹಾಗೆ ಮಿತ್ರಭಾವೇನವೆಂದರೆ ಶರಣಾಗತ ಭಾವದಿಂದ, **ಸಂಪ್ರಾಪ್ತಂ** - ಚೆನ್ನಾಗಿ ಶರಣಾಗತಿಯ ಮೂಲಕ ಆಶ್ರಯಿಸುವದಕ್ಕಾಗಿ ಬಂದವನನ್ನು, ಅಥವಾ **ಸಂಪ್ರಾಪ್ತವ್** - ಚೆನ್ನಾಗಿ ಬಂದವನನ್ನು ಎಂದರೆ ಇಲ್ಲಿಗೇನೇ ಬಂದವನನ್ನು ಅಥವಾ **ಸಂಪ್ರಾಪ್ತಂ**-ವಿರುದ್ಧವಾದ ಮಾತುಗಳನ್ನು ಬಾಗಿಲಲ್ಲಿ ಬಿಟ್ಟು ಕಾಲನ್ನು ತೊಳೆದುಕೊಂಡು ದೇವಾಲಯವನ್ನು ಪ್ರವೇಶಿಸುವಹಾಗೆ,"**ಪರಿತ್ಯಕ್ತಾ ಮಯಾಲಂಕಾ ಮಿತ್ಯಾಣಿ ಚ ಧನಾನಿಚ**" ಎಂದು ಹೇಳಿಕೊಂಡು ವಿರೋಧಿರೂಪ ಪ್ರಾತಿಕೂಲ್ಯ ವರ್ಜನವೊಂದಿಗೆ ಬಂದಿರುವವನನ್ನು, ಅಥವಾ **ಸಂಪ್ರಾಪ್ತಂ** - "**ಮಾತಾಪಿತಾ ಭ್ರಾತಾ ನಿವಾಸಶ್ಚರಣಂ ಸುಹೃತ್**" ಎಂದು ಹೇಳಿರುವ ಹಾಗೆ ಸರ್ವವಿಧ ಬಂಧುವೂ ನಾನೇ ಎಂದು ತಿಳಿದು ಚೆನ್ನಾಗಿ ಬಂದವನನ್ನು ಅಥವಾ ಲಂಕೆಯಲ್ಲೇ ಇದ್ದುಕೊಂಡು "**ರಾಘವಂ ಶರಣಾಗತಃ**" ಎಂದು ಕೂಗಿಕೊಂಡಿದ್ದರೆ ಅಲ್ಲಿಗೇನೇ ನಾನೇ ಹೋಗಬೇಕಾಗಿತ್ತು, ಅವನನ್ನು ತಪ್ಪಿಸಿ ನನಗೆ ಉಪಕಾರಮಾಡಿ ಇಲ್ಲಿಗೆ ಬಂದು ಶರಣಾಗತಿಮಾಡಿರುವದರಿಂದ "**ಸಂಪ್ರಾಪ್ತಂ**" ಸರಿಯಾಗಿ ಬಂದವನನ್ನು, ಅಥವಾ **ಸಂಪ್ರಾಪ್ತಂ** - ನನಗೆ ಸ್ತೋತ್ರ, ಅರ್ಚನ, ಪ್ರಣಾಮಾದಿಗಳು ಅಪ್ರಯೋಜನವಲ್ಲವು, ನನ್ನ ಪ್ರಾಪ್ತಿಗೆ ಶರಣಾಗತಿರೂಪ ಉಪಾಯಾನುಷ್ಠಾನವೇ ಪ್ರಮುಖ್ಯವಾದುದರಿಂದ ಅವನನ್ನು ಈತನು ಸರಿಯಾಗಿ **ಸತರಿಕರವಾಗಿ** ನಡೆಸಿರುವದರಿಂದ "**ಸಂಪ್ರಾಪ್ತಂ**" ಅಥವಾ, ಯಾರಾದರೂ ರಕ್ಷಿಸು ಎಂದು ಹೇಗೆ ಪ್ರಾರ್ಥಿಸಬೇಕೋ ಹಾಗೆ ಪ್ರಾರ್ಥಿಸಿದರೆ ಸಾಕು ಎಂದು ರಕ್ಷಾಪೇಕ್ಷೆಯುಳ್ಳವನಾಗಿ ಅತಿಶಯ ಪ್ರತೀಕ್ಷೆಸಹಿತನಾದ ನನಗೆ "**ಸಂಪ್ರಾಪ್ತಂ**", ಹೀಗೆ ನನ್ನ ಪ್ರಾಪ್ತಿಸಾಧನವಾಗಿ ಸರಿಯಾಗಿ ಬಂದವನನ್ನು, **ನತ್ಯಜೇಯಂ ಕಥಂಚನ**-ನಾನು ಎಂದಿಗೂ ಯಾವಕಾರಣದಿಂದಲೂ ಬಿಡಲಾರೆನು; **ನತ್ಯಜೇಯಂ** ಬಂದರೆ ಸಾಕು

ಎಂದಿರುವ ನಾನು ಎಂದಿಗಾದರೂ ಪರಿತ್ಯಾಗ ಮಾಡುವೆನೋ ಎಂಬ ಭಾವವು; ಆತನ ಮಾತ್ರ ಹಾಗಿರಲಿ, ಅವನು ತನ್ನ ಕಡೆಯವರನ್ನೂ ರಕ್ಷಿಸು ಎಂದು ಕೇಳಿದ್ದರೆ, ಈಗ ಆತನೊಂದಿಗೆ ಬಂದಿರುವ ನಾಲ್ವರನ್ನೂ ಹೇಗೆ ಬಿಡಲು ಸಾಧ್ಯವಿಲ್ಲವೋ, ಹಾಗೆಯೇ ಅವರನ್ನೂ ಬಿಡಲು ಸಾಧ್ಯವಿಲ್ಲವು, ಹೀಗಿರುವಾಗ ಈತನನ್ನು ಬಿಡಲು ಸಾಧ್ಯವೋ ಎಂಬ ಭಾವವು; **ಕಥಂಚನ**-ಆತನನ್ನು ಬಿಡುವದು ತನಗೆ ಎಂದಿಗೂ ಸಾಧ್ಯವೇ ಇಲ್ಲವು, **ಯದ್ಯಪಿ** ನಾನು ಸರ್ವಶಕ್ತನೆ ಸರಿ, ಈವಿಷಯದಲ್ಲಿ ಮಾತ್ರ ತಾನು ಅಶಕ್ತನು ಎಂಬ ಭಾವವು ಆತನು ಪರಮನೀಚನಾಗಿದ್ದರೂ ಬಿಡುವದಿಲ್ಲವೋ ? ಎಂದರೆ ಹೇಗಿದ್ದರೂ ಶರಣಾಗತನಾದ ನಂತರ ಬಿಡುವದಿಲ್ಲವು **ದೋಷೋಯದ್ಯಪಿ ತಸ್ಯಸ್ಯಾತ್**-ಆ ಶರಣಾಗತನಲ್ಲಿ ದೋಷವಿದ್ದರೂ, ಆದೂ ಇರಲಿ ಏನೇಗ:ಅಂಧವನನ್ನೂ ಕೂಡರಕ್ಷಿಸುವಮಾತುಂಟೆ **"ಸತಾಮೇತದಗರ್ಹಿತಂ"** ಎಂದು ನಾಲ್ಕನೆಯ ಪಾದವಿರುತ್ತದೆ. ಸತ್ಪುರುಷರಿಗೆ ಇದೂಕೂಡ ಎಂದರೆ, ಹೀಗೆ ಶರಣಾಗತನಾದವನ ಒಂದುವೇಳೆ ದೋಷಯುಕ್ತನಾಗಿದ್ದರೂ ಅದನ್ನು ಪರಿಗಣಿಸದೆ, ರಕ್ಷಿಸುವದು ನಿಂದ್ಯವಾದುದಲ್ಲವು, ಅಥವಾ **ದೋಷೋಯದ್ಯಪಿ ತಸ್ಯ ಸ್ಯಾತ್**-ಹಿಂದೆ ಮಾಡಿದ ದೋಷಗಳನ್ನು ಮನಸ್ಸಿನಲ್ಲಟ್ಟಿಲ್ಲವೇ ನೀವು ಅವನಲ್ಲಿ ದೋಷವಿದೆ ಎಂದು ಹೇಳುವಿರಿ, ನಮ್ಮ ಅಭಿಪ್ರಾಯಾನುಸಾರ ಶರಣಾಗತನಲ್ಲಿ ದೋಷವೆಲ್ಲಿಯದು?ಯಾವಾಗ ಶರಣಾಗತನಾದನೋಆಗ **"ಪ್ರಾರಬ್ಧೇತರ ಪೂರ್ವ ಪಾಪನುಖಿಲಂ"** ಎಂಬ ರೀತ್ಯಾ ಎಲ್ಲವೂ ನಾಶವಾಗುವದರಿಂದ ಅವನು ದೋಷಿಯೂ ಅಲ್ಲವು; ಅಂತವನು ಮಹಾ ಸಚ್ಛಬ್ದನು ; ಅಂತವನು ಎಂದಿಗೂ ಪಾಪಕೂಪದಲ್ಲಿ ಬಿದ್ದು ಪಾವಲಿಸ್ತನಾಗನು ; ಹಿಂದೆ ದೋಷಿಯಾಗಿದ್ದನೆಂದು ಬಿಟ್ಟರೇನೇ ಗರ್ಹಿತವೆಂಬುದು,**ಅಗರ್ಹಿತಂ** ಎಂಬ ಪ್ರಯೋಗದಿಂದ ಸೂಚಿತವು ಅಥವಾ **ದೋಷೋ ಯದ್ಯಪಿ ತಸ್ಯಸ್ಯಾತ್**-ಒಂದುವೇಳೆ ಹಿಂದೆ ಶುಂಬಾ ದೋಷಿಯಾಗಿದ್ದನು, ಅಪರಾಧ ಸಾರ್ವಭೌಮನಾಗಿದ್ದನು; ಅಂತವನನ್ನು ರಕ್ಷಿಸಬಹುದೋ, ಹಾಗೆ ಅಂತವನನ್ನೇ ರಕ್ಷಿಸುವದೇ ಸರ್ ಆದ ತನಗೆ ಯಶಸ್ಕರವಾದುದು, ಪುಣ್ಯವಾಡಿದವನನ್ನು ರಕ್ಷಿಸುವದೇನೂ ಅಷ್ಟು ಶ್ಲಾಘ್ಯವಲ್ಲವು, ಮಹಾಪಾಪಿಯನ್ನು ರಕ್ಷಿಸಿದರೇನೇ ಶ್ಲಾಘ್ಯತಮವು. ಅಥವಾ, **"ದೋಷೋ ಯದ್ಯಪಿ ತಸ್ಯ ಸ್ಯಾತ್"**ಹಿತೈಷಿಗಳಾದ ನೀವು ಅವರಿಂದ ನನಗೆಲ್ಲಿ ತೊಂದರೆಯಾಗುತ್ತದೋ ಎಂದು ಶಙ್ಕಿಸುತ್ತಿರಲ್ಲವೆ; ಹಾಗೆ ಒಂದುವೇಳೆ ನನಗೆ ತೊಂದರೆಯೇ ಆಗಲೇನು **ಸತಾಂ – ಕಪೋತಾದಿ** ಶರಣಾಗತಶಾಸ್ತ್ರಮರ್ಯಾದಾಭಿಜ್ಞರಿಗೆ, ಇದು **ಅಗರ್ಹಿತಂ**-ಉಪಾದೇಯವಾದುದೇ; ಭಯಶಙ್ಕಾ ಮೊದಲಾದವುಗಳಿಂದ ಭೀತರಾದ ನಿಮಗೆ ನಿಂದ್ಯವಾಗಿ ತೋರಿದರೂ, ಇತರ ಮಹಾನು ಭಾವರೂ, **ಕಪೋತಾದಿಗಳೂ**, ಅನುಮೋ

ಸ್ಯಾತ್" ಎನ್ನುವುದು, (೩) "ಯದಿವಾ ರಾವಣಸ್ಸ್ವಯಮ್" ಎನ್ನುವುದು

ದಿಸುವರೇವಿನಾ ನಿಂದಿಸುವರಲ್ಲವು; ಅಥವಾ ದುಷ್ಟ ನಿಗ್ರಹ ಶಿಷ್ಟ ಪರಿಪಾಲನಾದಿ ಗಳಿಗಾಗಿಯೇ ಅವತಾರಮಾಡುವ ನೀನು, ಹೀಗೆ ಶರಣಾಗತನೆಂಬ ವ್ಯಾಜದಿಂದ ದುಷ್ಟ ಪರಿಪಾಲನ ಮಾಡಬಹುದೋ ಎಂದರೆ, ಇದು ಸಾಮಾನ್ಯ ಧರ್ಮ ಪ್ರಕರಣವನ್ನು ಕುರಿತ ಆಕ್ಷೇಪವು; ವಿಶೇಷ ಧರ್ಮವಾದ ಶರಣಾಗತ ಪರಿಪಾಲನರೀತ್ಯಾ, ಅಂತಹ ಸಾಮಾನ್ಯ ವಿಶೇಷಧರ್ಮವನ್ನು ಶಾಸ್ತ್ರಮುಖೇನ ಚನ್ನಾಗಿ ತಿಳಿದ, **ಸತಾಂ ಅಗರ್ಹಿತಂ** - ಉಪಾದೇಯವೇ; ಗರ್ಹಿತವಲ್ಲದುದು **ಪೂಜನೀಯವೆಂಬ** ಭಾವವು; ಆದುದರಿಂದ ಸರ್ವಶಕ್ತನಾದ ನನಗೆ ಶರಣಾಗತನ ವಿಷಯದಲ್ಲಿ, **"ನತ್ಯಜೇಯಂ"** ಎಂದು ಹೇಳಬೇಕಾಗಿರುವ ಒಂದು ಅಶಕ್ತತೆಯೂ, ಸರ್ವಜ್ಞನಾದ ನನಗೆ ಆತನ ವಿಷಯದಲ್ಲಿ ದೋಷವು ಕಣ್ಣಿಗೆ ಕಾಣದಿರುವ ಒಂದು ಅವಿಜ್ಞತೆಯೂ ಉಂಟೆಂದು ಈ ಶ್ಲೋಕದಲ್ಲಿ ಸರ್ವೇಶ್ವರನು ಹೇಳಿಕೊಂಡಿರುತ್ತಾನೆ.

(೩) **"ಯದಿವಾ ರಾವಣಸ್ಸ್ವಯಮ್" "ಆನಯೈನಂ ಹರಿಶ್ರೇಷ್ಠ ದತ್ತ ಮಸ್ಯಾಭಯಂಮಯಾ । ವಿಭೀಷಣೋ ವಾ ಸುಗ್ರೀವ ಯದಿವಾ ರಾವಣಸ್ಸ್ವಯಂ"** ಎಂಬುದು ಪೂರಾ ಶ್ಲೋಕವು, **ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂಮಮ** ಎಂಬ ತನ್ನ ಸ್ಥಿರಸಙ್ಕಲ್ಪವನ್ನು **ಶ್ರೀ** ರಾಮಚಂದ್ರ ಪ್ರಭುವು ತಿಳಿಸಿದ ನಂತರ ಹೇಳುವ ಮಾತು. **ಹೇ ಹರಿಶ್ರೇಷ್ಠ**- ಓ ವಾನರ ರಾಜನಾದ ಸುಗ್ರೀವನೇ, **ಏನಂ** - ಶರಣಾಗತನಾಗಿ ಇಲ್ಲಿಗೇನೇ ಬಂದಿರುವ ವಿಭೀಷಣನನ್ನು, **ಆನಯ** - ಕರೆದುಕೊಂಡುಬಾ; ವಾನರ **ರಾಜನೇ** ಬಂದು **ಕರೆದುಕೊಂಡು** ಹೋದನು, ಎಂಬುದರಿಂದ ರಾಮುಗೋಷ್ಠಿಗೆ ಸೇರಿದ ನಿನಗೂ ಮಹಾ ಖ್ಯಾತಿಯೂ ತನ್ಮೂಲಕ ನನಗೂ ಖ್ಯಾತಿಯೂ ಉಂಟಾಗುವದು; ನನಗೆ ಖ್ಯಾತಿ ಹೇಗೆಂದರೆ, ಇಂತಹ ಘನವಾದ ಸಚಿವರನ್ನು ಪುರುಷಕಾರರೂಪದಲ್ಲಿ ಮಧ್ಯದಲ್ಲಿ ನಿಲ್ಲಿಸಿರುತ್ತಾನೆಂಬದಾಗಿ ಯಶಸ್ಸು. ನಿನ್ನನ್ನು ಬಿಲ್ಲವೇ ಪುರುಷಕಾರರೂಪದಲ್ಲಿ ಯಾಚಿಸಿದುದು? ಆದುದರಿಂದ ನೀನೇ ಕರೆದುಕೊಂಡು ಬರತಕ್ಕದ್ದೆಂಬ ಭಾವವು "ಮಹಾ ಪ್ರಾಜ್ಞ"ನಾದ ವಿಭೀಷಣನು ಪರಮ ಭಾಗವತೋತ್ತಮನು, ಅಂತವನಲ್ಲಿ ದೋಷಗಳನ್ನಾರೋಪಿಸಿ ಮೋಸಕೃತ್ಯಗಳನ್ನು ನಡೆಸುವನೆಂದು ಭಾಗವತಾಪಚಾರವನ್ನು ಸಂಪಾದಿಸಿಕೊಂತದ್ದರಿಂದ ತನ್ನಿವೃತ್ತಿಗಾಗಿ ನೀನೇ ಹೋಗಿಕರೆತರುವದೆಂಬುದೂ ಸೂಚಿತವು. ಅಥವಾ ಓ ಸುಗ್ರೀವನೇ

---

(೩) ರಾ. ಯು ೧೮. ೩೬.

ಶೊಲ್ಲುಗಿರ "ರಿಪೂಣಾಮಪಿ ವತ್ಸಲ"ನಾನ ಶರಣ್ಯ ಶರಣಾಗತಗಂಡ್ಯೆಯ

ನನಗೇನೋ ಪರಿಗ್ರಹಿಸಲೇಬೇಕೆಂಬ ಭಾವವು; ನನ್ನ ಸತ್ಯಸಙ್ಕಲ್ಪವೂ ಹಾಗೆಯೇ; ನಿಮಗೆ ಇಷ್ಟವಿಲ್ಲದಿದ್ದರೆ ನನಗೆ ವಿನಸ್ಸಮಾಧಾನವಿಲ್ಲವು; ಆದುದರಿಂದ ನನಗೆ ಸಚಿವರಾಗಿರುವವರಲ್ಲಿ ಅಗ್ರೇಸರನಾದ ನೀನೇ ಹೋಗಿಕರತಂದರೆ ನನಗೆ ಮನಸ್ಸಮಾಧಾನವೆಂಬ ಭಾವವಾಗಲಿ ತೋರುತ್ತದೆ. ನಾನು ಈಗ ಉಪಪಾದಿಸಿದ ಶರಣಾಗತ ಶಾಸ್ತ್ರರೀತ್ಯಾ, ಮಯಾ - ಅಭಯವನ್ನು ಸರ್ವಪ್ರಪನ್ನರಿಗೂ ಏನೋಂದೂ ವ್ಯತ್ಯಾಸವಿಲ್ಲದೆ ಕೊಡುವದೇ ವ್ರತವಾಗಿರುವ ನನ್ನಿಂದ, ಅಸ್ಯ - ಈ ಶರಣಾಗತನಿಗೆ ಅಭಯವು, ದತ್ತಮ್ - ಶರಣಾಗತಿ ಮಾಡಿದ ತತ್ಕ್ಷಣವೇ, ದತ್ತಮ್ - ಕೊಡಲ್ಪಟ್ಟಿತು, ಈಗ ಬಂದಿರುವವನು, ವಿಭೀಷಣೋವಾ-ವಿಭೀಷಣೋವಾ ಧರ್ಮಾತ್ಮಾ ಎಂದೂ, ವಿಭೀಷಣೋ ಮಹಾಪ್ರಾಜ್ಞಃ ಎಂದೂ, ಹೇಳಿರುವ ಮೇರಿಗೆ ಕರ್ಮನಿಷ್ಠೆ ಜ್ಞಾನನಿಷ್ಠೆಗಳಿಂದ ಯುಕ್ತನಾಗಿ ಸತ್ವಗುಣಾಧಿಕ್ಯವುಳ್ಳ ವಿಭೀಷಣನೇಯಾಗಿರಲಿ ಅಥವಾ ಯದಿ ವಾ ರಾವಣಸ್ವಯಂ - ಮಾಯಾವಿಯಾಗಿ ನೃಶಂಸನಾಗಿ ದಾರುಣನಾಗಿ ಮಹಾಪಾಪಿಯಾಗಿರುವ ರಾವಣನೇ ಈ ವೇಷದಲ್ಲಿ ದುಷ್ಟಾಭಿಪ್ರಾಯಯುಕ್ತನಾಗಿ ತಾನೇ ಬಂದಿರಲಿ, ಗ್ರಾಹ್ಯವೇ ಸರಿ; ಅಥವಾ ಹಾಗೆ ರಾವಣನೇ ಬಂದು ಒಂದುವೇಳೆ ಶರಣಾಗತನಾದರೆ ಇನ್ನೂ ಉತ್ತಮವೇ, ಏಕೆಂದರೆ ಈ ವಿಭೀಷಣನು ತನ್ನವರೆಂದು ನಾಲ್ಕು ಜನರನ್ನು ಮಾತ್ರ ಕರೆದುಕೊಂಡು ಬಂದಿರುವದರಿಂದ ಈ ಐದು ಜನಮಾತ್ರ ರಕ್ಷಿಸಲ್ಪಡುವರು, ರಾವಣನೇ ಬಂದು ಶರಣಾಗತನಾದರೆ ತನ್ನ ಲಂಕಾರಾಜ್ಯದ ಎಲ್ಲಾ ಜನರ ರಕ್ಷಣೆಗಾಗಿ ಪ್ರಾರ್ಥಿಸಬಹುದಾದುದರಿಂದ ನನ್ನ ಉದಾರಭಾವವು ಅತ್ಯಂತವಾಗಿ ಶೋಭಿಸುವದೆಂಬ ಭಾವವೂ ದ್ಯೋತಿತವು; ಅಥವಾ ಸತ್ವಗುಣ ನಿಧಿಯಾಗಿರುವ ವಿಭೀಷಣ ರಕ್ಷಣೆಗಿಂತ ಮಹಾಪರಾಧಿಯಾದ ರಾವಣನ ರಕ್ಷಣೆಯು ತನ್ನ ಉದಾರಭಾವಕ್ಕೆ ವಿಶೇಷ ಭಾಸಮಾನತ್ವವನ್ನುಂಟು ಮಾಡುವದೆಂಬ ತಾತ್ಪರ್ಯವೂ ಸೂಚಿತವು; ಅಂತೂ ಹೇಗಾದರೂ ಆಗಲಿ ನನ್ನ ವ್ರತಾನುಸಾರ ಕರೆದುಕೊಂಡುಬಾರೈಯ್ಯಎಂದು ಹೇಳಿದನು.

ಹೀಗೆ ಈ ಮೂರು ಪ್ರಮಾಣಗಳಿಂದಲೂ ತೋರುವದು ಏನೆಂದರೆ ಕರುಣಾಕರನಾದ ಸರ್ವೇಶ್ವರನಲ್ಲಿ ಪ್ರಣತನಾಗಿ ಶರಣಾಗತಿಮಾತ್ರ ಮಾಡಿದರೆ ಸಾಕು; ಈ ಶರಣಾಗತನು ಎಂತವನೇ ಆಗಲಿ ಆತನನ್ನು ರಕ್ಷಿಸಿಬಿಡುತ್ತೇನೆಂದುದೃಢ ಸಙ್ಕಲ್ಪಯುಕ್ತನಾಗಿರುವವನು; ಆತನು ಎಷ್ಟೇ ಅಪರಾಧಿಯಾಗಿ ಮಹಾ ಪಾಪಿಯಾಗಿ

ದೋಷಜ್ಞಳೈಪ್ಪಾರ್ಕ್ಕುಮೋ?"ಅನಾಲೋಚಿತವಿಶೇಷಾಶೇಷಲೋಕಶರಣ್ಯ" ಎನ್ನುನ್ನೋ ಪೂರ್ವರುಗಳ್ ಪಾಶುರಮ್ ? ಆಗ್ಯೈಯಾಲ್ ಇವೈ ಸಂಭಾವಿತ ಸ್ವ ಭಾವಜ್ಞಳಾ ಮಿತ್ತನೈಯನ್ರೋ ? ಎನ್ರುಶಿಲರ್‌ಶೊಲ್ಲುವರ್‌ಗಳ್.

ದ್ದರೂ ಚಿಂತೆಯಿಲ್ಲವು ; ರಕ್ಷಿಸಿಬಿಡುವೆನೆಂಬ ದೀಕ್ಷಾವ್ರತದಲ್ಲಿರುವಾಗ, ಅನುಕೂಲ್ಯಾದಿ ಪರಿಕರಗಳನ್ನು ಅಪೇಕ್ಷಿಸುವನೋ ಎಂದು ಪೂರ್ವಪಕ್ಷವನ್ನು ಸಪಾದಿಸಿ, ಆದಕ್ಕೆ ಸಮಾಧಾನವನ್ನು ಅನುಗ್ರಹಿಸುತ್ತಾರೆ. ಎನ್ರುಮ್ ಶೊಲ್ಲುಗಿರ - ಎಂದು ಮೇಲಿನ ಮೂರು ಪ್ರಮಾಣಗಳಲ್ಲಿ ತೋರಿಬರುವ, **ರಿಪೂಣಾಮಪಿವತ್ಸಲನಾನ** - ಶತ್ರುಗಳಲ್ಲೂ ವಾತ್ಸಲ್ಯವನ್ನು ತೋರಿಸುವ, ಆದರೆ ಸ್ವಾವಿಗೆ ಯಾರೂ ಶತ್ರುಗಳು ಇಲ್ಲನೇ ಇಲ್ಲವು, ಮಹರ್ಷಿಗಳಲ್ಲಿ ಮಾಡಿದ ಅಕ್ರಮಕ್ಕಾಗಿ ಶಾಪಮೂಲಕ ರಿವುಗಳಾಗಿ ಪರಿಣಮಿಸಿದರೇವಿನಾ ಅತನಿಗೆ ವಾಸ್ತವವಾಗಿಯೂ ಯಾರೂ ಶತ್ರುಗಳಿಲ್ಲವ ; ಇಮೂ ಅಲ್ಲದೆ ಈತನಿಗೆ ಶತ್ರುಗಳು ಯಾರೆಂದರೆ, ತನ್ನ ಆಜ್ಞೆಗಳನ್ನು ಮೀರಿದ ಕೃತ್ಯಾಕರಣಾಕೃತ್ಯಕರಣರೂಪದೋಷವುಳ್ಳವರು **ತನ್ನ ಆಜ್ಞೆಗಳನ್ನು** ಶಿರಸಾವಹಿಸಿ ಆಶ್ರಯಿಸಿದ ಶಿಷ್ಟರಿಗೆ ಶತ್ರುಗಳಾದ ದುಷ್ಕರ್ಮಿಗಳು ; ಅಂತವರ ವಿಷಯದಲ್ಲೂ ಕೂಡ ವಾತ್ಸಲ್ಯಯುಕ್ತನು. ಶ್ರೀರಾಮನು ತನ್ನ ಶತ್ರುವಾದ ರಾವಣನು ಶರಣಾಗತನಾದರೂ ರಕ್ಷಿಸಿ ಬಿಡುವದಾಗಿ"**ಯದಿವಾ ರಾವಣಸ್ಸ್ವಯಂ**"ಎಂದು ಹೇಳಿದನು. ಮತ್ತು, ದುರ್ಯೋಧನನು ಪಾಂಡವರಿಗೆ ರಾಜ್ಯವನ್ನು ಕೊಟ್ಟುಬಿಟ್ಟು ಸಂಧಿಮಾಡಿಕೊಂಡರೆ ಮನ್ನಿಸಿಬಿಡುವದಾಗಿ ಮೊದಲು ಹೇಳಿಕಳುಹಿಸಿ,ಅನಂತರ ತಾನೇ ಹೋಗಿ ನಾಶವನ್ನು ತಪ್ಪಿಸಬೇಕೆಂದು ಪ್ರಯತ್ನಮಾಡಿದುದರಿಂದ **ರಿಪೂಣಾಮಪಿವತ್ಸಲನು**,ಇಂತಹ ಶರಣ್ಯ-ಶರಣಾಗತನಾದರೆಸಾಕು ರಕ್ಷಿಸಿಬಿಡುವನೆಂದಿರುವನು, **ಶರಣಾಗತನ ಡೈಯು ದೋಷಜ್ಞಳೈಪ್ಪಾರ್ಕ್ಕುವೋ**-ಶರಣಾಗತನಲ್ಲಿ ಆನುಕೂಲ್ಯ ಸಜ್ಕಲ್ಪ, ಪ್ರಾತಿಕೂಲ್ಯವರ್ಜನಾದಿಪರಿಕರಗಳಿಲ್ಲವೆಂಬ ದೋಷಗಳನ್ನು ಪರಿಗಣಿಸುವನೋ?"**ಅನಾಲೋಚಿತ ವಿಶೇಷಾಶೇಷಲೋಕಶರಣ್ಯ**"-"ಶರಣಾಗತನಲ್ಲಿ ಯಾವವಿಧವಾದ ವಿಶೇಷಗಳನ್ನೂ ನೋಡದವನಾಗಿರುವ ಎಲ್ಲಾ ಲೋಕಕ್ಕೂ ರಕ್ಷಕನು", **ಎನ್ನ ನ್ರೋ**-ಎಂದಲ್ಲವೇ, **ಪೂರ್ವರುಗಳ್ ಪಾಶುರಮ್**-ಪೂರ್ವಾಚಾರ್ಯರುಗಳಾದ ಶ್ರೀಭಾಷ್ಯಕಾರಪ್ರಭೃತಿಗಳ ದಿವ್ಯಸೂಕ್ತಿಯು? **ಆಗ್ಯೈಯಾಲ್**-ಈಮೇಲಿನ ಕಾರಣಗಳಿಂದ ಎಂದರೆಶತ್ರುಗಳಿಗೂ ವಾತ್ಸಲ್ಯಯುಕ್ತನಾಗಿ, ಶರಣಾಗತರೆಲ್ಲಾ ಸಮರಾಗಿ ಅವರಲ್ಲಿ ಏನೊಂದು ವಿಶೇಷವನ್ನೂ ಆ ಕರುಣಾಸಾಗರನು ನೋಡುವದಿಲ್ಲವಾದುದರಿಂದ, ಇವೈ - ಈ ಆನುಕೂಲ್ಯಸಜ್ಕ

ಇದುಕ್ಕು ಪ್ರಪತ್ತು ೃತ್ತರಕಾಲತ್ತಿಲ್ ಆನುಕೂಲ್ಯಾದಿ ಗಳ್ ಅನು ವರ್ತಿಯಾದೊಳಿಯಿಲುಮ್ ಪ್ರತಿಸಮಾಧಾನಂ ಪಿರನ್ದು ಪ್ರಪತ್ತಿ ಫಲ

ಲ್ಪಾದಿ ಪರಿಕರಗಳು, **ಸಂಭಾವಿತ ಸ್ವಭಾವಜ್ಞಾನಮ್** - ಆ ಶರಣಾಗತನಾದ ಪ್ರಪನ್ನನಲ್ಲಿ ಆ ಕಾಲದಲ್ಲಿ ತಾನಾಗಿಯೇ ವ್ಯಾಪ್ತವಾಗುವ ಸ್ವಭಾವಗಳಾಗುವುವು; ಅವುಗಳೇನೂ ಶರಣಾಗತಿಗೆ ಅಙ್ಗವಾಗಿ ಬೇಕಿಲ್ಲವು, ಆಕಾಲದಲ್ಲಿ ಅಂತವನು ಅಂತಹ ಆನುಕೂಲ್ಯಾದ್ಯವನ್ವೆಯುಳ್ಳವನಾಗಿ ಆಗುವನು; **ಇತ್ತನೆಯನ್ನೋ** - ಇಷ್ಟುಮಾತ್ರವೇ ಇಲ್ಲವೋ? **ಎನ್ರು** - ಎಂಬದಾಗಿ, **ಶಿಲರ್** - ಕೆಲವು ಪೂರ್ವ ಪಕ್ಷಿಗಳು, **ಶೊಲ್ಲುವರ್ಗಳ್** - ಹೇಳುವರು; ಎಂದರೆ ಈ ಪರಿಕರಗಳು ಅವಶ್ಯಕವಾಗಿ ಆ ಕಾಲದಲ್ಲಿ ಶರಣಾಗತನಲ್ಲಿ ಇರಬೇಕೆಂದು ನೀವು ಪರಿಕರ ವಿಭಾಗಾಧಿಕಾರದಲ್ಲೂ ಸಾಙ್ಗಪ್ರಪದನಾಧಿಕಾರದಲ್ಲೂ ಉಪಪಾದಿಸಿದ ಹಾಗಲ್ಲವೆಂಬುದು **ಪೂರ್ವ** ಪಕ್ಷಿಯ ಅಭಿಪ್ರಾಯವು.

ಇದಕ್ಕೆ ಮುಂದಿನ ವಾಕ್ಯದಿಂದ ಸಮಾಧಾನವನ್ನು ಹೇಳುತ್ತಾರೆ. ಮೇಲೆ ಉದಾಹರಿಸಿದ ಮೂರು ಪ್ರಮಾಣಗಳಲ್ಲೂ ಈ ಪರಿಕರಗಳು ಬೇಡವೆಂದು ಇವುಗಳಲ್ಲೇನೂ ಹೇಳಿಲ್ಲವು. ಶರಣಾಗತಿಯೇ ಸಾಙ್ಗಪ್ರಪದನವಾದುದರಿಂದ ಯಾವಾಗ ಶರಣಾಗತಿಯು ಮಾಡಲ್ಪಟ್ಟಿತೋ, ಆಗ ಸಾಙ್ಗವಾಗಿಯೇ ಅನುಷ್ಠಿಸಲ್ಪಟ್ಟಿತೆಂಬ ಭಾವವು. ಲೋಕದಲ್ಲೂ ಕೂಡ ಶರಣಾಗತನಾಗುವವನಿಗೆ ಆನುಕೂಲ್ಯಾದಿ ಪರಿಕರಗಳಿಂದ ಯುಕ್ತವಾದ ಭಾವವನ್ನೇ ಕಂಡಿರುವುದರಿಂದ, ಅಂತಹ ಪರಿಕರಗಳಿಲ್ಲದೆ ಶರಣಾಗತಿಯಾಗುವುದೇ ಇಲ್ಲವು. ಆದುದರಿಂದ ಕೆಲವು ಮಹನೀಯರೂ ಕೂಡ ಇಂತಹ ಪೂರ್ವಪಕ್ಷವನ್ನು ಮಾಡುವುದರಿಂದ ಅದಕ್ಕೇನಾದರೂ ಒಂದು ವಿಧವಾಗಿ ಸಮಾಧಾನವನ್ನು ಹೇಳಬೇಕೆಂಬಭಿಪ್ರಾಯದಿಂದ ಅಂತಹ ಪರಿಕರಗಳು ಪ್ರಪತ್ತು ೃತ್ತರಕಾಲದಲ್ಲೂ ಇರಬೇಕು; ಆದರೆ ಅವುಗಳು ಇದ್ದೇ ತೀರಬೇಕೆಂಬ ಆವಶ್ಯಕತೆಯು ಇಲ್ಲವು; ಒಂದುವೇಳೆ ಇಲ್ಲದಿದ್ದರೂ ಕಡೆಗೆ ಪರಿತಾಪಾದಿಗಳುಂಟಾಗಿ ಅವುಗಳನ್ನವಲಂಬಿಸಿದವನಾಗುತ್ತಾನೆ, ಅಂತೂ ಮೋಕ್ಷ ಪ್ರಾಪ್ತಿಯುಂಟಾಗುವದಕ್ಕೆನೂ ಅಭ್ಯಂತರವಿಲ್ಲವೆಂದು ಸಮಾಧಾನವನ್ನು ಹೇಳುತ್ತಾರೆ. **ಇದುಕ್ಕು** - ಈ ಅಭಿಪ್ರಾಯಕ್ಕೆ ಎಂದರೆ ಆನುಕೂಲ್ಯಾದಿ ಪರಿಕರಗಳ ಪೇಕ್ಷೆಯು ಶರಣಾಗತಿಗೆ ಬೇಕಿಲ್ಲವೆಂಬಭಿಪ್ರಾಯಕ್ಕೆ, **ಪ್ರಪತ್ತು ೃತ್ತರ ಕಾಲತ್ತಿಲ್** ಶರಣಾಗತಿ ಮಾಡಿದ ಉತ್ತರಕಾಲದಲ್ಲಿ ಆನುಕೂಲ್ಯ ಸಙ್ಕಲ್ಪಾದಿ ಪರಿಕರಗಳು, **ಅನುವರ್ತಿಯಾದೊಳಿಯಿಲುಮ್** - ಶರಣಾಗತಿಕಾಲದಲ್ಲಂತು ಅವ

ಮುನ್ ಕುರ್ಯೆವತ್ತಿರುಕ್ಕು ಮೆನ್ಗಿಲ ಯಿಲೇ ತಾತ್ಪರ್ಯಂ ಕೊಳ್ಳಲಾಮ್. ಇಜ್ಗಿನಲ್ಲಾದಪೋದು (೧) "ಷಡ್ವಿಧಾ ಶರಣಾಗತಿಃ" ಎನ್ಬುದುಮ್, (೨) "ನ್ಯಾಸಃ ಪಂಚಾಂಗ ಸಂಯುತಃ" ಎನ್ಬುದುಮ್ (೩) "ಸ್ವಾಜಿಕ್ಷ್ಯಃ

ಶ್ಯಕವಾಗಿ ಇದ್ದುದು ಅನಂತರವೂ ಅನುವರ್ತಿಸಿಕೊಂಡು ಒಂದುವೇಳೆ ಬಾರದೇ ಇದ್ದರೆ, ಇದರಿಂದ ಪ್ರಪನ್ನನಿಗೆ ಅವು ಸಾಧಾರಣವಾಗಿ ಅನುವರ್ತಿಸಿ ಬಂದೇ ಬರುತ್ತವೆಂಬ ಭಾವವು; ಹಾಗೆ ಒಂದುವೇಳೆ ಬಾರದಪಕ್ಷದಲ್ಲಿ, **ಪ್ರತಿಸಮಾಧಾನಂ ಸಿರನ್ದು** - ಅನುತಾಪ, ಪ್ರಾಯಶ್ಚಿತ್ತ ಉಪರಮಗಳು ಉಂಟಾಗಿ, **ಪ್ರಪತ್ತಿ ಫಲಮುಮ್ ಕುರ್ಯೆ ವತ್ತಿರುಕ್ಕುಮ್** - ಶರಣಾಗತಿ ಮಾಡಿದುದರಫಲವು ಏನೊಂದೂ ನ್ಯೂನತೆಯನ್ನು ಹೊಂದುವದಿಲ್ಲವು, **ಎನ್ಗಿಲ್ ಯಿಲೇ**- ಎಂದು ಹೇಳುವದರಲ್ಲಿ, **ತಾತ್ಪರ್ಯಂ ಕೊಳ್ಳಲಾಮ್** - ಅಭಿಪ್ರಾಯವನ್ನಾಗಿ ಅಙ್ಗೀಕರಿಸಬಹುದು, ಪ್ರಪತ್ತ್ಯುತ್ತರಕಾಲದಲ್ಲೂ ಈ ಪರಿಕರಗಳು ಇರಬೇಕೆಂಬುದು ಹಿಂದೆಯೇ ಉಪದೇಶಿಸಲ್ಪಟ್ಟಿತು. (೧,೧೧೬) ನೆಯ ಪುಟವನ್ನು ಪರಾಂಬರಿಸಿ. ಅವುಗಳಿಲ್ಲದೆ ಈತನು ಅಪರಾಧಗಳಿಗೆ ಗುರಿಯಾವರೆ ಪರಿತಾಪಾದಿಗಳುಂಟಾಗಿ, ಕಡೆಗೆ ಈ ಪರಿಕರಗಳುಂಟಾಗಿ, ಮುಂದೆ ಅಪರಾಧಗಳಿಂದ ಉಪರಮವನ್ನು ಹೊಂದಿದವನಾಗಿ, ಕಡೆಗೆ ಹೇಗಿದ್ದರೂ ಶರಣ್ಯನ ವಾಗ್ದಾನಕ್ಕೆ ಏನೊಂದೂ ನ್ಯೂನತೆಯಿಲ್ಲದೆ ಮೋಕ್ಷವನ್ನು ದೇಹಾವಸಾನದಲ್ಲೇ ಹೊಂದುವನೆಂಬ ಭಾವವು. ಅದುದರಿಂದ ಮಹನೀಯರ ಆಕ್ಷೇಪಕ್ಕೆ ಪ್ರಪನ್ನೋತ್ತರಕಾಲದಲ್ಲಿ ಯಾವಾಗಲೂ ಅವು ಇರಬೇಕೆಂಬ ನಿಯಮವಿಲ್ಲವೆಂದೂ, ಅವರಿಂದ ಮೋಕ್ಷಕ್ಕೇನೂ ಅಪ್ಯಂತರವಿಲ್ಲವೆಂದೂ ಭಾವಿಸತಕ್ಕದ್ದೆಂಬ ತಾತ್ಪರ್ಯವೆಂದು ಉಪದೇಶಿಸಿದರು; ಆದರೆ ಶರಣಾಗತ್ಯನುಷ್ಠಾನಕಾಲದಲ್ಲಾದರೋ ಆನುಕೂಲ್ಯಾದಿ ಪರಿಕರಗಳು ಅವಶ್ಯಕವಾಗಿರತಕ್ಕದ್ದೆಂಬುದು ಸ್ಥಾಪಿತವು.

ಆದರೆ ಹಾಗೆ ಆಕ್ಷೇಪಿಸುವರ ಅಭಿಪ್ರಾಯವನ್ನೇ ಅಙ್ಗೀಕರಿಸಿದರೆ ತೊಂದರೆಯೇನು? ಎಂದರೆ, ಅವರಿಂದುಂಟಾಗುವ ಮುಂದೆ ಉದಾಹರಿಸುವ ಅಹಿರ್ಬುಧ್ನ್ಯ ಸಂಹಿತೆ ಮತ್ತು ಲಕ್ಷ್ಮೀತಂತ್ರಾದಿಗಳಿಗೆ ವಿರುದ್ಧವಾಗುತ್ತದೆಂಬ ಅನುಪಪತ್ತಿಯನ್ನು ಮುಂದೆ ಪ್ರದರ್ಶಿಸುತ್ತಾರೆ:—**ಇಜ್ಗಿನಲ್ಲಾದಪೋದು** – ಈಗ ನಾವು ಹೇಳಿದಹಾಗೆ ಸಮಾಧಾನವನ್ನು ಕಲ್ಪಿಸದಿದ್ದರೆ "**ಷಡ್ವಿಧಾಶರಣಾಗತಿಃ ಎಂದೂ**" ಮತ್ತು "**ನ್ಯಾಸಃಪಂಚಾಂಗಸಂಯುತಃ**" ಎಂದೂ "**ಸ್ವಾಂಗೈಃ ಪಂಚಭಿರಾ**

---

(೧) ಅಹಿ. ೩೭. ೨೪ (೨) ಲ. ತ. ೧೭. ೭೪. (೩) ಲ ತ ೨೪.೭.

ಪಂಚಭಿರಾವೃತಾಮ್" ಎನ್ನುವ್ ಅಜ್ಞಾಜ್ಞಿಗಳೈ ವಿಭಜಿತ್ತು ಚ್ಛೊಲ್ಲುಗಿರ ಪಲಪ್ರಮಾಣಙ್ಗಳುಕ್ಕುಮ್ ವಿರುದ್ಧಮ್. ಲೋಕತ್ತಿಲ್ ರಕ್ಷ್ಯದ್ರವ್ಯ ಸಮರ್ಪಣ ಮರ್ಯಾದೈಕ್ಕುಮ್ ಪೊರುನ್ದಾದೆನ್ರುಮ್ ಇವ್ವಙ್ಗಳುಡೈಯ ಸಕೃತ್ಕರಣಾದಿ ಪ್ರಕಾರಙ್ಗಳುಮ್ ಮುನ್ಪೇ ಶೊನ್ನೋಮ್.

ವೃತಾಂ" ಎಂದೂ, **ಅಜ್ಞಾಜ್ಞಿಗಳೈ ವಿಭಜಿತ್ತು** - ಅಜ್ಞಗಳನ್ನೂ **ಅಜ್ಞಾ**ಯನ್ನೂ ವಿಭಾಗಿಸಿ, **ಶೊಲ್ಲುಗಿರ** - ಹೇಳುವ **ಪಲಪ್ರಮಾಣಙ್ಗಳುಕ್ಕುಮ್** - ಹಲವು ಪ್ರಮಾಣಗಳಿಗೂ, **ವಿರುದ್ಧಮ್** - ವಿರುದ್ಧವಾದುದು ಆಗುತ್ತದೆ. ಈ ಮೂರು ಪ್ರಮಾಣಗಳಲ್ಲಿ (೨) ಮತ್ತು (೩) ನೆಯದರಲ್ಲಿ ಐದು **ಅಜ್ಞ**ಗಳು. **ನ್ಯಾಸ** ಅಥವಾ **ಪ್ರಪತ್ತಿಯು "ಅಙ್ಗಿ**ಯೆಂದೂ **ಅಜ್ಞಾಜ್ಞಿಗಳೈ ವಿಭಜಿತ್ತು"** ಅಜ್ಞಾಜ್ಞಿಗಳನ್ನು ಪ್ರತ್ಯೇಕಿಸಿ ಹೇಳಿರುತ್ತದೆ. **ಷಡ್ವಿಧಾಶರಣಾಗತಿಃ** ಎಂಬಲ್ಲಿ ಹಾಗೆ ಎಲ್ಲಿ ವಿಭಾಗಿಸಿದೆ ಎಂದಾಕ್ಷೇಪಿಸಿದರೆ, ಅವಿನಾಭೂತವಾಗಿ ಅಜ್ಞಾಜ್ಞಿಗಳ ಸಮುಚ್ಚಯವು ಬಹುವ್ರೀಹಿಯಿಂದ ವಿವರ್ಪಟ್ಟು ಆವುಗಳು ಯಾವುವು ಎಂಬುದನ್ನು ತಿಳಿಸಿ ಅಙ್ಗಿಯುಕ್ತ ಆತ್ಮನಿಕ್ಷೇಪವೇ ಶರಣಾಗತಿ ಎಂದು ಹೇಳಿರುವದರಿಂದ ಅಜ್ಞಾಜ್ಞಿಗಳ ವಿಭಜನವು ವ್ಯಕ್ತವೆಂದು ಹೇಳಬಹುದು ಆ ಕಾಲದಲ್ಲಿ ಎಂದರೆ ಭರನ್ಯಾಸದ ಸಕೃದನ ಷ್ಠಾನದ ಕಾಲದಲ್ಲಿ ಅವಿನಾಭೂತತ್ವವು ಉಂಟು. ಏಕೆಂದರೆ ಇಲ್ಲವಾದರೆ ಅದು ಶರಣಾಗತಿಯೇ ಆಗುವದಿಲ್ಲವೆಂಬ ಭಾವವು. ಆದರೆ ಭರನ್ಯಾಸೋತ್ತರಕಾಲದಲ್ಲೂ ಅನುವರ್ತಿಸಬೇಡವೋ ? ಎಂದರೆ ಅನುವರ್ತಿಸತಕ್ಕದ್ದೇನೋ ಯುಕ್ತವು. ಆದರೆ ಆಗ ಮಾಡಿದ ಭರನ್ಯಾಸಕ್ಕೆ ಅಂಗತ್ವೇನ ಅಲ್ಲವು, ಏಕೆಂದರೆ ಅವು ಯಾವುದಾದರೂ ಇಲ್ಲವಾದರೆ ಮೋಕ್ಷಪ್ರಾಪ್ತಿಗೆ ಪ್ರತಿಬಂಧಕವಾಗುವದಿಲ್ಲವು. ಸರ್ವೇಶ್ವರನು ಆ ಅಜ್ಞವು ಪುನಃ ಉದಿಸುವಹಾಗೆ ಮಾಡಿ ದೇಹಾವಸಾನದಲ್ಲಿ ಮುಕ್ತಿಯೆನ್ನೀಯುವನೆಂಬುದು ತಾತ್ಪರ್ಯವು. ಈ ಮೇಲಿನ ಅಹಿರ್ಬುಧ್ನ್ಯ ವಾಕ್ಯ ಲಕ್ಷ್ಮೀತಂತ್ರವಾಕ್ಯಗಳ ಅರ್ಥಗಳು ವಿಶದವಾಗಿ ಹಿಂದೆ ಪರಿಕರವಿಭಾಗಾಧಿಕಾರದಲ್ಲಿ ಉಪಪಾದಿಸಲ್ಪಟ್ಟಿವೆ. ೪೫೨-ಳ ಪುಟಗಳನ್ನು ನೋಡಿ **"ಸ್ವಾಂಗೈ ಪಂಚಭಿರಾವೃತಾಂ"** ಎಂಬುದೂ ಲಕ್ಷ್ಮೀತಂತ್ರವಾಕ್ಯವು, ಸಾಧ್ಯೋಪಾಯ ಶೋಧನಾಧಿಕಾರದಲ್ಲಿ ವ್ಯಾಖ್ಯಾನ ಮಾಡಲ್ಪಟ್ಟಿರುತ್ತದೆ, **ಲೋಕತ್ತಿಲ್** - ಲೋಕದಲ್ಲೂ, **ರಕ್ಷ್ಯದ್ರವ್ಯ ಸಮರ್ಪಣಮರ್ಯಾದೈಕ್ಕುಂ**-ರಕ್ಷಿಸಲು ಯೋಗ್ಯವಾದ ದ್ರವ್ಯವನ್ನು ಸಮರ್ಪಿಸುವ ಮರ್ಯಾದೆಗೂ ಸಹ, **ಪೊರುನ್ದಾದು**-ಸಮಂಜಸವಾದುದಾಗುವದಿಲ್ಲವೆಂದೂ, **ಇವ್ವಙ್ಗಳುಡೈಯ ಸಕೃತ್ಕರಣಾದಿಪ್ರಕಾರಙ್ಗಳುಮ್**-ಈ ಐದು

ಪ್ರಪತ್ತಿಃ ಬ್ರಹ್ಮಾಸ್ತ್ರತುಲ್ಯಾಯದಿ ಕಥಮ್ ಪರಾಪೇಕ್ಷ ರೂಪಾಙ್ಗ ಸಾಪೇಕ್ಷಾ ?

ಬ್ರಹ್ಮಾಸ್ತ್ರಮುನ್ ಸ್ವಾಙ್ಗ ಸಾಪೇಕ್ಷಮಾಯಿರೇ ಯಿರುಪ್ಪದು ;

ಅಂಗಗಳೂ ಒಂದೇಸಲ ಭರನ್ಯಾಸಾನುಷ್ಠಾನ ಕಾಲದಲ್ಲಿ ಮಾತ್ರ ಆವಶ್ಯಕವೆಂಬಿವೇ ಮೊದಲಾದ ಪ್ರಕಾರಗಳನ್ನೆಲ್ಲಾ, ಇಲ್ಲಿ "ಆದಿ" ಶಬ್ದದಿಂದ ಪ್ರಯೋಜನವು ಹೇಳಲ್ಪಟ್ಟತು, ಮುನ್ಪೇ - ಹಿಂದೆ, ಪರಿಕರ ವಿಭಾಗ ಸಾಙ್ಗಪ್ರಪದನಾಧಿಕಾರಗಳಲ್ಲಿ, ಶೊನ್ನೋಮ್ -- ಹೇಳಿದೆವು. ರಕ್ಷ್ಯವಾದ ದ್ರವ್ಯವನ್ನು ಶಕ್ತನಲ್ಲಿ ಸಮರ್ಪಿಸುವ ಕಾಲದಲ್ಲಿ ಅನುಕೂಲ್ಯಸಙ್ಕಲ್ಪವೂ, ಪ್ರಾತಿಕೂಲ್ಯವನ್ನು ಬಿಡೋಣವೂ ರಕ್ಷಿಸುತ್ತಾನೆಂಬ ವೂರ್ಣನಂಬಿಕೆ ಮೊದಲಾದವುಗಳು ಹೇಗೆ ಆವಶ್ಯಕವೋ, ಹಾಗೆಯೇ ಈ ಆತ್ಮಸಮರ್ಪಣ ಕಾಲದಲ್ಲಿ ಮಾತ್ರ ಅವು ಅವಶ್ಯಕವೆಂದು ಭಾವಿಸತಕ್ಕದ್ದೆಂದು ಹಿಂದೆ ೯೭ನೆಯ ಪುಟದಲ್ಲಿ ಹೇಳಲ್ಪಟ್ಟತು. ಉತ್ತರಕಾಲದಲ್ಲಿ ಅವುಗಳೇನೋ ಇರತಕ್ಕದ್ದು, ಆದರೆ ಅಙ್ಗಗಳ ಹಾಗೆ ಆವಶ್ಯಕವಲ್ಲವೆಂದೂ ಹಿಂದೆ ಸಾಙ್ಗಪ್ರಪದನಾಧಿಕಾರದಲ್ಲಿ ಹೇಳಲ್ಪಟ್ಟಿತು. (೧೧೧೬ನೆಯ ಪುಟವನ್ನು ನೋಡಿ.)

ಪ್ರಪತ್ತಿಯು ಬ್ರಹ್ಮಾಸ್ತ್ರ ಸಮಾನವಾಗಿರುವಾಗ, ಅನ್ಯಾಪೇಕ್ಷೆ ರೂಪವಾದ ಅಙ್ಗಸಾಪೇಕ್ಷತೆಯು ಹೇಗೆ ?

ಹಿಂದೆ ಶರಣಾಗತಿಯ ಕಾಲದಲ್ಲಿ ಪ್ರಪತ್ತಿಗೆ ಅನುಷ್ಠಾನಕಾಲದಲ್ಲಿ ಅಙ್ಗಗಳ ಅಪೇಕ್ಷೆಯುಂಟೆಂದು ಸ್ಥಾಪಿಸಲ್ಪಟ್ಟತು. ಆದರೆ ಸನತ್ಕುಮಾರ ಸಂಹಿತಾವಾಕ್ಯದಲ್ಲಿ, ಪ್ರಪತ್ತಿಗೆ ಪರಾಪೇಕ್ಷೆಯಿಲ್ಲವೆಂದು ಹೇಳಿದೆಯಲ್ಲಾ ಎಂದರೆ, ಅಙ್ಗಗಳಪೇಕ್ಷೆಯಿಲ್ಲವೆಂದು ಆ ಪ್ರಮಾಣವು ಹೇಳುವದಿಲ್ಲವು, ಆದುದರಿಂದ ಅದರ ಸರಿಯಾದ ಅಭಿಪ್ರಾಯವೇನೆಂಬುದನ್ನು ಉಪದೇಶಿಸುತ್ತಾರೆ. ಬ್ರಹ್ಮಾಸ್ತ್ರಕ್ಕೆ ಅಙ್ಗಗಳ ಅಪೇಕ್ಷೆ ಹೇಗೆ ಇಲ್ಲವೋ ಹಾಗೆ ಪ್ರಪತ್ತಿಗೂ ಅಙ್ಗಗಳ ಅಪೇಕ್ಷೆಯು ಬೇಕಿಲ್ಲವೆಂಬುದು ವೂರ್ವಪಕ್ಷವು, ಅದನ್ನು ಖಂಡಿಸುತ್ತಾರೆ :—ಬ್ರಹ್ಮಾಸ್ತ್ರಮುನ್- ಬ್ರಹ್ಮಾಸ್ತ್ರವೂ ಕೂಡ, ಸ್ವಾಙ್ಗಸಾಪೇಕ್ಷವಾ ಯಿರೇ – ತನಗೆ ಬೇಕಾದ ಅಙ್ಗಗಳ ಸಾಪೇಕ್ಷವಾಗಿಯೇ, ಯಿರುಪ್ಪದು – ಇರುತ್ತದೆ. ಬ್ರಹ್ಮಾಸ್ತ್ರಬಂಧನವು ಇತರವಿಧ ಬಂಧನವನ್ನು ಸಹಿಸುವದಿಲ್ಲವೆಂದೂ, ಇತರ ಬಂಧನ

ಉಂಟಾದರೆ ತನಗೆ ಅವಮಯಾರ್ದೆಯಾಯಿತೆಂದು ತಿಳಿದು ಬಿಟ್ಟುಬಿಡುತ್ತ ದೆಂದು "ಅಸ್ತ್ರಬಂಧಸ್ಸಚಾನ್ಯಂಹಿ ನಬಂಧ ಮನುವರ್ತತೇ" (ರಾಮಾ. ಸುಂ. ೪೮. ೪೯.) ಎಂದು ಹೇಳಲ್ಪಟ್ಟಿರುವದೇನೋ ಸತ್ಯವು. ಹಾಗೆಯೇ ಇದಕ್ಕೆ ಉಪಪಾದನೆಯು ಉಂಟು. ಹೇಗೆಂದರೆ:—

ರಾಕ್ಷಸಾನಾ ಮವಿಸ್ರಂಭಾ ದಾಂಜನೇಯಸ್ಯ ಬಂಧನೇ ।
ಯಥಾ ವಿಗಳಿತಾ ಸದ್ಯ ಸ್ತ್ವಮೋಘಾಪ್ಯ ಸ್ತ್ರಬಂಧನಾ ।
ತಥಾಪುಂಸಾ ಮವಿಸ್ರಂಭಾತ್ಪ್ರಪತ್ತಿಃ ಪ್ರಚ್ಯುತಾ ಭವೇತ್ ॥

ರಾಕ್ಷಸರ ಅವಿಶ್ವಾಸದಿಂದ ಆಂಜನೇಯನು ಬ್ರಹ್ಮಾಸ್ತ್ರದಿಂದ ಬಂಧಿಸಲ್ಪಟ್ಟಿರು ವದು ಹೇಗೆ ಬಿಟ್ಟುಹೋಗಿ ಆ ಅಸ್ತ್ರಬಂಧನವು ವ್ಯರ್ಥವಾದುದು ಆಯಿತೋ, ಹಾಗೆಯೇ ಪ್ರಪನ್ನರ ಅವಿಶ್ವಾಸದಿಂದ ಪ್ರಪದನವೂ ಕೂಡ ಜಾರಿಹೋದುದೂ ಎಂದರೆ ವ್ಯರ್ಥವಾದುದೂ ಆಗಬಹುದೆಂದೂ ಹೇಳಲ್ಪಟ್ಟಿರುತ್ತದೆ. ಅದುದರಿಂದ ಈ ಪ್ರಪತ್ತಿ ಪರಿಕರಗಳ ಅಪೇಕ್ಷೆಯು ಬೇಕಾಗಿಲ್ಲವು ಎಂದು ಪೂರ್ವಪಕ್ಷವು. ಇದಕ್ಕೆ ಸಮಾಧಾನವನ್ನು ಶ್ರೀ ದೇಶಿಕರು ಉಪದೇಶಿಸಿರುವದೇನೆಂದರೆ, ಬ್ರಹ್ಮಾ ಸ್ತ್ರಕ್ಕೂ ಅಭಿಮಂತ್ರಣ ಧ್ಯಾನಾದಿಗಳು ಅಜ್ಞಗಳಾಗಿವೆ. ಆದರೆ ಇತರ ಸಹಾಯ ಗಳು ಯಾವುದೂ ಕೂಡದು ಎಂಬಭಿಪ್ರಾಯವು; ಅದು ಬಂಧಿಸಿರುವಾಗಲೇ ಇನ್ನೊಂದು ತುಚ್ಛವಾದುದನ್ನು ತಂದು ಬಂಧಿಸಕೂಡದೆಂಬ ಭಾವವು, ಆಂಜನೇ ಯನ ನಿಗ್ರಹವು ಇನ್ನು ಯಾವುದರಿಂದಲೂ ಸಾಧ್ಯವಿಲ್ಲದಿರಲು, ಇಂದ್ರಜಿತುವು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ ಆತನನ್ನು ಬಂಧಿಸಿದನು, ಅದು ಬಂಧಿಸಿರುವಾಗಲೇ, ಅಜ್ಞರಾದ ರಾಕ್ಷಸರು "ಕೇನ ವಲ್ಕೇನ" ಆ ಶಣಬು ಹಗ್ಗದಿಂದ ಆತನನ್ನು ಬಂಧಿಸಿದರು; ಆಗ ಬಹ್ಮಾಸ್ತ್ರಕ್ಕೆ ಅವಮರ್ಯಾದೆಯಾದುದರಿಂದ ಅದು ಬಂಧನ ವನ್ನು ಬಿಟ್ಟುಬಿಟ್ಟಿತು. ಆದರೆ ಬ್ರಹ್ಮಾಸ್ತ್ರಪ್ರಯೋಗಕ್ಕೆ ಬೇಕಾದ "ತತಸ್ತಾ ಯಂಭುವೈರ್ಮಂತ್ರೈ ರ್ಬ್ರಹ್ಮಾಸ್ತ್ರ ಮಭಿಮಂತ್ರಿತಂ" (ರಾ. ಸುಂ. ೪೮. ೪೧.) ಎಂದು, ಹೇಳಿದುವಹಾಗೆ ಅಜ್ಞಗಳು ಬೇಕೇಬೇಕು, ಅವು ಇಲ್ಲದಿದ್ದರೆ ಬ್ರಹ್ಮಾಸ್ತ್ರ ಪ್ರಯೋಗವು ಕಾರ್ಯಕಾರಿಯಾಗದೆಂಬ ಭಾವವು. ಬ್ರಹ್ಮಾಸ್ತ್ರಕ್ಕೆ ಹೇಗೆ ಅಜ್ಞ ಗಳ ಅವಶ್ಯಕತೆಯುಂಟೋ, ಹಾಗೆಯೇ ಪ್ರಪತ್ತಿಗೂ ಸಹ ಅಜ್ಞಗಳು ಅವಶ್ಯಕ ವೆಂಬ ಭಾವವು. ಬ್ರಹ್ಮಾಸ್ತ್ರದ ಬಂಧನವು ಹೇಗೆ ಇತರಾಸ್ತ್ರಬಂಧವನ್ನಾಗಲಿ ಶಣವಲ್ಲ ಬಂಧನವನ್ನಾಗಲಿ ಸಹಿಸದೋ, ಅಂತಹ ತುಚ್ಛವಾದ ಬಂಧನದಿಂದ ಬ್ರಹ್ಮಾಸ್ತ್ರವು ಹೇಗೆ ವ್ಯರ್ಥವಾಗುತ್ತದೋ, ಹಾಗೆಯೇ ಪ್ರಪತ್ತಿಯೂ ಅನ್ಯ ದೇವತಾಶ್ರಯಣ ಮೊದಲಾದವುಗಳಿಂದ ವ್ಯರ್ಥವಾಗುತ್ತದೆಂಬ ಭಾವವೂ ತೋರಿ ಬರುತ್ತದೆ. ಪುನಃ ಪೂರ್ವ ಪಕ್ಷಿಯು ಸನತ್ಕುಮಾರ ಸಂಹಿತಾ ವಾಕ್ಯವನ್ನುದಾ

ಅಗ್ನೇಯಾಲ್ "ಪ್ರಪತ್ತೇಃ ಕ್ವಚಿದಪ್ಯೇವಂ ಪರಾಪೇಕ್ಷಾ ನವಿದ್ಯತೇ। ಸಾಹಿ ಸರ್ವತ್ರ ಸರ್ವೇಷಾಂ ಸರ್ವಕಾಮಫಲಪ್ರದಾ" ಎನ್ರುದುವುಮ್ ಧರ್ಮಾಂತರ ನೈರಪೇಕ್ಷ್ಯಮ್ ಶೊನ್ನಪಡಿ. ಇಪ್ಪಡಿಯಲ್ಲಾದಪೋದು

ಹರಿಸಿ ಅದರಲ್ಲಿ ಪ್ರಪತ್ತಿಗೆ ಯಾವುದರ ಅಪೇಕ್ಷೆಯೂ ಇಲ್ಲವೆಂದು ಹೇಳಿದೆಯಲ್ಲಾ ಎಂದು ಮೂದಲಿಸಬಹುದೆಂದು ಭಾವಿಸಿ, ಅದರ ತಾತ್ಪರ್ಯವು, ಅಬ್ಗಗಳು ಬೇಡವೆಂದಲ್ಲವು; ಇತರ ಉತ್ಕೃಷ್ಟಧರ್ಮಗಳು ಅಧಿಕಾರಿಯಲ್ಲಿರಬೇಕೆಂಬ ನಿಯಮ ವೇನೂ ಇಲ್ಲವೆಂದೂ, ಅಧಿಕಾರಿಯ ಜಾತಿ, ಕುಲ, ಲಿಂಗ, ಗುಣ, ಕ್ರಿಯ, ದೇಶ,ಕಾಲ, ಅವಸ್ಥೆ ಮೊದಲಾದ ತಾರತಮ್ಯಗಳೊಂದನ್ನೂ ಇದು ಅಪೇಕ್ಷಿಸುವದಿಲ್ಲ ವೆಂಬುದೇ ಅಭಿಪ್ರಾಯವೆಂದು ಮುಂದೆ ತಿಳಿಸುತ್ತಾರೆ:— **ಪ್ರಪತ್ತೇಃ** - ಭರನ್ಯಾಸ ರೂಪವಾದ **ಉಪಾಯಕ್ಕೆ, ಏವಂ** - ಈ ಭಕ್ತ್ಯುಪಾಯದಲ್ಲಿ ಅಧಿಕಾರಿಯು **ತ್ರೈವರ್ಣಿಕನೇ** ಆಗಿರಬೇಕು ಎಂಬ ನಿಯಮವಿರುವಹಾಗೆ, ಆಲ್ಲದೆ, **ಕ್ವಚಿದಪಿ**-ಒಂದು ಸ್ಥಳದಲ್ಲಾಗಲಿ, **"ಪರಾಪೇಕ್ಷೆಯು"** ಎಂದರೆ ಅಬ್ಗಗಳಲ್ಲದೆ ಅಧಿಕಾರಿಯಲ್ಲಿ ಇತರ ಧರ್ಮಗಳ ಅಪೇಕ್ಷೆಯು, **ನವಿದ್ಯತೇ** - ಇರುವದಿಲ್ಲವು; **ಈ ಅಭಿಪ್ರಾಯವನ್ನೇ** ಉತ್ತರಾರ್ಧದಿಂದ ವಿಶದೀಕರಿಸುತ್ತಾರೆ, **ಸಾಹಿ**-ಆ ಪ್ರಪತ್ತಿಯಾದರೋ, **ಸರ್ವತ್ರ**-ಎಲ್ಲಾ ಪ್ರದೇಶದಲ್ಲೂ, **ಸರ್ವೇಷಾಂ** - ತ್ರೈವರ್ಣಿಕರು ಮೊದಲುಗೊಂಡು ಶೂದ್ರ ಚಂಡಾಲರು, ಸ್ತ್ರೀಪುರುಷರು, ಹೀಗೆ **ಎಲ್ಲರಿಗೂ, ಸರ್ವಕಾಮ ಫಲಪ್ರದಾ** – ಧರ್ಮಾರ್ಥಕಾಮಮೋಕ್ಷ ರೂಪ ಚತುರ್ವಿಧ ಪುರುಷಾರ್ಥಗಳನ್ನೂ ಕೊಡತಕ್ಕದ್ದು. **ಸರ್ವತ್ರ** ಎಂದು ಹೇಳಿರುವದರಿಂದ ಯೋಗಾಭ್ಯಾನಕ್ಕೆ ಬೇಕಾದ ಹಾಗೆ ದಿವ್ಯಕ್ಷೇತ್ರಗಳಾದ ನೈಮಿಶಾರಣ್ಯ ಕುರುಕ್ಷೇತ್ರಾದಿಗಳಾಗಬೇಕೆಂಬ ನಿಯಮ ವಿಲ್ಲವೆಂಬ ಭಾವವು. ಆದುದರಿಂದ **"ಕ್ವಚಿದಪಿ ಪರಾಪೇಕ್ಷಾ ನವಿದ್ಯತೇ"** ಎಂಬುದರ ಅಭಿಪ್ರಾಯವೇನೆಂಬುದನ್ನು ತಿಳಿಸುತ್ತಾರೆ. -- **ಎನ್ರುದುವುಮ್** – ಎಂದು ಸಂಹಿತೆಯಲ್ಲಿ ಹೇಳಿರುವುದು, **ಧರ್ಮಾಂತರ ನೈರಪೇಕ್ಷ್ಯಂ ಶೊನ್ನಪಡಿ**– ಅಧಿಕಾರಿಯಲ್ಲಿ ಪರಿಕರರೂಪ ವಿಶೇಷಣಗಳಲ್ಲದೆ ಇತರ ವಿಶೇಷಣಗಳು ಯಾವುವೂ ಬೇಕಿಲ್ಲವೆಂದು ಹೇಳಿದಂತೆ ಭಾವಿಸತಕ್ಕದ್ದು; ಆ ಧರ್ಮಾಂತರಗಳು ಯಾವುವು ಎಂದರೆ **"ನಜಾತಿ ಭೇದಂ ನಕುಲಂ ನಲಿಙ್ಗಂ ನಗುಣಕ್ರಿಯಾಃ। ನ ದೇಶಕಾಲೌ ನಾವಸ್ಥಾಂ ಯೋಗೋಽಯಮಪೇಕ್ಷತೇ"** ಎಂಬ ಶ್ಲೋಕದಲ್ಲಿ ಹೇಳಿರುವ ಧರ್ಮಗಳು ಯಾವುವೂ ಬೇಕಿಲ್ಲವು, ಭಕ್ತಿಯೋಗಕ್ಕಾದರೋ ಪರಾಪೇಕ್ಷೆಗಳುಂಟು; ನಿತ್ಯನೈಮಿತ್ತಿಕ ಕಾಮ್ಯನಿಷ್ಠಾನದಿಂದ ಸೇರಿದ ಕರ್ಮ

ಯೋಗದ, ತ್ರೈವರ್ಣಿಕಾಧಿಕಾರಿತ್ವವೂ, ಪರಿಶುದ್ಧಸ್ಥಳದಲ್ಲಿ ಸಾಙ್ಗಯೋಗಾಭ್ಯಾಸವೂ, ಮೊದಲಾದವುಗಳ ಅಪೇಕ್ಷೆಯುಂಟು, ಈ ಪ್ರಪತ್ತಿಗಾದರೋ ತಾತ್ಕಾಲಿಕ ಅಙ್ಗಗಳವಿನಾ ಬೇರೆ ಇನ್ನು ಯಾವ ವಿಶೇಷಣಗಳ ಅಪೇಕ್ಷೆಯೂ ಅವಕ್ಕಿಲ್ಲ ವೆಂಬ ಭಾವವು. ಈ ಪ್ರಮಾಣವು, ಪರಾಪೇಕ್ಷೆಯು ಈ ಪ್ರಪತ್ತಿಗಿಲ್ಲವೆಂದು ಹೇಳಿರುವ ಸಂದರ್ಭದಲ್ಲಿ, ಪರಾಪೇಕ್ಷೆಯು ಯಾವುದು ಎಂದು ನಿರ್ಧರಿಸಬೇಕಾಗಿರುತ್ತದೆ. "ಏವಂ" ಎಂದಿರುವದರಿಂದಲೂ, ಉತ್ತರಾರ್ಧವು ಪೂರ್ವಾರ್ಧದ ಅರ್ಥವನ್ನೇ ಸಮರ್ಥನೆ ಮಾಡುವದರಿಂದಲೂ ನಿರ್ಧರಿಸಬಹುದು. ಭಕ್ತಿಮಾರ್ಗಕ್ಕೆ ಪರಾಪೇಕ್ಷೆ ಇರುವಹಾಗೆ ಇದಕ್ಕೆ ಬೇಕಿಲ್ಲವೆಂದರ್ಥಮಾಡಿದರೆ ಪರಿಕರಗಳ ಅವಶ್ಯಕತೆಯು ಬೇಡವೆಂದಾಗಲಿಲ್ಲವು. ಈ ವಿಷಯವನ್ನು ಸಾರಪ್ರಕಾಶಿಕಾಯವರು ಒಂದು ನಿದರ್ಶನಮೂಲಕ ಬಹು ಚನ್ನಾಗಿ ಉಪಪಾದಿಸಿ ಹೇಳಿರುತ್ತಾರೆ. ಹೇಗೆಂದರೆ :—"ನಿಷಿದ್ಧಭಕ್ಷಣಂಜೈಹ್ಮ ಮುತ್ಕರ್ಷೇಚ ವಚೋನ್ಯತಂ। ರಜಸ್ವಲಾ ಮುಖಾಸ್ವಾದ ಸ್ಸುರಾಪಾನ ಸಮಾನಿತು" ಎಂಬಲ್ಲಿ "ನಿಷಿದ್ಧಭಕ್ಷಣಂ'' ಕೂಡದೆಂದು ನಿಷೇಧಿಸಲ್ಪಟ್ಟಿದ್ದರೆ, ಆ ನಿಷಿದ್ಧವಸ್ತುಗಳು ಯಾವುವು ಎಂಬ ಸಂದರ್ಭದಲ್ಲಿ, ಛತ್ರಾಕಂವಿಡ್ವರಾಹಂಚಲಶುನಂಗ್ರಾಮಕುಕ್ಕುಟಂ। ಪಲಾಂಡುಂ ಗ್ರಂಜನಂಚೈವ ಮುತ್ಯಾಜಗ್ದ್ವಪತೇದ್ದ್ವಿಜಃ ॥ ಎಂಬ ಬೇರೆ ಪ್ರಮಾಣದ ಮೂಲಕ ಹೇಗೆ ಸಮನ್ವಯಮಾಡಿಕೊಳ್ಳಬೇಕೋ, ಹಾಗೆಯೇ ಈ ಸಂದರ್ಭದಲ್ಲೂ ಪ್ರಪತ್ತಿಗೆ "ಪರಾಪೇಕ್ಷಾ ನವಿದ್ಯತೇ" ಎಂದು ಹೇಳಿದರೆ, ಆ ಪರಾಪೇಕ್ಷಾ ಎಂತಾದ್ದೆಂಬ ವಿಮರ್ಶೆಯಲ್ಲೂ,"ಪ್ರಪತ್ತಿಂ ಸರ್ವಫಲದಾಂಸರ್ವೋಪಾಯಾನಪೇಕ್ಷಿಣೀಂ" "ನರಸ್ಯ ಬುದ್ಧಿದೌರ್ಬಲ್ಯಾದ ನ್ಯೋಪಾಯಾಂತರಮಿಷ್ಯತೇ" ಎಂಬ ಬೇರೇ ಪ್ರಮಾಣಗಳ ಬಲದಿಂದ, ಉಪಾಯಾಂತರಗಳು ಯಾವುದನ್ನೂ ಈ ಪ್ರಪತ್ತಿಯು ಅಪೇಕ್ಷಿಸುವದಿಲ್ಲವೆಂದು ಅರ್ಥಮಾಡುವದು ಸಮಂಜಸವಾದುದೆಂದು ಹೇಳಿರುತ್ತಾರೆ. "ಪ್ರಪತ್ತಿಯು ಸಮಸ್ತ ಫಲಗಳನ್ನೂ ಕೊಡುವಂತಾದ್ದು ಇತರ ಸಮಸ್ತ ಉಪಾಯಗಳನ್ನೂ ಅಪೇಕ್ಷಿಸುವದಿಲ್ಲವು; ಆದರೆ ಮನುಷ್ಯನ ಅವಿಶ್ವಾಸರೂಪ ಬುದ್ಧಿಯ ದೌರ್ಬಲ್ಯದಿಂದ, ಉಪಾಸನಾದಿ ಬೇರೆ ಉಪಾಯವು ಅಪೇಕ್ಷಿಸಲ್ಪಡುತ್ತದೆ" ಎಂಬುದು ಈ ಮೇಲಿನ ಪ್ರಮಾಣಗಳ ತಾತ್ಪರ್ಯವು.

ಇದೀಗ ಸರಿಯಾದ ಸಮಾಧಾನವು ಹೀಗೆ ಸಭಿಪ್ರಾಯ ವೆಂದು ಭಾವಿಸದೆ ಹೋದರೆ ಪೂರ್ವಪಕ್ಷಿಗಳ ಇಷ್ಟಾಪತ್ತಿಗೂ ಕುಂದಕವೆಂದು ಹೇಳುತ್ತಾರೆ ಪೂರ್ವಪಕ್ಷಿಗಳು ಮಹಾವಿಶ್ವಾಸಮಾತ್ರ ಪ್ರಪತ್ತಿಗೆ ಅವಶ್ಯಕವೆಂದು ಹೇಳುವರು. ಈ ಪ್ರಮಾಣಕ್ಕೆ ನೀವು ಹೇಳುವ ಹಾಗೆ ಅರ್ಥಮಾಡಿಕ್ಕೊಂಡು ಆನುಕೂಲ್ಯ ಸಙ್ಕಲ್ಪ

ಇವರ್‌ಗಳಿಶೈನ್ದ ಮಹಾವಿಶ್ವಾಸತ್ತೈಯುಮ್ ಇಕ್ಕಟ್ಟಿಳೈಯಿಲೆ ಸಂಭಾವಿತ ಸ್ವಭಾವಮಾಕ್ಕಲಾಮ್.

ಮಹಾ ವಿಶ್ವಾಸೋಪಿನಾಙ್ಗಮಿತಿವಾದಸ್ಯ ನಿರಾಸಃ

ಇನ್ವವಕಾಶತ್ತಿಲೇ ವೇರೇ ಶಿಲರ್, ಆಸ್ತಿಕನುಕ್ಕು ಶಾಸ್ತ್ರಾರ್ಥ ವಿಶ್ವಾಸಮ್ ಪಿರಕ್ಕುವದುಕ್ಕು ಮೇರ್ಪಟ್ಟ ಮಹಾವಿಶ್ವಾಸ ಮೆನ್ಪೊನ್ರುಣ್ಡೋ ?

ಪ್ರಾತಿಕೂಲ್ಯ ವರ್ಜನ, ಇವ್ವಗಳು ಬೇಕಾಗಿಲ್ಲವೆಂದು ಅಭಿಪ್ರಾಯಪಟ್ಟರೆ, ಮಹಾವಿಶ್ವಾಸವೂ ಬೇಡವೆಂದಾಗಿ, ಅದು ಪ್ರಪನ್ನನಲ್ಲಿ ತೋರಿಬಂದರೆ ಅದೂ ಕೂಡ ನಿಮ್ಮ ಅಭಿಪ್ರಾಯದಹಾಗೆ ಸಂಭಾವಿತ ಸ್ವಭಾವವೆಂದರೆ ಪ್ರಾಪ್ತವಾದ ಧರ್ಮವೆಂದು ಹೇಳಬೇಕಾಗುತ್ತದೆಂದು ತಿಳಿಸುತ್ತಾರೆ. ಇಪ್ಪಡಿಯಲ್ಲಾದಪೋದು– ಹೀಗೆ ಅನುಕೂಲ್ಯಾದಿ ಅಙ್ಗಗಳು ಆವಶ್ಯಕವೆಂದೂ, ಪರಾಪೇಕ್ಷೆ ಬೇಡವೆಂದರೆ ಉಪಾಯಾಂತರಾದಿಗಳು ಬೇಡವೆಂದೂ, ಅರ್ಥಮಾಡದಿದ್ದರೆ, ಇವರ್‌ಗಳಿಶೈನ್ದ – ಈ ಪೂರ್ವ ಪಕ್ಷಿಗಳು ಅಪೇಕ್ಷಿಸುವ, ಎಂದರೆ ಆವಶ್ಯಕವೆಂದು ಹೇಳುವ, ಮಹಾವಿಶ್ವಾಸತ್ತೈಯುಮ್ - ಮಹಾವಿಶ್ವಾಸವೆಂಬ ಅಙ್ಗವನ್ನೂ, ಇಕ್ಕಟ್ಟಿಳೆಯಿಲೇ - ಈ ನ್ಯಾಯದಪ್ರಕಾರವೇ, ಎಂದರೆ ಅನುಕೂಲ್ಯಾದಿಗಳು ನೀವು ಹೇಳುವಹಾಗೆ ಸಂಭಾವಿತ ಸ್ವಭಾವಗಳಾದರೆ, ಅದೇ ನ್ಯಾಯದಪ್ರಕಾರ, ಸಂಭಾವಿತ ಸ್ವಭಾವಮಾಕ್ಕಲಾಮ್ - ಸಂಭಾವಿತ ಸ್ವಭಾವವೆಂದೇ ಹೇಳಿಬಿಡಬಹುದು. ಮಹಾವಿಶ್ವಾಸವು ಆವಶ್ಯಕವು, ಪ್ರಾಪ್ತವಾದ ಧರ್ಮವಲ್ಲವು ಎಂದು ಹೇಳುವದಾದರೆ, ಅನುಕೂಲ್ಯಾದಿಗಳೂ ಕೂಡ ಸಂಭಾವಿತ ಸ್ವಭಾವವಲ್ಲವು, ಆವಶ್ಯಕವಾದ ಅಙ್ಗಗಳೇ ಎಂಬ ಭಾವವು.

ಮಹಾವಿಶ್ವಾಸವೂ ಅಙ್ಗವಲ್ಲವೆಂಬ ವಾದದ ನಿರಸನವು.

ಮೊದಲು ಮಹಾವಿಶ್ವಾಸವು ಅಙ್ಗವಾಗಲಾರದೆಂದು ಹೇಳುವವರ ಪಕ್ಷವನ್ನು ಅನುವಾದ ಮಾಡುತ್ತಾರೆ. ಇನ್ವವಕಾಶತ್ತಿಲೇ - ಇದೇ ಸಂದರ್ಭದಲ್ಲೇ, ವೇರೇ ಶಿಲರ್ - ಇನ್ನು ಕೆಲವರು, ಮೇಲೆ ಅಕ್ಷೇಪಿಸಿದವರಲ್ಲದೆ ಬೇರೇ ಕೆಲವರು, ಆಸ್ತಿಕನುಕ್ಕು - ವೇದ, ಇತರ ಶಾಸ್ತ್ರ, ಪರಬ್ರಹ್ಮ ಮೊದಲಾದವುಗಳಲ್ಲಿ ಆಸ್ತಿಕ್ಯ ಬುದ್ಧಿಯುಳ್ಳವನಿಗೆ, ಶಾಸ್ತ್ರಾರ್ಥವಿಶ್ವಾಸಮ್ ಪಿರಕ್ಕುಮ್ - ಶಾಸ್ತ್ರವು ಹೇಳಿರುವದರಲ್ಲಿ ವಿಶ್ವಾಸವು ಹುಟ್ಟಯೇ ಹುಟ್ಟುತ್ತದೆ, ಅದಕ್ಕು ಮೇರ್ಪಟ್ಟ –

ಆಗೈಯಾಲ್ ಇದುವುಮ್ ಸರ್ವಶಾಸ್ತ್ರಾರ್ಥ ಸಾಧಾರಣಮಾ ಮತ್ತ ನೈ ಪೋಕ್ಕೆ, ಪ್ರಪತ್ತಿಕ್ಕು ವಿಶೇಷಿತ್ತು ಅಜ್ಞಾಮಾಗ ವತ್ತೋವೆನ್ರು ನಿನೈ ಪ್ಪಾರ್‌ಗಳ್. ಅದುವುಮ್, (೧) "ನವಿಶ್ವಸೇದವಿಶ್ವಸ್ತೇ ವಿಶ್ವಸ್ತೇ ನಾತಿ ವಿಶ್ವಸೇತ್" ಇತ್ಯಾದಿಗಳಿಲೇ ವಿಶ್ವಾಸ ತಾರತಮ್ಯಮ್ ಪ್ರಸಿದ್ಧ ಮಾಗೈಯಾಲುಮ್, ಇವ್ವಿಡತ್ತಿಲ್ ಅತಿಶಯಿತ ವಿಶ್ವಾಸಮಜ್ಞಮೆನ್ಗಿರ ವಚನತ್ತಾಲುಮ್ ಪರಿಹೃತಮ್.

ಆ ಶಾಸ್ತ್ರಾರ್ಥವಿಶ್ವಾಸಕ್ಕೂ ಉತ್ಕೃಷ್ಟವಾದ, ಮಹಾವಿಶ್ವಾಸಂ ಎನ್ರು-ಎಂಬ ದಾಗಿ, ಒನ್ರುಂಡೋ-ಒಂದುಂಟೋ? ಆಗೈಯಾಲ್-ಆ ಕಾರಣದಿಂದ ಎಂದರೆ ಶಾಸ್ತ್ರಾರ್ಥ ವಿಶ್ವಾಸವಲ್ಲದೆ ಬೇರೇ ಅಧಿಕವಿಶ್ವಾಸವೆಂಬುದು ಇಲ್ಲವಾದುದರಿಂದ, **ಇದುವುಮ್** - ಪ್ರಪತ್ತಿಗೆ ಅಜ್ಞವೆಂದು ಹೇಳುವ ಈ ಮಹಾ ವಿಶ್ವಾಸವೂ ಕೂಡ, **ಸರ್ವಶಾಸ್ತ್ರಾರ್ಥ ಸಾಧಾರಣಮಾಮ್** - ಸರ್ವ ಶಾಸ್ತ್ರಾರ್ಥದಲ್ಲೂ ವಿಶ್ವಾಸ ಹೇಗೋ, ಹಾಗೆಯೇ ಸಾಧಾರಣವಾದುದೇಯಾಗುತ್ತದೆ, **ಅತ್ತ ನೈ ಪೋಕ್ಕೆ**-ಅಷ್ಟ ಲ್ಲದೆ, **ಪ್ರಪತ್ತಿಕ್ಕು ವಿಶೇಷಿತ್ತು** - ಪ್ರಪತ್ತಿಗೆ ವಿಶೇಷಿಸಿ ಎಂದರೆ **ಮಹಾವಿಶ್ವಾಸ** ವೆಂದು ಪ್ರಪತ್ತಿಗೆ ಬೇರೆ ಎಂದು ವಿಶೇಷಿಸಿ; **ಅಜ್ಞಾಮಾಗವತ್ತೋ** - ಅಜ್ಞವು ಹೇಗಾಗುತ್ತದೋ? **ಎನ್ರು ನಿನೈಪ್ಪಾರ್‌ಗಳ್** - ಎಂದು ಯೋಚಿ ಸುವರು, ಎಂದು ಶಙ್ಕಿಸುವರು ಎಂಬ ಭಾವವು. ಈ ಶಙ್ಕಾವನ್ನು ಮುಂದಿನ ವಾಕ್ಯದಿಂದ ಖಂಡಿಸುತ್ತಾರೆ:—ಶಾಸ್ತ್ರದಲ್ಲಿ ಯಾವಾಗ ಪ್ರಪನ್ನನಿಗೆ ವಿಶ್ವಾಸ ಉಂಟಾಯಿತೋ ಅವೇ ಸಾಕು. ಇನ್ನು ಬೇರೇ ಮಹಾವಿಶ್ವಾಸ ಒಂದು ಅಜ್ಞ ವಾಗಿ ಪ್ರಪತ್ತಿಗೆ ಆವಶ್ಯಕವೆಂಬುದು ಹೇಗೆ? ಶಾಸ್ತ್ರದಲ್ಲಿ ಇರುವ ವಿಶ್ವಾಸವೇ ಸಾಕಾಗಿರುತ್ತದೆಂಬುದು ಪೂರ್ವಪಕ್ಷವು. **ಅದುವುಮ್** - ಆ ಪೂರ್ವಪಕ್ಷವೂ ಸಹ, (೧) **"ಅವಿಶ್ವಸ್ತೇ** - ವಿಶ್ವಾಸಪಿಡಲು ಯೋಗ್ಯನಲ್ಲದವನಲ್ಲಿ, **ನವಿಶ್ವ ಸೇತ್** - ವಿಶ್ವಾಸವನ್ನಿಡಬಾರದು, **ವಿಶ್ವಸ್ತೇ** - ವಿಶ್ವಾಸವಿಡಬಹುದಾದವನಲ್ಲಿ, **ನಾತಿವಿಶ್ವಸೇತ್** - ಹೆಚ್ಚು ವಿಶ್ವಾಸವನ್ನಿಡಬಾರದು", **ಇತ್ಯಾದಿಗಳಿಲೇ** - ಇವೇ ಮೊದಲಾದ ಪ್ರಮಾಣಗಳಲ್ಲಿ, ವಿಶ್ವಾಸ ತಾರತಮ್ಯವು ಪ್ರಸಿದ್ಧವಾದುದರಿಂ ದಲೂ, **ಇವ್ವಿಡತ್ತಿಲ್** - ಈ ಸಂದರ್ಭದಲ್ಲೂ, **ಅತಿಶಯಿತ ವಿಶ್ವಾಸಮ ಜ್ಞಮ್** - ಮಹಾ ವಿಶ್ವಾಸವು ಅಜ್ಞವು, **ಎಜ್ಞ್ರ ವಚನತ್ತಾಲುಮ್** - ಎಂದು

---

(೧) ಭಾರ. ಉ. ೩೪. ೯.

ಹೇಳುವ ಪ್ರಮಾಣ ಬಲದಿಂದಲೂ, **ಪರಿಹೃತಮ್**-ಪರಿಹಾರವನ್ನು ಹೊಂದಿತು. ಆ **ಪೂರ್ವಪಕ್ಷ** ಪರಿಹಾರಕ್ಕೆ ಎರಡು ಕಾರಣಗಳನ್ನು ಹೇಳಿದರು :—

(೧) **ವಿಶ್ವಾಸದಲ್ಲಿ** ತಾರತಮ್ಯ ಉಂಟು. **ಪೂರ್ವಪಕ್ಷಿಯು** ಹೇಳಿದಹಾಗೆ ವಿಶ್ವಾಸವು **ಶಾಸ್ತ್ರಾರ್ಥದಲ್ಲಿನ** ಹಾಗೆ ಸಾಧಾರಣವಾದುದೇ **ಎಲ್ಲಾ** ಸಂದರ್ಭದಲ್ಲೂ ಎಂದು ಹೇಳಿದುದು ಸರಿಯಲ್ಲ**ವು**. ಇದಕ್ಕೆ **ಉಪ್ಯೋಗ ಪರ್ವ**ವಾಕ್ಯವನ್ನು ಪ್ರಮಾಣವಾಗಿ ಉದಾಹರಿಸಿದರು. ಅದರಿಂದ ವಿಶ್ವಾಸ ತಾರತಮ್ಯವು ಉಂಟೆಂಬುದು ಸಿದ್ಧವು. ವಿಶ್ವಾಸ ತಾರತಮ್ಯವೇ ಇಲ್ಲವೆಂಬ ಪಕ್ಷವು ಇಲ್ಲಿ ಖಂಡಿಸಲ್ಪಟ್ಟಿತು

(೨) **ಪ್ರಪತ್ತಿ**ಗೆ ಮಹಾವಿಶ್ವಾಸವು ಅಜ್ಞವೆಂಬುದಕ್ಕೆ ಪ್ರಮಾಣವೇ ಇದೆ. ಪ್ರಮಾಣ ಶರಣರಾದ ನಮಗೆ ಇಂತಹ ಶಬ್ದಾವಿಗೆ ಕಾರಣವೇ ಇಲ್ಲವೆಂಬ ಭಾವವೂ ದ್ಯೋತಿತವು "**ರಕ್ಷಿಷ್ಯತೀತಿ ವಿಶ್ವಾಸಃ**"ಎಂಬುದು ಸಾಧಾರಣವಿಶ್ವಾಸವಾಗುವದಿಲ್ಲ**ವು**, ಅದು ಮಹಾವಿಶ್ವಾಸವೆಂಬ ಭಾವವು. ಭಗವಚ್ಛಾಸ್ತ್ರದಲ್ಲಿ "**ಸಾಲಭ್ಯನೇದೀ ಭಜತೇ ಕಶ್ಚಿತ್ತಂ ಪರನಾಸ್ತಿಕಃ**" ಎಂದು ಹೇಳಿರುವದರಿಂದ ಮಹಾವಿಶ್ವಾಸಯುಕ್ತನೇ ಪ್ರಪನ್ನನಾಗಿ ಶರಣಾಗತನಾಗುವನೆಂದು ಹೇಳಲ್ಪಟ್ಟಿರುತ್ತದೆ. ಮತ್ತು "**ರಕ್ಷಿಷ್ಯತ್ಯನುಕೂಲಾನ್ನ ಇತಿ ಯಾ ಸುದೃಢಾಮತಿಃ । ಅನನ್ಯಸಾಧ್ಯೇ ಸ್ವಾಭೀಷ್ಟೇ ಮಹಾವಿಶ್ವಾಸ ಪೂರ್ವಕಂ । ತದೇಕೋಪಾಯತಾಯಾಚ್ಞಾ ಪ್ರಪತ್ತಿಶ್ಶರಣಾಗತಿಃ**" ಎಂಬ ಭರತಮುನಿಯ ವಾಕ್ಯವು ಮುಖ್ಯ ಪ್ರಮಾಣವು (೧೦೫೩ ನೆಯ ಪುಟವನ್ನು ನೋಡಿ). ಇಲ್ಲಿ ಮಹಾವಿಶ್ವಾಸ ಪ್ರಯೋಗವನ್ನು ಕಾಣಬಹುದು. ವಿಶ್ವಾಸ ತಾರತಮ್ಯ ಉಂಟೆಂದು ಒಂದುವೇಳೆ ಒಪ್ಪಿದರೂ. ಈ ಮಹಾ ವಿಶ್ವಾಸವು ಒಂದು ಅಜ್ಞವೆಂದು ಹೇಳುವ ಪ್ರಮಾಣವಿಲ್ಲದಿದ್ದರೆ ಒಪ್ಪಬಹುದಾಗಿತ್ತು. ಆದರೆ, ಪ್ರಬಲ ಪ್ರಮಾಣಗಳಿದ್ದರೆ ಪೂರ್ವ ಪಕ್ಷವು ನಿಲ್ಲದು ಎಂಬ ಭಾವವು.

ಆದರೆ **ಪೂರ್ವಪಕ್ಷಿಯು** ವಿದುರವಾಕ್ಯವಾದ "**ನವಿಶ್ವಸೇ ದವಿಶ್ವಸ್ತೇ**" ಎಂಬ ವಾಕ್ಯದಿಂದ ಲೋಕನುರ್ಯಾಯದಲ್ಲಿ ವಿಶ್ವಾಸ ತಾರತಮ್ಯ ಉಂಟೆಂದೇನೋ ಅಜ್ಞೀಕರಿಸುವೆವು; ಬ್ರಹ್ಮವಿದ್ಯಾವಿಷಯದಲ್ಲಿ ಪರಬ್ರಹ್ಮಪ್ರಾಪ್ತಿಗೆ ಬೇಕಾದ ವಿಶ್ವಾಸದಲ್ಲಿ ತಾರತಮ್ಯವೆಂದರೇನು ಎಂದು ಆಕ್ಷೇಪಿಸಬಹುದೆಂದು, ಆ ಸಂದರ್ಭದಲ್ಲೂ ವಿಶ್ವಾಸ ತಾರತಮ್ಯ ಉಂಟೆಂಬುದಕ್ಕೂ ಅದರಿಂದ ಫಲದಲ್ಲಿ ವ್ಯತ್ಯಾಸ ಉಂಟೆಂಬುದಕ್ಕೂ **ಶೀನಾರವ** ಭಗವಾನರ ವಾಕ್ಯವನ್ನು "**ಇಪ್ಪಡಿ**" ಎಂದಾರಂಭಿಸಿ ಉದಾಹರಿಸುತ್ತಾರೆ.

ಇಪ್ಪಡಿ ಪುರುಷ ವಿಶೇಷಜ್ಞಳಿಲೇ ನಿಶ್ಚಾಸ ತಾರತಮ್ಯ ಮುಂಡೆನ್ನು ಮಿಡತ್ತೈ ಶ್ರೀಮದಷ್ಟಾಕ್ಷರ ಬ್ರಹ್ಮವಿದ್ಯೈಯಿಲೇ (೧) "ಯಸ್ಯ ಯಾವಾಂಶ್ಚ ವಿಶ್ವಾಸ ಸ್ತಸ್ಯ ಸಿದ್ಧಿಶ್ಚ ತಾವತೀ। ಏತಾವಾನಿತಿ ನೈತಸ್ಯ ಪ್ರಭಾವಃ ಪರಿನಿಯತೇ" ॥ ಎನ್ರು ಶ್ರೀ ನಾರದ ಭಗವಾನರುಳಿಚ್ಚಿಯ್ದಾರ್.

ಇಪ್ಪಡಿ - ಈ ರೀತಿಯಲ್ಲಿ ಎಂದರೆ ಮೇಲೆ ಉಪಪಾದಿಸಲ್ಪಟ್ಟ ರೀತಿಯಲ್ಲಿ, **ಪುರುಷ ವಿಶೇಷಜ್ಞಳಿಲೇ** - ಪ್ರಪನ್ನರಾದ ಪುರುಷವಿಶೇಷರಲ್ಲೂ, **ವಿಶ್ವಾಸ ತಾರತಮ್ಯವು** - ಉಂಟು, **ಎನ್ರುಮಿಡತ್ತೈ** - ಎನ್ನುವ ಸಂದರ್ಭದಲ್ಲಿ, **ಶ್ರೀ ಮದಷ್ಟಾಕ್ಷರಬ್ರಹ್ಮವಿದ್ಯೆಯಲ್ಲಿ, "ಯಸ್ಯ** - ಯಾವ ಈ ಅಷ್ಟಾಕ್ಷರ ಬ್ರಹ್ಮ ವಿದ್ಯಾಧಿಕಾರಿಗೆ, **ಯಾವಾಂಶ್ಚ ವಿಶ್ವಾಸಃ - ಎಷ್ಟರಮಟ್ಟಿಗೆ ವಿಶ್ವಾಸ** ಉಂಟೋ, **ತಸ್ಯ** - ಆ ಅಧಿಕಾರಿಗೆ, **ಸಿದ್ಧಿಶ್ಚ** - ಫಲವೂ ಕೂಡ, **ತಾವತೀ - ಅಷ್ಟೇ** ಎಂದರೆ ಅದಕ್ಕನುಗುಣವಾಗಿರುತ್ತದೆ" ಮಹಾ ವಿಶ್ವಾಸರೂಪದಲ್ಲಿ ವಿಶ್ವಾಸವು ಸಂಪೂರ್ಣವಾಗಿದ್ದರೆ ಮೋಕ್ಷಫಲವು; ಮಂದವಿಶ್ವಾಸವಾದರೆ ಮೋಕ್ಷಫಲವು ಒಡನೆಯೇ ಇಲ್ಲವೆಂಬ ತಾತ್ಪರ್ಯವೂ ತೋರಿ ಬರುತ್ತದೆ; ಇದರಿಂದ, **ಏತಸ್ಯ ಪ್ರಭಾವಃ**- ಈ ಅಷ್ಟಾಕ್ಷರ ಬ್ರಹ್ಮವಿದ್ಯೆಯ ಪ್ರಭಾವವು, **ಏತಾವಾನ್ ಇತಿ** – ಇಷ್ಟೇ ಎಂದು ಹೇಳಲು, **ನ ಪರಿನಿಯತೇ** - ಪರಿಮಿತಿಯನ್ನು ಹೊಂದಿಸಲ್ಪಟ್ಟಿಲ್ಲವು. ಅದು ಅಪರಿನಿತಪ್ರಭಾವ ಉಳ್ಳದೆಂಬ ಭಾವವು; ಏಕೆಂದರೆ ಪೂರ್ಣವಿಶ್ವಾಸವಿದ್ದುದಾದರೆ ನಿರತಿಶಯ ಪರಬ್ರಹ್ಮ ಪ್ರಾಪ್ತಿಯನ್ನೇ ಉಂಟುಮಾಡುವದರಿಂದ ಎಂಬ ಭಾವವು, **ಎನ್ರು** - ಎಂಬವಾಗಿ, **ಶ್ರೀ ನಾರದ ಭಗವಾನರು, ಅರುಳಿಚ್ಚಿಯ್ದಾರ್** - ಕೃಪಯಾ ಉಪದೇಶಿಸಿರುತ್ತಾರೆ.

ಹೀಗೆ ಹೇಳಿದುದರಿಂದ ತಿಳಿಯತಕ್ಕ ಅಂಶವೇನಾಯಿತು ಎಂದರೆ ಮಹಾ ವಿಶ್ವಾಸ ಯುಕ್ತರಿಗೆನೋ ನೋಕ್ಷವು, ಮಹಾ ವಿಶ್ವಾಸದಲ್ಲಿ ನ್ಯೂನತೆಯಿರುವ ಮಂದವಿಶ್ವಾಸರಿಗೆಲ್ಲಾ ಮೋಕ್ಷವಿಲ್ಲವೆಂದು ಹೇಳಿದಂತಾಯಿತು ಎಂದು ಪೂರ್ವ ಪಕ್ಷಿಯು ಹೊರಡಲಿಸಬಹುದೆಂದು ಯೋಚಿಸಿ ಹಾಗೆ ಮೂದಲಿಸಿದರೇನಾಯಿತು? ಹಾಗೆ ಹೇಳುವದು ನಮಗೆ ಇಷ್ಟವೇ ಎಂದು ಹೇಳುವಿರೋ, ಆಗ **"ಮಿತ್ರ ಭಾವೇನ ಸಂಪ್ರಾಪ್ತಂ ನತ್ಯಜೇಯಂ ಕಥಂಚನ"** ಎಂಬ ಈಶ್ವರ ಸಙ್ಕಲ್ಪಕ್ಕೆ ವಿರುದ್ಧವಾದುದಾಗುವದಿಲ್ಲವೇ ಎಂದರೆ ಅದಕ್ಕೆ ಸಮಾಧಾನವಾಗಿ, ಈ ಮಂದ ವಿಶ್ವಾಸಯುಕ್ತರಿಗೂ ಕೂಡ, ಕೊನೆಯಲ್ಲಿ ಮೋಕ್ಷ ಉಂಟೆಂದು ಉಪದೇಶಿಸುತ್ತಾರೆ. ಇದರ ಸಮರ್ಥನೆಗಾಗಿ, ವಿಷ್ಣುಧರ್ಮವಾಕ್ಯವನ್ನೂ, ಸ್ತೋತ್ರ

---

(೧) ನಾರ-ಕಲ್ ೧. ೧೪.

ಮುಂದ ವಿಶ್ವಾಸರಾನ ಪ್ರಪನ್ನಾಭಾಸರೈಯುಮ್ ಮುಡಿವಿಲೇ ಸರ್ವೇಶ್ವರ ರಕ್ಷಿಕ್ಕುಮ್. ಎಜ್ಞನೇ ಎನ್ನಿಲ್ (೧) ಸಕೃದುಚ್ಚಾರಿತಂ ಯೇನ ಹರಿರಿತ್ಯಕ್ಷರದ್ವಯಂ। ಬದ್ಧಃ ಪರಿಕರಸ್ತೇನ ಮೋಕ್ಷಾಯ ಗಮನಂ

ರತ್ನದಿಂದ ಎರಡು ಶ್ಲೋಕಗಳನ್ನೂ ಆಳ್ವಾರ್ರವರ ತಿರುಮಾಲೆಯಿಂದ ಒಂದು ಪಾಶುರವನ್ನೂ, ಉದಾಹರಿಸುತ್ತಾರೆ.

ಮುಂದವಿಶ್ವಾಸರಾನ – ವಿಶ್ವಾಸದಲ್ಲಿ ನ್ಯೂನತೆ ಯಿರುವ, ಅಕಾರಣದಿಂದ **ಪ್ರಪನ್ನಾಭಾಸರೈಯುಮ್** – **ಪ್ರಪನ್ನವತ್ ಈಷದ್ಭಾಸಂತೇ** - ಪ್ರಪನ್ನರ ಹಾಗೆ ಸ್ವಲ್ಪವಾಗಿ ತೋರುವಂತವರು ಎಂದರೆ ಪೂರ್ಣಪ್ರಪನ್ನರಲ್ಲದವರನ್ನೂ, **ಮುಡಿವಿಲೇ**-ಕೊನೆಯಲ್ಲಿ, ಸರ್ವೇಶ್ವರನು ರಕ್ಷಿಸಿಬಿಡುವನು, **"ನೇಹಾಭಿ ಕ್ರಮ ನಾಶೋಸ್ತಿ ಪ್ರತ್ಯವಾಯೋ ನವಿದ್ಯತೇ"** ಎಂಬ ಗೀತಾ ಶ್ಲೋಕದಲ್ಲಿ (೨-೪೦) ಕರ್ಮಯೋಗದ ವಿಷಯದಲ್ಲಿ ಪ್ರಾರಂಭಿಸಿ ಪೂರೈಸದೇ ಹೋಗಿ ಸ್ವಲ್ಪವಾಗಿ ಅನುಷ್ಠಿಸಿದ ಧರ್ಮವೂ ಕೂಡ,ಸಂಸಾರ ಭಯದಿಂದೆ ತಪ್ಪಿಸಬಹುದೆಂದು ಹೇಳಿದ ಹಾಗೆ, **ಕೊನೆಗೆ ವಿಶ್ವಾಸ ಪೂರ್ತಿಯನ್ನುಂಟುಮಾಡಿ ಸಂಪೂರ್ಣ ಪ್ರಪನ್ನರನ್ನಾಗಿ ಮಾಡಿ ಸರ್ವೇಶ್ವರನು ಸಂರಕ್ಷಿಸುವನೆಂದು** ಹೇಳಿದರು. ಹಾಗೆಯೇ ಇನ್ನೊಂದು ಸಂದರ್ಭದಲ್ಲೂ, ಗೀತೆಯಲ್ಲಿ **"ನಹಿ ಕಲ್ಯಾಣಕೃತ್ಕಶ್ಚಿತ್ ದುರ್ಗತಿಂ ತಾತ ಗಚ್ಛತಿ"** ಸುಕೃತವನ್ನು ಸ್ವಲ್ಪಮಟ್ಟಿಗೆ ಮಾಡಿರುವವನಿಗೂ ಎಂದಿಗೂ ದುರ್ಗತಿ ಎಂಬುವದಿಲ್ಲವೆಂದೂ, **ಶ್ರೀಕೃಷ್ಣ** ಭಗವ್ಕಾರವರು ಹೇಳಿರುತ್ತಾರೆ ಹಾಗೆಯೇ ಇಲ್ಲಿಯೂ ಶರಣಾಗತಿಯನ್ನೇನೋ ಅನುಷ್ಠಿಸಿರುತ್ತಾನೆ. **ಪೂರ್ಣವಿಶ್ವಾಸವಿಲ್ಲದು ದರಿಂದ ಅಜ್ಞಲೋಪಮೂಲಕ ಶರಣಾಗತಿಯು ಸಿದ್ಧಿಸಲಿಲ್ಲವು.** ಹೀಗೆ ಪ್ರಾರಂಭಿಸಿದ **ಸುಕೃತವು** ವ್ಯರ್ಥವಾಗುವದಿಲ್ಲವು. ಕೊನೆಗೆ ಮಹಾ ವಿಶ್ವಾಸವು ಉಂಟಾಗಿ ಶರಣಾಗತಿಯು ಪೂರ್ಣವಾಗಿ ಮೋಕ್ಷಪ್ರಾಪ್ತಿಯುಂಟೆಂದು ಹೇಳಿರುತ್ತಾರೆ. ಮುಂದೆ **ಎಜ್ಞನೇ ಯೆನ್ನಿಲ್** – ಎಲ್ಲಿ ಹಾಗೆ ಹೇಳಿದೆ ? ಎಂದಾರಂಭಿಸಿ ಪ್ರಮಾಣಗಳನ್ನು ಉಪಾಹರಿಸುತ್ತಾರೆ. (೧) **ಯೇನ** - ಯಾವ ಪುಣ್ಯಶಾಲಿಯಿಂದ, **ಹರಿರಿತ್ಯಕ್ಷರದ್ವಯಂ**-ಹರಿಃ ಎಂಬ ಎರಡಕ್ಷರವು, **ಸಕೃದುಚ್ಚಾರಿತಂ**-ಒಂದೇಸಲವಾಗಲಿ ಉಚ್ಚರಿಸಲ್ಪಟ್ಟಿದುದಾದರೆ, **ತೇನ** - ಅಂತವನಿಂದ, **ಮೋಕ್ಷಾಯ ಗಮನಂ ಪ್ರತಿ** - ಮೋಕ್ಷವನ್ನು ಕುರಿತು ಹೋಗುವದಕ್ಕಾಗಿ, **ಪರಿಕರಃ** - ಸೊಂಟಕ್ಕೆ ದಟ್ಟಿಯನ್ನು ಬಿಗಿಯೋಣವು ಎಂದರೆ ಸಾಧನವು, **ಬದ್ಧಃ** - ಕಟ್ಟಲ್ಪಟ್ಟಿತು,

---

(೧) ವಿ. ಧ. ೭೦. ಶ್ಲೋ.

ನಮ್ ಪ್ರತಿ" ಇತ್ಯಾದಿಗಳಿಲುಮ್, ಇವತ್ತೈ ಯಡಿಯೊತ್ತಿನ(೨) "ತ್ವದಂ ಘ್ರಿಮುದ್ದಿಶ್ಯ," (೩) "ಉದೀರ್ಣ ಸಂಸಾರ" ಎಜ್ಗಾರ ಶ್ಲೋಕಜ್ಗಳಿಲುಮ್,

---

ಹರಿಶಬ್ದದ ಸಕೃದುಚ್ಚಾರಣೆಯಿಂದ ಮೋಕ್ಷವನ್ನುಹತ್ತಲು ಪ್ರಥಮ ಸೋಪಾನವನ್ನು ಕಟ್ಟಿದಹಾಗೆ; ಎಂದರೆ ಯಾವತ್ತಾದರೂ ಒಂದುದಿನ ಆದು ಉಪಾಯಾನುಷ್ಠಾನಕ್ಕೆ ಸಹಕಾರಿಯಾಗಿ ಪರಿಣಮಿಸಿ, ಕೊನೆಗೆಮೋಕ್ಷಪ್ರಾಪ್ತಿಯನ್ನುಂಟು ಮಾಡುತ್ತದೆಂಬ ಭಾವವು", ಇತ್ಯಾದಿಗಳಿಲುಮ್ - ಇವೇ ಮೊದಲಾದವುಗಳಲ್ಲೂ; ಇಲ್ಲಿ ಆದಿಪದದಿಂದ, ಮೇಲೆ ಹೇಳಲ್ಪಟ್ಟ ಎರಡುಗೀತಾ ಶ್ಲೋಕಗಳೂ ಮತ್ತು "ಅವಶೇನಾಪಿ ಯನ್ನಾಮ್ನಿ ಕೀರ್ತಿತೇ ಸರ್ವಪಾತಕೈಃ । ಪುನಾನ್ತಿಮುಚ್ಯತೇ ದ್ಯಃ" ಇಲ್ಲಿ ಭಗವನ್ನಾಮೋಚ್ಚಾರಣೆಯು, ಸ್ಮರಣ, ಜಪ, ಪ್ರದಕ್ಷಿಣ ಮೊದಲಾದವುಗಳಿಗೂ ಉಪಲಕ್ಷಣವಾಗಿ ಭಾವಿಸತಕ್ಕದ್ದೆಂದು ಆದಿಶಬ್ದಪ್ರಯೋಗವು, "ಸಕೃತ್ಸ್ಮತೋಪಿ ಗೋವಿಂದೋ ನೃಣಾಂ ಜನ್ಮ ಶತೈಕೃಶ್ಚಿತಂ । ಪಾಪರಾಶಿಂದಹತ್ಯಾಶು ತೂಲರಾಶಿ ಮಿವಾನಲಃ", "ಋಚೋ ಯಜೂಂಷಿ ಸಾಮಾನಿ ಯೋಧೀತೇಽಸಕೃದಂಜಸಾ । ಸಕೃದ ಷ್ಟಾಕ್ಷರಂ ಜಪ್ತ್ವಾ ಫಲಂತಸ್ಯ ಸಮಶ್ನುತೇ", "ವಿಷ್ಣೋರಾಯತನಂ ನಿತ್ಯಂ ಸಾಯಂಪ್ರಾತರ್ದಿನೇ ದಿನೇ । ಪ್ರದಕ್ಷಿಣ ದ್ವಯಂಕುರ್ಯಾದಶ್ವ ಮೇಧಫಲಂ ಲಭೇತ್", "ಯಾನಿ ಯಾನಿಚ ಪಾಪಾನಿ ಜನ್ಮಾಂತರ ಕೃತಾನಿಚ । ತಾನಿತಾನಿ ಪ್ರಣಶ್ಯಂತಿ ಪ್ರದಕ್ಷಿಣಪದೇಪದೇ" ಇತ್ಯಾದಿಗಳು ಅನುಸಂಧೇಯಗಳು. ಇವೇ ಮೊದಲಾದವು ಹೇಳಲ್ಪಟ್ಟವು; ಇವತ್ತೈ ಅಡಿಯೊತ್ತಿನ-ಇವುಗಳನ್ನು ಅನುಸರಿಸಿರುವ, ತ್ವದಂಘ್ರಿಮುದ್ದಿಶ್ಯ ... ಶ್ಲೋಕಜ್ಗಳಿಲುಮ್-ಎಂಬೀ ಎರಡು ಶ್ಲೋಕಗಳಲ್ಲೂ; ಈ ಶ್ಲೋಕಗಳು ಯಾವುವು ಎಂದರೆ

(೨) ತ್ವದಂಘ್ರಿಮುದ್ದಿಶ್ಯ । ಕದಾಪಿ ಕೇನಚಿದ್ಯಥಾತಥಾ ವಾಪಿಸಕೃತ್ಕೃತೋಂಜಲಿಃ । ತದೈವ ಮುಷ್ಣಾತ್ಯಶುಭಾ ನ್ಯಶೇಷತ ಶ್ಯುಭಾನಿ ಪುಷ್ಣಾತಿನಜಾತು ಹೀಯತೇ ॥ ೨೮ ॥ ಗುರುತರ ಉಪಾಯವಾದ ಭಕ್ತಿಯೋಗದಿಂದ ತುಂಬಾ ಕಷ್ಟದಿಂದ ಸಾಧ್ಯವಾದ ಈ ಪುರುಷಾರ್ಥವನ್ನು ತುಂಬಾ ಲಘುವಾದ ಪ್ರಪತ್ತಿಮೂಲಕ ಹೇಗೆ ಹೊಂದುವಿ ಎಂದರೆ ಅದಕ್ಕೂ ಲಘುತರವಾದ ಅಂಜಲೀ ಬಂಧನವೇ ಮೊದಲಾದ ಕಾಯಿಕ ವ್ಯಾಪಾರವೇ ಸಹಕಾರಿಯಾಗಿರುವಾಗ ಪ್ರಪತ್ತಿಯು ಸಾಧಿಸಲಾರದೇ

---

(೨) ಆಳ. ಸ್ತೋ. ೨೮ (೩) ಆಳ. ಸ್ತೋ. ೨೯.

ಎಂದು, ಸಾಭಿಪ್ರಾಯವಾಗಿ ಅಂಜಲಿಯ ಪ್ರಭಾವವನ್ನು ಈ ಶ್ಲೋಕದಲ್ಲಿ ಹೇಳುತ್ತಾರೆ. **ತ್ವದಂಘ್ರಿಮುದ್ದಿಶ್ಯ** - ಸರ್ವಲೋಕ ಶರಣ್ಯನೆಂದು ವಿಖ್ಯಾತನಾದ ನಿನ್ನ ಪಾದಕಮಲವನ್ನು ಕುರಿತು, ಬ್ರಹ್ಮರುದ್ರೇಂದ್ರಾದಿಗಳ ಪಾದಕ್ಕೆ ಮೋಕ್ಷದಾಯಕ ಪ್ರಭಾವವಿಲ್ಲವಾದುದರಿಂದ, ಅವರುಗಳ ಪಾದವಲ್ಲದೆ, ಮೋಕ್ಷದಾಯಕನಾಗಿ ಮುಕುಂದನಾದ ನಿನ್ನ ಪಾದಕಮಲವನ್ನು ಕುರಿತು, ಇಲ್ಲಿ ಶುಭಾಶ್ರಯವೆಲ್ಲಾ ಇರುವಾಗ ಅಂಘ್ರಿಯನ್ನು ಮುಖ್ಯವಾಗಿ ಹೇಳಿದುದರಭಿಪ್ರಾಯವು, ಸರ್ವಶರಣ್ಯನ ಪಾದಗ್ರಹಣದಲ್ಲಿ ಆದು "**ಮುಕರಂದ ನಿರ್ಭರೆ**" ವಾದುದರಿಂದ ನೈರರ್ಥಕ್ಯದ ಮಾತೇ ಇಲ್ಲವೆಂಬುದು ಸೂಚಿತವು; "**ಸಭ್ರಾತುಶ್ಚ ರಣೌಗಾಢಂ ನಿಪೀಡ್ಯ ರಘುನಂದನಃ**" (ರಾ. ಆಯೋ. ೩೧.೨) ಎಂಬಲ್ಲಿ ವಿಫಲತ್ವವಿಲ್ಲವೆಂಬುದು ವ್ಯಕ್ತವು,**ಕದಾಸಿ** - ಯಾವಾಗಲೇಯಾಗಲಿ ಇದರಿಂದ ದೇಶ ಕಾಲಾವಸ್ಥಾ ನಿಯಮಗಳು ಯಾವುವೂ ಬೇಕಿಲ್ಲವೆಂಬ ಭಾವವು; ಯಜ್ಞಯಾಗಾದಿಗಳಿಗೆ ದೇಶಕಾಲಾವಸ್ಥಾದಿ ನಿಯಮಗಳುಂಟು, ಅಂಜಲಿ ಮಾಡುವ ದಕ್ಕೆಮುಹೂರ್ತ ವಿಡಕೆಲಸವಿಲ್ಲವು, **ಕೇನಚಿತ್** - ಯಾರಿಂದಲೇಯಾಗಲಿ, ಬ್ರಾಹ್ಮಣಾದಿಗಳೇ ಅಂಜಲಿ ಮಾಡಬೇಕು, "**ಶೂದ್ರಶ್ವಪಾಕರು**"ಮಾಡಕೂಡದೆಂಬ ನಿಯಮವೇನೂ ಇಲ್ಲವು, ಸರ್ವಲೋಕ ಶರಣ್ಯನಿಗೆ ಅಂಜಲಿ ಬಂಧನ ಮಾಡಲು ಎಲ್ಲರಿಗೂ ಸಾಧ್ಯವು, **ಯಥಾತಥಾವಾಪಿ** - ಹೇಗೆಯಾಗಲಿ, ಇದರಿಂದ ಚನ್ನಾಗಿ ಅಂಜಲಿಮಾಡುವದೂ ಕೂಡ ತಿಳಿಯದೇ ಎರಡೂ ಕೈಗಳನ್ನೂ ಸುಮ್ಮನೆ ಜೋಡಿಸಿದರೂ ಸರಿಯೇ; ಪ್ರಣಾಮಾದಿಗಳಿಗಾದರೋ ಸ್ವಲ್ಪನಿಯಮಾದಿಗಳುಂಟು, ಸಾಷ್ಟಾಂಗವಾಗಿರಬೇಕು, ಒಂದು ಕೈಯಿಂದ ಪ್ರಣಾಮ ಮಾಡಕೂಡದು ಇತ್ಯಾದಿ ನಿಯಮಗಳುಂಟು; ಅಂಜಲಿಗೆ ಅಂತಹ ನಿಯಮಗಳು ಯಾವುದೂ ಇಲ್ಲದುದರಿಂದ "**ಯಥಾತಥಾವಾಪಿ**" ಎಂದು ಪ್ರಯೋಗವು; **ಸಕೃತ್ಕೃತೋಂಜಲಿಃ** - ಒಂದು ಸಲ ಮಾಡಿದ ಅಂಜಲಿಯು, ಈ ಅಂಜಲಿಯನ್ನು "**ವಸಂತೇ ವಸಂತೇ ಜ್ಯೋತಿಷಾ ಯಜೇತ**" ಪ್ರತಿ ವಸಂತ ಋತುವಿನಲ್ಲೂ ಮಾಡಬೇಕಾಗಿ ವಿಧಿಸಿರುವ ಪದೇಪದೇ ಕರ್ತವ್ಯತೆಯ ಆವಶ್ಯಕತೆ ಯಿಲ್ಲದೆ, ಒಂದು ಸಲ ಮಾಡಿದರೆ ಸಾಕು, ಫಲಸಿದ್ಧಿಯನ್ನುಂಟುಮಾಡುವ ಪ್ರಭಾವ ಉಳ್ಳದೆಂಬ ಭಾವವು, ಸರ್ವೇಶ್ವರನ ಕೃಪಾಪ್ರಾಪ್ತಿಗೆ ಸಕೃತ್ಕೃತವಾದರೇನೋಸಾಕು, ಒಂದು ಸಲ ಅಂಜಲಿ ಮಾಡಿರುತ್ತೇನೆ,ಮುಂದಕ್ಕೆ ಏಕೆ ಎಂಬ ಔದಾಸೀನ್ಯವು ಸರಿಯಲ್ಲವು; ಈ ಅಧಿಕಾರಿಯ ಮನದ ತೃಪ್ತ್ಯರ್ಥವಾಗಿ ಆವೃತ್ತಿಯೂ ಆವಶ್ಯಕವು; ಹೀಗೆ ಅಭಿಪ್ರಾಯವಲ್ಲದಿದ್ದರೆ, ಒಬ್ಬ ಮಹನೀಯನನ್ನು ಒಂದು ಸಲ ನೋಡಿದುದರಿಂದಲೇ ಫಲಸಿದ್ಧಿಯುಂಟಾದರೆ ಮುಂದಕ್ಕೆ ಆತನನ್ನು ಕೃತಜ್ಞತಾಭಾವದಿಂದ ನೋಡಬೇಕಾದ ಆವಶ್ಯಕತೆ ಯಿಲ್ಲವೆಂ

ದಾಗುತ್ತದೆ. ಇಂತಹ ಅಂಜಲಿಯು, **ತದೈವ** - ಆಗಲೇನೆ, **ಉತ್ತರಜನ್ಮಾದಿ** ಕಾಲವಿಳಂಬಗಳು ಬೇಕಿಲ್ಲದೆ, **ಅಶುಭಾನಿ ಅಶೇಷತಃ ಮುಷ್ಣಾತಿ**-ಅಮಜ್ಗಳಗ ಳನ್ನು ನಿಶ್ಶೇಷವಾಗಿ ಅಪಹರಿಸುತ್ತದೆ. ಇಲ್ಲಿ ಅಂಜಲಿಯು ಅಶುಭಗಳನ್ನು ಅಪ ಹರಿಸುವ ಚೋರಕೃತ್ಯವನ್ನು ಮಾಡುತ್ತದೆಂದು ಹೇಳಿದುದರೆ ಅಭಿಪ್ರಾಯವೇ ನೆಂದರೆ, ಈ ಸಂಸಾರಿಯಾದ ಜೀತನನಿಗೆ ಯಾವುದು ಹಿತವೆಂದು ತಿಳಿಯದೆ, ಅಶುಭ ಫಲಗಳನ್ನುಂಟುಮಾಡುವ ಭೋಗಗಳನ್ನು ಬಹು ಹಿತವಾದುದೆಂದು ಭಾವಿಸಿ, ಅವುಗಳನ್ನು ಅನುಭವಿಸುತ್ತಿರುವನು. ಅಂಜಲಿಯಿಂದ ಪ್ರಸನ್ನನಾದ ದೇವನು ಬಲಾತ್ಕಾರದಿಂದ ಅಂತಹ ಅಮಜ್ಗಳಗಳನ್ನೆಲ್ಲಾ ಅಪಹರಿಸಿ ಬಿಡುವನೆಂಬ ಭಾವವು. ಹಿತವಲ್ಲದನ್ನು ತಿನ್ನುತ್ತಿರುವ ಮೊಗುವಿನಿಂದ ತಾಯಿಯು ಹೇಗೆ ಮಗುವು ತಿಳಿಯದಹಾಗೆ ಅದನ್ನು ಅಪಹರಿಸಿ ಬಿಡುವಳೋ ಹಾಗೆ ಎಂಬ ತಾತ್ಪರ್ಯವು, ("**ಮುಷಸ್ತೇಯೀ**") ; **ಶುಭಾನಿ** ಮಜ್ಗಳಗಳನ್ನು, **ಪುಷ್ಣಾತಿ**-ಪುಷ್ಟೀಕರಿಸುತ್ತದೆ, **ಕದಾಪಿ** - ಯಾವಾಗಲೇಯಾಗಲಿ, ಮುಂದಕ್ಕೆಲ್ಲಾಕಾಲ ದಲ್ಲೂ, **ನಜಾತುಹೀಯತೇ** - ವ್ಯರ್ಥವಾದುದು ಆಗುವದೇ ಇಲ್ಲವು ಅಂಜ ಲಿಯು ಅನಿಷ್ಟ ನಿವೃತ್ತಿಯನ್ನೂ ಇಷ್ಟಪ್ರಾಪ್ತಿಯನ್ನೂ ಸಹ ಉಂಟುಮಾಡು ತ್ತದೆ; ಅದುದರಿಂದ "**ಅಂಜಲಿಃ ಪರಮಾನುದ್ರಾ ಕ್ಷಿಪ್ರಂದೇವ ಪ್ರಸಾ ದಿನೀ**" ಎಂದು ಹೇಳಲ್ಪಟ್ಟಿರುತ್ತದೆ. ಶ್ರೀಮದ್ರಾಮಾಯಣ ಕಿಷ್ಕಿಂಧಾಕಾಂಡ ದಲ್ಲಿ ಸೀತಾನ್ವೇಷಣದಲ್ಲಿ ಸಹಾಯ ಮಾಡುತ್ತೇವೆಂದು ವಾಗ್ದಾನಮಾಡಿ ಮರೆತು ಕೃತಾಪರಾಧನಾದ ಸುಗ್ರೀವನಿಗೆ ಮಹಾ ಪ್ರಾಜ್ಞನಾದ ಆಂಜನೇಯನು ಉಪದೇಶಿಸುತ್ತಾನೇನೆಂದರೆ :—"**ಕೃತಾಪರಾಧಸ್ಯ ಹಿ ತೇ ನಾನ್ಯತ್ಪಶ್ಯಾ ಮ್ಯಹಂ ಕ್ಷಮಂ । ಅಂತರೇಣಾಂಜಲಿಂಬದ್ಧ್ವಾಲಕ್ಷ್ಮಣಸ್ಯ ಪ್ರಸಾದನಾತ್**"॥ ಈಗ ಮಹಾ ಕೋಪದಿಂದ ಬಂದಿರುವ ಲಕ್ಷ್ಮಣನಲ್ಲಿ ಮಹಾಪರಾಧವನ್ನು ಮಾಡಿದ ನಿನಗೆ, ಅಂಜಲಿಯನ್ನು ಮಾಡಿ ಆತನ ಪ್ರಸನ್ನತೆಯನ್ನು ಪ್ರಾರ್ಥಿಸು ವದಕ್ಕಿಂತ ಉಚಿತವಾದ ಉಪಾಯವನ್ನು ನಾನು ಕಾಣೆನು," ಎಂದು ಅಂಜ ಲಿಯ ಪ್ರಭಾವವನ್ನು ವ್ಯಕ್ತಪಡಿಸಿರುತ್ತಾರೆ. ಸರ್ವೇಶ್ವರನ ಪ್ರಸನ್ನತೆಗಾಗಿ ಸಂಮಾರ್ಜನ, ಮಾಲಾಕರಣ, ದೀಪಾರೋಪಣ, ಅಭಿಷೇಕ, ಉತ್ಸವ, ಕೈಂಕರ್ಯಾ ದಿಗಳು ಹೇಳಲ್ಪಟ್ಟವೆ. ಇವುಗಳಲ್ಲೆಲ್ಲಾ ಕಷ್ಟತರವಾದ ದೇಹಶ್ರಮ, ವಿತ್ತ ಸಹಾಯ ಮೊದಲಾದವುಗಳು ಬೇಕು; ಅಂಜಲಿಯಾದರೋ ಹಾಗಲ್ಲದೆ ತುಂಬಾ ಸುಕರವಾಗಿ ದೇವದೇವನ ಕ್ಷಿಪ್ರ ಪ್ರಸನ್ನತೆಯನ್ನು ಸಂಪಾದಿಸಿಕೊಡುವ ಪ್ರಭಾವವುಳ್ಳದು ಎಂಬ ತಾತ್ಪರ್ಯವು. ಈ ಅಂಜಲಿಯು . ಈ ಮುಮುಕ್ಷುವಿಗೆ ಮೋಕ್ಷಪ್ರಾಪ್ತಿಯನ್ನೂ ಉಂಟುಮಾಡುತ್ತದೆಂದು ಹೇಳಿದರೆ, ಮೋಕ್ಷಕ್ಕೆ ಸಾಧನ

ಗಳು ನ್ಯಾಸವೂ ಉಪಾಸನೆಯೂ ಇವೆರಡೇ ಎಂಬ ಹೇಳಿಕೆಗೆ ವಿರುದ್ಧವಾಗುವದಿಲ್ಲವೇ ಎಂದರೆ ಈ ಕೇವಲ ಅಂಜಲಿಯೇ ಸಾಕ್ಷಾತ್ತಾಗಿ ಸಾಧನವಾಗುವದಿಲ್ಲವು. ಈ ಸಾಧನಗಳಲ್ಲಿ ಯಾವುದಾದರೂ ಒಂದನ್ನುಂಟುಮಾಡಲು ಸಹಕಾರಿಯೆಂದು ಭಾವಿಸತಕ್ಕದ್ದು. ಇದು ಅಶುಭಗಳಾದ ಪಾಪಗಳ ನಿವೃತ್ತಿಗೂ, ಸತ್ತ್ವೋನ್ಮೇಷಕ್ಕೂ ಜ್ಞಾನ ಭಕ್ತಿವೈರಾಗ್ಯಗಳನ್ನುಂಟುಮಾಡುವದಕ್ಕೂ, ಹೀಗೆ ಮೋಕ್ಷಪ್ರಾಪ್ತಿಗೆ ಸಹಾಯಕರವಾದುದು; ಅಥವಾ ಗುರೂಪಸದನ ಭರನ್ಯಾಸಾದಿಗಳಿಗೂ ಸಹಾಯಕರವಾಗಬಹುದೆಂಬ ತಾತ್ಪರ್ಯವು ಆದರೆ "ಧ್ಯಾಯನ್ ಕೃತೇಯಜನ್ ಯಜ್ಞೈಸ್ತ್ರೇತಾಯಾಂ ದ್ವಾಪರೇऽರ್ಚಯನ್। ಯದಾಪ್ನೋತಿ ತದಾಪ್ನೋತಿ ಕಲೌ ಸಂಕೀರ್ತ್ಯ ಕೇಶವಂ" ಕೃತಯುಗದಲ್ಲಿ ಉಪಾಸನೆಯಿಂದಲೂ, ತ್ರೇತಾಯುಗದಲ್ಲಿ ಯಜ್ಞಾನುಷ್ಠಾನಗಳಿಂದಲೂ, ದ್ವಾಪರದಲ್ಲಿ ಅರ್ಚಿಸುವದರಿಂದಲೂ ಯಾವ ಫಲಗಳನ್ನು ಸಾಧಿಸಬಹುದೋ, ಆ ಫಲಗಳನ್ನೆಲ್ಲ ಕಲಿಯುಗದಲ್ಲಿ ಕೇಶವನ ಸ್ತೋತ್ರಮಾತ್ರದಿಂದಲೇ ಹೊಂದಬಹುದೆಂದು ಹೇಳಿದೆಯಲ್ಲಾ, ಹಾಗೆ ಅಂಜಲಿಯೂ ಕೂಡ ಮೋಕ್ಷಪರ್ಯಂತ ಸರ್ವಾರ್ಥದಾಯಕವೆಂದು ನಂಬಲು ಅಡ್ಡಿ ಏನು ಎಂದರೆ, ಇಲ್ಲಿಯ ಮಾತೂ ಕೂಡ ಕೇವಲ ಕೇಶವ ಸಂಕೀರ್ತನೆಯೇ ಮೋಕ್ಷದಾಯಕವೆಂಬರ್ಥವಲ್ಲವು; ಆ ಕೇಶವ ಸಂಕೀರ್ತನೆಯೇ ಸಾಕ್ಷಾತ್ತಾದ ಮೋಕ್ಷೋಪಾಯಕ್ಕೆ ನಿಷ್ಪಾದಕನೆಂದು ತಿಳಿಯತಕ್ಕದ್ದು. ಆದುದರಿಂದ ಈ ಅಂಜಲಿಯು ಪ್ರಯೋಜನಾಂತರ ವರಿಗೆ ಅದನ್ನು ಸಾಧಿಸುವ ಉಪಾಯ ನಿಷ್ಪತ್ತಿಗೂ, ಅನನ್ಯ ಪ್ರಯೋಜನರಿಗೆ ಮೋಕ್ಷವನ್ನು ಸಾಧಿಸುವ ಉಪಾಯ ನಿಷ್ಪತ್ತಿಗೂ, ಸಾಕ್ಷಾತ್ತಾಗಿ ಹೇತುವೆಂಬ ಭಾವವು ಅಂಜಲಿ ಮಾಡಿದವನಿಗೆ "ನೇಹಾಭಿಕ್ರಮನಾಶೋಸ್ತಿ" ಎಂಬಲ್ಲಿ ಹೇಳಿರುವಹಾಗೆ ಎಂದಾದರೂ ಒಂದು ದಿನ ಮೋಕ್ಷಪ್ರಾಪ್ತಿಯುಂಟು ಎಂಬುದು ಚರಿತಾರ್ಥವು. ಆವರೆ ಅದು ಭರನ್ಯಾಸದೊಂದಿಗೆ ಸೇರಿದ್ದರೆ ಮೋಕ್ಷಪ್ರದವು.

(೨) ಉದೀರ್ಣ ಸಂಸಾರದವಾಶುಶುಕ್ಷಿಣಂ ಕ್ಷಣೇನ ನಿರ್ವಾಪ್ಯ ಪರಾಂಚ ನಿರ್ವೃತಿಮ್। ಪ್ರಯಚ್ಛತಿ ತ್ವಚ್ಚರಣಾರುಣಾಂಬುಜ ದ್ವಯಾನುರಾಗಾಮೃತಸಿಂಧು ಶೀಕರಃ ॥೨೯॥ ಈ ಶ್ಲೋಕದ ಮೂಲಕ ಮೇಲೆ ಹೇಳಿದ ರೀತಿಯಲ್ಲಿ ಅಂಜಲಿ ಮಾಡಲು ಕೂಡ ಅಶಕ್ತರಾಗಿರುವವರು "ವಿಷಯೀತೇ ಮಹಾರಾಜ ರಾಮವ್ಯಸನ ಕರ್ಶಿತಾಃ। ಅಪಿವೃಕ್ಷಾಃ ಪರಿಮ್ಲಾನಾಃ ಸಪುಷ್ಪಾಂಕುರ ಕೋರಕಾಃ" ॥ ಎಂದರೆ "ಓ ದಶರಥನೇ ನಿನ್ನ ದೇಶದಲ್ಲಿ ಶ್ರೀರಾಮನು ವನಕ್ಕೆ ತೆರಳಿದ ದುಃಖದಿಂದ, ಮನುಷ್ಯರು ಮಾತ್ರವೇ ಕ್ಲೇಶಪಡುತ್ತಿದ್ದಾರೆಂದು ಭಾವಿಸಬೇಡ, ವೃಕ್ಷ, ಚಿಗುರು, ಮೊಗ್ಗುಗಳಿಂದ ಪೂರ್ಣಗಳಾಗಿದ್ದ

ಮರಗಳೂ ಕೂಡ ಬಾಡಿಹೋದವು, ಎಂಬ ಸುಮಂತ್ರವಾಕ್ಯದಲ್ಲಿ ಹೇಳಿರುವ ಹಾಗೆ, ಅನುರಾಗ ಲೇಶವಾತ್ರದಿಂದಲೂ ಕೂಡ ಶ್ರೇಷ್ಠ ಸುಖವಾದ ಮೋಕ್ಷವನ್ನೂ ಸಹ ಪ್ರಾಪ್ತಕಾಲದಲ್ಲಿ ಹೊಂದಬಹುದೆಂದು ಹೇಳುತ್ತಾರೆ, ಇಲ್ಲಿಯೂ ಅನಿಷ್ಟ ನಿವೃತ್ತಿಯೂ, ಇಷ್ಟಪ್ರಾಪ್ತಿಯೂ ಹೇಳಲ್ಪಟ್ಟವೆ. **"ತ್ವಚ್ಚರಣಾ.....ಶೀಕರಃ"** **ತ್ವತ್** - ಸ್ವಯಂ ಆನಂದ ಸಾಗರನಾಗಿ ಆನಂದವನ್ನುಂಟುಮಾಡುವ ಕೃಪಾಕರನಾದ ನಿನ್ನ, **ಚರಣಾರುಣಾಂಬುಜದ್ವಯ** - ಕೆಂಪಗಿರುವ ಚರಣಾರವಿಂದಯುಗ್ಮದಲ್ಲಿ, **ಅನುರಾಗ** – ವಿಶೇಷ ಪ್ರೀತಿಯೆಂಬ, **ಅಮೃತಸಿಂಧು** - ಅಮೃತ ಸಮುದ್ರದ, **ಶೀಕರಃ** - ಒಂದು ಕಣವು, **ಉದೀರ್ಣ ಸಂಸಾರ ದವಾಶುಶುಕ್ಷಣಿಂ** - ಈ ಆತ್ಮನನ್ನು ನಾಶಮಾಡುವಹಾಗೆ ಜಾಜ್ವಲ್ಯಮಾನವಾದ ಸಂಸಾರವೆಂಬ ಕಾಡ್ಗಿಚ್ಚನ್ನು, **ಕ್ಷಣೇನ** – ಒಂದು ಕ್ಷಣದಲ್ಲಿ ಎಂದರೆ ಅಲ್ಪಕಾಲದಲ್ಲೇ, ಕಾಡ್ಗಿಚ್ಚನ್ನು ಆರಿಸುವದು ಸಾಧ್ಯವಲ್ಲವು, ನಾಲ್ಕು ಕಡೆಯಲ್ಲೂ ಜ್ವಲಿಸುತ್ತಾ ಬರುವವರಿಂದ ಶಮನವಾಡುವದು ಕಷ್ಟವು; ನಿನ್ನಮಿಯ ಚರಣಾರವಿಂದದಲ್ಲಿ ಮಾಡಿದ ಪ್ರೇಮವೆಂಬ ಅಮೃತದ ಒಂದು ತುಂತರು ಬಹು ಶೀಘ್ರದಲ್ಲೇ **"ಸಂಸಾರ ತಾಪತಾಪಿತರಿಗೆ"** ಶಮನವನ್ನುಂಟುಮಾಡುತ್ತದೆಂಬ **ಭಾವವು, ನಿರ್ವ್ಯಾಜ್ಯ** – ಆರಿಸಿ, ತಾಪತ್ರಯ ಯುಕ್ತವಾದುದು ಈ ಸಂಸಾರವು; ಆದುದರಿಂದ ಮೋಕ್ಷಾರ್ಥಿಗಳಿಗೆ ಈ ತಾಪವು ಕಾಡ್ಗಿಚ್ಚಿನ ತಾಪಕ್ಕೆ ಸಮಾನವಾದುದಾಗಿ ಅನೇಕಸ್ಥಳದಲ್ಲಿ ಅದಕ್ಕೆ ಹೋಲಿಸಿರುತ್ತಾರೆ, **ಪರಾಂನಿರ್ವೃತಿಂಚ-ಸರ್ವ ಶ್ರೇಷ್ಠ ಸುಖವಾದ** ಮೋಕ್ಷವನ್ನೂ ಸಹ, **ಪ್ರಯಚ್ಛತಿ-ಉಪಾಯ** ನಿಷ್ಪತ್ತಿಯ ಮೂಲಕ ಕೊಡುತ್ತದೆ. ಈ ಪ್ರೀತಿಯು ಉಪಾಯಾನುಷ್ಠಾನಕ್ಕೆ ಸಹಾಯವಾಗಿ ಉಪಾಯ ನಿಷ್ಪತ್ತಿಯ ಮೂಲಕ ಮೋಕ್ಷರೂಪವಾದ ಪರಿಪೂರ್ಣ ಬ್ರಹ್ಮಾನುಭವ, ನಿತ್ಯ ಕೈಂಕರ್ಯಗಳ ಪ್ರಾಪ್ತಿಯನ್ನುಂಟುಮಾಡುತ್ತದೆಂಬಭಾವವು

(೪) **ಮೊಯ್ತ್ತವಲ್ವಿನೈಯುಳ್ ನಿನ್ರು ಮೂನ್ರೆಳುತ್ತುಡೈಯಪೇರಾಲ್।**
ಕೆತ್ತಿರಬಂಧು ಮನ್ರೇ ಪರಾಙ್ಗದಿ ಕೆಣ್ಡು ಕೊಣ್ಡಾರ್ಕ್ಕ ।
ಇತ್ತನೈ ಯಡಿಯಾರಾನಾರ್ಕ್ಕಿರುಙ್ಗುಮ್ ನನ್ಮರಙ್ಗನಾಯ ।
ಪಿತ್ತನೈ ಪೆಱ್ಱುಮನ್ರೋ ಪಿರಿನಿಯುಳ್ ಪಿಣಙ್ಗುಮಾರೇ ॥೪॥

ಮೊಯ್ತ್ತ-ಜೇನು ಗೂಡಿನಲ್ಲಿ ಹುಳುಗಳು ಮುತ್ತಿರುವಹಾಗೆ ಮುತ್ತಿಕೊಂಡಿರುವ,**ವಲ್**-ಕಾಲತತ್ವವಿರುವವರೆಗೂ ಅನುಭವಿಸಿದರೂ ತೀರದಷ್ಟು ಬಲಿಷ್ಠವಾದ, **ವಿನೈಯ್ತ್ತುಳ್ ನಿನ್ರು**-ಐಪರೂಪವಾದನಮುದ್ರದೊಳಗೆ ನಿಂತು, **ಮೂನ್ರೆಳುತ್ತುಡೈಯಪೇರಾಲ್**-ಮೂರು ಅಕ್ಷರಗಳುಳ್ಳ ಗೋವಿಂದಾ ಎಂಬ ದಿವ್ಯನಾಮದಿಂದ, **ಕೆತ್ತಿರಬಂಧುಮ್ ಅನ್ರೆ**-"ಬ್ರಹ್ಮಬಂಧು" ಶಬ್ದವು ನೀಚ ಬ್ರಾಹ್ಮಣನನ್ನುಹೇಗೆ

(೪) "ಮೊಯ್ತ್ತ ವಲ್ವಿನೈಯುಳ್ ನಿನ್ರು" ಇತ್ಯಾದಿಗಳಿಲುಮ್ ಅಭಿಪ್ರೇತಮಾನ ಪಡಿಯೇ ಇವ್ವ ಫಲಸಿದ್ಧಿಕ್ಕು ಕೋಲಿನ ಕಾಲತ್ತುಕ್ಕುಳ್ಳೇ ಉಪಾಯ ಪೂರ್ತಿಯೈ ಯುಣ್ಡಾಕ್ಕಿ ರಕ್ಷಿಕ್ಕುಮೆನ್ನುವಿಡತ್ತೈ

ಹೇಳುತ್ತದೋ ಹಾಗೆ ತುಂಬಾ ನೀಚಕೃತ್ಯಗಳನ್ನು ಮಾಡುತ್ತಿದ್ದುದರಿಂದ ನೀಚ ಕ್ಷತ್ರಿಯನಾದ ಕ್ಷತ್ರಬಂಧುವಲ್ಲವೇ, **ಪರಾಂಗತಿಂ**-ಸರ್ವೋತ್ಕೃಷ್ಟಗತಿಯಾದ ಪರಮ ಪದವನ್ನು, **ಕಣ್ಡು ಕೊಣ್ಡಾರ್ಡ**-ನೋಡಿಕೊಂಡನು, ಎಂದರೆ ಹೊಂದಿ ಅನುಭವಿಸಿದನು; **ಇತ್ತನೈ ಯಡಿಯಾರಾನಾರ್ಕ್ಕು** – ಮನಸ್ಸಿನಿಂದ ಚಿನ್ತಿಸಿ ಉಪಾಸನಾದಿಗಳನ್ನು ಮಾಡದೆ ಬರೀ ಗೋವಿಂದಾ ಎಂದು ಇಷ್ಟುಮಾತ್ರ ನಾಮೋಚ್ಚಾರಣೆ ಮಾಡುವ ದಾಸಭೂತರಿಗೆ, **ಇರಜ್ಗುಮ್** - ಕೃಪೆಮಾಡಿ ಅನುಗ್ರಹಿಸುನ, **ನಮ್ ಅರಜ್ಗ ಆಯ** - ನನುಗೆ ಸ್ವಾಮಿಯಾಗಿ ಮಹೋಪಕಾರಗಳನ್ನು ಮಾಡಬೇಕೆಂದು ಸಿದ್ಧವಾಗಿರುವ ಶ್ರೀರಂಗನಾಥನಾಗಿರುನ, **ಪಿತ್ತನೈ** - ಸೌಶೀಲ್ಯ ಗುಣಯುಕ್ತನಾದ ಭಗವಂತನನ್ನು, **ಪಿಟ್ರುವುಮ್** - ಅತನನ್ನು ಆಶ್ರಯಿಸಿ, ಇಲ್ಲೂ ಪರಮ ಪದದಲ್ಲೂ ಸಹ ಅನುಭವಿಸುವ ಅವಕಾಶವಿದ್ದರೂ, **ಪಿರಿವಿಯುಳ್** – ಪುನಃಪುನಃ ಜನ್ಮಗಳಿಗೆ ಸಿಲುಕಿ, **ಪಿಣಜ್ಗುಮ್ ಆರ್** - ನರಳುವ ವಿಧಾನವೇ, **ಅನ್ನೋ** - ಅಯ್ಯೋ ದುರ್ದೆಶೆಯೇ ಎಂಬ ಭಾವವು ಈ ಶ್ಲೋಕದಲ್ಲಿ ಮಹಾಪಾಪಿಷ್ಠನಾದ ಕ್ಷತ್ರಬಂಧುವೂ ಕೂಡ ಗೋವಿಂದನಾಮ ಸಂಕೀರ್ತನದಿಂದ ಮುಕ್ತಿಯನ್ನು ಹೊಂದಿದನೆಂದು ಹೇಳಲ್ಪಟ್ಟರುತ್ತದೆ. ಕ್ಷತ್ರಬಂಧುವಿನ ವೃತ್ತಾಂತಕ್ಕೆ ಇದೇ ಗ್ರಂಥದ ಗುರುಪರಂಪರಾಸಾರದ ೫೦ ನೆಯ ಪುಟವನ್ನು ನೋಡಿ. ಈತನಿಗೆ ಸದ್ಗುರು ಪ್ರಾಪ್ತಿಯು ಶ್ರೀ ನಾರದರ ರೂಪದಲ್ಲಿ ಲಭಿಸಿ, ಮೂಲಮಂತ್ರ ಮೊದಲಾದ ಉಪದೇಶಗಳ ಮೂಲಕ ದೊರೆತು, ಮೋಕ್ಷಪ್ರಾಪ್ತಿಯುಂಟಾಯಿತೆಂಬ ವೃತ್ತಾಂತವಿರುವದರಿಂದ ಭರನ್ಯಾಸರೂಪೋಪಾಯಾನುಷ್ಠಾನ ಮೂಲಕವೇ ಲಭಿಸಿರಬಹುದೆಂದು ನಂಬತಕ್ಕದ್ದಾಗಿರುತ್ತದೆ. **ಇತ್ಯಾದಿಗಳಿಲುಮ್** - ಇವೇ ಮೊದಲಾದ ಪ್ರಮಾಣಗಳಲ್ಲೂ, **ಅಭಿಪ್ರೇತ ಮಾನ ಪಡಿಯೇ** - ತೋರಿ ಬರುವಹಾಗೆ, **ಇವ್ವ** – ಈ ಮುಂದ ವಿಶ್ವಾಸಯುಕ್ತನಾಗಿ ಭರನ್ಯಾಸವನ್ನನುಷ್ಠಿಸಿದವನು, **ಕೋಲಿನ ಕಾಲತ್ತುಕ್ಕುಳ್ಳೇ** – ಪ್ರಾರ್ಥಿಸಿದ ಕಾಲದೊಳಗೇ, **ಉಪಾಯ ಪೂರ್ತಿಯುಣ್ಡಾಕ್ಕಿ** - ಮಹಾ ವಿಶ್ವಾಸದೊಂದಿಗೆ, **ಉಪಾಯ ಪೂರ್ತಿಯುಂಟಾಗುನಹಾಗೆ ಮಾಡಿ, ರಕ್ಷಿಕ್ಕುಮ್** - ರಕ್ಷಿಸುವದು. ಇದಕ್ಕೆ ಕರ್ತೃಪದವು **ಅವೂರ್ಣ** ಶರಣಾಗತಿಯು ಎಂದು ತಾತ್ಪರ್ಯಮೂಲಕ

(೪) ತಿರುಮೊಳೈ.

ನಿನೈತ್ತು (೫)"ವೃಥೈವ ಭವತೋ ಯಾತಾ ಭೂಯಸೀ ಜನ್ಮ ಸಂತತಿಃ। ತಸ್ಯಾಮನ್ಯತಮುಂ ಜನ್ಮ ಸಂಚಿಂತ್ಯ ಶರಣಂ ವ್ರಜ" ಎನ್ನು ದೇವಲನೈ ಕುರಿತ್ತು ಶ್ರೀ ಶಾಣ್ಡಿಲ್ಯ ಭಗವಾನರುಳಿಚ್ಚಿಯ್ದಾನಿರೆ (೬) "ಶರಣ್ಯಂ ಶರಣಂಚ ತ್ವಾ ಮಾಹುರ್ದಿವ್ಯಾ ಮಹರ್ಷಯಃ"। ಎನ್ನುದು

ಇಟ್ಟುಕೊಳ್ಳಬೇಕಾಗುತ್ತದೆ, ಹೀಗೆ ರಕ್ಷಿಸುತ್ತದೆ, ಎನ್ನುಮಿಡತ್ತೈ ನಿನೈತ್ತು - ಎಂಬ ಸಂದರ್ಭವನ್ನೇ ಪರ್ಯಾಲೋಚಿಸಿ, "**ಭವತಃ**-ನಿನಗೆ, **ಭೂಯಿಸೀ ಜನ್ಮ ಸಂತತಿಃ** - ಬಹುವಾದ ಜನ್ಮ ಪರಂಪರೆಯು, **ವೃಥೈವ** - ನಿನಗೆ ವಿಶ್ವಾಸವು ಮಂದವಾದುದರಿಂದಲಾಗಲಿ, ಇಲ್ಲದುದರಿಂದಲಾಗಲಿ ವ್ಯರ್ಥವಾಗಿಯೇ, **ಯಾತಾ**-ಕಳೆದು ಹೋಯಿತು, **ತಸ್ಯಾಂ** - ಆ ಜನ್ಮಸಂತತಿಯಲ್ಲಿ, **ಅನ್ಯತಮುಂ ಜನ್ಮ** - ಈ ಒಂದು ಜನ್ಮವೆಂದು, **ಸಂಚಿಂತ್ಯ** - ಆಲೋಚಿಸಿ, **ಶರಣಂವ್ರಜ** - ಶರಣಾಗತಿಯನ್ನು ಹೊಂದು ಎಂದರೆ ಅನುಷ್ಠಿಸು," **ಎನ್ನು** - ಎಂದು, **ದೇವಲನೈಕುರಿತ್ತು** - ದೇವಲನನ್ನು ಕುರಿತು, **ಶ್ರೀ ಶಾಂಡಿಲ್ಯ ಭಗವಾನ್, ಅರುಳಿಚ್ಚ್ಚಿಯ್ದಾನಿರೆ** - ಕೃಪಯಾ ಉಪದೇಶಿಸಿದರಷ್ಟೇ. ಹಿಂದೆ ಅನೇಕ ಜನ್ಮಸಂತತಿಕಳೆದರೂ ನೀನು ಶರಣಾಗತಿಯನ್ನನುಷ್ಠಿಸದೇ ಇದ್ದುದರಿಂದ ವ್ಯರ್ಥವಾದವು. ಈಗಲಾದರೂ ಆ ವ್ಯರ್ಥವಾದ ಜನ್ಮಗಳಲ್ಲಿ ಇದೂ ಒಂದೂ ವ್ಯರ್ಥವೆಂದಾದರೂ ಮಹಾ ವಿಶ್ವಾಸವಿರಲಿ, ಇಲ್ಲವಿರಲಿ ನೀನು ಶರಣಾಗತಿ ಮಾಡು ಹಾಗೆ ಮಾಡುವುದರಿಂದ, ಮುಂದಕ್ಕೆ ಮಹಾ ವಿಶ್ವಾಸಮೂಲಕ ಶರಣಾಗತಿಯನ್ನು ಮಾಡಿ ಕೊನೆಗೆ ಫಲವನ್ನು ಹೊಂದುವಿ ಎಂಬ ತಾತ್ಪರ್ಯವು. ಆದರೆ ಮಹಾ ವಿಶ್ವಾಸವುಂಟಾಗುವದು ಬಹಳ ದುಸ್ತರವು, ಮಹರ್ಷಿಗಳಿಗೆ ಒಂದುವೇಳೆ ಉಂಟಾಗಬಹುದು, ಹೀಗಿರುವಾಗ ಪ್ರಪತ್ತಿಗೆ ಅಜ್ಞ ವೆಂಬುದು ಹೇಗೆ ? ಎಂದರೆ "**ಶರಣ್ಯಂ**" ಎಂದಾರಂಭಿಸಿ ಸಮಾಧಾನ ಹೇಳಿ, ಪ್ರಪತ್ತಿಗೆ ಮಹಾ ವಿಶ್ವಾಸವು ಒಂದು ಅಜ್ಞವಾಗುವದರಲ್ಲಿ ನಿಸ್ಸಂದೇಹವೆಂದು ಈ ಮಹಾ ವಿಶ್ವಾಸಾಜ್ಞ ವಿಷಯವನ್ನು ನಿಗಮನವಮಾಡಿ ಹೇಳುತ್ತಾರೆ :—(೬) **ಶರಣ್ಯಂ** - ಜ್ಞಾನಶಕ್ತಿ ದಯಾದಿ ಕಲ್ಯಾಣ ಗುಣಾಕರನಾಗಿ ಪ್ರಾಪ್ಯವೆಂದೂ, **ಶರಣಂಚ** - ಆಶ್ರಯಿಸಲು ಯೋಗ್ಯವಾದ ಗುಣಗಳಿಂದ ಸಿದ್ಧೋಪಾಯನೆಂದೂ, **ದಿವ್ಯಾ ಮಹರ್ಷಯಃ** - ತತ್ವಹಿತ ಪುರುಷಾರ್ಥಗಳ ಜ್ಞಾನವಿರುವ ಮಹರ್ಷಿಗಳು, **ಶ್ರೀ** ಪರಾಶರ ವ್ಯಾಸ ಶೌನಕ ವಾಲ್ಮೀಕ್ಯಾದಿಗಳು ಅಥವಾ ನಿತ್ಯ ಸೂರಿಗಳ ಅವತಾರವಾದ ಮಹರ್ಷಿಗಳು, **ಆಹುಃ** - ಹೇಳು

---

(೫) ಶಾಂಡಿಲ್ಯಸ್ಮೃತಿ. (೬) ರಾ. ಯುದ್ಧ. ೧೨೦. ೧೪.

ವುಮ್, ಮಹರ್ಷಿಗಳುಕ್ಕೇ ವಿಶ್ವಾಸಮ್ ಕೂಡುವದು, ಇವರ್‌ಗಳ್ ವಾಕ್ಯತ್ತೈ ವಿಟ್ಟು ಮುಂದ ವಿಶ್ವಾಸರ್ಕ್ಕೆ ತೆಳಿವಿಕ್ಕ ವೇಣುಂ ಪೆನ್ರು ಪಡಿ. (ಇಪ್ಪಡಿ) ವಿಶ್ವಾಸತಾರತಮ್ಯ ಮುಣ್ಣಾಗ್ಯೈಯಾಲೇ ಯಥಾಶಾಸ್ತ್ರಮ್ ಮಹಾ ವಿಶ್ವಾಸಮ್ ಪ್ರಪತ್ತ್ಯಜ್ಞವಾಗ ಕ್ಕೂಡೈ ಯಿಲ್ಲೈ.

ತ್ತಾರೆ. ಇದು ಚತುರ್ಮುಖನು ಶ್ರೀರಾಮನನ್ನು ಕುರಿತು ಹೇಳುವ ವಾಕ್ಯವು " **ಎನ್ರುವುಮ್** - ಎಂಬಸ್ತುತಿಯು ಅಭಿಪ್ರಾಯವೇನೆಂದರೆ ತಿಳಿಸುತ್ತಾರೆ :— **ಮಹರ್ಷಿಗಳುಕ್ಕೇ ವಿಶ್ವಾಸಮ್ ಕೂಡುವದು** - ಮಹರ್ಷಿಗಳಿಗೇ ಮಹಾ ವಿಶ್ವಾಸವು ಸಲ್ಲುತ್ತದೆಂಬುವ ಹೇಳಿಕೆಯಭಿನ್ನಾಯವು, **ಇವರ್‌ಗಳ್ ವಾಕ್ಯತ್ತೈ ವಿಟ್ಟು** – ಇವರುಗಳ ವಾಕ್ಯವನ್ನು ಮುಂದುಮಾಡಿ, **ಮುಂದ ವಿಶ್ವಾಸರ್ಕ್ಕೆ** – ವಿಶ್ವಾಸದಲ್ಲಿ ನ್ಯೂನತೆ ಯಿರುವವರಿಗೆ, **ತೆಳಿವಿಕ್ಕವೇಣುಮ್**–ಸರಿಯಾದ ಜ್ಞಾನವನ್ನುಂಟುಮಾಡತಕ್ಕದ್ದೆಂದು, **ಎನ್ರುಪಡಿ** - ಎಂದು ಉಪದೇಶಿಸಿದಹಾಗೆಂದು ಭಾವಿಸತಕ್ಕದ್ದು, **ಶರಣ್ಯಂ ಶರಣಂಚ** - ಎಂದು ಭಾವಿಸಬೇಕಾದರೆ, ಆತನೇ ಉಪೇಯನೂ ಉಪಾಯವೂ, ಆತನಲ್ಲದೆ ನಮಗೆ ಬೇರೆ ಗತಿಯಿಲ್ಲವಾದುದರಿಂದ ಆತನೇ **ಖಂಡಿತವಾಗಿಯೂ** ರಕ್ಷಿಸುವನೆಂಬ ಮಹಾ **ವಿಶ್ವಾಸದಿಂದ** ಮಹರ್ಷಿಗಳೇನೋ ಹೇಳಿರುತ್ತಾರೆ; ಈ ಹೇಳಿಕೆಯಿಂದ ಮುಂದ ವಿಶ್ವಾಸರೂಕೂಡ ಮುಂದಕ್ಕೆ **ಪೂರ್ಣವಿಶ್ವಾಸಯುಕ್ತರಾಗಿ** ಉಪಾಯ ನಿಷ್ಪತ್ತಿಯುಳ್ಳವರಾಗುತ್ತಾರೆಂಬ ಭಾವವು. ಆದುದರಿಂದ **ವಿಶ್ವಾಸ ತಾರತಮ್ಯ ಮುಣ್ಣಾಗ್ಯೈಯಾಲೇ**- ವಿಶ್ವಾಸ ತಾರತಮ್ಯ ಉಂಟೆಂಬುದು ಶಾಸ್ತ್ರಮುಖೇನ ತೋರಿಬರುವದರಿಂದ, **ಯಥಾಶಾಸ್ತ್ರಮ್** - ಈ ಪ್ರಪತ್ತಿ ಶಾಸ್ತ್ರದಲ್ಲಿ ಹೇಳಿರುವಹಾಗೆ, **ಮಹಾ ವಿಶ್ವಾಸವು, ಪ್ರಪತ್ತ್ಯಜ್ಞವಾಗಕ್ಕೂಡೈಯಿಲ್ಲೈ**–ಪ್ರಪತ್ತಿಗೆ ಅಜ್ಞವಾಗುವದಕ್ಕೇನೂ ಅಭ್ಯಂತರ ಅಧವಾ ನ್ಯೂನತೆ ಯಿಲ್ಲವು, ಪೂರ್ವ ಪಕ್ಷಿಗಳ ಎರಡು ಶಙ್ಕೆಗಳಿಗೂ ಸಮಾಧಾನ ಹೇಳಿರುತ್ತಾರೆ. (೧) ವಿಶ್ವಾಸದಲ್ಲಿ ತಾರತಮ್ಯವೆಂದರೇನು ? ಎಂದು ಕೇಳಿದ್ದರು. ಇದಕ್ಕೆ ತಾರತಮ್ಯ ಉಂಟೆಂದು ಸ್ಥಾಪಿಸಿದರು. (೨) ಮಹಾವಿಶ್ವಾಸವು ಪ್ರಪತ್ತಿಗೆ ಅಜ್ಞವಲ್ಲವೆಂದು ಪೂರ್ವಪಕ್ಷಮಾಡಿದ್ದರು; ಮಹಾ ವಿಶ್ವಾಸವು ಅಜ್ಞವೆಂದು ಈಗ ಸ್ಥಾಪಿಸಿದರು

ಮುಂದೆ ಭಕ್ತಿ ಪ್ರಪತ್ತಿಗಳಲ್ಲಿ ವಿಶ್ವಾಸವು ನಷ್ಟವಾಗಲು ಕಾರಣಗಳನ್ನು ತಿಳಿಸಿ, ಅವುಗಳಿಗೆ ಪರಿಹಾರವನ್ನು ಹೇಳುತ್ತಾರೆ.

ಹಿಂದೆ ಮಹಾ ವಿಶ್ವಾಸವು ಪ್ರಪತ್ತ್ಯಜ್ಞವಾಗಲಾರದೆಂಬ ವಾದವನ್ನು ನಿರಾ

ಅಥ ಭಕ್ತಿ ಪ್ರಪತ್ತ್ಯೋಃ ವಿಶ್ವಾಸ ಶೈಥಿಲ್ಯಹೇತೂ ಅನೂದ್ಯ, ಪರಿಹರತಿ.

ಶಿಲರ್ಕ್ಕಿವತ್ತಿಲ್ ವಿಶ್ವಾಸಜ್ಕುಲ್ಯೆಯುಮ್ ಪಡಿಯುಮ್, ಅದಕ್ಕು ಪರಿಹಾರಮುಮ್ ಶೊಲ್ಲುಗಿರೋಮ್. — ಭಕ್ತಿ ಪ್ರಪತ್ತಿಗಳ್ ಬುದ್ಧಿ ಭೇದತ್ತಾಲೆ ಐಶ್ವರ್ಯಮೋಕ್ಷಜ್ಗಳಾಗಿರ ವಿರುದ್ಧ ಫಲಜ್ಗಳೈ ಕೊಡುಕ್ಕಕ್ಕೂಡುಮೋ? ವಿರೈಕ್ಕರವನುಡೈಯ ಅಭಿಸಂಧಿ ಭೇದತ್ತಾಲೆ ಒರುವಿರೈ

ಕರಿಸಿ ಅದು ಪ್ರಪತ್ತಿಯ ಆಜ್ಞವೇ ಎಂದು ಸ್ಥಾಪಿಸಿದರು. ಪ್ರಾಸಜ್ಗಿಕವಾಗಿ, ಈ ಸಾಧ್ಯೋಪಾಯಗಳಾದ ಭಕ್ತಿ, ಪ್ರಪತ್ತಿಗಳಲ್ಲಿ ವಿಶ್ವಾಸವು ಕಮ್ಮಿಯಾಗುವದಕ್ಕೆ ಹೇತುವಾಗಿ ಕೆಲವು ಕಜ್ಷ್ಟಾಗಳುಂಟೆಂದು ಮೇಳೆ ಅವುಗಳಿಗೆ ಪರಿಹಾರವನ್ನು ಹೇಳುತ್ತಾರೆ. **ಶಿಲರ್ಕ್ಕು**-ಕೆಲವರಿಗೆ, **ಇವತ್ತಿಲ್**-ಈ ಸಾಧ್ಯೋಪಾಯಗಳಲ್ಲಿ, **ವಿಶ್ವಾಸವು ಕುಲೈಯುನುಮ್ ಪಡಿಯುನುಮ್**-ನಷ್ಟವಾಗುವ ಪ್ರಕಾರವನ್ನೂ, ಅದಕ್ಕೆ ಪರಿಹಾರವನ್ನೂ, **ಶೊಲ್ಲುಗಿರೋಮ್**-ಮುಂದೆ ಹೇಳುವೆವು ಇದು ಪ್ರತಿಜ್ಞಾವಾಕ್ಯವು.

ಮೊದಲು ವಿಶ್ವಾಸ ಶೈಥಿಲ್ಯ ಉಂಟಾಗುವಹಾಗೆ ಮಾಡುವ ವ್ಯುತ್ಪತ್ತಿಯನ್ನು ಅನುವಾದ ಮಾಡುತ್ತಾರೆ, **ಭಕ್ತಿಪ್ರಪತ್ತಿಗಳು, ಬುದ್ಧಿಭೇದತ್ತಾಲೆ** - ಸಜ್ಕಲ್ಪ ಅಥವಾ ಉದ್ದೇಶ್ಯದ ಭೇದದಿಂದ, **ಐಶ್ವರ್ಯ ಮೋಕ್ಷಜ್ಗಳಾಗಿರ** - ಅಧಿಕಾರಿಯು ಐಶ್ವರ್ಯವನ್ನಪೇಕ್ಷಿಸಿದರೆ ಅದನ್ನೂ, ಅಥವಾ ಮೋಕ್ಷವನ್ನಪೇಕ್ಷಿಸಿದರೆ ಅದನ್ನೂ, ಹೀಗೆ ಬೇರೆಬೇರೆಯಾದ, **ವಿರುದ್ಧಫಲಜ್ಗಳೈ** - ವ್ಯತ್ಯಸ್ತಗಳಾದ ಫಲಗಳನ್ನು, ಹೇಗೆ ವ್ಯತ್ಯಸ್ತವೆಂದರೆ ಐಶ್ವರ್ಯವೆಲ್ಲಾ ಅಲ್ಪಾಸ್ಥಿರ ಫಲಗಳುಳ್ಳವು, ಮೋಕ್ಷವಾದರೋ ನಿತ್ಯವಾಗಿ ನಿರತಿಶಯವಾಗಿ ಮಹತ್ತಾಗಿರುವದು. ಹೀಗೆ ಭಿನ್ನ ಫಲಗಳನ್ನು, **ಕೊಡುಕ್ಕಕ್ಕೂಡುಮೋ** - ಕೊಡಲು ಸಾಧ್ಯವೋ? ಒಂದು ಕರ್ಮಕ್ಕೆ ಒಂದು ನಿಯತವಾದ ಫಲವಿರಬೇಕು. ಶರಣಾಗತಿಯೇಯಾಗಲಿ ಉಪಾಸನವೇ ಆಗಲಿ ಅಧಿಕಾರಿಯು ಐಹಿಕಾದಿ ಸಂಪತ್ತನ್ನಪೇಕ್ಷಿಸಿದರೆ ಆ ಫಲವನ್ನೂ ಅಥವಾ **ಮೋಕ್ಷವನ್ನ**ವೇಕ್ಷಿಸಿದರೆ ಅದನ್ನೂ, ಹೀಗೆ ಎರಡು ಭಿನ್ನ ಫಲವನ್ನು, ಒಂದೇ ಕರ್ಮವು ಹೇಗೆ ಕೊಟ್ಟೀತು? ಎಂದಾಕ್ಷೇಪವು. ಈ ಆಕ್ಷೇಪವು ಒಂದು ಲೋಕವೈಷಮ್ಯಾಂತಮೂಲಕ ವ್ಯಕ್ತಗೊಳಿಸಲ್ಪಡುತ್ತದೆ, ಹೇಗೆಂದರೆ **ವಿರೈಕ್ಕಿರವನುಡೈಯ ಅಭಿಸಂಧಿಭೇದತ್ತಾಲೆ** - ಬೀಜಬಿತ್ತುವನ ಸಜ್ಕಲ್ಪದ ಭೇದದಿಂದ, **ಒರುವಿರೈ**-ಒಂದು ಬೀಜವು, **ವೇರೊರು ಫಲತ್ತೈ ಕೊಡುಕ್ಕ**

ವೇರೊರು ಫಲತ್ತೈ ಕೊಡುಕ್ಕಕೂಡವೋ? ಎನ್ರು ಶಿಲರ್ ಪಾರ್ಪ್ಪರ್ಗಳ್. ಇದುಕ್ಕು ಪರಿಹಾರಮ್:–ನ್ಯಾಯಜ್ಞಾಲ್ ಬಾಧಿಕ್ಕವೊಣ್ಣಾದ ಪಡಿ ಪ್ರತ್ಯಕ್ಷಾದಿಗಳೈ ಪ್ಪೋಲೆ ಸ್ವವಿಷಯತ್ತಿಲ್ ಪ್ರಮಾಣಮಾನ ಶಾಸ್ತ್ರಮ್ ಕಾಟ್ಟುಗೈಯಾಲ್ ಇಪ್ಪಡಿ ಕೂಡುಮ್. ಲೋಕತ್ತಿಲುಮ್

ಕೊಡವೋ - ಭಿನ್ನ ಫಲಗಳನ್ನು ಕೊಡಲು ಸಾಧ್ಯವೊ? **ಎನ್ರು ಶಿಲರ್ ಪಾರ್ಪ್ಪರ್ಗಳ್** - ಎಂದು ಕೆಲವರು ಆಲೋಚಿಸುವರು. ಭರ್ತೃವನ್ನು ಬಿಟ್ಟಿ ಒಬ್ಬನು ರಾಗಿ ಪೈರನ್ನೂ, ಇನ್ನೊಬ್ಬನು ಗೋಧಿ ಪೈರನ್ನೂ, ತನ್ನ ಇಷ್ಟಾನುಸಾರ ಪಡೆಯುವದು ಹೇಗೆ ಅಸಾಧ್ಯವೋ ಹಾಗೆ ಭಕ್ತಿಯಾಗಲಿ, ಪ್ರಪತ್ತಿಯಾಗಲಿ ಒಬ್ಬನಿಗೆ ಐಶ್ವರ್ಯವನ್ನೂ ಇನ್ನೊಬ್ಬನಿಗೆ ಮೋಕ್ಷವನ್ನೂ ಅವರುಗಳ ಪ್ರಾರ್ಥನಾನುಗುಣವಾಗಿ ಕೊಡಲು ಸಾಧ್ಯವಲ್ಲವೆಂಬುದುಆಕ್ಷೇಪವು. ಇದಕ್ಕೆ ಪರಿಹಾರವನ್ನು ಎರಡು ವಿಧವಾಗಿ ಅನುಗ್ರಹಿಸುತ್ತಾರೆ.

ಶಾಸ್ತ್ರಮರ್ಯಾದೆಯಲ್ಲಿ ಪ್ರತ್ಯಕ್ಷಾನುಮಾನಗಳ ನ್ಯಾಯವು ಕೂಡುವದಿಲ್ಲವು, ಎಂದು ತಿಳಿಸುತ್ತಾರೆ. ಆದರೆ ಅನೇಕ ಕಡೆಗಳಲ್ಲಿ ಶಾಸ್ತ್ರಪಜ್ಞಾಗಳು ಲೋಕದೃಷ್ಟಾಂತದಿಂದ ಸಮರ್ಥಿಸಲ್ಪಟ್ಟಿರುತ್ತದೆಯಲ್ಲಾ ಎಂದರೆ, ಸಮರ್ಥನೆಯನ್ನು ಮಾಡಬಹುದು. ಆದರೆ ಶಾಸ್ತ್ರಪಜ್ಞಾಗಳನ್ನು ಲೋಕನ್ಯಾಯದಿಂದ ಹೊಡೆದು ಹಾಕುವದು ಸರಿಯಲ್ಲವೆಂದು ತಿಳಿಸುತ್ತಾರೆ **ಇದುಕ್ಕು ಪರಿಹಾರಮ್** - ಇದಕ್ಕೆ ಪರಿಹಾರವು, ಕ್ರಿಯಾಪದವಿಲ್ಲದುದರಿಂದ ಹಿಂದಿನ **"ಶೊಲ್ಲು ಗಿರೋಮ್"** ಎಂದು ಇಟ್ಟುಕೊಳ್ಳತಕ್ಕದ್ದು; ಅಥವಾ ಪರಿಹಾರವು ಏನೆಂದರೆ ಎಂದು ಇಟ್ಟುಕೊಳ್ಳತಕ್ಕದ್ದು, **ನ್ಯಾಯಜ್ಞಾಲ್ ಬಾಧಿಕ್ಕವೊಣ್ಣಾದ** - ಪ್ರತ್ಯಕ್ಷಾನುಮಾನ ಪ್ರಮಾಣಗಳಿಗೆ ಸಂಬಂಧಿಸಿದ ನ್ಯಾಯಗಳಿಂದ ಬಾಧಿಸಕೂಡದ, ಎಂದರೆ ಹೊಡೆದು ಹಾಕಕೂಡದ, ತಿರಸ್ಕರಿಸಬಾರದ ಎಂಬರ್ಥವು, **ಪ್ರತ್ಯಕ್ಷಾದಿಗಳೈ ಪ್ಪೋಲೆ ಸ್ವವಿಷಯತ್ತಿಲ್ ಪ್ರಮಾಣಮಾನ ಶಾಸ್ತ್ರಮ್** - ಲೋಕ ವಿಷಯಗಳಲ್ಲಿ ಪ್ರತ್ಯಕ್ಷವೂ, ಆದಿಶಬ್ದದಿಂದ ಅನುಮಾನವೂ ಹೇಗೆ ಪ್ರಮಾಣಗಳೋ, ಹಾಗೆಯೇ **"ಸ್ವವಿಷಯತ್ತಿಲ್"** ಎಂದರೆ ಪ್ರತ್ಯಕ್ಷಾನುಮಾನಗಳಿಂದಲ್ಲದೆ **"ಶಾಸ್ತ್ರೇಣೈವಾವ ಸೇಯೇ"** ಶಾಸ್ತ್ರದಿಂದ ಮಾತ್ರ ವೇತಿಕೆಯತಕ್ಕ ವಿಷಯದಲ್ಲಿ, ಅಥವಾ ಭಕ್ತಿಪ್ರಪತ್ತಿರೂಪಸಾಧ್ಯೋಪಾಯಾನುಷ್ಠಾನದಲ್ಲಿ, **ಪ್ರಮಾಣಮಾನ** - ಪ್ರಮಾಣವಾಗಿರುವ, **ಶಾಸ್ತ್ರಮ್** - ಶಾಸ್ತ್ರವು, **ಕಾಟ್ಟುಗೈಯಾಲ್** - ತೋರಿಸುವದರಿಂದ, **ಇಪ್ಪಡಿ** - ಹೀಗೆ ಎಂದರೆ ಒಂದೇ ಅನುಷ್ಠಾನವು ಅಧಿಕಾರಿಯ ಪ್ರಾರ್ಥನಾನುಗುಣವಾಗಿ ಭಿನ್ನ ಫಲದಾಯಕವಾಗು

ವದು, **ಕೂಡುವು**ದು - ಉಪಪನ್ನವಾದುದು ಅಥವಾ ಸಮಂಜಸವಾದುದು. **ಲೌಕಿಕ ವಿಷಯ**ದಲ್ಲಿ ಪ್ರತ್ಯಕ್ಷಾನುಮಾನಗಳು ನ್ಯಾಯವು. ಅತೀಂದ್ರಿಯವಾದ ವಿಷಯದಲ್ಲಿ ಪ್ರತ್ಯಕ್ಷಾನುಮಾನಗಳು ಪ್ರಯೋಜನವಾದವಲ್ಲವು. ಸರ್ವೇಶ್ವರನು ಒಬ್ಬನುಂಟು, ಆತನ ಸ್ವರೂಪವಿಂತಾದುದು, ಸರ್ವೇಶ್ವರನನ್ನು ಹೊಂದುವ ಉಪಾಯಗಳು ಇವು, ಇಂತಹ ನಮ್ಮ ಇಂದ್ರಿಯಗಳಿಗೆ ಗೋಚರವಲ್ಲದ ವಿಷಯದಲ್ಲಿ ಶಾಸ್ತ್ರವೇ ಪ್ರಮಾಣವು, ಲೌಕಿಕ ತರ್ಕವಾದಗಳು ಅವುಗಳ ವಿಷಯದಲ್ಲಿ ಉಪಯೋಗವಾದವುಗಳಲ್ಲವು. ಶಾಸ್ತ್ರ ಮರ್ಯಾದೆಯನ್ನು ಒಪ್ಪಿಕೊಂಡು ಅವುಗಳನ್ನು ಬೇಕಾದರೆ ಲೋಕತರ್ಕದಿಂದ ಸಮರ್ಥಿಸಬಹುದು. ಇಂತಹ ತರ್ಕವನ್ನು ವೇದವೂ ಕೂಡ ಅನುಮೋದಿಸುತ್ತದೆ; ಹೇಗೆಂದರೆ, ಸರ್ವೇಶ್ವರನು, ಜಗತ್ತಿಗೆ ಸರ್ವವಿಧಕಾರಣನು ಎಂದು ಸಮರ್ಥಿಸಲು **ಯಥೋರ್ಣನಾಭಿ ಸೃಜತೇ ಗೃಹ್ಣತೇಚ** - ಜಾಡರೆ ಹುಳವು ತಂತು ನಿರ್ಮಾಣದಲ್ಲಿ ಹೇಗೆ ನಿಮಿತ್ತ ಉಪಾದಾನಾದಿ ಕಾರಣವೋ ಹಾಗೆ ಎಂದು ಲೋಕ ನ್ಯಾಯವನ್ನು ತರಬಹುದು. ಆದರೆ, **"ನಹಿ ವಚನ ವಿರೋಧೇ ನ್ಯಾಯಃ ಪ್ರವರ್ತತೇ"** ಎಂಬ ನ್ಯಾಯಾನುಸಾರ ಅತೀಂದ್ರಿಯ ವಿಷಯದಲ್ಲಿ ಲೋಕನ್ಯಾಯವನ್ನನುಸರಿಸಿ, ಶಾಸ್ತ್ರವಚನವನ್ನು ಹೊಡೆದು ಹಾಕಕೂಡದೆಂಬ ಭಾವವು. ಆದುದರಿಂದ ಸಾಧ್ಯೋಪಾಯಾನುಷ್ಠಾನವು ಅಧಿಕಾರಾನುಗುಣವಾಗಿ ತನ್ನ ಇಷ್ಟಾರ್ಥಪ್ರಾಪ್ತಿಗಾಗಿ ಶಾಸ್ತ್ರಗಳಲ್ಲಿ ವಿಧಿಸಿರುವದರಿಂದ ಭಿನ್ನ ಫಲಗಳನ್ನು ಕೊಡುವದರಲ್ಲಿ ಸಂದೇಹವಿಲ್ಲವು. ಸ್ವರ್ಗ ಅಥವಾ ಐಹಿಕ ಫಲಗಳನ್ನು ಕೋರಿದರೆ ಅವುಗಳೂ, ಮೋಕ್ಷವನ್ನು ಪ್ರಾರ್ಥಿಸಿದರೆ ಅದೂ, ದೊರೆಯುತ್ತವೆಂಬ ಭಾವವು. ಆದರೆ ಶಾಸ್ತ್ರವೆಂಬುದು ಯಾವುದು ಎಂದು ಕೇಳಬಹುದು ಕೆಲವು ಮಹನೀಯರೆಂದು ಭಾವಿಸಲ್ಪಟ್ಟಿರುವವರ ಹೇಳಿಕೆಗಳಾದ ಪ್ರಜಾಪತಿ ಸ್ಮೃತಿ, ಕಾಪಿಲ ಸ್ಮೃತಿ, ಇತ್ಯಾದಿ ವಾಕ್ಯಗಳೆಲ್ಲಾ ಶಾಸ್ತ್ರಗಳೇ? ಅವುಗಳು ಇತರ ಶ್ರುತ್ಯರ್ಥಗಳಿಗೆ ವಿರೋಧವಾದವುಗಳಾಗಿವೆಯಲ್ಲಾ? ಹಾಗಾದರೆ ಯಾವುಗಳನ್ನು ಶಾಸ್ತ್ರವಾಗಿ ಇಟ್ಟುಕೊಳ್ಳತಕ್ಕದ್ದೆಂಬ ವಿಷಯದಲ್ಲಿ, **"ಆಜ್ಞಾನಿವೇದಾಶ್ಚತ್ವಾರೋ ಮೀಮಾಂಸಾನ್ಯಾಯ ವಿಸ್ತರಃ। ಪುರಾಣಂಧರ್ಮಶಾಸ್ತ್ರಂಚ ವಿದ್ಯಾಹ್ಯೇತಾ ಚತುರ್ದಶ"** ಎಂಬ ಮನುವಾಕ್ಯಾನುಸಾರ ಈ ಹದಿನಾಲ್ಕು ಪ್ರಮಾಣಗಳು. ಇವುಗಳನ್ನನುಸರಿಸಿರುವ ಪಾಂಚರಾತ್ರವೆಂಬ ಭಗವಚ್ಛಾಸ್ತ್ರವೂ, ಇವುಗಳನ್ನನುಸರಿಸಿರುವ ಆಳ್ವಾರಾಚಾರ್ಯ ಸೂಕ್ತಿಗಳೂ ನಮಗೆ ಪ್ರಮಾಣಗಳೆ. ಇವುಗಳೆನ್ನೆಲ್ಲಾ ಪ್ರಮಾಣವಾಗಿಟ್ಟುಕೊಂಡು, ಲೋಕದೃಷ್ಟಾಂತ, ನ್ಯಾಯಗಳಿಂದ ಸಮರ್ಥಿಸಿದರೆ ಸತ್ತರ್ಕವು, ಹಾಗಲ್ಲದೆ ಲೋಕದೃಷ್ಟಾಂತ

ಧರ್ಮಶೀಲನಾಯ್ ಉದಾರನಾನ ರಾಜಾವುಕ್ಕು ಏಲ್ಪೈಯಾಗ ಏದೇನು ಮೊನ್ನೈ ಕ್ಕೊಡುತ್ತಾಲ್ ಪೆರುಮ್ ಏಲ್ಪೈಕಿಡೈಕ್ಕವುಮ್ ; ಅದು ತನ್ನೈಯೇ ಉಪಹಾರ ಬುದ್ಧಿಯಾಲ್ ಕೊಡುತ್ತಾಲ್, ವೇಣ್ಡುವದೆಲ್ಲಾಮ್ ಕ್ಕಿಡೈಕ್ಕುವುಮ್ ಕಾಣಾನಿನ್ರೋಮ್ ಇಬ್ಬಕ್ತಿ ಪ್ರಪತ್ತಿಗಳ್ ಪ್ರಯೋಜ

ನ್ಯಾಯಗಳನ್ನು ತಂದು ಶಾಸ್ತ್ರಪ್ರಮಾಣಗಳನ್ನು ದೂರೀಕೃತಮಾಡಿದರೆ ತಪನುಂ ಜಸವಾದ ಕುತರ್ಕಗಳಾಗುತ್ತವೆಂಬ ತಾತ್ಪರ್ಯವು ಇಂತಹ ಶಾಸ್ತ್ರವನ್ನು ದೂರೀಕೃತಮಾಡಿದ ತರ್ಕವು "ತರ್ಕಾಪ್ರತಿಷ್ಠಾನಾತ್" ಎಂಬ ಬ್ರಹ್ಮಸೂತ್ರದಲ್ಲಿ (ಶಾ. ೨ ೧ ೧೧.) ನಿಂದಿಸಲ್ಪಟ್ಟಿರುತ್ತದೆ. ಹಾಗೆಯೇ ಸಿದ್ಧೋಪಾಯ ಶೋಧನಾಧಿಕಾರದಲ್ಲೂ "ಕುತರ್ಕವ್ಯಾಳದಷ್ಟಾನಾಂ ವಿಭ್ರಾಂತೇಂದ್ರಿಯ ವಾಜಿನಾಂ । ಅನ್ಯಥಾ ಸ್ಮೃತಿಭಾತಿ" ಎಂದು ಇತಿಹಾಸ ಸಮುಚ್ಚಯದಲ್ಲಿಯೂ ನಿಂದಿಸಲ್ಪಟ್ಟಿರುತ್ತದೆ.

೨. ಮುಂದೆ ಇನ್ನೊಂದು ಸಿದ್ಧನಾಗಿಯೂ ಸಮಾಧಾನವನ್ನು ಹೇಳುತ್ತಾರೆ ಬೀಜದೃಷ್ಟಾಂತದಿಂದ ಭಿನ್ನಫಲ ಲೋಕದಲ್ಲಿ ಕಂಡಿಲ್ಲವೆಂದಲ್ಲವೇ ಪೂರ್ವಪಕ್ಷವು ಹೇಳಲ್ಪಟ್ಟಿತು. ಆದುದರಿಂದ ಲೋಕದೃಷ್ಟಾಂತದಿಂದಲೇ ಸಮಾಧಾನವು ಯುಕ್ತವೆಂದು ಭಾವಿಸಿ ಭಿನ್ನಫಲವುಂಟೆಂದು ಬೇರೆ ದೃಷ್ಟಾಂತಗಳ ಮೂಲಕ ವ್ಯಕ್ತಪಡಿಸುತ್ತಾರೆ :—**ಲೋಕತ್ತಿಲುಮ್** - ಲೋಕದಲ್ಲೂ, ಧರ್ಮಶೀಲನಾದ, ಉದಾರ ಸ್ವಭಾವವುಳ್ಳ ರಾಜನಿಗೆ, **ಏಲ್ಪೈಯಾಗ** - ಕ್ರಯವಾಗಿ, **ಏದೋನು ಮೊನ್ನು** - ಯಾವುದಾದರೂ ಒಂದನ್ನು (ಒಂದೆರಡು ಸಿಂಜೇ ಹಣ್ಣನ್ನೇಯಾಗಲಿ) **ಕೊಡುತ್ತಾಲ್** - ಕೊಟ್ಟರೆ, **ಅದು ಪೆರುನುಮ್ ಏಲ್ಪೈಕ್ಕಿಡೈಕ್ಕುಂ**-ಅದು ಬಾಳುವ ಬೆಲೆಯು ಲಭಿಸುವದು; **ಅದು ತನ್ನೈಯೇ**-ಅವನನ್ನೇ, **ಉಪಹಾರ ಬುದ್ಧಿಯಾ ಲೇ**-ರಾಜನುಯಾಚಿಸಿ ಎಂಬ ಬುದ್ಧಿಯಿಂದ, **ಕೊಡುತ್ತಾಲ್**-ಕೊಟ್ಟರೆ, **ವೇಣ್ಡುವದೆಲ್ಲಾಮ್ ಕಿಡೈಕ್ಕುಮ್**-ಈತನು ಪ್ರಾರ್ಥಿಸುವದೆಲ್ಲಾ ಲಭಿಸುತ್ತದೆ ಎಂಬುದನ್ನು, **ಕಾಣಾನಿನ್ರೋಮ್** - ನಾವು ಪ್ರತ್ಯಕ್ಷದಲ್ಲೇ ಕಂಡಿರುವೆವು ; ಪ್ರತ್ಯಕ್ಷ ಪ್ರಮಾಣದಿಂದಲೇ ವೇದ್ಯವೆಂಬ ಭಾವವು; ಒಬ್ಬ ಕವಿಯು ಒಂದು ಉಪಜೀವ್ಯ ಗ್ರಂಥವನ್ನು ಬರೆದು ರಾಜನಿಗೆ ಸಮರ್ಪಿಸಿದನೆ, ಅದರ ಕ್ರಯದಲ್ಲಿ ದೃಷ್ಟಿ ಇಟ್ಟು ಕೊಟ್ಟರೆ ಅದರ ಬೆಲೆಯಾದ ಒಂದೆರಡು ರೂಪಾಯಿಗಳು ಮಾತ್ರ ಈತನಿಗೆ ಲಭಿಸುತ್ತವೆ. ಹಾಗಲ್ಲದೆ ರಾಜನಿಗೆ ಮರ್ಯಾದಾಪೂರ್ವಕವಾಗಿ ಸಮರ್ಪಿಸಿದರೆ, ಆತನು ಅದರಿಂದ ಸುಪ್ರೀತನಾದರೆ ಈತನು ಕೇಳುವ ಅತಿಶಯವಾದ ಇಷ್ಟಾರ್ಥಗಳು ಲಭಿಸುತ್ತವೆ. ಹೀಗೆ ನಡೆದಿರುವದು ನಾವು ಪ್ರತ್ಯಕ್ಷದಲ್ಲೇ ಕಂಡಿರುತ್ತೇವೆ

ನಾಂತರ ಪರನುಕ್ಕು ಪ್ರವೃತ್ತಿಧರ್ಮ ಕೋಟಿಯಿಲೇ ನಿರ್ಕುಮ್ ; ಭಗವಚ್ಚರಣಾರ್ಥಿಗಳುಕ್ಕು ನಿವೃತ್ತಿ ಧರ್ಮಜ್ಞಾನಮ್. ಇವ್ವರ್ಥಮ್ ನಿತ್ಯ ನೈಮಿತ್ತಿಕಾದಿಗಳಿಲುನೊಕ್ಕುಮ್.

ಎಂಬ ಭಾವವು. ಆದುದರಿಂದ ಹಾಗೆಯೇ ಭಕ್ತಿ ಪ್ರಪತ್ತಿಗಳು ಅಧಿಕಾರಿಯ ಇಷ್ಟಾನುಸಾರ ಭಿನ್ನ ಫಲದಾಯಕಗಳಾಗುವದರಲ್ಲಿ ಸಂದೇಹವಿಲ್ಲವೆಂಬ ತಾತ್ಪರ್ಯವು ಪ್ರತ್ಯಕ್ಷದಲ್ಲೇ ಒಂದೇ ಕಾರಣವು ಭಿನ್ನ ಫಲಗಳನ್ನು ಕೊಟ್ಟಿರುವದನ್ನು ಇತರ ಲೌಕಿಕದೃಷ್ಟಾಂತಗಳಿಂದ ವ್ಯಾಖ್ಯಾತೃಗಳು ವ್ಯಕ್ತಪಡಿಸಿರುತ್ತಾರೆ. ಬೆತ್ತದ ಬೀಜಕ್ಕೆ ಅಗ್ನಿಸಂಯೋಗ ಉಂಟಾದರೆ ವಿಜಾತೀಯವಾದ ಕದಳಿಯು (ಬಾಳೇಗಿಡ) ಉಂಟಾಗುವದನ್ನೂ ಹಾಗೆಯೇ ದ್ರವ್ಯಾರ್ಜನೆಗೆ ಸಾಧನವಾದ ರತ್ನ ಮೊದಲಾದವುಗಳಲ್ಲಿ ಪುರುಷಭೇದದಿಂದ ನ್ಯೂನಾಧಿಕ ಫಲವುಂಟಾಗುವದನ್ನೂ ಕಂಡಿರುವೆವು. ಹಾಗೆಯೇ ಭಕ್ತಿಪ್ರಪತ್ತಿಗಳೂ ಸರ್ವಫಲಗಳನ್ನೂ ಕೊಡುವುವು ಎಂಬ ತಾತ್ಪರ್ಯವು ಆದುದರಿಂದ ಭಕ್ತಿಪ್ರಪತ್ತಿಗಳೂ ಪ್ರವೃತ್ತಿಧರ್ಮರೂಪವಾದ ಕಾಮ್ಯಕರ್ಮಗಳಾಗಿ ಪರಿಣಮಿಸಿ, ಐಶ್ವರ್ಯಾದಿಗಳನ್ನು ಸಾಧಿಸಿಕೊಡಬಹುದು ; ನಿವೃತ್ತಿ ಧರ್ಮರೂಪವಾದ ಫಲಾಭಿಸಂಧಿರಹಿತವಾದವುಗಳಾಗಿ ಮೋಕ್ಷವನ್ನು ಸಾಧಿಸಿಕೊಡಬಹುದು, ಎಂದು ಮುಂದಿನ ವಾಕ್ಯದಿಂದ ಸ್ಥಾಪಿಸುತ್ತಾರೆ: --

ಇಬ್ಬಗ್ತಿಪ್ರಪತ್ತಿಗಳ್-ಈ ಭಕ್ತಿಪ್ರಪತ್ತಿರೂಪ ಸಾಧ್ಯೋಪಾಯಗಳು, **ಪ್ರಯೋಜನಾಂತರ ಪರನುಕ್ಕು** - ಮೋಕ್ಷವಲ್ಲದೆ ಇತರ ಪ್ರಯೋಜನಗಳನ್ನಪೇಕ್ಷಿಸುವವನಿಗೆ, **ಪ್ರವೃತ್ತಿಧರ್ಮಕೋಟಿಯಿಲೇ** - ಪ್ರವೃತ್ತಿ ಧರ್ಮಗಳೆಂಬ ತರಗತಿಯಲ್ಲಿ **ನಿರ್ಕುಮ್** - ನಿಲ್ಲುವುವು ; ಎಂದರೆ ಕಾಮ್ಯಕರ್ಮಗಳ ಹಾಗೆ ಫಲಗಳನ್ನು ಕೊಡುವುವು. **ಭಗವಚ್ಚರಣಾರ್ಥಿಗಳುಕ್ಕು** - ಭಗವಂತನ ಪಾವನಕಮಲಗಳನ್ನೇ ವ್ಯಾಪ್ಯವಾಗಿ ಅಪೇಕ್ಷಿಸುವವರಿಗೆ, ಪರಮಪದದಲ್ಲಿ ಆತನ ಪಾದದ್ವಂದದಲ್ಲಿ ಕೈಂಕರ್ಯಪರರಿಗೆ ಎಂಬ ಭಾವವು, ಇವು, **ನಿವೃತ್ತಿಧರ್ಮಜ್ಞಾನಮ್**-ನಿವೃತ್ತಿ ಧರ್ಮಗಳಾಗುವುವು. ಅಧಿಕಾರಗಳ ಅಭಿಸಂಧಿಯ ವ್ಯತ್ಯಾಸದಿಂದ ಒಂದೇ ಅನುಷ್ಠಾನವು ಭಿನ್ನಫಲಗಳನ್ನು ಕೊಡುತ್ತವೆ ಎಂಬುದು ತಾತ್ಪರ್ಯವು. ಜಾತೇಷ್ಟ್ಯಾದಿಗಳೂ ಕೂಡ ಫಲಾಭಿಸಂಧಿಯಿಲ್ಲದೆ ಅನುಷ್ಠಿತವಾದರೆ ನೈಮಿತ್ತಿಕಗಳಾಗಿ ಪರಿಣಮಿಸಿ ವಿಶೇಷ ಭಗವತ್ಪ್ರೀಣನ ಮೂಲಕ ಅತಿಶಯಿತ ಫಲವನ್ನುಂಟುಮಾಡಬಹುದು. ಅದೇ ಫಲಕಾಮನೆಯಿಂದ ಮಾಡಲ್ಪಟ್ಟರೆ ಕಾಮ್ಯವಾಗಿ ಪರಿಣಮಿಸಿ ಅನಿತ್ಯಫಲವನ್ನುಂಟುಮಾಡುತ್ತವೆ ಹಾಗೆಯೇ ಇವುಗಳೂ ಎಂದು ಆಜ್ಞೀಕರಿಸಬಹುದೆಂಬ ತಾತ್ಪರ್ಯವು ಆದರೆ ಕಾಮ್ಯವಾಗಿ ಪ್ರವೃತ್ತಿ

ಯಥಾಽಭಿಸಂಧಿ ಭೇದಾತ್ ಏತಯೋ ರ್ಭಿನ್ನ ಫಲತ್ವಂ,
ತಥಾ ಭಿಸ್ನಾಧಿಕಾರಾದಪಿ ಏಕಫಲಸಾಧನತ್ವಮ್,

ಇಪ್ಪಡಿಯೇ ಆವೃತ್ತ್ಯನಾವೃತ್ತ್ಯಾದಿಗಳಾಲೇ ವಿಷಮಸ್ವಭಾವಜ್ಞಾನ

ಧರ್ಮವಾಗಿ ಅನುಷ್ಠಿಸಿ, ಅನಿತ್ಯ ಫಲಕಾಮನೆಯಿಂದ ಮಾಡಿದರೂಕೂಡ, ಭಗವ ತ್ಪಾದಾರವಿಂದದಲ್ಲಿ ಮಾಡಿದ ಶರಣಾಗತಿಯಾದುದರಿಂದ, ಸುಕೃತವಾಗಿ ಪರಿಣ ಮಿಸಿ ಕಾಲಕ್ರಮದಿಂದ ಸದ್ಗುರೂಪದೇಶಾದಿಗಳು ಲಭಿಸಿ, ಮೋಕ್ಷಪ್ರಧರ್ವಾಗಿ ಪ್ರಪದನವನ್ನು ಅನುಷ್ಠಿಸಿ, ದಿವ್ಯ ವೈಕುಂಠವನ್ನು **"ನಹಿಂಕಲ್ಯಾಣಕೃತ್ಕಶ್ಚಿದ್ದು ರ್ಗತಿಂ ತಾತಗಚ್ಛತಿ"** ಎಂಬ ವಾಕ್ಯಾನುಸಾರ ಪಡೆಯಬಹುದು. ಹೀಗೆ ಪ್ರವೃತ್ತಿ ಧರ್ಮಾನುಷ್ಠಾನವು ಉತ್ತರೋತ್ತರ ನಿವೃತ್ತಿಧರ್ಮಾನುಷ್ಠಾನಕ್ಕೆ ಹೇತುವಾಗ ಬಹುದು. ಹೀಗೆ ಒಂದೇ ಧರ್ಮವು ಅಭಿಸಂಧಿ ಭೇದದಿಂದ ಪ್ರವೃತ್ತಿ ಧರ್ಮವಾಗಲಿ ನಿವೃತ್ತಿಧರ್ಮವಾಗಲಿ ಆಗಿ, ಫಲ ಭೇದವನ್ನು, **"ಪ್ರವೃತ್ತಿಃ ಪುನರಾವೃತ್ತಿಃ ನಿವೃತ್ತಿಃ ಪರಮಾಗತಿಃ"** ಎಂದು ಮೋಕ್ಷಧರ್ಮದಲ್ಲಿ ಹೇಳಿರುವಹಾಗೆ ಕೊಟ್ಟು, ಪುನಸ್ಸಂಸಾರೈಕಾಗ್ರಲಿ ಮೋಕ್ಷೈಕಾಗ್ರಲಿ ಸಹಕಾರಿಯಾಗಬಹುದು. **ಇವ್ವರ್ಥವು** – ಈ ಅಭಿಪ್ರಾಯವು ಎಂದರೆ ಒಂದೇ ಧರ್ಮಾನುಷ್ಠಾನವು ಭಿನ್ನಫಲಗಳನ್ನುಂಟುಮಾಡುವದೆಂಬುದು, **ನಿತ್ಯನೈಮಿತ್ತಿಕಾದಿಗಳಿಲುವ್ ಒಕ್ಕುಮ್**– ನಿತ್ಯ ನೈಮಿತ್ತಿಕಜ್ಞಳಲ್ಲೂ ತುಲ್ಯವಾದುದು, ಸಮಾನವಾದುದು. ನಿತ್ಯಕ್ಕೆ ಉದಾಹರಣೆಯಾಗಿ, ಸಂಧ್ಯೋಪಾಸನಾದಿಗಳು ಕೆಲವರಿಗೆ ಪ್ರತ್ಯವಾಯ ಪರಿಹಾರಾರ್ಥವಾದುದು ಮಾತ್ರವೇಯಾಗಿ, ಇನ್ನು ಕೆಲವರಿಗೆ ಮೋಕ್ಷಪ್ರಾಪ್ತಿಗೆ ಸಹಕಾರಿಯಾಗಿಯೂ ಆಗಬಹುದು. ನೈಮಿತ್ತಿಕಕ್ಕೆ ಹಿಂದೆ ಜಾತ್ಯೇಷ್ಟಿಯ ನಿದರ್ಶನವು ಹೇಳಲ್ಪಟ್ಟಿತು. ಹೀಗೆ ಅಧಿಕಾರಿಯ ಅಭಿಸಂಧಿ ಭೇದದಿಂದ ಫಲಭೇದ ಉಂಟೆಂಬುದನ್ನು ಶಾಸ್ತ್ರವೂ ಹೇಳುವದರಿಂದಲೂ, ಲೋಕನ್ಯಾಯದಿಂದಲೂ, ಸಮಂಜಸವೇ; ಆದುದರಿಂದಲೂ ಸ್ಥಾಪಿತವು ಎಂಬ ಭಾವವು.

ಇವುಗಳಿಗೆ ಅಭಿಸಂಧಿ ಭೇದದಿಂದ ಭಿನ್ನಫಲತ್ವವು ಹೇಗೋ, ಹಾಗೆ ಅಧಿಕಾರಿ ಭೇದದಿಂದ ಏಕಫಲತ್ವವೂ ಕೂಡುತ್ತದೆ.

ಪ್ರಸಜ್ಯಕವಾಗಿ ಇನ್ನೊಂದು ಪೂರ್ವಪಕ್ಷಕ್ಕೂ ಸಮಾಧಾನವನ್ನು ಹೇಳುತ್ತಾರೆ. **ಪೂರ್ವಪಕ್ಷವು** ಹೇಗೆಂದರೆ, **ಉಪಾಸನವು** ಚಿರಕಾಲ ಸಾಧ್ಯವಾದುದು, **ಯಾವಜ್ಜೀವವೂ** ನಡೆಸತಕ್ಕದ್ದು, **ಮಹಾಪ್ರಯತ್ನಸಾಧ್ಯವು**, **ಈ ದೇಹಾವಸಾನದಲ್ಲೇ**

ಉಪಾಸನ ಪ್ರಪದನಜ್ಞಿಳ್ ಏಕಫಲಸಾಧನನಮಾಗ ಕ್ಯೊಡುಮೋ ವೆನ್ನಿಲ್ ? ಇದುಕ್ಕುತ್ತರಮ್ ಅಧಿಕಾರಿ ವಿಶೇಷತ್ತಾಲೆ ಲೋಕವೇದಜ್ಞಿಳಿರ್ಪಡಿಯೇ ಸಿದ್ಧಮ್.

ಮೋಕ್ಷಪ್ರಾಪ್ತಿ ಆದರೂ ಆಗಬಹುದು, ಅಥವಾ ವಿಳಂಬಿಸಬಹುದು; ಹೀಗೆ ತುಂಬಾ ಗುರುತರವಾದುದು; ಪ್ರಪದನವಾದರೋ ಕ್ಷಣಕಾಲ ಸಾಧ್ಯವಾದುದು, ಅತಿ ಸುಲಭವಾಗಿ ಸಕೃದನುಷ್ಠೇಯವು, ದೇಹಾವಸಾನದಲ್ಲೇ ಮೋಕ್ಷದಾಯಕವು; ಇಂತಹ ಗುರು ಲಘುಗಳಾದ ಉಪಾಯಗಳಿಗಿಡಕ್ಕೂ ಮುಮುಕ್ಷುಗಳಿಗೆ ತುಲ್ಯಫಲನೆಂದರೆ ಒಪ್ಪತಕ್ಕದ್ದೇ ಎಂಬಾಕ್ಷೇಪವು; ಇವಕ್ಕೆ ಮುಂದಿನ ವಾಕ್ಯದಿಂದ ಸಮಾಧಾನವನ್ನು ಹೇಳುತ್ತಾರೆ:—**ಇಪ್ಪಡಿಯೇ** - ಹೀಗೆ ಎಂದರೆ ಹೇಗೆ ಅಧಿಕಾರಿಯ ಇಷ್ಟಾರ್ಥಾನುಗುಣವಾಗಿ ಅನಿತ್ಯ ಫಲವಾಗಲಿ ನಿರತಿಶಯ ನಿತ್ಯ ಫಲವಾಗಲಿ ಒಂದೇ ಅನುಷ್ಠಾನದಿಂದ ಲಭಿಸುತ್ತದೋ, ಹಾಗೆಯೇ **ಆವೇ ನ್ಯಾಯದಿಂದಲೇ, ಆವೃತ್ತ್ಯಾವೃತ್ತಿ ವಿಷಮಸ್ವಭಾವಜ್ಞಾನ** - ಭಕ್ತಿಮಾರ್ಗದಲ್ಲಿ ಪ್ರಾರಬ್ಧವೆಲ್ಲ ಕಳೆವಂತರನೇ ಮೋಕ್ಷವಾದರಿಂದ ಅನಭ್ಯುಪಗತ ಪ್ರಾರಬ್ಧವೂ ಕಳೆಯುವುದಕ್ಕಾಗಿ ಒಂದುವೇಳೆ ಅನ್ಯವೃತ್ತಿ ಇದ್ದರೂ ಇರಬಹುದು, ಆದರೆ ಪ್ರಪತ್ತಿಗೆ ಅನಾವೃತ್ತಿಯೇ ವಿನಾ ಅವೃತ್ತಿಯಿಲ್ಲವು, ಹೀಗೆ ವ್ಯತ್ಯಸ್ತವಾದ ಸ್ವಭಾವವುಳ್ಳ, **ಉಪಾಸನ ಪ್ರಪದನಗಳು, ಏಕಫಲ ಸಾಧನಮಾಗಕ್ಕೂಡುಮೋ** - ಒಂದೇ ಫಲವಾದ ಮೋಕ್ಷವನ್ನು ಸಾಧಿಸಿ ಕೊಡುತ್ತವೆಂದು ಹೇಳುವದು ಸಮಂಜಸವೋ? **ಇದಕ್ಕು ಉತ್ತರಮ್** – ಇದಕ್ಕೂ ಕೂಡ ಸಮಾಧಾನರೂಪವಾದ ಉತ್ತರವು, ಏನೆಂದರೆ:—**ಅಧಿಕಾರಿ ವಿಶೇಷದಿಂದ, ಲೋಕವೇದಜ್ಞಿಳಿರ್ಪಡಿಯೇ** - ಲೋಕವ್ಯಷ್ಟ್ಯಾಂತವಿಂದಲೂ ವೇದಗಳಲ್ಲಿ ಪಠಿತವಾಗಿರುವದರಿಂದಲೂ ತೋರಬರುವದು ಹೇಗೋ ಹಾಗೆ, **ಸಿದ್ಧಮ್** - ಸ್ಥಾಪಿತವು. ಒಂದೇ ಅನುಷ್ಠಾನಕ್ಕೆ ಅಭಿಸಂಧಿ ಭೇದದಿಂದ ಭಿನ್ನಫಲವು ಹೇಗೆ ಸಮಂಜಸವೋ, ಹಾಗೆಯೇ ಭಿನ್ನಾನುಷ್ಠಾನಗಳಿಗೂ ಏಕಫಲವೂ ಸಮಂಜಸವು ಇದು **ಲೋಕ**ವುತ್ತು ವೇದಸಿದ್ಧವೆಂದು ಸಜ್ಜನಗ್ರಹವಾಗಿ ಹೇಳಿದರು. ಆದುದರಿಂದ ಮೋಕ್ಷಾರ್ಥಿಯಾಗಿರುವನರು, ಉಪಾಸನಕ್ಕೆ ಅಧಿಕಾರಿಯಾಗಿ ಭಕ್ತ್ಯುಪಾಯವನ್ನು ಕೈಕೊಂಡರೂ, ಅಥವಾ ಪ್ರಪದನಕ್ಕೆ ಅಧಿಕಾರಿಯಾಗಿ ಭರನ್ಯಾಸವನ್ನು ಕೈಕೊಂಡರೂ, ಒಂದೇ ಫಲವಾದ ಮೋಕ್ಷಪ್ರಾಪ್ತಿಯುಂಟಾಗುವದೂ ಸಹ ಸಮಂಜಸವೇ, ಇವಕ್ಕೆ ಲೋಕವ್ಯಷ್ಟ್ಯಂತ ಶಾಸ್ತ್ರ ಪ್ರಮಾಣವೆರಡೂ ಉಂಟೆಂದು ಹೇಳಿರುತ್ತಾರೆ, ಲೋಕದೃಷ್ಟ್ಯಂತಕ್ಕೆ ಒಬ್ಬನು ಕೃಷಿಯಿಂದ ಸಾಂಗ ಸಾಮಂಜಸ್ಯವನ್ನು ಇನ್ನೊಬ್ಬನು

ಆರ್ತದೃಪ್ತಾನಾಂ ಫಲ ನಿಷ್ಪತ್ತೌ ವಿಳಂಬಾವಿಳಂಬ ಶಙ್ಕಾಪರಿಹಾರಃ

ಮುಮುಕ್ಷುಕ್ಕಳಾಯ್ ಸ್ವತಂತ್ರ ಪ್ರಪತ್ತಿ ಪಣ್ಣಿನವರ್‌ಗಳುಕ್ಕು ಉಪಾಯಮುಮ್ ಮೋಕ್ಷಮುಮ್ ಏಕರೂಪ ಮಾಯಿರುಕ್ಕ ಚ್ಚೆಯ್ ದೇಯುಮ್ ಸಂಸಾರಿತ್ತಿಲ್ ಅಡಿಚ್ಚೂಟ್ಟುಪಲ್ ವರುಮ್ ತ್ವರೈಯಿನ್

ವಾಣಿಜ್ಯದಿಂದ ಸಾವಿರ ರೂಪಾಯಿಯನ್ನೂ ಕ್ಲಿಪ್ತಕಾಲದಲ್ಲಿ ಸಂಪಾದಿಸಬಹುದು. ಇಲ್ಲಿ ಭಿನ್ನಾಧಿಕಾರಿಗಳು ಒಂದೇ ಫಲವನ್ನೇ ಹೊಂದಿರುತ್ತಾರೆ. ಹಾಗೆಯೇ ವೇದದಲ್ಲೂ ಮಾನಸ ಮಂತ್ರಸ್ನಾನಕ್ಕೂ ಜಲಾಶಯದಲ್ಲಿ ವಾರುಣಸ್ನಾನಕ್ಕೂ ಒಂದೇ ಫಲವೆಂದು ಹೇಳಲ್ಪಟ್ಟಿರುತ್ತದೆ, ಹಾಗೆಯೇ ತ್ರಿವರ್ಣದವರಿಗೂ ಶೂದ್ರರಿಗೂ ನಿತ್ಯ ನೈಮಿತ್ತಿಕಗಳು ಭಿನ್ನವಾದವುಗಳಾಗಿದ್ದರೂ ಅವರುಗಳಿಗೆಲ್ಲಾ ಫಲದಲ್ಲಿ ಸಮಭಾವವೇ ಉಂಟು ಇದನ್ನು ತಿಳಿಯದೆ ಶೂದ್ರಾದಿಗಳಿಗೆ **ಶೂದ್ರಸ್ನಾಧಃ** ಎಂದು ಹೇಳಿರುವಹಾಗೆ ಅವುಗಳು ಅತಿ ಸುಲಭವಾಗಿದ್ದರೂ ಕಷ್ಟತರಗಳಾದ ಅನುಷ್ಠಾನಪರರಾದ ಬ್ರಾಹ್ಮಣರಲ್ಲಿ ಅಸೂಯೆಯು ತಪ್ಪಲಿಲ್ಲವು. ಇಂತಹ ದೃಷ್ಟಾಂತಗಳು ಲೋಕಾನುಭವವಿರುವವರಿಗೂ, ಶಾಸ್ತ್ರಮರ್ಯಾದೆಯನ್ನರಿತವರಿಗೂ, ವ್ಯಕ್ತವಾದುದರಿಂದ ಅವುಗಳನ್ನು ಉದಾಹರಿಸದೆ, **ಸಿದ್ಧಮ್** ಎಂದು ಇಷ್ಟುಮಾತ್ರವೇ ಹೇಳಿದರು. **ಲೋಕೇ ವೇದಜ್ಞಕೇ** ಎಂಬ ಪ್ರಯೋಗದಲ್ಲಿ ಲೋಕ ಶಬ್ದಕ್ಕೆ **ಲೋಕ್ಯತೇ ಅನೇನ** ಎಂಬ ವ್ಯುತ್ಪತ್ತಿ ಮೂಲಕ ಪ್ರಮಾಣವೆಂದು **ಶ್ರೀ** ನಿಗಮಾಂತವೇದಿಕರೇ ಅರ್ಥಮಾಡಿರುತ್ತಾರೆ ಇಲ್ಲಿ ಪ್ರಮಾಣವು ಶಾಸ್ತ್ರ ಪ್ರಮಾಣವಾದುದರಿಂದ, ವೇದವು ಹೇಳಲ್ಪಟ್ಟಿರುವದರಿಂದ ಗೋಬಲೀವರ್ದನ್ಯಾಯದಿಂತ್ಯಾ ಲೋಕವೆಂದರೆ ಸ್ಮೃತಿ ಎಂದು ಅರ್ಥಮಾಡಿರುತ್ತಾರೆ. ಸ್ಮೃತಿ ಶ್ರುತಿಗಳಲ್ಲಿ ಸಿದ್ಧವೆಂದು ಅರ್ಥಮಾಡಬಹುದು

ಆರ್ತ ದೃಪ್ತರಿಗೆ ಫಲಪ್ರಾಪ್ತಿಯಲ್ಲಿ ವಿಳಂಬಾವಿಳಂಬಗಳು ಯುಕ್ತವೋ ಎಂಬ ಶಙ್ಕಾ ಪರಿಹಾರವು.

ಒಂದೇ ಉಪಾಯವಾದ ಭರನ್ಯಾಸವನ್ನೇ ಇಬ್ಬರು ಮುಮುಕ್ಷುಗಳು ಆಶ್ರಯಿಸಿದ್ದರೂ, ಇಬ್ಬರಿಗೂ ಮೋಕ್ಷಫಲವು ಒಂದೇಯಾಗಿ ಇದ್ದರೂ, **ಆರ್ತನಾದ** ಒಬ್ಬನಿಗೆ ವಿಳಂಬವಿಲ್ಲದೆ ದೇಹಾವಸಾನದಿಂದ ಮೋಕ್ಷವೆಂದೂ, **ದೃಪ್ತನಾದ** ಮತ್ತೊಬ್ಬನಿಗೆ ವಿಳಂಬದಿಂದ ದೇಹಾವಸಾನ ಉಂಟಾಗಿ ಮೋಕ್ಷವೆಂದೂ, ಹೀಗೆ ಹೇಳುವದು ಉಚಿತವೋ ಎಂಬ ಆಕ್ಷೇಪತಂದರೆ ಅದಕ್ಕೂ ಸಮಾಧಾನವನ್ನು

ತಾರತಮ್ಯತ್ತುಕ್ಕೀಡಾಗ ತವ್ ತಾಮಿಚ್ಛೈಯಾಲೆಕಾಲವುಮ್ ಕುರುಕ್ಕಿರದಿಲ್ ವಿತ್ತಚ್ಚುರುಕ್ಕತ್ತಾಲೇ ಫಲತ್ತಿಲ್ ವಿಳಂಬಾವಿಳಂಬಗಳ್ ಕೂಡುಮ್. ಆಳ್ವಾರ್ (ಗಳ್) ನಾಥಮುನಿಗಳುಳ್ಳಿಟ್ಟಾರ್ಕ್ಕು ಭಗವತ್ಸಾಕ್ಷಾ

ಹೇಳುತ್ತಾರೆ :—ಮುಮುಕ್ಷುಕ್ಕಳಾಯ್ - ಮೋಕ್ಷಾರ್ಥಿಗಳಾಗಿ, ಸ್ವತಂತ್ರ ಪ್ರಪತ್ತಿ ಪಣ್ಣಿ ನವರ್‌ಗಳುಕ್ಕು - ಭರನ್ಯಾಸವನ್ನು ಅನುಷ್ಠಿಸಿದವರಿಗೆ, ಉಪಾಯಮುಮ್ - ಉಪಾಯಾನುಷ್ಠಾನವೂ, ಮೋಕ್ಷಮುಮ್ - ಅದರ ಫಲವಾದ ಮೋಕ್ಷವೂ ಕೂಡ, ವಿಕರೂಪವಾಯಿರುಕ್ಕಚ್ಚೈಯ್ದೇಯುಮ್ - ಸಮಾನವಾಗಿ ಒಂದೇಯಾಗಿದ್ದರೂ ಕೂಡ, ಸಂಸಾರತ್ತಿಲ್ - ಸಂಸಾರದಲ್ಲಿ, ಅಡಿಚ್ಚೂಟ್ಟಾಲ್ - ಸಂಸಾರತಾಪದಿಂದ ಕಾಲು ಬೆಂದು ಹೋಗುವದರಿಂದ ವರುಮ್ - ಪ್ರಾಪ್ತವಾಗುವ, ತ್ವರೈಯಿರ್ ತಾರತಮ್ಯತ್ತುಕ್ಕೀಡಾಗ - ತ್ವರೆಯಲ್ಲಿರುವ ವ್ಯತ್ಯಾಸಕ್ಕನುಗುಣವಾಗಿ, ತವ್ ತಾಮಿಚ್ಛೈಯಾಲೇ-ಆಯಾ ಅಧಿಕಾರಗಳ ಇಷ್ಟದಿಂದ, ಕಾಲಮುಮ್ ಕಾರುಕ್ಕಿರದಿಲ್ - ತನಗೆ ದೇಹಾವಸಾನವೂ ಮೋಕ್ಷವೂ ಉಂಟಾಗಬೇಕಾದ ಕಾಲವನ್ನು ಕೋರುವದರಲ್ಲಿರುವ, ವಿತ್ತಚ್ಚುರುಕ್ಕತ್ತಾಲೇ-ಹೆಚ್ಚುಕಡವೆಯಿಂದ, ಫಲತ್ತಿಲ್ - ಫಲವುಂಟಾಗುವದರಲ್ಲಿ. ವಿಳಂಬಾವಿಳಂಬಗಳು, ಕೂಡುಮ್ - ಸಲ್ಲುತ್ತವೆ. ಈ ಸಂದರ್ಭದಲ್ಲಿ ಇಬ್ಬರಿಗೂ ಪ್ರಪದನಾನುಷ್ಠಾನವೂ ಒಂದೇ, ಫಲವೂ ಒಂದೇ, ಹೀಗಿರುವಾಗ ಕೆಲವರಿಗೆ ಮೋಕ್ಷಪ್ರಾಪ್ತಿಯಲ್ಲಿ ವಿಳಂಬವು, ಇನ್ನು ಕೆಲವರಿಗೆ ವಿಳಂಬವಿಲ್ಲದಿರೋಣವೂ, ಹೀಗೆ ಎಲ್ಲಾದರೂ ಉಂಟೋ ಎಂಬುದು ಆಕ್ಷೇಪವು. ಕೆಲವರು ಸಂಸಾರದಲ್ಲಿರುವದು ಬೆಂಕಿಯ ಮಧ್ಯದಲ್ಲಿರುವಹಾಗೆ ಭಾವಿಸುವರು. ಅಂತಹ ಆರ್ತರು ಒಡನೇ ದೇಹಾವಸಾನಮೂಲಕ ಮೋಕ್ಷವನ್ನಪೇಕ್ಷಿಸುವದರಿಂದ, ಶರಣಾಗತರ ಅಭೀಷ್ಟವನ್ನು ದಯಪಾಲಿಸಲೇಬೇಕೆಂಬ ಕಂಕಣಬದ್ಧನಾಗಿರುವ ಸರ್ವೇಶ್ವರನು ಒಡನೆ ಅನುಗ್ರಹಿಸುವನು. ಇನ್ನೂ ಕೆಲವು ಕಾಲ ಇಲ್ಲೇ ಇದ್ದು ಭೋಗಗಳನ್ನನುಭವಿಸಿ ದೇಹಾವಸಾನಾನಂತರ ಮೋಕ್ಷವೆಂದು ಸಙ್ಕಲ್ಪಿಸಿದವನಿಗೆ ಹಾಗೆಯೇ ದಯಪಾಲಿಸಬೇಕಾಗುತ್ತದೆ. ಹೀಗೆ ಶರಣಾಗತಿಯನ್ನನುಷ್ಠಿಸುವಾಗ ಮಾಡಿದ ಸಙ್ಕಲ್ಪಕ್ಕನುಗುಣವಾಗಿ ವಿಳಂಬವಾಗಿಯೂ ವಿಳಂಬವಿಲ್ಲದೆಯೂ ಫಲಪ್ರಾಪ್ತಿಯುಂಟಾಗುವದರಲ್ಲಿ ಏನೊಂದೂ ಅಸಮಂಜಸವಾದುದಿಲ್ಲವೆಂಬ ಭಾವವು. ಹೀಗೆ ಪ್ರಪದನಕಾಲದಲ್ಲಿ ಮಾಡಿದ ಸಙ್ಕಲ್ಪ ಭೇದದಿಂದ ವಿಳಂಬಾವಿಳಂಬಗಳು ಪ್ರಾಪ್ತವಾಗುತ್ತದೆಂಬುದು ಸಿದ್ಧವು. ಹೀಗೆ (೧) ಒಂದು ಅನುಷ್ಠಾನವು ಸಙ್ಕಲ್ಪ ಭೇದದಿಂದ ಭಿನ್ನಫಲವನ್ನು ಕೊಡಲಾರದೆಂಬ, (೨) ಎರಡು ಭಿನ್ನಧರ್ಮಗಳು

ರಾದಿಗಳುಣ್ಟಾಯಿರುಕ್ಕೆ. ಶಿಲರ್ಕ್ಕು ಇವೈ ಯನ್ರಿಕ್ಕೇ ಯೊಳಿಗೈಕ್ಕು ಕಾರಣಮ್, ಪ್ರಪತ್ತಿ ಕಾಲತ್ತಿಲ್ ಫಲಸಜ್ಜಲ್ಪತ್ತಿಲ್ ವೈಷಮ್ಯಮ್; ಪ್ರಾರಬ್ಧ ಕರ್ಮ (ಸಂಕೃತ) ವಿಶೇಷ ಮಾ ಗವುಮಾಮ್. ಮುನ್ಬು ಕೋಲಿನ

ಒಂದೇ ಫಲವನ್ನು ಕೊಡಲಾರದೆಂಬ, (೩) ಭಿನ್ನಾಧಿಕಾರಿಗಳ ಒಂದೇ ಅನುಷ್ಠಾನಕ್ಕೆ ಫಲವು ಒಂದಾದರೂ ಫಲಪ್ರಾಪ್ತಿಯಲ್ಲಿ ಕಾಲ ವ್ಯತ್ಯಾಸವು ಸರಿಯಲ್ಲವೆಂಬ ಮೂರು ಆಕ್ಷೇಪಗಳೂ ಹಿಂದೆ ಖಂಡಿಸಲ್ಪಟ್ಟವು.

ಹಾಗೆಯೇ ಪ್ರಾಸಜ್ಜಿಕವಾಗಿ, ಪ್ರಪದನ ಕಾಲದ ಸಜ್ಜಲ್ಪಭೇದದಿಂದ ಭಗವತ್ಸಾಕ್ಷಾತ್ಕಾರಾದಿಗಳು ಕೆಲವರಿಗೆ ಲಭಿಸಬಹುದು; ಇನ್ನು ಕೆಲವರಿಗೆ ಲಭಿಸದೇ ಇರಬಹುದು ಎಂದು ಉಪದೇಶಿಸುತ್ತಾರೆ. ಆಳ್ವಾರ್-ಶ್ರೀ ನಮ್ಮಾಳ್ವಾರ್ರವರು ಆಳ್ವಾರ್ಗಳ್ ಎಂಬ ಪಾಠವಾದರೆ ಎಲ್ಲಾ (ಹತ್ತು) ಆಳ್ವಾರುಗಳು, ನಾತ್ತು ನಾಥಮುನಿಗಳು, ಉಯ್ಯಕ್ಕೊಣ್ಡಾರ್ಕ್ಕು-ಮೋರಲಾದವರಿಗೆ, ಭಗವತ್ಸಾಕ್ಷಾತ್ಕಾರಾದಿಗಳು, ಇಲ್ಲಿ ಆದಿ ಪದದಿಂದ ಉಪಾಯಾನುಷ್ಠಾನಾನಂತರ ಬುದ್ಧಿಪೂರ್ವಕ ಅಕೃತ್ಯಕರಣ ಕೃತ್ಯಾಕರಣರೂಪ ಅಪರಾಧಗಳಿಲ್ಲದೇ ಇರೋಣವೂ ಸಹ ಹೇಳಲ್ಪಟ್ಟಿತು. ಇದು ಸಾರಸ್ವಾದಿನಿಯವರ ಅಭಿಪ್ರಾಯವು, ಸಾರದೀಪಿಕೆಯವರು ಆ ಭಗವಂತನ ಸಾಕ್ಷಾತ್ಕಾರದಿಂದುಂಟಾಗುವ ಆನಂದವೂ ನಿರಪರಾಧ ಕೈಂಕರ್ಯವೂ, ಹೇಳಲ್ಪಟ್ಟಿತೆಂದು ಅಭಿಪ್ರಾಯಪಡುವರು; ಉಂಡಾಯಿರುಕ್ಕೆ - ಪ್ರಾಪ್ತವಾದೀವಾಗ, ಶಿಲರ್ಕ್ಕು-ಇನ್ನು ಕೆಲವರಿಗೆ, ಇವೈ ಯನ್ರಿಕ್ಕೆಯೊಳಿಗೈಕ್ಕುವೆಂ ಇವುಗಳಲ್ಲದೇ ಇರುವದಕ್ಕೂ ಎಂದರೆ ಭಗವತ್ಸಾಕ್ಷಾತ್ಕಾರ ಲಭಿಸದೇ ಇರುವದಕ್ಕೂ ಮತ್ತು ಸಾಧ್ಯೋಪಾಯಾನುಷ್ಠಾನವಾದನಂತರ ಬುದ್ಧಿಪೂರ್ವಕವಾದ ಅಕೃತ್ಯಕರಣ ಕೃತ್ಯಾಕರಣರೂಪ ಅಪರಾಧಗಳು ಸಂಘಟಿಸುವದಕ್ಕೂ ಕಾರಣವೇನೆಂದರೆ- ಪ್ರಪತ್ತಿ ಕಾಲದಲ್ಲಿ ಫಲಸಜ್ಜಲ್ಪದಲ್ಲಿ, ವೈಷಮ್ಯಂ - ವ್ಯತ್ಯಾಸವು ಕೆಲವರು ಪ್ರಪದನಾನುಷ್ಠಾನಕಾಲದಲ್ಲೇ ಭಗವತ್ಸಾಕ್ಷಾತ್ಕಾರ ಉಂಟಾಗಬೇಕೆಂದೂ ಮತ್ತು ಪ್ರಾರಬ್ಧ ಕರ್ಮದ ವಿಚಾರವೆ ತೊಲಗಬೇಕೆಂದೂ ಸಜ್ಜಲ್ಪಿಸಿ ಮಾಡುತ್ತಾರೆ; ಆದುದರಿಂದ ಅವರಿಗೆ ಅಂತಹ ಫಲವು. ಇನ್ನು ಕೆಲವರು ಹಾಗೆ ಸಜ್ಜಲ್ಪಿಸದೇ ಪ್ರಪದನ ಮಾಡುತ್ತಾರೆ, ಅಂತವರಿಗೆ ಭಗವತ್ಸಾಕ್ಷಾತ್ಕಾರವು ಲಭಿಸದೇ ಇರಬಹುದು, ಮತ್ತು ಪ್ರಾರಬ್ಧ ಕರ್ಮದ ವಿಚಾರವು ನಿಲಿಸದೇ ಇರಬಹುದು ಎಂಬ ತಾತ್ಪರ್ಯವು. ಆದುದರಿಂದ ಪ್ರಾರಬ್ಧಸುಕೃತ ವಿಶೇಷ ಮಾಗವುಮಾಮ್ - ಪ್ರಪದನಕಾಲದಲ್ಲಿ ಹಾಗೆ ಸಜ್ಜಲ್ಪಿಸದೆ ಪ್ರಪದನ ಮಾಡಿದವನಿಗೂ ಒಂದುವೇಳೆ ಭಗವತ್ಸಾಕ್ಷಾತ್ಕಾರವು ಲಭಿಸಬಹುದು, ಆದು

ಫಲಾಂಶಮ್ ಸಕೃತ್ ಪ್ರಪತ್ತಿಂಯಾಲೇ ಸಿದ್ಧವಾನಾಲುಮ್ ಕೊಲಾದ ಆಂಶತ್ತೈ ಪ್ಪತ್ತ ಪಿನ್ಪು ತೀವ್ರ ಸಂವೇಗಮ್ ಪಿರಿನ್ದಾರ್ಕ್ಕು ಪುನಃ ಪ್ರಪತ್ತಿ ಪಣ್ಣುವುಮಾಮ್.

ಪ್ರಾರಬ್ಧಕರ್ಮದ ಸುಕೃತವಿಶೇಷದ ಫಲವಾಗಲೂ ಬಹುದು. ಹೀಗೆ ಹೇಳಿದುದು ಹಾಗೆ ಕೆಲವರಿಗೆ ಲಭಿಸದೇ ಇರುವದು **ಪ್ರಾರಬ್ಧ ದುಷ್ಕೃತ ವಿಶೇಷವಾಗವುಮಾಮ್** ಎಂದು ಹೇಳುವದಕ್ಕೂ ಉಪಲಕ್ಷಣವಾಗಿ ಇಟ್ಟುಕೊಳ್ಳತಕ್ಕದ್ದು. ಹೀಗೆ ಕೆಲವರಿಗೆ ಭಗವತ್ಸಾಕ್ಷಾತ್ಕಾರ ಉಂಟಾಗುವದಕ್ಕೂ, ಬುದ್ಧಿ ಪೂರ್ವೋತ್ತರಾಘಾದಿಗಳಿಲ್ಲದಿರುವದಕ್ಕೂ, ಎರಡು ಕಾರಣಗಳನ್ನು ತಿಳಿಸಿದರು :—(೧) ಪ್ರಪದನಕಾಲದಲ್ಲಿ ಅವುಗಳಿಗಾಗಿ ಸಙ್ಕಲ್ಪಿಸಿರೋಣವೂ, (೨)ಹಾಗೆ ಸಙ್ಕಲ್ಪಿಸದೇ ಇದ್ದರೂ ಉಂಟಾದರೆ. ಪ್ರಾರಬ್ಧ ಸುಕೃತವಿಶೇಷವೂ ಕಾರಣವೂ ಎಂದು ಭಾವಿಸತಕ್ಕದ್ದು. ಆಳ್ವಾರುಗಳಲ್ಲಿ ಶ್ರೀ ನಮ್ಮಾಳ್ವಾರ್ರವರಿಗೆ ಸಾಕ್ಷಾತ್ಕಾರವೂ ಜನ್ಮಪ್ರಭೃತಿಯಿಂದಲೇ ಉಂಟು; ನಿತ್ಯಸೂರಿಗಳವತಾರವಾದುದರಿಂದ; ಮತ್ತು ಆರನೆಯ ಪತ್ತಿನಲ್ಲಿ ಶೀಲವಾಸನಲ್ಲಿ "ಅಗಲಗಿಲ್ಲೇ" ಎಂಬ ಪಾಶುರದಲ್ಲಿ ಸಾಙ್ಗಪ್ರಪದನವನ್ನೂ ಅನುಷ್ಠಿಸಿರುತ್ತಾರೆ, ಪರಮಾತ್ಮ ಸಾಕ್ಷಾತ್ಕಾರವನ್ನೂ ಸಙ್ಕಲ್ಪಿಸಿರುವದರಿಂದ ಅದೂ ಲಭಿಸಿರುತ್ತದೆ. ಈ ಕ್ರಮಗಳಿಗೆ ಅವಗಾಹನ ಕಾಲದಲ್ಲಿ ಉಂಟಾದ ಸಾಕ್ಷಾತ್ಕಾರವು ಈ ಎರಡು ಕಾರಣಗಳಿಂದಲೂ ಉಂಟಾಗಿರಬಹುದು; ಶ್ರೀ ವಿಭುರರಿಗೆ ಪ್ರಾರಬ್ಧಕರ್ಮ ಸುಕೃತಮೂಲಕ ಉಂಟಾಗಿರಬಹುದು.

ಪ್ರಪದನಕಾಲದಲ್ಲಿ ಸಙ್ಕಲ್ಪಿಸದೇ ಇರುವದರಿಂದ ಪರಮಾತ್ಮಸಾಕ್ಷಾತ್ಕಾರವಿಲ್ಲದಿರೋಣವೂ, ಬುದ್ಧಿಪೂರ್ವೋತ್ತರಾಘದ ಸಂಘಟನೆಯೂ ಉಂಟಾಗಬಹುದೆಂದು ಹೇಳಲ್ಪಟ್ಟಿತು ಆದರೆ ಮೋಕ್ಷಕ್ಕಾಗಿ ಪ್ರಪದನವು ಸಕೃದನುಷ್ಠೇಯವೆಂದು ಹೇಳಿರುವದರಿಂದ, ಭಗವತ್ಸಾಕ್ಷಾತ್ಕಾರವೂ, ಬುದ್ಧಿಪೂರ್ವೋತ್ತರಾಘವಿಲ್ಲದಿರೋಣವೂ ಉಂಟಾಗುವಹಾಗೆ ಮಾಡಿಕ್ಕೊಳ್ಳುವದಕ್ಕೆ ಏನಾದರೂ ಉಪಾಯ ಉಂಟೋ? ಆಗ ಬುದ್ಧಿಯಿಲ್ಲದೆ ಸಙ್ಕಲ್ಪಿಸಲಿಲ್ಲವು. ಆಗ ಸಙ್ಕಲ್ಪಿಸದೇ ನಿಂತುಹೋದವು ಲಭಿಸುವ ಹಾಗೆ ಮಾಡಿಕ್ಕೊಳ್ಳಲು ಏನಾದರೂ ಸಾಧನ ಉಂಟೋ? ಎಂಬ ಪ್ರಶ್ನೆಯು ಪ್ರಾಸಙ್ಗಿಕವಾಗಿ ಉಂಟಾಗುತ್ತದೆ. ಆಗಿನ ಪ್ರಪದನಾನುಷ್ಠಾನವು ಮೋಕ್ಷಪ್ರಾಪ್ತಿಗಾಗಿಯಾದುದರಿಂದ ಅದು ಸಕೃದನುಷ್ಠೇಯವೇ. ಆದುದರಿಂದ ಆಗ ಪ್ರಾರ್ಥಿಸದೇ ಇರುವ ಅಂಶಗಳಿಗಾಗಿ ಪುನಃ ಪ್ರಪದನವನ್ನು ಅನುಷ್ಠಿಸಬಹುದೆಂದೂ ಇದರಿಂದ ಮೊದಲನುಷ್ಠಿಸಿದ ಪ್ರಪತ್ತಿಗೆ ಏನೊಂದೂ ತೊಂದರೆಯಿಲ್ಲವೆಂದೂ ಉಪದೇಶಿಸುತ್ತಾರೆ. ಮುನ್ಬು - ಮೊದಲು, ಮೊದಲು ಕೋ

ಅಥ ದೃಷ್ಟಾರ್ಥ ಪ್ರಪತ್ತಿ ವೈಫಲ್ಯ ದರ್ಶನ ಪ್ರಯುಕ್ತಾ ವಿಶ್ವಾಸ ಶಙ್ಕಾಂ ವಾರಯತಿ

ವೇರೇ ಶಿಲರ್ ದೃಷ್ಟಾರ್ಥ ಪ್ರಪತ್ತಿಗಳಿಲೆ ಶಿಲ ಫಲಿಯಾದೊಳಿಯ ಕ್ಕಣ್ಣು ಸಕಲ ಫಲಸಾಧನವಾನ ಪ್ರಪತ್ತಿಯಿಲೇ ಆತಿಶಜ್ಕಿಕ್ಕ ಪಣ್ಣುವಾರ್‌ಗಳ್, ಅವರ್‌ಗಳೈಯು ಮಲ್ಲಾದ ಶಾಸ್ತ್ರಾರ್ಥಙ್ಗಳಿರ್ಪುಡಿಗಳಿಲೇ ಕರ್ಮ ಕರ್ತೃಸಾಧನವೈಗುಣ್ಯತ್ತೈ ಯಿ ಟ್ಟು ತೆಳಿವಿಕ ವೇಣುಮ್, ಇಜ್ಞು

ಲಿನ ಫಲಾಂಶಮ್ - ಮೋಕ್ಷಾರ್ಥಿಯಾಗಿ ಪ್ರಾರ್ಥಿಸಿದ ಫಲಭಾಗವಾದ ಮುಕ್ತಿಯು, **ಪ್ರಪತ್ತಿಯಾಲೇ ಸಿದ್ಧಮಾನಾಲುಮ್** - ಆ ಪ್ರಪದನದಿಂದ ನಿಸ್ಸಂಶಯವಾಗಿ ಲಭಿಸುವದಾದರೂ, **ಕೋಲಾದ ಅಂಶತ್ತೈ ಕೃಪ್ಪತ್ತ** - ಆಗ ಅಪೇಕ್ಷಿಸದೇ ಇರುವ ಭಾಗವನ್ನು ಕುರಿತು, **ತೀವ್ರ ಸಂವೇಗಮ್** - ತುಂಬಾ ಪರಿತಾಪವು, **ಪಿರನ್ದಾರ್ಕ್ಕು** - ಹುಟ್ಟಿದವರಿಗೆ, **ಪುನಃ ಪ್ರಪತ್ತಿ ಪಣ್ಣುವುಮಾಮ್**-ಪುನಃ ಪ್ರಪತ್ತಿಯನ್ನು ಮಾಡಬಹುದು. ಮೋಕ್ಷಕ್ಕಾಗಿಯೇ ಪುನಃ ಶರಣಾಗತಿಯನ್ನು ಮಾಡುವದು ಯುಕ್ತವಲ್ಲವೇ ವಿನಾ, ಪ್ರಾರಬ್ಧದ ಪಾಪಾಂಶವು ಕಳೆಯುವದಕ್ಕಾಗಿಯಾಗಲಿ, ಬುದ್ಧಿ ಪೂರ್ವಾಘ ಸಂಘಟನೆಯಿಂದ ಪರಿತಾಪ ಹುಟ್ಟಿ ಆದರ ಶಮನಕ್ಕಾಗಿ ಪ್ರಾಯಶ್ಚಿತ್ತರೂಪದಲ್ಲಿಯಾಗಲಿ ಪುನಃ ಶರಣಾಗತಿಯನ್ನು ಮಾಡಬಹುದೆಂಬ ಭಾವವು.

ಮುಂದೆ ದೃಷ್ಟ ಫಲಕ್ಕಾಗಿ ಮಾಡಿದ ಪ್ರಪತ್ತಿಯು ಫಲಿಸದಿರುವ ಪ್ರಯುಕ್ತ ಉಂಟಾಗುವ ಅವಿಶ್ವಾಸ ಶಙ್ಕಾನಿವೃತ್ತಿಯು.

ವೇರೇ ಶಿಲರ್ - ಇನ್ನು ಕೆಲವರು, **ದೃಷ್ಟಾರ್ಥ ಪ್ರಪತ್ತಿಗಳಿಲೇ**- ಪ್ರತ್ಯಕ್ಷಗಳಾದ ಪುರುಷಾರ್ಥಪ್ರಾಪ್ತಿಗಾಗಿ ನೂಡಿದ ಪ್ರಪತ್ತಿಗಳಲ್ಲಿ, **ಶಿಲ** – **ಕೆಲವು ಪುರುಷಾರ್ಥಗಳು, ಫಲಿಯಾದೊಳಿಯಕ್ಕಣ್ಣು** - ಫಲಿಸದೇ ಇರುವದನ್ನು ಕಂಡು, **ಸಕಲ ಫಲಸಾಧನಮಾನ ಪ್ರಪತ್ತಿಯಿಲೆ** – ಸರಿಯಾಗಿ ಅನುಷ್ಠಿಸಲ್ಪಟ್ಟರೆ ಸಕಲ ಫಲಗಳನ್ನೂ ಸಾಧಿಸಿಕೊಡುವ ಎಂದರೆ ಚತುರ್ವಿಧ ಪುರುಷಾರ್ಥಗಳನ್ನೂ ಸಾಧಿಸಿಕೊಡುವ ಪ್ರಪತ್ತಿಯು ವಿಷಯದಲ್ಲಿ, **ಅತಿಶಜಿಕ್ಕಿ** – ಸಾಧ್ಯೋಪಾಯವಾಗಲು ಅರ್ಹವಲ್ಲವೆಂಬ ವಾದಮೂಲಕ ಹೆಚ್ಚಾದ ಶಙ್ಕಿಯನ್ನು, **ಪಣ್ಣುವಾರ್‌ಗಳ್** - ಮಾಡುವರು; ಕೆಲವರು ಐಶ್ವರ್ಯ ಸುತಗೇಹಪ್ರಾಪ್ತಿಗಾಗಿ ಪ್ರಪತ್ತಿಯನ್ನನುಷ್ಠಿಸಬಹುದು ; ಅವು ಅವರಿಗೆ ಲಭಿಸದೇ ಹೋಗುವದರಿಂದ ಆದರಲ್ಲಿ ವಿಶ್ವಾಸವನ್ನು ತೊರೆಯಬಹುದು, ಇದರಿಂದ ಪ್ರಪತ್ತಿಯು ಸರಿಯಾದ

ಕರ್ಮವೈಗುಣ್ಯವಾವದು ? ಮಹಾ ವಿಶ್ವಾಸಾದಿಗಳ್ ಕುರ್ಯಗ್ಯೆ. ಕರ್ತೃವೈಗುಣ್ಯವಾವದು ? ಪ್ರಪತ್ತಿಕ್ಕು ಚ್ಚೊನ್ನ ಅಧಿಕಾರಮ್ ನ್ಯೂನಮಾಗ್ಯೆ ಸಾಧನವೈಗುಣ್ಯವಾವದು ?ಯಥಾಶಾಸ್ತ್ರಮ್ ಪ್ರಪತ್ತ್ಯನುಷ್ಠಾನತ್ತುಕ್ಕು

ಸಾಧ್ಯೋಪಾಯವಲ್ಲವೆಂದು ಭಾವಿಸುವದು ಸರಿಯಲ್ಲವು; ಏಕೆಂದರೆ ಪ್ರಪತ್ತಿಯು ದೃಷ್ಟಾದೃಷ್ಟಗಳಾದ ಚತುರ್ವಿಧ ಪುರುಷಾರ್ಥಗಳನ್ನೂ ಸಾಧಿಸಿಕೊಡುವ ಮಾಹಾತ್ಮ್ಯವುಳ್ಳದು, ಶರಣಾಗತನ ಕೋರಿಕೆಯನ್ನು ಸಲ್ಲಿಸುವದಕ್ಕಾಗಿಯೇ ಸರ್ವೇಶ್ವರನು ಬದ್ಧಕಂಕಣನಾಗಿದ್ದಾನೆ. ಹೀಗಿರುವಾಗ ಪ್ರಪತ್ತಿಯು ದೃಷ್ಟಾರ್ಥವನ್ನು ಸಾಧಿಸಿ ಕೊಡವೇ ಹೋದರೆ, ಅದನ್ನನುಷ್ಠಿಸುವ ಕ್ರಮದಲ್ಲಿ ವೈಗುಣ್ಯ ಉಂಟೆಂದು ಭಾವಿಸತಕ್ಕದ್ದು ನ್ಯಾಯವೇ ವಿನಾ, ಅದು ಪ್ರಬಲವಾದ ಉಪಾಯವಾಗಲೇನೂ ಸಂದೇಹವಿಲ್ಲವೆಂದು ಉಪದೇಶಿಸುತ್ತಾರೆ. ಪ್ರಪತ್ತಿಯು ಫಲಿಸದೇ ಇರಲು ಮೂರೆರ ವೈಗುಣ್ಯ ಮೂಲಕವೆಂದು ಅಂತಹ ಪೂರ್ವಪಕ್ಷಿಗಳಿಗೆ ತಿಳಿಸಿ, ಅವರ ಅಂತಹ ಅಜ್ಞಾನವು ತೊಲಗುವಹಾಗೆ ಮಾಡತಕ್ಕದ್ದೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ. **ಅವರ್‌ಗಳೈಯುಮ್** - ಅಂತಹ, ಶಾಸ್ತ್ರಜ್ಞಾನವಿಲ್ಲದೆ ಭ್ರಮೆಯುಳ್ಳವರನ್ನು ಕೂಡ, **ಅಲ್ಲಾದ ಶಾಸ್ತ್ರಾರ್ಥಜ್ಞಗಳಿರ್ಪ್ಪಿಡಿಯೇ**- ಇತರ ಕಾಮ್ಯಶಾಸ್ತ್ರಗಳಲ್ಲಿ ಕಾರೀರೀ ಮೊದಲಾದ ಯಾಗಗಳಲ್ಲಿರುವ, ಪ್ರಕಾರ ಕರ್ಮ ವೈಗುಣ್ಯವೇನು, ಕರ್ತೃ ವೈಗುಣ್ಯವೇನು, ಸಾಧನ ವೈಗುಣ್ಯವೇನು, **ಯಿಟ್ಟು**-ವೆಳೆಯಿಟ್ಟು, ಇವುಗಳ ಮೂಲಕವಾಗಿ ಪ್ರಕಾಶಪಡಿಸಿ, **ತೆಳಿವಿಕ್ಕವೇಣುಮ್** - ಸರಿಯಾದ ಜ್ಞಾನವುಂಟಾಗುವಹಾಗೆ ಮಾಡಬೇಕು. ಕಾಮ್ಯ ಭಾಗದಲ್ಲಿ ಶಾಸ್ತ್ರವು "ವೃಷ್ಟಿಕಾಮಃ ಕಾರೀರ್ಯಾಯಜೇತ" ಮಳೆ ಬೇಕೆಂಬಪೇಕ್ಷೆಯುಳ್ಳವನು ಕಾರೀರೀಯಾಗವನ್ನು ಮಾಡಬೇಕೆಂಬ ವಿಧಿ ಇರುತ್ತದೆ. ಈ ಯಜ್ಞದಲ್ಲಿ ಕರ್ಮ ಕರ್ತೃ ಸಾಧನ ವೈಗುಣ್ಯಗಳಿಲ್ಲವಿದ್ದರೆ ಯಜ್ಞಪೂರ್ತಿಯಲ್ಲಿ ಮಳೆಯು ಬರುತ್ತದೆ. ಇಲ್ಲವಾದರೆ ಯಜ್ಞಾಙ್ಗಗಳಲ್ಲಿ ಏನಾದರೂ ನ್ಯೂನತೆಯುಂಟಾದರೆ ಇಲ್ಲವು. ಆಗ ಕಾರೀರೀ ಯಜ್ಞವು ಸತ್ಯವಾದುದಲ್ಲವೆಂಬ ಭಾವವು ಹೇಗೆ ಉಂಟಾಗುವದಿಲ್ಲವೋ, ಹಾಗೆಯೇ ಪ್ರಪತ್ತಿಯೂ ಸಹ ದೃಷ್ಟಾರ್ಥದಲ್ಲಿ ಪ್ರಪತ್ತಿಯು ಫಲಿಸದೇ ಹೋದರೆ ಕರ್ಮ ಕರ್ತೃ ಸಾಧನ ವೈಗುಣ್ಯಗಳಿಂದ ಹಾಗಾಯಿತೆಂದು ಭಾವಿಸತಕ್ಕದ್ದೇ ವಿನಾ, ಅಂತಹ ದೋಷಗಳಿಲ್ಲವಿದ್ದರೆ ಪ್ರಪತ್ತಿಯು ಅಧಿಕಾರಿಯ ದೃಷ್ಟಾರ್ಥವನ್ನೂ ಹಾಗೆ ಅದೃಷ್ಟಾರ್ಥವನ್ನೂ ಸಹ ಸಾಧಿಸಿಕೊಡುವದರಲ್ಲಿ ಈಷದಪಿ ಸಂದೇಹವಿಲ್ಲವೆಂಬ ಭಾವವು ಕಾಮ್ಯ ಕರ್ಮಗಳಲ್ಲಿ ಸಾಙ್ಗವಾಗಿ ಯಥಾವಿಧಿ ಅನುಷ್ಠಾನದಿಂದ ಫಲಸಿದ್ಧಿಯುಂಟೆಂದು ಹೇಗೆ ನಂಬಿಕೆಯೋ, ಹಾಗೆಯೇ ಪ್ರಪದನದಲ್ಲೂ ಎಂದು

ಮೂಲವಾನ ಸದುಪದೇಶಾದಿಗಳನ್ರಿಕ್ಕೇ ಯೊಳಿಗೈ, ಇವ್ವೈಗುಣ್ಯಜ್ಞಳ ನ್ರಿಕ್ಕೇ ಪ್ರಪತ್ತಿಪಣ್ಣಿನ ಪೋದು ತಪ್ಪಿಲಜ್ಞಳಾಗಕ್ಕೂಲಿನ ದೃಷ್ಟಜ್ಞಳುಮ್ ಸಿದ್ಧಿಕ್ಕುಕ್ಕಾಣಾನಿನ್ರೋಮ್.

ಪೂರ್ಣ ನಂಬಿಕೆ ಇರತಕ್ಕದ್ದೆಂಬ ಭಾವವು ಮುಂದೆ ಕರ್ಮ ಕರ್ತೃಸಾಧನ ವೈಗುಣ್ಯ ದೋಷಗಳು ಯಾವುವೆಂಬುದನ್ನು ತಿಳಿಸುತ್ತಾರೆ ಪ್ರಪತ್ತಿಯು ಸರ್ವಾಧಿಕಾರವಾದುದು, ಹೀಗಿರುವಲ್ಲಿ ಅವಕ್ಕೆ ಕರ್ತೃವೈಗುಣ್ಯವೆಂದರೇನು? ಪ್ರಪದನವು ಒಂದು ಮಾನಸಿಕ ಬುದ್ಧಿ ವಿಶೇಷವೆಂದು ಹೇಳಲ್ಪಟ್ಟಿರುತ್ತದೆ, ಹಾಗಾದರೆ ಅವಕ್ಕೆ ಕರ್ಮವೈಗುಣ್ಯವುಂಟೋ? ಹಾಗೆಯೇ ಅದಕ್ಕೆ ಸಾಧನವೈಗುಣ್ಯವೆಂದರೇನು? ಎಂದರೆ, ಅವು ಮೂರನ್ನೂ ನಿರೂಪಿಸುತ್ತಾರೆ. ಇಜ್ಞಾ-ಈ ಸಂದರ್ಭದಲ್ಲಿ, ಕರ್ಮವೈಗುಣ್ಯ ಮೂರನದು-ಎಂದರೇನು? ಮಹಾ ವಿಶ್ವಾಸವೇ, ವೇದಲಾದವುಗಳು, ಕುರ್ಯಿಗೈ - ನ್ಯೂನವಾಗಿರೋಣವು ಎಂದರೆ ಮಹಾ ವಿಶ್ವಾಸರೂಪವಾದ ಅಜ್ಞನೇ ಇಲ್ಲದುದರಿಂದ ಪ್ರಪದನವು ಫಲಿಸಲಿಲ್ಲವೆಂದು ಹೇಳತಕ್ಕದ್ದು; ಇಲ್ಲಿ ಅವಿಶಬ್ದದಿಂದ ಕಾರ್ಪಣ್ಯ ವೊದಲಾದ ಅಜ್ಞಗಳ ನ್ಯೂನತೆಯೂ ಹೇಳಲ್ಪಟ್ಟಿತು. ಮುಂದೆ ಅಧಿಕಾರಿಯಲ್ಲಿ ನ್ಯೂನತೆ ಎಂತಾದ್ದೆಂಬುದನ್ನು ತಿಳಿಸುತ್ತಾರೆ. **ಕರ್ತೃವೈಗುಣ್ಯವೆಂದರೇನು? ಪ್ರಪತ್ತಿಕ್ಕು ಜ್ಞೊನ್ನ-ಪ್ರಪತ್ತಿಗೆ** ಹಿಂದೆ ಉಪಪಾದಿಸಿದ ಅಧಿಕಾರವು, ನ್ಯೂನತಾಗೈ - ಇಲ್ಲದಿರೋಣವು ತಾನು ಅನನ್ಯಗತಿಕನಾದುದರಿಂದಲ್ಲವೇ ಪ್ರಪತ್ತಿಗೆ ಯೋಗ್ಯನು, ಹಾಗಲ್ಲದೆ ಶರಣಾಗತಿಯನ್ನು ಮಾಡಿಬಿಟ್ಟು ಉಪಾಯಾಂತರವನ್ನೂ ಅವಲಂಬಿಸಿದರೆ ಶರಣಾಗತಿಯು ಫಲಿಸುವಲ್ಲಿ ಸಾಧನವೈಗುಣ್ಯವೆಂದರೇನು? ಯಥಾಶಾಸ್ತ್ರವು ಪ್ರಪತ್ತ್ಯನುಷ್ಠಾನಕ್ಕು ಕ್ಕೆ - ಶಾಸ್ತ್ರದಲ್ಲಿ ಹೇಗೆ ವಿಧಿಸಿದಿಯೋ ಹಾಗೆ ಪ್ರಪತ್ತಿಯನ್ನು ಅನುಷ್ಠಿಸುವುದಕ್ಕೆ, ಮೂಲವಾನ - ಕಾರಣವಾದ, ಉಪದೇಶಾದಿಗಳನ್ರಿಕ್ಕೇ ಯೊಳಿಗೈ - ಪದ್ಧರುವಿನಲ್ಲಿರಬೇಕಾದ ಗುಣಗಳೆಲ್ಲ ಸಂಪೂರ್ಣವಾಗಿ ಇರುವ ಗುರುವಿನ ಲಾಭವೂ ಅಂತವರಿಂದ ಪ್ರಾಪ್ತವಾಗುವ, ಶರಣಾಗತಿ ಶಾಸ್ತ್ರವಿಷಯವಾದ ಉಪದೇಶ ಮುಂತಾದವುಗಳಲ್ಲವೇ ಹೇಗೆಗಾಣಾವೂ, ಇಂತಹ ದೋಷಗಳಿಲ್ಲದಂತಾಗಿ ದೃಷ್ಟಾರ್ಥಕ್ಕೇಯಾಗಲಿ, ಅದೃಷ್ಟಾರ್ಥಕ್ಕೇಯಾಗಲಿ ಅನುಷ್ಠಿತವಾದ ಪ್ರಪತ್ತಿಯು ಎಂದಿಗೂ ವಿಫಲವಾಗುವುದಿಲ್ಲವೆಂದು ಉಪದೇಶಿಸುತ್ತಾರೆ. ಇವ್ವೈಗುಣ್ಯಜ್ಞಳನ್ರಿಕ್ಕೇ - ಈ ಮೂರು ವಿಧ ವೈಗುಣ್ಯಗಳೂ ಇಲ್ಲದಂತಾಗಿ, ಪ್ರಪತ್ತಿಪಣ್ಣಿನ ಪೋದು - ಪ್ರಪತ್ತಿಯನ್ನನುಷ್ಠಿಸಿದಾಗ, ತಪ್ಪಿಲಜ್ಞಳಾಗ ಆ ಪ್ರಪತ್ತಿಯು ಫಲಿಸಿದಾಗ, ಕೊಳಿನ - ಬಯಸಿದ್ದನು, ದೃಷ್ಟಜ್ಞಳುಮ್ - ಪ್ರತ್ಯಕ್ಷ

ಪ್ರಪತ್ತಿರ್ಭಕ್ತ್ಯಜ್ಞಏವ, ನತು ಅಜ್ಞೋ ಇತಿಪಕ್ಷಸ್ಯನಿರಾಸಃ

ವೇರೇ ಶಿಲರ್ ಪ್ರಪತ್ತಿಶಾಸ್ತ್ರತ್ತೋಡುಮ್ ಶಾಸ್ತ್ರಾಂತರಜ್ಞೋಡುಮ್ ವಾಶಿಯರ ಸರ್ವಶಾಸ್ತ್ರಜ್ಞಳುಕ್ಕುಮ್ ಪ್ರವರ್ತಕರಾನ ವ್ಯಾಸಾ

ವಾದ ಪುರುಷಾರ್ಥಗಳೂ ಕೂಡ, ಸಿದ್ಧಿಕ್ಕ ಕಾಣಾನಿನ್ರೋಮ್ - ಸಿದ್ಧಿಸಿರುವ ದನ್ನು ಕಂಡಿರುವೆವು. ದ್ರೌಪದಿಯು ಮಾನಭಂಗ ಸಮಯದಲ್ಲಿ ದೃಷ್ಟಫಲವಾಗಿ ಸಿದ್ಧಿಸಿದ ಹಾಗೂ, ವಿಭೀಷಣನಿಗೂ ಕುಚೇಲನಿಗೂ ದೃಷ್ಟಫಲವು ಅಪೇಕ್ಷಿತವಲ್ಲದಿದ್ದರೂ ಸಿದ್ಧಿಸಿದಹಾಗೂ, ಧ್ರುವನಿಗೂ ಗಜೇಂದ್ರನಿಗೂ ಸಿದ್ಧಿಸಿದಹಾಗೂ ಪ್ರತ್ಯಕ್ಷವಾಗಿಯೇ ಸಿದ್ಧಿಸುವದೆಂಬ ಭಾವವು ಅದುದರಿಂದ ಪ್ರಪತ್ತಿಯು ಸರ್ವೇಷ್ಟಸಾಧಕವಾದ ಸರ್ವಾಧಿಕಾರವಾದ ಸಾಧ್ಯೋಪಾಯವಾಗುವದರಲ್ಲಿ ಸಂದೇಹವಿಲ್ಲವು.

ಮುಂದೆ ಕೆಲವರು ಮೋಕ್ಷೋಪಾಯವು "ತಮೇವಂ ವಿದ್ವಾ ಅಮೃತ ಇಹ ಭವತಿ, ನಾನ್ಯಃ ಪನ್ಥಾ ಅಯನಾಯವಿದ್ಯತೇ" ಎಂಬುದನ್ನು ತಮಗೆ ಪ್ರಮಾಣವಾಗಿ ಮಾಡಿಕೊಂಡ., ಭಕ್ತ್ಯುಪಾಯ ವಾತ್ರವೇ ಮೋಕ್ಷಸಾಧಕವು, ಪ್ರಪತ್ತಿಯಾದರೋ "ಮಾಮೇವ ಯೇ ಪ್ರಪದ್ಯಂತೇ" ಎಂಬ (೨. ೭೧) ಗೀತಾ ಶ್ಲೋಕದಲ್ಲಿ ಹೇಳಿರುವಹಾಗೆ ಅಜ್ಞಮಾತ್ರವೇ ಎಂದು ಭಾವಿಸುವರು. ಈ ಅಭಿಪ್ರಾಯವನ್ನು ಪ್ರಮಾಣಗಳ ಪೂರ್ವಕವಾಗಿ ಖಂಡಿಸುತ್ತಾರೆ

ಪ್ರಪತ್ತಿಯು ಸ್ವತಃ ಅಜ್ಞಾಯಾಗಿ ಉಪಾಯವಲ್ಲವು, ಅಜ್ಞಾಯಾದ ಉಪಾಸನಕ್ಕೆ ಅಜ್ಞಮಾತ್ರವೆಂಬ ವಾದ ನಿರಾಸವು

ಮೊದಲು ಪೂರ್ವಪಕ್ಷವನ್ನು ಅನುವಾದಮಾಡಿ ಅನಂತರ ಖಂಡಿಸುತ್ತಾರೆ ವೇರೇ ಶಿಲರ್- ಇನ್ನುಬೇರೆ ಕೆಲವರು, ಪ್ರಪತ್ತಿಶಾಸ್ತ್ರತ್ತೋಡುಮ್ - ಪ್ರಪತ್ತಿಶಾಸ್ತ್ರದೊಂದಿಗೆಯೂ, ಶಾಸ್ತ್ರಾಂತರಜ್ಞೋಡುಮ್ - ಇನ್ನು ಬೇರೆ ಶಾಸ್ತ್ರಗಳೊಂದಿಗೆಯೂ, ವಾಶಿಯರ - ಏನೆಂದರೂ ವ್ಯತ್ಯಾಸವಿಲ್ಲದಹಾಗೆ, ಸರ್ವಶಾಸ್ತ್ರಾರ್ಥಜ್ಞಳುಕ್ಕುಮ್-ಸಮಸ್ತ ಶಾಸ್ತ್ರಾರ್ಥಗಳಿಗೂ ಪ್ರವರ್ತಕರಾರ್, ವ್ಯಾಸರೆಂದೊದಲಾದವರು, ಆದಿ ಶಬ್ದದಿಂದ ಪರಾಶರಾದಿಗಳು ಹೇಳಲ್ಪಟ್ಟರು, ಪೂರ್ವಪಕ್ಷಿಯು ತನಗೆ ಸಹಾಯವೆಂದು ಭಾವಿಸಿ ೀ ವ್ಯಾಸೋಕ್ತಿಯನ್ನು ಉದಾಹರಿಸುತ್ತಾರೆ; ೀ ವ್ಯಾಸರಿಗಿಂತ ಶಾಸ್ತ್ರಜ್ಞರೂ, ಜ್ಞಾನಿಯೂ ದೊರೆಯಲಾರರು, ಆದುದರಿಂದ ಅವರ ದಿವ್ಯಸೂಕ್ತಿಯನ್ನು ಪ್ರಮಾಣವಾಗಿ ಉದಾಹರಿಸಿದುದು

ದಿಗಳ್ (೧) "ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯಚ ಪುನಃ ಪುನಃ ಇದಮೇಕಂ ಸುನಿಷ್ಪನ್ನಂ ಧ್ಯೇಯೋನಾರಾಯಣಸ್ಸದಾ" ಎನ್ನುವುದು, (೨) "ಹರಿರೇಕ ಸ್ಸದಾ ಧ್ಯೇಯೋ ಭವದ್ಭಿಸ್ಸತ್ವ ಸಂಸ್ಥಿತೈಃ" (೩) "ಸ್ಮರ್ತವ್ಯ ಸ್ಸತತಂ ವಿಷ್ಣುಃ" ಎನ್ನುವುದು, ಇಪ್ಪಡಿ ನಿಷ್ಕರ್ಷಿಯಾನಿರ್ಕ ಸಕೃತ್ಪ್ರಪತ್ತಿಮಾತ್ರಮೇ ಮೋಕ್ಷಸಾಧನ ವಾಗಕ್ಕೂಡವೋ ? (೪)"ನಾಮೇವ

ತಮ್ಮ ವಾದಕ್ಕೆ ಬಲವೆಂದು ಭಾವಿಸಿ ಹೇಳುತ್ತಾರೆ (೧) "**ಸರ್ವ ಶಾಸ್ತ್ರಾಣಿ** – ಸಮಸ್ತ ಶಾಸ್ತ್ರಗಳನ್ನೂ, **ಆಲೋಡ್ಯ** - ಚನ್ನಾಗಿ ವಿಮರ್ಶಿಸಿ ನೋಡಿ, **ಪುನಃ ಪುನಃ** - ಪೂರ್ವಾಪರ ವಿರೋಧಗಳೂ ಯಾವ ಉಂಟಾಗದೇ ಇರುವದ ಕ್ಕಾಗಿ, ಅವುಗಳನ್ನು ಪುನಃ ಪುನಃ, **ವಿಚಾರ್ಯ** - ವಿವೇಕೋತ್ಥಜ್ಞಾನದಿಂದ ವಿಚಾರಮಾಡಿ, **ಇದಮೇಕಂ ಸುನಿಷ್ಪನ್ನಂ** - ಇದೊಂದೇ ಸರಿ ಎಂದು ಚನ್ನಾಗಿ ನಿಶ್ಚಯಿಸಲ್ಪಟ್ಟಿತು, ಏನೆಂದರೆ, **ಧ್ಯೇಯೋ ನಾರಾಯಣಸ್ಸದಾ** - ಮುಕ್ತಿಗೆ ಮುಖ್ಯವಾದ ಉಪಾಯಕ್ಕಾಗಿ ಶ್ರೀಮನ್ನಾರಾಯಣನು ಯಾವಾಗಲೂ ಧ್ಯಾನಿಸ ತಕ್ಕವನು, ಉಪಾಸಿಸಲ್ಪಡತಕ್ಕವನೆಂಬ ಭಾವವು." **ಎನ್ನುವುದು** - ಎಂಬದಾಗಿಯೂ, (೨) "**ಸತ್ವ ಸಂಸ್ಥಿತೈಃ** - ಸತ್ವಮಾರ್ಗದಲ್ಲಿ **ಸದಾಚಾರ್ಯದಿಂದ** ಸಪ್ರತಿಷ್ಠಿತರಾಗಿರುವ, **ಭವದ್ಭಿಃ** - ನಿಮ್ಮಿಗಳಿಂದ, **ಶ್ರೀಹರಿಯೇ, ಏಕಃ**-ಜಗತ್ಕಾರಣನಾಗಿಯೂ ಉಪಾಸ್ಯನಾಗಿ ಮೋಕ್ಷಪ್ರದನಾಗಿಯೂ ಆತನೊಬ್ಬನೇ, **ಸದಾ** - ಯಾವಾಗಲೂ, **ಧ್ಯೇಯಃ** - ಉಪಾಸ್ಯನು," **ಎನ್ನುವುದು** - ಎಂಬದಾಗಿಯೂ (೩) "ವಿಷ್ಣುವು, **ಸತತಂ** - ಯಾವಾಗಲೂ, **ಸ್ಮರ್ತವ್ಯಃ** ಸ್ಮರಿಸಲು ಯೋಗ್ಯನು." **ಎನ್ನುವುದು** - ಎಂಬದಾಗಿಯೂ, **ಇಪ್ಪಡಿ ನಿಷ್ಕರ್ಷಿಯಾನಿರ್ಕ** – ಹೀಗೆ ವ್ಯಾಸರು ನಿಷ್ಕರ್ಷಿಸಿ ಹೇಳಿರುವಾಗ, **ಸಕೃತ್ಪ್ರಪತ್ತಿಮಾತ್ರಮೇ** - ಒಂದು ಸಲ ಮಾಡಿದ ಪ್ರಪತ್ತಿ ಮಾತ್ರವೇ, **ಮೋಕ್ಷಸಾಧನವಾಗಕ್ಕೂಡವೋ ?** – ಮೋಕ್ಷಕ್ಕೆ ಸಾಧನವಾಗಲು ಸಾಧ್ಯವೋ ? ಪ್ರಪತ್ತಿಯು ಅಜ್ಞಮಾತ್ರವೇ ಎಂದು ಭಾವಿಸಿ, ಅಜ್ಞವೇ ಎಲ್ಲಿಯವರೆಗೂ ಫಲವನ್ನು ಸಾಧಿಸೀತೋ ? ಅಜ್ಞಾಯು ಸಾಧಿಸಬಹುದು ಎಂಬ ತಾತ್ಪರ್ಯವು. ಪ್ರಪತ್ತಿಯು ಅಜ್ಞವೇ ಸರಿ ಎಂಬುದಕ್ಕೆ ಗೀತಾಪ್ರಮಾಣವನ್ನು ಉದಾಹರಿಸುತ್ತಾರೆ; ಆದರೆ ಚರಮಶ್ಲೋಕದಲ್ಲಿ ಪ್ರಪತ್ತಿಯನ್ನು ಅಜ್ಞಾಯಾಗಿಯೂ, ಉದಾಹರಿಸಿರುತ್ತದೆಯಲ್ಲಾ ಎಂಬಾಕ್ಷೇಪ ಬಂದೀತೆಂದು ಭಾವಿಸಿ, ಅದನ್ನೂ ಕೂಡ ಅಜ್ಞವಾಗಿಯೇ ಭಾವಿಸತಕ್ಕದ್ದೇ

---

(೧) ಭಾರ. ಆನು. ೧೮, ೩೪, (೨) ಹರಿವಂಶ. ೧೩೨. ೪.

(೩) ಹರಿವಂಶ. ೧೩೨. ೧೪ (೪) ಗೀ. ೭. ೧೪.

ಯೇ ಪ್ರಪದ್ಯನ್ತೇ" ಇತ್ಯಾದಿಗಳ್ ಅಙ್ಗ ಪ್ರಪತ್ತಿ ವಿಷಯಜ್ಞಾನಾ ರ್ಪೋಲೆ, ಚರಮಶ್ಲೋಕಾದಿಗಳುಮ್ ಸಪರಿಕರ ಪ್ರಪತ್ತಿಯೈ ಭಕ್ತ್ಯಙ್ಗ ವಾಗ ವಿಧಿಕ್ಕಿರನ ವಾಗ ವೇಣ್ಡಾವೋ ವೆನ್ರು ಶೊಲ್ಲುವರ್‌ಗಳ್. ಇದುವು

ನ್ಯಾಯವೆಂದು ಪೂರ್ವಪಕ್ಷಿಯು ಹೇಳುತ್ತಾರೆ. **"ಮಾಮೇವಯೇ ಪ್ರಪದ್ಯನ್ತೇ**- "ನನ್ನೊಬ್ಬನನ್ನು ಮಾತ್ರವೇ ಕುರಿತು ಯಾರು ಪ್ರಪತ್ತಿಯನ್ನನುಷ್ಠಿಸುವರೋ ?" **ಇತ್ಯಾದಿಗಳ್** - ಇವೇ ನೊದಲಾದ ಪ್ರಮಾಣಗಳು, **ಅಙ್ಗಪ್ರಪತ್ತಿ ವಿಷಯಜ್ಞಾನಾರ್ಪೋಲೇ** - ಉಪಾಸನಕ್ಕೆ ಅಙ್ಗವಾದ ಪ್ರಪತ್ತಿ ಹೇಗೋಹಾಗೆ, ಗೀತಾ ೧೮ನೇ ಅಧ್ಯಾಯದ ೬೬ನೆಯ ಶ್ಲೋಕವಾದ, **ಚರಮ ಶ್ಲೋಕಾದಿಗಳುಮ್** - **"ಸರ್ವಧರ್ಮಾನ್"** ಎಂಬ ಚರಮಶ್ಲೋಕವೂ, **ಆದಿ** ಪದದಿಂದ ಆದರಹಾಗೆಯೇ ಸ್ವತಂತ್ರ ಪ್ರಪತ್ತಿಯಹಾಗೆ ತೋರುವ ಇತರ ಪ್ರಮಾಣಗಳೂ ಕೂಡ, **ಸಪರಿಕರ ಪ್ರಪತ್ತಿಯೈ** - ಅಙ್ಗಗಳಿಂದ ಕೂಡಿದ ಪ್ರಪತ್ತಿಯನ್ನು, **ಭಕ್ತ್ಯಙ್ಗವಾಗ** - ಉಪಾಸನಕ್ಕೆ ಅಙ್ಗವಾಗಿ, **ವಿಧಿಕ್ಕಿರನವಾಗವೇಣ್ಡಾವೋ**-ವಿಧಿಸುತ್ತದೆ ಎಂದಾಗಬೇಡವೋ ? **!ಎನ್ರು ಶೊಲ್ಲುವರ್‌ಗಳ್** - ಎಂದು ಆಕ್ಷೇಪಿಸಿ ಹೇಳುವರು, **"ಮಾಮೇವ ಯೇ ಪ್ರಪದ್ಯಂತೇ"** ಎಂಬ **ಪೂರಾಶ್ಲೋಕವ** ಯಾವುದೆಂದರೆ.

ದೈವೀ ಹ್ಯೇಷಾಗುಣಮಯೀ ಮಮ ಮಾಯಾ ದುರತ್ಯಯಾ ।
ಮಾಮೇವಯೇ ಪ್ರಪದ್ಯಂತೇ ಮಾಯಾಮೇತಾಂತರಂತಿತೇ ॥

ಈ ತ್ರಿಗುಣಾತ್ಮಕವಾದ ಪ್ರಕೃತಿಯು ಲೀಲಾಪರನಾದ ನನ್ನ ಸಂಬಂಧವಾದುದು. ಇದರಲ್ಲಿ ಭೋಗ್ಯತ್ವ ಬುದ್ಧಿಯನ್ನು ಬಿಡುವದು ತುಂಬಾ ಕಷ್ಟವು, ಅದರ ಬಲೆಯಿಂದ ತಪ್ಪಿಸಿಕೊಳ್ಳುವದು ಸುಲಭವಲ್ಲವು ನಿರತಿಶಯಾನಂದ ಸುಖವನ್ನೀಯುವ ನನ್ನನ್ನು ಉಪಾಸನೆ ಮಾಡುವದಕ್ಕೆ ಇದು ದೊಡ್ಡ ಪ್ರತಿ ಬಂಧಕವು. ನನ್ನನ್ನು ಕುರಿತು ಪ್ರಪದನಾನುಷ್ಠಾನವನ್ನು ಮಾಡಿದವರು ಇಂತಹ ಪ್ರಬಲ ಪ್ರತಿ ಬಂಧಕವನ್ನು ಸುಲಭವಾಗಿ ದಾಟುವರು ಎಂಬುದು ಈ ಶ್ಲೋಕ ತಾತ್ಪರ್ಯವು. ಇದರಿಂದ ಈ ಶರಣಾಗತಿಯು ಮಾಯಾತರಣಕ್ಕಾಗಿಯೂ ಉಪಾಸನೆ ಕೈಗೂಡುವದಕ್ಕಾಗಿಯೂ ವಿಧಿಸಲ್ಪಟ್ಟಿತೆಂಬ ಭಾವವು. ಈ ಅಭಿಪ್ರಾಯಕ್ಕನುಸಾರವಾಗಿಯಲ್ಲವೇ ಚರಮಶ್ಲೋಕದಲ್ಲಿ ಹೇಳಲ್ಪಟ್ಟಿರುವ ಶರಣಾಗತಿಯನ್ನೂ ಅನ್ವಯಿಸತಕ್ಕದ್ದು? ಅದನ್ನು ಸ್ವತಂತ್ರಪ್ರಪತ್ತಿ ವಿಧಿಯಾಗಿ ಭಾವಿಸಲು ಹೇಗೆ ಸಾಧ್ಯವೆಂಬುದು ಪೂರ್ವಪಕ್ಷಿಯ ಅಭಿಪ್ರಾಯವು. **ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ** ಎಂಬುದರಿಂದ ಉಪಾಸನೆಗೆ ಪ್ರತಿಬಂಧಕಗಳಾದ ಸಮಸ್ತ ಪಾಪಗಳಿಂದಲೂ ಬಿಡಿಸುವೆನು ಅಳಬೇಡ ಎಂಬ ತಾತ್ಪರ್ಯವಿದ್ದರೂ ಇರಬಹು

ಮನುಷಪನ್ನಮ್ :—(೧) "ಶರಣಂ ತ್ವಾಂ ಪ್ರಪನ್ನಾಯೇ ಧ್ಯಾನ ಯೋಗವಿವರ್ಜಿತಾಃ । ತೇಪಿಮೃತ್ಯುಮತಿಕ್ರಮ್ಯ ಯಾಂತಿ ತದ್ವೈಷ್ಣವಂ ಪದಮ್" ಎನ್ನುವ್, (೨) "ಯದ್ಯೇನ ಕಾಮು ಕಾಮೇನ ನಸಾಧ್ಯಂ

ದೆಂಬುದೂ ಮತ್ತು "ಸರ್ವಧರ್ಮಾ ಪರಿತ್ಯಜ್ಯ" ಎಂಬುದರಿಂದ ಮೋಕ್ಷಕ್ಕೆ ಉಪಾಸನರೂಪ ಉಪಾಯಾಂತರ ತ್ಯಾಗವನ್ನೇನೂ ಹೇಳಲಿಲ್ಲವು ; ಆ ಉಪಾಯಾಂತರಕ್ಕೆ ಈ ಪ್ರಪದನರೂಪ ಅಜ್ಞಕ್ಕಿಂತ ಬೇರೆಯಾದ ಇತರಗಳ ತ್ಯಾಗವೇ ಬೋಧಿಸಲ್ಪಟ್ಟಿತೆಂದೂ ಪೂರ್ವಪಕ್ಷಿಯ ಆಶಯವು. ಈ ಅಭಿಪ್ರಾಯಗಳು ಸರಿಯಲ್ಲವೆಂದು ಮುಂದೆ ಉಪಪಾದಿಸುತ್ತಾರೆ :— ಇದುವುನುಷಪನ್ನಮ್-ಈ ಪೂರ್ವಪಕ್ಷವೂ ಕೂಡ ಮೇಲಿನ ಇತರ ಪೂರ್ವಪಕ್ಷಗಳ ಹಾಗೆ ಸನುಂಜಸವಾದುದಲ್ಲವು. ಮೊದಲು ಪ್ರಮಾಣಗಳನ್ನು ಉದಾಹರಿಸಿ, ಸ್ವತಂತ್ರವಾಗಿಯೂ ಪ್ರಪತ್ತಿಯು ಅಜ್ಞ್ಗ ಎಂಬುದರಲ್ಲಿ ಸಂದೇಹವಿಲ್ಲವೆಂದು ಸ್ಥಾಪಿಸುತ್ತಾರೆ (೧)"ಧ್ಯಾನಯೋಗ ವಿವರ್ಜಿತಾಃ - ಧ್ಯಾನಯೋಗವನ್ನವಲಂಬಿಸಲು ಸಂಪೂರ್ಣ ಅಶಕ್ತರಾಗಿರುವ, ಯೇ - ಯಾರು, ತ್ವಾಂ - ಶರಣಾಗತವತ್ಸಲನಾದ ನಿನ್ನನ್ನು, ಶರಣಂ- ಶರಣಾಗತಿಯ ಮೂಲಕ ಸಿದ್ಧೋಪಾಯನನ್ನಾಗಿ, ಪ್ರಪನ್ನಾಃ-ಆಶ್ರಯಿಸುವರೋ, ತೇಪಿ - ಭಕ್ತಿಯೋಗ ನಿಷ್ಠರಾಗಿ ಅವರೂ ಕೂಡ, ಮೃತ್ಯುಂ - ಸಂಸಾರವನ್ನು ಅತಿಕ್ರಮ್ಯ - ದಾಟಿ, ತತ್ - ಆನಂದಮಯವೆಂದು ಮಹಾ ಪ್ರಸಿದ್ಧಿಯನ್ನು ಹೊಂದಿದ, ವೈಷ್ಣವಂ ಪದಂ-ತದ್ವಿಷ್ಣೋಃ ಪರಮಮ್ ಪದಮ್ ಎಂದು ಶ್ರುತಿಯಲ್ಲಿ ಹೇಳಿರುವ ದಿವ್ಯ ವೈಕುಂಠವನ್ನು, ಯಾಂತಿ-ಹೊಂದ ತ್ತಾರೆ." ಹೀಗೆ ಈ ಶ್ಲೋಕದಲ್ಲಿ ಭಕ್ತಿಮಾರ್ಗವು ಹೇಗೆಮೋಕ್ಷೋಪಾಯವೋ ಹಾಗೆಯೇ ಉಪಾಸನೆಯ ಗಂಧವೇ ಇಲ್ಲವೆ ಅಸಮರ್ಥರಾದ,ಭಕ್ತಿಗೆ ಅಧಿಕಾರಿಗಳಲ್ಲದ ಸ್ತ್ರೀಯರೂ, ಶೂದ್ರಾದಿಗಳೂ ಹೀಗೆ ಸರ್ವರಿಗೂ ಪ್ರಪತ್ತಿಯು ಸ್ವತಂತ್ರವಾದ ಉಪಾಯವೆಂದು ಹೇಳಲ್ಪಟ್ಟಿರುತ್ತದೆ ; (೨) " ಕಾಮುಕಾಮೇನ - ಪುರುಷಾರ್ಥಗಳ ಕಾಮನೆಯುಳ್ಳ, ಯೇನ - ಬ್ರಾಹ್ಮಣಾದಿ ತ್ರೈವರ್ಣಿಕರೇಯಾಗಿರಬೇಕೆಂಬ ಆವಶ್ಯಕತೆಯಿಲ್ಲದಿರುವ ಯಾವ ಅಧಿಕಾರಿಯಿಂದಲೇಯಾಗಲಿ, ಸಾಧನಾಂತರೈಃ - ಜ್ಯೋತಿಷ್ಟೋಮಾದಿ ಬೇರೆ ಸಾಧನಗಳಿಂದ, ನಸಾಧ್ಯಂ - ಅಧಿಕಾರವಿರುವುದು ದ್ರವ್ಯಸಹಾಯಾದಿಗಳಿಲ್ಲದಿರುವದು, ಇವೇ ಮೊದಲಾದ ಅಸಮರ್ಥತೆಯಿಂದ ಸಾಧಿಸಲು ಅಸಾಧ್ಯವಾದುದು ಯಾವ ಫಲವುಂಟೋ, ಹೀಗೆ ಕಾಮ್ಯ ಕರ್ಮಗಳನ್ನೆಸಗಿ ಪಡೆಯಲು ಯಾವ ಅಧಿಕಾರಿಗೆಯಾಗಲಿ ಅಸಾಧ್ಯವಾದ ಮನೋರಥವು ಯಾವುದುಂಟೋ ಅದೂ, ಮತ್ತು

---

(೧) ಬ್ರಾಹ್ಮೀ ಪುರಾಣ. (೨) ಅಹಿ ಸಂ. ೩೭. ೨೫

ಸಾಧನಾಂತರೈಃ । ಮುಮುಕ್ಷುಣಾ ಯತ್ಸಾಂಖ್ಯೇನ ಯೋಗೇನ ನಚ ಭಕ್ತಿತಃ ॥ ಪ್ರಾಪ್ಯತೇ ಪರಮಂ ಧಾಮ ಯತೋನಾ ವರ್ತತೇಯತಿಃ । ತೇನ ತೇನಾಪ್ಯತೇ ತತ್ತನ್ನ್ಯಾಸೇನೈವ ಮಹಾಮುನೇ ॥ ಪರಮಾತ್ಮಾಚ ತೇನೈವ ಸಾಧ್ಯತೇ ಪುರುಷೋತ್ತಮಃ ॥" ಎನ್ನುವ್, ಇತ್ಯಾದಿ ವಚನಜ್ಞ

ಮುಮುಕ್ಷುಣಾ - ಪ್ರಕೃತಿಬಂಧ ಮೋಕ್ಷನನ್ನು ಅಪೇಕ್ಷಿಸುವ ಅಧಿಕಾರಿಯಿಂದ ಎಂದರೆ ಮೋಕ್ಷಾರ್ಥಿಯಿಂದ, ಇವರಿಂದ ಹಿಂದಿನ ಪೂರ್ವಾರ್ಧದಿಂದ ಹೇಳಲ್ಪಟ್ಟ ಅಧಿಕಾರಿಗಳು ಬುಭುಕ್ಷ ಗಳೇವಿನಾ ಮುಮುಕ್ಷುವಲ್ಲನೆಂಬುದು ವ್ಯಕ್ತವು ; ಮುಖ್ಯ ವಾಗಿ ಅರ್ಥಕಾಮ ಪರರನ್ನು ಪೂರ್ವಾರ್ಧದಲ್ಲಿ ಹೇಳಿ, ಮೋಕ್ಷಕಾಮರನ್ನು ಉತ್ತ ರಾರ್ಧಾದಿಗಳಿಂದ ಹೇಳಲ್ಪಟ್ಟಿತೆಂದು ಭಾವಿಸಬೇಕಷ್ಟೆ ; ಸಾಂಖ್ಯೇನ - ಜ್ಞಾನ ಯೋಗದಿಂದಲಾಗಲಿ, ಯೋಗೇನ - ಕರ್ಮಯೋಗದಿಂದಲಾಗಲಿ ಕೂಡಿದ, ಭಕ್ತಿತಃ - ಭಕ್ತಿಯೋಗದಿಂದಲಾಗಲಿ, ಯತಿಃ - ಇಂದ್ರಿಯಗಳ ನಿಯಮನ ಪೂರ್ವಕ ಐಹಿಕದಲ್ಲಿ ವೈರಾಗ್ಯ ಉಳ್ಳವನು, ಯತಃ ನಾವರ್ತತೇ-ಯಾವುದನ್ನು ಹೋಗಿ ಸೇರಿದನಂತರ ಅಲ್ಲಿಂದ ಹಿಂತಿರುಗಿ ಬರುವದೆಂಬುವದಿಲ್ಲವೋ, ಅಂತಹ ಪರಮುಂಧಾಮ - ಸರ್ವೋತ್ಕೃಷ್ಟವಾದ ತದ್ವಿಷ್ಣೋಃ ಪರಮಂ ಪದಂ ಎಂದು ಶ್ರುತಿಯಲ್ಲಿ ಅತಿಶಯವಾಗಿ ಶ್ಲಾಘಿಸಲ್ಪಟ್ಟ ದಿವ್ಯ ವೈಕುಂಠವು, ನಪ್ರಾಪ್ಯತೇ - ವಿಘ್ನಗಳು ಕಳೆಯದೆ ಇರುವದರಿಂದಲೋ, ಅಭ್ಯಾಸ ಸಾಲದಿರುವದರಿಂದಲೋ, ವಿಶ್ವಾಸ ಸಾಲದಿರುವದರಿಂದಲೋ, ಅಧಿಕಾರ ಶೂನ್ಯತೆಯಿಂದಲೋ ನಪ್ರಾಪ್ಯತೇ - ಹೊಂದಲ್ಪಡುವದಿಲ್ಲವೋ, ತತ್ತತ್ - ಅವೆಲ್ಲವೂ, ಎಂದರೆ ಆ ಫಲವೆಲ್ಲವೂ, ಓ ಮಹಾ ಮುನಿಯೇ, ತೇನ ತೇನ ಆಯಾ ಅಧಿಕಾರಿಯಿಂದ, ನ್ಯಾಸೇನೈವ - ಸ್ವತಂತ್ರ ಪ್ರಪತ್ತಿಯಿಂದಲೇ, ಆಪ್ಯತೇ ಹೊಂದಲ್ಪಡುತ್ತದೆ. ತೇನೈವ - ಆ ಭರನ್ಯಾಸದಿಂದಲೇ, ಪರಮಾತ್ಮನಾದ ಪುರುಷೋತ್ತಮನೂ ಕೂಡ, ಸಾಧ್ಯತೇ-ಸಿದ್ಧೋಪಾಯನಾಗಿ ನಿಂತು ರಕ್ಷಿಸುವಹಾಗೆ ಸಾಧಿಸಲ್ಪಡುತ್ತಾನೆ. ಇಲ್ಲಿ ಭಕ್ತಿಯೋಗವಾದ ಉಪಾಸನದಿಂದಲೂ ಸಾಧಿಸಲಸಾಧ್ಯವಾದುದನ್ನೂ ಪ್ರಪತ್ತಿಯಿಂದಲೇ ಸಾಧಿಸಬಹುದೆಂದೂ, ಸರ್ವೇಶ್ವರನು ಸಿದ್ಧೋಪಾಯನಾಗಿ ಉಪಾಸನೆಯಸ್ಥಾನದಲ್ಲಿ ತಾನೇ ನಿಂತು ನಿಸ್ಸಂಶಯವಾಗಿಯೂ ಖಂಡಿತವಾಗಿಯೂ ನಡೆಸಿಕೊಡುವದರಿಂದ, ಭಕ್ತ್ಯುಪಾಯಕ್ಕಿಂತ ಸುಲಭವಾಗಿ ಸಾಧಿಸಿಕೊಡುವ ಉಪಾಯವೆಂದು ಹೇಳಿದುದರಿಂದ, ಭರನ್ಯಾಸವೂ ಸ್ವತಂತ್ರವಾದ ಉಪಾಯವೆಂ ಬುದು ಸಿದ್ಧವು. ಈ ಶ್ಲೋಕಕ್ಕೆ ಸರ್ವಸಮಂಜಸವಾಗಿ ಹೀಗೆ ಅರ್ಥಹೇಳದೆ ಭಿನ್ನಭಿನ್ನವಾಗಿ ಅರ್ಥಮಾಡಿರುತ್ತಾರೆ. "ಯೇನ" "ತೇನ" ಎಂಬ ಶಬ್ದ

ಗಳು ಅಧಿಕಾರಿ ಪರವಾದ ಶಬ್ದಗಳಲ್ಲವು ಎಂದು ಹೇಳಿ, **ಯಾವ ಮನಸ್ಸಿನಿಂದ, ಆ ಮನಸ್ಸಿನಿಂದ** ಎಂದರ್ಥಮಾಡಿರುತ್ತಾರೆ. ಆಗ ಎರಡು ತೃತೀಯೆಗಳು ಒಟ್ಟಿಗೆ ಹೇಳಿರುವದೂ **ಯೇನ** ಎಂದು ಮನಸ್ಸುಗೇನೆ ಪ್ರಸಿದ್ಧಿ ಹೇಗೆ? ಇಚ್ಛೆಯು ಆಗಕೂಡದೋ? ಎಂಬ ಆಕ್ಷೇಪಗಳುಂಟಾದೀತು. ಇನ್ನು ಕೇವರು ಭಗವನ್ನ್ಯಾಸವೇ ಸಿದ್ಧೋಪಾಯವನ್ನು ಸಾಧಿಸಿ ಕೊಡುತ್ತದೆಂದು ಹೇಳಿದರೆ "**ಯಮೇವೈಷ ವೃಣುತೇ ತೇನಲಭ್ಯಃ**" "ಸರ್ವೇಶ್ವರನು ಯಾವನನ್ನು ಮುಕ್ತಿಗೆ ಯೋಗ್ಯನೆಂದು ವರಿಸುವನೋ ಅವನಿಗೇ ಮೋಕ್ಷವು" ಎಂಬ ಹೇಳಿಕೆಗೆ ವಿರೋಧವಾಗುವದಿಲ್ಲವೋ ಎಂದಾಕ್ಷೇಪಿಸುವರು. ಆ ಶ್ರುತಿಯು ಸರ್ವೇಶ್ವರನು ತನ್ನಿಷ್ಟಾನುಸಾರ ಮುಕ್ತಿಯನ್ನು ಕೊಡುವನೆಂದು ಕೇಳಲಿಲ್ಲವು. ಯಾವನು ಸಾಧ್ಯೋಪಾಯಾನುಷ್ಠಾನದಲ್ಲಿ ತುಂಬಾ ಪ್ರೀತಿಯನ್ನು ಸರ್ವೇಶ್ವರನಲ್ಲಿ ಮಾಡುವನೋ, ಆದರಿಂದ ಪ್ರೀತನಾದ ಶ್ರಿಯಃಪತಿಯು ಈತನು ಮುಕ್ತಿಗೆ ಯೋಗ್ಯನೆಂದು ವರಿಸುವನೆಂಬ ಭಾವವು ಇದಕ್ಕೆ ನಿದರ್ಶನವಾಗಿ ಬಾಲಕರು ಬರೀ ಪರೀಕ್ಷೆಗೆ ಹೋಗುವದರಿಂದಲೇ ತೇರ್ಗಡೆಯಾಗುವದಿಲ್ಲವು; ಪರೀಕ್ಷಕನು ಯಾವನನ್ನು ತೇರ್ಗಡೆಗೆ ಅರ್ಹನೆಂದು ಚುನಾಯಿಸುವನೋ ಅವನೇ ಅರ್ಹನಾಗುವನು ಎಂದರೆ ಪರೀಕ್ಷಕನು ತನ್ನಿಷ್ಟಬಂದಂತೆ ತೇರ್ಗಡೆಯನ್ನು ಹೊಂದಿಸುವನೆಂದಾಗುತ್ತದೆಯೇ? ಅಥವಾ ಪರೀಕ್ಷೆಯು ನಿರರ್ಥಕವೆಂದಾಗುತ್ತದೆಯೋ? ಎರಡೂ ಆಗುವದಿಲ್ಲವು. ಹಾಗೆಯೇ ಇಲ್ಲಿಯೂ ಎಂಬ ಭಾವವು. ಪ್ರಪತ್ತಿಯು ಸಾಧ್ಯೋಪಾಯವೆಂಬುದರಲ್ಲಿ ಸಂದೇಹವಿಲ್ಲವು, ಆದರಿಂದ ಪ್ರೀತನಾದ ಸಿದ್ಧೋಪಾಯನಾದ ಪರಮಾತ್ಮನೇ ಈತನು ದಿವ್ಯ ವೈಕುಂಠವನ್ನು ಹೊಂದಲರ್ಹನೆಂದು ವರಿಸತಕ್ಕವನು ಎಂಬ ಭಾವವು. ಈ ಅಭಿಪ್ರಾಯವನ್ನೇ ಸಂಹಿತಾವಾಕ್ಯವಾದ **"ಪರಮಾತ್ಮಾಚ ತೇನೈವ ಸಾಧ್ಯತೇ ಪುರುಷೋತ್ತಮಃ"** ಎಂಬುದು ಸಮರ್ಥಿಸುತ್ತದೆ.

ಆದರೆ, ಇಂತಹ ಸುಲಭೋಪಾಯದ ಉಪದೇಶವು ಗೀತೆಯಲ್ಲಿಲ್ಲದೇ ಇರಬಹುದೇ? ಎಂದರೆ; ಅರ್ಜುನನು ೨-೭ ನೆಯ ಶ್ಲೋಕದಲ್ಲಿ ಮೋಹಜ್ಞಾನವು ತೊಲಗಿ, ತನಗೆ ಪರಮ ಶ್ರೇಯಸ್ಸುಂಟಾಗುವ ಉಪದೇಶಕ್ಕಾಗಿ ಸ್ವತಂತ್ರ ಪ್ರಪತ್ತಿಯನ್ನನುಷ್ಠಿಸಿರುತ್ತಾನೆ. ಪುನಃ ೧೮ನೆಯ ಅಧ್ಯಾಯದಲ್ಲಿ, ೪೩, ೪೪ ನೆಯ ಶ್ಲೋಕಗಳಲ್ಲಿ ತಾನು ಸ್ನೇಹ ಭಾವದಲ್ಲಿ ಶ್ರೀಕೃಷ್ಣ ಪರಮಾತ್ಮನಲ್ಲಿ ತೀಳಿಯದೆಯೂ ಮರೆತೂ ಮಾಡಿದ ಸರ್ವಾಪರಾಧಗಳನ್ನೂ ಕ್ಷಮಿಸು ಎಂದು ಇನ್ನೊಂದು ಸಲ ಸ್ವತಂತ್ರ ಪ್ರಪತ್ತಿಯನ್ನು ಅನುಷ್ಠಿಸಿರುತ್ತಾನೆ ಮತ್ತು ೧೮ನೆಯ ಅಧ್ಯಾಯದ ಚರಮ ಶ್ಲೋಕವು ಆಜ್ಞಾರೂಪ ಶರಣಾಗತಿಯಾದರೂ ಎರಡಕ್ಕೂ ಅನ್ವಯಿಸುವ ಹಾಗೆ ಉಪದೇಶಿಸಿರುತ್ತಾರೆ

ಳಾಲೇ, ಸ್ವತಂತ್ರ ಪ್ರಪತ್ತಿ ಸಿದ್ಧಿತ್ತಾಲ್, ಇನ್ನಿಷ್ಟೈ ಯುಡೈಯವ
ನುಕ್ಕು ಶ್ರೀ ವೈಕುಂಠಗದ್ಯತ್ತಿಲ್ ಪಡಿ ಯಿಲೇ ಸ್ವಯಂ ಫಲನ್ನಾಗ
"ಧ್ಯೇಯೋ ನಾರಾಯಣಸ್ಸದಾ" ಎಂಗ್ಗಿರ ಅರ್ಥತ್ತಿಲ್ ತಕ್ಕ ವಿಳುಕ್ಕಾಡ

ಹೀಗಾದನಂತರ ಶ್ರೀ ವಚನ ಭೂಷಣದಲ್ಲಿ ಮುಕ್ತದೆಶೆಯಲ್ಲಿ ಕೆಲವರು ಅನು ಭವಸರರು, ಕೆಲವರು ಕೈಂಕರ್ಯ ಸರರೆಂದು ಹೇಳುವ ಅಭಿಪ್ರಾಯವು ಸರಿಯಲ್ಲ ವೆಂದು ಸಾರಸಂಗ್ರಹವ್ಯಾಖ್ಯಾತೃವು ಹೇಳುತ್ತಾರೆ. ಹೇಗೆಂದರೆ,ಶ್ರೀ ಪಿಳ್ಳೈ ಲೋ ಕಾಚಾರ್ಯರವರ ಅಭಿಪ್ರಾಯಪ್ರಕಾರ ಪರಮಾತ್ಮನ ಸಿಸ್ಸೋಪಾಯತ್ವವಾದರೋ ಭೋಗ್ಯತ್ವವೇಷದಿಂದಲೂ ಮತ್ತು ಅವರನ್ನು ಕೈಂಕರ್ಯದಲ್ಲಿ ವಿನಿಯೋಗಿಸುವ ರೂಪದಿಂದಲೂ ಆದುದರಿಂದ ಕೆಲವರು ಅನುಭವಸರರು, ಕೆಲವರು ಕೈಙ್ಕರ್ಯ ಸರರು ಎಂಬುದು ಅವರ ಅಭಿಪ್ರಾಯವು ಇದು "**ಪರಮಾತ್ಮಚಕೇನೈವ ಸಾಧ್ಯತೇ** ಎಂಬುದರಿಂದ ಭರನ್ಯಾಸದಿಂದಲೇ ಆತನೂ ಸಾಧ್ಯನೆಂದು ಹೇಳಿರುವದರಿಂದ ಸಮಂಜಸವಾಗುವದಿಲ್ಲವು ವುಕ್ತಿಯಲ್ಲಿ ಸಾಮ್ಯವು ಹೇಳಿರುವದರಿಂದ ಹೀಗೆ ವ್ಯತ್ಯಾಸಗಳನ್ನು ಹೇಳುವದು ಶಾಸ್ತ್ರ ಸಮ್ಮತವಲ್ಲವು " **ಎನ್ರುಮ್** - ಎಂದು ಹೇಳುವ, **ಇತ್ಯಾದಿವಚನಙ್ಗಳಾಲೇ** - ಇಂತಹ ಪ್ರಮಾಣವಚನಗಳಿಂದ, **ಸ್ವತಂತ್ರ ಪ್ರಪತ್ತಿ ಸಿದ್ಧಿತ್ತಾಲ್** - ಈ ಅಙ್ಗರೂಪವಾದ ಸ್ವತಂತ್ರಪ್ರಪತ್ತಿಯು ಸಿದ್ಧಿಸಿದರೆ, **ಈ ನಿಷ್ಠೈಯುಡೈಯವನುಕ್ಕು** - ಇಂತಹ ಲಘೂಪಾಯ ನಿಷ್ಠೆ ಯನ್ನು ಅವಲಂಬಿಸಿದವನಿಗೆ, **ಶ್ರೀಭಾಷ್ಯಕಾರರು** ಅವರು ರಚಿಸಿದ ಶ್ರೀವೈಕುಂಠ ಗದ್ಯದಲ್ಲಿ ಹೇಳಿರುವಹಾಗೆ, **ಸ್ವಯಂ ಫಲನ್ನಾಕ** - ಸ್ವಯಂ ಅವೇ ಎಂದರೆ ಭಕ್ತಿಯೇ ಫಲವು ಎಂಬವಾಗಿ, **"ಧ್ಯೇಯೋ ನಾರಾಯಣಸ್ಸದಾ"** ಎಂಬುದರ, **ಅರ್ಥತ್ತಿಲ್** - ಅರ್ಥದಲ್ಲಿ, **ತಕ್ಕ ವಿಳಕ್ಕಾಡು ಅನ್ವಯತ್ತುಕ್ಕು ವಿರೋಧ ಮಿಲ್ಲೈ** - ಸ್ವತಃ ಪ್ರಾಪ್ತವಾದ ಅನ್ವಯಕ್ಕೆ, **ಈ ಎರಡು** ಉಪಾಯಗಳ ಸ್ವರೂ ಪಾನುಗುಣವಾಗಿ ಅರ್ಥಮಾಡಿದರೆ ವಿರೋಧವಿಲ್ಲವು. ಹೇಗೆಂದರೆ, **ಧ್ಯೇಯೋ ನಾರಾಯಣಸ್ಸದಾ** ಎಂಬ ವ್ಯಾಸೋಕ್ತಿಯಲ್ಲಿ ಹೇಳಿರುವ ಧ್ಯಾನವು ಶಕ್ತ ನಾದ ಭಕ್ತಿಯೋಗವು ವಿಷಯದಲ್ಲಿ, **"ಭಕ್ತ್ಯೈಕತ್ವನನ್ಯಯಾ"** ಎಂದು ಹೇಳಿರುವಹಾಗೆ ಉಪಾಯ ರೂಪ ಭಕ್ತಿಯೂ, ಅಶಕ್ತನಾದ ಪ್ರಪತ್ತಿ ನಿಷ್ಠನ ವಿಷಯದಲ್ಲಿ ಫಲ ರೂಪ ಭಕ್ತಿಯೂ ಎಂದು ಅನ್ವಯಿಸಬಹುದೆಂಬ ತಾತ್ಪರ್ಯವು. **ಅಲ್ಲಿ ಧ್ಯೇಯಃ** ಎಂದು ಇಷ್ಟಮಾತ್ರವೇ ಹೇಳಿ, ಉಪಾಯತ್ವರೂಪದಲ್ಲಿಯಾಗಲಿ, ಫಲತ್ವರೂಪ ದಲ್ಲಿಯಾಗಲಿ ಎಂದು ಹೇಳದೇ ಇರುವದರಿಂದ ಎರಡಕ್ಕೂ ಸಮಂಜಸವಾಗುವ ಹಾಗೆ ಅನ್ವಯಿಸಬಹುದೆಂಬ ತಾತ್ಪರ್ಯವು. ಶ್ರೀ ವೈಕುಂಠ ಗದ್ಯದಲ್ಲಿ ಶ್ರೀ

ನ್ಯಯತ್ತುಕ್ಕು ವಿರೋಧವಿಲ್ಲೈ. ಇದು ಅರೋಗನುಕ್ಕು ಮಾರೋ ಗ್ಯಾರ್ತಿಕ್ಕುಮ್ ಕ್ಷೀರಂ ಸೇವ್ಯ ಮೆನ್ನತ್ತೋಡುಕ್ಕುಮ್.

ಭಾಷ್ಯಕಾರರ ಸೂಕ್ತಿಯು ಯಾವುದೆಂದರೆ "ಮಹಾವಿಭೂತೇ ಶ್ರೀನುತಶ್ಚರ ಣಾರವಿಂದಯುಗಳಮನನ್ಯಾತ್ಮಸಂಜೀವನೇನ ತದ್ಗತಸ್ಸರ್ವ ಭಾವೇನ ಶರಣ ಮನುವ್ರಜೇತ್, ತತಶ್ಚ ಪ್ರತ್ಯಹಮಾತ್ಮೋಜ್ಜೀವನಾಯೈವ ಮನು ಸ್ಮರೇತ್" "ನಿತ್ಯವಿಭೂತಿ ಲೀಲಾವಿಭೂತಿ ಎಂಬ ಉಭಯ ನಿಯಾಮ್ಯವರ್ಗ ವನ್ನುಳ್ಳ ಮತ್ತು ಶ್ರೀಮತಃ - ಲಕ್ಷ್ಮೀಯುಕ್ತನಾದ ಎಂದರೆ ಶ್ರಿಯಃಪತಿಯಾದ ಶ್ರೀಮನ್ನಾರಾಯಣನ ಪಾದಕಮಲದ್ವಂದ್ವವನ್ನು ಆತ್ಮೋಜ್ಜೀವನ ವಿಷಯ ದಲ್ಲಿ ಆತನಲ್ಲದೆ ಇನ್ನು ಯಾರಿಗೂ ಸಾಮರ್ಥ್ಯವಿಲ್ಲವೆಂಬ ಭಾವನೆಯಿಂದ ಆತ ನನ್ನು ಉಪಾಯವನ್ನಾಗಿ ವರಿಸತಕ್ಕದ್ದು, ತತಶ್ಚ - ಎಂದರೆ ಪ್ರಪದನಾನುಷ್ಠಾ ನಾಂತರದಲ್ಲಿ, ಪ್ರತಿದಿನವೂ ತನಗೆ ಅಲಭ್ಯವಾದುದು ಮುಂದೆ ಸರ್ವೇಶ್ವರನ ಕರುಣೆಯಿಂದ ಲಭಿಸುತ್ತದೆಂಬ ಮನಸ್ತೃಪ್ತಿಯಿಂದ ಆತ್ಮೋಜ್ಜೀವನಕ್ಕಾಗಿ ಆತ ನನ್ನು ಧ್ಯಾನಿಸತಕ್ಕದ್ದು. ಇದರಿಂದ ಫಲರೂಪ ಭಕ್ತಿಯು ಹೇಳಲ್ಪಟ್ಟ್ಪತೇ ವಿನಾ ಉಪಾಯರೂಪ ಭಕ್ತಿಯಲ್ಲವು. ಹಾಗಾದರೆ ಧ್ಯೇಯೋ ನಾರಾಯಣ ಸ್ಸದಾ ಎಂಬುದು ಎರಡು ವಿಧ ಉಪಾಯನಿಷ್ಠರಿಗೂ ಅನ್ವಯಿಸಬಹುದೋ ಎಂದರೆ, ಅನ್ವಯಿಸಿದರೆ ಪ್ರತ್ಯವಾಯವೇನು ? ಎಂದು ಕೇಳುತ್ತಾರೆ. ಉಪಾಯ ರೂಪ ಭಕ್ತಿಯ ವಿಷಯದಲ್ಲಿ ಧ್ಯೇಯೋ ನಾರಾಯಣಸ್ಸದಾ ಎಂಬುದರಿಂದ ಯಾವಜ್ಜೀವವೂ ಉಪಾಸನೆಯನ್ನು ಮಾಡತಕ್ಕದ್ದು ಎಂಬರ್ಥವು ಫಲರೂಪ ಭಕ್ತಿಯ ವಿಷಯದಲ್ಲಿ, ಭರನ್ಯಾಸರೂಪ ಸಕೃದನುಷ್ಠಾನವನ್ನೂ ಮಾಡಿದರೆ ತನಗುಂಟಾಗುವ ಆತ್ಮೋಜ್ಜೀವನಕ್ಕಾಗಿ ಸರ್ವೇಶ್ವರನನ್ನು ಯಾವಜ್ಜೀವವೂ ಧ್ಯಾನಿಸತಕ್ಕದ್ದು ಸ್ಮರಿಸತಕ್ಕದ್ದು ಎಂಬ ಭಾವವು. ಹೀಗೆ ಒಂದೇಪ್ರಯೋಗವು ಎರಡು ಅಧಿಕಾರಿಗಳಿಗೂ ಅನ್ವಯಿಸುವದುಂಟೋ ಎಂದರೆ ಒಂದು ದೃಷ್ಟಾಂತ ಮೂಲಕ ಆಗಬಹುದೆಂದು ತಿಳಿಸುತ್ತಾರೆ:—ಕ್ಷೀರವ್ರ-ಹಾಲು, ಅರೋಗನಕ್ಕು-ರೋಗವಿಲ್ಲದವನಿಗೂ, ಆರೋಗ್ಯಾರ್ತಿಕ್ಕುಮ್-ಆರೋಗ್ಯವಿಲ್ಲದೆ ಇದನ್ನು ಬಯ ಸುವವನಿಗೂ ಸಹ, ಸೇವ್ಯಂ - ಸೇವಿಸಲು ಯೋಗ್ಯವಾದುದು, ಎನ್ನತ್ತೋಡು-ಎಂಬುದರೊಂದಿಗೆ, ಇದು - ಈ, "ಧ್ಯೇಯಃ" ಎಂಬಲ್ಲಿ ತೋರಿಬರುವ ಧ್ಯಾನ ರೂಪ ಭಕ್ತಿಯು, ಒಕ್ಕುಮ್ - ಸಮಾನವು ಹಾಲು ಹೇಗೆ ಆರೋಗ್ಯವಿರುವವ ನಿಗೂ ಆರೋಗ್ಯವಿಲ್ಲದೆ ಆರೋಗ್ಯಬೇಕೆಂದಿರುವವನಿಗೂ ಸಹ ಪುಷ್ಟಿಕರವೋ, ಹಾಗೆಯೇ ಭಕ್ತಿಯಿಂದ ಪರಮಾತ್ಮನನ್ನು ಧ್ಯಾನಿಸುವದು, ಭಕ್ತಿನಿಷ್ಠನಿಗೂ

ಅತಃ ಸದಾ ಭಗವತ್ಸ್ಮರಣೇ ಸರ್ವಾಧಿಕಾರತ್ವಮ್.

ಸಾಙ್ಗಮಾನ ಧ್ಯಾನವಿಶೇಷಮ್ ಸರ್ವಾಧಿಕಾರವುನ್ನೀಯೊಗಿಲುಮ್, ಭಗವದ್ವಿಷಯತ್ತಿಲ್ ಅಧಿಕಾರಾನುರೂಪವಾಗ ಅರಿಯೆಲಾವುಳವುಮ್ (೧) "ನಿರನ್ತರಮ್ ನಿನೈಪ್ಪವರ್ಗಳ್ ನೀ ನಿನೈಕ್ಕ ವೇಣ್ಡುಮೇ" ಇತ್ಯಾದಿಗಳಿರ್ಪುಡಿಯೇ ಅನುಸಂಧಿಕ್ಕವುನ್ ಕುರೈ ಯಿಲ್ಲೈ.

ಪ್ರಪತ್ತ್ಯನುಷ್ಠಿಸಿದವನಿಗೂ ಇಬ್ಬರಿಗೂ ಬೇಕಾದುದು. ಭರನ್ಯಾಸ ಮಾಡಿದವನು ಕೃತಕೃತ್ಯನು, ಹಾಲು ಭೋಗ್ಯವಾಗಿರುವ ಅರೋಗಸ್ಥನೀಯನು, ಇವನಿಗೂ ಕೃತಜ್ಞತಾಭಾವ ಪ್ರದರ್ಶಕವಾಗಿ ತನ್ನ ಸ್ವರೂಪಕ್ಕನುಗುಣವಾದುದಾಗಿ ಭಕ್ತಿರೂಪ ಧ್ಯಾನವು ಯುಕ್ತವು, ಉಪಸನ್ನಾನಿಷ್ಠನು ಹಾಲು ಆವಶ್ಯಕವಾಗಿರುವ ಆರೋಗ್ಯವನ್ನು ಬಯಸುವವನ ಸ್ಥಾನೀಯನು; ಇವನಿಗೆ ಭಕ್ತಿರೂಪ ಧ್ಯಾನವು ಉಪಾಯರೂಪದಲ್ಲಿ ಆವಶ್ಯಕವೆಂಬ ಭಾವವು.

ಆದುದರಿಂದ ನಿರಂತರ ಭಗವದ್ಧ್ಯಾನದಲ್ಲಿ ಸರ್ವರಿಗೂ ಅಧಿಕಾರವು.

ಭಕ್ತಿಯು ಅಷ್ಟಾಂಗಯುಕ್ತವಾಗಿ ಧ್ಯಾನಯೋಗಿಗೆ ಆವಶ್ಯಕವು. ಆ ಧ್ಯಾನಯೋಗವು ತ್ರೈವರ್ಣಿಕರಿಗೆ ಮಾತ್ರವೇ? ಹೀಗಿರವಾಗ, ಭಕ್ತಿಯು ಸರ್ವಾಧಿಕಾರ ಹೇಗೆ? ಎಂದರೆ ಉಪಾಯರೂಪ ಪರಭಕ್ತಿಯು ಉಪಾಸಕನಿಗೇ ಆವಶ್ಯಕವಾದರೂ ಸಾಮಾನ್ಯವಾದ ಭಕ್ತಿಯು ಫಲರೂಪವಾಗಿ ಸಾರ್ವತ್ರಿಕವಾಗಿ ಸ್ತ್ರೀಶೂದ್ರಾದಿಯೊದಲುಗೊಂಡು ಸಮಸ್ತರಿಗೂ ಬೇಕಾದುದೇ ಎಂದು ಸಾಙ್ಗಮಾನ ಎಂದಾರಂಭಿಸಿದ ವಾಕ್ಯಮೂಲಕ ಹೇಳುತ್ತಾರೆ. ಸಾಙ್ಗಮಾನ - ಅಷ್ಟಾಂಗಗಳಿಂದ ಯುಕ್ತವಾದ, ಧ್ಯಾನ ವಿಶೇಷವು, ಸರ್ವಾಧಿಕಾರಮುನ್ನೀಯೊಗಿಲುಮ್ - ತ್ರೈವರ್ಣಿಕರಾದ ಬ್ರಾಹ್ಮಣ ಕ್ಷತ್ರಿಯ ವೈಶ್ಯರಿಗೆ ಮಾತ್ರವೇ ಅಧಿಕಾರವುಳ್ಳದ್ದಾಗಿ ಸ್ತ್ರೀ ಶೂದ್ರಾದಿಗಳಿಗೆ ಅಧಿಕಾರವಿಲ್ಲದುದರಿಂದ ಸರ್ವಾಧಿಕಾರವುಳ್ಳದುದಲ್ಲವೇ ಆದ್ದರೂ, ಭಗವದ್ವಿಷಯತ್ತಿಲ್ - ಭಗವಂತನನ್ನು ಹೊಂದುವ ಸಂದರ್ಭದಲ್ಲಿ, ಅಧಿಕಾರಾನುರೂಪವಾಗ - ಸಮರ್ಥರಾಗಿಯೂ ತ್ರಿವರ್ಣದವರಿಗಾಗಿಯೂ ಇರುವವರಿಗೆ ಉಪಾಸನವೂ, ತ್ರಿವರ್ಣವಲ್ಲದವರಿಗೂ ಅಶಕ್ತರಿಗೂ ಪ್ರಪತ್ತಿಯೂ, ಹೀಗೆ ಅವರವರುಗಳ ಅಧಿಕಾರಕ್ಕನುಗುಣವಾಗಿ, ಅರಿಯೆಲಾವುಳವುನ್ - ಎಲ್ಲಿವರೆಗೆ ತಿಳಿಯಲು ಸಾಧ್ಯವಾಗುತ್ತದೋ ಅಲ್ಲಿಯವರೆಗೂ (೧) ನಿರನ್ತರಂ-ಯಾವಾ

---

(೧) ತಿರುಚ್ಚಂದವಿರುತ್ತಂ ೧೦೧.

ಗಲೂ, ನಿನ್ನೈಪ್ಪದಾಗ - ಹೇಗೆ ಸ್ಮರಣೆಯುಂಟಾಗತಕ್ಕದ್ದೋ ಹಾಗೆ ನೀ – ಕರು ಣಾಳುವಾದ ನೀನು, ನಿನ್ನೈಕ್ಕವೇಣ್ಡುಮೇ - ಸಙ್ಕಲ್ಪಿಸತಕ್ಕದ್ದು" ಇತ್ಯಾದಿ ಗಳಿರ್ಪ್ಪಡಿಯೇ - ಇವೇ ಮೊದಲಾದವುಗಳಲ್ಲಿ ಹೇಳಿರುವ ಹಾಗೆ, ಅನುಸಂಧಿಕ್ಕ ವುಮ್ ಕುರ್ಯೆಯಿಲ್ಲೈ-ಅನುಸಂಧಾನ ಮಾಡುವದರಲ್ಲೇನೂ ನ್ಯೂನತೆ ಯಿಲ್ಲವು. ಭರನ್ಯಾಸವನ್ನು ಮಾಡಿ ಕೃತಕೃತ್ಯನಾದ ಪ್ರಪನ್ನನಿಗೂ ಕೂಡ ಉಪಾಸನಾರೂಪ ದಲ್ಲಿ ತೈಲಧಾರಾವದವಿಚ್ಛಿನ್ನವಾದ ಭಗವಂತನ ಸ್ಮರಣೆಯು ಬೇಕಾಗಿಲ್ಲದಿದ್ದರೂ ಸಾಮಾನ್ಯ ಭಗವತ್ಸ್ಮರಣೆಯು ನಿರಂತರವಾಗಿ ಅಪೇಕ್ಷಿತವೇ ಎಂಬ ಭಾವವು. ಈ ತಿರುಚ್ಚಂದ ವಿರುತ್ತದ ಪೂರ್ವಾ ಪಾರ್ಶ್ವವು ಯಾವುದೆಂದರೆ :—

"ಇರನ್ದು ವೈಪ್ಪದುನ್ದು ವಾಳಿ ಯೇವಮು ನೀರ್ ನಿರತ್ತವುಂ ।
ವರನ್ತರು ನ್ತಿರುಕ್ಕುರಿಪ್ಪಿಲ್ ವೈತ್ತದಾಗಿಲ್ ವುನ್ನು ಶೀರ್ ।
ಪ್ಪರನ್ನ ಚಿನ್ತೈ ಯೊನ್ರಿ ನಿನ್ರು ನಿನ್ನ ಪಾದ ಪಙ್ಕಜಂ ।
ನಿರನ್ತರಂ ನಿನ್ನೈಪ್ಪದಾಗ ನೀನಿನ್ನೈಕ್ಕ ವೇಣ್ಡುಮೇ ॥ ೧೦೧ ॥

ಇದರರ್ಥವು :— ಏವಮು - ಮಹತ್ತಾಗಿರುವ, ನೀರ್ - ಸಮುದ್ರದ ಹಾಗೆ, ನಿರತ್ತು - "ಅಪ್ರಮೇಯೋ ವಮಹೋದಧಿಃ" ಎಂದು ಹೇಳಿರುವೆಹಾಗೆ ಅಪರಿ ಚ್ಛಿನ್ನ ಪರಿಪೂರ್ಣತೆಯುಳ್ಳ, ಅವುಂ-"ಪಿತಾತ್ವಂ ಮಾತಾತ್ವಂ" ಎಂಬ ಶ್ಲೋಕ ದಲ್ಲಿ ಉಪಪಾದಿಸಿರುವಹಾಗೆ ನಮಗೆ ಸರ್ವವಿಧ ಬಂಧುವಾದವನೇ, ಇರನ್ದು - ಯಾಚಿಸಿ, ಉರ್ಕ್ಕೈಪ್ಪದು ಉಣ್ಡು - ವಿಜ್ಞಾಪಿಸಿಕೊಳ್ಳುವದು ಒಂದುಂಟು, ವಾಳಿ- ನಿನಗೆ ಮಂಗಳಾಶಾಸನವು, ವರನ್ತರುಮ್ - ಈವ್ಯಾತ್ಮನಿಗೆ ಕೈಂಕರ್ಯಮಾ ಡುವ ಪರಮ ಶ್ರೇಯಸ್ಸನ್ನುಂಟುಮಾಡುವದೇ ಸ್ವಭಾವವಾಗಿರುವಳ್ಳ, ವುನ್ನು ಶೀರ್ - ಸ್ಥಿರವಾದ ಕೈಂಕರ್ಯ ಸಾಮ್ರಾಜ್ಯ ರೂಪಶ್ರೇಯಸ್ಸನ್ನು, ತಿರುಕ್ಕು ರಿಪ್ಪಿಲ್ ವೈತ್ತಾಗಿಲ್ :- ಮನಸ್ಸಿನಲ್ಲಿಟ್ಟುದುದಾದರೆ, ಪರನ್ತಚಿನ್ತೈ - ಶಬ್ದಾದಿ ವಿಷಯಗಳಲ್ಲಿ ಪ್ರವರ್ತಿಸುವ ನನ್ನ ಮನಸ್ಸು, ಒನ್ರಿನಿನ್ರು-ಮತ್ತೆ ಯಾವುದರಲ್ಲೂ ಹಾಗೆ ಹೋಗದೆ ನಿನ್ನಲ್ಲೇ ಸ್ಥಿರವಾಗಿ ನಿಂತು, ನಿನ್ಪಾದ ಪಙ್ಕಯಂ - ನಿನ್ನ ಪಾದ ಕಮಲವನ್ನು, ನಿರನ್ತರಂ - ವಿಚ್ಛೇದವಿಲ್ಲದಹಾಗೆ, ನಿನ್ನೈಪ್ಪದಾಗ ಧ್ಯಾನಿಸುವಹಾಗೆ, ನೀ ನಿನ್ನೈಕ್ಕವೇಣ್ಡುಮ್ - ನೀನು ಸಂಕಲ್ಪಿಸತಕ್ಕದ್ದು."

"ಈ ವೇಲೆ ಉದಾಹರಿಸಿರುವ ಶ್ರೀ ಭಾಷ್ಯಕಾರರೆವರ ವೈಕುಂಠಗದ್ಯದಲ್ಲಿನ ವಾಕ್ಯದಲ್ಲಿ ಆತ್ಮೋಜ್ಜೀವನಕ್ಕಾಗಿ ಪ್ರತಿದಿನವೂ ಭಗವಂತನನ್ನು ಧ್ಯಾನಿಸ ತಕ್ಕದ್ದೆಂದು ಹೇಳಿರುವದರಿಂದ, ಸ್ವಯಂ ಫಲರೂಪವಾದ ಭಕ್ತಿಯು ಹೇಳ ಲ್ಪಟ್ಟಿತೆಂಬುದು ವಿರುದ್ಧಾಭಿಪ್ರಾಯವಾಗುವದು; ಪ್ರತಿದಿನವೂ ಮಾಡತಕ್ಕ ದ್ದೆಂದು ವಿಧಿಸಿರುವದರಿಂದ ಸಾಙ್ಗಧ್ಯಾನ ವಿಶೇಷವೇ ಹೇಳಲ್ಪಟ್ಟಿಕಾಗುತ್ತದೆ.

ಶ್ರೀ ಭಾಷ್ಯಕಾರೈರ್ಭರನ್ಯಾಸೋಪಾಯಸ್ಯ ಉಪಾದೇಯತ್ವ ಕಥನವು.

ಶ್ರೀ ಭಾಷ್ಯಕಾರರು ವಿವ್ವಪಾಯ ನಿಷ್ಕೃಯ್ಯೆ ಶಿರಿಯಗದ್ಯತ್ತಿಲುಮ್, ಪೆರಿಯ ಗದ್ಯತ್ತಿಲುಮ್, ಅರುಳಿಚ್ಚೆಯ್‌ದು ಶ್ರೀವೈಕುಂಠಗದ್ಯ

ಇದೂ ಅಲ್ಲದೆ ಅವರು ಬರೆದಿರುವ ನಿತ್ಯವೆಂಬ ಗ್ರಂಥದಲ್ಲೂ ಪೂಜೋಪಕ್ರಮವಾಗಿ ತ್ಪೂರ್ವಂ ಪ್ರತ್ಯಕ್ಷ ರೂಪಾನುಧ್ಯಾನೇನ ಧ್ಯಾಯನ್ನಾಸೀತ ಎಂದು ಹೇಳಿರುವದರಿಂದ ಉಪಾಸನವಮಾತ್ರವೇ ಉಪಾಯವೆಂದು ಹೇಳಲ್ಪಟ್ಟಹಾಗೆ ತೋರುತ್ತದೆ; ಮತ್ತು ಶ್ರೀ ಭಾಷ್ಯದಲ್ಲಿ ಪ್ರಪದನ ವಿಷಯವೇ ಹೇಳಲ್ಪಡದೆ ವೇದನ ಮೊದಲಾದ ಶಬ್ದಗಳಿಂದ ಉಪಾಸನನೇ ಹೇಳಲ್ಪಟ್ಟಿರುವದರಿಂದಲೂ, ಈ ಉಪಾಸನನಿಗೆ ಅನನ್ಯೋಪಾಯತ್ವ ಪ್ರಯೋಗವಿರುವದರಿಂದಲೂ ಉಪಾಸನವೇ ಉಪಾಯವೇ ವಿನಾ ಭರನ್ಯಾಸವಲ್ಲವು" ಎಂಬುದು ಕೆಲವರ ಪೂರ್ವಪಕ್ಷವು; ಮತ್ತು ಶ್ರೀ ಭಗವದ್ಗೀತೆಯ ಚರಮಶ್ಲೋಕದ ಭಾಷ್ಯದಲ್ಲೂ ಉಪಾಸನಾಪರವಾಗಿ ವ್ಯಾಖ್ಯಾನ ಮಾಡಿದರೇ ವಿನಾ ಭರನ್ಯಾಸ ವಿಷಯವಾಗಿ ಅರ್ಥಮಾಡಲಿಲ್ಲವು. ಇವೆಲ್ಲಾ ಕಾರಣಗಳಿಂದಲೂ ಉಪಾಸನವೇ ಸಾಧ್ಯೋಪಾಯವೇ ವಿನಾ ಭರನ್ಯಾಸವಲ್ಲವೆ ಎಂಬುದು ಕೆಲವರ ಅಭಿಪ್ರಾಯವು ಇದು ಸರಿಯಾದಭಿಪ್ರಾಯವಲ್ಲವೆಂದು ಮುಂದೆ ತಿಳಿಸುತ್ತಾರೆ. "ಯದ್ಯೇನ ಕಾನುಕಾಮೇನ" ಎಂದಾರಂಭಿಸಿ "ಸಾಧ್ಯತೇ ಪುರುಷೋತ್ತಮಃ" ಎಂದು ಮುಗಿಸಿರುವ ಅಹಿರ್ಬುಧ್ನ್ಯ ವಾಕ್ಯವು ನಿಸ್ಸಂಶಯವಾಗಿ ಈ ಪೂರ್ವಪಕ್ಷವನ್ನು ಖಂಡಿಸುತ್ತದೆ ಎಂದು ತಿಳಿಯತಕ್ಕದ್ದು. ಅದರೂ ಸ್ವತಂತ್ರಪ್ರಪತ್ತಿಯೂ ಸಹ ಉಪಾಯವೇ ಎಂಬದು, ಶ್ರೀ ಭಾಷ್ಯಕಾರರಭಿಪ್ರಾಯವು. ಇವನ್ನು ಮುಂದಿನ ವಾಕ್ಯಗಳಿಂದ ವ್ಯಕ್ತಪಡಿಸುತ್ತಾರೆ.

ಶ್ರೀ ಭಾಷ್ಯಕಾರರೇ ಸ್ವತಂತ್ರಪ್ರಪತ್ತಿಯೂ ಉಪಾಯವೆಂದೂ ಅಜ್ಞೀಕರಿಸಿರುತ್ತಾರೆ.

ಶ್ರೀ ಭಾಷ್ಯಕಾರರೂ ಸಹ, ಇಲ್ಲಿ ಶ್ರೀ ಭಾಷ್ಯಕಾರರು ಸ್ವತಂತ್ರಪ್ರಪತ್ತಿಯನ್ನು ಉಪಾಯವಾಗಿ ಅಜ್ಞೀಕರಿಸಲೇ ಇಲ್ಲವೆಂದು ಹೇಳುವ ಪೂರ್ವಪಕ್ಷಕ್ಕೆ ಸಮಾಧಾನೋಕ್ತಿಯಾದುದರಿಂದ, ಅವರೂ ಕೂಡ ಮೂರು ಗದ್ಯಗಳಲ್ಲೂ ಉಪಾಯವಾಗಿ ಅಜ್ಞೀಕರಿಸಿರುತ್ತಾರೆಂದು ಹೇಳುವದಕ್ಕಾಗಿ ಹಾಗೆ ಪ್ರಯೋಗವು. ಇವ್ವುಪಾಯ ನಿಷ್ಕೃಯ್ಯೆ – ಈ ಭರನ್ಯಾಸರೂಪ ಉಪಾಯನಿಷ್ಕೃಯನ್ನು, ಶಿರಿಯ ಗದ್ಯತ್ತಿಲುಮ್ – ವಿಷ ಗದ್ಯವಲ್ಲೂ ಎಂದರೆ ಶ್ರೀರಂಗ ಗದ್ಯದಲ್ಲೂ, ಪೆರಿಯ

ತ್ತಿಲು ವಿನ್ನಿಸ್ಯೈಯ್ಯಿಚ್ಚು ರಜ್ಜಿಕ್ಕಾಟ್ಟಿ, ಯಿರುನ್ನನಾಳ್ ಪ್ರಾಕ್ಯರುಚಿ ಕುಲ್ಯೆಯಾದೆ ವಳರ್‌ನ್ದು ಪೋರುವ್ವುದಿ ಕ್ಕೇಡಾನ ಅನುಸಂಧಾನ ವಿಶೇಷತ್ತೈ "ತತಶ್ಚ ಪ್ರತ್ಯಹ ಮಾತ್ಮೋಜ್ಜೀವನಾಯೈವ ಮನುಸ್ಮರೇತ್" ಎನ್ನು ತುತಜ್ಞ್ ಅರುಳಿಚ್ಚೆಯ್‌ದಾರ್.

ಗದ್ಯತ್ತಿಲುಮ್ - ಪೃಥು ಗದ್ಯವಲ್ಲೂ ಎಂದರೆ ಶರಣಾಗತಿ ಗದ್ಯದಲ್ಲೂ, ಅರುಳಿಚ್ಚೆಯ್‌ದು - ಅನುಷ್ಠಿಸತಕ್ಕದ್ದೆಂದು ಹೇಳಿ, ಶ್ರೀ ವೈಕುಂಠ ಗದ್ಯದಲ್ಲೂ, ಇನ್ನಿಸ್ಯೈಯ್ಯಿ - ಈ ಸ್ವತಂತ್ರ ಪ್ರಪತ್ತಿ ನಿಷ್ಠೆಯನ್ನು, ಕುರಜ್ಞಿಕ್ಕಾಟ್ಟಿ - ಸಜ್ಞ್ರಹವಾಗಿ ತೋರಿಸಿ, ಇರುನ್ದನಾಳ್ - ಪ್ರಸನ್ನನು ಈ ಪೃಥ್ವಿಯಲ್ಲಿರುವ ತನಕ, ಪ್ರಾಪ್ಯರುಚಿಕ್ಕುಲ್ಯೆಯಾದೆ - ಪ್ರಾಪ್ಯನಾದ ಶ್ರೀಯುಃಪತಿಯನ್ನು ಹೋಗಿ ಸೇರಬೇಕೆಂಬುದರಲ್ಲಿ ಆಶೆಯು ವಸ್ತವಾಗದಹಾಗೆ, ವಳರ್‌ನ್ದು ಪೋರುವ್ವುದಿಕ್ಕೇಡಾನ-ವೃದ್ಧಿಯಾಗುತ್ತಾ ಹೋಗ ವದಕ್ಕನುಗುಣವಾದ, ಅನುಸಂಧಾನ ವಿಶೇಷವನ್ನು. "ತತಶ್ಚ - ಅನಂತರವಲ್ಲಿ, ಪ್ರತ್ಯಹಂ-ಪ್ರತಿದಿನವೂ, ಆತ್ಮೋಜ್ಜೀವನಾಯ-ತಕ್ಕಾಗಿ, ಏವಂ - ಹೀಗೆಯೇ, ಅನುಸ್ಮರೇತ್-ಸ್ಮರಿಸತಕ್ಕದ್ದು." ಎನ್ನುತ್ತ ಡಜ್ಞ್ ಎಂದಾರಂಭಿಸಿ, ಅರುಳಿಚ್ಚೆಯ್‌ದಾರ್ - ಕೃಪಯಾ ಉಪ್ಪಣೆ ಕೊಡಿಸಿರುತ್ತಾರೆ ಶಿರಿಯ ಗದ್ಯವಾದ ಶ್ರೀರಂಗ ಗದ್ಯದಲ್ಲಿ ಪ್ರಥಮತಃ ಭಕ್ತಿಯೋಗಕ್ಕೆ ಅಸಮರ್ಥತೆಯನ್ನು, ಭಕ್ತಿತದುಪಾಯತ್ವಕ್ಕೆ ಬೇಕಾದ ಸಮುಸ್ಸಾತ್ಮಗುಣ ವಿಹೀನವೆಂದು ಹೇಳಿ, ಭಗವನ್ಮಾಯಾತಿರೋಹಿತ ಸ್ವಪ್ರಕಾಶತೆಯಿಂದುಂಟಾದ ಕಾರ್ಪಣ್ಯವನ್ನು ಪ್ರದರ್ಶಿಸಿ, ಅವ್ಯವಸ್ಥಿತಾಧಿಕಾರೋಪಾಯಃ ಎಂಬುದರಿಂದ ಅನನ್ಯ ಗತಿತ್ವವನ್ನು ತೋರ್ಪಡಿಸಿ, "ನಿಖಿಲಜಗತ್ಸು ಜಾತ ಶರಣ್ಯ" ಎಂದು ಸಂಬೋಧಿಸಿ, ಸಾಧಾರಣ ಜಂತುಗಳಿಗೂ ಕೂಡ ಶರಣ್ಯನಾಗಿರುವವನು ಪ್ರಸನ್ನರಾದ ತನಗೆ ಪರಾಙ್ಮುಖನಾಗುವನೇ ಎಂಬಭಿಪ್ರಾಯವನ್ನು ವ್ಯಕ್ತಪಡಿಸಿ, "ಶ್ರೀಮನ್ನಾರಾಯಣ ತವ ಚರಣಾರವಿಂದಯುಗಳಂ ಶರಣಮಹಂ ಪ್ರಪದ್ಯೇ" ಎಂದು ಶರಣಾಗತಿಮನ್ನನುಷ್ಠಿಸಿ, ಹೀಗೆ ಭರನ್ಯಾಸ ಮಾಡುವಾಗ ವಜ್ರಾ ವಿಶ್ವಾಸವು ತಪ್ಪಗಂಟೆಂದು "ವಿಶ್ವಾಸಪೂರ್ವಕಂ ಭಗವಂತಂ ನಿತ್ಯ ಕಿಂಕರತಾಂ ಪ್ರಾರ್ಥಯೇ" ಎಂದು ಹೇಳಿರುತ್ತಾರೆ. ಪೃಥು ಗದ್ಯವಾದ ಶರಣಾಗತಿ ಗದ್ಯದಲ್ಲಿ, ಪ್ರಥಮತಃ ಶ್ರೀ ಶರಣಾಗತಿಯನ್ನು ಪುರುಷಕಾರತ್ವೇನ ಅನುಷ್ಠಿಸಿ ಅನಂತರ ಶ್ರಿಯುಃಪತಿಯ ರಕ್ಷಣೋಪಯುಕ್ತ ಕಲ್ಯಾಣ ಗುಣಗಳನ್ನೆಲ್ಲಾ ಅನುಸಂಧಾನಮಾಡಿ "ಅಶರಣ್ಯ ಶರಣ್ಯ ಅನನ್ಯ ಶರಣಸ್ತ್ವತ್ಪಾದಾರವಿಂದಯುಗಳಂ ಶರಣಮಹಂ ಪ್ರಪದ್ಯೇ" ಎಂದು ಶರಣಾಗತಿಯನ್ನನುಷ್ಠಿಸಿರು

ಇಪ್ರಪನ್ನನುಕ್ಕು (೧) "ಪೂಶಿತ್ತುಮ್ ಪೋಕ್ಕಿನೇನ್ ಪೋದುಮ್" ಎಜ್ಗಿರ ಅನನ್ಯ ಪ್ರಯೋಜನವಾನ ಪೂಜಾವಿಶೇಷತ್ತೈ, (೨) "ಅಥ ಪರಮೈಕಾಂತಿನೋ ಭಗವದಾರಾಧನ ಪ್ರಯೋಗಂ ವಕ್ಷ್ಯೇ, ಭಗವ

ತ್ತಾರೆ ಸರ್ವೇಶ್ವರನು ಪ್ರತಿವಚನ ರೂಪದಲ್ಲಿ ಅಭಯವನ್ನು "ನಿತ್ಯಕಿಂ ಕರೋ ಭವಿಷ್ಯಸಿ, ನಾತೀವಭೂದಕ್ರ ಸಂಶಯಃ" ಎಂದು ದಯಪಾಲಿಸಿ ತ್ತಾನೆ. ಇದನ್ನು ಅನುಸಂಧಾನ ವಿಶೇಷವೆಂದು ಹೇಳಿರುತ್ತಾರೆ; ಏಕೆಂದರೆ ಭವ ನ್ಯಾಸವು ಗುರುಮುಖೇನ ಸಕೃದನುಷ್ಠೇಯವು ಈ ಗದ್ಯಗಳಲ್ಲಿ ಶರಣಮಹಂ ಪ್ರಪದ್ಯೇ ಇತ್ಯಾದಿಗಳನ್ನು ನಿತ್ಯವೂ ಪಠನ ಮಾಡುವದರಿಂದ ನಿತ್ಯವೂ ಶರಣಾ ಗತಿಯನ್ನನುಷ್ಠಿಸಿದ ಹಾಗಾಗುವದು. ಪ್ರತಿದಿನದಲ್ಲೂ ದ್ವಯಮಂತ್ರೋಚ್ಚಾರಣ ರೂಪ ಜಪವು ಹೇಗೆ ಭರನ್ಯಾಸವಾಗುವದೋ ಅದರ ಮಾಹಾತ್ಮ್ಯವು ಅನುಸಂಧಾ ನವೋ, ಹಾಗೆಯೇ ಈ ಗದ್ಯ ಪಠನವೂ ಎಂದು ಭಾವಿಸತಕ್ಕದ್ದು. ಹಾಗಾದರೆ ಈ ಅನುಸಂಧಾನದಿಂದುಂಟಾಗುವ ಪ್ರಯೋಜನವೇನೆಂದು ಪ್ರಶ್ನಿಸಬಹುದು ಫಲರೂಪ ಭಕ್ತಿಯು ಸದಾ ನಿಲೆಗೊಂಡಿರುವದೇ ಪ್ರಯೋಜನವು. ಇವನ್ನೇ ಪ್ರಾಪ್ಯರುಚಿ ಕೆಲ್ಯೆಯಾದೇ ನಳರ್ನ್ದು ಪೋರುಮ್ ಪಡಿಕ್ಕೀಡಾನ ಅನು ಸಂಧಾನ ಎಂದು ಹೇಳಿರುತ್ತಾರೆ

ಆದರೆ ಶ್ರೀ ಭಾಷ್ಯಕಾರರು ತಾವು ಬರೆದಿರುವ "ನಿತ್ಯ"ವೆಂಬ ಭಗವದಾ ರಾಧನ ಕ್ರಮಾದಿಗಳನ್ನು ತಿಳಿಸುವ ಗ್ರಂಥದಲ್ಲಿ "ಪ್ರತ್ಯಕ್ಷರೂಪಾನುಧ್ಯಾನೇನ ಧ್ಯಾಯನ್ನಾಸೀತ" ಎಂದು ಉಪಾಸನ ರೂಪಸಾಕ್ಷಾತ್ಕಾರವನ್ನೇ ಉಪದೇಶಿ ಸುವಹಾಗೆ ತೋರುತ್ತದೆಯಲ್ಲಾ ಎಂದರೆ ಹಾಗಲ್ಲವೆಂದೂ, ಅದು ಪ್ರಪನ್ನನಿಗೆ ಬೇಕಾದ ಫಲರೂಪ ಧ್ಯಾನವಾದ ಭಗವತ್ಕೈಂಕರ್ಯೈಕರತಿಯನ್ನೂ ಪರಮೈ ಕಾಂತಿತ್ವವನ್ನೂ, ಬೋಧಿಸುತ್ತದೆ ಎಂದು ಹೇಳುತ್ತಾರೆ.

ಇಪ್ರಪನ್ನನುಕ್ಕು-ಈ ಪ್ರಪನ್ನನಿಗೆ (೧) "ಪೂಶಿತ್ತುಮ್ ಪೋಕ್ಕಿನೇನ್ ಪೋದುಮ್" ಸರ್ವೇಶ್ವರನನ್ನು ಆರಾಧಿಸುತ್ತಾ ಕಾಲವನ್ನು ಕಳೆದೆನು" ಎಜ್ಗಿರ – ಎಂಬ ಹಾಗೆ ಹೇಳಿರುವ, ಅನನ್ಯಪ್ರಯೋಜನವಾನ - ಸ್ವಯಂ ಪ್ರಯೋಜನ ವಾಗಿ ಇನ್ನು ಯಾವ ಪ್ರಯೋಜನಕ್ಕೂ ಅಲ್ಲದ, ಪೂಜಾವಿಶೇಷತ್ತೈ - ಭಗವ ದಾರಾಧನೆಯನ್ನು, (೨) "ಅಥ - ಅನಂತರದಲ್ಲಿ, ಪರಮೈಕಾಂತಿನಃ - ಪರಮೈ ಕಾಂತಿಗಳ, ಭಗವದಾರಾಧನ ಪ್ರಯೋಗವನ್ನು, ವಕ್ಷ್ಯೇ - ಹೇಳುವೆನು; ಭಗ

---

(೧) ನಾನ್ಮುಗನ್ ತಿರುವಂದಾದಿ ೬೩. (೨) ಶ್ರೀ ಭಾಷ್ಯಕಾರರ ನಿತ್ಯಂ.

ತ್ಕೈಙ್ಕರ್ಯೈಕರತಿಃ ಪರಮೈಕಾಂತೀ ಭೂತ್ವಾ" ಎನ್ನುತ್ತುಡಙ್ಗಿ, ನಿತ್ಯತ್ತಿಲೇ "ಅತ್ಯರ್ಥಪ್ರಿಯಾ ವಿರತ ವಿಶದತಮ ಪ್ರತ್ಯಕ್ಷರೂಪಾನು ಧ್ಯಾನೇನ ಧ್ಯಾಯನ್ನಾಸೀತ" ಎನ್ನುಮರುಳಿಚ್ಚೆಯ್ದಾರ್.

ತತ್ಕೈಙ್ಕರ್ಯೈಕರತಿಃ - ಭಗವತ್ಕೈಙ್ಕರ್ಯ ಒಂದರಲ್ಲೇ ಆಶೆಯುಳ್ಳವನಾಗಿ, ಇದರಿಂದ ಇಂದ್ರಿಯೋಪಭೋಗಾದಿಗಳಲ್ಲಿ ಮನಸ್ಸಿಲ್ಲದವನಾಗಿ ಇರಬೇಕೆಂಬ ತಾತ್ಪರ್ಯವು, ಐಹಿಕಾಸಕ್ತಿಯಿಲ್ಲದೇ ಭಗವಂತಾರಾಧನೆಯಲ್ಲಿ ಮನಸ್ಸಿಟ್ಟೆ' ಪರಮೈಕಾಂತೀಭೂತ್ವಾ - ಪರಮೈಕಾಂತಿಯಾಗಿ, ಅತನೊಬ್ಬನಲ್ಲೇ ಮನಸ್ಸನ್ನಿಟ್ಟವನಾಗಿ" ಎನ್ನುತ್ತುಡಙ್ಗಿ - ಎದಾರಂಭಿಸಿ, ನಿತ್ಯತ್ತಿಲೇ - ಶ್ರೀ ಭಾಷ್ಯಕಾರರು ಅನುಗ್ರಹಿಸಿರುವ ನಿತ್ಯವೇದ ಗ್ರಂಥದಲ್ಲಿ, "ಅತ್ಯರ್ಥಪ್ರಿಯ - ನಿರತಿಶಯ ಪ್ರಿಯವಾಗಿ, ಅವಿರತ - ಎಡೆಬಿಡದ, ವಿಶದತಮ - ಅತ್ಯಂತ ವಿಶದವಾದ, ಪ್ರತ್ಯಕ್ಷರೂಪ-ಸಾಕ್ಷಾತ್ಕರಿಸಿರುವ, ಅನುಧ್ಯಾನೇನ-ಅನುಸಂಧಾನದಿಂದ ಕೂಡಿ, ಧ್ಯಾಯನ್ - ಪರಮಾತ್ಮನನ್ನು ಧ್ಯಾನಿಸುತ್ತಾ, ಆಸೀತ - ಕೂಕುಙರತಕ್ಕದ್ದು" ಎನ್ನುವುದು - ಎಂದು, ಅರುಳಿಚ್ಚೆಯ್ದಾರ್ - ಅಪ್ಪಣೆ ಕೊಡಿಸಿರುತ್ತಾರೆ ಇಲ್ಲಿ ನಿತ್ಯ ವೆಂಬ ಗ್ರಂಥವು ಪ್ರತಿದಿನದಲ್ಲೂ ಪ್ರಪನ್ನನೂ ಭಗವತ್ಕೈಙ್ಕರ್ಯರೂಪದಲ್ಲಿ ಗಾಢತಕ್ಕ ನಿತ್ಯ ನೈಮಿತ್ತಿಕ ಅನುಷ್ಠಾನಗಳನ್ನು ತಿಳಿಸುವ ಗ್ರಂಥವಾಗಿರುವದರಿಂದಲೂ ಶರಣಾಗತಿ ಗದ್ಯದಲ್ಲಿ ಹೇಳಿರುವ ಸ್ವತಂತ್ರ ಪ್ರಪತ್ತಿನಿಷ್ಠೆಯನ್ನು ಅನುಷ್ಠಿಸಿದ ನಂತರ ಉತ್ತರಕೃತ್ಯರೂಪದಲ್ಲಿ ಮಾಡುವ ಕೈಂಕರ್ಯ ವಿಷಯವಾದುದರಿಂದಲೂ, ಇಲ್ಲಿನ ಧ್ಯಾನವು, ಉಪಾಸನವನ್ನು ಎಂದಿಗೂ ಬೋಧಿಸಲಾರದು; ಆದುದರಿಂದ ಫಲರೂಪ ಭಕ್ತಿಗೆ ಸಹಕಾರಿಯಾಗಿ ಪ್ರತಿದಿನವೂ ಮಾಡತಕ್ಕ ನಿತ್ಯ ಕರ್ಮಾನುಷ್ಠಾನಕ್ಕೆ ಸೇರಿದ ಭಗವದಾರಾಧನ ರೂಪ ಧ್ಯಾನ ವಿಶೇಷವೆಂದು ಭಾವಿಸತಕ್ಕದ್ದು. ಇದೂ ಭಗವದಾರಾಧನಾಂಗವಾದ ಫಲರೂಪ ಧ್ಯಾನವೇ ವಿನಾ ಉಪಾಸನವಲ್ಲವೆಂಬ ಭಾವವು. ಪೂಶಿತ್ತುಂ ಪೋಕ್ಕಿನೇಕ ಎಂಬ ಪೂರಾ ಪಾಶುರವು ಯಾವುದೆಂದರೆ:—

ತಿರಿತ್ತಿರುನ್ದೇನಾಗವೇ ತಾರಾಗಣಪ್ಪೋರ್
ವಿರಿತ್ತು ರೈತ್ತವೆನ್ನಾಗತ್ತುನ್ನೈ-ತ್ತೆರಿತ್ತೆಳುದಿ
ವಾಶಿತ್ತು ಜಿಕ್ಕಿಟ್ಟುಮ್ ವಳಙ್ಗ ವಳಿಪಟ್ಟುವನ್
ಪೂಶಿತ್ತುಮ್ಪೋಕ್ಕಿನೇಕ ಪೋದು ॥ ೬೩ ॥ ಇವರರ್ಥವೇನೆಂದರೆ:

ತಾರಾಗಣಂ ಪೋರ್ ವಿರಿತ್ತು ರೈತ್ತ - ನಕ್ಷತ್ರಗಳ ಸಂಚಾರವನ್ನು ಜ್ಯೋತಿಶ್ಶಾಸ್ತ್ರಮುಖೇನ ವಿಶದವಾಗಿ ಹೇಳಿದ, ವೆನ್ನಾಗತ್ತುನ್ನೈ - ಶತ್ರುಗಳಿಗೆ

ಭಯಂಕಾರನಾಗಿರುವ ಆದಿಶೇಷನಿಗೆ ಆತ್ಮನಾಗಿರುವ ನಿನ್ನನ್ನು, **ಎಳುದಿ ವಾಶಿತ್ತು ಕ್ಕೇಟ್ಟುಸು** - ಬರೆದು, ಓದಿ, ಕೇಳಿ, ಎಂದರೆ ನಿನ್ನ ಮಾಹಾತ್ಮ್ಯವೇನು, ದಿವ್ಯಜೇಷ್ಟಿತಗಳೇನು ನೀನು ಹೇಳಿದ ಶಾಸ್ತ್ರಗಳೇನು, ಇವುಗಳನ್ನು ಬರೆದು, ಓದಿ ಮತ್ತು ಗುರುಗಳಮೂಲಕ ಉಪಾಯ ಯಾವುದೆಂದು ಕೇಳಿ, ತಿಳಿದು, **ವಣಞ್ಜಿ** - ನಿನ್ನನ್ನು ಶರಣಾಗತಿಯ ಮೂಲಕ ಅಂತಹ ಗುರುವಿನ ಮೂಲಕವೇ, **ವಳಿಪಟ್ಟ್ರುವೆಂ** - ಅದರ ಅನುಸಂಧಾನಾದಿಗಳೇ ಯಾತ್ರೆಯಾಗಿ, **ಪೂಶಿತ್ತ್ರುಂ** - ಉತ್ತರ ಕೃತ್ಯರೂಪದಲ್ಲಿ ಅತನ ಆರಾಧನೆಯನ್ನು ಮಾಡಿಕೊಂಡು, **ಪೋಕ್ಕಿನೇಱ ಪೋದು** - ಕಾಲವನ್ನು ಕಳೆದೆನು, **ಆಕವೇ ತರುತ್ತಿರನ್ದೇಱ** - ಅದುದರಿಂದಲೇ ನಾನು ಒಳ್ಳೆ ಸತ್ತೆಯನ್ನು ಹೊಂದಿರುತ್ತೇನೆ; ಲೋಕದಲ್ಲಿ ಎಲ್ಲರೂ ಹೀಗೆ ಮಾಡುವದಿಲ್ಲವೇ ಎಂದು ಆಳ್ವಾರವರಿಗೆ ಅವರ ವಿಷಯದಲ್ಲಿ ಪರಿತಾಪವೂ, ತಮ್ಮ ವಿಷಯದಲ್ಲಿ ಸಮಾಧಾನವೂ ಇಲ್ಲಿ ದ್ಯೋತಿತವು. ಶ್ರೀ ಭಾಷ್ಯಕಾರರು ತಾವು ಅನುಗ್ರಹಿಸಿರುವ ನಿತ್ಯವೆಂಬ ಗ್ರಂಥದಲ್ಲಿ ಹೇಳಿರುವ ಧ್ಯಾನಯುಕ್ತವಾದ ಪೂಜಾನಿಶೇಷವು ಉಪಾಸನೆಯ ವಿಷಯವಲ್ಲವೆಂದೂ, ಪ್ರಪತ್ತಿ ನಿಷ್ಠನಿಗೆ ಸ್ವಯಂ ಪ್ರಯೋಜನವಾದ ಭಕ್ತಿ ಪರವಾಹ ಕೈಙ್ಕರ್ಯವೆಂದೂ, ಸಂಧ್ಯಾವಂದನಾದಿ ನಿತ್ಯ ನೈಮಿತ್ತಿಕಗಳೂ ಕೂಡ ಹೇಗೆ ಕೈಙ್ಕರ್ಯಗಳೋ, ಹಾಗೆಯೇ ಧ್ಯಾನಯುಕ್ತ ಭಗವದಾರಾಧನೆಯೂ ಕೂಡ ಭಗವತ್ಪ್ರೀತಿಜನಕ ಕೈಙ್ಕರ್ಯವೇ ಎಂಬ ಭಾವವು. ಹಾಗೆ ಶ್ರೀ ಭಾಷ್ಯಕಾರರು ಹೇಳಿರುವದು ಪ್ರಮಾಣಪುರಸ್ಸರವಾಗಿಯೇ ಹೇಳಿರುತ್ತಾರೆ ಭಗವಚ್ಛಾಸ್ತ್ರವೂ ಆಳ್ವಾರ್ ಆಚಾರ್ಯರುಗಳೂ ವ್ಯಾಸ ದಕ್ಷಾದಿ ಮಹರ್ಷಿಗಳೂ ಹಾಗೆಯೇ ವಿಧಿಸಿರುತ್ತಾರೆಂದು ಹೇಳುತ್ತಾರೆ. ಹೀಗೆ ಶ್ರೀ ಭಾಷ್ಯಕಾರರು ಉಪದೇಶಿಸಿರುವ ಪಾಂಚಕಾಲಿಕ ಭಗವದಾರಾಧನರೂಪ ಅನುಷ್ಠಾನಗಳು ಅವರೇ ಸ್ವತಂತ್ರಿಸಿ ವಿಧಿಸಿವ ಕ್ರಮವಲ್ಲವೆಂದೂ ಶಾಸ್ತ್ರ ಪ್ರಮಾಣ ಸಮ್ಮತಿಯೂ, ಮಹರ್ಷಿಗಳು ಮತ್ತು ಆಳ್ವಾರಾಚಾರ್ಯರುಗಳು ಅನುಷ್ಠಿಸಿರುವದರಿಂದ ಶಿಷ್ಟಾಚಾರ ಸಮ್ಮತಿಯೂ, ಉಂಟೆಂದು ಹೇಳುತ್ತಾರೆ.

ಅಭಿಗಮನಾದಿ ಪಾಂಚಕಾಲಿಕಾನುಷ್ಠಾನಗಳ ಕರ್ತವ್ಯತೆಯು.

ಸ್ವತಂತ್ರ ಪ್ರಪತ್ತಿಯನ್ನು ಅನುಷ್ಠಿಸಿದವನಿಗೂ ಕೂಡ ಭಗವದ್ಧ್ಯಾನದಲ್ಲಿ ಸ್ವಯಂ ಪ್ರಯೋಜನವಾಗಿ ಫಲರೂಪತಾಗಿ ಅನ್ವಯ ಉಂಟೆಂದು ಉಪದೇಶಿಸಿದರು. ಪಾಂಚಕಾಲಿಕ ಅನುಷ್ಠಾನಗಳ ಕರ್ತವ್ಯತೆಯನ್ನುಪಪಾದಿಸಿ, ಅವು ಹೇಗೆ ಪ್ರಪನ್ನನಿಗೆ ಮುಖ್ಯವಾಗಿ ಕರ್ತವ್ಯಗಳೋ, ಹಾಗೆಯೇ ಇದೂ ಎಂದು ಹೇಳಿ ಇಂತಹ ಧ್ಯಾನವು ಸ್ವಯಂಪ್ರಯೋಜನವಾಗಿ ಸರ್ವಾಧಿಕಾರವುಳ್ಳದ್ದು ಎಂಬುದ

ಎನ್ನು ಭಾಷ್ಯಕಾರರ್ ಅರುಳಿಚ್ಚೆಯ್ದ ಕೇಟ್ಟು, ವಂಗಿ ಪುರತ್ತು ನಂಬ್ಬಿ ನಿತ್ಯತ್ತಿಲೆ ಸಙ್ಗ್ರಹಿತ್ತಾರ್.

ಅರುಳಿಚ್ಚೆಯ್ಕೇಟ್ಟು - ಉಪದೇಶಿಸಿದುದನ್ನು ಕೇಳಿ, ವಂಗಿಪುರುತ್ತುನಂಬ್ಬಿ - ವಂಗಿಪುರವ ನಂಬಿರುವರು, ನಿತ್ಯತ್ತಿಲೇ - ತಾವು ಬರೆದ ಐನೂರು ಶ್ಲೋಕಗಳುಳ್ಳ ಪಾಂಚಕಾಲಿಕ ಅನುಷ್ಠಾನ ಪ್ರಕ್ರಿಯೆಯನ್ನು ತೋರಿಸುವ ನಿತ್ಯ ವೆಂಬ ಗ್ರಂಥದಲ್ಲಿ, ಸಂಗ್ರಹಿತ್ತಾರ್ - ಸಂಗ್ರಹಿಸಿ ಹೀಗೆ ಹೇಳಿರುತ್ತಾರೆ.

ಈ ಪಾಂಚಕಾಲಿಕಾನುಷ್ಠಾನವು ಭಗವಚ್ಛಾಸ್ತ್ರದಲ್ಲಿ ಹೇಳಲ್ಪಟ್ಟಿರುತ್ತದೆ ಎಂದು ತಿಳಿಸಿರುತ್ತಾರೆ: —ಜಯಾಖ್ಯ ಸಂಹಿತೆಯಲ್ಲಿ "ವಿಕೋಹಿ ಶ್ರೂಯತೇ ದೇವ ಕಾಲೋಽ ಲೋಕೇ ನಚಾ ಪರಃ। ಪಂಚಕಾಲಾ ಸ್ತ್ವಯೋದ್ದಿಷ್ಟಾಃ ಕಿಮೋ ತನ್ಮೇತ್ರ ಸಂಶಯಃ" ಕಾಲವೆಲ್ಲ ಒಂದೇಯಾಗಿ ತೋರುತ್ತಿಯಲ್ಲಾ, ಪಂಚಕಾಲವೆಂಬ ಸಿದ್ಧಾಂತ ಉಪದೇಶಿಸಲ್ಪಟ್ಟಿತಲ್ಲಾ, ಆ ಸಂಶಯವನ್ನು ಹೋಗಲಾಡಿಸು ಎಂದು ನಾರದರಿಂದ ಪ್ರಶ್ನಿಸಲ್ಪಡಲಾಗಿ ಭಗವಂತನು ಹೇಳುತ್ತಾನೇನೆಂದರೆ: —

"ವಿಕೆಸ್ಯೇನ ಹಿ ಕಾಲಸ್ಯ ನಾಸರೀಯಸ್ಯ ನಾರದ।
ಆ ಪ್ರಭಾತಾನ್ನಿಶಾಂತಂನ್ಯೆ ಪಂಚಧಾ ಪರಿಕಲ್ಪನಾ॥
ಪೃಥಕ್ಕರ್ಮನಶಾತ್ಮ್ಯಾರ್ಥಾ ನಕಾಲಾ ಬಹವ ಸ್ಸ್ಮೃತಾಃ"

ಕಾಲನೆನೆಂ ಒಂದೇ. ಅನೇಕವಲ್ಲವು. ಒಂದುದಿನವಲ್ಲೇ ಪ್ರಭಾತಸಮಯ ಮೊದಲುಗೊಂಡು ರಾತ್ರಿಯಾಗ ವರೆಗೂ ಇರುವಕಾಲ ಐದಾಗಿ ಭಾಗಿಸಿ ಆಯಾ ಭಾಗಗಳಲ್ಲಿ ಮಾಡತಕ್ಕ ಕಾರ್ಯವು ಬೇರೆಬೇರೆಯೆಂದು ತಿಳಿಯತಕ್ಕದ್ದು ಎಂದು ಭಗವಂತರು ಹೇಳಲು, ಆ ಐದು ಕಾಲಗಳಲ್ಲೂ ಮಾಡತಕ್ಕದ್ದು ಯಾವುವು ಎಂದು ನಾರದರಿಂದ ಪ್ರಶ್ನಿಸಲ್ಪಟ್ಟ ಭಗವಂತನೇ ಪುನಃ ಹೇಳುತ್ತಾನೆ: —

ಬ್ರಾಹ್ಮಾನ್ಮಹೂರ್ತಾ ದಾರಭ್ಯ ಪ್ರಾಗಂಶಂ ವಿಪ್ರ ವಾಸರೇ। ಜಪ ಧ್ಯಾನಾರ್ಚನಸ್ತೋತ್ರೈಃ ಕರ್ಮಾವಾಕ್ಷಿತ್ತ ಸಂಯುತೈಃ। ಅಭಿಗಚ್ಛೇ ದ್ವಗದೆನ್ಯೇನಿಂ ತಚಾ ಭಿಗನುನಂ ಸ್ಮ್ಯಂ। ತತಃ ಪುಷ್ಪಫಲಾದೀನಾ ಮರ್ಥಾಯಾರ್ಜನ ಮಾಚರೇತ್। ಭಗನದ್ಯಾಗ ನಿಷ್ಪತ್ತಿ ಕಾರಣಂ ಪ್ರಹರಾತ್ಪರಂ। ತದುಪಾದಾನ ಸಂಜ್ಞಂನ್ಯೆ ಕರ್ಮಕಾಲ ವದಾಶ್ರಿತಂ। ತತೋ ಷ್ಟಾಂಗೇನಯೋಗೇನ ಪೂಜಯೇತ್ಪರಮೇಶ್ವರಂ ಸಾಧಿಕಂ ಪ್ರಹರಂ ವಿಪ್ರ

ಇಜ್ಯಾಕಾಲಸ್ತು ಸಸ್ಯಕೃತಃ । ಶ್ರವಣಂ ಚಿಂತನಂ ವ್ಯಾಖ್ಯಾ ತತಃ ಪಾಠ ಸನುನ್ವಿತಾ । ಸ್ವಾಧ್ಯಾಯ ಸಂಜ್ಞಂ ತದ್ವಿದ್ಧಿ ಕಾಲಾಂಶಂ ಮುನಿಸತ್ತಮ । ದಿವಾವಸಾನೇ ಸಂಪ್ರಾಪ್ತೇ ಪೂಜಾಂ ಕೃತ್ವಾ ಸಮುಭ್ಯಸೇತ್ । ಯೋಗಂ ನಿಶಾವಸಾನೇಚ ವಿಶ್ರಮೇ ನಾಂತರೀಕೃತಂ । ಪಂಚಮೋ ಯೋಗ ಸಂಜ್ಞೋಸೌ ಕಾಲಾಂಶೋ ಬ್ರಹ್ಮಸಿದ್ಧಿದ ॥

ಇದರಂತೆ ಹಗಲಿನ ಕಾಲವು ರಾತ್ರಿಯವರೆಗೂ (೧) ಅಭಿಗಮನ (೨) ಉಪಾದಾನ (೩) ಇಜ್ಯಾ (೪) ಸ್ವಾಧ್ಯಾಯ (೫) ಯೋಗವೆಂಬದಾಗಿ ಐದಾಗಿ ವಿಭಜನವಾಗಿ, ಆ ಕಾಲಗಳಲ್ಲಿ ಏನು ಮಾಡತಕ್ಕದ್ದೆಂಬುದು ವಂಗಿ ನಿತ್ಯದಲ್ಲಿ ಹೇಳಿರುವಹಾಗೆ ಎಂದು ಭಾವಿಸಬಹುದು.

(೨) ಪಾದ್ಮ ಪುರಾಣದಲ್ಲಿ —"ಪಂಚಕಾಲ ವಿಭಿಜ್ಞಾನಾಂ ಪ್ರಾಶಸ್ತ್ಯಂ ಭಗವನ್ನಿಹ । ಕಥಿತಂ ಪಂಚಕೇ ಕಾಲಾ ವಿಧಯಶ್ಚಾಪಿ ಪಂಚಕೇ" ಎಂಬದಾಗಿ ಚತುರ್ಮುಖನಿಂದ ಕೇಳಲ್ಪಟ್ಟವನಾಗಿ ಭಗವಂತನು ಹೇಳುತ್ತಾನೆ :— "ಆದ್ಯಂ ಕರ್ಮಾಭಿಗಮನಮುಪಾದಾನಂ ತತಃ ಪರಂ । ಇಜ್ಯಾಚ ಪಶ್ಚಾತ್ತತ್ಸ್ವಾಧ್ಯಾಯ ಸ್ತತೋಯೋಗಸ್ತತಃ ಪರಂ । ಪಂಚೈವ ವಿಧಯಸ್ತೇಷಾಂ ಕಾಲಾಃ ಪಂಚೈವತೇ ಕ್ರಮಾತ್" ಎಂಬದಾಗಿ

(೩) ಸಾತ್ವತ ಪೌಷ್ಕರಗಳಲ್ಲೂ ಹೀಗೆಯೇ ಹೇಳಲ್ಪಟ್ಟಿರುತ್ತದೆ.

(೪) ಶ್ರೀ ವ್ಯಾಸಮಹರ್ಷಿಯು ಹೇಳಿರುವಜೀಯೆಂದರೆ :—"ಬ್ರಾಹ್ಮೇ ಮುಹೂರ್ತೇ ಉತ್ಥಾಯ" ಎಂದು ಪ್ರಾರಂಭಿಸಿ, "ಅಭಿಗತ್ಯ ಗೃಹಂ ವಿಸ್ರಸ್ತನಾಚಮ್ಯ ಯಥಾವಿಧಿ । ಪ್ರಜಪ್ಯಾಲ್ಯ ಪಹ್ನಿಂ ವಿಧಿವತ್" ಎಂದು ಮುಗಿಸಿ ಬೆಳಿಗ್ಗೆ ಹೋಮ ಪರ್ಯಂತ ಪ್ರಾಪ್ತಾಹ್ನಿಕ ಕ್ರಿಯಾಕಲಾಪವನ್ನೆಲ್ಲಾ ಹೇಳಿ, "ದೇವಾದೀನಾನ ರ್ಚಯಿತ್ವಾರ್ಘಾದುಪಹಾರಂ ನಿವೇದಯೇತ್" ಎಂದು ಅಭಿಗಮನವನ್ನು ಹೇಳಿ, "ಉಪೇಯಾದೀಶ್ವರಂಚಾಪಿ ಯೋಗಕ್ಷೇಮಾರ್ಥ ಸಿದ್ಧಯೇ । ಸಾಧಯೇ ದ್ವಿವಿಧಾನರ್ಥಾ" ಎಂದು ಉಪಾದಾನವನ್ನು ಹೇಳಿ "ತತೋ ಮಧ್ಯಾಹ್ನ ಸಮಯೇ" ಎಂದಾರಂಭಿಸಿ, "ನ ವಿಷ್ಣಾರಾಧನಾತ್ಪುಣ್ಯಂ ವಿದ್ಯತೇ ಕರ್ಮನೈದಿಕೆಂ । ತಸ್ಮಾದನಾದಿನುದ್ಯಾಂತಂ ನಿತ್ಯ ಮಾರಾಧಯೀದ್ಧರಿಂ । ತದ್ವಿಷ್ಣೋರಿತಿ ಮಂತ್ರೇಣ ಸೂಕ್ತೇನ ಪುರುಷೇಣಚ । ನೈವಾಭ್ಯಾಂ ಸದೃಶೋ ಮಂತ್ರೋ ವೇದೇಷೂಕ್ತಶ್ಚ ತುರ್ವ್ಯಪಿ । ನಿವೇದಯಿತ್ವಾತ ಸ್ವಾತ್ಮಾನಂ ವಿಷ್ಣಾವಮಲ ತೇಜಸಿ" ಹೀಗೆ ಭಗವದಾರಾಧನವನ್ನು ಇಜ್ಯಾ ಕಾಲದಲ್ಲಿ ಮಾಡತಕ್ಕದ್ದೆಂದು ವಿಧಿಸಿ, (ಇಲ್ಲಿ ಭಗವದಾರಾಧನವು ಪ್ರಪದನಾನುಸಂಧಾನವೇ ಎಂದೂ ಅವುಗಳಲ್ಲಿ "ತದ್ವಿಷ್ಣೋಃ ಪರಮಂ

ಪದಂ" ಎಂಬ ಮಂತ್ರವೂ, ಪುರುಷ ಸೂಕ್ತವೂ ಸಹ ವೇದಗಳಲ್ಲೆಲ್ಲಾ ಸರ್ವ ಶ್ರೇಷ್ಠವೆಂದು ಮಹರ್ಷಿಯಿಂದ ಹೇಳಲ್ಪಟ್ಟಿತು.) ಅಲ್ಲಿಂದ ಭೋಜನ, ಸ್ವಲ್ಪ ವಿಶ್ರಮ, ಅನಂತರ ಸ್ವಾಧ್ಯಾಯ ಕ್ರಮವೆಂದು ಹೇಳಲು, "**ಭುಕ್ತ್ವೈವಂ ಸುಖಮಾಸ್ಥಾಯ ತದನ್ನಂ ಪರಿಣಾಮಯೇತ್ । ಇತಿಹಾಸ ಪುರಾಣಾಭ್ಯಾಮ್ ವೇದಂ ಸನ್ಮುಪಬೃಹ್ಮಯೇತ್**" ಎಂದು ಸ್ವಾಧ್ಯಾಯವನ್ನು ಹೇಳಿ, "**ತಥಾಕ್ಷರೇಣಸ್ವಾತ್ಮಾನಂ ಯೋಜಯೇತ್ಪರಮಾತ್ಮನೇತಿಹಿ। ಸರ್ವೇಷಾಮೇವ ಯೋಗಾನಾಮಾತ್ಮಯೋಗಃ ಪರಸ್ಸ್ಮೃತಃ।ಯೋಗೇನ ವಿಧಿನಾ ಕುರ್ಯಾತ್ಸಯಾತಿ ಪದ ಮಕ್ಷಯಂ**" ಎಂದು ಯೋಗವನ್ನು ಹೇಳಿ, ಕೊನೆಗೆ "**ತದೇತದಖಿಲೇನೋಕ್ತ ಮಹನ್ಯಹನಿ ಯನ್ಮಯಾ । ಬ್ರಾಹ್ಮಣಾನಾಂ ಕೃತ್ಯ ಜಾತ ಮುಪವರ್ಗ ಫಲಪ್ರದಂ**" ಹೀಗೆ ಪ್ರತಿ ದಿನವೂ ಪಾಂಚಕಾಲಿಕ ಅನುಷ್ಠಾನಗಳನ್ನು ನಡಿಸೋಣವು ಮುಕ್ತಿಪ್ರದವೆಂದು ಹೇಳಿ ಮುಗಿಸಿರುತ್ತಾರೆ

೪ ದಕ್ಷರಿಂದ ಹೇಳಲ್ಪಟ್ಟಿರುವದೇನೆಂದರೆ :—**ಪ್ರಾತರುತ್ಥಾಯ ಕರ್ತವ್ಯಮ್ ಯದ್ದ್ವಿಜೇನ ದಿನೇದಿನೇ । ತತ್ಸರ್ವಂ ಸಂಪ್ರವಕ್ಷ್ಯಾಮಿ ದ್ವಿಜಾನಾಮುಪಕಾರಕಂ**" ಬೆಳಿಗ್ಗೆ ಎದ್ದು ಪ್ರತಿದಿನದಲ್ಲೂ ಬ್ರಾಹ್ಮಣನು ಆಪದ್ಧರ್ಮವಾಗಿ ತ್ರಿವರ್ಣದವರು ಮಾಡತಕ್ಕದ್ದು ಏನೆಂಬುದನ್ನು ತಿಳಿಸುತ್ತೇನೆಂದು ಸಭ್ಯಲ್ಲಿಸಿ, "**ಅಜ್ಞಾನಾದಥವಾಲೋಭಾತ್ತ್ಯಾಗೇನ ಪತಿತೋ ಭವೇತ್**" ಎಂದು ಹೀಗೆ ಈ ನಿತ್ಯ ನೈಮಿತ್ತಿಕಗಳನ್ನು ಬಿಟ್ಟರೆ ಪ್ರತ್ಯವಾಯವೆಂದು ತಿಳಿಸಿ, "**ದಿವಸಸ್ಯಾದ್ಯ ಭಾಗೇನ ಕೃತ್ಯಂ ತಸ್ಯೋಪದಿಶ್ಯತೇ**" ಎಂದಾರಂಭಿಸಿ, ದಿವಸವನ್ನು ಎಂಟು ಭಾಗವಾಗಿ ಭಾಗಿಸಿ, ಸಂಧ್ಯಾಹೀನೋಽಶುಚಿರ್ನಿತ್ಯ ಮನರ್ಹಸ್ಸರ್ವಕರ್ಮಸು । **ಯದನ್ಯತ್ಕುರುತೇ ಕರ್ಮ ನ ತಸ್ಯ ಫಲಭಾಗ್ಭವೇತ್**"ಸಂಧ್ಯಾವಂದನೆ ಮಾಡದವನು ಯಾವಾಗಲೂ ಅಶುಚಿಯೇ, ಸಮಸ್ತ ಕರ್ಮಗಳಿಗೂ ಅನರ್ಹನು, ಆತನು ಯಾವ ಇತರ ಕರ್ಮವನ್ನೆಸಗಿದರೂ, ಫಲಭಾಕ್ಕಾಗುವದಿಲ್ಲವು ಎಂದು ಹೇಳಿ ಮುಗಿಸುವದರಲ್ಲಿ, ಸ್ನಾನಾಚಮನ ಸಂಧ್ಯಾವಂದನೆಗಳ ಕ್ರಮಗಳನ್ನು ಚನ್ನಾಗಿ ಹೇಳಿ "**ದೇವಕಾರ್ಯಂ ತತಃಕೃತ್ವಾಗುರುಮುಜ್ಜಳವೀಕ್ಷಣಂ । ದೇವಕಾರ್ಯಸ್ಯ ಸರ್ವಸ್ಯ ಪೂರ್ವಾಹ್ಣಸ್ತು ವಿಧಿಸ್ಮೃತೇ**" ಎಂದು ಅಭಿಗಮನವನ್ನು ಹೇಳಿ, ಅನಂತರ, "**ಸಮಿತ್ಪುಷ್ಪ ಕುಶಾದೀನಾಂಸಕಾಲಸ್ಸಮುದಾಹೃತಃ**" ಎಂದು ಉಪಾದಾನವನ್ನು ಹೇಳಿ."**ಪಂಚವೇತು ತಥಾ ಭಾಗೇ ಸಂವಿಭಾಗೋ ಯಥಾರ್ಹತಃ । ಪಿತೃದೇವ ಮನುಷ್ಯಾಣಾಂ ಕೀಟಾನಾಂ ಚಾಪಿ ದೃಶ್ಯತೇ**" ಹಿಂದೆ ದೇವತಾರ್ಚನವೆಂದು ಹೇಳಿದ ಸ್ಥಳದಲ್ಲೇ ಇಲ್ಲಿ ಸಂವಿಭಾಗ ಶಬ್ದಪ್ರಯೋಗಮಾಡಿರುವದರಿಂದ ಇಜ್ಯೆಯನ್ನೂ ಹೇಳಿ, "**ಇತಿಹಾಸ ಪುರಾಣಾಭ್ಯಾಂ ಪಷ್ಠಂ**

ಸಹ್ತಮಭ್ಯಸೇತ್" ಎಂದು ಸ್ವಾಧ್ಯಾಯವನ್ನು ಹೇಳಿ, **"ಅಷ್ಟಮೇ ಲೋಕ ಯಾತ್ರಾಂತು"** ಎಂದಾರಂಭಿಸಿ, **"ಸರ್ವಭಾಷ ವಿನಿರ್ಮುಕ್ತಂ ಕ್ಷೇತ್ರಜ್ಞಂ ಬ್ರಹ್ಮಣೆನ್ಯಸೇತ್** । **ವಿತದ್ಧ್ಯಾನಂಚ ಯೋಗಶ್ಚ ಶೇಷೋನ್ಯೋಗ್ರಂಥ ವಿಸ್ತರಃ"** ಎಂದು ಮಗಿಸಿ ಯೋಗವನ್ನು ಹೇಳಿರುತ್ತದೆ.

ಹೀಗೆ ಈ ಪ್ರಮಾಣಗಳ ಮೂಲಕ ಪಂಚಕಾಲವಲ್ಲೂ ಪ್ರಪನ್ನನು ಮಾಡಬೇಕಾದ ನಿತ್ಯಕರ್ಮಗಳೆಲ್ಲಾ ಸಾಕ್ಷಾದ್ಭಗವದಾರಾಧನರೂಪಗಳೆಂಬುದು ವ್ಯಕ್ತವು. ಇನ್ನು ಆಳ್ವಾರುಗಳೂ ಈ ಕ್ರಮವನ್ನೇ ಅಭ್ಯೀಕರಿಸುತ್ತಾರೆಂಬುದಕ್ಕೆ **"ಮರುನ್ದಿ ಕಳುಂ"** ಎಂಬ ಪಾಶುರವನ್ನು ಉದಾಹರಿಸಿರುತ್ತಾರೆ. ಅದು ಯಾವುದೆಂದರೆ– **"ಮರನ್ದಿಕಳು ಮನನೊಳಿತ್ತು ವಞ್ಜ ಮೂತ್ತಿಯೈ ಮ್ಬುಲನ್ಗಳಡಕ್ಕಿಯಿ ಡರ್ ಪ್ಪಾರತ್ತು ನ್ಬಂ । ತುರುನ್ದಿರುನ್ದುಪ್ಪೊಳದೇತ್ತಿ ಯೆಲ್ಲೈಯಿಲ್ಲಾ ತೊನ್ನೆರಿಕ್ಕಣ್ ನಿಲೈ ನಿನ್ರತೊಣ್ಡರಾನ । ಅರನ್ದಿಗಳು ಮನತ್ತವರ್ ತಞ್ಜ ತಿಯೈಪ್ಪೊನ್ನಿ ಯಣಿಯರಞ್ಗತ್ತರವಣೈಯಿರ್ಪ್ಪಳ್ಳಿಕೊಳ್ಳುಮ್** । **ನಿರನ್ದಿ ಗಳು ಮಾಯೋನ್ಯೆಕಂಡೆನ್ ಕಣ್ಗಳ್ ನೀರ್ಮುಲ್ಗನೆನ್ರು ಕೋಲೋ ನಿರ್ಕ್ಕುನಾಳೇ"** ಇವರರ್ಥವು. **ಮರಸು** - ಕೊಲೆ ಮೊದಲಾದವುಗಳಿಂದ, **ತಿಗ ಳುಮ್** - ನಲಿಯುವ, ಉಜ್ಜಲಿಸುವ, **ಮನಂ** - ಮನಸ್ಸನ್ನು, **ಒಳಿತ್ತು** - ವಾಸನೆಯೊಂದಿಗೆ ಹೋಗಲಾಡಿಸಿ **ವಂಜನು** - ಸುಳ್ಳನ್ನು, **ಮಾಖುಮಿ**-ಹೋಗ ಲಾಡಿಸಿ, **ಐನ್ಬುಲಜ್ಗಳ್** - ಪಂಚೇಂದ್ರಿಯಗಳನ್ನು, **ಅಡಕ್ಕಿ** - ಶಬ್ದಾದಿ ವಿಷ ಯಗಳಲ್ಲಿ ಪ್ರವರ್ತಿಸದಹಾಗೆ ಅಡಗಿಸಿ, **ಇಡರ್** - ದುಃಖೋದರ್ಕವಾದ, **ಪಾರಂ ತುನ್ಬಂ** - ಭಾರವಾದ ಅಗಾಧವಾದ ಪಾಪವನ್ನು, **ತುರನ್ದು** - **ಹತ್ತಾಗಿ** ಕೊ ಯಿದು, **ಇರುಮುಪ್ಪೊಳಿದು** - ಎರಡು ಮೂರು ಕಾಲವೆಂದೂ ಪಂಚಕಾಲ ದಲ್ಲೂ, ಅಭಿಗಮನ, ಉಪಾದಾನ, ಇಜ್ಯಾ, ಸ್ವಾಧ್ಯಾಯ, ಯೋಗ, ಎಂಬ ಐದು ಕಾಲವಲ್ಲೂ, **ಏತ್ತಿ** - ಸ್ವಾಮಿಯನ್ನು ಆರಾಧನೆ ಮೂಲಕ **ಸ್ತೋತ್ರಮಾಡಿ, ಎಲ್ಲೈಯಿಲ್ಲಾ ತೊಲ್ನೆರಿ ನಿಲ್ಯೆನಿನ್ರ**-ಅಳವಿಲ್ಲದ ಹಿಂದಿನ ಸಂಪ್ರದಾಯರೂಪ ಆಚಾರದಲ್ಲಿ ಯಾರಿಂದಲೂ ಕದಲಿಸಲಾಗದಹಾಗೆ ಸ್ಥಿರವಾಗಿರುವ, **ತೊಂಡರಾನ**-ದಾಸಭೂತರಾದ, ಶೇಷತ್ವವನ್ನು ಚನ್ನಾಗಿ ಅರಿತಿರುವ, **ಅರಿನ್ದಿಗಳುಮ್ ಮನ ತ್ತವರ್ತಮ್** - ಆನೃಶಂಸ್ಯ ರೂಪ ಧರ್ಮದಿಂದ ಪ್ರಕಾಶಿಸುತ್ತಲಿರುವ ಮನ ಸ್ಸನ್ನು ಹೊಂದಿರುವ, ಶ್ರೀ ವೈಷ್ಣವಸಂಗಕ್ಕೆ, **ಕತಿಯೈ** - ಪರಮ ಪ್ರಾಪಕ ಪ್ರಾಪ್ಯನಾಗಿರುವ, **ಪೊನ್ನಿ** - ಕಾವೇರಿಯಿಂದ ಸುತ್ತಲ್ಪಟ್ಟು, **ಅಣಿ ಅರಞ್ಗತ್ತು**-ಲೀಲಾ ವಿಭೂತಿಗೆ ಆಭರಣ ರೂಪವಾದ ದೇವಾಲಯದಲ್ಲಿ, **ಅರವು ಅಣೈ ಯಿಲ್** - ಶೇಷ ಪರ್ಯಂಕದಲ್ಲಿ, **ಪಳ್ಳಿಕೊಳ್ಳುಮ್** - ಶಯನಿಸಿರುವ, ಬಿಜ

ಇಪ್ಪಡಿ ಪೆರಿಯ ಜೀಯರುಳ್ಳಿಟ್ಟಾರ್ ನಿತ್ಯಜ್ಞಳಿಲುಮ್ ಕಣ್ಡುಕೊಳ್ಳಪ್ಪಟ್ಟದು. ಇವತ್ತಿಲುಳ್ಳ ವೈಷಮ್ಯಜ್ಞಳ್ ಅವ್ವೋವೇಸಂಹಿತಾ ವಿಶೇಷಜ್ಞಳಿಲೇ

ಮಾಡಿಸಿರುವ, **ನಿರಂತಿಗಳುಮ್** - ಲಾವಣ್ಯದಿಂದ ಪ್ರಕಾಶಿಸುತ್ತಿರುವ, **ನಮ್ ಆಯೋನ್ಗೆ** - ಆಶ್ಚರ್ಯಭೂತನಾದ ಶ್ರೀರಂಗನಾಥನನ್ನು, **ಎನ್ ಕಣ್ಗಳ್** - ನನ್ನ ಕಣ್ಣುಗಳು, **ಕಣ್ಡು** - ಮನದಣಿಯುವನೋಡಿ, **ನೀರ್ ಮುಲಗ** - ಆನಂದಾಶ್ರುಗಳು ಪ್ರವಹಿಸುವ ಹಾಗೆ, **ನಿಱ್ಕುಮ್ ನಾಳ್** - ಇರುವ ಕಾಲವು, **ಎನ್ನುಕ್ಕೊಲೋ**-ಯಾವಾಗ ಲಭಿಸುತ್ತದೋ ತಿಳಿಯದು ಎಂಬ ಭಾವವು. ಈ ಪಾಶುರದಲ್ಲಿ ಪಂಚಕಾಲದಲ್ಲೂ ಭಗವದಾರಾಧನರೂಪವೃತ್ತಿಯು ವಿಧಿಸಲ್ಪಟ್ಟಿರುವದರಿಂದ ಉವಾಹರಿಸಲ್ಪಟ್ಟಿತು. ಇವುಗಳನ್ನನುಸರಿಸಿಯೇ ಪಿಳ್ಳೈಪುರವ ನಂಬಿಯವರಿಗೆ ಶ್ರೀ ಭಾಷ್ಯಕಾರರು ಉಪದೇಶಿಸಿದರು. ಇದು ಸಾರ್ವತ್ರಿಕವಾಗಿ ತಿಳಿಯಲಿ ಎಂಬ ಉದಾರ ಭಾವದಿಂದ ಶ್ರೀ ಪಿಳ್ಳೈಪುರವ ನಂಬಿಯವರೂ ತಾವು ಬರೆವ ನಿತ್ಯವೆಂಬ ಗ್ರಂಥದಲ್ಲಿ "ಅಭಿಗಚ್ಛೇ ದ್ಧರಿಂ ಪ್ರಾತೇಕಃ" ಎಂದಾರಂಭಿಸಿ ಪಾಂಚಕಾಲಿಕಾನುಷ್ಠಾನಗಳನ್ನು ಉಪದೇಶಿಸಿರುತ್ತಾರೆ ಈ ವಿಷಯವನ್ನು ಉಭಯಕಲೆಯವರೂ ಒಪ್ಪತಕ್ಕದ್ದೇ ಎಂದು ಶ್ರೀ ನಂಜೀಯರೂ ಅನಂತರ ಬರೆವ ನಿತ್ಯದಲ್ಲೂ ಹಾಗೆಯೇ ಉಪದೇಶಿಸಿರುತ್ತಾರೆಂದು ಹೇಳುತ್ತಾರೆ.—

ಇಪ್ಪಡಿ - ಈ ಪಾಂಚಕಾಲಿಕವಾದ ಅನುಷ್ಠಾನ ಕ್ರಮವನ್ನು **ಪೆರಿಯ ಜೀಯರುಳ್ಳಿಟ್ಟಾರ್** - ಶ್ರೀ ನಂಜೀಯರೇ ಮೊದಲಾದವರು, ಮೊದಲಾದವರು ಎಂಬುದರಿಂದ ಶ್ರೀನಾರಾಯಣ ಮುನಿಗಳು ಮೊದಲಾದವರು ಎಂದಾಯಿತು; ಶ್ರೀ ಭಾಷ್ಯಕಾರರವರು ಉಪದೇಶಿಸಿರುವಹಾಗೆ ಪಾಂಚಕಾಲಿಕ ಭಗವದಾರಾಧನ ರೂಪಾನುಷ್ಠಾನವೇನೋ ಒಪ್ಪತಕ್ಕದ್ದೇ; ಆದರೆ ಇವರುಗಳು ಬರೆದಿರುವ, ನಿತ್ಯಗಳಲ್ಲಿ, **ಕಂಡುಕೊಳ್ಳಪ್ಪದು** - ತಿಳಿದುಕೊಳ್ಳತಕ್ಕದ್ದು. ಇವರು ಬರೆದಿರುವ ನಿತ್ಯಗಳಲ್ಲಿ ವ್ಯತ್ಯಾಸಗಳಿವೆಯಲ್ಲಾ, ಹಾಗಾದರೆ ಯಾವ ಗ್ರಂಥದಲ್ಲಿ ಹೇಳಿರುವ ಕ್ರಮವನ್ನು ಅನುಸರಿಸತಕ್ಕದ್ದು ಎಂಬ ಪ್ರಶ್ನೆಗೆ ಸಮಾಧಾನವನ್ನು ಹೇಳುತ್ತಾರೆ. ಈ ವ್ಯತ್ಯಾಸಗಳಿಗೆ ಕಾರಣವು ಅವರವರುಗಳು ಪ್ರಸೂತಾನವಾಗಿ ಟೈಕೊಂಡು ಬರೆವ ಸಂಪ್ರತಿಪತ್ತಿಗಳಲ್ಲಿರುವ ವಾಕ್ಯಗಳು. ಇವುಗಳು ವಿಕಲ್ಪಗಳಾಗಿರುವದರಿಂದ ಯಾವ ಕ್ರಮವನ್ನಾದರೂ ಈ ಭಗವದಾರಾಧನರೂಪಾನುಷ್ಠಾನದಲ್ಲಿ ಅವಲಂಬಿಸಬಹುದು ಎಂದು ಮುಂದೆ ಹೇಳುತ್ತಾರೆ.

ಇವತ್ತಿಲುಳ್ಳ ವೈಷಮ್ಯಜ್ಞಳ್ - ಈ ನಿತ್ಯಗಳಲ್ಲಿ ಹೇಳಿರುವ ಕ್ರಮಗಳಲ್ಲಿರುವ ವ್ಯತ್ಯಾಸಗಳು, **ಅವ್ವೋವೇಸಂಹಿತಾ ವಿಶೇಷಜ್ಞಳಿಲೇ** - ಆವರುಗಳು ಅನು

ಶೊಲ್ಲುವ್ ವಿಕಲ್ಪಜ್ಞಾಲೇ ಸಜ್ಞತಜ್ಞಳ್: ಇಪ್ಪಡಿ ಯಾಗೈಯಾಲೇ
(೧) "**ನ ದೇವಲೋಕಾ ಕ್ರಮಣಂ**" (೨) "**ಭವಾಂಸ್ತು ಸಹ ವೈದೇಹ್ಯಾ**"

ಸರಿಸಿರುವ ಪಾಂಚರಾತ್ರ ಸಂಹಿತಾ ವಿಶೇಷಗಳಲ್ಲಿ, **ಶೊಲ್ಲುವ್ ವಿಕಲ್ಪಜ್ಞಾಲೇ**-ಹೇಳುವ ವಿಕಲ್ಪಗಳಿಂದ, **ಸಂಗತಜ್ಞಳ್** - ಉಪಾದೇಯಗಳೇ; ಎರಡು ಮೂರು ಕ್ರಮಗಳಿಗೆ ಫಲವು ಒಂದೇಯಾದರೆ ಅವುಗಳು ವಿಕಲ್ಪಗಳೆನಿಸುವುವು; ಅವುಗಳೆಲ್ಲಾ ಉಪಾದೇಯಗಳೇ ; ಆದುದರಿಂದ ಅವುಗಳಲ್ಲಿ ಯಾವುದಾದರೂ ಒಂದನ್ನು ಅವಲಂಬಿಸಬಹುದೆಂಬ ತಾತ್ಪರ್ಯವು. ಈಗ ಉಪಾಸನೆಗೂ ಪ್ರಪತ್ತಿಗೂ ಫಲ ಒಂದೇಯಾದುದರಿಂದ, ಎರಡುವಿಧ ಉಪಾಯಗಳೂ ಉಪಾದೇಯಗಳೇ ; ಆದುದರಿಂದ ಅಧಿಕಾರಾನುಗುಣವಾಗಿ ಯಾವುದಾದರೂ ಒಂದನ್ನು ಅವಲಂಬಿಸಬಹುದು; ಇವರ ಹಾಗೆಯೇ ಆ ನಿತ್ಯಗಳಲ್ಲಿ ಹೇಳಿರುವ ಕ್ರಮಗಳಲ್ಲಿ ಯಾವುದಾದರೂ ಒಂದನ್ನು ಅವಲಂಬಿಸಬಹುದು; ಅವರಲ್ಲಿ ಅಸಂಗತನಾದುದು ಯಾವುದೂ ಇಲ್ಲವೆಂಬ ಭಾವವು. ಹೀಗೆ ನಾನಾ ವಿಕಲ್ಪಗಳಿದ್ದರೂ ಸ್ವೇಚ್ಛಾನುಗುಣ ಪ್ರವರ್ತನೆಯನ್ನನುಸರಿಸಿ ತನ್ನ ಮನಬಂದಂತೆ ಅವಲಂಬಿಸಕೂಡದೆಂದೂ, ಆ ಪ್ರವರ್ತನೆಯು ಸ್ವಾಚಾರ್ಯೋಪದಿಷ್ಟಕ್ರಮವೇ ಆಗಿರಬೇಕೆಂದೂ, ಇದೀಗ ಪ್ರಪನ್ನನಿಗೆ ಅವಶ್ಯ ಕರ್ತವ್ಯವೆಂದೂ, ಕೆಲವು ಸ್ಮಾರ್ತಾನುಮೂಲಕ ಉಪದೇಶಿಸಿ ಪಾಂಚಕಾಲಿಕ ನಿತ್ಯನೈಮಿತ್ತಿಕಗಳು ಅವಶ್ಯಕವಾಗಿ ಕರ್ತವ್ಯಗಳೆಂದು ನಿಗಮನಮಾಡಿ ಹೇಳುತ್ತಾರೆ :—**ಇಪ್ಪಡಿಯಾಗೈಯಾಲೇ** - ಈ ಭಗವತ್ಕೈಙ್ಕರ್ಯಸ್ವರೂಪ್ಯಯಂ ಪ್ರಯೋಜನತಯಾ ವಿಹಿತವಾಗಿರುವದರಿಂದ, ಲಕ್ಷ್ಮಣನು **ಶ್ರೀ ಸೀತಾರಾಮರಲ್ಲಿ** ಪೂರ್ಣ ಶರಣಾಗತಿಯನ್ನು ಅನುಷ್ಠಿಸಿ, ಅನನ್ಯೋಪಾಯತ್ವವನ್ನೂ ಅನನ್ಯ ಪ್ರಯೋಜನತ್ವವನ್ನೂ ಪ್ರಕಟಿಸಿರುವ ಪ್ರಕರಣವನ್ನು ಉದಾಹರಿಸಿ, **ಶ್ರೀರಾಮನು** ಕೈಙ್ಕರ್ಯ ಪ್ರೇಣನವಿನಾ ತನಗೇ ಬೇರೇ ಪ್ರಯೋಜನವಿಲ್ಲವೆಂಬುದನ್ನು ತಿಳಿಸಿದುದನ್ನು ಉದಾಹರಿಸುತ್ತಾರೆ :—"**ನ ದೇವಲೋಕಾಕ್ರಮಣಂ ನಾಮರತ್ವಮಹಂ ವೃಣೇ । ಐಶ್ವರ್ಯಂ ವಾಪಿ ಲೋಕಾನಾಂ ಕಾಮಯೇ ನ ತ್ವಯಾವಿನಾ**" **ತ್ವಯಾವಿನಾ** - ಸರ್ವವಿಧ ಬಂಧುವಾಗಿರುವ ನೀನಲ್ಲದೆ ಎಂದರೆ ನಿನಗೆ ಸರ್ವವಿಧ ಕೈಙ್ಕರ್ಯಗಳನ್ನೆಸಗಿ ನಿನ್ನ ಪ್ರೀತಿಗೆ ಪಾತ್ರನಾಗಿರುವದು ವಿನಾ ಎಂಬ ಭಾವವು, **ಲೋಕಾನಾಂ ಐಶ್ವರ್ಯಂವಾ** - ತ್ರಿಲೋಕಗಳ ಐಶ್ವರ್ಯವನ್ನಾಗಲಿ, ಅಥವಾ, ರುದ್ರ ಬ್ರಹ್ಮ ಕುಬೇರಾದಿ ಲೋಕಗಳ ಐಶ್ವರ್ಯವನ್ನಾಗಲಿ, **ನಕಾಮಯೇ** - ನಾನು ಅಪೇಕ್ಷಿಸುವದಿಲ್ಲವು, **ನಾಮರತ್ವಮಹಂವಾ**

---

(೧) ರಾಮಾ. ಅಯೋಧ್ಯಾ. ೩೧. ೫. (೨) ರಾಮಾ ಆಯೋಧ್ಯಾ. ೩೧. ೩೭.

ಅಹಂವೃಣೇ-ಜರಾಮರಣ ಮೋಕ್ಷಾಯ ಎಂದು (ಗೀ. ೭ ೨೯) ಯಲ್ಲಿ ಹೇಳಿರುವ ಕೈವಲ್ಯಾರ್ಥಿಯು ಅಪುನರಾವೃತ್ತಿ ದೆಶವನ್ನಾಗಲಿ ನಾನು ಅಪೇಕ್ಷಿಸುವ ದಿಲ್ಲವು, **ಅಥವಾ ನ ದೇವಲೋಕಾಕ್ರಮಣಮಪಿ ವಾ ಅಹಂ ವೃಣೇ-"ದೇವಾನಾಂ ಪೂರಯೋಧ್ಯಾ"** ನಿತ್ಯಸೂರಿಗಳಿರುವ ಪಟ್ಟಣವು ಅಯೋಧ್ಯೆಯು ಎಂದು ಹೇಳಿರುವಹಾಗೆ ದೇವಲೋಕವೆಂದರೆ **ದಿವ್ಯ ವೈಕುಂಠವು** ಅವರ ಪ್ರಾಪ್ತಿಯನ್ನೂ ಕೂಡ ನಾನು ಅಪೇಕ್ಷಿಸುವದಿಲ್ಲವು ಎಂಬರ್ಥವು. ಇದರಿಂದ ಸ್ವಾಮಿ ಕೈಙ್ಕರ್ಯವೂ **ತತ್ಪ್ರೀಣನವೇ** ಪ್ರಯೋಜನಗಳೇ ವಿನಾ ತನಗೆ ಇನ್ನು ಯಾವ ಪ್ರಯೋಜನವೂ ಬೇಕಿಲ್ಲವೆಂಬ ಅನನ್ಯ ಪ್ರಯೋಜನತ್ವವು ಪ್ರದರ್ಶಿಸಲ್ಪಟ್ಟಿತು ಎಂಬೂ, ಇದರಿಂದ ಪ್ರಪನ್ನನೂ ಸಹ ಮಾಡತಕ್ಕ ಸರ್ವ ವಿಧವಾದ ನಿತ್ಯ ನೈಮಿತ್ತಿಕ ರೂಪಗಳೂ ಸ್ವಪ್ರಯೋಜನಕ್ಕಾಗಿ ಅಲ್ಲದೆ ಸ್ವಯಂಪ್ರಯೋಜನಗಳಾಗಿ ಭಗವತ್ಪ್ರೀಣನ ರೂಪವಾಗಿ ಮಾಡತಕ್ಕದ್ದೆಂಬುದು ವಿಧಿಸಲ್ಪಟ್ಟಿತು. **"ಭವಾಂಸ್ತು ಸಹ ವೈದೇಹ್ಯಾ ಗಿರಿಸಾನುಷು ರಂಸ್ಯತೇ। ಅಹಂ ಸರ್ವಂ ಕರಿಷ್ಯಾಮಿ ಜಾಗ್ರತಸ್ಸ್ವಪತಶ್ಚತೇ"** **ಭವಾಂಸ್ತು** - ಸರ್ವಶೇಷಿಯಾಗಿರುವದರಿಂದ ಸ್ವಾಮಿಯಾದ ನೀನಾದರೋ, **ವೈದೇಹ್ಯಾ ಸಹ** - ನಿನ್ನ ಪತ್ನಿಯಾದ ಸೀತೆಯೊಂದಿಗೆ, **ಗಿರಿಸಾನುಷು** - ಈ ಪರ್ವತ ತಪ್ಪಲುಗಳಲ್ಲಿ, **ರಂಸ್ಯತೇ** - ಇವೆಲ್ಲಾ ನಿನಗೆ, ಲೀಲಾರೂಪವಾದುದರಿಂದ ವಿಹರಿಸು; **ಅಹಂ** - ನಿನಗೆ ಸಹಜ ದಾಸಭೂತನಾಗಿ ನಿನಗೆ ಕೈಙ್ಕರ್ಯಮಾಡವೇ ಮುಖ್ಯವೃತ್ತಿಯಾಗಿರುವ ನಾನು, **ತೇ ಜಾಗ್ರತಸ್ಸ್ವಪತಶ್ಚ** - ನೀನು ಎದ್ದೇ ಇರಲಿ, ನಿದ್ರೆ ಮಾಡುತ್ತೇ ಇರಲಿ, ಇಂತಹ ನಿನಗೆ, **ಸರ್ವಂ ಕರಿಷ್ಯಾಮಿ**- ಸರ್ವದೇಶ ಸರ್ವಕಾಲ, ಸರ್ವಾವಸ್ಥೋಚಿತ ಸರ್ವವಿಧ ಕೈಂಕರ್ಯಗಳನ್ನೂ ನನ್ನ ಪ್ರಯೋಜನಕ್ಕಾಗಲ್ಲವೆ ನಿನ್ನ ಪ್ರೀಣನಾರ್ಥವಾಗಿ ಮಾಡುವೆನು. ಭಗವತ್ಪ್ರೀತಿ ಮಾತ್ರವೇ ತನಗೆ ಪ್ರಯೋಜನವೆಂದು ಲಕ್ಷ್ಮಣನು ಯಾವಾಗ ಹೇಳಿಕೊಂಡನೋ, ಆತನು ಸಂಪೂರ್ಣ ಕೈಂಕರ್ಯವನ್ನು ಮಾಡಿದರೆ ಎಷ್ಟು ಪ್ರೀತಿಯೋ ಅಷ್ಟು ಪ್ರೀತಿಯುಕ್ತನಾದನೆಂದು **ಸುಪ್ರೀತಃ** ಎಂಬ ಪ್ರಯೋಗದಿಂದ ಉತ್ತರ ಶ್ಲೋಕದಲ್ಲಿ **"ರಾಮಸ್ತ್ವನೇನ ವಾಕ್ಯೇನ ಸುಪ್ರೀತಃ"** ಎಂದು ಮಹರ್ಷಿಯು ಹೇಳಿರುತ್ತಾರೆ. ಇದರಿಂದ ಶೇಷಭೂತನಾದ ಚೇತನನು ಮಾಡುವ ಕೈಂಕರ್ಯವೂ ನಾರಾಯಣನಿಗೊಬ್ಬನಿಗೇ ಅಲ್ಲವೆಂದೂ, ಅದಕ್ಕೆ ಲಕ್ಷ್ಮೀಯುಕ್ತ ನಾರಾಯಣನೇ ಉದ್ದೇಶ್ಯನೆಂದೂ, **ಸಹ ವೈದೇಹ್ಯಾ** ಎಂಬ ಪ್ರಯೋಗದಿಂದ ದ್ವಯಮಂತ್ರದ ಉತ್ತರಖಂಡಾರ್ಥವೂ, ಪ್ರಾಪ್ಯಸ್ವರೂಪವೂ ಪ್ರದರ್ಶಿಸಲ್ಪಟ್ಟವು. ಶ್ರೀರಾಮನು ನಿದ್ರಿಸುವಾಗಲೂ ತಾನು ನಿದ್ರೆಯಿಲ್ಲದೆ ಯಾವ ಕಾಲದಲ್ಲಿ ಯಾವ ದೇಶದಲ್ಲಿ ಯಾವ ವಿಧ ಕೈಂಕರ್ಯಮಾಡಬೇಕಾಗು

೩) "ಯತ್ರ ಕುತ್ರ ಕುಲೇವಾಸೋ ಯೇಷು ಕೇಷು ಭವೋಸ್ತುಮೇ । ತವದಾಸ್ಯೈಕ ಭೋಗೇಸ್ಯಾತ್ಸದಾ ಸರ್ವತ್ರಮೇ ರತಿಃ ॥ ಕರ್ಮಣಾಮನಸಾ ವಾಚಾ ಶಿರಸಾವಾ ಕಥಂಚನ । ತ್ವಾಂ ವಿನಾ ನಾನ್ಯ ಮುದ್ದಿಶ್ಯ ಕರಿಷ್ಯೇ

ತ್ಮದೋ ಎಂದು ಅತಂತ್ರತನಾಗಿ ಕಾಯರೆತ್ತೇನೆ ಎಂಬುದರಿಂದ ಅನನ್ಯ ಪ್ರಯೋಜನತ್ವವು ಸೂಚಿತವು ; (೩) ಮೂರನೆಯದು ನನಗೆ ಎಂದರೆ ದಾಸಭೂತನಾಗಿ ಕೈಂಕರ್ಯ ಮಾಡುವುದೇ ನನಗೆ ಸ್ವರೂಪವೂ, ಅದೇ ನನಗೆ ಪರಮಪ್ರಾಪ್ಯವೆಂದು ಭಾವಿಸುವಂತೆ ನನಗೆ, **ಯತ್ರ ಕುತ್ರ ಕುಲೇ** ಪಾಸೇ-ಸಂಬಂಧಿಸುವುದಾಗಿ ಉತ್ಕೃಷ್ಟ ಕುಲದಲ್ಲೋ ಅಥವಾ ನಿಕೃಷ್ಟ ಕುಲದಲ್ಲೋ ನಾನವು. ಅಸ್ತು-ಇದರೂ, **ಯೇಷು ಕೇಷು** - ಯಾವುದಾದರೂ ಉತ್ಕೃಷ್ಟ ನಿಕೃಷ್ಟ ಜಾತಿಯಲ್ಲೇ ಆಗಲಿ **ಭವನಿ ಅಸ್ತು** - ಜನ್ಮವೇ ಆಗಬಹುದಾಗಲಿ, **ಮೇ** - ಅಂತಹ ನನಗೆ, **ರತಿಃ** - ಆಸಕ್ತಿಯು, **ಸರ್ವತ್ರ** - ನಾನಿರುವ ಎಲ್ಲಾ ಪ್ರದೇಶದಲ್ಲೂ, **ಸದಾ** - ನಾನಿರುವ ಎಲ್ಲಾ ಕಾಲದಲ್ಲೂ, **ತವದಾಸ್ಯೈಕ ಭೋಗೇ** - ನಿನಗೆ ಕೈಂಕರ್ಯ ಮಾಡುವ ಎಂಬುವ ಮುಖ್ಯವಾದ ಭೋಗದಲ್ಲಿ ಏಕಾಸ್ಯೇ, **ಸ್ಯಾತ್** - ಉಂಟಾಗಲಿ ; **ಕರ್ಮಣಾ** - ಆರಾಧನರೂಪ ಕರ್ಮಾಂದಲೇ(ಯಾಗಲಿ), **ಮನಸಾ** - ಮಾನಸಿಕ ಆರಾಧನರೂಪಧ್ಯಾನದಿಂದಲೇ(ಯಾಗಲಿ), **ವಾಚಾ** - ಆರಾಧನರೂಪ ಸ್ತುತಿಯಿಂದಲೇ(ಯಾಗಲಿ), **ಶಿರಸಾವಾ** - ನಮಸ್ಕಾರರೂಪಗಳನ್ನು ಮಾಡುವ ಶಿರಸ್ಸಿನಿಂದ, ಇಲ್ಲಿ **ಮನಸ್ಸು, ವಾಕ್ಕು, ಶಿರಸ್ಸು** ಎಂದು ಎಲ್ಲಾ ಪ್ರಮುಖವಯವಗಳಾದುದರಿಂದ **ಕರ್ಮಣಾ** ಎಂಬುದಕ್ಕೆ ಕರ್ಮಗಳನ್ನು ಮಾಡಲು ಸಾಧನಗಳಾದ **ಕೈಕಾಲುಗಳೂ** ಅವುಗಳಿಗೆ ಸಹಾಯಕಗಳಾದ ಚಕ್ಷುರಾದಿ ಇಂದ್ರಿಯಗಳು ಹೇಳಲ್ಪಟ್ಟವೆಂದು ಭಾವಿಸಬಹುದು, ಅಥವಾ "**ಮನ್ಮನಸಾ ಧ್ಯಾಯತೇ, ತದ್ವಾಚಾನದತಿ ತತ್ಕರ್ಮಣಾ ಕರೋತಿ**" ಎಂದಿರುವುದರಿಂದ ಮನಸ್ಸಿನಿಂದ **ಧ್ಯಾನಿಸಿ, ವಾಕ್ಕಿನಿಂದ** ಸ್ತುತಿಸಿ, ಆರಾಧನರೂಪ ಕರ್ಮಗಳೇ ಎಂದೇ ಅರ್ಥಮಾಡಿದರೂ ಬಾಧಕವಿಲ್ಲವು. **ಕಥಂಚನ** - ಯಾವುದರಿಂದಲಾದರೂ, **ತ್ವಾಂ ವಿನಾ** - **ದಾಸನಾದ** ನನಗೆ ನೀನೇ **ನಾಥನು**, ಆದುದರಿಂದ ನಿನ್ನನ್ನ ಬಿಟ್ಟು, **ಅನ್ಯ ಮುದ್ದಿಶ್ಯ** - ಇತರ ತುಚ್ಛ ದೇವತೆಗಳನ್ನು ಕುರಿತು, **ಕಿಂಚಿದಪಿ**-ಏನೊಂದನ್ನೂ **ಎಂಬ ದರಿಂದ ನಾಮಗ್ರಹಣವನ್ನೂ ಕೂಡ, ನ ಕರಿಷ್ಯೇ** - ನಾನು ಮಾಡುವದಿಲ್ಲವು, ಹಾಗೆನಾದರೂ ನಾಡಿದರೆ ನನ್ನ ಸ್ವರೂಪಕ್ಕೇ ಕುಂದಕನೆಂಬ ಭಾವವು.

---

(೩) ದ್ವಿತೀಯ ಜೀತಂತಾ.

ಕಿಂಚಿದಪ್ಯಹಮ್"॥ (೪) "ತನಕ್ಕೇಯಾಗ ವೆನ್ನೈಕೊಳ್ಳು ಮಿವೈ" ಎಜ್ಞ್ಞಾರಪಡಿಯೇ ಭಗವತ್ಪ್ರೀತಿಮಾತ್ರಂ ಪ್ರಯೋಜನಮಾನ ಕೈಙ್ಕರ್ಯತ್ತಿಲೇ ಸ್ವಾಚಾರ್ಯೋಪದಿಷ್ಟವುಮಾ ಯಿರುಪ್ಪದೊರು ಶಾಸ್ತ್ರೀಯಪಕ್ರಿಯೈಯೈಕ್ಕೊಂಡು ಯಥಾಕಾಲವುನ್ನಯಿಕ್ಕ ಪ್ರಾಪ್ತವ್.

ಇಲ್ಲಿಯೂ ಭಗವತ್ಪ್ರೀಣನಾರ್ಥವಾಗಿಯೇ ಅನನ್ಯ ಪ್ರಯೋಜನನಾಗಿ ಭಗವತ್ಕೈಙ್ಕರ್ಯವನ್ನು ಮಾಡತಕ್ಕದ್ದೆಂಬುದು ಹೇಳಲ್ಪಟ್ಟಿತು.

(೪) **ತನಕ್ಕೇಯಾಗ** - ಸರ್ವಶೇಷಿಯಾದ ತನಗೆ ಮಾತ್ರವೇ, ಎಂದರೆ ಶೇಷಭೂತನಾಗಿ **ಕೈಂಕರ್ಯ**ವಮಾಡಿಕೊಂಡು ಪರತಂತ್ರನಾಗಿರುವ ಹಾಗೆ, ಅನ್ಯ ದೇವತೆಗಳಿಗೆ ಯಾರಿಗೂ ಶೇಷಭೂತನಾಗದೆ ಎಂಬರ್ಥವು ಸೂಚಿತವು, **ಎನ್ನೈ ಕೊಳ್ಳುಮಿವಾದೆ** - ನನ್ನನ್ನು ಅಙ್ಗೀಕರಿಸುವನು, ಇದೇ ಶ್ರೀಕೃಷ್ಣನಲ್ಲಿ ಪ್ರಾರ್ಥನೆಯು ಎಂಬ ಭಾವವು. ಪೂರಾ ಪಾಸುರ ಮತ್ತ ಅರ್ಥಗಳಿಗೆ ೧೨೩೭ ನೆಯ ಪುಟ ನೋಡಿ; **ಎಜ್ಞ್ಞಾರಪಡಿಯೇ** - ಎಂಬೀ ಪ್ರಮಾಣಗಳಲ್ಲಿ ಹೇಳಿರುವ ಹಾಗೆ, **ಭಗವತ್ಪ್ರೀತಿಮಾತ್ರವೇ** ಪ್ರಯೋಜನವಾಗಿರುವ, **ಕೈಙ್ಕರ್ಯತ್ತಿಲೇ** - ಕೈಙ್ಕರ್ಯದಲ್ಲಿ, **ಇಲ್ಲಿ ಮಾತ್ರ** ಶಬ್ದದಿಂದ ಭಗವತ್ಪ್ರೀತಿಯಲ್ಲದೆ ಇನ್ನಾವ **ಪ್ರಯೋ**ಜನವನ್ನು ತಾನು ಅಪೇಕ್ಷಿಸಕೂಡದೆಂದು ಹೇಳಲ್ಪಟ್ಟಿತು, ಹೀಗೆ ಸ್ವಯಂ ಪ್ರಯೋಜನವಾದ ಕೈಙ್ಕರ್ಯದಲ್ಲಿ, **ಸ್ವಾಚಾರ್ಯೋಪದಿಷ್ಟವುಮಾಯ್** - ತನ್ನ ಸ್ವಂತ ಆಚಾರ್ಯರಿಂದ ಉಪದೇಶಿಸಲ್ಪಟ್ಟದ್ದಾಗಿಯೂ, **ಇರುಪ್ಪದೊರು ಶಾಸ್ತ್ರೀಯ ಪ್ರಕ್ರಿಯೈ ಕೊಂಡು** - ಇರುವ ಶಾಸ್ತ್ರ ಪದ್ಧತಿಯನ್ನು ಅನುಸರಿಸಿರುವ ಮಾರ್ಗವನ್ನು ಕೈಕೊಂಡು, **ಯಥಾಕಾಲವುಮ್** - ಶಾಸ್ತ್ರವಿಹಿತವಾದ ಕಾಲದಲ್ಲಿ ತನಗೆ ಎಷ್ಟು ಅವಕಾಶ ಉಂಟೋ ಅಷ್ಟುಕಾಲ, **ಅನ್ನಯಿಕ್ಕ ಪ್ರಾಪ್ತವ್**- ಈ ಅಭಿಗಮನಾರಾಧನೇನ ನಿತ್ಯನೈಮಿತ್ತಿಕಾನುಷ್ಠಾನಗಳೆನ್ನು ಇವುಗಳೆಲ್ಲ ಸಂಬಂಧವಿಡುವದು ಉಚಿತವು ಈತನು ಅವಲಂಬಿಸುವ ಅಭಿಗಮನಾರಾಧನಾದಿ ನಿತ್ಯನೈಮಿತ್ತಿಕಾನುಷ್ಠಾನಗಳು ಶಾಸ್ತ್ರ ಪದ್ಧತಿಯನ್ನು ಅನುಸರಿಸಿದವುಗಳಾಗಬೇಕು ; ಇಷ್ಟೇ ಅಲ್ಲದೆ ಸ್ವಾಚಾರ್ಯೋಪದಿಷ್ಟವಾಗಿರಬೇಕು. ಆದುದರಿಂದ ಸ್ವಾಚಾರ್ಯೋಪದೇಶವು ಅವಶ್ಯಕವೆಂದು ಹೇಳಿದುದಲ್ಲದೆ ಅದು ಶಾಸ್ತ್ರ ಮರ್ಯಾದೆಗೆ ವ್ಯತಿರಿಕ್ತವಾಗಿರಕೂಡದೆಂದು ತೋರಲ್ಪಟ್ಟಿತು. ಶಾಸ್ತ್ರ ಮರ್ಯಾದೆಯನ್ನು ವಿಚಾರಿದುದಾದರೆ ಸ್ವಾಚಾರ್ಯೋಪದಿಷ್ಟವಾದರೂ ಗ್ರಾಹ್ಯ

---

(೪) ತಿರು. ೨. ೯. ೪

ವಲ್ಲವು ಶಾಸ್ತ್ರವಿಹಿತವಾದ ಕೈಂಕರ್ಯಾಚರಣೆಯನ್ನು ಬೋಧಿಸುವವರು ಆಚಾರ್ಯ ಸ್ಥಾನಕ್ಕೆ ಯೋಗ್ಯರಲ್ಲವೆಂಬ ಭಾವವು. **"ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ। ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂಗತಿಮ್"** ಎಂಬ (ಗೀ. ೧೬. ೨೩) ಶ್ಲೋಕವು ಇಲ್ಲಿ ಅನುಸಂಧೇಯವು. ಶಾಸ್ತ್ರದಲ್ಲಿ ವಿಕಲ್ಪ ವೈವಿಧ್ಯಾದಿಗಳು ಬೋಧಿತವಾಗಿದ್ದಪಕ್ಷದಲ್ಲಿ ಸ್ವಾಚಾರ್ಯರಿಗೆಯಾವುದು ಇಷ್ಟವೋ ಹಾಗೆ ನಡೆಸತಕ್ಕದ್ದೆಂಬ ಭಾವವು ಭಗವದಾರಾಧನೆಗಳಲ್ಲಿ ಕ್ರಮವೂ ಪೋತಶೋಪಚಾರಗಳೂ ಒಂದೇಯಾಗಿದ್ದರೂ, ಶೇಷತಕ್ಕ ಮಂತ್ರಗಳೂ ಬೇರೆಬೇರೆಯಾಗಬಹುದು. ಅವುಗಳಲ್ಲಿ ಯಾವುದು ಸ್ವಾಚಾರ್ಯೋಪದಿಷ್ಟವೋ ಅದನ್ನು ಆವಲಂಬಿಸಬಹುದೆಂಬ ತಾತ್ಪರ್ಯವು. ಹೀಗೆ ಈ ನಿತ್ಯನೈಮಿತ್ತಿಕ ಕರ್ಮಗಳಲ್ಲಿ ಸೇರಿದ ಭಗವದಾರಾಧನೆ ಮುಂತಾದವುಗಳನ್ನಾಚರಿಸುವಾಗ ಯಾವವಿಧ ಫಲದಲ್ಲಿಯೂ ಮಮತೆಯಿಲ್ಲದೆ ಕೇವಲ ಭಗವತ್ಪ್ರೀಣನಾರ್ಥವಾಗಿ ನಡೆಸತಕ್ಕದ್ದೆಂಬುದು ಉಪದೇಶವು. ಆದರೆ **"ಪ್ರಯೋಜನ ಮನುದ್ದಿಶ್ಯ ನಮಂದೋಪಿ ಪ್ರವರ್ತತೇ"** ಎಂದಿರುವಾಗ ಏನೂ ಪ್ರಯೋಜನವಿಲ್ಲದೆ ಕೈಙ್ಕರ್ಯರೂಪ ಆರಾಧನೆಯನ್ನು ಯಾವ ಮಂದಬುದ್ಧಿಯುಳ್ಳವನೂ ಮಾಡಲಾರನು, ಹೀಗಿರುವಾಗ ಅನನ್ಯ ಪ್ರಯೋಜನಭಾವ ಹೇಗೆ ಕೂಡುತ್ತದೆ? ಮತ್ತು ಪ್ರಪನ್ನನಾದವನೇನೋ ಇಂತಹ ಕೈಙ್ಕರ್ಯವನ್ನು ಫಲಾಭಿಸಂಧಿ ಇಲ್ಲದೇ ನಡೆಸಬಹುದು. ಆದರೆ ಬಹು ಆಯಾಸ ಸಾಧ್ಯವಾದ ಇಂತಹ ಕೈಙ್ಕರ್ಯದಲ್ಲಿ ಸಾಧಾರಣವಾಗಿ ಮಮತೆಯು ಹೇಗೆ ಹುಟ್ಟಲಾರದೆ ಇದ್ದೀತು? ಎಂದರೆ, ನಾಥನಾದ ಸ್ವಾಮಿಯು ತನ್ನ ದಾಸನ ಕೈಙ್ಕರ್ಯದಲ್ಲಿ ಮಮತೆಯನ್ನಿಟ್ಟು ಅದನ್ನು ಸ್ವೀಕರಿಸುವದು ಒಂದು ದೊಡ್ಡ ಪರಮಲಾಭವಲ್ಲವೋ? ತನಗೆ ಇಂತಹ ನಿರತಿಶಯ ಸುಖಾನುಭವನ್ನುಂಟುಮಾಡುವ ಸ್ವಾಮಿಯು ಪ್ರೀತನಾಗುವದೂ ಪರಮಲಾಭವಲ್ಲವೋ? ಎಂಬ ಭಾವವು. ಹೀಗೆ ಭಗವತ್ಪ್ರೀತ್ಯರ್ಥವಾಗಿ ಪಾಂಚಕಾಲಿಕ ಸರ್ವ ನಿತ್ಯ ನೈಮಿತ್ತಿಕಾದಿಗಳೆಲ್ಲವನ್ನೂ ಪ್ರಪನ್ನನು ಆವಶ್ಯಕವಾಗಿ ಅನುಷ್ಠಿಸತಕ್ಕದ್ದು ಎಂಬುದು ಮುಖ್ಯ ತಾತ್ಪರ್ಯವು.

ಈ ಪ್ರಪನ್ನನು ಫಲಾಭಿಸಂಧಿ ರಹಿತನಾಗಿಯೇ ಕೇವಲ ಭಗವತ್ಪ್ರೀತ್ಯರ್ಥವಾಗಿಯೇ ಈ ಅಭಿಗಮನಾದಿಗಳಾದ ನಿತ್ಯ ನೈಮಿತ್ತಿಕಗಳನ್ನು ಮಾಡಿದರೂ ಇದು, ಏನಾದರೂ ಸತ್ಫಲಗಳನ್ನು ಕೊಡದೆ ಹೋಗುವದಿಲ್ಲವು. ವಿಭೀಷಣನು ಶ್ರೀರಾಮನಲ್ಲಿ ಶರಣಾಗತಿಯನ್ನು ಮಾಡುವಾಗ ಕೇವಲ ಭಗವತ್ಪ್ರೀತ್ಯರ್ಥವಾಗಿಯೇ ಮಾಡಿದರೂ, ಉತ್ತರರಕ್ಷಣದಲ್ಲೇ ಅದು ಲಂಕಾರಾಜ್ಯಾಭಿಷೇಕಕ್ಕೆ ಹೇಗೆ ಹೇತುವಾಯಿತೋ ಹಾಗೆಯೇ ಇಲ್ಲಿ ಅಭಿಗಮನಾರಾಧನಾದಿಗಳೂ ಅನೇಕ ದುಷ್ಕೃತಗಳು ದೂರವಾಗುವದಕ್ಕೆ ಕಾರಣವಾಗಬಹುದೆಂದು ಹೇಳುತ್ತಾರೆ.

ಅಭಿಗಮನಾದಿ ನಿತ್ಯ ನೈಮಿತ್ತಿಕಾನಾ ಮನೇಕಾನರ್ಥ
ಪರಿಹಾರಕತ್ವಸ್ಯ ಕಥನಮ್.

ಇಪ್ಪಡಿ ನಿತ್ಯಮಾಗ ನಿಕ್ಕಿರ ಭಗವದಭಿಗಮನಾದಿಗಳಿಲ್ ಲೋಕಾಯತಿಕರೈಪ್ಪೋಲೆ ಖ್ಯಾತಿ ಲಾಭ ಪೂಜೈಗಳುಕ್ಕಾಗವಾದಲ್, ತತ್ವ ಜ್ಞಾನ ವೈರಾಗ್ಯಗಳಿಲ್ಲಾದಾರೈಪ್ಪೋಲೆ ಪ್ರಯೋಜನಾಂತರತ್ತುಕಾಗವಾದಲ್, ಪೂರ್ಣೋಪಾಯರಿಲ್ಲಾದಾರೈ ಪ್ಪೋಲೆ ಮೋಕ್ಷಾರ್ಥಮಾಗವಾದಲ್, ಅನ್ರಿಕ್ಕೇ ಮುಕ್ತರೈಪ್ಪೋಲೆ ಸ್ವಾಮ್ಯಭಿಮತತ್ತೈ ನಡತ್ತ ವೇಣುಂ

ಅಭಿಗಮನಾದಿ ನಿತ್ಯನೈಮಿತ್ತಿಕಗಳು ಅನೇಕ ಅನರ್ಥ
ಪರಿಹಾರಕಗಳು

ಇಪ್ಪಡಿ - ಮೇಲೆ ಹೇಳಿದ ರೀತಿಯಲ್ಲಿ, ನಿತ್ಯಮಾಗವಿಕ್ಕಿರ - ಪ್ರತಿನಿತ್ಯವೂ ಮಾಡಬೇಕೆಂದು ವಿಧಿಸಿರುವ, ಭಗವದಭಿಗಮನಾದಿಗಳಿಲ್ - ಭಗವಂತನನ್ನು ಆರಾಧಿಸುವದೇ ಮೊದಲಾದವುಗಳಲ್ಲಿ. ಲೋಕಾಯತಿಕರೈ ಪ್ಪೋಲೆ - ಜೀವರು, ವೇದಗಳು, ಜೀವಾತ್ಮ ವೈಕುಂಠ ಮೊದಲಾಗಿ ಕಣ್ಣಿಗೆ ಕಾಣಿಸದೇ ಇರುವವು ಯಾವುವೂ ಇಲ್ಲವೆಂದು ಹೇಳುವವರಾಗಿ ಬರೀ ಐಹಿಕ ಪ್ರಯೋಜನಗಳೇ ಪ್ರಯೋಜನಗಳೆಂದು ಹೇಳುವ ಚಾರ್ವಾಕರ ಹಾಗೆ, ಖ್ಯಾತಿ ಲಾಭ ಪೂಜೈಗಳುಕ್ಕಾಗ ವಾದಲ್ ತನಗೆ ಉಂಟಾಗುವ ಖ್ಯಾತಿ, ಲಾಭ ಮತ್ತು ಪೂಜೆ ಇಂತಹ ಐಹಿಕ ಪ್ರಯೋಜನಗಳಿಗಾಗಿಯಾಗಲಿ, ತತ್ವಜ್ಞಾನ ವೈರಾಗ್ಯಜ್ಞಿಗಳಿಲ್ಲಾದಾರೈಪ್ಪೋಲೆ - ಮುಕ್ತಿದಾಯಕನಾದ ತತ್ವಜ್ಞಾನವಿರತಿಯೊಬ್ಬ ಸಿದ್ಧಾನೆಂಬ ತತ್ವಜ್ಞಾನವೇನು, ಐಹಿಕೋಪಭೋಗಗಳೂ ಸ್ವರ್ಗಾದಿ ಸುಖಗಳೂ ನಶ್ವರಗಳು ಆದುದರಿಂದ ಅವುಗಳು ತುಚ್ಛವಾದವುಗಳೆಂಬ ವೈರಾಗ್ಯವೇನು, ಇಂತಹ ಜ್ಞಾನಗಳಿಲ್ಲದವರ ಹಾಗೆ, ಪ್ರಯೋಜನಾಂತರತ್ತುಕಾಗವಾದಲ್-ಮೋಕ್ಷೇತರವಾದ ಸ್ವರ್ಗಾದ್ಯನುಭೋಗಗಳಿಗಾಗಿಯಾಗಲಿ, ಪೂರ್ಣೋಪಾಯರಲ್ಲಾದಾರ್ ಪೋಲೆ - ಸಂಪೂರ್ಣೋಪಾಯವಾಗಿರುವ ಶ್ರೀಮನ್ನಾರಾಯಣನನ್ನು ಸಂಪೂರ್ಣವಾಗಿ ಅನುಷ್ಠಿಸದೇ ಇರುವವರ ಹಾಗೆ, ಮೋಕ್ಷಾರ್ಥಮಾಗವಾದಲ್-ಮೋಕ್ಷವನ್ನು ಸಂಪಾದಿಸುವದಕ್ಕಾಗಿ ಎಂದಾಗಲಿ, ಅನ್ರಿಕ್ಕೇ - ಅಲ್ಲದೆ ಎಂದರೆ ಇಂತಹ ಪ್ರಯೋಜನಗಳಲ್ಲಿ ಆಸೆಯಾವುದೂ ಇಲ್ಲದೆ ಎಂಬ ಭಾವವು. ಮುಕ್ತರೈಪ್ಪೋಲೇ - ಮುಕ್ತರು ಯಾವ ಅನುಷ್ಠಿಸುತ್ತಾರೋ ಹಾಗೆ, ಅವರು ಹೇಗೆ

ಮೆಚ್ಚಿರ ರುಚಿಯಾಲೆ ಯಥಾ ಶಾಸ್ತ್ರೆಮ್ ಸ್ವಯಂ ಪ್ರಯೋಜನಮಾಗ ವಿಳಿನ್ವಾಲ್ ಇವ್ವಭಿಗಮನಾದಿಗಳ್, (೧) ಅನ್ಯಾಭಿಗಮನಮುಂ (೨) **ಅನ್ಯಾರ್ಥ** ಪ್ರವೃತ್ತಿಯುಂ (೩) ಅನ್ಯ ಯಜನಮುಂ (೪) ಅನ್ಯ ಶಬ್ದಜ್ಞಾಳುಂ (೫) ಅನ್ಯ ಚಿನ್ತ್ಯೆಯುಂ ಮಾಗಿರ ಖಿನ್ನಪ್ಪಿಳ್ ಪುಗುರಾಮ್ಬುಕ್ಕುಕ್ಕೆಡಕ ಮಾಯಿರುಕ್ಕುಮ್.

ಅನುಷ್ಠಿಸುತ್ತಾರೆ ಯಜ್ ಸಾಧ್ಯಭಿಗಮತಕ್ಕೆ ನಡತ್ತಪ್ಪೋಲು **ಮೆಚ್ಚಿರ ರುಚಿಯಾಲೇ-ಸ್ವಾಮಿಯಾಗ** ತ್ರಿಯ ಶಕ್ತಿಗೆ ಇಷ್ಟವಾಪ ಕೈಙ್ಕರ್ಯವನ್ನು ಮಾಡಬೇಕೆಂಬ ವಿಶ್ವಾಸದಿಂದ, **ಯಥಾಶಾಸ್ತ್ರೆಮ್**-ಶಾಸ್ತ್ರದಲ್ಲಿ ಹೇಳಿರುವ ನೀತಿಗೆ, **ಸ್ವಯಂ ಪ್ರಯೋಜನಮಾಗ**-ಕೈಂಕರ್ಯಕ್ಕೆ ಸ್ವಯೋಚಿತವಪ್ಪ ಇನ್ನು ಯಾವ ಪ್ರಯೋಜನಕ್ಕಾಗಿಯೂ ಅಲ್ಲದೆ, **ವಿಳಿನ್ವಾಲ**-ಕೈಙ್ಕರ್ಯದಲ್ಲಿ ಪ್ರವೃತ್ತಿಯಿದ್ದರೆ, **ಇವ್ವಭಿಗಮನಾದಿಗಳ್**-ಈ ಪ್ರಸ್ತುತವು ಆರಾಧನೆ ಮೊದಲಾಪ ಪದಗಳ, (ಇದೇ ಕರ್ತೃಪದವು) (೧) **ಅನ್ಯಾಭಿಗಮನಮುಂ**-ಅನ್ಯದೇವತಾರಾಧನವೂ (೨) **ಅನ್ಯಾರ್ಥಪ್ರವೃತ್ತಿಯುಮ್**-ಐಹಿಕಕ್ಕಾಗಿ ಪ್ರವೃತ್ತಿಯೂ, (೩) **ಅನ್ಯ ಯಜನಮುಮ್**-ಅನ್ಯ ದೇವತೆಯನ್ನು ಪೂಜಿಸಿ ಯಾಗವೂ, (೪) **ಅನ್ಯ ಶಬ್ದಜ್ಞಾಳುಮ್**-ಅನ್ಯದೇವತಾಜ್ಞಾನವು ಸ್ಮರಣವೂ, (೫) **ಅನ್ಯ ಚಿನ್ತ್ಯೆಯುಮ್**-ಇತರ ವಿಷಯವಾಪ ಚಿಂತೆಯೂ, **ಆಗಿರ**-ಇವೇ ನೊಂದಲಾದವುಗಳಾದ, **ಖಿನ್ನಪ್ಪಿಳ್**-ವಿಘ್ನಗಳು, **ಪುಗುರಾಮ್ಬುಕ್ಕುಕ್ಕೆಡಕ**-ಸ್ಪರ್ಶಿಸದೇ ಇರುವಂತಕ್ಕೆ, **ಕೆಡಕ ಮಾಯಿರುಕ್ಕುಮ್**-ತಪ್ಪಿದವಾಗಿರುತ್ತವೆ. ಅಭಿಗಮನ ರೂಪವಾದ ಈ ಆರಾಧನೆಯು, ಈ ಆರಾಧನೆಯ ಪ್ರಯೋಜಕವಾದ ಸ್ವನೈಶಕ್ಕೆ ಅಡ್ಡಿಯಾಗುವಂತೆ ಯೋಚಿಸುವಷ್ಟರವು ಎಂಬ ತಾತ್ಪರ್ಯವು **ಕೆಂಬೆರು** ಸ್ವನೈಶಕ್ಕೆ ಜೋಗವಾಷ್ಟರವೊಂ ಪಾಗೆ ಅಭಿಗಮನಾದಿ ಪಂಚಕವನ್ನು, ಈ ಅನಾಭಿಗಮನಾದಿ ಪಂಚಕವನ್ನು ಬಿಡಲೆ ಸ್ವನೈಶಿಸನಹಾಗೆ ಅಡ್ಡಿಯಾಪ ತ್ವನೆ ಎಂಬ ನಾನು ಐದು ವಿಷಯಗಳು ಪ್ರಪನ್ನನ ಸ್ವರೂಪಕ್ಕೆ ವಿರುದ್ಧವಾಪುವು ಅವು ಏನೂ ಈ ಅಭಿಗಮನಾದಿ ನಿತ್ಯವಾಪ ಆಜ್ಞಾ ಕೈಙ್ಕರ್ಯಾನುಷ್ಠಾನದಿಂದ ತೊಲಗುವುದು ಎಂದು ಮೇಲಿನ ಫಲಾಭಿಸಂಧಿರಹಿತವಾದ ಈ ಅಭಿಗಮನಾದಿ ನೈಙ್ಕರ್ಯಾನುಷ್ಠಾನವನ್ನು ಪ್ರಪನ್ನರು ಬಿಡಗೂಡದೆಂದು ಉಪದೇಶಿಸಿರುತ್ತಾರೆ. ಭಗವದಾರಾಧನೆಯೂ ಸಂಧ್ಯಾವಂದನಾದಿ ನಿತ್ಯನೈಮಿತ್ತಿಕಕರ್ಮಾಚರಣೆಯಂತೆ ಅವಶ್ಯಕರ್ತವ್ಯವು; ತನಗೆ ಕಾಮಕೂಲವಿಲ್ಲವೆಂದು ಇತರರ ಕೈಯಿಲ್ಲ ಭಗವದಾರಾಧನೆಯನ್ನು ಮಾಡಿಸುವುದೂ, ಅದರಲ್ಲೂ ಪ್ರಪನ್ನನಾಗಿ ಭಗವದಾರಾಧನೆಯನ್ನು ತಾನೆ ಮಾಡಬೇಕಾದುದೂ ವಿಶೇಷ ನಿಂದ ವೆಂದು ಇದರಿಂದ ಹೇಳಿದಂತಾಯಿತು.

ಅನ್ಯಾಭಿಗಮನಾದಿ ಪಂಚಕಾನಾಂ ಪ್ರಪನ್ನ ವಿರುದ್ಧತ್ವೇ ಪ್ರಮಾಣಾನಿ.

೧. ಅನ್ಯಾಭಿಗಮನಂ ಆಗಾದೆನ್ನು ಮಿಡತ್ತೈ (೧) ಇನಿಪ್ಪೋಯ್ ಒರುವ ತನಕ್ಕುಪ್ಪಣೆನ್ನು ಕಡೈತ್ತಲೈ ನಿರ್ಕ್ಕ ನಿಶ್ ಶಾಯೈ ಯಳಿವು ಕಣ್ಡಾಯ್" ಎನ್ರು ಪೆರಿಯಾಳ್ವಾರರುಳಿಚ್ಚಿಯ್ದಾರ್

ಅನ್ಯಾಭಿಗಮನಾದಿ ಪಂಚಕಗಳು ಪ್ರಪನ್ನನಿಗೆ ವಿರುದ್ಧವಾದ ವೆಂಬುದಕ್ಕೆ ಪ್ರಮಾಣಗಳು.

೧ ಅನ್ಯಾಭಿಗಮನಂ - ಅನ್ಯದೇವತಾರಾಧನೆಯು, ಆಗಾದು - ಈ ಪ್ರಪನ್ನನಿಗೆ ಸ್ವರೂಪವಿರುದ್ಧವು, ಎನ್ನುಮಿಡತ್ತೈ - ಎಂಬ ಸಂದರ್ಭವನ್ನು (೧) "ಇನಿಪ್ಪೋಯ್" ಎನ್ರು - ಎಂಬ ಪಾಶುರದಲ್ಲಿ, ಪೆರಿಯಾಳ್ವರವರು ತಾವು ಬರೆದ ತಿರುಮೊಳಿಯಲ್ಲಿ, ಅರುಳಿಚ್ಚಿಯ್ದಾರ್ - ಅಪ್ಪಣೆಕೊಡಿಸಿರುತ್ತಾರೆ:— ಆ ಪಾಶುರವು ಯಾವುದೆಂದರೆ :— ಉನಕ್ಕುಪ್ಪಣೆ ಶೆಯ್ದಿರುಕ್ಕುಮ್ ತವ ಮುಡಿಯೇನಿನಿಪ್ಪೋ ಯೊರುವನ್ । ಉನಕ್ಕುಪ್ಪಣೆನ್ನು ಕಡೈತ್ತಲೈ ನಿರ್ಕ್ಕ ನಿಶ್ ಶಾಯೈ ಯಳಿವು ಕಣ್ಡಾಯ್ । ಪುನ ತಿನೈಕ್ಕಳ್ಳಿಪ್ಪುದುವಿ ಕ್ಕಾಟ್ಟಿಯುಣ ಪೊನ್ನಡಿ ವಾಳ್ಗ ವೆನ್ರು । ಇನಕ್ಕುರುವರ್ ಪುದಿಯುಡುಣ್ಣು ಮೆಳಿಲ್ ಮಾಲಿರುಂಶೋಲೈ ಯೆನ್ಬಾಯ್ ॥

ಅರ್ಥವು ಇನಕ್ಕುರುವರ್-ಸ್ತ್ರೀಯರೂ ಪುರುಷರೂ ಬಾಲರೂ ವೃದ್ಧರೂ ಹೀಗೆ ಗುಂಪುಕೂಡಿಬಂದಿರುವಗದ್ದೆ ಹೊಲಗಳಲ್ಲಿ ಕೆಲಸಮಾಡುವ ಕೊರವರ ಜಾತಿಯವರು, ಉಣ ಪೊನ್ನಡಿವಾಳ್ಗ ಎನ್ರು-"ಉನ್ನಡಿ ಶೇನಡಿ ಶೆಲ್ವಿತಿರು ಕ್ಕಾಪ್ಪು" ಎಂದು ಹೇಳಿರುವಹಾಗೆ ನಿನಗೆ ಮಙ್ಗಳಾಶಾಸನಮಾಡುವದಕ್ಕಾಗಿ ಪಲ್ಲಾಣ್ಡನ್ನು ಹಾಡಿ, ಪುನಮ್ ತಿನೈಕ್ಕಳ್ಳಿ - ಹೊಲದಲ್ಲಿ ಬಿಟ್ಟ ಭತ್ತದ ತೆನೈಯನ್ನು ಕೊಯಿದು ತಂದು, ಪುದು ಅವಿ - ಆ ಪೈರನ್ನು ಉಪಯೋಗಿಸಿಕೊಳ್ಳುವದಕ್ಕೆ ಮೊದಲು ಹೊಸ ಅಕ್ಕಿಯಿಂದ ನಿನಗೆ ಭೋಗ್ಯವಾಗಿರುವಹಾಗೆ ಹವಿಸ್ಸನ್ನು ಮಾಡಿ, ಕಾಟ್ಟು - ನಿನಗೆ ನಿವೇದನವನ್ನು ಮಾಡಿ, ಪುತಿಯದುಣ್ಣುಮ್ ಎಳಿಲ್ - ಶ್ರೀಕೃಷ್ಣನು ಬೆಣ್ಣೆಯನ್ನು ಸ್ವೀಕರಿಸಿದ ತೆರದಿ ಈ ಹೊಸ ಹವಿಸ್ಸನ್ನು ಭುಜಿಸುವ ಸೊಬಗನ್ನು ಹೊಂದಿದ, ಮಾಲಿರುಞ್ಶೋಲೈ ಎನ್ಬಾಯ್ -

(೧) ಪೆರಿಯಾಳ್ವಾರ್ ತಿರುಮೊಳಿ ೫. ೩. ೩.

ಮಾಲಿರುಂಜೋಲೆ ಎಂಬ ದಿವ್ಯದೇಶದಲ್ಲಿ ಬಿಜಮಾಡಿಸಿರುವ ಎನ್ನಪ್ಪನೇ, **ಉನಕ್ಕು** - ಶೇಷಿಯಾದ ನಿನಗೆ, **ಪಣಿಶೆಯ್ದು** - ಶೇಷಭೂತನಾದ ನಾನು ನಿತ್ಯ ಕೈಙ್ಕರ್ಯವನ್ನು ನೂಡುವಹರಿಂದ, **ಇರಕ್ಕುಮ್** - ನೀನಲ್ಲದೆ ಅಚಿತ್ಪ್ರಾಯನಾಗಿರುವ ನಾನು "ಸಂತಮೇನಂ ತತೋನಿದುಃ ಎಂದು ಹೇಳಿರುವಹಾಗೆ ಸತ್ತೈಯನ್ನು ಹೊಂದಿ, **ತವಮುಡೈಯೇ** - ಅಂತಹ "ಕಿಂಕರತ್ವಾಧಿ ರಾಜ್ಯಂ" ಎಂದು ಹೇಳಿರುವಹಾಗೆ ಕೈಙ್ಕರ್ಯ ಸಾಮ್ರಾಜ್ಯವನ್ನು ಹೊಂದುವ ಸುಕೃತವನ್ನು ನಿನ್ನ ಅನುಗ್ರಹದಿಂದ ಹೊಂದಬೇಕೆಂದಿರುವೆನು; **ಇನಿ** - ಹೀಗಿರುವಾಗ ಇನ್ನುಮೇಲೆ, **ಪೋಯ್** - ಆಶ್ರಿತ ವತ್ಸಲನಾಯ್ ಶರಣಾಗತರ ಸಂರಕ್ಷಣೆಯಲ್ಲಿ ಬದ್ಧಾದರನಾಗಿರುವ ನಿನ್ನನ್ನನಾದರಣೆಮಾಡಿ ಅನ್ಯತ್ರಹೋಗಿ, **ಒರುವರ್ ತನಕ್ಕು**-ನಮ್ಮಹಾಗೆ ಜೀವಕೋಟಿಗೆ ಸೇರಿ, ನನುಗಿಂತ ಸ್ವಲ್ಪಹೆಚ್ಚು ಅಧಿಕಾರವನ್ನು ಸ್ವಾವಿ ಕೃಸೆಯಿಂದ ಹೊಂದಿ ಅಲ್ಪಾಸ್ಥಿರ ಫಲಪ್ರದರಾಹ ಬ್ರಹ್ಮರುದ್ರೇಂದ್ರಾದಿಗಳಲ್ಲಿ ಒಬ್ಬನನ್ನು, **ಪಣಿನ್ದು** - ನಿನ್ನ ಪಾದದಲ್ಲೇ ಇಡಲು ಯೋಗ್ಯವಾದ ತಲೆಯನ್ನು ಅಂತವರಿಗೆ ಜಾಗಿಸಿ, **ಕಡೈತ್ತಲೈ** - ನಿನ್ನ ಬಾಗಿಲು ಕಾಯುವದನ್ನು ಬಿಟ್ಟು, ಅವರ ನಿವಾಸದ ಕೊನೆಯ ಬಾಗಲಲ್ಲಿ, **ನಿಕ್ಕ್ಯೆ**-ಕೈಜೋಡಿಸಿ ನಿಂತಿರುವದು **ನಿಕ್ಕಾಯೈ**-ನಿನ್ನ ದಿವ್ಯ ತೇಜಸ್ಸಿಗೆ, ಅಳಿವುಕಂಡಾಯ್-ಹಾನಿಕರವಾದುದಲ್ಲವೇ ಯಾವಾಗ ನಿನ್ನ ಸ್ವರೂಪಕ್ಕೆ ಹಾನಿ ಉಂಟುಮಾಡುವಹಾಗೆ ಮಾಡಿಕೊಂಡನೋ ; ಆಗ ನನ್ನ ಸ್ವರೂಪವೂ ಹಾಳೇ ಆಯಿತು ಎಂಬ ಭಾವವೂ ಸೂಚಿತವು. ಪ್ರಥಮತಃ ನಿನಗೆ ನಾನು ದಾಸನು ಎಂಬ ಜ್ಞಾನಬೇಕು, ಅನಂತರ ದಾಸನಿಗೆ ಉಚಿತವಾದ ವೃತ್ತಿಯನ್ನವಲಂಬಿಸುವದರಲ್ಲಿ ಅಶೆಯುಂಟಾಗಬೇಕು, ಆದುದರಿಂದ ತನ್ನ ಶೇಷಿಗೆ ತಾನು ಕೈಙ್ಕರ್ಯಮಾಡುವದೇ ತನಗೆ ಸತ್ತೆಯನ್ನಿೀಯುವಂತಾದ್ದು, ಅದಿಲ್ಲದಿದ್ದರೆ ತನ್ನ ಆತ್ಮೋಜ್ಜೀವನಕ್ಕೆ ಮಾರ್ಗವಿಲ್ಲವೆಂಬ ಸ್ಥಿರಸ್ರಜ್ಞಾಯುಂಟಾಗಬೇಕು. ಇಂತಹ ಜ್ಞಾನವುಳ್ಳ ನಾನು ಅನ್ಯದೇವತೆಗಳ ಕಾಲಿಗೆ ಬಿದ್ದು ಅವರ ಬಾಗಿಲಕಾದು ನನ್ನ ಸ್ವರೂಪವನ್ನು ಹಾಳುಮಾಡಿಕೊಂಡು, ನಿನ್ನ ಮಹಿಮೆಗೆ ಕುಂದಕವಾಗುವ ಹಾಗೆ ಎಂದಿಗಾದರೂ ಮಾಡುವೆನೇ ಎಂಬುದು ಆಳ್ವಾರ್ರವರ ತಾತ್ಪರ್ಯವು. ಇದರಿಂದ ಅನ್ಯಾಭಿಗಮನವು ಪ್ರಪನ್ನನ ಸ್ವರೂಪಕ್ಕೆ ವಿರುದ್ಧವೆಂಬುದು ಹೇಳಲ್ಪಟ್ಟಿತು

೨. ಪ್ರಪನ್ನನಿಗೆ ಇತರ ವಿಹಿಕೇಚ್ಛೆಯಿಂದ ಪ್ರವರ್ತಿಯು ಕೂಡದು ; **ಎನ್ನು ಮಿಡತ್ತ್ರಯುಮ್** - ಎನ್ನುವ ಸಂದರ್ಭವನ್ನು (೨) **ಕೂರೈ** - ವಸ್ತ್ರವು, **ಶೋರು** - ಅನ್ನವು, ಕೂರೈ ಶೋರು ಎಂಬುದನ್ನು ಬಟ್ಟೆ ಮತ್ತು ಅನ್ನವನ್ನು ಬೋಧಿಸುವ ನಿಕೃಷ್ಟವಾಚಕ ಶಬ್ದಗಳು, **ಇವೈ**-ಇವುಗಳನ್ನು, **ವೇಣ್ಡು ಪದಿಲ್ಲೈ** - ಅಪೇಕ್ಷಿಸುವದಿಲ್ಲವು, ಏಕೆಂದರೆ ಇವು ಜನ್ಮಕಾಲದಲ್ಲೇ ಸ್ವಾರಬ್ಧ

೨. **ಅನ್ಯಾರ್ಥ ಪ್ರವೃತ್ತಿ ಯೋಗಾದೆನ್ನು ಮಿಡತ್ತೈಯುಮ್** (೨) **"ಕೂರೈ ಶೋರಿನೈ ವೇಣ್ಡುವದಿಲ್ಲೈ"** ಎನ್ರರುಳಿಚ್ಚೆಯ್ದಾರ್.

ಕರ್ಮಾನುಗುಣವಾಗಿ ಸ್ವಾಮಿ ಸಙ್ಕಲ್ಪಾನುಸಾರವಾಗಿ ಏರ್ಪಟ್ಟವಾದುದರಿಂದ ಅಪೇಕ್ಷಿಸುವದಿಲ್ಲವೆಂಬ ಭಾವವು; **ಪೂರಾ** ಪಾಶುರವು ಯಾವ್ತನೆಂಜರೆ :— **"ನೆಡು ಮ್ಯೆಯಾಲು ಲಗೇಳು ಮಳನ್ವಾಯ್ ನಿನ್ಮಲಾ ನೆಡಿಯಾ ಯಡಿಯೇನ್ಯೆ । ಕ್ಕಡಿವೈ ಕೊಳ್ಳಿದರ್ಕ್ಕು ಯುರನೇಣ್ಡಾ ಕೂರೈ ಶೋರಿನೈ ವೇಣ್ಡುವ ದಿಲ್ಲೈ । ಅಡಿನು ಯೆನ್ನುಮುಕ್ಕೀಯಿನೈ ಕ್ಕ್ರಿಯಾಲೇ ಯಜ್ಞಜ್ಞೀ ಯುವೈಪೋದರುಜ್ಞ ಣ್ಡಾಯ್ । ಕೊಡುಮ್ಯೆ ಕಂಸನೈ ಕೊನ್ರು ನಿನ್ವಾದೈ ಕೋತ್ತವನ್ರುಳೈ ಕೋಳ್ಳಿಡುತ್ತನೆ ॥** ಇದರರ್ಥವು. **ನೆಡು ಮ್ಯೆಯಾಲ್ ಉಲಗೇಳುಂ ಅಳನ್ವಾಯ್** - ಪರಿಚ್ಛೇದ್ಯವಾಗಿ ವ್ಯಾಪಿಸಿ ತ್ರಿವಿಕ್ರಮನಾಗಿ, ಸಮಸ್ತ ಲೋಕವನ್ನು ಅಳೆದಿರುತ್ತೀಯೇ, ಬಲಿಯ ಎದುರಿಗೆ ವಾಮನನಾಗಿ ತನ್ನ ಮೂರು ಹೆಜ್ಜೆಯ ಭೂವಿಯನ್ನು ನೀನು ಪ್ರಾರ್ಥಿಸಬಹುದು; ಅದು ಅನ್ಯಾರ್ಥ ಪ್ರವೃತ್ತಿಯಾಗಲಿಲ್ಲವೋ ಎಂದರೆ, **ನಿನ್ಮಲಾ** - ಹೀಗೆ ವಂಚಿಸಿ ಬಲಿಯಿಂದ ಮೂರು ಹೆಜ್ಜೆಯ ನೆಲವನ್ನು ಪಡೆದುದು ದೋಷವೋ ಎಂದರೆ ಸ್ವಪ್ರಯೋಜನ ವಿಲ್ಲದೆ ಪರಪ್ರಯೋಜನಕ್ಕಾಗಿಯೇ ಮಾಡಿದುದರಿಂದ ದೋಷರಹಿತನಾದವನು, ಅದೂ ಅಲ್ಲದೆ ತನ್ನ ಪವಿತ್ರಕರವಾದ ಪಾದಗಳಿಂದ ಎಲ್ಲವನ್ನೂ ಪಾವನವನ್ನಾಡಿದು ದರಿಂದಲಾಗಲಿ ನಿನ್ಮಲಾ; ಹೀಗೆ ಎಲ್ಲವನ್ನೂ ಆಕ್ರಮಿಸಿ ಎಲ್ಲವೂ ನಿನ್ನ ಪಾದದ ನೆರಳಿನಲ್ಲಿರುವಹಾಗೆ ಮಾಡಿಕೊಂಡಿದುದರಿಂದ ಸರ್ವಕ್ಕೂ ಧಾರಕ ಪೋಷಕ ಭೋಗ್ಯನಾಗಿರುವದರಿಂದ, **ನೆಡಿಯಾಯ್** - ಆಶ್ರಿತರಿಗೆ ಮಾತ್ರ ಸ್ವಾರ್ಥಿಕನಾಗಿ, ಸರ್ವಾಧಿಕನು ಹೇಗೆಂದರೆ ಸ್ವರೂಪ ರೂಪಗುಣ ವಿಭವೈಶ್ವರ್ಯಾದಿಗಳಿಂದ ಸರ್ವಾಧಿಕನಾಗಿ, **ಕೊಡುಮ್ಯೆ ಕಞ್ಜನೈ ಕೊನ್ರು**- ತಂಗಿಯನ್ನೇ ಕೊಲ್ಲಲು ಯತ್ನಿಸಿ ಮತ್ತು ಆಕೆಯ ಮಕ್ಕಳುಗಳಲ್ಲಿ ಆರು ಮಕ್ಕಳನ್ನು ಕೊಂದು, ಹೀಗೆ ಕ್ರೂರ ಪಾಪಿಷ್ಠನಾದ ಕಂಸನನ್ನು ಕೊಂದು **ನಿನ್ತಾದೈ**- ನಿನ್ನ ತಂದೆಯಾದ ವಸುದೇವನ **ಕೊತ್ತವ ತಳೈಕೊಳ್** - ಬೀಗಹಾಕಲ್ಪಟ್ಟ ಬಲಿಷ್ಠವಾದ ಬೇಡಿಯ ಬೀಗವನ್ನು, **ವಿಡುತ್ತಾನೇ** - ತೆಗದು ಹಾಕಿದವನೇ. ಹೀಗೆ ಕ್ರೂರನಾಗಿ ಅತಿ ಬಲಿಷ್ಠನಾಗಿರುವ ಕಂಸನನ್ನು ಕೊಂದವನಿಗೆ, ಈ ನನ್ನ ಕ್ರೂರಗಳಾದ ಕಾಮಕ್ರೋಧಗಳೆಂಬ ಶತ್ರುಗಳನ್ನು ಕೊಂದು, ಪ್ರಕೃತಿಯಿಂದುಂಟಾದ ಸಂಸಾರವೆಂಬ

---

(೨) ಪರಿಯಾಳ್ವಾರ್ ತಿರುಮೊಳಿ ೫. ೧. ೪.

ಬೇಡಿಯನ್ನು ಭೇದಿಸುವದು ನಿನಗೊಂದು ಕಷ್ಟವೇ ಎಂಬ ಭಾಷವು ಸೂಚಿತವು ಕಂಸನಾದರೋ ನಿನಗೆ ಶತ್ರುಸ್ಥಾನದಲ್ಲಿದ್ದವನು, ನಾನಾದರೋ, **ಅಡಿಯೇನೈ** - ನಿನಗೆ ಸರ್ವ ವಿಧದಲ್ಲೂ ಪರತಂತ್ರನಾಗಿ ಶೇಷಭಾವದಿಂದ ದಾಸನಾಗಿರುವೆ ನನ್ನನ್ನು, **ಅಡಿಮೈ ಕೊಳ್ವುದರ್ಕೆ** - ಅಂತಹ ದಾಸಭೂತನ ಅಲ್ಪ ಪ್ರಾರ್ಥನೆಯಾಗಿ ನಾನು ಮಾಡುವ ಅಲ್ಪ ಕೈಙ್ಕರ್ಯವನ್ನು ಪರಿಗ್ರಹಿಸುವದರಲ್ಲಿ, ಶೇಷಭೂತನ ಸ್ವರೂಪಾನುರೂಪವಾದ ವೃತ್ತಿಯನ್ನು ಸ್ವೀಕರಿಸುವದರಲ್ಲಿ, **ಐಯುರವೇಣ್ಡಾ** - ನೀನು ಸ್ವಲ್ಪವೂ ಸಂದೇಹ ಪಡಬೇಡ; ಹೀಗೆ ನನ್ನ ಅಲ್ಪ ಕೈಙ್ಕರ್ಯವನ್ನು ಸ್ವೀಕರಿಸಿದರೇನೇ, ನನಗೆ ಅನುಗ್ರಹವುಂಟಾಗಿ ನನಗೆ ಅನು ಧಾರಕ ಪೋಷಕವಾಗಿ ನನಗೆ ಸತ್ತಾದಾಯಕವಾಗುತ್ತದೆ, ಆ ಕೈಙ್ಕರ್ಯವೇ ಸ್ವಯಂ ಪ್ರಯೋಜನವೇ ವಿನಾ ಇನ್ನು ಯಾವ ಐಹಿಕಾದಿ ಪುರುಷಾರ್ಥಕ್ಕಾಗಲಿ ನಾನು ನಿನ್ನನ್ನೇನಾದರೂ ತೊಂದರೆ ಮಾಡುತ್ತಾನೋ ಎಂದು ಸಂದೇಹ ಪಡಬೇಡ ಎಂಬ ಭಾವವು; **"ನತೇ ದುಃಖಂ ಕರಿಷ್ಯಾಮಿ ನಿವಸಂತೀ ತ್ವಯಾ ಸಹ"** ಎಂದು ಸೀತೆಯು ಶ್ರೀರಾಮನಲ್ಲಿ ಅರಿಕೆ ಮಾಡಿಕೊಂಡಹಾಗೆ, ಶ್ರೀ ಆಳ್ವಾರವರೂ ಪರಮಾತ್ಮನಲ್ಲಿ ಅರಿಕೆ ಮಾಡಿಕೊಳ್ಳುತ್ತಾರೆ, ಅದನ್ನೇ ಮುಂದೆ ವ್ಯಕ್ತಪಡಿಸುತ್ತಾರೆ, **ಕೊರುಶೋರಿನ್ಮೈ** - ಅನ್ನಬಟ್ಟಿ ಇವೇ ಮೊದಲಾದ ಐಹಿಕಗಳನ್ನು, **ವೇಣ್ಡುವದಿಲ್ಲೈ**-ಆಪೇಕ್ಷಿಸುವದಿಲ್ಲವು; ಅದೇನು ಹಾಗೆ ಎಂದರೆ ನಿನಗೆ ಮಾಡುವ ಕೈಙ್ಕರ್ಯ ಸಾಮ್ರಾಜ್ಯದ ಮುಂದೆ, ಯಾವ ಇತರ ಪುರುಷಾರ್ಥಗಳೂ ಇಲ್ಲವು. ದೇಹಕ್ಕಿಂತ ಆತ್ಮ ವಿಲಕ್ಷಣನಾದುದರಿಂದ, ಶಬ್ದಾದಿಗಳು ಪುರುಷಾರ್ಥಗಳಾಗಲಾರವು. ಸ್ವಾವಿ.ಗೆ ಪರತಂತ್ರನಾಗುವದರಿಂದ ಸ್ವಾನುಭವವು ಪುರುಷಾರ್ಥವಲ್ಲವು; ಜೀವಾತ್ಮ ಸ್ವರೂಪವು ನಿತ್ಯಶಾಗಿರುವದರಿಂದ, ಸ್ವರೂಪನಾಶವು ಪುರುಷಾರ್ಥವಲ್ಲವು. ಜ್ಞಾನಗುಣಕನಾಗಿರುವದರಿಂದ ಗುಣನಾಶವು ಪುರುಷಾರ್ಥವಾಗುವದಿಲ್ಲವು. ಹಾಗಾದರೆ ಪುರುಷಾರ್ಥವು ಏನು ಎಂದರೆ ಶೇಷಭೂತನಾದ ಈತನು ಪರಮಾತ್ಮನಿಗೆ ನಿತ್ಯಕೈಙ್ಕರ್ಯವನ್ನು ಮಾಡುವಹಾಗೆ ಅನುಗ್ರಹವೇ ಪುರುಷಾರ್ಥವು; ಅಂತಹ ಪುರುಷಾರ್ಥವನ್ನು ಅನುಗ್ರಹಿಸು ಎಂದು ಬೇಡುತ್ತಾರೆ. **ಅಡಿಮೈಎನ್ರುಮ್** - ದಾಸ್ಯವೆನ್ನುವ, **ಆ**-ಅಂತಹ, **ಕೋಯಿನ್ಮೈಯಾಲೇ** - ಸಾಮ್ರಾಜ್ಯ ಪದವಿಯನ್ನು ಹೊಂದುವದರಿಂದ, **ಅಮೈ**-ನಿರ್ವಾಹವಿಲ್ಲದೆ **ಈ ಅನ್ನ ಬಟ್ಟ** ಮೊದಲಾದವು, ಅವರ ಮಹಿಮೆಯಿಂದ, **ಅಙ್ಗಙ್ಗೇ** - ಅಲ್ಲಲ್ಲೇ, **ಪೋದರುಮ್ ಕೆಂಡಾಯ್** - ಬರುತ್ತದೆ ಅಲ್ಲವೇ, ಇದರಿಂದ ಐಹಿಕಗಳಲ್ಲಿ ಹೃಪನ್ನನಿಗೆ ಈ ಪರಿ ಅಭಿಲಾಷೆಯು ಕೂಡದು. **"ಪರಿತ್ಯಕ್ತಾ ಮಯಾಲಂಕಾ ಮಿತ್ರಾಣಿಚ ಧನಾನಿಚ"** ಎಂದೂ, **ತ್ಯಕ್ತ್ವಾ ಪುತ್ರಾಂಶ್ಚ ದಾರಾಂಶ್ಚ** ಎಂದೂ, ವಿಭೀಷ

೩. ಅನ್ಯ ಯಜನ ಮಾಗಾದೆನ್ನು ಮಿಡತ್ತೈ (೩) "ಉನ್ನಿತ್ತು ಮ ತ್ತೊರು ದೆಯ್ವಮ್ ತೊಳಾಳನೈ ಯಲ್ಲಾಲ್" ಎನ್ರುಮ್,

---

ಜನು ಹೇಳಿದಹಾಗೆ ಎಲ್ಲಾ ಇಹಿಕಗಳೂ ತುಚ್ಛವೂ ಅಲ್ಲದೆ ಸಾಕ್ಷಾ ದ್ಬಂಧಕಗಳು; ಆದುದರಿಂದ ಐಹಿಕಗಳು ಅನುಕೂಲವೇ ಆಗಲಿ ಪ್ರತಿಕೂಲವೇ ಆಗಲಿ, ಅವುಗಳಲ್ಲಿ ಮನಸ್ಸನ್ನಿಡಕೂಡದು. ಸೀತೆಯ ಹಾಗೆ "**ನೈಷಾಪಶ್ಯತಿ ರಾಕ್ಷಸೀಂ ನೈರ್ತಾಪುಷ್ಪಫಲದ್ರುಮಾ**" (ರಾ. ಸುಂ. ೧೬. ೨೫) ಪ್ರತಿ ಕೂಲರಾದ ರಾಕ್ಷಸೀಯರನ್ನೂ ಆಕೆಯು ನೋಡುತ್ತಿರಲಿಲ್ಲವು; ಅನುಕೂಲಗಳಾದ ಮನೋಹರಗಳಾದ ಪುಷ್ಪ ಫಲಗಳುಳ್ಳ ವೃಕ್ಷಗಳನ್ನು **ಕಣ್ಣೆತ್ತಿ** ನೋಡಲಿಲ್ಲವು; ಇನ್ನು ಯಾತನ್ನು ಯಾವಾಗಲೂ ಮನಸಾ ನೋಡುತ್ತಿದ್ದಳೆಂದರೆ "**ವಿಕಸ್ಥಹೃದ ಯಾನೂನಂ ರಾಮಮೇವಾನುಪಶ್ಯತಿ**" ಶ್ರೀರಾಮನನ್ನೇ ಚಿಂತಿಸುತ್ತಾ ನೋಡುತ್ತಿದ್ದಳು ಎಂಬುದು ಹೇಗೋ ಹಾಗೆಯೇ ಪ್ರಪನ್ನನೂ ಇರತಕ್ಕದ್ದೆಂಬುದು ಇದರಿಂದ ಸೂಚಿತವು.

೩. ಅನ್ಯದೇವತಾರಾಧನೆಯು ಕೂಡದು, ಎಂದರೆ ಸ್ವರೂಪವಿರುದ್ಧವು ಎನ್ನುವ ಸಂದರ್ಭವನ್ನು ನಮ್ಮಾಳ್ವಾರ್ರವರು(೩)"ಉನ್ನಿತ್ತು ಮತ್ತೊರು" ಎಂಬ ಪಾಶುರದಲ್ಲಿ ಉಪದೇಶಿಸಿರುತ್ತಾರೆಂದು ಹೇಳಿರುತ್ತಾರೆ. ಪೂರಾ ಪಾಶುರಕ್ಕೂ ಅವರ ಅರ್ಥಕ್ಕೂ ಟಿಪ್ಪಣಿಯ ಪುಟ ನೋಡಿ. ಇಲ್ಲಿ ಪತಿವ್ರತಾ ಧರ್ಮವನ್ನು ಕೈಕೊಂಡಿರುವ ಇವಳು, ಶ್ರೀಕೃಷ್ಣನ ಪಾದಾರವಿಂದಪಲ್ಲಿ ನೀವುಗಳು ಏಕಾಂತಾ ನುಸಂಧಾನಮಾಡಿರಿ; ಆವನೆ ನಮಗೆಲ್ಲಾ ರಕ್ಷಕನೆಂಬ ನಂಬಿಕೆಯಿಂದ ಅನ್ಯ ದೇವತಾ ಸಂಬಂಧವಿಲ್ಲದಹಾಗೆ ಸ್ತೋತ್ರಮಾಡಿರಿ; ಅದರಿಂದ ಆ ಪತಿವ್ರತೆಗೆ ಶಾಂತಿಯುಂಟಾಗುತ್ತದೆಂದು ಹೇಳುತ್ತಾಳೆ—**ಅನನ್ಯ ಯಲ್ಲಾಲ್** "**ನಿತ್ಯಭಾ ವೇನ ಸಂಹೃಷ್ಟಂ ನಶ್ಯಜೇಯಂ**" ಎಂದೂ "**ಅಭಯಂ ಸರ್ವಭೂತೇ ಭ್ಯೋ ದದಾಮಿ**" ಎಂದೂ ಕಂಕಣ ಬದ್ಧನಾಗಿರುವ ಮಹೋದಾರನನು ಬಿಟ್ಟು, ಈಕೆಯು, **ಮತ್ತೊರು ದೇಯ್ವಮ್** - ನಮ್ಮಹಾಗೆಯೇ ಜೀವ ಕೋಟಿಗೆ ಸೇರಿ **ಪ್ರಜಾಪತಿ ಪಶುಪತಿ** ಎಂದು ಸ್ವಾಮಿಯು ಕೊಟ್ಟ ನಾಮಗಳನ್ನು ಧರಿಸಿರುವ ನಮ್ಮಹಾಗೆ ಬದ್ಧರಾದ ದೇವತೆಗಳು ಯಾರನ್ನೂ, **ತೊಳಾಳ್**-ಸ್ತೋತ್ರಮಾಡಲಾರಳು ಎಂದು ಹೇಳಿರುವದರಿಂದ, ಪ್ರಪನ್ನನಿಗೆ ಬೇಕಾದ ಪತಿವ್ರತಾ ಧರ್ಮಕ್ಕೆ ಸಹಾನವಾದ ಅನನ್ಯ ದೈವತ್ವವು ಪ್ರಕಟಿಸಲ್ಪಟ್ಟಿತು. ಪತಿವ್ರತಾ

---

(೩) ತಿರು. ೪. ೬. ೧೦.

(೪)"ತೇವನೆಮ್ಬೆರುಮಾನಕ್ಕಲ್ಲಾರ್ಪ್ಪುಮ್ ಪೂಶನೈಯುಮ್ ತಗುಮೇ"

ಶಿರೋಮಣಿಯಾದ ಸೀತೆಯು ಇದನ್ನು ಪ್ರಕಟಿಸಿರುತ್ತಾಳೆ:—"ಅನನ್ಯದೈವತ್ವೆ ಮಿಯಂ ಕ್ಷಮಾಚ ಭೂಮಾಚ ಶಯ್ಯಾ ನಿಯಮಶ್ಚ ಧರ್ಮೇ" ಹೀಗಿರುವ ದೀಗ ಪತಿವ್ರತಾತ್ವವು ಪ್ರಪನ್ನನೂ ಹಾಗೆಯೇ ಇರಬೇಕು; ಆತನಲ್ಲದೆ ಇನ್ನು ಯಾರನ್ನೂ ಸ್ಮರಿಸಕೂಡದು; ಇಯಂ ಕ್ಷಮಾಚ - ತತ್ಪ್ರಾಪ್ತಿಗೆ ಮುಂಚಿತವಾಗಿ ಪ್ರಾರಬ್ಧಾನುಗುಣವಾಗಿ ಎಷ್ಟು ಕ್ಲೇಶ ಉಂಟಾದರೂ ಸೀತೆಯು ರಾಕ್ಷಸಿಗಳ ಬಾಧೆಯನ್ನು ಸಹಿಸಿದಹಾಗೆ, ಇಯಂ ಕ್ಷಮಾಚ ವಿರಬೇಕು; ಪ್ರಾರಬ್ಧಾನುಗುಣವಾಗಿ ಈ ಲೋಕದ ಸುಖಕ್ಕೆ ಮನಸ್ಸನ್ನು ಕೂಡ ಕೊಡದೆ, ಒಂದುವೇಳೆ ಭೂಮಾಚಶಯ್ಯಾ ತತ್ಪ್ರಾಪ್ತಿಯವರೆಗೂ ಆದರೂ, ಇಷ್ಟವಾಗಿಯೇ ಭಾವಿಸತಕ್ಕದ್ದು; ನಿಯಮಶ್ಚ ಧರ್ಮೇ-ಶಾಸ್ತ್ರಚೋದಿತಮಾರ್ಗಗಳಲ್ಲಿ ನಿತ್ಯನೈಮಿತ್ತಿಕಗಳನ್ನನುಷ್ಠಾನವು; ಇವೆಲ್ಲಾ ಧರ್ಮಗಳೂ ಪತಿವ್ರತೆಯ ಹಾಗೆ ಇರತಕ್ಕದ್ದೆಂಬುದು ಸೂಚಿತವು" ಎನ್ನು - ಎಂಬದಾಗಿಯೂ, ಮತ್ತು

೪. ಈ ಶ್ಲೋಕದಿಂದ ಪುಷ್ಪಾರ್ಚನೆ ಮೊದಲಾದ ಸಕಲಾರಾಧನೆಗಳೂ ಬ್ರಹ್ಮರುದ್ರಾದಿಗಳುಳ್ಳ ದೇವಲೋಕಕ್ಕೂ, ಮನುಷ್ಯಾದಿಗಳುಳ್ಳ ಇಹಲೋಕವೆಲ್ಲಕ್ಕೂ ಕಾರಣಭೂತನಾದ ಸರ್ವೇಶ್ವರನಿಗಲ್ಲದೆ ಇನ್ನು ಯಾರಿಗೂ ಸಲ್ಲದೆಂದು ಹೇಳುತ್ತಾರೆ. ಈ ಪೂರಾ ಪಾಶುರವು ಯಾವ್ವದೆಂದರೆ:—"ತೇವು ಮೆಪ್ಪೊರುಳುಮ್ಪಡೈಕ್ಕ ಪೂವಿಲ್ನಾನ್ಮುಗನೈ ಪಡೈತ್ತ । ತೇವನೆಮ್ಬೆರು ಮಾನುಕ್ಕಲ್ಲಾಲ್, ಪೂವುಂಪೂಶನೈಯುಮ್ ತಗುಮೇ" ತೇವುನುಂ - ರುದ್ರಾದಿಗಳಿಂದ ಸೇರಿದ ಸಮುಸ್ತ ದೇವಜಾತಿಯನ್ನೂ, ಎಪ್ಪೊರುಳುಮ್ - ಮನುಷ್ಯಾದಿ ಸಕಲಗಳಾವ ಇಹಲೋಕ ಪದಾರ್ಥಗಳನ್ನೂ, ಪಡೈಕ್ಕ - ಸೃಷ್ಟಿಸುವದಕ್ಕಾಗಿ, ಪೂವಿಲ್ ನಾನ್ಮುಕನೈ ಪಡೈತ್ತ - ತನ್ನ ನಾಭೀಕಮಲದಲ್ಲಿ ಚತುರ್ಮುಖ ಬ್ರಹ್ಮನನ್ನೇ ಉಂಟುಮಾಡಿದ, ದೇವನ್ ಎಂಬೆರುಮಾನಕ್ಕು ಅಲ್ಲಾಲ್ - ಲೀಲಾಸಕ್ತನಾದ ಅಥವಾ ದೇದೀಪ್ಯಮಾನ ತೇಜೋಮಯನಾದ ಸರ್ವೇಶ್ವರನಿಗಲ್ಲದೆ ಇನ್ನು ಯಾವ ಅನ್ಯದೇವತೆಗಾಗಲಿ, ಪೂವುಮ್ ಪೂಶನೈಯುಮ್ - ಪುಷ್ಪಾರ್ಚನೆಯು ಆರಾಧನೆಯೂ ಸಹ, ತಗುಮೇ - ಸಲ್ಲುತ್ತದೆಯೇ, ಶ್ರೀಕೃಷ್ಣನಿಗೆ ಪೂಜೆಯು ಸಲ್ಲತಕ್ಕದ್ದೇ ವಿನಾ ಶಿಶುಪಾಲನಿಗೆ ತಗುಮೇ ಅಥವಾ ಬ್ರಹ್ಮರುದ್ರಾದಿಗಳಿಗೂ ಕಾರಣ ಭೂತನಾದವನಿಗೆ ಸರಿಯೇ ವಿನಾ ಅತನಿಂದುಂ

(೪) ತಿರು. ೨. ೨. ೪

ಎನ್ರುವುಂ, (೫) "ಈನ್ನೋಳಿರುಕ್ಕ ಮಣ್ಣೈ ನೀರಾಟ್ಟ್ವ" ಎನ್ರುವುಂ

ಟಾದ ಬ್ರಹ್ಮರುದ್ರಾದಿಗಳಿಗೆ ಸರಿಯೇ ಎಂಬ ಭಾವವು ಭೀಷ್ಮರು ರಾಜಸೂಯ ಸಭೆಯಲ್ಲಿ ಹೇಳುತ್ತಾರೆ:—"ಕೋನಾರ್ಹಂ ಮನ್ಯತೇ ಕೃಷ್ಣಂ ಕೋವಾಸ್ಯೇನಂ ನ ಪೂಜಯೇತ್" (ಳ. ೧. ೩೩.) ಯಾರುತಾನೇ ಕೃಷ್ಣನು ಪೂಜೆಗೆ ಅರ್ಹನಲ್ಲನೆಂದು ಹೇಳುವರು? ಯಾರು ತಾನೇ ಅತನನ್ನು ಪೂಜಿಸದೇ ಇರುವರು? ಎಂದು ಹೇಳಿ, ಕೃಷ್ಣನೇ ಪೂಜೆಗೆ ಅರ್ಹನೇ ವಿನಾ ಇತರರಲ್ಲವೆಂದು ಸ್ಥಾಪಿಸಿರುತ್ತಾರೆ; ಅದೇನು ಹಾಗೆ ಎಂದರೆ ಹೇಳುತ್ತಾರೆ:—"ಅಭೂತ ಸಂಪ್ಲವೇಪ್ರಾಪ್ತೇ ಪ್ರಲೀನೇ ಪ್ರಕೃತೌ ಮಹಾ। ಏಕಸ್ತಿಷ್ಠತಿ ಸರ್ವಾತ್ಮಾ ಸತು ನಾರಾಯಣ ಪ್ರಭುಃ" ॥ (ಸಭಾ ಳಂ. ಳಖಿ. ೨೫.) "ಪ್ರಳಯದಲ್ಲಿ ಎಲ್ಲಾ ಭೂತಗಳೂ ಸೂಕ್ಷ್ಮ ದೆಶೆಯಲ್ಲಿ ಲೀನವಾದಾಗ ಒಬ್ಬನಲ್ಲವೇ ಆ ಸೂಕ್ಷ್ಮದೆಶೆಯಲ್ಲಿರುವ ಎಲ್ಲಕ್ಕೂ ಆತ್ಮವಾಗಿ ನಿಂತಿರುವ ಪ್ರಭುವಾದ ನಾರಾಯಣನು, ಅಂತವನೇ ಅವತಾರಿಯಾಗಿ ಶ್ರೀಕೃಷ್ಣನಾಗಿರುವಾಗ ಆತನಿಗಲ್ಲದೆ ಇನ್ನು ಯಾರಿಗೆ ಪೂಜೆಯು ಅರ್ಹವೆಂಬ ತಾತ್ಪರ್ಯವು" ಎನ್ರುವುಂ - ಎಂಬದಾಗಿಯೂ, ಮತ್ತು (೫) ಈನ್ನೋಳಿರುಕ್ಕ- ಶುಶ್ರೂಷೆ ಮಾಡಲು ಯೋಗ್ಯಳಾಗಿ "ಮಾತೃದೇವೋ ಭವ" ಎಂದು ಶ್ರುತಿಯು ಹೇಳುವ ಹಾಗೆ ದೇವತಾ ಸದೃಶಳಾದ ಹೆತ್ತತಾಯಿಯಿರುವಾಗಲೇ, ಮಣ್ಣೈ ನೀರಾಟ್ಟ್ವ - ಮರದಿಂದ ಮಾಡಿದುದಕ್ಕೆ ಅಭಿಷೇಕ ಮಾಡಿಸಿ, ಎನ್ರುವುಂ - ಎಂಬದಾಗಿಯೂ ; ಪೂರಾ ಪಾಶುರವು ಯಾವುದೆಂದರೆ :—

ಓ ಓ ಉಲಗಿನತಾಯಲ್‌ವೇ, ಈನ್ನೊಳಿರುಕ್ಕಮಣ್ಣೈ ನೀರಾಟ್ಟ್ವ, ಪಡೈತ್ತಿ ಡನ್ದ್ರಂಡು ಮಿಳ್ನ್ದ ತಾಳನ್‌ದು ತೇರ್‌ನ್ದು ಉಲಗಳಿಕ್ಕುಮ್ ಮುದರ್ ಪೆರುಮ್ ಕಡವುಳ್ ನಿರ್ಪ, ಪುಡೈಪ್ಪಲ್ಲದಾನರಿ ದೆಯ್‌ವಮ್ ಪೇಸುದಲ್, ತನದು ಪುಲ್ಲರಿವಾಣ್ಮೈ ಪೊರುನ್ದಕ್ಕಾಟ್ಟಿ ಕ್ಕೊಲ್ವನ ಮ್ರುದಲಾ ವಲ್ಲನ ಮುಯಲುಮ್ ಇನ್ನೈಯ ಶೆಯ್‌ಗೈಯಿನ್ ಪುದನ್ ಪಳಿತ್ತೊನ್ನಾ ಮಾಯ ಪಿರುವಿಯುಳ್ ನೀಜ್ಞಾಪ್ಪನ್ ಮಾಮಾಯತ್ತ ಮುನ್ದು ಮಾನಳಿರ್‌ನ್ದೇ ॥

ಅರ್ಥವು :—ಉಲಗು - ಲೋಕವನ್ನು, ಪಡೈತ್ತು - ಆದಿಯಲ್ಲಿ ಸೃಷ್ಟಿಸಿ, ಇಡನ್ದು - ವರಾಹಾವತಾರದಲ್ಲಿ ಅಂಡಭಿತ್ತಿಯಿಂದ ಕೋರೆದಾಡೆಯಿಂದ ಎತ್ತಿ, ಉಣ್ಣು-ಪ್ರಳಯಕಾಲದಲ್ಲಿ ಎಲ್ಲವನ್ನೂ ನುಂಗಿ ಎಂದರೆ ಸೂಕ್ಷ್ಮದೆಶೆಯಲ್ಲಿ ತನ್ನಲ್ಲಿ

(೫) ತಿರು. ೨. ೨. ೪.

(೬)"**ಮುತ್ತಿ ಜಿಕ್ಕೋರ್ ಪುದುದ್ದೆಯ್ವನುಮ್ ಕೊಣ್ಡಾಡುನ್ತೊಣ್ಡೀರ್ ಪೆತ್ತ**

ವಿಕೇಭವಿಸಿಕೊಂಡ', **ವುಮಿಳ್ನ್ದು**-ಪುನಃ ಅವಾಂತರೆ ಸೃಷ್ಟಿದಶೆಯಲ್ಲಿ ಹೊರಗೆ ಹಾಕಿ, **ಅಳನ್ದು** - ತ್ರಿವಿಕ್ರಮಾವತಾರದಲ್ಲಿ ಲೋಕವನ್ನೆಲ್ಲಾ ಅಳೆದು ಆಕ್ರಮಿಸಿ, **ತೇರ್ನ್ದು**-ಅನಂತರ ರಕ್ಷಣೋಪಾಯವನ್ನು ಚಿಂತಿಸಿ, **ಅಳಿಕ್ಕುಮ್** - ರಕ್ಷಿಸುವ, **ಮುದಲ್** - ಆದಿಕಾರಣನಾಗಿ, **ಪೆರುಂ ಕಡವುಳ್**-ಪರದೇವತೆಯಾದ ಶ್ರೀಮನ್ನಾರಾಯಣನು, **ನಿರ್ಪ** - ಸರ್ವ ಶರೀರಿಯಾಗಿರುವಾಗ, **ಅನನ್ಯೈ ವಿಟ್ಟು**-ಅಂತಹ ಕರುಣಾಸಾಗರನಾಗಿ ಸರ್ವಶಕ್ತನಾಗಿರುವನನ್ನು ಬಿಟ್ಟು, **ಪುಡ್ಯೈ**-ವಿಭೂತಿ ಪ್ರಕರಣಗಳಲ್ಲಿ ಹೇಳಲ್ಪಟ್ಟವನಾಗಿ, **ಪಲ**-ಕೆಲವು ಪ್ರಕಾರವುಳ್ಳವನಾಗಿ, **ತಾನ್**-ಸರ್ವೇಶ್ವರನನ್ನೇ ಆಶ್ರಯಿಸಬೇಕಾಗಿರುವ ತಾನೆ, **ಅರಿ**-ತಿಳಿದ, **ದೆಯ್ವನುಮ್**-ದೇವತೆಗಳನ್ನು, **ಪೇಣುದಲ್** - ಆದರಿಸೋಣವು, **ತನದು** - ತನ್ನ, **ಪುಲ್** - ಕ್ಷುದ್ರವಾದ, **ಅರಿವು** - ಬುದ್ಧಿಯು, ಎಂದರೆ ಅಜ್ಞಾನವು ಎಂಬರ್ಥವು, **ಆಣ್ಮೈ ಪೊರನ್ದು ಕಾಟ್ಟಿ** - ದೊಡ್ಡವರ ಮನಸ್ಸಿಗೆ ತಾಕುವಹಾಗೆ ಪ್ರಕಾಶಿಸಿ, **ಈನ್ರೋಳ್** - ಹೆತ್ತ ಜನನಿಯು, **ಇರುಕ್ಕ** - ಬದುಕಿರುವಾಗಲೇ, ಅವಳನ್ನು ಅನಾದರಿಸಿ, **ಮಣ್ಣೈ ನೀರಾಟ್ಟಿ** - ಒಂದು ಮೃತದಿಂದ ಮಾಡಿದ ಬೊಂಬೆಗೆ ಅಭಿಷೇಕಾದಿ ಉಪಚಾರಗಳನ್ನು ಮಾಡಿ, **ಶೆಯ್ಗೈ** - ಶ್ರಾದ್ಧಾದಿ ಆರಾಧನರೂಪದ ಅನುಷ್ಠಾನವು, **ಕೊಲ್ವನ ಮುದಲಾ** - ಹಿಂಸೆಯೇ ಮೊದಲಾದ, **ಅಲ್ಲನ** - ನಿಷಿದ್ಧಗಳಾವ, **ಮುಯಲುನುಮ್ ಇನ್ಯೈಯಾ** - ಇಂತಹ ಪ್ರಯತ್ನಕ್ಕೆ ಸಮಾನವಾದುದು, **ಅಳಿ** - ಆ ದೇವತೆಗಳು ಕೊಡುವ ಫಲವಾದರೋ, **ತುನ್ಬಿನ್ಬು** - ದುಃಖ ಮಿಶ್ರವಾದ ಸುಖವು; ಆದುದರಿಂದ, ಅಂತಹ ಕ್ಷುದ್ರ ದೇವತೆಗಳ ಆಶ್ರಯಣವು, **ತೊಲ್** - ಅನಾದಿಯಾಗಿ ಬಂದ, **ಮಾ** - ಮಹತ್ತಾಗಿ ದುರ್ನಿವಾರವಾದ, **ಮಾಯನುಮ್** - ಆಶ್ಚರ್ಯಕರವಾದ, **ಪಿರಿನಿಮುಳ್**-ಸಂಸಾರ ದೆಶೆಯಿಂದ, **ನೀಜ್ಗಾ**-ಬಿಡುಗಡೆಯಿಲ್ಲದೆ, **ಪಲ್** - ಅನೇಕ ವಿಧವಾದ, **ಮಾ** - ದುರ್ನಿವಾರವಾಗಿ ಮಹತ್ತಾದ, **ಮಾಯ ತ್ತು** - ಮೋಹಜನಕಗಳಾದ ಶಬ್ದಾದಿ ವಿಷಯಗಳಲ್ಲಿ, **ನಳಿರ್ನ್ದು** - ದೂಡಿಸಿಕೊಂಡು, **ಅಳುನ್ಬುಮಾ**-ಕೆಟ್ಟುಹೋಗಲು **ಕಾರಣವಾಗುತ್ತದೆ**, **ಉಲಗಿನದು** - ಲೋಕದ, **ಇಯಲ್ವು** - ಸ್ವಭಾವವು, **ಓಓ** - ಅಹೋ ಎಷ್ಟು ಆಶ್ಚರ್ಯವಾದುದು, ಹೀಗೆ ಸರ್ವ ಶೇಷಿಯಾಗಿ ಪರೋಪಕಾರನಾಗಿ ಆಶ್ರಿತ ಸಂರಕ್ಷಣೆಯಲ್ಲಿ ಬದ್ಧಾದರನಾಗಿರುವ ಸರ್ವೇಶ್ವರನನ್ನು ಸರ್ವಕಾಲದಲ್ಲೂ ಆರಾಧನೆ

(೬) ಪೆರಿ. ತಿರು. ೧೧. ೬. ೬.

ತ್ತಾಯಿರುಕ್ಕ ವುಣ್ಣೈ ವೆನ್ನೀರಾಟ್ಟುತಿರೋ ಮಾಟ್ಟಾಹ ತಗವತ್ತಿರೆ" ಎನ್ನು ವು, ಇತ್ಯಾದಿಗಳಾಲೇ ಅರುಳಿಚ್ಚಿಯ್ದಾರ್ಗಳ್. ಸಪ್ತರ್ಷಿ ಸಂವಾದತ್ತ

ವೊದಲಾದವನ್ನು ಸ್ತೋತ್ರಮಾಡುವದನ್ನು ಬಿಟ್ಟು, ಅಸಮರ್ಥರಾಗಿ ಅಜೇತಸಪ್ರಾಯರಾದ ಅನ್ಯದೇವತಾರಾಧನೆಯಲ್ಲಿ ಪ್ರವರ್ತಿಸಿ, ಈ ಸಂಸಾರ ದೆಶೆಯಲ್ಲಿ ದುಃಖಾನುಭವದಲ್ಲೇ ನರಳುವಹಾಗೆ ಅನ್ಯಾಯವಾಗಿ ಮಾಡಿಕೊಳ್ಳುತ್ತಾರೆಯೇ, ಈ ಲೋಕದ ಸ್ವಭಾವವೇ ಹೀಗೆಯೇ, ಎಂಬದಾಗಿ ಶೋಕಿಸುತ್ತಾರೆ. "ವುತ್ತಿ ಜಟ್ಟೋರ್" ಇತ್ಯಾದಿ (ಪೆರಿ. ೧೧. ೬. ೬) ಪೇಯಿರುಕ್ಕು ನೆಡುವೆಳ್ಳುಮ್ ಪೆರುನಿಶುಂಬಿನ್ ವಿಳಾಕೊಡಿ ಪ್ಪೆರುಗು ಕಾಲನುಮ್ । ತಾಯಿರುಕ್ಕುಮ್ ವಣ್ಣುಮೇಯುವೈ ಮೃತ್ತ ವಯಿಲ್ಗಿರುತ್ತಿ ಯುಯ್ಯಕ್ಕೊಂಡಾರ್ । ಪೋಯಿರುಕ್ಕವುಲ್ಗಿಜ್ಞೋರ್ ಪುದುದ್ದೆಯ್ವವುಮ್ ಕೊಂಡಾಡುಂ ತೊಣ್ಡೀರ್ । ಪೆಱ್ಱ ತಾಯಿರುಕ್ಕ ವುಣ್ಣೈ ವೆನ್ನೀರಾಟ್ಟುದಿರೋ ಮಾಟ್ಟಾಪ ತಗವನ್ಱಿರೇ॥" ಇದರರ್ಥವು ಪೇಯಿರುಕ್ಕುಮ್ ಎನ್ನುವಿತ್ಯಾದಿಗಳಾಲೇ - ಎಂಬಿನೇ ಮೊದಲಾದ ಪಾಶುರಗಳ ಮೂಲಕ, ಅರುಳಿಚ್ಚಿಯ್ದಾರ್ಗಳ್ - ಆಳ್ವಾರುಗಳು ಹೇಳಿರುತ್ತಾರೆ. ಮುಂಬೆ ಆಳ್ವಾರುಗಳ ದಿವ್ಯ ಸೂಕ್ತಿ ಸ್ಮರಣಾಗಳು ಮಾತ್ರವೇ ಅಲ್ಲದೆ ಅನ್ಯದೇವತಾ ಯಜನವನ್ನು ಮಹರ್ಷಿಯೂ ನಿಂದಿಸಿರುತ್ತಾರೆಂದು ಭಾರತ ಅನುಶಾಸನ ಪರ್ವದಲ್ಲಿ ಸಪ್ತರ್ಷಿಗಳ ಸಂವಾದದಲ್ಲಿ ಕಶ್ಯಪ ಮಹರ್ಷಿಯ ಶಪಥವನ್ನು ಉದಾಹರಿಸುತ್ತಾರೆ. ಪ್ರಕರಣವೇನೆಂದರೆ, ಸಪ್ತರ್ಷಿಗಳಾದ ಅತ್ರಿ, ಅರುಂಧತೀ ಸಮೇತರಾದ ವಸಿಷ್ಠರು, ಕಶ್ಯಪ, ಭರದ್ವಾಜ, ಗೌತಮ, ವಿಶ್ವಾಮಿತ್ರ, ಜಮದಗ್ನಿ, ಮೊದಲಾದವರು ವನದಲ್ಲಿ ಬಹು ಕ್ಷುತ್ತಿನಿಂದ ಪೀಡಿತರಾಗಿ ಸಂಚರಿಸುತ್ತಿರುವಾಗ ಬಹುಸ್ಥೂಲ ಶರೀರಕನಾಗಿ ಶುನಸ್ಸಖನೆಂಬ ಹೆಸರಿನಿಂದ ಸನ್ಯಾಸವೇಷಧಾರಿಯಾದ ಇಂದ್ರನನ್ನು ಕಂಡು, ಆತನೊಂದಿಗೆ ಎಲ್ಲರೂ ಆಹಾರವನ್ನು ಹುಡುಕುವರಾಗಿ ಒಂದು ಪದ್ಮಸರಸ್ಸನ್ನು ಸೇರಿದರು ಅಲ್ಲಿ ಅಗ್ನಿಸಂಭೂತಳಾದ ಒಬ್ಬ ರಾಕ್ಷಸಿಯು ಇರಲು, ಇವರುಗಳು ಆಕೆಯನ್ನು ಒಂದೊಂದು ಕಮಲಗೆಡ್ಡೆಯನ್ನು ಕೊಡಬೇಕೆಂದು ಪ್ರಾರ್ಥಿಸಲು, ಆಗ ರಾಕ್ಷಸಿಯು ನಿಮ್ಮ ಹೆಸರುಗಳೇನು, ಹಾಗೆ ಹೆಸರಾಗಲು ಕಾರಣವೇನೆಂದು ಕೇಳಲು, ಎಲ್ಲರೂ ಕಾರಣಸಹಿತವಾಗಿ ತಮ್ಮ ಹೆಸರನ್ನು ಹೇಳಿ ಒಂದೊಂದು ತಾವರೆ ಗೆಡ್ಡೆಯನ್ನು ಪಡೆದರು. ಶುನಸ್ಸಖನು ತನ್ನ ಹೆಸರನ್ನು ಹೇಳಿದಾಗ, ಆದು ರಾಕ್ಷಸಿಗೆ ಸಮರ್ಪಕವಾಗದಿರಲು, ಇಂದ್ರನು ಕುಪಿತನಾಗಿ, ತನ್ನ ತ್ರಿದಂಡದಿಂದ ಹೊಡೆಯಲು, ಆಕೆಯು ಭೂಮಿಯಲ್ಲಿ ಬಿದ್ದು ಭಸ್ಮವಾದಳು. ಅನಂತರ ಮಹರ್ಷಿಗಳು ಆ ಸರೋವರದಲ್ಲಿ ಮಿಂದು

ಲುಮ್, (೭) "ವಿಷ್ಣುಂ ಬ್ರಹ್ಮಣ್ಯ ದೇವೇಶಂ ಸರ್ವ ದೇವ (ಲೋಕ) ನಮಸ್ಕೃತನುಮ್ । ತ್ರೈಲೋಕ್ಯ ಸ್ಥಿತಿ ಸಂಹಾರ ಸೃಷ್ಟಿಹೇತುಂ ನಿರೀಶ್ವರಮ್ । ಆಧಾತಾರಂ ವಿಧಾತಾರಂ ಸಂಧಾತಾರಂ ಜಗಪ್ಗುರುಮ್ । ವಿಹಾಯ ಸ ಭಜತ್ಯ ಸ್ಯಂ ಬಿಸಸ್ತೈನ್ಯಂ ಕರೋತಿ ಯಃ ॥ ವಿಷ್ಣು ಧರ್ಮ ಪರೋ ನ ಸ್ಯಾತ್ ವಿಷ್ಣುಧರ್ಮ ಪರಾಙ್ಮುಖಃ । ಕುಧರ್ಮ ವ್ರತ (ವೃತ್ತ) ಶೀಲ ಸ್ಸ್ಯಾತ್ ಬಿಸಸ್ತೈನ್ಯಂ ಕರೋತಿಯಃ" ॥ ಎನ್ನುವ್ ಶೊಲ್ಲಪಟ್ಟದು.

ಆಹ್ನಿಕಗಳನ್ನು ತೀರಿಸಿ ಕ್ಷುದಾತುರರಾಗಿ ಬಂದು ನೋಡಲು ತಾವರೇಗೆಡ್ಡೆಗ ಳೊಂದೂ ಇರಲಿಲ್ಲವು ಆಗ ಆ ಮಹರ್ಷಿಗಳೆಲ್ಲಾ ಶಪಥಮಾಡುತ್ತಾರೇನೆಂದರೆ ಯಾವನು ಈ ತಾವರೇಗೆಡ್ಡೆಗಳ ಚೌರ್ಯವನ್ನು ಮಾಡಿರುತ್ತಾನೋ ಅವನು ಇಂತಹ ಅನರ್ಥಗಳನ್ನು ಅನುಭವಿಸಲಿ, ತಾವು ಎಂದಿಗೂ ಈ ಚೋರಕೃತ್ಯವನ್ನು ಮಾಡಲಿಲ್ಲವೆಂಬದಾಗಿ ಹೇಳುವ ಪ್ರಕರಣದಲ್ಲಿ ಮಹರ್ಷಿ ಕಶ್ಯಪರು ಮಾಡುವ ಶಪಥವು ಇದು. ಆಗ ಇಂದ್ರನು ಆ ಮಹರ್ಷಿಗಳನ್ನು ಕುರಿತು ಈ ರಾಕ್ಷಸಿಯು ನಿಮಗೆ ತೊಂದರೆ ಮಾಡಿಯಾಳೆಂಬ ಭಯದಿಂದ ನಿಮ್ಮೊಂದಿಗೆ ಶುನಸ್ಸಖನಾಗಿ ಬಂದು ಆಕೆಯನ್ನು ಕೊಂದು ನಿಮ್ಮನ್ನು ರಕ್ಷಿಸಿರುವೆನು. ನಿಮ್ಮ ರಕ್ಷಣಾರ್ಥವಾಗಿ ನಿಮ್ಮೊಂದಿಗೇ ಇದ್ದೆನು. ಬಿಸಸ್ತೈನ್ಯವನ್ನು ನಿಮ್ಮ ಪರೀಕ್ಷಾರ್ಥವಾಗಿ ಮಾಡಿದವನು ನಾನೇ, ನೀವು ಯಾರೂ ಅಲ್ಲವು ಇದರಿಂದ ನೀವು ತಿಳಿಯತಕ್ಕದ್ದೇನೆಂದರೆ ಎಂತಹ ಕಷ್ಟವಾವ ಅವಸ್ಥೆಯಲ್ಲಾಗಲಿ ಲೋಭವನ್ನು ಬಿಡತಕ್ಕದ್ದು ಎಂದು ಹೇಳಿ ಹೊರಟುಹೋದನು. "ಯಃ - ಯಾವನು, 'ಬಿಸಸ್ತೈನ್ಯಂ ಕರೋತಿ - ತಾವರೆ ಗೆಡ್ಡೆಯ ಕಳುವನ್ನು ಮಾಡಿರುತ್ತಾನೋ, ಸಃ - ಅವನು, "ಬ್ರಹ್ಮಣ್ಯ ದೇವೇಶಂ - ಬ್ರಾಹ್ಮಣ ದೇವತೆಗಳು, ಇವರುಗಳಿಗೆಲ್ಲಾ ಸ್ವಾಮಿಯಾದ, ಸರ್ವದೇವ ನಮಸ್ಕೃತಮ್ - ಬ್ರಹ್ಮರುದ್ರೇಂದ್ರಾದಿ ಸಕಲದೇವತೆಗಳಿಂದಲೂ ನಮಸ್ಕೃತನಾದ, ತ್ರೈಲೋಕ್ಯಸ್ಥಿತಿ ಸಂಹಾರ ಸೃಷ್ಟಿ ಹೇತುಮ್- ಮೇಲಿನ ಏಳುಲೋಕ, ಮಧ್ಯದ ಏಳುಲೋಕ ಕೆಳಗಿನ ಏಳುಲೋಕ ಇವುಗಳು ತ್ರಿಲೋಕಗಳು, ಇವುಗಳ ಸೃಷ್ಟಿ ಸ್ಥಿತಿ ಪ್ರಳಯಗಳಿಗೆ ಕಾರಣಭೂತನಾದ, ನಿರೀಶ್ವರಂ - ತನಗೆ ಯಾರೂ ನಿಯಾಮಕರಿಲ್ಲದೆ ಸರ್ವನಿಯಾಮಕನಾದ, ಆಧಾತಾರಂ - ಅಸಮಂತ್ ಧಾರಕಂ, ಎಲ್ಲದಕ್ಕೂ ಆಧಾರಭೂತನಾಗಿರುವ, ಸ್ಥಿತಿ ನಿಯಾಮಕನಾದ, ವಿಧಾತಾರಂ – ಸೃಷ್ಟಿಕರ್ತನಾದ, ಸಂಧಾತಾರಂ – ಸಂ - ಏಕೀಕೃತ್ಯ ಧಾತಾರಂ ಎಂದರೆ ಪ್ರಳಯವನ್ನುಂಟುಮಾಡುವವನಾದ, ಜಗ

---

(೭) ಭಾರ. ಅನು. ೧೪೨- ೫೯-೬೧.

೪. ಅನ್ಯಕೀರ್ತನ ನಾಗಾದೆನ್ನು ನಿಡತ್ತೈ (೧) "ನಾಯನನ್ನೈ ಯಲ್ಲದು ನಾಳ್ತ್ತಾದು"

ದ್ಗುರುಂ - ಲೋಕಕ್ಕೆಲ್ಲಾ ಆದಿ ಗುರುವಾಹ, **ವಿಷ್ಣುಂ**-ಶ್ರೀ ಮಹಾವಿಷ್ಣುವನ್ನು, **ವಿಹಾಯ** - ಬಿಟ್ಟು, **ಅನ್ಯಂ** - ತುಚ್ಛವಾದ ಅನ್ಯದೇವತೆಯನ್ನು, **ಭಜತು**-ಭಜಿಸಲಿ ; ತಾವರೇದಂಟನ್ನು ಕಳವು ನಾಡಿದವನಿಗೆ ಸರ್ವೇಶ್ವರನನ್ನು ತ್ಯಜಿಸಿ ಅನ್ಯದೇವತಾ ಭಜನನಮಾಡಿದ ಮಹಾದೋಷಪ್ರಾಪ್ತಿಯುಂಟಾಗಲಿ ಎಂಬ ಭಾವವು ಇದರಿಂದ ಅನ್ಯದೇವತಾ ಭಜನವು ತುಂಬಾ ದೋಷಾವಹವಾದುದೆಂದೂ ಮಾತಾ ಪಿತೃ ಗುರುವಧೆಗಳಿಗೆ ಸಮಾನವಾದ ಮಹಾ ಪಾತಕವೆಂದೂ ಹೇಳಿದಂತಾಯಿತು, **ಯಃ** - ಯಾವನು, **ಬಿಸಸ್ಯೈನ್ಯಂಕರೋತಿ** - ಕಮಲಗಳ ಕಳವನ್ನು ಮಾಡಿರು, **ತ್ತಾನೋ**, **ಸಃ** - ಅವನು, **ವಿಷ್ಣುಧರ್ಮ ಪರನು, ನ ಸ್ಯಾತ್** - ಆಗಬೇಡ ಇಷ್ಟೇ ಅಲ್ಲವು, ವಿಷ್ಣು ಧರ್ಮಕ್ಕೆ **ಪರಾಙ್ಮುಖನೂ** ಆಗಲಿ, **ಕುಧರ್ಮ (ವೃತ್ತ) ವ್ರತಶೀಲಸ್ಯಾತ್**-ಕೆಟ್ಟಮಾರ್ಗಗಳಲ್ಲಿ ಅತನಿಗೆ ಪ್ರವೃತ್ತಿಯುಂಟಾಗಲಿ; ಎಂದರೆ ತಾನು ಕಳ್ಳತನ ಮಾಡಿದ್ದರೆ ತನಗೆ ಈ ಮಹಾದೋಷಗಳೆಲ್ಲಾ ಪ್ರಾಪ್ತವಾಗಲಿ ಎಂಬ ಭಾವವು."

೪ ಅನ್ಯಕೀರ್ತನ ನಾಗಾದೆನ್ನು ನಿಡನುಂ - ಸರ್ವೇಶ್ವರನಲ್ಲದ ಇತರರ ಸಂಕೀರ್ತನವು ಪ್ರಪನ್ನನಿಗೆ ಕೂಡದೆಂಬ ಸಂದರ್ಭದಲ್ಲಿ, **"ನಾಯನನ್ನೈ ಯಲ್ಲದು ನಾಳಿತ್ತಾದು"** ಎಂಬಿಂದ್ರಿಯವು ಆ ಸರ್ವೇಶ್ವರನನ್ನಲ್ಲದೆ ಇನ್ನು ಯಾರನ್ನೂ ಸ್ತೋತ್ರಮಾಡಲಾರದು ಎಂದರೆ ಸರ್ವ ವಿಧದಲ್ಲೂ ಮಹೋಪಕಾರಕನಾದ ಸರ್ವೇಶ್ವರನನ್ನು ಬಿಟ್ಟು ಅನ್ಯರನ್ನು ಸ್ತೋತ್ರಮಾಡುವದು ನಿಂದಿತವು ಎಂಬ ಭಾವವು ಸರ್ವೇಶ್ವರನು ಕೃಪಯಾ ದಯಪಾಲಿಸಿದ ಕರಣ ಕಳೇಬರಗಳಿಗೆ ಸಾರ್ಥಕ್ಯವು. ಅನನ್ಯಾರ್ಹತೆಯಿಂದ ಆತನಿಗೇ ಪ್ರಯೋಜನವಾಗಿರುವದೇ ಎಂದು ಹೇಳುತ್ತಾರೆ. **"ನಾಯನನ್ನೈ ಯಲ್ಲದು ನಾಳ್ತ್ತಾದು, ಕೈಯುಲಗೆನುಂ ತಾಯನನ್ನೈ ಯಲ್ಲದು ತಾನ್ಪೊಳಾ ; - ಹೇಯ್ತ್ತುಲೈ ಎಱ್ಱಾ ಣಾಗವುಣ್ಣಾನುರುವೋಡು ಸೇರಲ್ಲಾಲ್ ಕಾಣಾಕಣ್, ಕೇಳಾಶೆವಿ** ||೧೧||

ನಾಯನನ್ನೈ ಯಲ್ಲದುನಾಳ್ತ್ತಾದು - ವಾಕ್ಯ ಅತನನ್ನಲ್ಲದೆ ಇತರ ದೇವತೆಗಳನ್ನು ಸ್ತೋತ್ರವನ್ನು ಮಾಡದು ; **ಕೈಯು ಉಲಕಂ ತಾಯನನ್ನೈಯಲ್ಲದು**-ತ್ರಿವಿಕ್ರಮನಾಗಿ ಅಳೆದವನಲ್ಲದೆ ಯಾರನ್ನೂ, **ತಾನ್ಪೊಳಾ** - ನಮಸ್ಕರಿಸಲಾ

(೧) ಮುದಲ್ ತಿರುವಂದಾದಿ. ೧೧.

ದಿರದು ಎಂದರೆ ಆತನನ್ನು ನಮಸ್ಕರಿಸದೆ ನಿಲ್ಲಲಾರದು, **ಹೇಯ್ ಇತ್ಯಾದಿ** - ರಾಕ್ಷಸಿಯಾದ **ಪೂತನಿ**ಯು ಸ್ತನದ ವಿಷವನ್ನುಂಡವನ ಪರಮ ಲಾವಣ್ಯಯುಕ್ತ ದಿವ್ಯ ಮಜ್ಜನ ವಿಗ್ರಹವನ್ನಲ್ಲದೆ ಬೇರೆ ಯಾವುದನ್ನೂ ನೋಡದು ಎಂದರೆ ಆತನ ದೇಹ ಲಾವಣ್ಯವು ಕಣ್ಣನ್ನು ಆಕರ್ಷಿಸುತ್ತದೆ ಎಂಬ ಭಾವವು; ಹಾಗೆಯೇ ಶಿವಿ. ಕವಿಯೂ, ಆತನ **ಪೇರಲ್ಲಾಲ್**-ದಿವ್ಯ ನಾಮಗಳನ್ನಲ್ಲದೆ, ಬೇರೆ ಯಾವುದನ್ನೂ, **ಕೇಳಾ** - ಕೇಳದು, **ಅಲ್ಲಾಲ್**-ಎನ್ನುವದರಿಂದ ಐಹಿಕ ಕಾಮುಗಳಾದ ಸುಂದರ ಸ್ತ್ರೀಯನ್ನು ನೋಡೋಣ ಆಕೆಯ ಸಂಗೀತವನ್ನು ಕೇಳೋಣ ಇಂತಾಪ್ಪರಲ್ಲಿ ಮನಸ್ಸಿಲ್ಲವೆಂಬ ಭಾವವು. ಆತನು **ಹೃಷೀಕೇಶ**ನಾದುದರಿಂದ ನನ್ನ ಸರ್ವೇಂದ್ರಿಯಗಳನ್ನೂ ಆಕರ್ಷಿಸಿರುತ್ತಾನೆಂಬ ಭಾವವು. ೧೨೪೨-೪೩ನೆಯ ಪುಟಗಳನ್ನು ನೋಡಿ.

(೨) "**ಶೊನ್ನಾಲ್ ವಿರೋಧ ಮಿದಾಗಿಲು ಞೂಲ್ಲುರ್ವ ಕೇಣ್ಮಿನೋ ।**
ವೆನ್ನಾವಿಲಿ ಕವಿಯಾ ನೊರುವರ್ಕ್ಕುಜಿಪ್ಪೊಡುಕ್ಕಿಲ್ಲೇ ।
ತೆನ್ನಾತೆನಾನೆನ್ರು ವಣ್ಡು ಮುರಲ್ ತಿರುವೇಜ್ಗಡ ।
ತ್ತೆನ್ನಾನ್ನೈಯೆನ್ನಪ್ಪ ನೆನ್ಪೆರುಮಾನುಳನಾಗವೇ ॥೧॥

"**ಶೊನ್ನಾಲ್**-ಹಿತವನ್ನು ಹೇಳಿದರೂ, **ವಿರೋಧಮು**ಂ - ಹಿತವೆಂದರಿಯದೆ ಅಹಿತವಾದುದೆಂದು ಭಾವಿಸುವರು; ಆತ್ಮಾದಾಸನು, ವಿಷ್ಣುವು ಸರ್ವೇಶ್ವರನ ಎಂಬ ಪ್ರಹ್ಲಾದೋಕ್ತಿಯು ತಂದೆಯಾದ ಹಿರಣ್ಯಕಶಿಪುವಿಗೆ "**ವಕ್ಷ್ಯಾಮಿ ಸಾರಭೂತಂ ತನ್ಮಾಜ್ಞಯಾ**"(**ವಿ ಪು. ೧.೧೭.೧೪**)ಎಂದು ಹೇಳಿರುವಹಾಗೆ,ಸಾರಭೂತವಾದುದೂ ಸಹ, ಅಹಿತವು; ಹಾಗೆಯೇ ಸರ್ವೇಶ್ವರನಾದ ರಾಮನೊಂದಿಗೆ ವೈರವು ಬೇಡ,ಸೀತೆಯನ್ನು ಸಮರ್ಪಿಸಿ ಶರಣಾಗತನಾಗಿ ಸುಖವಾಗಿ ಬಾಳು ಎಂದು ಹೇಳಿದ ತಮ್ಮನ ನುಡಿಯು ರಾವಣನಿಗೆ ಅಹಿತವಾಯಿತು,ಹಾಗೆಯೇ ಸರ್ವೇಶ್ವರನು ತನ್ನನ್ನು ಸ್ತುತಿಸಲೆಂದು ಉದಾರ ಭಾವದಿಂದ ಕೊಟ್ಟ ನಾಲಿಗೆಯಿಂದ ತುಚ್ಛರಾದ ರಾಜರು, ತುಚ್ಛರಾದ ಅನ್ಯದೇವತೆಗಳು ಇಂತವರನ್ನು ಸ್ತುತಿಸಬೇಡಿರಿ, ಓ ಕವಿಗಳೇ ತಿರುಮಲೆಯಲ್ಲಿರುವ ತಿರುವೇಜ್ಗಡ ಸ್ವಾಮಿಯನ್ನೇ ಸ್ತುತಿಸಿ.ಎಂದು ಹೇಳಿದರೆ ಅದು ನಿಮಗೆ **ವಿರೋಧವು** ಎಂಬ ಭಾವವು; ಆದರೂ **ಶೊಲ್ಲುವಿರ್ ಕೇಣ್ಮಿನೋ** ಆದರೂ ನೀವು ಈಗ ಮಾಡುತ್ತಿರಿವದು ನಿಮಗೆ ಸ್ವರೂಪನಲ್ಲವೆಂದು ಭಾವಿಸಿ, ನಿಮಗೆ ಹಿತವಾಡಲು ಪ್ರೇರಿತನಾಗಿ ಪ್ರಹ್ಲಾದನು ಅಸುರ ಪುತ್ರರಿಗೆ ಹಿತಹೇಳಿದ ಹಾಗೆ ಹೇಳುವೆನು, ದಯವಿಟ್ಟು ಲಾಲಿಸಿ, ಜ್ಞಾನಿಗಳಾದ ಪ್ರಪನ್ನರಾಗಿರಲಿ, **ವಣ್ಡು** - ಕೀಟವಾದ ಭ್ರಮರವೂ ಕೂಡ ಮಧುಪಾನಮಾಡಿ, **ತೆನ್ನಾ ತೆನ್ನಾ ಮುರಲ್** ಎಂದು ಝೇಂಕಾರಮಾಡುತ್ತಿರುವ, **ತೆನ್ನಾ** ಎಂದರೆ ತೇನ

(೨) "ಶೊನ್ನಾಲ್ ವಿರೋಧಮ್" ಇತ್ಯಾದಿಗಳಿಲೇ ಅರುಳಿಚ್ಚೆಯ್ದಾರ್.

ನಾ-ನಮ್ಮಗಳ ನಾಲಿಗೆಯು ಶ್ರೀನಿವಾಸನನ್ನು ಸ್ತುತಿಸಿದುದರಿಂದ, ಜೇನುತುಪ್ಪವು ಎಂದೇನಾದರು ಹೇಳುತ್ತವೆಯೋ ಎಂಬ ಹಾಗೆ ಝೇಂಕರಿಸುವ ಎಂಬ ಭಾವವು. ಅಥವಾ ತಮಗೆ ಅನ್ಯತ ಸದೃಶ ಮಧುವನ್ನಿತ್ತುದರಿಂದೇನಾದರೂ ಸ್ತೋತ್ರಮಾಡುತ್ತವೋ ಎಂಬುವಹಾಗೆ ಇಂಪಾದ ಶಬ್ದಮಾಡುತ್ತಿರುವ ತಿರುವೇಜ್ಕಡತ್ತು-ತಿರು ಮಲೆಯಲ್ಲಿರುವವನಾಗಿ, ಎನ್ನಾನೆ-ನನ್ನ ಸ್ತುತಿಗೆ ವಿಷಯನಾಗಿ, ಎನ್ನಪ್ಪ - ನನಗೆ ಮುಕ್ತೋಪಕಾರಕನಾಗಿ ದಾಯಧನರೂಪದಲ್ಲಿ ಪರಮ ನಿಶ್ರೇಯಸ್ಸನ್ನು ಕೊಡುವತಂದೆಯಾಗಿ, ಎಂಬೆರುಮಾ - ನನಗೆ ಸ್ವಾಮಿಯಾಗಿ ಪರಮ ಪ್ರಾಪ್ಯನಾದ ಶ್ರೀನಿವಾಸನು, ಉಳನಾಕ-ನನ್ನ ಈ ಪಾಶುರಗಳ ರೂಪವಾದ ಗಾನವನ್ನು ಕೇಳುವದಕ್ಕಾಗಿಯೇ ಬಿಜಮಾಡಿಸಿರುವಾಗ, ಭಕ್ತನ ಗಾನವನ್ನು ಕೇಳುವದೇ ತನಗೆ ಸ್ವರೂಪವೆಂದು ಭಾವಿಸಿರುವನೆಂಬುದು ಸೂಚಿತವು, ಹೀಗಿರುವಾಗ, ಎನ್ನಾವಿಲ್ - ತನ್ನ ನಾಲಿಗೆಯ ಸತ್ತಿಗೆ ಪ್ರಯೋಜನವಾಗಿ, ಇನ್ನ ಕವಿ - ಈ ಮಧುರವಾಗಿರುವ ಪಾಶುರರೂಪದಲ್ಲಿರುವ ಕವಿತ್ವವನ್ನು, ಕವಿತ್ವವೇನೋ ಹೌದು, ಮಧುರ ಹೇಗೆ ಎಂದರೆ ಯಾವಾಗ ಸರ್ವೇಶ್ವರನ ಸ್ತುತಿಯಲ್ಲಿ ಆ ಕವಿತ್ವವು ಇಡಲ್ಪಟ್ಟಿತೋ ಆಗ ಅದು "ಮಧುರಾದಪಿ ತನ್ಮಧುರಂ" ಎಂಬ ಭಾವವು; ಇಂತಹ ಕವಿತ್ವವನ್ನು, ಯಾನ್ - ಅನನ್ಯಾರ್ಹ ಶೇಷಭೂತನಾದ ನಾನು, ಒರುವರುಕ್ಕುಮ್ - ಇನ್ನು ಯಾರಿಗೂ, ಎಂದರೆ ಇತರ ಕವಿಗಳು ಮಾಡುವಹಾಗೆ ಅನ್ಯದೇವತೆಗಳನ್ನಾಗಲಿ, ಇಹಲೋಕದ ರಾಜರುಗಳನ್ನಾಗಲಿ, ಕೊಡುಕ್ಕಿಲ್ಲೇನ್ - ಕೊಡುವದಿಲ್ಲವು, ಓ ಶ್ರೀನಿವಾಸನೇ ನಿನಗೇನೇ ನಿರುಪಾಧಿಕ ದಾಸಭೂತನಾದ ನಾನು, ನಿನ್ನನ್ನು ಸ್ತುತಿಸುವದಕ್ಕಾಗಿ ನೀನು ದಯಪಾಲಿಸಿದ ಸತ್ತಿಯಿಂದ ನಾಲಿಗೆಯು ಪವಿತ್ರತೆಯನ್ನು ಹೊಂದಿ ನಿನ್ನನ್ನು ಈ ಪಾಶುರಗಳ ಮೂಲಕ ಆನಂದದಿಂದ ಸ್ತುತಿಸುತ್ತಿರುವಾಗ, ಇಂತಹ ಕವಿತ್ವವನ್ನು ಅನರ್ಹರಾದ ಪರಿಗೆ ಕೊಡಲು ನನಗೆ ಶಕ್ತಿ ಎಲ್ಲಿಯದು ಎಂಬುದು ತಾತ್ಪರ್ಯವು ಅಸೇವ್ಯ ಸೇವಯರೂಪದಲ್ಲಿ ಅನರ್ಹರಾಗಿರುವರನ್ನು ಅಲ್ಪಫಲಗಳಿಗಾಗಿ ಸ್ತುತಿಸುವದು ನ್ಯಾಯವಲ್ಲವೆಂದೂ, ನಮ್ಮನ್ನು ಈ ಒಳ್ಳೇಸ್ಥಿತಿಗೆ ಬರುವಹಾಗೆ ಉಪಕರಿಸಿರುವ ಶ್ರೀನಿವಾಸನನ್ನು ಸ್ತುತಿಸುವದು ಯುಕ್ತವೆಂದೂ, ನಿಮಗೆ ಹೇಳಿದರೆ ನಿಮಗೆ ರುಚಿಸೆದು ವಸ್ತು ವಿರೋಧವು. ಭಗವಂತನನ್ನು ಸ್ತುತಿಸುವದೇ ನಾಲಿಗೆಗೆ ಸಾರ್ಥಕ್ಯವೆಂದು ಒಂದು ಕೀಟವಾದ ಭ್ರಮರವೂಕೂಡ ತೆನ್ನಾ ತೆನ್ನಾ,

ತಿರು. ೩ ೯ ೧.

೫. ಅನ್ಯ ಚಿನ್ತನ ವಮಾಗಾದೆನ್ನ ಮಿಡತ್ತೈ (೧) "ಶಿನ್ದೈ ಮತ್ತೊನ್ರಿನ್ರಿರತ್ತಲ್ಲಾತ್ತನ್ಮೈ ದೇವಪಿರಾ ನರಿಯುಮ್" ಎನ್ರುವುಮ್,

---

ಎಂದು ಸ್ಥೀಕರಿಸುವದನ್ನು ನೋಡಿದರೆ ಭಗವಂತನ ಸ್ತೋತ್ರದಿಂದ ನಾ-ನಾಲಿಗೆಯು, ತೇಕ - ಮಧುವಿನೋಪಾದಿಯಲ್ಲಿ ಮಧುರೆವಾದುದು ಎಂದು ಕೂಗುತ್ತಿರುವಾಗ, ಸ್ವಾಮಿಯು ನನಗೆ ಸರ್ವೋಪಕಾರಕನಾಗಿ, ಇಂಪಾದ ಈ ಅತನ ಸ್ತೋತ್ರದಿಂದ ಸತ್ಕೀರ್ತಿಯನ್ನು ದಾಸನು ಹೊಂದಿರುವಾಗ, ಅತನನ್ನು ಸ್ತುತಿಸುವದನ್ನು ಬಿಟ್ಟು, ದರಿದ್ರವಾದ ಕಾಸಿಗಾಗಿ ಅನರ್ಹರಾದ ರಾಜರೇನು, ಇತರ ಧನಿಕರೇನು, ಇಂತವರನ್ನು ಸ್ತುತಿಸುವೆನೇ ಎಂಬ ತಾತ್ಪರ್ಯವು" ಇತ್ಯಾದಿಗಳಲ್ಲಿ - ಇವೇ ಮೊದಲಾದ ಪಾಶುರಗಳಲ್ಲಿ, ಅರುಳಿ ಚ್ಚೆಯ್ದಾರ್ - ಕೃಪಯಾ ಅಪ್ಪಣೆಕೊಡಿಸಿರುತ್ತಾರೆ, ಯಾರು ಎಂದರೆ ಮೂದುತ್ತಾಳ್ವಾರ್ ಮುದಲ್ ತಿರುವಂದಾದಿಯಲ್ಲೂ, ನಮ್ಮಾಳ್ವಾರ್ರವರು ತಿರುವಾಯ್ ಮೊಳಿಯಲ್ಲೂ ಎಂಬ ಭಾವವು.

ಅನ್ಯಚಿನ್ತನವಮಾಗಾದೆನ್ನ ಮಿಡತ್ತೈ-ಶ್ರೀ ಮಹಾವಿಷ್ಣುವಲ್ಲದೆ ಇತರ ದೇವತಾಚಿನ್ತನವು ಸರಿಯಲ್ಲವೆಂಬುವ ಸಂದರ್ಭದಲ್ಲಿ "ಶಿನ್ದೈ ಮತ್ತೊನ್ರಿ" ಎನ್ರು - ಎಂಬುವ ಪಾಶುರದಲ್ಲಿ ಉಪದೇಶಿಸಿರುತ್ತಾರೆ.

(೧) ಈ ಪೂರಾಪಾಶುರವು ಯಾವ್ದೆಂದರೆ :—

ಶಿನ್ದೈಮತ್ತೊನ್ರಿನ್ರಿರತ್ತಲ್ಲಾತ್ತನ್ಮೈ ದೇವಪಿರಾ ನರಿಯುಮ್।
ಶಿನ್ದೈ ಯಿನಾರ್ಶೆಯ್ ವದಾನರಿಯಾದನ ಮಾಯಜ್ಞಳೊನ್ರುವಿಲ್ಲೈ।
ಶಿನ್ದೈಯನಾರೊಲ್ಲಿನಾರ್ಶೆಯ್ಕೈಯಾನಿಲತ್ತೀನರ್ಕುಳುವಣಜ್ಞುಮ್।
ಶಿನ್ದೈಮುಗಿಳ್ ತಿರುವಾರನ್ ವಿಳೈ ಯುರ್ತೀರ್ತ್ತನುಕ್ಕಟ್ಪಟ್ಟಿನ್ನೇ॥

ಇದರರ್ಥವು :—ಶಿನ್ದೈಯಿನಾಲ್ - ಮನಸ್ಸಿನಿಂದ, ಶೊಲ್ಲಿನಾಲ್ - ವಾಕ್ಕಿನಿಂದ, ಶೆಯ್ ಕೈಯಾಲ್ - ಕರ್ಮಗಳಿಂದ ಎಂದರೆ ಮನೋವಾಕ್ಕಾಯದ ಮೂಲಕವಾಗಿ, ಮಹಾ ಭಾಗವತೋತ್ತಮರ, ಕುಳು - ಸಂಘವು, ವಣಜ್ಞುಂ - ಬಂದು ನಮಸ್ಕರಿಸುವ, ಶಿನ್ದೈ - ಅವರುಗಳ ಮನಸ್ಸನ್ನು, ಮುಗಿಳ್ - ಸಂತೋಷಪಡಿಸುವ, ತಿರುವಾರ್ವಿಳೈ - ತಿರುವಾರ್ವಿಳೈ ಎಂಬಲ್ಲಿ, ಉರೈ - ಬಿಜಮಾಡಿಸಿರುವ, ತೀರ್ತನುಕ್ಕು-ಮಹಾ ಪರಿಶುದ್ಧನಾಗಿರುವ ಪುರುಷೋತ್ತಮನಿಗೆ, ಅಟ್ಪಟ್ಟಿನ್ - ಶೇಷಭೂತನೆಂದಾದ ಬಳಿಕ, ಶಿನ್ದೈ-ನನ್ನ ಮನಸ್ಸು, ಮತ್ತೊನ್ರಿ-ಬೇರೆ ಯಾವುದನ್ನೂ, ತಿರತ್ತಲ್ಲಾ - ಉದ್ದೇಶ್ಯವಾಗಿ ಭಾವಿಸದೇ ಇರುವ, ತನ್ಮೈ-ಸ್ವಭಾವವನ್ನು, ತೇವಪಿರಾ - ಸೂರಿ ಸೇವ್ಯನಾದ ಸರ್ವಜ್ಞನಾದವನು

೫ತಿರು. ೭. ೧೦. ೧೧.

(೨) "ಅ(ವ) ರುನ್ತೀನರ್ ಮತ್ತುಳರಿನ್ರೇನ್ ಮನತ್ತಿರೈಯುಮ್ ಕರುತ್ತೆ" ಎನ್ರು ಮರುಳಿಚ್ಚೆಯ್ದಾರ್.

ತಾನೇ, ಅರಿಯುಮ್ - ತಿಳಿಯುವನು, ಶಿನ್ತೈಯುನಾಲ್ - ನಮ್ಮ ಮನಸ್ಸಿನಿಂದ, ಶೆಯ್ವ ಮಾಯಙ್ಗಳ್ - ಮಾಡುವ ವಂಚನೆಗಳನ್ನು, ತಾಕ್ - ಆ ಸರ್ವಜ್ಞನಾದ, ಸ್ವಾಮಿಯು ತಾನೇ, ಅರಿಯಾದನ ಒನ್ರುಮ್ ಇಲ್ಲೈ - ತಿಳಿಯದೇ ಇರುವದು ಯಾವುದೂ ಇಲ್ಲವು.

ತಿರುವಾರ್ಣ ವಿಳೈ ಎಂಬ ಊರಲ್ಲಿ ಬಿಜಮಾಡಿಸಿರುವ ಸ್ವಾಮಿಯು ಎಂತವನೆಂದರೆ "ಯನ್ಮನಸಾ ಧ್ಯಾಯತಿ ತದ್ವಾಚಾವದತಿ ತತ್ಕರ್ಮಣಾಕರೋತಿ" ಎಂದು ಹೇಳಿರುವಹಾಗೆ ಮನೋವಾಕ್ಕರ್ಮಗಳೆಲ್ಲಾ ಒಂದೇರೀತಿಯಲ್ಲಿರುವ ಕಾಪಟ್ಯವಿಲ್ಲದಿರುವ ಮಹಾ ಭಾಗವತರು ಬಂದು ನಮಸ್ಕಾರಮಾಡಿದುದರಿಂದ, ಪರಮ ಪ್ರೀತನಾಗಿ, ತಾನು ಆನಂದಮಯನಾಗಿರುವದರಿಂದ ಅವರುಗಳನ್ನೂ ಶ್ರುತಿಯಲ್ಲಿ "ಆನಂದಯಾತಿ" ಎಂದು ಹೇಳಿರುವಹಾಗೆ, ಅವರಿಗೆ ಪರಮ ಸಂತೋಷವನ್ನುಂಟುಮಾಡುವದಕ್ಕಾಗಿಯೂ ಅವರುಗಳ ಮನೋರಥವನ್ನು ಸಲ್ಲಿಸುವದಕ್ಕಾಗಿಯೂ ಈತಿರುವಾರ್ಣ ವಿಳೈಯಲ್ಲಿ ಬಿಜಮಾಡಿಸಿರುವನು; ಹೀಗೆ ಈ ಮಹಾ ಪರಿಶುದ್ಧರಾದ ಮಹಾ ಭಾಗವತೋತ್ತಮರಾದ ಪ್ರಪನ್ನರು ಈತನೇ ಪ್ರಾಪ್ಯನೆಂದು ಭಾವಿಸಿ ಪದೇಪದೆ ಬಂದು ನಮಸ್ಕರಿಸಿದುದರಿಂದ, ಈತನೇನಾದರೂ ತೀರ್ತ್ತನಾಗಿ, ಮಹಾಪರಿಶುದ್ಧನಾದನೋ ಎಂಬಹಾಗೆ ಬಿಜಮಾಡಿಸಿರುವವನು; ಭಾಗವತೋತ್ತಮರು ತೀರ್ಥರು; ಆದುದರಿಂದ ಸ್ವಾಮಿಯ ಪಾದವನ್ನೂ ಕೂಡ "ತೀರ್ಥೀ ಕುರ್ವನ್ತಿ" ಪರಿಶುದ್ಧವನ್ನಾಗಿ ಮಾಡಿದುದರಿಂದ ಆತನೂ ತೀರ್ತನು ಇಂತವನಿಗೆ ನಾನು ಅನ್ಯನ್ಯಾರ್ಹ ಶೇಷನೆಂದು ನಂಬಿ, ಈ ತಿರುವಾರ್ಣ ವಿಳೆಯ ಸ್ವಾಮಿಯೇ ಪರಮ ಪ್ರಾಪ್ಯನೆಂದು ನಂಬಿ ಆಶ್ರಯಿಸಿರುವೆನು. ಅನ್ಯ ದೇವತೆಯನ್ನು ಮನಸ್ಸಿನಲ್ಲಿ ಆಶ್ರಯಿಸಿ, ಇಲ್ಲಿ ಭಾಗವತರಿಲ್ಲಾ ತಾವು ಆಶ್ರಯಿಸಿದಹಾಗೆ ನಾನು ಆಶ್ರಯಿಸಿರುತ್ತೇನೆಂದು ವಂಚಿಸುವದಕ್ಕಾಗಿಯೂ ಬಂದವನಲ್ಲವು, ಇದೇ ದಿವ್ಯ ವೈಕುಂಠವೆಂದು ಭಾವಿಸಿ, ಪರಮ ಪದವನ್ನೂ ಬೇಡದೆ ಬಂದವನು. ಇದಕ್ಕೆ ಸಾಕ್ಷಿಯಾರು ಎಂದರೆ ಅತನ ಮನಸ್ಸೇ; ಅತನು ಸರ್ವಜ್ಞನಾದುದರಿಂದ ನಮ್ಮಗಳ ಮನಸ್ಸನ್ನೂ ಕೂಡ ತಿಳಿಯುವ ಸರ್ವಜ್ಞತೆಯು ಅತನಲ್ಲುಂಟು. ಅದನ್ನು ಮರೆಮಾಚಲು ಸಾಧ್ಯವಿಲ್ಲವು. ಆತನನ್ನೇ ಬೇಕಾದರೆ ಕೇಳಿ ತಿಳಿಯಬಹುದು ಎಂಬ ಭಾವವು. ದುಷ್ಯಂತನು ಶಕುಂತಳೆಯನ್ನು ಮದುವೆ

---

(೨) ಪೆರಿ. ತಿರು. ೮.೧೦.೨.

ಮಾಡಿಕ್ಕೊಂಡು ಶಾಪಗ್ರಸ್ತನಾಗಿ ಮದುವೆಮಾಡಿಕೊಳ್ಳಲಿಲ್ಲವೆಂದು ಸಭೆಯಲ್ಲಿ ಹೆಂಡತಿಯನ್ನು ನಿರಾಕರಿಸಿದುದರಿಂದ ಕೋಪಗೊಂಡು ಹೇಳುತ್ತಾಳೆ. ನಿನ್ನ ವ್ಯಾಪಾರವೇ ಒಂದು ವಿಧವಾಯಿತು, ಬಾಯಲ್ಲಿ ಈಗ ಹೇಳುವದು ಬೇರೆ ವಿಧವಾಯಿತು. ಈ ಕೌಟಿಲ್ಯವನ್ನು ಸರ್ವೇಶ್ವರನು ತಿಳಿಯದೆ ಇರುವದಿಲ್ಲವು ಎಂದು ಮೂದಲಿಸುತ್ತಾಳೆ :—**ವಿಕೋಪಮನುಸ್ಮೃತಿ ಚ ಮನ್ಯಸೇತ್ವಂ ನ ಹ್ಯಚ್ಛಯಂನೇತ್ಸಿ ಕವಿಂ ಪುರಾಣಮ್।ಯೋ ವೇದಿತಾ ಕರ್ಮಣಃ ಪಾಪಕಸ್ಯ ತಸ್ಮಾಂತಿಕೇ ತ್ವಂ ವೃಜಿನಂ ಕರೋಷಿ**" ಆವತ್ತು ನನ್ನನ್ನು ಮದುವೆಮಾಡಿಕೊಂಡಿದುದು ಗೋಪ್ಯವಾದುದರಿಂದ ಯಾರೂ ತಿಳಿಯಲಾರರು ; ಆದುದರಿಂದ ನಿರಾಕರಿಸಿ ಕಳುಹಿಸಿ ಬಿಡೋಣವೆಂದು ಈ ಅನಾಥಳಾಗಿ ಪತಿವ್ರತಾಧರ್ಮದಲ್ಲಿರುವನಳನ್ನು ತ್ಯಾಗ ಮಾಡಿದ ಅಪರಾಧವನ್ನು ನಿನ್ನಹೃದಯಾಂತರ್ವರ್ತಿಯಾದ ಸರ್ವೇಶ್ವರನು ತಿಳಿಯಲಾರನೆಂದು ಭಾವಿಸಿರುತ್ತೀಯೇ ; ನೀನು ಮಾಡುವ ದುಷ್ಕರ್ಮಗಳನ್ನು ಸರ್ವಜ್ಞನಾಗಿರುವದರಿಂದ ಕಣ್ಣಾರ ನೋಡುತ್ತಿರುವನು ಎಂದು ಪತಿಯನ್ನು ಕುರಿತು ಶಕುಂತಳೆಯು ಹೇಳಿದಹಾಗೆಯೇ ನನ್ನ ಮನಸ್ಸಿನಲ್ಲಿರುವದನ್ನೂ ಕೂಡ ಅತನು ತಿಳಿಯಲು ಶಕ್ತನು. ಆದುದರಿಂದ ಏನೊಂದೂ ವಂಚನೆಯಿಲ್ಲವು ಈ ಸ್ವಾಮಿಯೇ ನನಗೆ ಪ್ರಾಪ್ಯನೆಂಬುದು ಸತ್ಯವು. ಹೀಗೆ ಹೇಳಿದುದರಿಂದ ಅನ್ಯ ಚಿಂತನವು ಸರ್ವಥಾ ಇಲ್ಲವೆಂದು ಹೇಳಿದಂತಾಯಿತು". **ಎನ್ರುಮ್** - ಎಂಬದಾಗಿಯೂ, ನಮ್ಮಾಳ್ವಾರ್ರವರು **ಅರುಳಿಚ್ಚೆಯ್ದಾರ್** - ಅಪ್ಪಣೆ ಕೊಡಿಸಿರುತ್ತಾರೆ. (೨) ಅನ್ಯ ಚಿಂತನವು ಸರಿಯಲ್ಲವೆಂಬುದಕ್ಕೆ ಇನ್ನೊಂದು ಪ್ರಮಾಣವನ್ನು ಉದಾಹರಿಸುವರಾಗಿ ತಿರುನುಂಗೈಯಾಳ್ವಾರವರೂ ಹಾಗೆಯೇ ಹೇಳಿರುತ್ತಾರೆಂದು ತಿಳಿಸುತ್ತಾರೆ. ಈ "**ಪರು ದೇವರ್**" ಎಂಬ ವಾಕ್ಯವಿರುವ ಪೂರಾ ಪಾಶುರವು ಯಾವುದೆಂದರೆ :—

ಪೆರುನೀರುಮ್ ವಿಣ್ಣುಮ್ ಮ್ಮಲೆಯುಮ್ ಮುಲಗೇಳುಮ್ ।
ಒರು ತಾರಾ ನಿನ್ನುಳೊಡುಕ್ಕಿ ಯನಿನ್ನೈ ಯಲ್ಲಾಲ್ ।
ವರುದೇವರ್ ಮುನ್ನಳರೆನ್ನೈನತ್ತಿ ರೈಯುಂ ।
ಞ್ಞರು ತೇನಾರ್ ಕಣ್ಣುಪುರತ್ತು ರೈಯುನ್ಮಾನೆ ॥೨॥

ಇದರರ್ಥವು :—**ಪೆರುನೀರುಮ್** - ಅಗಾಧವಾಗಿ ವಿಶಾಲವಾಗಿರುವ ಸಮುದ್ರವನ್ನೂ, **ವಿಣ್ಣುಮ್**-ಆಕಾಶವನ್ನೂ, **ಮುಲೆಯುಮ್**-ಕುಲಾಚಲಗಳನ್ನೂ **ಉಲಗೇಳುಮ್** - ಲೋಕಗಳನ್ನೂ, **ಒರುತಾರಾ**-ಪ್ರಳಯದಲ್ಲಿ ಒಂದು ಮಾಲೆಯಾಗಿಯುಳ್ಳವನಾಗಿ ಅಥವಾ ಇವುಗಳನ್ನೆಲ್ಲಾ ಒಂದು ಮಾಲೆಯಾಗಿ ಪ್ರಳಯ

ಕಾಲದಲ್ಲಿ ಉಳ್ಳವನೇ ಎಂದು ಸಂಬೋಧನೆಯಾಗಿಯಾಗಲಿ ಭಾವಿಸಬಹುದು. ಇವುಗಳನ್ನೆಲ್ಲಾ ಉದರದಲ್ಲಿ ಸೂಕ್ಷ್ಮದೆಶೆಯಲ್ಲಿ ಪ್ರಳಯಕಾಲದಲ್ಲಿ ಧರಿಸಿರುವ ದೆಂಬುದು ನಿನಗೇನೂ ಶ್ರಮವಿಲ್ಲವು ಒಂದು ಮಾಲೆಯನ್ನು ಧರಿಸಿದಹಾಗೆ ಎಂಬ ಭಾವವು. ಅದೂ ಅಲ್ಲದೆ ಒಂದು ಹಾರವನ್ನು ಧರಿಸಿ ನಿಂತಿರುಪದು ಹೇಗೆ ತೋರುತ್ತದೆ ಎಂದರೆ ನಿನ್ನ ಉದರದಲ್ಲಿರುವ ಚೇತನರು ತನ್ನನ್ನಾಶ್ರಯಿಸಿದಪಕ್ಷ ದಲ್ಲಿ ಅವರನ್ನು ರಕ್ಷಿಸುವ ದೃಢಸಙ್ಕಲ್ಪವುಳ್ಳವನು ತಾನು ಎಂದು ಪ್ರತಿಜ್ಞೆಯನ್ನು ಮಾಡುವದಕ್ಕಾಗಿ ಹಾರವನ್ನು ಹಾಕಿಕೊಂಡಿರುವಹಾಗೆ ಇದೆ ಎಂಬ ಭಾವವೂ ತೋರಿಬರುತ್ತದೆ. **ನಿನ್ನೊಳೊಡುಕ್ಕಿ** - ನಿನ್ನ ಉದರದ ಏಕದೇಶದಲ್ಲಿ ಇಟ್ಟು ಕೊಂಡಿರುವ, **ನಿನ್ನೈಯಲ್ಲಾಲ್**-ನಿನ್ನ ಮೂಲಕವಲ್ಲದೆ, **ವರುದೇವರ್ ಮುನ್ನಿ** ಳರೆ-ನಾನು ಆಶ್ರಯಣೀಯನೆಂದು ಬಂದು ನಿಂತಿರುವ ದೇವತೆಯು, **ಮತ್ತುಳರೆನ್ರು** - ಬೇರೆ ಉಂಟೆಂದು, **ಮನತ್ತು** - ನನ್ನ ಮನಸ್ಸಿನಲ್ಲಿ, **ಇರೈಯುಮ್** - ಸ್ವಲ್ಪವಾಗಲಿ, **ಕರುದೇ** - ಪೂರ್ವಪಕ್ಷರೂಪದಲ್ಲಿಯೂ ಕೂಡ ನೆನಿಸಲಾರೆನು, ಸ್ಮರಿಸುವದಿಲ್ಲವು ಎಂಬ ಭಾವವು. ಚತುರ್ಮುಖ ಬ್ರಹ್ಮನೆಂದೂ, ಪರಮೇಶ್ವರನು ಅಥವಾ ಈಶನೂ ಎಂದೂ,ಮಹೇಂದ್ರನೆಂದೂ ಹೀಗೆಲ್ಲಾ ಹೆಸರು ಧರಿಸಿ ಬಂದಿರುವ ದೇವತೆಗಳನ್ನೆಲ್ಲಾ ಪ್ರಳಯದಲ್ಲಿ ಸರ್ವೇಶ್ವರನು ತನ್ನ ಹೊಟ್ಟೆಯಲ್ಲಿಟ್ಟುಕೊಂಡು, ಇವರಿಗೆ ಒಳ್ಳೇ ಅಧಿಕಾರಗಳನ್ನು ಕೊಡಬೇಕೆಂದು ಸಙ್ಕಲ್ಪಿಸಿದುದರಿಂದ, ಅವ ನಿಂದ ಎಂಜಲು ರೂಪದಲ್ಲಿ ಇವರು ಉಗಳಲ್ಪಟ್ಟವರು; ಹೀಗೆ ಅತನಿಂದಲೇ ಸತ್ತೆ ಯನ್ನು ಹೊಂದಿ ತಾವೇ ಆಶ್ರಯಣೀಯರೆಂದು ಹೇಳಿಕೊಳ್ಳುವ ಈ ದೇವತೆಗಳನ್ನು ನಾನು ಎಂದಿಗಾದರೂ ಮನಸ್ಸಿನಲ್ಲಾದರೂ ಸ್ಮರಿಸುವನೇ? ಒಂದು ವೇಳೆ ಇವರೇ ನಾದರೂ ಆಶ್ರಯಿಸಲು ಯೋಗ್ಯರಾಗಬಹುದೋ ಎಂಬ ಪೂರ್ವಪಕ್ಷವನ್ನು ಮಾಡಿ ಯಾಗಲಿ ಸ್ಮರಿಸುವನೋ ? ಎಂದಿಗೂ ಇಲ್ಲವೆಂಬ ಭಾವವು; **ಕಣ್ಣಪುರತ್ತುರೈಯವ್ಮಾನೇ** – ಕಣ್ಣಪುರದಲ್ಲಿ ಬಿಜಮಾಡಿಸಿರುವ ಸ್ವಾಮಿಯೇ, ಪ್ರಳಯಾಪತ್ತಿ ನಲ್ಲಿ ತನ್ನ ಉದರದಲ್ಲಿಟ್ಟು ಸಂರಕ್ಷಿಸಿ ಚೇತನರು ತನ್ನನ್ನಾಶ್ರಯಿಸಿ ನಿರತಿಶಯ ಸುಖವನ್ನು ಹೊಂದಲಿ ಎಂಬ ಪರಮ ಕೃಪಯಾ ಕರಣ ಕಳೇಬರ ಯೋಗ, ಸಚ್ಛಾಸ್ತ್ರ, ಸದುಪದೇಶಕರನ್ನೆಲ್ಲಾ ಒದಗಿಸಿಕೊಟ್ಟು, ಅರ್ಚಾವತಾರಿಯಾಗಿ ತಿರುಕ್ಕಣ್ಣ ಪುರದಲ್ಲಿ ಬಿಜಮಾಡಿಸಿ, ಈ ಸಂಸಾರವೆಂಬ ಪ್ರಳಯವನ್ನು ಹೋಗ ಲಾಡಿಸಬೇಕೆಂದು ವನಮಾಲೆಯನ್ನು ಧರಿಸಿ ಸತ್ಯ ಸಙ್ಕಲ್ಪನಾಗಿ ನೆಲಸಿರುವಾಗ, ಇತರರಾದ ನಮ್ಮ ಹಾಗೆಯೇ ಸಂಸಾರಿಗಳಾಗಿರುವ ದೇವತೆಗಳನ್ನು ಮನಸ್ಸಿನಿಂದ ಲಾದರೂ ಸ್ಮರಿಸುವೆನೇ ? ಎಂಬತಾತ್ಪರ್ಯವು.

ಈ ಅಧಿಗಮನಾದಿ ನಿತ್ಯ ನೈಮಿತ್ತಿಕಗಳು ಪ್ರಪನ್ನನಿಗೆ ಅನೇಕಾನರ್ಥಗಳು

ಅಭಿಗಮನಾದಿಷು ಅನಧಿಕೃತಾನಾ ಮುಕ್ತಾನರ್ಥ ನಿವಾರಣಂ ಕಥಮ್ ?

ಇಸ್ಸಮೂರಾಧನಾದಿ ಕ್ರಮಜ್ಞಳಿಲ್ ಅನಧಿಕೃತರ್ಕ್ಕು ಮಿಕ್ಕಾಲಜ್ಞಳಿ ಲ್ಲಾತ್ತಿಲುಮ್ ತಜ್ಞಳುಕ್ಕುಯೋಗ್ಯಮಾನ ನಿತ್ಯ ನೈಮಿತ್ತಿಕಜ್ಞಳಾಲುಮ್,

---

ತೊಲಗಲು ಸಹಕಾರಿಯಾಗಬಹುದೆಂದು ಹೇಳಲ್ಪಟ್ಟಿತು. ಇಂತಹ ಪ್ರಯೋಜನವು, ಆರಾಧನೆ ಮೊದಲಾದ ನಿತ್ಯ ನೈಮಿತ್ತಿಕಗಳನ್ನು ಅನುಷ್ಠಿಸಲು ಯೋಗ್ಯತೆಯುಳ್ಳ ತ್ರೈವರ್ಣಿಕರಿಗೆ ಮಾತ್ರವೇ ಎಂದು ಹೇಳಿದರೆ ಪ್ರಪನ್ನರಾದ ಸ್ತ್ರೀಶೂದ್ರಾದಿಗಳಿಗೆ ಇಂತಹ ಸುಕೃತವಿಶೇಷವಿಲ್ಲವೆಂದು ಹೇಳಿದಂತಾಗುತ್ತದೆ. ಇಂತಹ ಅನ್ಯಾಯವನ್ನು ಸರ್ವೇಶ್ವರನು ಎಂದಿಗಾದರೂ ಮಾಡಿಯಾನೋ ? ಹಾಗಾದರೆ ಅಂತಹ ಅನಧಿಕೃತರ ವಿಷಯದಲ್ಲಿ ಹೇಗೆ ಎಂದರೆ ಹೇಳುತ್ತಾರೆ.

ಹಾಗಾದರೆ ಅಭಿಗಮನಾಧಿಗಳಲ್ಲಿ ಅಧಿಕಾರವಿಲ್ಲದವರಿಗೆ ಅನರ್ಥ ನಿವಾರಣೆಯು ಹೇಗೆ ?

ಬ್ರಾಹ್ಮಣ ಕ್ಷತ್ರಿಯ ವೈಶ್ಯರಾದ ತ್ರೈವರ್ಣಿಕರಿಗೆ ನಿತ್ಯ ನೈಮಿತ್ತಿಕಗಳು ಅವುಗಳಲ್ಲೇ ಸೇರಿದ ಅಭಿಗಮನಾರಾಧನಾದಿಗಳೇನೋ ಉಂಟು, ಅವುಗಳಿಂದ ಅನರ್ಥನಾಶರೂಪ ಪ್ರಯೋಜನ ಉಂಟಾಗುತ್ತದೆಂದು ಹೇಳಬಹುದು. ಆದರೆ **"ಜಪ ಸ್ತಪಸ್ತೀರ್ಥಸೇವಾ ಪ್ರವ್ರಜ್ಯಾ ಮಂತ್ರಸಾಧನಂ। ದೇವತಾರಾಧನಂ ಚೇತಿ ಸ್ತ್ರೀಶೂದ್ರ ಪತನಾನಿ ಷಟ್"** ಜಪ, ತಪ, ಪತಿಶುಶ್ರೂಷೆಯನ್ನು ಬಿಟ್ಟು ತೀರ್ಥಯಾತ್ರೆಗಳು ಸಂನ್ಯಾಸವೂ ಮಂತ್ರೋಪಾಯವೂ ದೇವತಾರಾಧನವೂ ಈ ಆರನ್ನೂ ಸ್ತ್ರೀಶೂದ್ರರು ಅನುಷ್ಠಿಸಿದುದಾದರೆ ಅವರಿಗೆ ಪತನಕ್ಕೆ ಕಾರಣವಾಗುತ್ತವೆ. ಹೀಗೆ ಅಭಿಗಮನಾರಾಧನೆಗಳಲ್ಲಿ ಶೂದ್ರರಿಗೆ ಅಧಿಕಾರವಿಲ್ಲವಾದುದರಿಂದ ಪ್ರಪನ್ನರಾದ ಆವರುಗಳಿಗೂ ಭಗವತ್ಕೈಙ್ಕರ್ಯ ಭಾಗವತ ಕೈಙ್ಕರ್ಯ ಸಿದ್ಧಿಯುಂಟಾಗುವ ಪ್ರಕಾರವನ್ನೂ ಮುಂದಿನ ವಾಕ್ಯದಮೂಲಕವೂ, ಆ ವಿಷಯದಲ್ಲಿ ಪ್ರಮಾಣಗಳನ್ನೂ ಅದರ ಮುಂದಿನವಾಕ್ಯವಾದ "ಇನ್ವರ್ಥತ್ತೈ" ಎಂಬುದರ ಮೂಲಕವೂ ಉಪದೇಶಿಸುತ್ತಾರೆ. ಭಾಗವತಕೈಙ್ಕರ್ಯಮೂಲಕ ಭಗವತ್ಕೈಙ್ಕರ್ಯ ಸಿದ್ಧಿ ಎಂದುಪದೇಶಿಸುತ್ತಾರೆ. **ಇಸ್ಸಮೂರಾಧನಕ್ರಮಜ್ಞಳಿಲ್** - ಈ ಭಗವದಾರಾಧನೆಯ ಕ್ರಮಗಳಲ್ಲಿ, **ಅನಧಿಕೃತರ್ಕುಮ್** - ಅಧಿಕಾರವಿಲ್ಲದ ಸ್ತ್ರೀಶೂದ್ರರಿಗೂ ಸಹ, **ಇಕ್ಕಾಲಜ್ಞಳಿಲ್ಲಾತ್ತಿಲುಮ್** - ಈ ಎಲ್ಲಾ ಕಾಲದಲ್ಲೂ, **ತಜ್ಞಳುಕ್ಕು ಯೋಗ್ಯಮಾನ** - ಇಲ್ಲಿ ತಜ್ಞಳುಕ್ಕು ಎಂಬುದು ಮುಂದೆ ಬರುವ "ಪರನು ಭಾಗ

ಸಂಕೀರ್ತನಾದಿಗಳಾಲುಮ್, ಸಮಾರಾಧನಾದಿ ಯೋಗ್ಯರಾನ ಪರಮ ಭಾಗವತರ್ಕ್ಕು ಪ್ಪರತಂತ್ರರಾಯ್ ಯಥಾಧಿಕಾರಂ ವಲ್ಲತೇವೈ ಶೆಯ್ದುಮ್ ಇಕ್ಕೈಙ್ಕರ್ಯ ಮಿಳವಾದೊಳಿಯಲಾವಮ್.

ವತರಾನ" - ಎಂಬುದಕ್ಕೆ ಅನ್ವಯವು, ಪರಮ ಭಾಗವತರಾದ ತಮಗೆ ಯೋಗ್ಯ ಗಳಾದ ನಿತ್ಯ ನೈಮಿತ್ತಿಕ ಕರ್ಮಾನುಷ್ಠಾನಗಳಿಂದಲೂ, **ಸಂಕೀರ್ತನಾದಿಗಳಾ ಲುಮ್** - ಸ್ತೋತ್ರಗಳೇ ಮೊದಲಾದವುಗಳ ಮೂಲಕ ಕೀರ್ತನ ಅಥವಾ ಭಗವ ನ್ನಾಮ ಸಂಕೀರ್ತನಗಳಿಂದಲೂ. **ಆದಿ** ಪದದಿಂದ ಗುರು ಪರಂಪರಾನುಸಂಧಾನ, ಅಷ್ಟೋತ್ತರ ಶತಸಹಸ್ರಾದಿಗಳಮೂಲಕ ಅರ್ಚನ, ಭಗವತ್ಸಂಬಂಧಸೇವೆ, ಪುಷ್ಪ ತುಲಸ್ಯಾದ್ಯಾಹರಣ, ಮಾಲಾಕರಣ, ದೀಪಾರೋಪಣ, ಭಗವನ್ಮಂದಿರ ಸಂಮಾ ರ್ಜನಾದಿ ವಿವಿಧ ಕೈಙ್ಕರ್ಯಗಳು ಸೂಚಿಸಲ್ಪಟ್ಟವು, ಇಂತಹ ಅನುಷ್ಠಾನಗಳಿಂದ **ಸಮಾರಾಧನಾದಿ ಯೋಗ್ಯರಾದ** - ಅಭಿಗಮನಾದಿ ಭಗವದಾರಾಧನೆಗೆ ಅರ್ಹ ರಾದ, **ಪರಮ ಭಾಗವತರ್ಕ್ಕು** - ಪರಮ ಭಾಗವತರಿಗೆ, **ಪರತಂತ್ರರಾಯ್**- ಅಧೀನರಾಗಿ, ಶೇಷಭೂತರಾಗಿ ಎಂಬರ್ಥವು, **ಯಥಾಧಿಕಾರಮ್** - ತಮ್ಮ ಅಧಿಕಾರಾನುಗುಣವಾಗಿ, **ವಲ್ತೇವೈ ಶೆಯ್ದುಮ್** - ತನಗೆ ಸಾಮರ್ಥ್ಯವಿ ರುವ ಕೈಙ್ಕರ್ಯಗಳನ್ನು ಮಾಡುತ್ತಾ, **ಇಕ್ಕೈಙ್ಕರ್ಯಂ** - ಇಂತಹ ಕೈಙ್ಕರ್ಯವು ಎಂದರೆ ಅಭಿಗಮನಾದಿ ಕೈಙ್ಕರ್ಯಮೂಲಕ ಉಂಟಾಗುವ ಅನರ್ಥನಾಶಕರೂಪಕೈಙ್ಕ ರ್ಯವು, **ಇಳಿವಾದೊಳಿಯಲಾವಮ್**-ಇಲ್ಲದೆ ಹೋಗುವಂಥಾದ್ದನ್ನು ತಪ್ಪಿಸಿಕೊಳ್ಳ ಬಹುದು ಎಂದರೆ ಈ ರೂಪವಾಗಿ ಸಿದ್ಧಿಸುತ್ತದೆ ಎಂಬರ್ಥವು. ಮಹಾ ಭಾಗವತರಿಗೆ ಶೇಷಭೂತರಾಗಿ ಅವರಿಂದ ಆಜ್ಞಾಪಿಸಲ್ಪಟ್ಟಕೈಙ್ಕರ್ಯಗಳನ್ನು ನಡೆಸುವದರಿಂದಲೂ, ಅವರಿಗೇ ಶೇಷಭೂತರಾಗಿ ಕೈಙ್ಕರ್ಯಗಳನ್ನೆಸಗುವದರಿಂದಲೂ ಸಿದ್ಧಿಸುತ್ತದೆ ಆದುದರಿಂದಲೇ ಸ್ತ್ರೀಶೂದ್ರರಿಗೆ ತ್ರೈವರ್ಣಿಕರಂತೆ ಯಾವ ನಿತ್ಯ ನೈಮಿತ್ತಿಕ ಗಳನುಷ್ಠಾನ ಮತ್ತು ಭಗವದಾರಾಧನೆಗಳ ಅವಶ್ಯಕತೆ ಇಲ್ಲವು. ಸ್ತ್ರೀಗೆ ಮಹಾ ಭಾಗವತ ಸ್ಥಾನದಲ್ಲೇ ಪತಿಯೇ ಆಗಿ, ಆತನ ಕೈಙ್ಕರ್ಯರೂಪವಾದ ಭರ್ತೃಶು ಶ್ರೂಷೆಯ ಮಾತ್ರದಿಂದಲೇ ಸಮಸ್ತ ಅನರ್ಥಗಳ ವಿನಾಶವುಂಟಾಗುವದರಿಂದಲೂ, ಶೂದ್ರಾದಿಗಳಿಗೆ ಮಹಾ ಭಾಗವತನಿಗೆ ಪರತಂತ್ರರಾಗಿ ಮಾಡುವ ಕೈಙ್ಕರ್ಯಗ ಳಿಂದ ಅವರಿಗೆ ಅನರ್ಥಗಳ ವಿನಾಶವೂ ಉಂಟಾಗುವದರಿಂದಲೂ, ಶ್ರೀ ವ್ಯಾಸ ಮಹ ರ್ಷಿಯು, ಕಲಿಯುಗದಲ್ಲಿ **ಯೋಷಿತಸ್ಸಾಧು ಧರ್ಮ್ಯಾಸ್ತಾಸ್ತಾಭ್ಯೋ ಧರ್ಮ್ಯತರೋಸ್ತಿಕಃ**" ಎಂದೂ "**ಶೂದ್ರಸ್ಸಾಧುಃ**" "**ಶೂದ್ರ ಧರ್ಮ್ಯೋಸಿಚಾಬ್ರವೀತ್**" ಎಂದೂ, ಎಂದರೆ ಕಲಿಯುಗದಲ್ಲಿ ಸ್ತ್ರೀರುಗಳು ಬಹಳ ಸಾಧುಗಳೂ

ಇವ್ವರ್ಥತ್ತೈ (೧) "ಆರಾಧನಾನಾಂ ಸರ್ವೇಷಾಂ ವಿಷ್ಣೋರಾರಾಧನಂ ಪರಮ್ । ತಸ್ಮಾತ್ಪರತರಂ ಪ್ರೋಕ್ತಂ ತದೀಯಾರಾಧನಂ ಪರಮ್" । ಎನ್ರುಮ್, (೨) "ಕುನ್ರಮೆಡುತ್ತ ಪಿರಾ ನಡಿಯಾರೋಡು ಮೊನ್ರಿ ನಿನ್ರ

ಧನ್ಯರೂ,ಅವರಿಗಿಂತ ಧನ್ಯರು ಯಾರಿದ್ದಾರೆಂದೂ, ಹಾಗೆಯೇ ಶೂದ್ರನೂ ಸಾಧುವು ಧನ್ಯನು ಎಂದೂ ಹೇಳಿರುತ್ತಾರೆ. (ವಿ. ಪು. ೬. ೨. ೭-೮); ಏಕೆಂದರೆ ತಿಳಿಸುತ್ತಾರೆ :—"ಸ್ತ್ಯಲ್ಪೇನಹಿ ಪ್ರಯತ್ನೇನ ಧರ್ಮಸ್ಯಧೃತಿ ವೈಕಲ್ಯೌ । ಶೂದ್ರೈಶ್ಚ ದ್ವಿಜಶುಶ್ರೂಷಾ ತತ್ಪರೈರ್ದ್ವಿಜ ಸತ್ತಮಾಃ । ತಥಾ ಸ್ತ್ರೀಭಿರನಾಯಾಸಾತ್ ಪತಿ ಶುಶ್ರೂಷಯೈವಹಿ" ಶೂದ್ರರಿಗೆ ಬ್ರಹ್ಮವಿತ್ತುಗಳ ಶುಶ್ರೂಷೆಯಿಂದಲೇ,ಸ್ತ್ರೀಯರಿಗೆ ಪತಿಶುಶ್ರೂಷೆಯಿಂದಲೇ, ಹೀಗೆ ಅಲ್ಪಾಯಾಸದಿಂದಲೇ ಇಂತಹ ಧರ್ಮಾನುಷ್ಠಾನರೂಪಸಿದ್ಧಿಯು ಲಭಿಸುತ್ತದೆ, ಎಂದು ಮಹರ್ಷಿಗಳನ್ನು ಕುರಿತು ಉಪದೇಶಿಸಿರುತ್ತಾರೆ. ಸ್ತ್ರೀಗಳಿಗೆ ಭರ್ತೃ ಶುಶ್ರೂಷಯೇ ಪರಮ ಧರ್ಮನೆಂಬುದಕ್ಕೆ ಶ್ರೀ ವಾಲ್ಮೀಕಿ ಮಹರ್ಷಿಯ ದಿವ್ಯಸೂಕ್ತಿಗಳಿಗಾಗಿ (ರಾ. ಅಯೋಧ್ಯಾ. ೨೪-೨೫. ೨೬)ಶ್ಲೋಕಗಳನ್ನು ಪರಾಂಬರಿಸಿ. ಹೀಗೆ ಭಾಗವತಾರಾಧನದಿಂದಲೇ ನಿತ್ಯಕರ್ಮ, ಭಗವನ್ನಾದಿಗಳಲ್ಲಿ ಅನಧಿಕೃತರಾದ ಸ್ತ್ರೀ ಶೂದ್ರಾದಿಗಳಿಗೆ ಇವುಗಳಿಂದುಂಟಾಗುವ ಫಲವೇ ಸಿದ್ಧಿಸುತ್ತದೆ ಎಂಬುದಕ್ಕೆ ಪ್ರಮಾಣಗಳನ್ನು ದಯಪಾಲಿಸುತ್ತಾರೆ

ಇವ್ವರ್ಥತ್ತೈ - ಈ ಅಭಿಪ್ರಾಯವನ್ನೇ, ಭಗವತ್ಕೈಙ್ಕರ್ಯರೂಪ ಭಗವದಾರಾಧನದಿಂದ ಯಾವ ಭಗವತ್ಪ್ರೀತಿಯು ಸಿದ್ಧಿಸಿ ಅನರ್ಥನಿವೃತ್ತಿಗಳುಂಟಾಗುತ್ತವೋ, ಅದೇ ಭಾಗವತ ಕೈಙ್ಕರ್ಯ ಮೂಲಕವೇ ಅನಧಿಕಾರಿಗಳಿಗೆ ಲಭಿಸುತ್ತದೆ ಎಂಬ ಅಭಿಪ್ರಾಯವನ್ನೇ ಎಂಬ ಭಾವವು, (೧) **ಸರ್ವೇಷಾಂ** - ಸಮಸ್ತವಾದ **ಆರಾಧನಾನಾಂ ಮಧ್ಯೇ** - ಆರಾಧನೆಗಳಲ್ಲಿ, **ವಿಷ್ಣೋರಾರಾಧನಂ** - ವಿಷ್ಣುವಿನ ಆರಾಧನೆಯು, **ಪರಂ** - ಶ್ರೇಷ್ಠವಾದುವೆಂದು, **ಪ್ರೋಕ್ತಂ** - ಹೇಳಲ್ಪಟ್ಟಿರುತ್ತದೆ, **ತಸ್ಮಾತ್** - ಆ ವಿಷ್ಣುವಿನ ಆರಾಧನೆಗಿಂತಲೂ, **ಪರಂ-ಶ್ರೇಷ್ಠವಾದುದು, ತದೀಯಾರಾಧನಂ** - ವಿಷ್ಣು ಭಕ್ತರ ಆರಾಧನೆಯು, **ಪರತರಂ** - ತುಂಬಾ ಶ್ರೇಷ್ಠವಾದುದಾಗಿ, **ಪ್ರೋಕ್ತಂ** - ಹೇಳಲ್ಪಟ್ಟಿರುತ್ತದೆ," **ಎನ್ರುಂ** - ಎಂಬದಾಗಿಯೂ, (೨) ಈ ತಿರುವಾಯ್ ಮೊಳಿಯ ಹತ್ತು ಪಾಶುರಗಳನ್ನೂ ಅರ್ಥದೊಂದಿಗೆ ಪಠನ ಮಾಡುವವರಿಗೆ ಸರ್ವವಿಧದಲ್ಲೂ ವಿಜಯ ಉಂಟೆಂದು ಫಲಶ್ರುತಿಯನ್ನು ಹೇಳುತ್ತಾರೆ, **ಕುನ್ರಮೆಡುತ್ತ** - ಇಂದ್ರನ ಕ್ರೂರಕೃತ್ಯದಿಂದ ರಕ್ಷಿಸುವ

---

(೧) ಪಾದ್ಮೋತ್ತರ ೨೯. ೪೧. (೨) ತಿರು. ೭. ೪. ೧೧.

ತಡಗೋಪನುರೈ ಶೆಯಲ್"ಎನ್ರುಂ (೩) "ಏತ್ತಿ ಯಿರುಪ್ಪಾರೈ ವೆಲ್ಲುಮೇ, ಮುತ್ತವರೈ ಶಾತ್ತಿಯಿರುಪ್ಪಾರ್ ತವಮ್" ಎನ್ರುಮ್, ಅರುಳಿಚ್ಚೆಯ್ದಾರ್ಗಳ್.

ದಕ್ಕಾಗಿ ಗೋವರ್ಧನೋದ್ಧರಣಮಾಡಿದ, **ಪಿರಾಕ್ರ** - ಸರ್ವ ವಿಧದಲ್ಲೂ ಮಹೋಪಕಾರನಾದ ಶ್ರೀಕೃಷ್ಣನ, **ಅಡಿಯೋರೋಡುಮ್** - ದಾಸರಾದ ಭಕ್ತರೊಂದಿಗೆ, **ಒನ್ರಿವಿನ್ರ** - ವಿಶೇಷ ಪ್ರೀತಿಯಿಂದ ಏಕೀಭವಿಸಿ ನಿಲ್ಲುವ ಸ್ವರೂಪವನ್ನು ಹೊಂದಿ, **ಶಠಗೋಪರ್** - ಶ್ರೀ ನಮ್ಮಾಳ್ವಾರವರಾದ ತಮ್ಮ, **ಉರೈಶೆಯಲ್**- ವಾಚಿಕರೂಪ ಕೈಂಕರ್ಯವಾಗಿ, ಮುಂದೆ, **"ನನ್ರಿ ಪುನೈನ್ದ ವೋರಾಯಿರತ್ತುಳ್ಳಿನೈ। ವೆನ್ರಿತರುಮ್ ಪತ್ತುಮ್ ಮೇವಿ ಕರ್ಸಾರ್ಕ್ಕೇ"** ಎಂದು ಉತ್ತರಾರ್ಧವಿರುತ್ತದೆ; ಓರ್ ಆಯಿರತ್ತುಳ್ - ಅದ್ವಿತೀಯವಾದ ಸಾವಿರ ಪಾಶುರಗಳಲ್ಲಿ, **ನನ್ರಿ ಪುನೈನ್ದ** - ಸರ್ವೇಶ್ವರನ ವಿಜಯ ಸೂಚಕ ದಿವ್ಯ ಚೇಷ್ಟಿತಗಳಿಂದ ಪೂರ್ಣವಾದ, **ಇನ್ನೈ ಪತ್ತುಮ್** - ಈ ಹತ್ತು ಪಾಶುರಗಳನ್ನೂ, **ಮೇವಿಕರ್ಪಾರ್ಕ್ಕು** - ಅರ್ಥಸಹಿತವಾಗಿ ಅಭ್ಯಸಿಸುವರಿಗೆ, **ವೆನ್ರಿತರುಮ್** - ಸಮಸ್ತ ವಿಜಯಗಳನ್ನೂ ಅವು ಕೊಡುತ್ತವೆ, ಇಲ್ಲಿ ಶ್ರೀ ನಮ್ಮಾಳ್ವಾರವರು ತಮಗೆ ಶ್ರೀ ಕೃಷ್ಣನ ಭಕ್ತರೊಂದಿಗೆ ಸೇರಿಮಾಡುವ ವಾಚಿಕ ಕೈಙ್ಕರ್ಯವೇ ತಮಗೆ ಸ್ವರೂಪವಾಗಿ ಭಾವಿಸಿರುತ್ತಾರೆ" ಎನ್ರುಮ್ - ಎಂಬದಾಗಿಯೂ ಮತ್ತು

(೩) ಇದು ಉತ್ತರಾರ್ಧವು. ಪೂರ್ವಾರ್ಧವು--

"ಮೂರಾಯತಾನವನೈ ವಳ್ಳುಗಿರಾಲ್ ಮೂರ್ ಪಿರಣ್ಡು
ಕೂರಾಕಕ್ಕೀರಿಯ ಕೂಳರಿಯೈ-ವೇರಾಕ" ಎಂದು.

ಮೂರಾಯತಾನವನೈ - ಸರ್ವೇಶ್ವರನಿಗೆ ಶತ್ರುವಾಗಿ ಆಚರಿಸಕೂಡದೆಂದು ತಿಳಿಯದ ಹಿರಣ್ಯಕಶಿಪುವೆಂಬ ರಾಕ್ಷಸನನ್ನು, **ವಳ್ಳುಗಿರಾಲ್**-ಕ್ರೂರಗಳಾದ ಉಗುರುಗಳಿಂದ, **ಮೂರ್** - ವಕ್ಷಸ್ಥಳವನ್ನು, **ಇರಣ್ಡುಕೂರಾಗ**-ಎರಡು ಭಾಗವಾಗಿ, **ಕೀರಿಯ** - ಸೀಳಿದ, **ಕೋಳ್ ಅರಿಯೈ** - ಮಹಾ ಪರಾಕ್ರಮಿಯಾದ ಶ್ರೀನರಸಿಂಹ ಸ್ವಾಮಿಯನ್ನು, **ಏತ್ತಿ ಇರುಪ್ಪಾರೈ** - ಸ್ತೋತ್ರಮಾಡುವ ಮಹಾ ಭಾಗವತೋತ್ತಮರ ಮತ್ತು, **ಅವರೈ** - ಅಂತಹ ಭಾಗವತೋತ್ತಮರನ್ನು, **ಶಾತ್ತಿಯಿರುಪ್ಪಾರ್** - ಆಶ್ರಯಿಸಿರುವವರ, ಅಥವಾ ಸ್ತೋತ್ರಮಾಡುವವರ, **ತವಮ್**-ಸುಕೃತವು, **ವೆಲ್ಲುಮೇ** - ಜಯಶೀಲವಾದುದೇ, ಇಲ್ಲಿ ಭಗವದಾರಾಧನ ಸ್ತೋತ್ರ

(೩) ನಾನ್ಮುಗನ್ತಿರುವಂದಾದಿ. ೧೪.

ಇಕ್ಕೈಜ್ಞರ್ಯಜ್ಞಳೈ ತಾಜ್ಞಳ್ ಅನುಷ್ಠಿತ್ತು ಉಗಪ್ಪಾರ್ಕ್ಕುಮ್, ಇದು ಕಣ್ಡು ಉಗಪ್ಪಾರ್ಕ್ಕುಮ್, ಜಗದ್ವ್ಯಾಪಾರಂ ಪಣ್ಣ ವಧಿಕೃತ

ಮಾಡುವವರಿಗಿಂತಲೂ, ಇಂತಹ ಭಾಗವತರನ್ನು ಆರಾಧಿಸುವವರು ಮಹಾ ಸುಕೃತಶಾಲಿಗಳು ಎಂದು ಹೇಳಲ್ಪಟ್ಟಿತ.” ಎನ್ನುವ - ಎಂಬದಾಗಿಯೂ, ಅರುಳಿಚ್ಚೆಯ್ದಾರ್ಗಳ್ - ಕೃಪಯಾ ಉಪದೇಶಿಸಿರುತ್ತಾರೆ; ಯಾರು ಎಂದರೆ ಪಾದ್ಮೋತ್ತರ ಕರ್ತಾವಾದ ಶ್ರೀ ವ್ಯಾಸ ಮಹರ್ಷಿಯೂ, ನಾನ್ಮುಕನ್ತಿರುವನ್ದಾದಿ ಕರ್ತಾವಾದ ತಿರುಮಳಿಶೈಯಾಳ್ವಾರ್ರವರೂ ಎಂದು ಇಟ್ಟುಕೊಳ್ಳತಕ್ಕದ್ದು.

ಹೀಗೆ ಭಗವನ್ನಾರಾಧನಾದಿ ನಿತ್ಯ ನೈಮಿತ್ತಿಕಗಳಲ್ಲಿ ಅನಧಿಕೃತರಿಗೂ, ತದಧಿಕೃತರ ಆಶ್ರಯಣದ ಮೂಲಕ, ಅಧಿಕೃತರಿಗೆ ಉಂಟಾಗುವದು ಯಾವ ಫಲವೋ, ಆ ಫಲವೇ ಬರೀ ಆಶ್ರಯಣ ಮೂಲಕವೇ ಉಂಟಾಗುತ್ತದೆಂದು ಶ್ರೀ ಆಳ್ವಾರಾದಿ ದಿವ್ಯ ಸೂಕ್ತಿಪ್ರಮಾಣಗಳ ಮೂಲಕ ತೋರ್ಪಡಿಸಿದರು. ಪ್ರಪನ್ನರಾದ ಅಧಿಕೃತರಿಗೆ ಹೇಗೆ ಅನರ್ಥ ನಿವೃತ್ತಿರೂಪಪ್ರಯೋಜನವೋ, ಹಾಗೆಯೇ ಮಹಾ ಭಾಗವತಾಶ್ರಯಣದಿಂದಲೇ ಅನಧಿಕೃತ ಪ್ರಪನ್ನರಿಗೂ ಅನರ್ಥ ನಿವೃತ್ತಿಯು ದೊರೆಯುತ್ತದೆಂದು ಹೇಳಲ್ಪಟ್ಟಿತು. ಮೂಲದ ವಾಕ್ಯದಿಂದ ಇದರಲ್ಲಿ ಸಂಶಯ ಬೇಕಿಲ್ಲವೆಂಬುದಕ್ಕಾಗಿ ಒಂದು ದೃಷ್ಟಾಂತ ಮೂಲಕ ಸಮರ್ಥನೆ ಮಾಡಿ ಹೇಳುತ್ತಾರೆ:—ಇಕ್ಕೈಜ್ಞರ್ಯಜ್ಞಳೈ - ಈ ಭಗವದಾರಾಧನಾದಿ ನಿತ್ಯ ನೈಮಿತ್ತಿಕಗಳನ್ನು, ತಾಜ್ಞಳ್ ಅನುಷ್ಠಿತ್ತು - ತಮಗೇ ಅಧಿಕಾರವಿರುವದರಿಂದ ಅನುಷ್ಠಿಸಿ, ಉಗಪ್ಪಾರ್ಕ್ಕುಮ್ - ಭಗವತ್ಪ್ರೀಣನವು ದೊರೆಯುತ್ತದೆಂದು ಸಂತೋಷಪಡುವವರಿಗೂ, ಇದು ಕಣ್ಡು ಉಗಪ್ಪಾರ್ಕ್ಕುಮ್ - ತಮಗೆ ಅಧಿಕಾರವಿಲ್ಲದುದರಿಂದ, ತಾವು ಆಶ್ರಯಿಸಿದ ಭಾಗವತರು ಇವುಗಳನ್ನು ಮಾಡುವದನ್ನು ನೋಡಿ, ತಮಗೂ ಭಗವತ್ಪ್ರೀತಿಯುಂಟಾಗುತ್ತದೆಂಬ ಭಾವನೆಯಿಂದ ಸಂತೋಷಚಿತ್ತರಾಗಿರುವವರಿಗೂ, ಭೋಗಮ್ ಏಕರೂಪಮ್ - ಆದರಿಂದುಂಟಾಗುವ ಆನಂದವೂ ಫಲವೂ ಒಂದೇ ವಿಧವಾದುದು; ಅದನ್ನು ಈಗ ಸ್ಥಾಪಿಸಿದ ಒಂದು ದೃಷ್ಟಾಂತಮೂಲಕ ವ್ಯಕ್ತಪಡಿಸುತ್ತಾರೆ. ಆದರೆ ಅಭಿಗಮನಾದಿ ಆರಾಧನೆಗಳನ್ನು ನಡೆಸುವವರುಗಳಿಗೆ ಉಂಟಾಗುವ ಆನಂದವು ಸುಮ್ಮನೆ ಅವುಗಳನ್ನು ನೋಡುತ್ತಿರುವ ಅಥವಾ ಅಲ್ಪಸಹಾಯವನ್ನು ಮಾಡುವ ಅನಧಿಕೃತರಿಗೆ ಹೇಗೆ ಉಂಟಾದೀತು? ಎರಡೂ ಒಂದೇ ಹೇಗೆ ಆದೀತು? ಇಬ್ಬರಿಗೂ ಒಂದೇ ವಿಧ ಫಲವೆಂದರೆ ಒಪ್ಪತಕ್ಕದ್ದೇ ಎಂಬ ಸಂದೇಹವು ಬಾಧಿಸಬಹುದು. ಹಾಗೆ ಸಂದೇಹಕ್ಕೆ ಸ್ವಲ್ಪವೂ ಅವಕಾಶವಿಲ್ಲವೆಂದು ಒಂದು ದೃಷ್ಟಾಂತ

ನಾನ ಈಶ್ವರನುಕ್ಕುಮ್ ಮುಕ್ತರುಕ್ಕುಮ್ ಪೋಲೆ, ಭೋಗಮೇಕ ರೂಪಮ್. (೧) "ಧರ್ಮಶ್ಚೋದನಾ ದೃಷ್ಟೋವಾ ದೃಷ್ಟೋವಾ ಸ್ಮೃತೋವಾ ಕಥಿತೋಪಿವಾ। ಅನುನೋದಿತೋವಾ ರಾಜೇಂದ್ರ ಪುನಾತಿ ಪುರುಷಂಸದಾ" ಎಜ್ಞ್ಞರ ಪಾವನತ್ವನ್ಪೋಲೆ ಭೋಗ್ಯತ್ವಮುಮ್ ಕುರೈ യില്ലൈ-

---

ಮೂಲಕ ತಿಳಿಸುತ್ತಾರೆ. ಹಿಂದೆ ಮುಕ್ತರೆಲ್ಲರಿಗೂ ಆನಂದವು ಒಂದೇ ಸಮನಾದು ದೆಂದೂ, ಆ ಆನಂದವು ಪರಮಾತ್ಮನ ಆನಂದಕ್ಕೂ ಸಮವೆಂದು ಸ್ಥಾಪಿಸಿದರು, ಅದೃಷ್ಟಾಂತಮೂಲಕವೇ ಇದನ್ನೂ ಸ್ಥಾಪಿಸುತ್ತಾರೆ :—**ಜಗದ್ವ್ಯಾಪಾರಂಪಣ್ಣುವಧಿಕೃತನಾನ ಈಶ್ವರನುಕ್ಕುಮ್** - ಜಗದ್ವ್ಯಾಪಾರವನ್ನು ನಡೆಸುವ ಅಧಿಕಾರವುಳ್ಳ ಸರ್ವೇಶ್ವರನಿಗೂ, **ಮುಕ್ತರುಕ್ಕುಂಪೋಲೆ** - ಮುಕ್ತರಿಗೂ ಭೋಗವು ಹೇಗೆ ಏಕರೂಪವೋ, ಹಾಗೆಯೇ ಇಲ್ಲಿಯೂ ಈ ಕೈಙ್ಕರ್ಯಗಳಲ್ಲಿ ಅಧಿಕಾರಿವಿರುವರಿಗೂ ಅವರನ್ನು ಆಶ್ರಯಿಸಿರುವ ಅನಧಿಕಾರಗಳಿಗೂ ಭೋಗವು ಏಕರೂಪವು ಆದುದರಿಂದ ಈ ವಿಷಯದಲ್ಲಿ ಸಂದೇಹವು ಬೇಕಿಲ್ಲವೆಂಬ ಭಾವವು. ಹಾಗೆ ಈ ಅಧಿಕಾರಿಗಳಿಗೂ ಅನಧಿಕಾರಿಗಳಿಗೂ ಭೋಗವು ಏಕರೂಪವೆಂದು ಶ್ರೀ ವ್ಯಾಸ ಮಹರ್ಷಿಯು ಹೇಳಿರುತ್ತಾರೆಂದು ಭಾರತ ಪ್ರಮಾಣವನ್ನು ಮುಂದೆ ಉದಾಹರಿಸುತ್ತಾರೆ. "**ಧರ್ಮಃ** - ಧರ್ಮವು, ಶಾಸ್ತ್ರದಲ್ಲಿ ವಿಧಿ ನಿಷೇಧರೂಪದಲ್ಲಿ ಹೇಳಿರುವದು, ಶಾಸ್ತ್ರವಿಹಿತವಾದ ಅನುಷ್ಠಾನವು, **ಶ್ರುತೋವಾ** - ಉಪದೇಶರೂಪದಲ್ಲಿ ಕೇಳಲ್ಪಟ್ಟರಾಗಲಿ, **ದೃಷ್ಟೋವಾ** - ಅಂತಹ ಕೈಙ್ಕರ್ಯವು ನೋಡಲ್ಪಟ್ಟರಾಗಲಿ, **ಸ್ಮೃತೋವಾ** - ಹಿಂದೆ ನಡೆದುದನ್ನು ಸ್ಮರಿಸಲ್ಪಟ್ಟರಾಗಲಿ, **ಕಥಿತೋಪಿವಾ** - ಹೇಳಲ್ಪಟ್ಟರಾಗಲಿ, **ಅನುನೋದಿತೋವಾ** - ಬಹು ಚನ್ನಾಗಿ ನಡೆಯಿತು ಎಂದು ಅದನ್ನು ಅಙ್ಗೀಕರಿಸಲ್ಪಟ್ಟರಾಗಲಿ, **ಹೇ ರಾಜೇಂದ್ರ** - ಓರಾಜಶ್ರೇಷ್ಠನೇ, **ಸದಾ** - ಯಾವಾಗಲೂ, **ಪುರುಷಂ** - ಅಧಿಕಾರಿಯನ್ನು, **ಪುನಾತಿ**- ಪವಿತ್ರೀಕರಿಸುತ್ತದೆ. ಪಾಪಗಳು ತೊಲಗುವದರಿಂದ ಪರಿಶುದ್ಧನಾಗುತ್ತಾನೆ ಧರ್ಮಾನುಷ್ಠಾನವನ್ನು ತಾನೇ ಮಾಡಬೇಕೆಂಬ ಆವಶ್ಯಕತೆಯು ಇರುವದಿಲ್ಲವು, ಅದನ್ನು ಕೇಳಿದರೂ ಸರಿಯೇ, ಅಥವಾ ಕಣ್ಣಿನಿಂದ ನೋಡಿದರೂ ಸರಿಯೇ, ಅದನ್ನು ಸ್ಮರಿಸಿದರೂ ಸರಿಯೇ, ಅದನ್ನು ಕುರಿತು ಪಠಿಸಿದರೂ ಸರಿಯೇ, ಅಥವಾ ಅದನ್ನು ಅಙ್ಗೀಕರಿಸಿದರೂ ಸರಿಯೇ ಈತನಿಗೆ ಪಾಪಪರಿಹಾರಮೂಲಕ ಪವಿತ್ರತೆ ಯುಂಟಾಗುತ್ತದೆಂದು ಹೇಳಲ್ಪಟ್ಟಿರುತ್ತದೆ. **ಎಜ್ಞ್ಞರ ಪಾವನತ್ವಂಪೋಲೆ** ಎಂಬ ಪ್ರಮಾಣದಲ್ಲಿ ಹೇಳಲ್ಪಟ್ಟಿರುವ ಪಾವನತ್ವವು ಈ ಎಲ್ಲರಿಗೂ

---

(೧) ಭಾರ. ಅಶಂ. ೯೬, ೩೧.

ಹೇಗೆ ಸಮವೋ, ಹಾಗೆಯೇ, ಭೋಗ್ಯತ್ವವುಮಾ ವಿಕರೂಪವಾಗ - ಈ ಭಗವದಾರಾಧನಾದಿಗಳಲ್ಲಿ ಅಧಿಕಾರವಿರುವವರಿಗೂ, ಅಧಿಕಾರ ವಿಲ್ಲದವರಿಗೂ ಭೋಗ್ಯತ್ವವು ಸಮವೆಂದು ಹೇಳುವದಕ್ಕೇನೂ ಕುರ್ಯಿಯಿಲ್ಲೈ - ಕುಂದಕವಿಲ್ಲವು. ಆದರೆ ಜ್ಯೋತಿಷ್ಟೋಮ ಯಜ್ಞಾನಷ್ಠಾನವನ್ನು ಮಾಡುವನಿಗೆ, ಸ್ವರ್ಗಪ್ರಾಪ್ತಿ ಫಲವುಂಟು, ಅಂಧಾನನನ್ನು ಆಶ್ರಯಿಸಿದವನು ಅದನ್ನು ನೋಡುವದರಮಾತ್ರದಿಂದಲೇ ಸ್ವರ್ಗಪ್ರಾಪ್ತಿ ಹೊಂದುವನೆಂದರೆ ಅಸಂಗತವಲ್ಲವೋ, ಎಂದಾಕ್ಷೇಪ ತಂದರೆ, ಅಲ್ಲಿ ಫಲವು ಮುಖ್ಯ ಕಲ್ಪವಾದ ಅನುಷ್ಠಾನಕ್ಕೆ ಮಾತ್ರವೇ ಹೇಳಿತೇ ವಿನಾ ಅನುಕಲ್ಪನಾದ ನೋಡುವದೇ ಮೊದಲಾದುದಕ್ಕೆ ಹೇಳಿಲ್ಲವು ಆದುದರಿಂದ ನೋಡುವವನಿಗೆ ಸ್ವರ್ಗವಿಲ್ಲವು ಆದರೆ ಪಾವನತ್ವವೇನೋ ಉಂಟು. ಇದು ಪ್ರಸನ್ನ ವಿಷಯವು, ಅಂತಹ ಸ್ವರ್ಗಪ್ರಾಪ್ತಿ ವಿಷಯವಾದುದಲ್ಲವು. ಪ್ರಮಾಣವು ಪಾವನತ್ವಫಲ ವಿಷಯವಾಗಿ ಆದು ಎಲ್ಲರಿಗೂ ಏಕರೂಪವೆಂದು ಹೇಳುವದರಿಂದ, ನಮಗೆ ಆದು ಗ್ರಾಹ್ಯವೆಂದು ಭಾವಿಸತಕ್ಕದ್ದು. ಆದುದರಿಂದ ಭಗವದಾರಾಧನಾದಿ ನಿತ್ಯ ನೈಮಿತ್ತಿಕಗಳನ್ನು ಅನಧಿಕೃತರು ತಾವೇ ಮಾಡದಿದ್ದರೂ, ಹಾಗೆ ಅನುಷ್ಠಿಸುವ ಮಹಾ ಭಾಗವತರನ್ನಾಶ್ರಯಿಸಿ, ಅವರುಗಳು ಮಾಡುವದನ್ನೇ ಅನುಮೋದಿಸಿ ಅದಕ್ಕೆ ಬೇಕಾದ ಸಹಾಯಗಳನ್ನು ಅವರ ಆಜ್ಞಾಧಾರಿಗಳಾಗಿ ಶಿರಸಾವಹಿಸಿ, ನಡೆಸುವದರಿಂದಲೇ ಅಂತಹ ಫಲವೇ ಎಂದರೆ ಅನರ್ಥನಿವೃತ್ತಿಯು ಉಂಟಾಗುತ್ತದೆಂದು ಸಮರ್ಥಿಸಿ ಸಪ್ರಮಾಣವಾಗಿ ಉಪದೇಶಿಸಿರುತ್ತಾರೆ.

ಹೀಗೆ ಭಗವದಾರಾಧನೆಯಲ್ಲಿ ಸ್ತ್ರೀ ಶೂದ್ರಾದಿಗಳಿಗೆ ಅಧಿಕಾರವಿಲ್ಲದಿದ್ದರೂ ಪತಿವ್ರತಾಸ್ತ್ರೀಯು ಪತಿಯನ್ನೇ ಪರದೈವವೆಂದು ಆಶ್ರಯಿಸಿರುವದರಿಂದ, ಪತಿಯು ಅನುಷ್ಠಿಸುವ ಭಗವದಾರಾಧನಾದಿ ನಿತ್ಯ ನೈಮಿತ್ತಿಕಗಳಿಂದಲೇ ಆಕೆಗೂ ಅನಿಷ್ಟನಿವೃತ್ತಿಯು ಮೂಲಕ ಪಾವನತ್ವವೂ, ಶೂದ್ರಾದಿ ಅನಧಿಕೃತರಿಗೂ ಮಹಾ ಭಾಗಪತನನ್ನು ಆಶ್ರಯಿಸಿದರೆ, ಆ ಭಾಗವತನು ಅನುಷ್ಠಿಸುವ ನಿತ್ಯ ನೈಮಿತ್ತಿಕಗಳಿಂದಲೇ ಅವರಿಗೂ ಪಾವನತ್ವವು ಲಭಿಸುತ್ತದೆಂದು ಸ್ಥಾಪಿಸಲ್ಪಟ್ಟಿತು ಆದರೆ ಪ್ರಪನ್ನರಾದ ಸ್ತ್ರೀ ಶೂದ್ರಾದಿಗಳಿಗೂ ಭಗವದನುಸ್ಮರಣೆಯು ಅವಶ್ಯಕವು. ಧ್ಯೇಯೋನಾರಾಯಣಸ್ಸದಾ ಎಂದು ಹೇಳಿರುವದು ಸಾರ್ವತ್ರಿಕವಾಗಿ ಹೇಳಿರುವಂತಾದ್ದು. ಆದರೆಲ್ಲಿ ಎಲ್ಲರಿಗೂ ಅಧಿಕಾರವುಂಟು ಈ ಧ್ಯಾನವು ಅಷ್ಟಾಕ್ಷರ ಮೂಲಕವಾಗಿ ಮಾಡುವದೇ ಪ್ರಶಸ್ತವು. ಆದರೆ ಈ ಅನಧಿಕಾರಿಗಳಿಗೆ ಮೂಲ ಮಂತ್ರೋಚ್ಚಾರಣೆಯು ಸರಿಯಲ್ಲವಲ್ಲಾ, ಹೀಗಿರುವಾಗ ಸರ್ವಾಧಿಕಾರವಾದ ಈ ಭಗವದನುಸ್ಮರಣೆಯನ್ನು ಅವರುಗಳು ಯಾವರೀತಿಯಲ್ಲಿ ಮಾಡತಕ್ಕದ್ದೆಂಬುದನ್ನು ಮುಂದೆ ಉಪದೇಶಿಸುತ್ತಾರೆ :—

ಅನಧಿಕೃತ ಪ್ರಪನ್ನೈಃ ಭಗವದನುಸ್ಮರಣಂ ಕಥಂ ಕರ್ತವ್ಯಂ ?

ಅಪ್ಪಡಿಯೇ (೧) "ತಸ್ಮಾತ್ಸಪ್ರಣವಂ ಶೂದ್ರೋ ಮನ್ನಾಮಾನಿ ನಕೀರ್ತಯೇತ್" ಎನ್ನು ಮಹಾ ಭಾರತತ್ತಿಲುಮ್, (೨) ಅಷ್ಟಾಕ್ಷರ ಜಪಸ್ತ್ರೀಣಾಂ ಪ್ರಕೃತ್ಯೈವ ವಿಧೀಯತೇ। ನ ಸ್ವರಃ ಪ್ರಣವೋಜ್ಞಾನಿ ನಾ

ಅನಧಿಕೃತರಾದ ಪ್ರಪನ್ನರಿಂದ ಭಗವದನುಸ್ಮರಣೆಯು ಹೇಗೆನಾಡತಕ್ಕದ್ದು ?

ಅಪ್ಪಡಿಯೇ - ಭಗವದಾರಾಧನಾದಿಗಳಲ್ಲಿ ಅಧಿಕೃತರಾದವರಿಗೆ ಪಾಂಚಕಾಲಿಕ ಭಗವನ್ನಾಮಸ್ಮರಣೆಯ ರೂಪಮೂಲಮಂತ್ರಾದಿ ರಹಸ್ಯಗಳ ಮೂಲಕ ಧ್ಯಾನವೂ ಸಹ ಹೇಗೆ ಆವಶ್ಯಕವೋ ಹಾಗೆಯೇ, ಮುಂದೆ ಅನಧಿಕೃತರಾದ ಸ್ತ್ರೀ ಶೂದ್ರಾದಿಗಳಿಗೆ ಭಗವದನುಸ್ಮರಣವು ಆವಶ್ಯಕವೆಂದು ಹೇಳಿ **ಭಗವದನುಸ್ಮರಣ ರಸತ್ತುಕ್ಕು** - ಭಗವದನುಸ್ಮರಣವಿಂದುಂಟಾಗುವ ಆನಂದಕ್ಕೇನೂ **ಆನರಿಗೂ, ಕ್ಕುರೈಯಿಲ್ಲೈ** - ನ್ಯೂನತೆಯಿಲ್ಲವೆಂದು ಹೇಳುತ್ತಾರೆ; ಅದಕ್ಕೆ ಕೆಲವು ಪ್ರಮಾಣಗಳನ್ನು ದಾಹರಿಸುತ್ತಾರೆ (೧) **ತಸ್ಮಾತ್**-ಆಕಾರಣದಿಂದ ಶೂದ್ರನು **ಮನ್ನಾಮಾನಿ** - ನನ್ನ ನಾಮಗಳನ್ನು, **ಅಷ್ಟೋತ್ತರ ಸಹಸ್ರ ನಾಮಾವಳಿಗಳಲ್ಲಿ, ಸಪ್ರಣವಂ** ಪ್ರಣವ ಸಹಿತವಾಗಿ, **ನ ಕೀರ್ತಯೇತ್**-ಉಚ್ಚರಿಸಬಾರದು ಆತನು, **ಹರಿಃ ಓಂ** ಎಂದು ಹೇಳಕೂಡದು, **ಓಂ ಶ್ರೀಕೃಷ್ಣಾಯನಮಃ, ಓಂ ಶ್ರೀರಾಮಾಯನಮಃ** ಎಂದೂ ಹೇಳಕೂಡದು, ದೇವರ ನಾಮಗಳನ್ನೇ ಉಚ್ಚರಿಸಬಾರದು ಎಂಬ ಅಭಿಸಂಧಿಯವಲ್ಲವು; **ಓಂ** ಎಂದು ಪ್ರಣವಸೊಂದಿಗೆ ಉಚ್ಚರಿಸತಕ್ಕದ್ದಲ್ಲವೆಂಬ ಭಾವವು" ಎನ್ನು ಭಾರತತ್ತಿಲುಮ್ ಎಂದು ಭಾರತದಲ್ಲೂ (೨) ಮತ್ತು, **ಸ್ತ್ರೀಣಾಂ** - ಬ್ರಾಹ್ಮಣಾದಿ ತ್ರೈವರ್ಣಿಕ ಸ್ತ್ರೀಯರುಗಳಿಗೆ, ಸುಮ್ಮನೆ ಸ್ತ್ರೀಣಾಂ ಎಂದಿದ್ದರೂ ಹೀಗೆ ಅರ್ಥವನ್ನು ಗೋಬಲೀವರ್ದನ್ಯಾಯದಿಂದ ಮಾಡಿರುತ್ತದೆ, ಏಕೆಂದರೆ ಮುಂದೆ **ಸ್ತ್ರೀಣಾಂತು ಶೂದ್ರಜಾತೀನಾಂ** ಎಂದು ಶೂದ್ರಸ್ತ್ರೀಯರಿಗೆ ಬೇರೇ ವಿಧಾನವು ಹೇಳಲ್ಪಟ್ಟಿರುತ್ತದೆ, **ಅಷ್ಟಾಕ್ಷರ ಜಪಃ** - ಮೂಲ ಮಂತ್ರ ಜಪವು, **ಪ್ರಕೃತ್ಯೈವ** - ಮಂತ್ರವೆಷ್ಟೋ ಅಷ್ಟು ಮಾತ್ರದಿಂದಲೇ ಎಂದರೆ ಸ್ವರದಿಂದ ಉಚ್ಚಾರಣೆಯೂ ಕೂಡದು, ಪ್ರಣವದಿಂದ ಉಚ್ಚಾರಣೆಯೂ ಕೂಡದೆಂಬುದು ತಾತ್ಪರ್ಯವು. ಇದನ್ನೇ ಮುಂದೆ

---

(೧) ಭಾರ. ಅಶಂ.೧೧೪. ೧೪. (೨) ನಾರದೀಯೇ,

ಪ್ಯನ್ಯ ವಿಧಯಸ್ತಥಾ । ಸ್ತ್ರೀಣಾಂತು ಶೂದ್ರಜಾತೀನಾಂ ಮಂತ್ರ ಮೂಹ ತ್ರೋಕ್ತೆ ರಿಷ್ಯತೇ" ಎನ್ನು ನಾರದೀಯಾದಿಗಳಿಲುಮ್, (೩) "ನಮೋ ನಾರಾಯಣೇತ್ಯುಕ್ತ್ವಾ ಶ್ವಪಾಕಃ ಪುನರಾಗಮತ್" ಎನ್ನು ಶ್ರೀ ವರಾಹ ಪುರಾಣತ್ತಿಲುಮ್, (೪) "ವಾಯಿನಾಲ್ ನಮೋ ನಾರಣಾವೆನ್ನು ಮತ್ತ ಕೆತ್ತಿಡಕ್ಕೈಗಳೈ ಕ್ಕೂಪ್ಪಿ" ಎನ್ನುಮ್, (೫) ನಾಮುಂ ಶೊಲ್ಲಿಲ್ ನಮೋ

ವಿವರಿಸುತ್ತಾರೆ :—**ನ ಸ್ವರಃಪ್ರಣವೋಜಿಹ್ಮಿ** - ಉದಾತ್ತಾದಿ ಸ್ವರದೊಂದಿಗೆ ಉಚ್ಚಾರಣೆಯಿಲ್ಲದೆಯೂ, ಪ್ರಣವವಿಲ್ಲದೆಯೂ, ಅಂಗನ್ಯಾಸ ಕರನ್ಯಾಸಾದಿಗಳಿಲ್ಲದೆಯೂ ಇರತಕ್ಕದ್ದು, **ತಥಾ** - ಹಾಗೆಯೇ, **ನಾಪ್ಯನ್ಯ ವಿಧಯಃ** - ಬೇರೆ ಇನ್ನು ಯಾವ ವಿಧಿಗಳೂ ಇಲ್ಲವು, ಋಷಿ ಛಂದಸ್ಸುಗಳೂ ಇಲ್ಲವು ಎಂಬ ಭಾವವು. ಈ ಪ್ರಮಾಣವನ್ನೇ ಮುಂದೆ **ಪುನಃ** ಮೂಲಮಂತ್ರಾಧಿಕಾರದಲ್ಲೂ ಉದಾಹರಿಸಿರುತ್ತಾರೆ ಅಲ್ಲಿ ಮಂತ್ರಗಳ ಉಪದೇಶವು ವೈದಿಕ, ವೈದಿಕ ತಾಂತ್ರಿಕ, ತಾಂತ್ರಿಕ ವೆಂದು ಮೂರು ವಿಧವೆಂದೂ, ಬ್ರಾಹ್ಮಣನಿಗೆ ವೈದಿಕವಾಗಿಯೂ, ಕ್ಷತ್ರಿಯರಿಗೆ ವೈದಿಕ ತಾಂತ್ರಿಕವಾಗಿಯೂ, ವೈಶ್ಯ ಶೂದ್ರರಿಗೆ ತಾಂತ್ರಿಕವಾಗಿಯೂ ಇರತಕ್ಕದ್ದೆಂದು ಪಾಂಚರಾತ್ರದಲ್ಲಿ ಹೇಳ್ಪಟ್ಟಿದೆಯೆಂದು ತಿಳಿಸಿ, ಮೂಲಮಂತ್ರವು ಪ್ರಣವ ಚತುರ್ಥಿಗಳಿಲ್ಲದುದಾದರೆ ಮಂತ್ರಾಧಿಕಾರವಿಲ್ಲದ ಸರ್ವರಿಗೂ ಉಪಯುಕ್ತವಾದುದಾಗುತ್ತದೆಂದು ಹೇಳಲ್ಪಟ್ಟಿರುತ್ತದೆ." **ಎನ್ನು** - ಎಂಬದಾಗಿ, **ನಾರದೀಯಾದಿಗಳುಮ್** ನಾರದೀಯ ಪುರಾಣವೇ ಮೊದಲಾದವುಗಳಲ್ಲೂ (೩) **ನಮೋ ನಾರಾಯಣೇತ್ಯುಕ್ತ್ವಾ** - ಪ್ರಣವ ಚತುರ್ಥಿಗಳಿಲ್ಲದೆ ಸ್ವರದಿಂದಲೂ ಉಚ್ಚರಿಸದೆ ಸುಮ್ಮನೆ **ನಮೋನಾರಾಯಣಾ** ಎಂದು ಇಷ್ಟುಮಾತ್ರ ಉಚ್ಚರಿಸಿದರೆ, **ಶ್ವಪಾಕಃ**-ನಾಯಿ ಮಾಂಸವನ್ನು ತಿನ್ನುವ ಚಂಡಾಲನೂ ಕೂಡ, **ಪುನರಾಗಮತ್** - ಪುನಃ ಹಿಂತಿರುಗಿಬಂದನು, ಹಾಗೆ ಮಂತ್ರವನ್ನು ಉಚ್ಚರಿಸಿದುದರಿಂದ ಅಧೋಗತಿಯಿಂದ ಹಿಂತಿರುಗಿದನು ಎಂಬ ಭಾವವು," **ಎನ್ನು** - ಎಂಬದಾಗಿ, **ಶ್ರೀವರಾಹ** ಪುರಾಣದಲ್ಲೂ, (೪) "**ವಾಯಿನಾಲ್**" ಇತ್ಯಾದಿ-ಇದರ ಅರ್ಥ ತಾತ್ಪರ್ಯಗಳಿಗೆ ೧೮೫-೮೬ ನೆಯ ಪುಟಗಳನ್ನು ನೋಡಿ **ಎನ್ನುಮ್**-ಎಂಬದಾಗಿಯೂ (೫) ತಿರುಮಜಿಶೈ ಆಳ್ವಾರ್ ಅನುಗ್ರಹಿಸಿರುವ ಪೆರಿಯ ತಿರುವೊಳಿ ಆರಾಂಪತ್ತುಪತ್ತಾನ್ದಿರುವೊಳಿಯ ಪ್ರತಿಯೊಂದು ಪಾಶುರದಲ್ಲೂ "**ನಾನುಮ್ ಶೊಲ್ಲಿಲ್ ನಮೋ ನಾರಾಯಣನೇ**" ಎಂದು ಪಲ್ಲವಿರೂಪದಲ್ಲಿ ಇರುತ್ತದೆ.

---

(೩) ವರಾಹಪುರಾಣ ೧೫೯-೫೩ (೪) **ಪೆರಿ.ತಿರು. ೪.೫ ೨.(೫) ಪೆರಿ. ೬. ೧೦. ೧**

ನಾರಾಯಣನೋ" ಎನ್ನುವ್, ಶೊಲ್ಲುಗಿರಪಡಿಯೋ ತಿರುಮಂತ್ರಮಾ ಗಿರ ಎಟ್ಟುಕ್ಕಣ್ಣನ ಕರುವಿಲೇ ನೇರ್ ಪ್ಪತ್ತುವ್ ತಲೈಯಾಡೈ ಯುವ್ ಕೆಳಿನಾಲ್ ನಡುವುಳ್ಳ ಅಂಶವ್ ಸರ್ವೋಪಜೀವ್ಯ ಮಾಗಿರಾ ಪ್ಪೋಲೆ ಪ್ರಪತ್ತಿ ನಿಷ್ಠರೆಲ್ಲಾರ್ಕ್ಕುವ್ ಸರ್ವಕಾಲತ್ತಿಲುವ್ ಭಗವದನು

ಹೀಗೆ **"ನಾಮುವ್ ಶೊಲ್ಲಿಲ್"** ಪರಮಪುರುಷನ ನಾಮಗಳನ್ನು ಹೇಳಲಾಗಿ ಆತನು ಎಂತವನೆಂದರೆ, ಶ್ರಿಯಃಪತಿಯಾಗಿ, ಆಶ್ರಿತಸುಲಭನಾಗಿ ಅತಿ ಮಾನುಷ ಚೇಷ್ಟಿತೆಗಳನ್ನು ನಡೆಸುವ ಸಾಮರ್ಥ್ಯವುಳ್ಳವನಾಗಿ, ವಿರೋಧಿನಿರಸನ ಶೀಲನಾಗಿ ಉಭಯವಿಭೂತಿಯುಕ್ತನಾಗಿರುವ ಪರಮಪುರುಷನ ನಾಮವನ್ನು ಹೇಳಿದರೆ ನಮಗೆ ಇಷ್ಟಾರ್ಥಸಿದ್ಧಿಯುಂಟು. ಅದನ್ನು ಹೇಳುವದು ಹೇಗೆ ಎಂದರೆ **"ನಮೋ ನಾರಾಯಣನೋ"** ಮೂಲಮಂತ್ರದಲ್ಲಿ ಹೇಳಿರುವ **"ನಮೋನಾರಾಯಣ"** ಎಂಬದಾಗಿ ಎಂಬ ತಾತ್ಪರ್ಯವು ಮೊದಲು ಪಾಶುರದಲ್ಲಿ **ಕಂಡುಕೊಣ್ಡೇನ್ ನಾರಾಯಣನೆನ್ನವ್ ನಾಮುವ್"** ಎಂಬ ಅಭಿಪ್ರಾಯವೇ ಇಲ್ಲಿಯೂ ಸ್ಮಾರಿತವು" **ಶೊಲ್ಲುಗಿರಪಡಿಯೋ** - ಹೇಳಿರುವ ಮೇರೆಗೆ, **ತಿರುಮಂತ್ರವಾ ಗಿರ** - ಮೂಲಮಂತ್ರವಾಗಿರಲು, **ಎಟ್ಟುಕ್ಕಣ್ಣನ** - ಎಂಟು ಗೆಣ್ಣುಗಳುಳ್ಳ, **ಕರುವಿಲೇ** – ಕಬ್ಬಿನಲ್ಲಿ, **ನೇರ್ ಪತ್ತುವ್** - ಮೂಲಭಾಗವನ್ನೂ, ಬುಡ ವನ್ನೂ, **ತಲೆಯಾಡೈ** - ಅಗ್ರ ಭಾಗವಾದ ಸೋಗೈಯನ್ನೂ, **ಕೆಳಿನಾಲ್** - ತೆಗದುಹಾಕಿದರೆ, **ನಡುವುಳ್ಳಅಂಶವ್** - ಮಧ್ಯಭಾಗವು, **ಸರ್ವೋಪಜೀವ್ಯ ಮಾಗಿರಾಪ್ಪೋಲೆ** - ಸಮುಸ್ತರಿಗೂ ಸತ್ತ್ವಯನ್ನು ಕೊಡುವ ರೀತಿಯಲ್ಲಿ ಭೋಗ್ಯ ವಾಗಿರುವಹಾಗೆ, **ಪ್ರಪತ್ತಿ ನಿಷ್ಠರೆಲ್ಲಾರ್ಕ್ಕುವ್** - ಪ್ರಪತ್ತಿಯನ್ನನುಷ್ಠಿಸುವ ರೆಲ್ಲರಿಗೂ, ಸ್ತ್ರೀ ಶೂದ್ರಾದಿಗಳೆಲ್ಲರಿಗೂ ಎಂಬಭಿಪ್ರಾಯವು, ಭಗವದನುಸ್ಮರಣ ದಿಂದುಂಟಾಗುವ, ರಸತ್ತುಕ್ಕು-ಆನಂದಕ್ಕೆ ಎಂದರೆ ಆನಂದಪ್ರಾಪ್ತಿಗೆ ವಿರೋಧ ವಿಲ್ಲವು. ಇಲ್ಲಿ ತಿರುಮಂತ್ರವು ಅವ್ಯತವೆಂದು ಹೇಳಿಸಿಕೊಳ್ಳುವ ಮೋಕ್ಷಾನಂದ ಪ್ರಾಪ್ತಿಯನ್ನುಂಟುಮಾಡುವದರಿಂದ ಸ್ವಾದುತಮವಾದ ಕಬ್ಬಿಗೆ ಹೋಲಿಸಲ್ಪಟ್ಟಿ ರುತ್ತದೆ. ಅದು ಅಷ್ಟಾಕ್ಷರ ಮಂತ್ರವಾದುದರಿಂದ ಎಂಟು ಗೆಣ್ಣುಗಳುಳ್ಳದ್ದು; ಸರ್ವರಿಗೂ ಭೋಗ್ಯವಾಗುವದಕ್ಕೆ ಕೆಳಗಿನ ಕಠಿಣವಾದ ಗಂಟಿನ ಭಾಗವನ್ನು ಮೇಲಿನ ರುಚಿಯಿಲ್ಲದ ತೆಂಡೆಭಾಗವನ್ನೂ ಕಬ್ಬಿನಲ್ಲಿ ತೆಗದುಹಾಕಿದರೆ, ಸರ್ವರಿಗೂ ಹೇಗೆ ಭೋಗ್ಯವಾದುದಾಗುತ್ತದೆಯೋ, ಹಾಗೆಯೇ ಮೂಲಮಂತ್ರದ ಮೂಲಭಾಗ ವಾದ ಪ್ರಣವವನ್ನೂ, ಅಗ್ರಭಾಗವಾದ ಚತುರ್ಥಿಯನ್ನೂ ತೆಗದು ಹಾಕಿದರೆ, ಸರ್ವಾಧಿಕಾರವುಳ್ಳದಾಗುತ್ತದೆಂಬ ಭಾವವು. **ಪ್ರಣವಚತುರ್ಥಿ**

ಸ್ಮರಣರಸತ್ತುಕ್ಕು ವಿರೋಧಮಿಲ್ಲೈ. ಸಪರಿಕರಮಾನ ವಿಲಕ್ಷಣಭಕ್ತಿಯೋಗ ಮಾಗಲಿರೆ ಶಿಲರುಕ್ಕು ವಿರೋಧಮುಳ್ಳದು. ಕ್ಷಣಮಾತ್ರ ಸಾಧ್ಯಮಾನ ಪ್ರಪ

ಗಳಿಲ್ಲದಿದ್ದರೆ **ವಿರೋಧಮಿಲ್ಲೈ** ಎಂದು ಹೇಳಿರುವದರಿಂದ, ಪ್ರಣವ ಚತುರ್ಥಿ ಗಳು ಇದ್ದರೆ, ಪಾಂಚರಾತ್ರಾದಿ ಅನೇಕ ಪ್ರಮಾಣಗಳಿಗೆ ವ್ಯತ್ಯಸ್ತವಾದುದರಿಂದ ಈ ಅಧಿಕಾರಿಗಳಿಗೆ ವಿರೋಧವೆಂಬ ತಾತ್ಪರ್ಯವು; ಸ್ತ್ರೀ ಶೂದ್ರಾದಿಗಳಿಗೆ ಪ್ರಣವವು ಕೂಡದೆಂಬುದಕ್ಕೆ ಮಹಾಭಾರತ ವಚನವನ್ನೂ, ಸ್ವರ ಕೂಡದೆಂಬುದಕ್ಕೆ ನಾರದೀಯವಚನವನ್ನೂ, ಪ್ರಣವಚತುರ್ಥಿಗಳಿಲ್ಲದಿದ್ದರೆ ಸರ್ವವಿಷಯವಾಗುತ್ತದೆಂಬುದಕ್ಕೆ ಶ್ರೀ ವಾರಾಹ ವಚನವನ್ನೂ, ಉದಾಹರಿಸಿ, ಆಳ್ವಾರುಗಳಭಿಪ್ರಾಯವೂ ಹಾಗೆಯೇ ಎಂಬುದಕ್ಕೆ ಶ್ರೀ ತಿರುಮಂಗೈಯಾಳ್ವಾರವರ ಪಾಶುರವನ್ನು ಉದಾಹರಿಸಿರುತ್ತಾರೆ. ಭಕ್ತಿಯೋಗಕ್ಕೀಗ ತ್ರೈವರ್ಣಿಕರೇ ಆಗಿರಬೇಕೆಂಬ ಇವಶ್ಯಕವೆಂದೂ ಇತರರಿಗೆ ಕೂಡವೆಂಬ ವಿರೋಧೋಕ್ತಿಯುಂಟು; ಈ ಪ್ರಪತ್ತ್ಯುಪಾಯದಲ್ಲಾದರೋ ಹಾಗಿಲ್ಲವು; ಭಗವದನುಸ್ಮರಣರೂಪ ಆನಂದವು ಸಾರ್ವತ್ರಿಕವಾಗಿ ಉಂಟು. ಈ ಸರ್ವೋಪಜೀವ್ಯವಾಗಿರುವ ವೈಲಕ್ಷಣ್ಯವು ಭಕ್ತಿಯೋಗಕ್ಕಿಲ್ಲವೆಂಬ ಭಾವವು. **ಸರ್ವಕಾಲತ್ತಿಲುಮ್** ಎಂದು ಹೇಳಿರುವದು ದೇಹಯಾತ್ರಾದಿ ಆವಶ್ಯಕಗಳಾದ ಕಾರ್ಯಗಳಿಗೆ ಬೇಕಾದ ಕಾಲವಲ್ಲದ ಮಿಕ್ಕ ಎಲ್ಲಾ ಕಾಲಗಳಲ್ಲೂ ಭಗವದನುಸ್ಮರಣಮಾಡುವದು ಪ್ರಪನ್ನನಿಗೆ ಉಚಿತವಾದುದೆಂದು ಇದರಿಂದ ಹೇಳಲ್ಪಟ್ಟಿತು ಹಾಗೆಯೇ ಶ್ರೀ ಭಾಷ್ಯಕಾರರಿಗೆ ಸರ್ವಲೋಕಶರಣ್ಯನಾದ ಶ್ರೀ ರಂಗನಾಥನು ಉಪದೇಶಿಸಿದನೆಂದು ಹೇಳುತ್ತಾರೆ. ಹೀಗೆ ಭಗವದನುಸ್ಮರಣವು "ವಿದ್ವಾಂಸ ಏವ ಮಾನಸೇ ರಮನ್ತೇ" ಎಂಬ (ತೈ ನಾ) ಶ್ರುತಿವಾಕ್ಯದ ಹಾಗೆ, ಪರಮಾನಂದಪ್ರದವೆಂದು ಹೇಳುವವಕ್ಕಾಗಿಯೇ, **ಭಗವದನುಸ್ಮರಣರಸತ್ತುಕ್ಕು** ಎಂಬ ಪ್ರಯೋಗವು. ಈ ಸ್ವತಂತ್ರಪ್ರಪತ್ಯನುಷ್ಠಾನಮಾಡಿದ ಸಮಸ್ತ ಪ್ರಪನ್ನರೂ ಈ ಭಗವದನುಸ್ಮರಣವನ್ನು ಪ್ರಣವಚತುರ್ಥಿಗಳಿಲ್ಲದ ಮೂಲ ಮಂತ್ರ ಜಪದಿಂದ ಮಾಡಬಹುದು. ಇದೀಗ ಮಹತ್ತಾದ ಉಪಕಾರವು ಈ ಅನುಕೂಲವು ಭಕ್ತಿಯೋಗಕ್ಕೆ ಇಲ್ಲವೆಂದೂ ತ್ರೈವರ್ಣಿಕರು ಮಾತ್ರವೇ ಸಪರಿಕರವಾದ ಭಕ್ತಿಯೋಗವನ್ನವಲಂಬಿಸತಕ್ಕದ್ದೇವಿನಾ, ಇತರರು ಅನುಷ್ಠಿಸಿದುದಾದರೆ ವಿರೋಧವೆಂದು ಮುಂದಿನ ವಾಕ್ಯದಿಂದ ತಿಳಿಸುತ್ತಾರೆ:—**ಸಪರಿಕರಮಾನ** – ಶ್ರವಣ ಮನನಾದಿ ಅಂಗಗಳಿಂದ ಸೇರಿದ, **ವಿಲಕ್ಷಣವಾದ**, ಎತಕ್ಕೆ **ವಿಲಕ್ಷಣವೆಂದರೆ** "**ಭಜನಸುಖನೈಕೇಸ್ಯ ವಿಪುಳಂ**" ಎಂದು ಹೇಳಿರುವಹಾಗೆ ತೈಲಧಾರಾವಚ್ಛಿನ್ನ ಸತತ ಧ್ಯಾನದಿಂದ ಉಂಟಾಗತಕ್ಕ ಆನಂದವು ಅಸದೃಶವಾದುದು, ಆದುದರಿಂದ

ದನಂ, ಸಿದ್ಧಮಾನವಳಿವಿಲುಮ್, (೧) "ದ್ವಯಮರ್ಥಾನುಸಂಧಾನೇನ ಸಹ ಸದೈವಂ ವಕ್ತಾ" ಎನ್ನು ಶರಣ್ಯ ನರುಳಿ ಚಿಯ್ದಾನಿರೇ.

ವಿಲಕ್ಷಣವಾದ **ಭಕ್ತಿಯೋಗವೀಗ ಶಿಲರ್ಕು** - ಕೆಲವರಿಗೆ ಎಂದರೆ ಸ್ತ್ರೀ ಶೂದ್ರಾದಿಗಳಿಗೆ, ವಿರೋಧವುಳ್ಳದುದು ಇಂತಹ ಭಗವದ್ಧ್ಯಾನರೂಪ ಅನುಸ್ಮರಣೆಯಲ್ಲಿ ಸೆಮುಸ್ತ ಪ್ರಪನ್ನರಿಗೂ ಅಧಿಕಾರ ಉಂಟೆಂದೂ, ಅವನ್ನು ಪ್ರಣವ ಚತುರ್ಥಿ ರಹಿತ ವೂಲನಮಂತ್ರ ಜಪರೂಪ ವಾತ್ರವೇ ಅಲ್ಲದೆ, ದ್ವಯಮಂತ್ರೋಚ್ಚಾರಣ ಮೂಲಕವಾಗಿಯೂ ನಡೆಸಬಹುದೆಂದೂ, ಈ ಸಂದರ್ಭದಲ್ಲಿ ಶರಣ್ಯನಾದ ಶ್ರೀರಙ್ಗನಾಥೋಕ್ತಿಯೇ ಇದಕ್ಕೆ ಎಂದೂ ಮುಂದಿನ ವಾಕ್ಯದಿಂದ ತಿಳಿಸುತ್ತಾರೆ:— **ಕ್ಷಣನಾತ್ರಸಾಧ್ಯಮಾನ**-ಅಲ್ಪಕಾಲದಲ್ಲಿ ಸಕೃದನುಷ್ಠಾನದಿಂದ ಸಾಧ್ಯವಾದ ಇಲ್ಲಿ ಕ್ಷಣವೆಂಬುದು ಬೌದ್ಧನು ಹೇಳುವ ಕ್ಷಣವಲ್ಲವು, **ಅಲ್ಪಕಾಲವೆಂಬರ್ಥವು**; ಏಕೆಂದರೆ ಪ್ರಪದನಾನುಷ್ಠಾನವು ಬೌದ್ಧನು ಹೇಳುವ ಕ್ಷಣಕಾಲದಲ್ಲಿ ಆಗುವದಿಲ್ಲವು. **ಪ್ರಪದನಂ**-ಸ್ವತಂತ್ರ ಪ್ರಪತ್ತಿಯು, **ಸಿದ್ಧಮಾನ ವಳಿವಿಲುಮ್**-ಸಿದ್ಧಿಸಿ ಈತನು ಕೃತ ಕೃತ್ಯನೆಂದು ಹೇಳಿಸಿಕೊಂಡರೂ ಉತ್ತರಕೃತ್ಯವಾಗಿ, ಭಗವದನುಸ್ಮರಣವೂ ಈ ಕೃತಕೃತ್ಯನಾದ ಪ್ರಪನ್ನನಿಗೆ ಅವಶ್ಯಕವೆಂದು ಹೇಳುತ್ತಾರೆ, **"ಏವಂ** - ಈ ಪ್ರಕಾರವಾಗಿ ವಿರಕ್ತಿಭಾವದಿಂದ ಐಹಿಕದಲ್ಲಿ ಮಮತೆಯನ್ನು ತೊರೆದು, ಭಗವಂತನನ್ನು ಸ್ಮರಿಸುತ್ತಾ, **ಸದಾ** - ಯಾವಾಗಲೂ ಎಂದರೆ ತನಗೆ ನಿರ್ವಾಹವಿಲ್ಲದೆ ದೇಹಯಾತ್ರೆಗೆ ಬೇಕಾದ ಕಾಲವೇನು, ಈತನಿಗೆ ನಿಯತಕರ್ಮಗಳ ಅನುಷ್ಠಾನವೇನು, ಇಂತಹವುಗಳಿಗೆ ಅನ್ವಯಿಸಿ ಮಿಕ್ಕ ಎಲ್ಲಾ ಕಾಲದಲ್ಲೂ ಎಂಬರ್ಥವು, **ಅರ್ಥಾನುಸಂಧಾನೇನ ಸಹ** - ಮಂತ್ರದಲ್ಲಿ ಬೋಧಿತವಾದ ಸಮಸ್ತ ಅರ್ಥಗಳನ್ನು ತಿಳಿದು ಅನುಸಂಧಾನದೊಡನೆ **ದ್ವಯಂ** - ದ್ವಯಮಂತ್ರವನ್ನು, **ವಕ್ತಾ** - ಉಚ್ಚರಿಸುವವನಾಗಿ" ಎನ್ನು - ಎಂಬದಾಗಿ, **ಶರಣ್ಯಃ** - ಸರ್ವಲೋಕ ಶರಣ್ಯನಾದ ಶ್ರೀರಙ್ಗನಾಥನು, **ಅರುಳಿ ಚಿಯ್ದಾನಿರೇ** - ಶ್ರೀ ಭಾಷ್ಯಕಾರರವರಿಗೆ ಪರಮಕೃಪಯಾ ಉಪದೇಶಿಸಿದನಲ್ಲವೇ? ಶ್ರೀ ಯತಿವರ್ಯರು ಶ್ರೀರಙ್ಗನಾಥನನ್ನು ಕುರಿತು ಮಾಡಿದ ಪ್ರಶ್ನೆಗೆ ಸರ್ವೇಶ್ವರನು ದಯಪಾಲಿಸಿದ ಉತ್ತರವು. ಹೀಗೆ ದ್ವಯಮಂತ್ರಾರ್ಥಾನುಸಂಧಾನದೊಂದಿಗೆ ಸದಾ ದ್ವಯಮಂತ್ರವನ್ನು ಉಚ್ಚರಿಸುತ್ತಾ, ತನ್ನನ್ನೇ ನಿರಂತರ ಧ್ಯಾನಿಸುತ್ತಾ "ಆತ್ಮೈವ ಶ್ರೀರಙ್ಗೇ ಸುಖಮಾಸ್ವ" ದೇಹಪಾತದವರೆಗೂ ಈ ಶ್ರೀರಙ್ಗದಲ್ಲೇ ಸುಖದಿಂದ ಇದ್ದುಬಿಡು ಎಂದು ಆಜ್ಞಾಪಿಸಿದರು. ಈ ಪ್ರಪ

(೧) ಶರಣಾಗತಿ ಗದ್ಯಂ.

ದನವು ಕ್ಷಣಮಾತ್ರ ಸಾಧ್ಯವೆಂದು ಹೇಳಿದುದರಿಂದ ಭಕ್ತಿಮಾರ್ಗಕ್ಕಿಂತ ಅತಿ ಸುಲಭೋಪಾಯವಾಗಿ ಸರ್ವಾಧಿಕಾರವಾಗಿರುವ ಪ್ರಭಾವಸೂಚಿತವಾದುದರಿಂದ, ಮುಂದೆ ಪ್ರಭಾವ ವ್ಯವಸ್ಥಾಧಿಕಾರವು ಹೇಳಲ್ಪಡುತ್ತದೆಂಬುದು ಸೂಚಿತವು. ಆದೂ ಅಲ್ಲದೆ ಪ್ರಪನ್ನನು ತನಗೆ ಸ್ವರೂಪವಾದ ಭಗವದನುಸ್ಮರಣಕ್ಕೆ ಪರಿಕರ ರಹಿತ ಮೂಲ ಮಂತ್ರೋಚ್ಚಾರಣೆಯಹಾಗೆ ದ್ವಯವನ್ನೂ ಕೂಡ ಉಚ್ಚರಿಸಬಹುದೆಂದು ಇದರಿಂದ ಸೂಚಿತವು. ಆದರೆ ಶರಣ್ಯೋಕ್ತಿಯು ಪರಮ ಬ್ರಹ್ಮ ವಿತ್ತಾದ ಶ್ರೀ ಯತಿವರ್ಯರಿಗೆ ಹೇಳಿದುದು ಆದು ಹೇಗೆ ಸರ್ವಾಧಿಕಾರವುಳ್ಳದು ಎಂದು ಹೇಳಲಾದೀತು ಎಂದರೆ ಶ್ರೀ ಯತಿವರ್ಯರೇ ಈ ದ್ವಯಮಂತ್ರದ ಉಪದೇಶವನ್ನು ತಮ್ಮ ಗುರುವಾದ ತಿರುಕ್ಕೋಟ್ಟಿಯೋರ್ ನಂಬಿಯವರಿಂದ ಹೊಂದಿದ ಒಡನೆಯೇ ತಮ್ಮನ್ನು ಆಶ್ರಯಿಸಿದ ಸಮಸ್ತ ಪ್ರಪನ್ನರಿಗೂ ಉಪದೇಶಿಸಿಬಿಟ್ಟರು. ಆ ಗೋಷ್ಠಿಯಲ್ಲಿ ಬ್ರಾಹ್ಮಣರು ಮಾತ್ರವೇ ಇದ್ದರೆಂದು ಹೇಳಿಲ್ಲವು. ಶ್ರೀ ಯತಿವರ್ಯರ ವಿಶೇಷ ಪ್ರಿಯಶಿಷ್ಯನಾದ ಬ್ರಾಹ್ಮಣೇತರನಾದ ದಾಸಿಯು ಇರಲಿಲ್ಲವೆಂದು ಹೇಳಲು ಪ್ರಮಾಣವಿಲ್ಲವು. ಇದರ ವ್ಯಾಖ್ಯಾನದಲ್ಲಿ ಶ್ರೀ ಸಾರ ಪ್ರಕಾಶಿಕಾ ವ್ಯಾಖ್ಯಾತೃವು ಹೀಗೆ ಅಪ್ಪಣೆ ಕೊಡಿಸಿರುತ್ತಾರೆ :— **"ದ್ವಯಪ್ರತಿಪಾದ್ಯತಯಾಪಿ ಭಗವತೋ ನಿರಂತರ ಧ್ಯಾನಸ್ಯ ಭಗವತ್ಪ್ರೀತ್ಯೋಕ್ತತ್ವಾತ್ತದ್ದ್ವಯಸ್ಯ ಸರ್ವಾಧಿಕಾರತ್ವಾತ್ಸರ್ವೇಷಾಂ ಭಗವದ್ಧ್ಯಾನಂ ಸಂಭವತ್ಯೇವ"** ಭಗವಂತನ ನಿರಂತರ ಧ್ಯಾನವನ್ನು ದ್ವಯಮಂತ್ರ ಮೂಲಕವಾಗಿಯೂ ನಡೆಸಬಹುದೆಂದು ತಾನೇ ಸ್ವತಃ ಹೇಳಿರುವದರಿಂದ, **ಆ ದ್ವಯಮಂತ್ರಕ್ಕೆ ಸರ್ವಾಧಿಕಾರತ್ವವಿರುವದರಿಂದಲೂ ಸಮಸ್ತ ಪ್ರಪನ್ನರಿಗೂ ಭಗವದ್ಧ್ಯಾನವೂ ಉಂಟೇ ಉಂಟೆಂದು ಹೇಳಿರುತ್ತಾರೆ.** ಸದ್ಯೈವ ವಕ್ತಾ - ಯಾವಾಗಲೂ ದ್ವಯಮಂತ್ರವನ್ನೇ ಪಠಿಸುವನಾಗಿ ಎಂದು ಹೇಳಿರುವದರಿಂದ ನಿಷಿದ್ಧವಾದ ಮತ್ತು ಕಾಮ್ಯ ಕರ್ಮಗಳಲ್ಲಿ ಸರ್ವಾತ್ಮನಾ ಪ್ರವರ್ತಿಸಕೂಡದೆಂದು ಸ್ಪಷ್ಟವಾಗಿ ಹೇಳಿದಂತಾಯಿತು. ಇವು ಪ್ರಪನ್ನರಿಗೆ ಸರ್ವಾತ್ಮನಾ ಸ್ವರೂಪವಿರುದ್ಧವು. ದ್ರವ್ಯಾಶೆಯನ್ನಿಟ್ಟುಕೊಂಡು ಮನೆಮನೆಗೆ ಎಂದಿಗೂ ತಿರುಗಕೂಡದು, ಮತ್ತು ದ್ರವ್ಯಾರ್ಜನೆಗಾಗಿ ನಾನಾವಿಧ ಕ್ಲೇಶಗಳನ್ನೂ ಪ್ರವೃತ್ತಿಗಳನ್ನೂ ಇಟ್ಟುಕೊಳ್ಳಕೂಡದೆಂದು ಹೇಳಿದಂತಾಯಿತು. ಸದ್ಯೈವ ವಕ್ತಾ ಎಂದು ಹೇಳಿರುವದರಿಂದ ಪ್ರಪನ್ನನ ಮುಖವನ್ನು ನೋಡಿದರೆ ಈತನ ಕೆಳಗಿನ ತುಟಿಯು ದ್ವಯೋಚ್ಚಾರಣೆಯಿಂದ ಅದರುತ್ತಿರಬೇಕೆಂದು ಕೆಲವು ಮಹನೀಯರು ಹೇಳಿರುತ್ತಾರೆ. ಬರೀ ಮಂತ್ರೋಚ್ಚಾರಣೆಯೇ ಸಾಲದು, ಅದರ ಉಪದೇಶಜ್ಞಾನವೂ ಅವಶ್ಯಕ ನೆಂಬುದು "ದ್ವಯಮರ್ಥಾನುಸಂಧಾನೇನ" ಎಂಬ ಪ್ರಯೋಗದಿಂದ ವ್ಯಕ್ತವು.

ಭಕ್ತಪ್ರಪನ್ನಯೋಸ್ಸಾಧನತ್ವಫಲತ್ವರೂಪ ಭಗವದ್ಧ್ಯಾನಮಾವಶ್ಯಕ ಮಿತಿ ಉಪಸಂಹರತಿ.

ಆಗ್ನೇಯಾಲ್ "ಧ್ಯೇಯೋನಾರಾಯಣಸ್ಸದಾ" ಎನ್ನುದುವುಮ್ ಯಥಾಧಿಕಾರಂ, ಶಿಲರ್ಕ್ಕು ಉಪಾಯಮಾಗವುಮ್, ಶಿಲರ್ಕ್ಕುಫಲಮಾಗ ವುಮ್, ಕೊಳ್ಳುಗೈಯಾಲಿದು ಸ್ವತಂತ್ರಪ್ರಪತ್ತಿಕ್ಕು ವಿರುದ್ಧಮನ್ರು.

ಇದು ಅನುಷ್ಠಾನಮಂತ್ರವಾದುದರಿಂದ ಗುರುಮುಖೇನ ಇದರರ್ಥದ ಉಪದೇಶವನ್ನು ಹೊಂದಿ, ಆ ಗುರುವಿನ ಉಚ್ಚಾರಣಾನುಚ್ಚಾರಣರೂಪವಾಗಿ ಅನುಷ್ಠಿಸತಕ್ಕದ್ದೆಂಬುದೂ ಸೂಚಿತವು. ಎಲ್ಲರಿಗೂ ಪ್ರಪತ್ತಿಯಲ್ಲಿ ಅಧಿಕಾರವಿರುವದರಿಂದಲೂ, ಇದು ಅನುಷ್ಠಾನಮಂತ್ರವಾದುದರಿಂದಲೂ, ಇದಕ್ಕೆ ಸರ್ವಾಧಿಕಾರತ್ವ ಉಂಟೆಂಬುದು ವ್ಯಕ್ತವು.

ಭಕ್ತಪ್ರಪನ್ನರಿಬ್ಬರಿಗೂ ಸಾಧನತ್ವಫಲತ್ವರೂಪದಲ್ಲಿ ಭಗವದ್ಧ್ಯಾನವು ಆವಶ್ಯಕವೆಂಬುದರ ಉಪಸಂಹಾರವು.

ಆಗ್ನೇಯಾಲ್" - ಹೀಗೆ ಭಗವದನುಸ್ಮರಣವು ಪ್ರಪದನಾನುಷ್ಠಾನಮಾಡಿ ಕೃತಕೃತ್ಯನಾದವನಿಗೂ ಕೂಡ ಆವಶ್ಯಕವಾಗಿರುವದರಿಂದ, **ಧ್ಯೇಯೋ ನಾರಾಯಣಸ್ಸದಾ"** ಎನ್ನುದುವುಮ್-ಎಂಬುದೂ ಕೂಡ, **ಯಥಾಧಿಕಾರಮ್**-ಧ್ಯಾನಿಸುವನಿಗೆ ಅಧಿಕಾರವಿರುವ ರೀತಿಯಲ್ಲಿ, ಎಂದರೆ ತ್ರೈವರ್ಣಿಕನಾಗಿ ಸಮರ್ಥನಾಗಿದ್ದರೆ, **ಶಿಲರ್ಕ್ಕು** - ಕೆಲವರಿಗೆ, **ಉಪಾಯಮಾಗುವುಮ್** - ಉಪಾಯರೂಪದಲ್ಲಿ ಏಕಾಂತ್ಯದಿಂದ ಉಪಾಸನರೂಪವಾಗಿಯೂ, **ಶಿಲರ್ಕ್ಕು ಫಲಮಾಗುವುಮ್**-ಇನ್ನು ಕೆಲವರಿಗೆ ಸ್ತ್ರೀ ಶೂದ್ರಾದಿಗಳಿಗೂ ಮತ್ತು ಅಸಮರ್ಥರಿಗೂ, **ಫಲಮಾಗುವುಮ್** - ಪ್ರಪದನರೂಪವಾಗಿ ತದನಂತರ ಭಗವದನುಸಂಧಾನರೂಪವಾಗಿಯೂ, **ಕೊಳ್ಳುಗೈಯಾಲೇ** - ಆಙ್ಗೀಕರಿಸುವದರಿಂದ, **ಇದು** - ಸದಾ ಭಗವದನುಸಂಧಾನವು, **ಸ್ವತಂತ್ರಪ್ರಪತ್ತಿಕ್ಕುಮ್** ವಿರುದ್ಧಮನ್ರು - ವಿರುದ್ಧವಾದುದಲ್ಲವು. ಈ **"ಧ್ಯೇಯೋ ನಾರಾಯಣಸ್ಸದಾ"** ಎಂಬ ಮಹಾ ಭಾರತ ವಚನದಿಂದ ಉಪಾಯವು ಭಕ್ತಿಯೋಗವಾದ ಪಕ್ಷದಲ್ಲಿ, ಉಪಾಸನರೂಪದಲ್ಲಿ ಭಗವಧ್ಧ್ಯಾನವು ವಿಧಿಸಲ್ಪಟ್ಟಿತೆಂದು ತಿಳಿಯತಕ್ಕದ್ದು. ಹಾಗಲ್ಲದೆ ಉಪಾಯವು ಸ್ವತಂತ್ರ ಪ್ರಪತ್ತಿಯಾದರೆ, ಆಗಲೂ ಧ್ಯಾನವು ಉಪಾಯರೂಪದಲ್ಲಿ ಕೃತಕೃತ್ಯನಾದ ಪ್ರಯುಕ್ತ ಬೇಕಾಗಿಲ್ಲದಿದ್ದರೂ, ಪ್ರಸನ್ನನಿಗೆ ಸ್ವರೂಪದಾಯಕವಾಗಿ ಭಗವದನುಸಂಧಾನವು ಆಯಾ ಅಧಿಕಾರಿಗಳನ್ನು ಕುರಿತು ಹೇಳಿದ ರೀತಿಯಲ್ಲಿ,ಮೂಲ

ಮುಂತ್ರ ಅಥವಾ ದ್ವಯಮುಂತ್ರೋಚ್ಚಾರಣೆಗಳ ಮೂಲಕ ನಡೆಸತಕ್ಕದ್ದೆಂಬ ಭಾವವು. ಶ್ರೀಮನ್ನಾರಾಯಣನು ಒಂದು ಸಂದರ್ಭದಲ್ಲಿ ಉಪಾಯರೂಪವಾಗಿಯೂ, ಇನ್ನೊಂದು ಸಂದರ್ಭದಲ್ಲಿ ಫಲರೂಪವಾಗಿಯೂ,ಧ್ಯೇಯನೆಂದು ಸ್ಥಾಪಿಸಲ್ಪಟ್ಟಿತು.

"ಧ್ಯೇಯೋ ನಾರಾಯಣಸ್ಸದಾ" ಎಂಬ ಭಾರತ ವಚನಾನುಸಾರವಾಗಿ ಉಪಾಸನ ಒಂದೇ ಉಪಾಯವಾಗಿ ಕಂಡರೂ, ಪ್ರಪದನವೆಂಬುದು ಇನ್ನೊಂದು ಸರ್ವಾಧಿಕಾರವುಳ್ಳ ಉಪಾಯವು, ಆದಕ್ಕೂ ಕೂಡ ಬಲಾತ್ಕಾರವಾಗಿ ಭಾರತ ವಾಕ್ಯವನ್ನು ಅನ್ವಯಿಸಬಹುದೆಂದು ಹೇಳಿ, ಆಗ ಧ್ಯಾನವೆಂದರೆ ಭಗವದನುಸ್ಮರಣವೆಂದು ಹೇಳಿದಿರಿ; ಶ್ರುತಿಯೂಕೂಡ ಉಪಾಸನವನ್ನೇ ಉಪಾಯವಾಗಿ "ನಾನ್ಯಃಪನ್ಥಾ ವಿದ್ಯತೇ ಅಯನಾಯ" ಎಂದು ಹೇಳಿರುತ್ತದೆ. ಇದೂ ಅಲ್ಲದೆ ಶ್ರೀ ಭಾಷ್ಯದಲ್ಲೂ, ಗೀತಾಭಾಷ್ಯದಲ್ಲೂ ಶ್ರೀ ಭಾಷ್ಯಕಾರರು ಉಪಾಯನಾಗಿ ಹೇಳಿರುವದು ಉಪಾಸನವೇ. ಪ್ರಪದನವು ಹೇಗೆ ಉಪಾಯವು ಎಂದಾಕ್ಷೇಪ ತಂದರೆ, ಅದಕ್ಕೆ ಸಮಾಧಾನವಾಗಿ ಹೇಳಬಹುದು ಏನೆಂದರೆ—ಶ್ರೀ ಭಾಷ್ಯಕಾರರವರು ವಶೀಕರಣ ಪರಂಪರೆಗಳನ್ನು ತಿಳಿಸುವದರಲ್ಲಿ ಕಡೆಗೆ "ತಸ್ಯ ಚ ವಶೀಕರಣಂ ತಚ್ಚರಣಾಗತಿರೇವ" ಎಂದು ಪ್ರಪದನವೂ ಉಪಾಯವೆಂದು ಹೇಳಿದ್ದಾರಲ್ಲಾ, ಎಂದರೆ, ಶ್ರೀ ಭಾಷ್ಯದಲ್ಲೂ, ಶ್ರೀ ಗೀತಾಭಾಷ್ಯದಲ್ಲೂ ಹೇಳಿರುವ ಪ್ರಪತ್ತಿಯು ಅಜ್ಞ ಪ್ರಪತ್ತಿಯೇ ವಿನಾ, ಆಜ್ಞಾರೂಪದಲ್ಲಿಲ್ಲವು; ಗೀತೆಯ ೭ನೆಯ ಅಧ್ಯಾಯದ ೧೪ನೆಯ ಶ್ಲೋಕದಲ್ಲಿ "ಮಾಮೇವ ಯೇ ಪ್ರಪದ್ಯನ್ತೇ ಮಾಯಾಂ ಮೇತಾಂ ತರನ್ತಿತೇ" ಎಂಬುದಕ್ಕೆ ಶ್ರೀ ಭಾಷ್ಯಕಾರರವರು ಮಾಯಾಮುತ್ಸೃಜ್ಯ ಮಾಮೇವೋ ಪಾಸತ ಇತ್ಯರ್ಥಃ ಎಂದು ವ್ಯಾಖ್ಯಾನ ಮಾಡಿರುವದರಿಂದ ಇಲ್ಲಿ ಹೇಳಿರುವ ಪ್ರಪತ್ತಿಯು ಅಂಗ ಪ್ರಪತ್ತಿ ಎಂದು ಹೇಳದಂತಾಯಿತು, ಮತ್ತು "ಸರ್ವಧರ್ಮಾ ಪರಿತ್ಯಜ್ಯ" ಎಂಬ ಚರಮಶ್ಲೋಕದಲ್ಲಿ ಮಾಮೇಕಂ ಶರಣಂ ವ್ರಜ" ಎಂದು ವಿಧಿಸಿರುವ ಪ್ರಪದನವೂ ಅಜ್ಞಾಶರಣಾಗತಿಯೇ; ಆದುದರಿಂದ ಶ್ರೀ ಭಾಷ್ಯಕಾರರಿಗೆ ಉಪಾಸನವೇ ಉಪಾಯವೆಂಬ ಅಭಿಪ್ರಾಯವೇ ವಿನಾ ಪ್ರಪದನವಲ್ಲವೆಂದು ಪೂರ್ವಪಕ್ಷವನ್ನು ತರಬಹುದೆಂದು ಭಾವಿಸಿ, ಮುಂದಿನ ವಾಕ್ಯದಿಂದ ಸಮಾಧಾನವನ್ನು ಹೇಳುತ್ತಾರೆ. ಶ್ರೀ ಭಾಷ್ಯದಲ್ಲೂ ಶ್ರೀ ಗೀತಾ ಭಾಷ್ಯದಲ್ಲೂ ಹೇಳಿರುವ ಪ್ರಪದನವು ಆಜ್ಞಾರೂಪ ಶರಣಾಗತಿಯೇ, ಇದನ್ನು ಎಲ್ಲರೂ ಒಪ್ಪತಕ್ಕದ್ದೇ. ಒಂದು ಸಂದರ್ಭದಲ್ಲಿ ಆಜ್ಞಾವಾದುದು ಇನ್ನೊಂದು ಸಂದರ್ಭದಲ್ಲಿ ಆಜ್ಞೆಯಾಗಕೂಡದೆಂಬ ನಿಯಮವೇನೂ ಇಲ್ಲವು. ಸ್ವತಂತ್ರ ಪ್ರಪತ್ತಿಯು ಆಜ್ಞೆಯು ಇಹವೆನ್ನೇ ಶರಣಾಗತಿ ಗದ್ಯದಲ್ಲಿ ಅವರೇ ಉಪದೇಶಿಸಿರುತ್ತಾರೆ. . . ಶ್ರೀ ಯಾಮುನೇಯರೂ "ನ ಧರ್ಮ

ನಿಷ್ಕೋಸ್ಮಿ" ಎಂಬ ಶ್ಲೋಕದಲ್ಲಿ ಪ್ರಪತ್ತಿಯನ್ನು ಅಙ್ಗಿಯಾಗಿಯೇ ಭಾವಿಸಿರುತ್ತಾರೆ ಅಂತೂ ಎರಡು ವಿಧ ಉಪಾಯಾನುಷ್ಠಾನಕ್ಕೂ ಪ್ರಪದನವು ಅವಶ್ಯಕವು; ಉಪಾಸನರೂಪಕ್ಕೆ ಅಙ್ಗವು, ಭರನ್ಯಾಸಕ್ಕೆ ಅಙ್ಗಿಯು. ಅದುದರಿಂದ ಪ್ರಪದನ ಮೂಲಕ ಶರಣಾಗತಿಯನ್ನು ಮಾಡದೆ ಎಂದರೆ ಪ್ರಪನ್ನನಾಗದೇ ಮೋಕ್ಷವೇ ಇಲ್ಲವೆಂದು ಶ್ರೀ ನಿಗಮಾಂತದೇಶಿಕರವರು "ಪ್ರಪನ್ನಾದನ್ಯೇಷಾಂ ನದಿಶತಿ ಮುಕುಂದೋ ನಿಜಪದಂ" ಎಂಬ ಶ್ಲೋಕದಲ್ಲಿ ತಿಳಿಸಿರುತ್ತಾರೆ. ಶ್ರೀ ಭಾಷ್ಯಕಾರರು ಈ ಎರಡು ವಿಧೋಪಾಯಗಳಲ್ಲಿ ಯಾವುದನ್ನು ಅವಲಂಬಿಸಿದರು ಎಂದರೆ ಭರನ್ಯಾಸವನ್ನೇ ಅನುಷ್ಠಿಸಿದರೆಂಬುದು, ಕ್ಷಣಮಾತ್ರ ಸಾಧ್ಯಮಾನ ಪ್ರಪದನಂ ಸಿದ್ಧಮಾನ ವಲಿವಿಲುಮ್ ಎಂಬ ಪ್ರಯೋಗದಿಂದ ವ್ಯಕ್ತಪಡುತ್ತದೆ. ಆದುದರಿಂದ ಪ್ರಪದನವು ಎರಡು ಆಕಾರವುಳ್ಳದ್ದೆಂದೂ ಅಙ್ಗರೂಪವಾದುದನ್ನು ಶ್ರೀ ಭಾಷ್ಯ ಗೀತಾ ಭಾಷ್ಯದಲ್ಲಿ ಶ್ರೀ ಭಾಷ್ಯಕಾರರು ಉಪಪಾದಿಸಿದರೆಂದೂ ಅಙ್ಗಿರೂಪವಾಗಿ ಶ್ರೀಮದ್ರಾಮಾಯಣ ಪಾದಚರಾತ್ರ, ಪದ್ಮಪುರಾಣಾದಿಗಳಲ್ಲಿ ಬೋಧಿತವಾದುದನ್ನು ಶರಣಾಗತಿ ಗದ್ಯದಲ್ಲಿ ಉಪದೇಶಿಸಿದರೆಂದೂ ಮುಂದಿನವಾಕ್ಯದಿಂದ ತಿಳಿಸಿ, ಶ್ರೀ ಭಾಷ್ಯಕಾರರಿಗೆ ಎರಡು ವಿಧವಾದ ಉಪಾಯಗಳೂ ಅಭಿಮತವಾದವುಗಳೇ ಎಂದು ತಿಳಿಸುತ್ತಾರೆ. ಆದರೆ ಈ ಸಂದರ್ಭದಲ್ಲಿ ಇನ್ನೊಂದು ಆಕ್ಷೇಪಣೆಯನ್ನು ತರಬಹುದು. ಒಂದೇ ಅನುಷ್ಠಾನಕ್ಕೆ ಎರಡು ವಿಧವಾದ ಆಕಾರ ಹೇಗೆ ? ಪ್ರಪದನವು ಎರಡು ಕಡೆಯಲ್ಲೂ ಅಙ್ಗವೆಂದು ಭಾವಿಸತಕ್ಕದ್ದು ಅಥವಾ ಅಙ್ಗಿ ಎಂದು ಭಾವಿಸತಕ್ಕದ್ದು, ಭಕ್ತಿರೂಪಧ್ಯಾನವು ಎರಡಕ್ಕೂ ಅವಶ್ಯಕವೆಂದು ಹೇಳಿ ಪ್ರಪದನವೇ ಅಙ್ಗಿಯಾಗಿ ಮೋಕ್ಷಸಾಧಕವೆಂದೂ ಹೇಳಬಹುದು, ಅಥವಾ ಭಕ್ತಿರೂಪಧ್ಯಾನವೇ ಎರಡುಕಡೆಯಲ್ಲೂ ಅಙ್ಗಿ ಎಂದು ಹೇಳಿ, ಅದಕ್ಕೆ ಕಾರಣ ಭೂತವಾಗಿ ಅಙ್ಗವಾಗಿ ಎರಡು ಕಡೆಯಲ್ಲೂ ಪ್ರಪದನವು ಎಂದು ಭಾವಿಸುವದಾದರೂ ಯುಕ್ತವು. ಈ ಪೂರ್ವಪಕ್ಷಕ್ಕೂ ಸಹ "ಇಪ್ಸಪತ್ತಿ ಅಙ್ಗವಾನ" ಎಂದಾರಂಭಿಸಿ ಹೇಳರುವ ವಾಕ್ಯ ಮೂಲಕ ಸಮಾಧಾನವನ್ನು ಹೇಳುತ್ತಾರೆ. ಶರಣಾಗತಿಯು ಅಙ್ಗವಾಗಿಯಾಗಲಿ, ಸ್ವತಂತ್ರವಾಗಿಯಾಗಲಿ ಮೋಕ್ಷಸಾಧಕವೆಂಬುದಕ್ಕೆ "ಸಾಧನಾಂತರಯುಕ್ತಾವಾ ಪ್ರಪತ್ತಿಸ್ಸ್ವಯಮೇವ ವಾ। ಸಾಧಯೇನ್ಮುಕ್ತಿ ಕಾಮಾನಾಂ ನಿಷುಕ್ತಿಂ ಪ್ರಣಿಪೋ ಯಥಾ" ಇತ್ಯಾದಿ ಪ್ರಮಾಣಗಳಿರುವದರಿಂದಲೆ, ಶ್ರೀ ಭಾಷ್ಯಕಾರರೂ ಸಹ ಈ ಎರಡುವಿಧ ಆಕಾರಗಳನ್ನೂ ಮನಸ್ಸಿನಲ್ಲಿಟ್ಟು ತಸ್ಯ ಚ ವಶೀಕರಣಂ ತಚ್ಛರಣಾಗತಿರೇವ" ಎಂದು ಹೇಳಿದರು; ಇದಕ್ಕೆ ನಿದರ್ಶನವು ಪ್ರಣಿಪೋಪಾಸನೆಯು; ಇದೇ ಬೃಹದಾರಣ್ಯಕ ಛಾಂದೋಗ್ಯಗಳಲ್ಲಿ ಹೇಳಿರುವ

ಪ್ರಪತ್ತೇ ರಙ್ಗಾ ಙ್ಗ ರೂಪಯೋಃ ಶ್ರೀ ಭಾಷ್ಯಕಾರಾಭಿ ಮತತ್ವಕಥನಮ್

ಇಪ್ರಪತ್ತಿ ಅಙ್ಗವಾನ ವೇಷತ್ತೈ ಭಾಷ್ಯಾದಿಗಳಿಲೇ ಉದಾಹರಿತ್ತ್ ರುಳಿನಾರ್; ಸ್ವತಂತ್ರವಾನ ವೇಷತ್ತೈ ಗದ್ಯತ್ತಿಲೆ ಅರುಳಿಚ್ಚೆಯ್ದಾರ್.

ಹಾಗೆ ಸ್ವತಂತ್ರೋಪಾಸನೆಯಾದರೂ ಆಗಬಹುದು ; ಪುಣ್ಯಾಹವು ಸ್ವತಂತ್ರ ಕರ್ಮವಾಗಿಯಾಗಲಿ ಅಥವಾ ಇತರ ಕರ್ಮಗಳಾದ ಚೌಲ, ಉಪನಯನ, ವಿವಾಹಾದಿಗಳಿಗೆ ಅಙ್ಗವಾಗಿಯಾಗಲಿ ಹೇಗೆ ಆಗಬಹುದೋ ಹಾಗೆ, ಶರಣಾಗತಿಯು ಅಙ್ಗರೂಪವಾಗಿರುವ ಆಕಾರವನ್ನು ಶ್ರೀ ಭಾಷ್ಯದಲ್ಲೂ ಶ್ರೀ ಗೀತಾಭಾಷ್ಯದಲ್ಲೂ ಹೊರಪಡಿಸಿದರು, ಅಙ್ಗರೂಪವಾಗಿರುವ ಆಕಾರವನ್ನು **ಶರಣಂ ತ್ವಾಂ ಪ್ರಪನ್ನಾಯೇ ಧ್ಯಾನಯೋಗ ವಿವರ್ಜಿತಾಃ । ಪರಮಾತ್ಮಾ ಚ ತೇನೈವ ಸಾಧ್ಯತೇ ಪುರುಷೋತ್ತಮಃ"** ಉಪಾಸನರೂಪ ಧ್ಯಾನಯೋಗಕ್ಕೆ ಅಸಮರ್ಥರಾದ ಪ್ರಪನ್ನರು ಅಙ್ಗರೂಪ ಪ್ರಪತ್ತ್ಯನುಷ್ಠಾನದಮೂಲಕ ಮುಕ್ತಿಯನ್ನೈದಿದರೆಂದು ಹೇಳಿರುವ ಇತ್ಯಾದಿ ಪ್ರಮಾಣಗಳ ಪರಿಶೀಲನದ ಮೂಲಕ, ಸ್ವಾನುಷ್ಠಾನಪೂರ್ವಕವಾಗಿ ಶ್ರೀ ಶರಣಾಗತಿಗದ್ಯದಲ್ಲಿ ಉಪದೇಶಿಸಿರುತ್ತಾರೆಂದು ಹೇಳುತ್ತಾರೆ:—

ಪ್ರಪದನಕ್ಕೆ ಅಙ್ಗಾ ಙ್ಗಭಾವ ಉಂಟೆಂಬುದು ಶ್ರೀ ಭಾಷ್ಯಕಾರರಿಗೆ ಅಭಿಮತವು.

ಇಪ್ರಪತ್ತಿ - ಈ ಪ್ರಪದನವು, **ಅಙ್ಗವಾನವೇಷತ್ತೈ** - ಉಪಾಸನ ಮಾರ್ಗಗಳಿಗೆ, **ಅಙ್ಗವಾನವೇಷತ್ತೈ** - ಅಙ್ಗವಾಗಿರುವ ಆಕಾರವನ್ನು, **ಭಾಷ್ಯಾದಿಗಳಿಲೇ**-ಶ್ರೀಭಾಷ್ಯಗೀತಾಭಾಷ್ಯಗಳಲ್ಲಿ, **ಉದಾಹರಿತ್ತ್ ರುಳಿನಾರ್**-ಕೃಪಯಾ ಶ್ರೀಭಾಷ್ಯಕಾರರು ಉದಾಹರಿಸಿದರು **ಸ್ವತಂತ್ರವಾನವೇಷತ್ತೈ** - ಪ್ರಪದನವೇ ಸ್ವತಂತ್ರವಾದ ಉಪಾಯವಾಗಿರುವ ಆಕಾರವನ್ನು, **ಗದ್ಯತ್ತಿಲೇ ಅರುಳಿಚ್ಚೆಯ್ದಾರ್** - ಶರಣಾಗತಿಗದ್ಯದಲ್ಲಿ ಕೃಪಯಾ ಉಪದೇಶಿಸಿರುತ್ತಾರೆ. ಹೀಗೆ ಪ್ರಪದನವು ಎರಡು ಆಕಾರವುಳ್ಳದ್ದೆಂಬುದು ನಿಸ್ಸಂಶಯವೆಂಬುದನ್ನು ಶ್ರೀ ಭಾಷ್ಯಕಾರರೇ ವ್ಯಕ್ತಪಡಿಸಿರುತ್ತಾರೆ. ಶರಣಾಗತಿ ಗದ್ಯದ ಅಂತ್ಯದಲ್ಲಿ **"ಅವಶ್ಯಂ ಶೋಕ್ತ ಪೂರ್ವಂ ಮೇ"** ಎಂದಾರಂಭಿಸಿ ನಿಸ್ಸಂಶಯಮಸ್ತು ಮತಾಸ್ವೆ" ಎಂದು ಮುಗಿಸಿರುವ ಶರಣ್ಯೋಕ್ತಿಯನ್ನು ಚೆನ್ನಾಗಿ ಪರ್ಯಾಲೋಚಿಸಿದರೆ, ಇದು ವ್ಯಕ್ತವಹುದಷ್ಟೆ ಇಲ್ಲಿ **"ಸಕೃದೇವಪ್ರಪನ್ನಾಯ ತವಾ**

(೧) "ಕ್ಲೇಶಾನಾಂ ಚ ಕ್ಷಯಕರಂ ಯೋಗಾದನ್ಯನ್ನ ವಿದ್ಯತೇ"

ಸ್ಮೀತಿ ಚಯಾಚತೇ। ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ" ಎಂದು ಶ್ರೀ ವಿಭೀಷಣಾಳ್ವಾನ್ ವಿಷಯದಲ್ಲಿ ಶ್ರೀರಾಮನಾಗಿ ತಾನು ಹೇಳಿರುವ ಸ್ವತಂತ್ರ ಪ್ರಪತ್ತಿ ನಿಷ್ಠನ ವಿಷಯದಲ್ಲೆಂಬುದು ಸುಸ್ಪಷ್ಟವು. ಅರ್ಜುನನ ವಿಷಯದಲ್ಲಿ ಕೃಷ್ಣಾವತಾರಿಯಾಗಿ "ಸರ್ವಾಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂವ್ರಜ। ಅಹಂ ತ್ವಾ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ" ಎಂದು ಹೇಳಿರುವದು ಅಜ್ಞಪ್ರಪತ್ತಿ ವಿಷಯವೆಂದು ಅಲ್ಲಿ ವ್ಯಾಖ್ಯಾನಮಾಡಿದರೂ, ಈ ಶರಣಾಗತಿ ಗದ್ಯದಲ್ಲಿ ಈ ಎರಡು ಶ್ಲೋಕಗಳನ್ನೂ ಒಟ್ಟಿಗೆ ಸೇರಿಸಿ ಶರಣ್ಯನು ಸ್ವತಂತ್ರ ಪ್ರಪತ್ತಿ ವಿಷಯದಲ್ಲೂ ಹೇಳಿರುವದರಿಂದ, "ಸರ್ವಧರ್ಮಾನ್ಪರಿತ್ಯಜ್ಯ" ವೆಂಬಶ್ಲೋಕವೂ ಸ್ವತಂತ್ರಪ್ರಪತ್ತಿಯನ್ನೂ ಕೂಡ ಬೋಧಿಸುತ್ತದೆಂಬುದು ಸ್ಪಷ್ಟವು. ಇದರಲ್ಲಿ ಸಂಶಯಬೇಡವೆಂದು ತಿಳಿಸುವದಕ್ಕಾಗಿ "ಇತಿ ಮಯ್ಯೇವಹಿ ಉಕ್ತಮ್" ಎಂದು ಶರಣ್ಯನಿಂದ ಹೇಳಲ್ಪಟ್ಟಿರುತ್ತದೆ. ಆದುದರಿಂದ "ಸರ್ವಧರ್ಮಾನ್" ಎಂಬ ಶ್ಲೋಕವು ಎರಡುವಿಧವಾದ ಶರಣಾಗತಿಯನ್ನೂ ಬೋಧಿಸುತ್ತದೆ ಎಂಬುದರಲ್ಲಿ ನಿಸ್ಸಂದೇಹವು. ಆದುದರಿಂದಲೇ "ಸಕೃದೇವ" ಎಂಬುದು ಹೇಗೆ ಶ್ರೀ ರಾಮಾಯಣ ಚರಮಶ್ಲೋಕವೋ ಹಾಗೆಯೇ "ಸರ್ವಾಧರ್ಮಾನ್" ಎಂಬುದು ಗೀತಾಚರಮಶ್ಲೋಕವಾಗುವದರಲ್ಲಿ ಸಂದೇಹವಿಲ್ಲವು, ಹೀಗೆ "ಸರ್ವಾಧರ್ಮಾನ್" ಎಂಬ ಶ್ಲೋಕದಲ್ಲಿ ಅಜ್ಞ ಪ್ರಪತ್ತಿಯೂ ಸ್ವತಂತ್ರ ಪ್ರಪತ್ತಿಯೂ ಎರಡೂ ವಿವಕ್ಷಿತವು. ಹಾಗೆಯೇ ಗೀತೆಯ ೭-೧೪ ಶ್ಲೋಕವಾದ "ಮಾಮೇವಯೇ ಪ್ರಪದ್ಯನ್ತೇ" ಎಂಬ ಶ್ಲೋಕದಲ್ಲೂ ಸಹ ಎರಡೂ ವಿವಿಕ್ಷಿತವು. ದಾಸನು ಆ ಶ್ಲೋಕಕ್ಕೆ ಬರೆದಿರುವ ಆಚಾರ್ಯಹೃದಯಾನ್ವೇಷಿಣೇ ಎಂಬ ಗೀತಾ ಭಾಷ್ಯವನ್ನು ಪರಾಂಬರಿಸಬಹುದು.

ಹಾಗಾದರೆ ಶ್ರೀ ಭಾರತ ಅನುಶಾಸನ ಪರ್ವದಲ್ಲೂ, ವಿಷ್ಣುಧರ್ಮದಲ್ಲೂ ಭಕ್ತಿಯೋಗವೊಂದೇ ಉಪಾಯನೆಂದು ಹೇಳಿದೆಯಲ್ಲಾ, ಆ ವಾಕ್ಯಗಳಿಗೂ ಶ್ರೀ ಭಾಷ್ಯಕಾರಾಭಿಪ್ರಾಯಕ್ಕೂ ಏಕ ಕಂಠ್ಯವು ಹೇಗೆ? ಎಂಬ ಪೂರ್ವಪಕ್ಷ ಬಂದೀತೆಂದು ಭಾವಿಸಿ, ಈ ಪ್ರಮಾಣಗಳು ಭಕ್ತಿಯೋಗ ನಿಷ್ಠರನ್ನು ಮಾತ್ರ ಕುರಿತು ಹೇಳಿದುದಾದುದರಿಂದಲೂ, ಸ್ವತಂತ್ರ ಪ್ರಪತ್ತಿಯು ಬೇರೇ ವಿಧಿ ಬಲದಿಂದ ಪ್ರಾಶಸ್ತ್ಯವಾದುದರಿಂದ ಏನೊಂದೂ ವಿರೋಧವಿಲ್ಲವೆಂದು ಸಾಧ್ಯೋಪಾಯ ಶೋಧನವಿಷಯವನ್ನು ವಿವರಿಸುತ್ತಾರೆ—(೧) ಕ್ಲೇಶಾನಾಂಚ ಕ್ಷಯಕರಂ ... ಮುನಿ

---

(೧) ಭಾರ. ಅನು ೧೪೬ ೧೧.

(೨) "ನ ಕರ್ಮಣಾಂ ಕ್ಷಯೋಭೂಪ ಜನ್ಮನಾ ಮಯುತೈರಪಿ । ಯತೇ ಯೋಗಾತ್ ಕರ್ಮಕ್ಷಯಂ ಯೋಗಾಗ್ನಿಃ ಕ್ಷಪಯೇತ್ಪರಂ ॥" ಇತ್ಯಾದಿಗಳು ಮ್ ಸ್ವತಂತ್ರ ಪ್ರಪತ್ತಿವಿಧಿ ಬಲತ್ತಾಲೆ ಅಧಿಕಾರ್ಯಂತರ ವಿಷಯಜ್ಞಳಾಗ ಕ್ಕಡವನ. ಇಪ್ಪದಿ ಸಾಧ್ಯೋಪಾಯ ವಿಷಯಮಾಗ ಮತ್ತುಮ್ ಪಿರೆ

ಗಳಗಾದರೋ ನಾಶಕವಾದುದು, ಕ್ಷಯಶಬ್ದದಿಂದ ಕ್ರಮೇಣ ನಾಶವಾಗುತ್ತದೆಂಬ ಭಾವವು ಸೂಚಿತವು, ಯೋಗಾದನ್ಯತ್ - ಭಕ್ತಿಯೋಗದ ಉಪಾಸನಕ್ಕಿಂತ ಬೇರೆಯಾದುದು ಯಾವುದೂ, ನ ವಿದ್ಯತೇ - ಇರುವದಿಲ್ಲವು" ಎಂದೂ, (೨) ಹೇ ಭೂಪ - ಓ ರಾಜನೇ, ಜನ್ಮನಾಮಯುತೈರಪಿ - ಅಸಂಖ್ಯಾತಗಳಾದ ಜನ್ಮಗಳಿಂದಲೂ ಕೂಡ, ಯೋಗಾದೃತೇ - ಭಕ್ತಿಯೋಗವನ್ನು ಬಿಟ್ಟರೆ, ಕರ್ಮಣಾಂಕ್ಷಯಃ - ಪುಣ್ಯಪಾಪಗಳಿಗೆ ನಾಶವು, ನ - ಇಲ್ಲವು. ಕರ್ಮಕ್ಷಯಂ - ಕರ್ಮವೆಂಬುವ ಒಣಗಿದ ತೃಣಕಾಷ್ಠಾದಿಗಳುಳ್ಳ ವನವನ್ನು, ಯೋಗಾಗ್ನಿಃ ಪರಂ-ಭಕ್ತಿಯೋಗದ ಉಪಾಸನರೂಪ ಬೆಂಕಿಯು ಮಾತ್ರವೇ, ಕ್ಷಪಯೇತ್ - ನಾಶಮಾಡಲು ಸಾಮರ್ಥ್ಯ ಉಳ್ಳದು" ಇತ್ಯಾದಿಗಳು ಮ್ ಎಂಬವೇ ಮೊದಲಾದ ಪ್ರಮಾಣಗಳು, ಸ್ವತಂತ್ರ ಪ್ರಪತ್ತಿ ವಿಧಿಬಲತ್ತಾಲೆ-ಸ್ವತಂತ್ರ ಪ್ರಪತ್ತಿಯನ್ನು ವಿಧಿಸುವ ಪ್ರಮಾಣಬಲದಿಂದ, ಅಧಿಕಾರ್ಯಂತರ ವಿಷಯಜ್ಞಳಾಕೆಕ್ಕಡವನ-ಭಕ್ತಿಯೋಗನಿಷ್ಠನನ್ನು ಮಾತ್ರ ಉದ್ದೇಶಿಸಿ ಹೇಳಲ್ಪಟ್ಟಿತೆಂದು ಭಾವಿಸತಕ್ಕದ್ದು. ಇದರಿಂದ ಪ್ರಪತ್ತಿಯು ಉಪಾಯವಲ್ಲವೆಂದು ಹೇಳಲು ಸಾಧ್ಯವಿಲ್ಲವೆಂಬ ಭಾವವು ಯೋಗಾದನ್ಯತ್ ಎಂಬ ಮತ್ತು ಯತೇ ಯೋಗಾತ್ ಎಂಬ ಪ್ರಯೋಗಗಳು ಪ್ರಪತ್ತಿಯನ್ನು ವ್ಯಾವರ್ತಿಸಿ ಹೇಳುವದಿಲ್ಲವು. ಉಪಾಸನಕ್ಕೆ ಸಾಮರ್ಥ್ಯವಿಲ್ಲದ ಅಧಿಕಾರಿಯಾದವನಿಗೆ ಹೇಳಿದ ವಾಕ್ಯಗಳಾದುದರಿಂದ ಅತನಿಗೆ ಉಪಾಸನವಿಲ್ಲದೆ ಬೇರೆ ಮಾರ್ಗವಿಲ್ಲವೆಂಬ ಭಾವವು. ಉಪಾಸನಕ್ಕೆ ಸಾಮರ್ಥ್ಯವೂ ಇಲ್ಲದೆ ಅಧಿಕಾರವೂ ಇಲ್ಲದೇ ಇರುವವರಿಗೆ ಪ್ರಪತ್ತಿ ಮಾರ್ಗವೆಂದು ಬೇರೇ ವಿಧಿಗಳೆರುವದರಿಂದ, ಇದರಿಂದ ಪ್ರಪತ್ತಿಯು ಉಪಾಯವಾಗಲು ಯಾವ ವಿರೋಧವೂ ಇಲ್ಲವೆಂಬ ಭಾವವು. ಹೀಗೆ ಅರ್ಥಮಾಡದೆ ಯೋಗ ಒಂದೇ ಉಪಾಯವು, ಇನ್ನು ಯಾವುದೂ ಅಲ್ಲವೆಂದು ಅರ್ಥಮಾಡಿದರೆ, ಆಗ ಪ್ರಪತ್ತಿಯೂ ಉಪಾಯವೆಂದು ಹೇಳುವ ಪ್ರಮಾಣಗಳೆಲ್ಲಾ ನಿರರ್ಥಕಗಳಾಗುವುವೆಂಬ ತಾತ್ಪರ್ಯವು. ಈಗ ಈ ರಹಸ್ಯತ್ರಯಪ್ರಕರಣಕ್ಕೆ ಉಪಯುಕ್ತವಾಗಿ ತೋರಿಬಂದ ಶಙ್ಕಾಗಳಿಗೆಲಾ ಪರಿಹಾರವನ್ನು ಹೇಳಿದ್ದಾಯಿತು. ಇವೂ ಅಲ್ಲದೆ ಇನ್ನೂ ಕೆಲವು ಶಙ್ಕಾಗಳುಂಟು, ಅವುಗಳಿಗೆ ಪರಿಹಾರವನ್ನು ತಾವು ಬರೆದಿರುವ ನಿಕ್ಷೇಪರಕ್ಷೆಯಲ್ಲಿ ಕಾಣಬಹುದು

---

೨. ವಿ. ತ. ೧೮೨. ೪.

ಕ್ಕುಮ್ ಕಲಕ್ಕಜ್ಞಳುಕ್ಕು ಪರಿಹಾರಮುಂ ನಿಕ್ಷೇಪ ರಕ್ಷೈಯುಮೇ ಕೆಣ್ಡು ಕೊಳ್ವದು.

ರಹಸ್ಯತ್ರಯೇ ಸಾಧ್ಯೋಪಾಯಸ್ಯಾನುಸಂಧೇಯತ್ವಂ

ಇಸ್ಸಾಧ್ಯೋಪಾಯಂ ಶೋಧಿತವಾನ ಕಟ್ಟಳೈಯಿಲೆ ರಹಸ್ಯತ್ರಯತ್ತಿಲ್ ಯಥಾಸ್ಥಾನ ಮನುಸಂಧೇಯಮುಮ್

ದೆಂದು ಹೇಳುತ್ತಾರೆ, ಇಪ್ಪಡಿ - ಹೀಗೆ ಹಿಂದೆ ಉಪಪಾದಿಸಿದ ರೀತಿಯಲ್ಲೇ ಸಾಧ್ಯೋಪಾಯ ವಿಷಯವಾಗಿ, ಮುತ್ತುಮ್ - ಈಮೇಲೆ ಪ್ರಕರಣಾಮುಗುಣವಾಗಿ ಉಪಪಾದಿಸಲ್ಪಟ್ಟವಲ್ಲದೇ ಬೇರೇ, ಪಿರಕ್ಕುಮ್ - ಉಂಟಾಗುವ, ಕಲಕ್ಕಜ್ಞಳುಕ್ಕು ಪರಿಹಾರನುಮ್ - ಶಬ್ಯಾಗಳಿಗೆ ಪರಿಹಾರವನ್ನೂ, ನಿಕ್ಷೇಪರಕ್ಷೈಯಿಲ್ಲಿ ಕಣ್ಡುಕೊಳ್ಳತ್ತದು - ಕಾಣಬಹುದು.. ಈ ಉಪಾಯಕ್ಕೆ ಸ್ವತಂತ್ರ ಪ್ರಪತ್ತಿ ಎಂದು ಹೇಳಿರುವದು ಸರಿಯೋ? ಭಕ್ತಿಯೂ ಪ್ರಪತ್ತಿಯೂ ಸಹ ಹಿಂದೇ ಉಪಾಯವಲ್ಲವೊ ? ಪ್ರಪತ್ತಿಯೊಂದು ಸಾಧ್ಯೋಪಾಯವೆನ್ನುವದಕ್ಕೆ ಹಿಂದಿನ ಕಾಲಗಳಲ್ಲಿ ಯಾರೂ ಆದನ್ನು ಅನುಷ್ಠಿಸಿದಹಾಗೆ ಕಾಣಬರುವದೇ ಇಲ್ಲವಾದುದರಿಂದ ಆದನ್ನು ಉಪಾಯವೆಂದು ಭಾವಿಸುವದು ಹೇಗೆ? ಆದುದರಿಂದ ಪೂರ್ವಸಂಪ್ರದಾಯಕ್ಕೆ ವಿರುದ್ಧವಾದುದಲ್ಲವೇ ? ಪ್ರಪತ್ತಿಯೂ ಸಜಾತೀಯವೇನು ಸ್ಮೃತಿರೂಪವೇ ? ಅನುಭವರೂಪವೇ ? ಸ್ಮೃತಿರೂಪವೆಂದರೆ ಸಕೃತ್ಸ್ಮೃತಿರೂಪವಾದುದೇ ? ಅಥವಾ ತೈಲಧಾರೆಯಹಾಗೆ ಸ್ಮೃತಿ ಸಂತಾನರೂಪವಾದುದೇ ? ಇತ್ಯಾದಿ ಶಬ್ಯಾಗಳು; ಇವುಗಳಿಗೆ ಪರಿಹಾರವು ನಿಕ್ಷೇಪರಕ್ಷೈಯಲ್ಲಿ ದೊರಕುತ್ತವೆ ಎಂಬ ಭಾವವು

ರಹಸ್ಯತ್ರಯಗಳಲ್ಲಿ ಸಾಧ್ಯೋಪಾಯದ ಅನುಸಂಧಾನದ ಸ್ಥಳಗಳು.

ಈ ಸಾಧ್ಯೋಪಾಯವು, ಶೋಧಿತವಾನ ಕಟ್ಟಳೈಯಿಲೆ - ಶೋಧಿಸಲ್ಪಟ್ಟ ರೀತಿಯಲ್ಲಿ ಎಂದರೆ ಅದರ ವಿಷಯವಾದ ಸಂಶಯಗಳು ಪರಿಹರಿಸಲ್ಪಟ್ಟ ರೀತಿಯಲ್ಲಿ ರಹಸ್ಯತ್ರಯದಲ್ಲಿ, ಯಥಾಸ್ಥಾನಂ - ಎಲ್ಲೆಲ್ಲಿ ಉಪಪಾದಿಸಲ್ಪಟ್ಟಿವೆಯೋ ಅವನ್ನು, ಅನುಸಂಧಾನವಾಡಬಹುದು ಸುಲಭವಾಗಿ ಗ್ರಹಿಸಬಹುದಾದುದರಿಂದ ತಾವು ಅವುಗಳನ್ನು ಸೂಚಿಸುವ ಆವಶ್ಯಕತೆ ಇಲ್ಲವೆಂಬ ಭಾವವು ಶೋರಿಬರುತ್ತದೆ, ಅಷ್ಟಳಗಳು ಯಾವುವೆಂದರೆ :— ಕುಲಮಂತ್ರದಲ್ಲಿ, ನಮಃ ಎಂಬ ಶಬ್ದದಲ್ಲಿ ಅಖಂಡ ನಮಶ್ಶಬ್ದವು ಪ್ರಪದನವನ್ನು ಸೂಚಿಸುತ್ತದೆ ಇದನ್ನು ಚನ್ನಾಗಿ ಮೂಲಿ ಮಂತ್ರಾಧಿಕಾರದಲ್ಲಿ ಉಪಪಾದಿಸಿರುತ್ತಾರೆ. ಪೂರ್ವಾಚಾರ್ಯರು ಪಂಚಪ್ರಪಾಂಡವಾಗಿಯೂ ತುಂಬಾ ಕೃಪೆಯಿಂದ ಉಪದೇಶಿಸಿರುತ್ತಾರೆ, "ಗಚ್ಛ ಧ್ವಮೇನಂ ಶರಣಂಶರಣ್ಯಂ ಪುರಃ ಪರ್ಯಧಾಃ" ಓ ಪುರುಷ ಶ್ರೇಷ್ಠರಾದ

ಷಾಂಡವರುಗಳಿಗಾಗಿ, ನಿಮ್ಮ ಬಂಧುವಾದ ಶ್ರೀಕೃಷ್ಣನು ಸಾಮಾನ್ಯನಲ್ಲವು, ಆತನೇ ಮಾಧವನು, ಶ್ರಿಯಃಪತಿಯು, ಆತನೇ ಸರ್ವಲೋಕ ಶರಣ್ಯನಾದುದರಿಂದ ಆತನಲ್ಲಿ ಶರಣಾಗತಿಯನ್ನು ಮಾಡಿ" ಎನ್ನಲು, ಆಗ, "**ದ್ರೌಪದ್ಯಾಸ್ಸಹಿತಾಸ್ಸರ್ವೇ ನಮಶ್ಚಕ್ರುರ್ಜನಾರ್ದನಂ**" ಆಗ ದ್ರೌಪದೀ ಸಮೇತರಾಗಿ ಅವರೆಲ್ಲರೂ ಜನಾರ್ದನನ್ನು ಶರಣ ಹೊಂದಿದರು," ಎಂಬ ವಾಕ್ಯವನ್ನೂ, "**ನನುಸಾ ಯೋ ಕರೋದ್ವೇನೇ ಸಸ್ವಧ್ವರ ಇತೀರಿತಃ**" ನಮಸ್ಕಾರಪೂರ್ವಕವಾಗಿ ಯಾವನು ಭರನ್ಯಾಸ ಮಾಡತ್ತಾನೋ, ಆ ಯಾಗವೀಗ ಉತ್ಕೃಷ್ಟಯಾಗವೆಂದು ಹೇಳಿಕೊಳ್ಳುತ್ತದೆ" ಎಂಬ ಆಹಿರ್ಬುಧ್ನ್ಯ ವಾಕ್ಯವನ್ನೂ ಅಲ್ಲಿ ಉದಾಹರಿಸಿರುತ್ತಾರೆ. ಹಾಗೆಯೇ **ದ್ವಯದಲ್ಲೂ ಸಾಧ್ಯೋಪಾಯವು ಶರಣಮುಹಂ ಪ್ರಪದ್ಯೇ** ಎಂಬಲ್ಲಿ ಸೂಚಿತವು. ಚರಮಶ್ಲೋಕದಲ್ಲೂ "**ಮಾಮೇಕಂ ಶರಣಂ ವ್ರಜ**" ಎಂಬ ವಿಧ್ಯುಕ್ತಿಯಲ್ಲಿ ಈ ಸಾಧ್ಯೋಪಾಯವು ಸೂಚಿತವು. ಹೀಗೆ ಸಾಧ್ಯೋಪಾಯವನ್ನು ಹೇಳಿದ ಸ್ಥಳಗಳನ್ನು ಬಹು ಸುಲಭವಾಗಿ ಗ್ರಹಿಸಬಹುದಾದುದರಿಂದ **ಯಥಾಸ್ಥಾನಂ** ಎಂಬ ಪ್ರಯೋಗವು. ಹೀಗೆ ಈ ಸ್ಥಳಗಳಲ್ಲಿ ಹೇಳಲ್ಪಟ್ಟ ಸಾಧ್ಯೋಪಾಯದ ಅಧಿಸ್ಥಾಯವೂ ತಾವು ಈಗ ಸ್ಥಾಪಿಸಿದ ರೀತಿಗೆ ಅನುಸಾರವಾಗಿಯೇ ಇರುತ್ತವೆಂದು ತಿಳಿಸುವದಕ್ಕಾಗಿ "**ಇಜ್ಯಾಶೋಧಿತನೂನ ಕಟ್ಟಳೈಯಿಲೇ**" ಎಂಬ ಪ್ರಯೋಗವು ಈ ಅಧಿಕಾರವನ್ನು ಉಪಸಂಹಾರಮಾಡಲು ಹೊರಟು ಹಿಂದಿನ ಕ್ರಮವನ್ನನುಸರಿಸಿ ಒಂದು ಪಾಶುರ ಮತ್ತು ಒಂದು ಶ್ಲೋಕ ಇವುಗಳ ಮೂಲಕ ಅಧಿಕಾರಾರ್ಥವನ್ನು ಸಙ್ಗ್ರಹಿಸಿ ಹೇಳಿ ಪರಿಸಮಾಪ್ತಿಯನ್ನು ಮಾಡುತ್ತಾರೆ. ಈ ಮುಂದಿನ ಪಾಶುರದಲ್ಲಿ ನಿಷ್ಠೋಪಾಯನ ವಶೀಕರಣಕ್ಕಾಗಿ ಸಾಧ್ಯೋಪಾಯವು ಅವಶ್ಯಕವೆಂದು ಹೇಳುತ್ತಾರೆ; ಆದರೆ, "**ಯಮೇವೈಷವೃಣುತೇ ತೇನ ಲಭ್ಯಃ**" ಪರಮಾತ್ಮನು ಯಾವನನ್ನು ವರಿಸುವನೋ ಅವನಿಗೇನೇ ಪ್ರಾಪ್ಯನು ಎಂದು ಶ್ರುತಿಯು ಹೇಳಿರುವಾಗ ಸಾಧ್ಯೋಪಾಯದ ಅವಶ್ಯಕತೆ ಏಕೆ? ಎಂಬ ಪೂರ್ವಪಕ್ಷಕ್ಕೂ ಹಾಗೆಯೇ ಸಮಾಧಾನವನ್ನು ಹೇಳುತ್ತಾರೆ. ಈ ಸಾಧ್ಯೋಪಾಯಾನುಷ್ಠಾನದಿಂದ ಪ್ರೀತನಾಗಿ ಯಾವನು ನಿತ್ಯವಿಭೂತಿಯಲ್ಲಿರಲು ಯೋಗ್ಯನೆಂದು ವರಿಸುವನೋ ಆತನಿಗೆ ಮಾತ್ರವೇ ಲಭ್ಯನೆಂಬುದು ಶ್ರುತ್ಯಭಿಪ್ರಾಯವಾದುದರಿಂದ ಏನೊಂದೂ ವಿರೋಧವಿಲ್ಲವೆಂದು ಹೇಳುತ್ತಾರೆ ಉಪಾಯಾನುಷ್ಠಾನವನ್ನು ಸರಿಯಾಗಿ ಭಗವಂತನು ಪ್ರೀತನಾಗುವಹಾಗೆ ಮಾಡಿದರ ಫಲಕಾರಿಯು ಉಪಾಯಾನುಷ್ಠಾನದಹಾಗೆ ಕೇವಲ ಪ್ರಾಪ್ತಿಮಾತ್ರ ಯಿದ್ದುದಾದರೆ ಫಲಕಾರಿಯಾಗದು. ಪರೀಕ್ಷೆಗೆ ಅನೇಕ ತರುಣರು ಹೋಗಬಹುದು ಪರೀಕ್ಷಿಸುವ ಪಂಡಿತನು ಯಾವನನ್ನು ಮಾತ್ರ ಅವನು ಬರೆದಿರುವ ಉತ್ತರಗ

ವರಿಕ್ಕುನ್ರನನ್ ಪರ್ರ ಯಾವರೈ ಯೆನ್ನು ಮುರೈಯದನಿಲ್ ।
ವಿರಿಕ್ಕುನ್ರದುವುಂ ಕುರಿಯೊನ್ರಾಲ್ ವಿನೈಯರೈಯಾದಲಿನಾಮ್ ।
ಉರಕ್ಕುನ್ರನನ್ನೆರಿಯೋರುನ್ರುಡಿ ಕಳಿಲೋರ್ನ್ತುಲಕೆಮ್ ।
ತರಿಕ್ಕುನ್ರ ತಾರಕನಾರ್ ತಗವಾಲ್ನಲರಿಕ್ಕುನ್ರ ನಮೋ ॥೩೧॥

ಳಿಂದ ಯೋಗ್ಯನೆಂದು ಭಾವಿಸುವನೋ ಅವನು ಮಾತ್ರ ಹೇಗೆ ತೇರ್ಗಡೆಯನ್ನು ಹೊಂದುತ್ತಾನೆಯೋ, ಹಾಗೆಯೇ ಇಲ್ಲಿಯೂ ಎಂದು ಭಾವಿಸತಕ್ಕದ್ದು.

ಅರ್ಥ—**ಪರ್ರ** - ಸರ್ವರಿಗೂ ಶ್ರೇಷ್ಠನಾದ **ಸರ್ವೇಶ್ವರನನ್ನು, ಯಾವರೈ** - **"ನಾಯಮಾತ್ಮಾಪ್ರವಚನೇನ ಲಭ್ಯೋ ನ ಮೇಧಯಾ ನ ಬಹುನಾಶ್ರು ತೇನ ಯಮೇವೈಷವೃಣುತೇ ತೇನ ಲಭ್ಯಃ** (ಕಠ ೧.೨ ೨೩ ಮುಂ. ೩ ೨.೩) ಎಂದು ಉಪನಿಷತ್ತುಗಳಲ್ಲಿ ಹೇಳಿರುವಹಾಗೆ ಯಾವನೊಬ್ಬನನ್ನು, **ವರಿಕ್ಕುನ್ರನ್** - ವರಿಸುತ್ತಾನೆಯೋ, **ಮುರೈಯದನಿಲ್** - ವೇದದಲ್ಲಿ ಎಂದರೆ ಮೇಲೆ ಹೇಳಿದ ಮುಂಡಕ ಕಠೋಪನಿಷತ್ತುಗಳಲ್ಲಿ, **ವಿರಕ್ಕುನ್ರದುವುಂ** - ವಿಸ್ತರಿಸಿ, ಪ್ರಕಾಶಿಸುವಹಾಗೆ ಹೇಳಿರುವ ಆತನ ವರಿಸುವಿಕೆಯೂ ಕೂಡ, **ವಿನೈಯರೈ** - ಅನಾದಿ ಕರ್ಮ ಪ್ರವಾಹದಿಂದ ಭಗವನ್ನಿಗ್ರಹಕ್ಕೆ ಪಾತ್ರರಾಗಿರುವಹಾಗೆ ಪಾಪ ಭೂಯಿಷ್ಠರಾದವರಾಗಿರುವದರಿಂದಲೇ, **ಕುರಿಯೊನ್ರಾಲ್** - ವ್ಯಾಜರೂಪದಲ್ಲಿ ಭಕ್ತಿ ಪ್ರಪತ್ತಿರೂಪ ಸಾಧ್ಯೋಪಾಯಗಳಲ್ಲಿ ಒಂದರ ಅನುಷ್ಠಾನಮೂಲಕವಾಗಿಯೇ ಈ ನ್ಯಾಯವಾದ ಸಾಧ್ಯೋಪಾಯವಿಲ್ಲದೆ ತಾನು ಸಿದ್ಧೋಪಾಯನಾಗಿ ವರಿಸುವದಿಲ್ಲವೆಂಬ ತಾತ್ಪರ್ಯವು. **ಆದಲಿಲ್** - ಆ ಕಾರಣದಿಂದ, **ನಾಮ್**-ಪಾಪ ರಾಧಿಗಳಾದ ನಾವು, **ಉರೈಗಿನ್ರ** - ಶಾಸ್ತ್ರಗಳಲ್ಲಿ ವಿಧಿಸಲ್ಪಟ್ಟಿರುವ, **ನನ್ನೆರಿ** - ಪರಮ ಪ್ರಾಪ್ಯನನ್ನು ಹೊಂದಿಸುವುಗಳಾದ ಪ್ರಯುಕ್ತ ಒಳ್ಳೆ ಉಪಾಯಗಳಾದ ಭಕ್ತಿ ಪ್ರಪತ್ತಿಗಳು, **ಓರುಂ ಪಡಿಗಳಿಲ್ ಓರ್ನ್ದು** - ಯಾವ ಪ್ರಕಾರದಿಂದ ವಿಚಾರಮಾಡಿ ತಿಳಿಯುತಕ್ಕದ್ದೋ ಹಾಗೆ ವಿಚಾರಮಾಡಿ, **ಉಲಗನ್ರಿಕ್ಕುನ್ರ** ಅಂತರ್ಯಾಮಿಯಾಗಿ ಜಗದ್ಧಾರಕನಾದ, **ತಾರಕನಾರ್** - ಸಂಸಾರ ಸಮುದ್ರವನ್ನು ದಾಟಿಸುವ, ಶಿಷ್ಯರಕ್ಷಕನು, **ತಗವಾಲ್** - ಆಶ್ರಿತರನ್ನು ಅತ್ಯರ್ಥ ಪ್ರಿಯರನ್ನಾಗಿ ಭಾವಿಸುವ ಪರಮ ಕೃಪೆಯಿಂದ, **ತರಕಿನ್ರನಮ್** - ಉಜ್ಜೀವಿತರಾಪೆವೆಂದು ನಿರ್ಭರರಾಗಿರುವೆವು.

ತಾತ್ಪರ್ಯ—ಇಲ್ಲಿ ಸರ್ವೇಶ್ವರನನ್ನು **ಪರ್ರ** ಎಂದು ಹೇಳಿರುವದು, **"ಅಕ್ಷರಾತ್ಪರತಃ ಪರಃ"** ಎಂದು ಮುಂಡಕ (೩-೧-೨)ದಲ್ಲಿ ಹೇಳಿರುವಹಾಗೆ ಜಗತ್ತಿನ ಎಲ್ಲಾ ಭೂತಗಳಿಗಿಂತಲೂ ಸದ್ವೈಶಿಷ್ಟ್ಯನೆಂದೂ ಹೇಳಿರುವದರಿಂದ

ಬ್ರಹ್ಮ ರುದ್ರಾದಿಗಳಿಗಾಗಿ ಈ ಲೋಕದ ಕ್ಷೇತ್ರಜ್ಞರಿಗಾಗಿ ಮೋಕ್ಷಪ್ರದತ್ವ ಶಕ್ತಿಯಿಲ್ಲದ ಅಸಮರ್ಥರನ್ನು ಪ್ರಸನ್ನನು ಆಶ್ರಯಿಸಿದರೆ ತನ್ನ ಇಷ್ಟಾರ್ಥ ಸಿದ್ಧಿಸದು; ಪರತ್ವಾದಿ ಆಶ್ರಯೋಪಯುಕ್ತ ಕಲ್ಯಾಣ ಮಹೋದಧಿಯನ್ನಾಶ್ರಯಿಸಿದರೇನೇ ಮನೋರಥ ಪೂರ್ಣವೆಂಬುದು ಸೂಚಿತವು. ಇಂತಹ ಸರ್ವೋತ್ಕೃಷ್ಟತೆಯೊಂದಿಗೆ "ಸ ಚ ಮನು ಪ್ರಿಯಃ" ಎಂದೂ "ಜ್ಞಾನೀತ್ವಾತ್ಮೈಯಮೇ ಮತಂ" ಎಂದೂ ಆಶ್ರಿತರ ವಿಷಯದಲ್ಲಿ ಪರಮ ಕಾರುಣಿಕನು ಆತನು ಎಂದು ತೋರಿಸುವದಕ್ಕಾಗಿ, ಭಗವಾಲ್ ಎಂಬ ಪ್ರಯೋಗವು ಅಂತ್ಯದಲ್ಲೂ ಇರುತ್ತದೆ. ಇವೆರಡು ಗುಣಗಳಾದ ಸರ್ವ ಶಕ್ತಿತ್ವ ಕಾರುಣ್ಯಗಳಿರುವನನ್ನು ಆಶ್ರಯಿಸಿದರೆ ಫಲದಲ್ಲಿ ಈಷದಪಿ ಸಂದೇಹವೇ ಇಲ್ಲವು ಎಂದು ತರಿಗಿನ್ರ್ಸನವೇ ಎಂಬುದರಿಂದ ನಿರ್ಭರತ್ವವನ್ನು ಸೂಚಿಸಿರುತ್ತಾರೆ.

ಆದರೆ ಬಂಧದಲ್ಲಿ ಸಿಕ್ಕಿ ನರಳುತ್ತಿರುವ ಜೀವ ವರ್ಗವನ್ನು ರಕ್ಷಿಸಬೇಕೆಂದು ಸುವ್ರತವನ್ನು ಧರಿಸಿರುವ ಈ ಕರುಣಾನಿಧಿಯನ್ನು ಆಶ್ರಯಿಸಬೇಕೋ ? ಶ್ರುತಿಯಲ್ಲಿ **"ನಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ ನ ಬಹುನಾ ಶ್ರುತೇನ, ಯಮೇವೈಷ ವೃಣುತೇ ತೇನ ಲಭ್ಯಃ"** ಎಂದು ಶ್ರುತಿಯಿರುವದರಿಂದ ಆತನು ಸರ್ವಸ್ವತಂತ್ರನಾಗಿ, ತನಗೆ ಯಾರ ವಿಷಯದಲ್ಲಿ ಇಷ್ಟ ಉಂಟಾಗುತ್ತದೋ ಅವರಿಗೆ ತಾನು ಪ್ರಾಪ್ಯನು" ಎಂಬುದರಿಂದ ಸರ್ವೇಶ್ವರನೇ ಸ್ವತಂತ್ರಿಸಿ ಮುಕ್ತಿ ಕೊಡುವನು. ಈ ಭಕ್ತಿ ಪ್ರಪತ್ತಿರೂಪ ನಿರರ್ಥಕೋಪಾಯಗಳಿಂದ ಪ್ರಯೋಜನವೇನು ಎಂದು ಆಕ್ಷೇಪವನ್ನು ತರಬಹುದೆಂದು ಯೋಚಿಸಿ, ಅದಕ್ಕೆ ಸರಿಯಾದ ಅರ್ಥವನ್ನು ದಯಪಾಲಿಸುತ್ತಾರೆ: ಸ್ವತಂತ್ರನಾಗಿ ತನ್ನ ಇಷ್ಟಬಂದಂತೆ ಮುಕ್ತಿ ಕೊಡುವನು ಎಂದು ಹೇಳಿಬಿಟ್ಟರೆ, ಕರುಣಾನಿಧಿಯಾಗಿಯೂ ಸಮರ್ಥನಾಗಿಯೂ ಸ್ವತಂತ್ರನಾಗಿಯೂ ಇರುವದರಿಂದ ಸರ್ವರಿಗೂ ಮುಕ್ತಿಯನ್ನು ಕೊಟ್ಟುಬಿಡಬೇಕಾಗಿತ್ತು ಹಾಗಲ್ಲದೆ ಲೆಕ್ಕಾಚಾರ ಮಾಡಲು ಅಸಾಧ್ಯವಾಗಿರುವ ಜೀವಕೋಟಿಯು ಬಂಧದಲ್ಲೇ ನರಳುತ್ತಾ ಇದೆ. ಹಾಗಲ್ಲವು, ಇಷ್ಟಬಂದಹಾಗೆ ಕೆಲವರಿಗೆ ಮಾತ್ರ ಮುಕ್ತಿ ಕೊಡುವನು ಎಂದರೆ ವೈಷಮ್ಯ ನೈರ್ಘೃಣ್ಯಕ್ಕೆ ಒಳಗಾಗುವನು. ಆದುದರಿಂದ ಮುಕ್ತಿಗೆ ಪ್ರಧಾನ ಕಾರಣಭೂತನು ಸರ್ವೇಶ್ವರನೇ ಯಾದರೂ ತಾನು ಎಲ್ಲರಿಗೂ ಇಷ್ಟಬಂದಂತೆ ಮುಕ್ತಿಯನ್ನೀಯುವದಿಲ್ಲವೆಂದೂ, ಎರಡು ವಿಧವಾದ ಉಪಾಯಗಳಲ್ಲಿ ಯಾವದನ್ನಾದರೂ ತಾನು ಶಾಸ್ತ್ರಗಳಲ್ಲಿ ಹೇಳಿರುವಹಾಗೆ ಸರಿಯಾಗಿ ತಾನು ಪ್ರೀತನಾಗುವಹಾಗೆ ಅನುಷ್ಠಿಸಿದರೇನೇ ಅವನ್ನು ವ್ಯಾಜೀಕರಿಸಿ, ಮುಕ್ತಿಯನ್ನೀಯತಕ್ಕವನೆಂದೂ, ಅದರಿಂದಲೇ ಮುಕುಂದನೆಂಬ ನಾಮಧೇಯವು ಸರ್ವೇಶ್ವರನಿಗೆ ಸಲ್ಲತಕ್ಕದ್ದೆಂದೂ ಸೂಚಿಸುವ,

ಕ್ಕಾಗಿಯೇ ಪಿರಗಿನ್ರದುಮ್ ಕುರಿಯೊನ್ರಾಲ್ ಎಂಬ ಪ್ರಯೋಗವು. ಇದರಿಂದ ಎರಡು ವಿಷಯವು ಸೂಚಿತವು,—(೧) ವ್ಯಾಜರೂಪವಾಗಿ ಭಕ್ತಿ ಅಥವಾ ಪ್ರಪತ್ತಿರೂಪ ಉಪಾಯಾನುಷ್ಠಾನವೂ ಆವಶ್ಯಕವು. (೨) ಆ ಉಪಾಯಾನುಷ್ಠಾನವು ಶಾಸ್ತ್ರ ಸಮ್ಮತವಾದುದಾಗಿ ಅದರಿಂದ ಪರಮ ಕಾರುಣಿಕನು ಪ್ರೀತನಾಗಬೇಕು. ಅದುದರಿಂದ **ಯಮೇ ವೈಷ ವೃಣುತೇ** ಎಂಬ ಶ್ರುತಿಯು ಇದನ್ನೇ ಉಪದೇಶಿಸುತ್ತದೆ. ಬರೀ ಉಪಾಯಾನುಷ್ಠಾನವು ಸಾಲದು, ಅದರಿಂದ ಭಗವಂತನು ಪ್ರೀತನಾಗಿ ಈ ಅಧಿಕಾರಿಯನ್ನು ವರಿಸಿದರೆ, ಆಗೀಗ **ತೇನ ಲಭ್ಯ**ನು ಎಂದು ಹೇಳಿರುತ್ತದೆಯಾದುದರಿಂದ ಸಾಧ್ಯೋಪಾಯಾನುಷ್ಠಾನ ವಿಷಯದಲ್ಲಿ ಶಙ್ಕಾವಿಗೆ ಅವಕಾಶವಿಲ್ಲವೆಂದುಪದೇಶಿಸಿರುತ್ತಾರೆ. ಹಾಗೆಯೇ ಗೀತೆಯಲ್ಲೂ ಪರಮಾತ್ಮನೇ ಹೇಳಿಕೊಂಡಿರುತ್ತಾನೆ. ಈ ಶ್ರುತ್ಯರ್ಥವನ್ನೇ ಬಹುನಿಪುಣತರವಾಗಿ ಶ್ರೀಕೃಷ್ಣನು ಅಲ್ಲಿ ಉಸಪಾದಿಸಿರುವದರಿಂದ ಶ್ರೀಭಾಷ್ಯಕಾರರು ಆ ಶ್ಲೋಕಗಳ ವ್ಯಾಖ್ಯಾನದಲ್ಲಿ ಈ ಕಠಶ್ರುತಿಯನ್ನೇ ಉದಾಹರಿಸಿರುತ್ತಾರೆ. ಅವು ಯಾವುವೆಂದರೆ :—

ನಾಹಮಂವೇದೈರ್ನ ತಪಸಾ ನ ದಾನೇನ ನ ಚೇಜ್ಯಯಾ ।
ಶಕ್ಯ ಏವಂ ವಿಧೋ ದ್ರಷ್ಟುಂ ದೃಷ್ವವಾನಸಿ ಮಾಂ ಯಥಾ ।
ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಮೇವಂ ವಿಧೋರ್ಜುನ ।
ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ ॥

(ಗೀ ೧೧. ೫೩. ೫೪) ನನ್ನಲ್ಲಿ ಭಕ್ತಿಯಿಲ್ಲದ ಬರೀ ವೇದಗಳಿಂದಲೂ ಎಂದರೆ ಅವುಗಳನ್ನು ಗುರುಗಳ ಮೂಲಕ ಅಧ್ಯಯನವನ್ನು ಹೇಳಿಸಿಕೊಳ್ಳುವದೇನು, ಅದನ್ನೇ ಪ್ರವಚನಮಾಡುವದೇನು, ಇನ್ನೊಬ್ಬರಿಗೆ ಅಧ್ಯಯನ ಹೇಳುವದೇನು, ಇವುಗಳಿಂದಲೂ,ಬರೀ ಯಾಗದಾನಹೋಮತಪಸ್ಸುಗಳಿಂದಲೂ ನನ್ನನ್ನು ಸಾಕ್ಷಾತ್ಕರಿಸಲು ಸಾಧ್ಯನಲ್ಲವು. ಇನ್ನು ಹೇಗೆ ಸಾಧ್ಯನೆಂದರೆ, ಅವ್ಯಭಿಚರಿತ ಏಕಾನ್ತ್ಯ ಭಕ್ತಿಯಿಂದ ಸಮಯಾಗಿ ಶಾಸ್ತ್ರಗಳ ಮೂಲಕ ತಿಳಿಯಲೂ ಶಕ್ಯನು, ಯಥಾವತ್ತಾಗಿ ಸಾಕ್ಷಾತ್ಕರಿಸಲು ಶಕ್ತನು,ಯಥಾವತ್ತಾಗಿ ಪರಿಪೂರ್ಣನಾದ ನನ್ನನ್ನು ಪ್ರವಿಸಲೂ ಸಾಧ್ಯನ. "ಎಂಬುದು ಅರ್ಥವು, ಈ ಶ್ಲೋಕಗಳು ಸಾಧ್ಯೋಪಾಯದ ಅವಶ್ಯಕತೆಯನ್ನೂ, ಅದರಿಂದ ಭಗವಂತನು ಸುಪ್ರೀತನಾಗಿ ಸಾಧ್ಯೋಪಾಯಾನುಷ್ಠಾನವು ಪೂರ್ಣವಾಗುವಹಾಗೆ ಮಾಡಿ ಪ್ರಾಪ್ಯನಾಗುವನೆಂಬರ್ಥವನ್ನೂ ಸೂಚಿಸುತ್ತವೆ. ರಾಜ್ಯಾಡಳಿತಗಳಿಗೆ ಯೋಗ್ಯರಾಗಿರುವವರನ್ನು ಚುನಾಯಿಸುವದರಲ್ಲಿ ರಾಜನೇ ಯದ್ಯಪಿ ಸ್ವತಂತ್ರನಾದರೂ ತನಗೆ ಯಾವುದೊಂದು ಪಕ್ಷಪಾತ ಬುದ್ಧಿಯೂ ಇಲ್ಲವೆಂದು ತೋರಿಸಲು, ಸಿವಿಲ್ ಸರ್ವಿಸ್ ಪರೀಕ್ಷೆ ಯೆಂಬ ಒಂದು ವ್ಯಾಜವನ್ನು

ಏರ್ಪಡಿಸಿ ಆದರಲ್ಲಿ ತೇರ್ಗಡೆ ಹೊಂದಿದವನನ್ನೇ ಹೇಗೆ ವರಿಸುತ್ತಾನೋ ಹಾಗೆಯೇ ಸರ್ವೇಶ್ವರನೂ ಸಹ ತನಗೆ ಯಾವ ಪಕ್ಷಪಾತಗಳೂ ಇಲ್ಲವೆಂದೂ ಭಕ್ತಿ ಪ್ರಪತ್ತ್ಯುಪಾಯಾನುಷ್ಠಾನಗಳನ್ನೇ ವ್ಯಾಜೀಕರಿಸಿ, ಅವುಗಳನ್ನು ಶಾಸ್ತ್ರೋಕ್ತರೀತ್ಯಾ ಸರಿಯಾಗಿ ನಡೆಯಿಸಿಹವನಿಗೆ ಮಾತ್ರವೇ ಮೋಕ್ಷವನ್ನು ಅನುಗ್ರಹಿಸುವನು. ಆದುದರಿಂದ ನ್ಯಾಯವು ಅವಶ್ಯಕವೆಂದು ಕುರಿಯೊನ್ನಾಲ್ ಎಂಬ ಪ್ರಯೋಗದಿಂದ ಉಪದೇಶಿಸುತ್ತಾರೆ. ಶ್ರೀಭಾಷ್ಯಕಾರರವರೂ "ಯಮೇವೈಷ ವೃಣುತೇ" ಎಂಬಲ್ಲಿ ಹೇಳಿರುವ ವರಣವು ಶ್ರಿಯಃಪತಿಯು ನಿರ್ಹೇತುಕವಾಗಿ ಮಾಡುವದಿಲ್ಲವೆಂದೂ ಹೇತುಸಾಪೇಕ್ಷನೆಯಾಗಿಯೇ ನಡೆಸುವನೆಂದೂ, ಉಪಪಾದಿಸಿರುತ್ತಾರೆ. ಈ ಸಂದರ್ಭದಲ್ಲಿ ಅವರು ಹೇಳಿರುವದೇನೆಂದರೆ:— "ಪ್ರಿಯತಮ ಏವ ಹಿ ವರಣೀಯೋ ಭವತಿ, ನ್ಯಾಯ್ಯಂ ನಿರತಿಶಯ ಪ್ರಿಯಸ್ಯ ವಿನಾಸ್ಯ ಪ್ರಿಯತಮೋ ಭವತಿ; ಪ್ರೀತಿ ರೂಪತಾಪನ್ನ ಭಕ್ತಿರೇವ ವರಣ ಹೇತು ತಯಾ ಶ್ರುತ್ಯಭಿಧಾಸ್ಯತೇ; ನ ತು ನಿರ್ಹೇತುಕಂ ವರಣಂ" ಇದರ ಅರ್ಥವೇನೆಂದರೆ, "ಯಾವನು ತುಂಬಾ ಪ್ರಿಯತಮನಾಗುವನೋ ಅವನು ತಾನೇ ಸರ್ವೇಶ್ವರನಿಂದ ವರಿಸಲು ಯೋಗ್ಯನಾಗುವನು; ಪ್ರೀತಿ ರೂಪವನ್ನು ಹೊಂದಿದ ಭಕ್ತಿ ಯಿಂದ ಸರ್ವೇಶ್ವರನಿಂದ ವರಿಸಲ್ಪಡುವದಕ್ಕೆ ಹೇತುವಾಗುತ್ತದೆಂಬುದೇ "ಯಮೇವೈಷ ವೃಣುತೇ" ಎಂಬ ಶ್ರುತಿಯ ಅಭಿಪ್ರಾಯವು; ಕಾರಣನೇನೂ ಇಲ್ಲದೇನೇ ಸರ್ವೇಶ್ವರನು ವರಿಸುವನೆಂಬ ಅಭಿಪ್ರಾಯವಲ್ಲವು" ಆದುದರಿಂದ ಪರಮ ಪುರುಷವರಣೀಯತೆಗೆ ಹೇತು ಭೂತಗಳಾದ ಈ ಸಾಧ್ಯೋಪಾಯಗಳ ವಿಷಯಗಳಲ್ಲಿ ಯಾವ ವಿಧವಾದ ಶಙ್ಕೆಯೂ ಯುಕ್ತವಲ್ಲವು; ಭಕ್ತ್ಯುಪಾಯವು ಸ್ವರೂಪವಿರುದ್ಧವೆಂದೂ, ಪ್ರಪತ್ತಿಯು ಪೂರ್ವೀಕರಾದ ಮುನಿ ಜನಗಳು ಅನುಷ್ಠಿಸಲಿಲ್ಲವೆಂದೂ ಇತ್ಯಾದಿ ಆಕ್ಷೇಪಗಳೆಲ್ಲಾ ಶಾಸ್ತ್ರವನ್ನು ತ್ಯಜಿಸಿ ನಡೆಯುವಂತವುಗಳೆಂದು ತಿಳಿಸುವದಕ್ಕಾಗಿ ಉರೈಕ್ಕಿನ್ರನನ್ನೆರಿ ಎಂದು ಹೇಳಿ, ಶಾಸ್ತ್ರಚೋದಿತಗಳಾಗಿ ಯಿರುವದರಿಂದ ಅವುಗಳು ನಲ್ ನೆರಿ ಉತ್ಕೃಷ್ಟಮಾರ್ಗಗಳೆಂದು ಹೇಳಿ, ಅವುಗಳನ್ನು ಓರುಮ್ಪಡಿಗಳಿಲ್ ಓರ್ಕ್ಕುಮ್ ಶಾಸ್ತ್ರಗಳಲ್ಲಿ ಹೇಳಿರುವಹಾಗೆ ಅನುಷ್ಠಿಸಿ ಈ ಅನುಷ್ಠಾನಗಳು ಶ್ರಿಯಃಪತಿಯನ್ನು ವಶೀಕರಣಮಾಡಿಕೊಳ್ಳುವ ಉಪಾಯಗಳೆಂಬ ಅನುಸಂಧಾನ ಬೇಕೆಂದು ಹೇಳಿರುತ್ತಾರೆ ಈ ಸಾಧ್ಯೋಪಾಯಗಳನ್ನನುಷ್ಠಿಸಿ ಪ್ರಪನ್ನನಾಗದೇ ಇದ್ದರೆ ಈ ಕರುಣಾಸಾಗರನು ಮೋಕ್ಷವನ್ನೀಯನು ಎಂದು "ಪ್ರಪನ್ನಾದನ್ಯೇಷಾಂ ನ ದಿಶತಿ ಮುಕುಂದೋ ನಿಜಪದಮ್" ಎಂದು ಸ್ವಾಮಿಯವರೇ ಕಂಠೋಕ್ತವಾಗಿ ಹಿಂದೆ ತಿಳಿಸಿರುತ್ತಾರೆ. ಆದುದರಿಂದ ಭಕ್ತಿ ಪ್ರಪತ್ತಿಗಳೇ ಮೋಕ್ಷ ಸಾಧಕಗಳಾದ ಉಪಾಯಗಳು ಎಂಬುದೇ ಸಿದ್ಧಾಂತವು ಎಂಬ ಭಾವವು,

ಆಗಲಿ, ಇವುಗಳನ್ನೇನೋ ಮೋಕ್ಷೋಪಾಯಗಳೆಂದೇ ಅಭ್ಯೀಕರಿಸೋಣ; ಶಾಸ್ತ್ರ ಸಮ್ಮತವಾಗಿಯೇ ಸರಿಯಾಗಿಯೇ ಅನುಷ್ಠಿಸತಕ್ಕದ್ದೆಂದೂ ಒಪ್ಪೋಣ; ಹೀಗೆಲ್ಲಾ ಮಾಡಿದರೂ ಭಗವಂತನು ಸುಪ್ರೀತನಾಗದೇ ಹೋದರೂ ಆಗಲೂ ಅವು ನಿರರ್ಥಕಗಳಲ್ಲವೋ? ಎಂದರೆ ಹೇಳುತ್ತಾರೆ; **ಉಲಗಮ್ ದರಿಕ್ಕಿನ್ರ ತಾರಕನಾರ್** ಸರ್ವೇಶ್ವರನು; ಸನುಸ್ತ ಜಗತ್ತಿಗೂ ಆತನೇ ಧಾರಕನಾಗಿರುತ್ತಾನೆ. ಆತನ ಪ್ರಶಾಸನೆ ನಿಯಮನದಲ್ಲಿ ಸಮಸ್ತ "**ದ್ಯಾವಾಪೃಥಿವ್ಯೌ ವಿಧೃತೌ ತಿಷ್ಠತಃ**," "**ಏಷ ಸೇತುರ್ವಿಧರಣಃ**" "**ಏಷಾಂ ಲೋಕಾನಾಂ ಅಸಂಭೇದಾಯ**" ಎಂದು ಹೇಳಿರುವಹಾಗೆ ಈ ಲೋಕ ನಿಯಮನದಲ್ಲಿ ಬದ್ಧಕಂಕಣನಾಗಿ ಕೂತಿರುವಾಗ, ತನ್ನ ನಿಯಮನಾನುಸಾರ ಉಪಾಯಾನುಷ್ಠಾನಮಾಡಿದ ಜ್ಞಾನಿಯನ್ನು ಎಂದಿಗಾದರೂ ಮರತಾನೋ? "**ಜ್ಞಾನೀತ್ವಾತ್ಮೈವಮೇ ಮತಂ**" ತಾನು ಎಲ್ಲದಕ್ಕೂ ಆತ್ಮಾವಾಗಿರುವದು ಹಾಗಿರಲಿ, ಆತನೇ ತನಗೆ ಆತ್ಮಾ ಎಂದು ಭಗವಂತನು ಹೇಳಿಕ್ಕೊಂಡಿರುತ್ತಾನೆ "**ಮಿತ್ರಭಾವೇನ ಸಂಪ್ರಾಪ್ತಂ ನ ತ್ಯಜೇಯಂ ಕಥಂಚನ**" ಎಂದೂ ಹೇಳಿರುತ್ತಾನೆ. ಆದುದರಿಂದ ಆತನನ್ನು **ತಾರಕನಾರ್** ಎಂದು ಹೇಳಿರುತ್ತಾರೆ, ಸಂಸಾರಿ ತಾರಕನು ಎಂದರ್ಥವನ್ನಾಗಲಿ ಹೇಳಬಹುದು. ಅಥವಾ "**ಏತಂ ಸೇತುಂ ತೀರ್ತ್ವಾ**" (ಛಾ. ಉ. ೪. ೧.) ಎಂಬಲ್ಲಿ "**ತರತಿಶ್ಚ ಪ್ರಾಪ್ತಿವಚನಃ**" ಎಂದು ಭಾಷ್ಯವಿರುವದುದರಿಂದ **ತಾರಕನಾರ್** ಎಂಬುವದರಿಂದ ತಾನೇ ಪ್ರಾಪ್ತಿಯು ಎಂದೂ ಅರ್ಥ ಹೇಳಬಹುದು. ಅಥವಾ "**ಸಂಸಾರಸಾಗರ ನಿಮಗ್ನ**"ರಾದವರ ಉತ್ತಾರಣೆಯಲ್ಲಿ ಬದ್ಧಾದರನಾದುದರಿಂದಲಾಗಲಿ "**ತಾರಕನಾರ್**"ನೆಂದು ಪ್ರಯೋಗಿಸಿರಬಹುದು. ಇದರಿಂದ ಆತನ ಪ್ರಾಪ್ತಿಯುಂಟಾಗುವದರಲ್ಲಿ ಸಂದೇಹವಿಲ್ಲವೆಂಬುದೂ ಸೂಚಿತವು. ಹಾಗೆ ತಾನು ಪ್ರಾಪ್ಯವಾಗಿ ಸಾಯುಜ್ಯವನ್ನೂ ಸಾಷ್ಟ್ರಿತೆಯನ್ನೂ ದಯಪಾಲಿಸುವದೂ ತನ್ನ ಕೃಪಾಪ್ರಭಾವವೇ ವಿನಾ ಬೇರೆಯಲ್ಲಾ ಎಂದು ತಿಳಿಸುವದಕ್ಕಾಗಿ "**ತಕವಾಲ್**" ಎಂಬ ಪ್ರಯೋಗವು. ಆದರೆ ಈ ಅನಾದಿ ಕರ್ಮ ಪ್ರವಾಹಮೂಲಕ ವಿನ್ಯೆಯೆರೇ, ಮಹಾಪರಾಧಿಗಳ ಭಯವಿಲ್ಲವೋ ಎಂದರೆ ಪ್ರಪನ್ನನಾದ ಬಳಿಕ ಆತನನ್ನೇ ನಿರಂತರ ಧ್ಯಾನಮಾಡುತ್ತಾ ಆತನ ಪ್ರೀತಿಯನ್ನು ಸಂಪಾದಿಸಿದ ಬಳಿಕ "**ತಸ್ಮಿನ್ ಪ್ರಸನ್ನೇ ಕಿಮಿಹಾಸ್ತ್ಯಲಭ್ಯಂ....ನಿಸ್ಸಂಶಯೋಮುಕ್ತಿ ಫಲಪ್ರಪಾತಃ**" ಎಂದು ಹೇಳಿರುವ ಮೇರೆಗೆ ಅನಿಷ್ಟನಿವೃತ್ತಿಮೂಲಕ ಇಷ್ಟಪ್ರಾಪ್ತಿಯಲ್ಲಿ ಈಷದಪಿ ಸಂದೇಹವಿಲ್ಲವೆಂದು ಸೂಚಿಸುವದಕ್ಕಾಗಿ "**ತರಕ್ಕಿನ್ರ ನಮೇ**" ಎಂದು ಪ್ರಯೋಗಿಸಿರುತ್ತಾರೆ.

ಅವತಾರಿಕೆಃ—ಸಿದ್ಧೋಪಾಯನಾದ ಸರ್ವೇಶ್ವರನು ಸ್ವತಃ ಸರ್ವಜ್ಞನು, ಸರ್ವಶಕ್ತನು, ಸ್ವತಂತ್ರನು, ಇದಲ್ಲದೆ ನಮಗೆಲ್ಲಾ ಸಹಜವಾದ ಪರಮ ಸುಹೃತ್ತು; ಶೇಷಿಯು, ಕರುಣಾಸಾಗರನು; ನಾವು ಅತನಿಗೆ ಸಹಜವಾಗಿರುವ ಅಸ್ವತಂತ್ರರಾಗಿರುವ ಮಕ್ಕಳು, ದಾಸರು, ಸಂಸಾರ ಸಾಗರದಲ್ಲಿ ಬಿದ್ದು ಒದ್ದಾಡುತ್ತಿರುವವರು. ಇಂಥವರು ಅತನನ್ನು ಈ ಸಾಧ್ಯೋಪಾಯಗಳನ್ನನುಷ್ಠಿಸಿ ಬೇಡಿಕೊಳ್ಳಬೇಕೇ? ಹಾಗೆ ಬೇಡಿದನಂತರ ರಕ್ಷಿಸೋಣವು ಅತನ ಪ್ರಭಾವಕ್ಕೆ ಕುಂದಕವಲ್ಲವೇ? ಸಾಧ್ಯೋಪಾಯವು ಅವಶ್ಯಕವೆಂದರೆ, ಸಿದ್ಧೋಪಾಯ ಪ್ರಾಧಾನ್ಯಕ್ಕೂ ಏಕತ್ವಕ್ಕೂ ವಿರೋಧವಲ್ಲವೇ? ಸಾಧ್ಯೋಪಾಯದಿಂದ ವಶ್ಯನೆಂದರೆ ಸರ್ವೇಶ್ವರನಿಗೆ ಸಿದ್ಧೋಪಾಯತ್ವವು ಹೇಗೆ ಕೂಡುತ್ತದೆ? ಸಾಧ್ಯೋಪಾಯವೂ ಅವಶ್ಯಕವೇ ಎಂದರೆ ಸಾಧ್ಯೋಪಾಯವಿಲ್ಲದೆ ರಕ್ಷಿಸಲು ಅತನಿಗೆ ಶಕ್ತಿಯಿಲ್ಲವೆಂದು ಅತನ ಸರ್ವಶಕ್ತಿತ್ವಕ್ಕೆ ನ್ಯೂನತೆಯಲ್ಲವೋ? ಇತ್ಯಾದಿ ಅನೇಕ ಆಕ್ಷೇಪಗಳಿಲ್ಲಾ ಸರಿಯಾದ ಆಕ್ಷೇಪಗಳಲ್ಲವೆಂದು ಹೇಳುತ್ತಾರೆ.

ಮೇಲೆ ಹೇಳಲ್ಪಟ್ಟ ಸಾಧ್ಯೋಪಾಯಶೋಧನವು ಸ್ವಾಚಾರ್ಯ ಕೃಪಾಲಬ್ಧವಾದುದೆನ್ನುತ್ತಾರೆ.

ಸತ್ತರ್ಕಗಳಲ್ಲದ ಆಕ್ಷೇಪಗಳನ್ನೆಲ್ಲಾ ನಿರ್ಮೂಲಮಾಡುವ ಸಿದ್ಧಾಂತವನ್ನೊಳಗೊಂಡಿರುವ ತರ್ಕವಿದ್ಯೆಯಲ್ಲೇ ಶಿಕ್ಷಿತರಾಗಿರುವದೂ ಅಲ್ಲದೆ, ಕೆಮ್ಮಣ್ಣಿನಿಂದ ಕಲುಷಿತವಾದ ನೀರು ಚಿಲ್ಲದ ಬೀಜದಿಂದ ನೈರ್ಮಲ್ಯವನ್ನು ಹೇಗೆ ಹೊಂದುತ್ತದೋ, ಹಾಗೆ ತಮ್ಮ ಆಚಾರ್ಯರುಗಳು ಉಪನಿಷತ್ತುಗಳ ಸಾರತಮವಾದ ಉಪದೇಶದಿಂದ ಅಂತಹ ಶಿಷ್ಯಾಗಳಿಂದ ಕಲುಷಿತವಾಗದಹಾಗೆ ಪರಿಶುದ್ಧವಾದ ಜ್ಞಾನವುಳ್ಳವರು; ಅವರುಗಳ ತರ್ಕ ನೈಪುಣ್ಯತೆಯೆಲ್ಲಾ ಸಾರಭೂತವಾದ ಉಪನಿಷತ್ತುಗಳ ಜ್ಞಾನದಿಂದ ಪ್ರತಿಷ್ಠಿತವಾದ ಸತ್ತರ್ಕವು. ಅಂತಹ ಸತ್ತರ್ಕದಿಂದ ಸಮಸ್ತ ಇಂದ್ರಜಾಲರೂಪ ಕುತರ್ಕಗಳ ಕಾಲುಷ್ಯವೆಲ್ಲಾ ತೊಲಗಿ ಸ್ವಚ್ಛವಾದ ಜ್ಞಾನವಿಕಾಸವುಳ್ಳವರು. ಅಂತಹ ಪರಮಾಚಾರ್ಯರೆ ಕೃಪಾಪೂರ್ಣವಾದ ಉಪದೇಶವು, ಲಭಿಸಿದುದರಿಂದ ಈ ಸಾಧ್ಯೋಪಾಯ ಶೋಧನವನ್ನು ತಾವು ಮಾಡಿರುವದಾಗಿ ಹೇಳಿಕೊಳ್ಳುತ್ತಾರೆ.

ಅರ್ಥ:—ನಮ್ಮ ಮಹನೀಯರಾದ ಮಹಾಪ್ರಾಜ್ಞರಾದ ಪೂರ್ವಾಚಾರ್ಯರುಗಳು ನಮಗೆ ಪರಮಕೃಪಯಾ ಸದುಪದೇಶವನ್ನು ಮಾಡಿರುತ್ತಾರೆಂದು ಹೇಳುತ್ತಾರೆ. ಏನನ್ನು ಉಪದೇಶಿಸಿರುತ್ತಾರೆಂದರೆ:—**ನಃ**-ನಮ್ಮಗಳಿಗೆ, **ಸಾಧ್ಯಾಂ** - ಸಾಧ್ಯೋಪಾಯವಾದ, ಭಕ್ತಿ ಅಥವಾ ಪ್ರಪತ್ತಿ ಮಾರ್ಗವನ್ನು, ಪ್ರಕರಣವು ಪ್ರಪತ್ತಿಮಾರ್ಗವಾದುದರಿಂದ, ಸಾಧ್ಯಾಂ ಎಂಬುದರಿಂದ ಪ್ರಪತ್ತಿ ಎಂದು ಇಟ್ಟುಕೊಳ್ಳಬಹುದು. ಸಿದ್ಧೋಪಾಯೆ ಪರಿತ್ರಾಣೇ [illegible] ಸಾಧ್ಯೋಪಾಯನಾಮ ಶ್ರೀ [illegible]ಪತಿರಿಯನ್ನ ವರೀ

ಉಕ್ತಪ್ರಕಾರ ಸಾಧ್ಯೋಪಾಯಶೋಧಕತ್ವಂ ಸ್ವಾಚಾರ್ಯ
ಕೃಪಾಲಬ್ಧಮಿತ್ಯಾಹ.

ತತ್ತದ್ದೈತುಕ ಹೇತುಕೇ ಕೃತಧಿಯಸ್ತರ್ಕೇಂದ್ರಜಾಲಕ್ರಮೇ ।
ಬಿಭ್ರಾಣಾಃ ಕಥಕಪ್ರಧಾನ ಗಣನೇ ನಿಷ್ಣಂ ಕನಿಷ್ಠಾಶ್ರಯಾನ್ ।
ಆಧ್ಯಾತ್ಮಶ್ರುತಿ ಸಂಪ್ರದಾಯ ಕೃತಕ್ಕೇರದಾತ್ತ ಕಂಶುದ್ಧಲಯಾ ।
ಸಿದ್ಧೋಪಾಯವಶೀಕ್ರಿಯಾಮುಪಹಿ ನ ಸ್ಸಾಧ್ಯಾಪ ಸಮುದ್ಧ್ಯಾಯಿನೇ ॥೫೪॥

ಇತಿ ಕವಿತಾರ್ಕಿಕಸಿಂಹಸ್ಯ ಸರ್ವತಂತ್ರಸ್ವತಂತ್ರಸ್ಯ ಶ್ರೀವೇದಾನ್ತಾಚಾರ್ಯಸ್ಯ ಕೃತಿಷು
ಶ್ರೀಮದ್ರಹಸ್ಯತ್ರಯಸಾರೇ ಸಾಧ್ಯೋಪಾಯಶೋಧನಾಧಿಕಾರಶ್ಚತುಶ್ಚಿಂಶಃ ॥

ಕರಣೋಪಾಯವನ್ನಾಗಿ. ಇತಿ - ಎಂಬದಾಗಿ, ಸಮುದ್ಧ್ಯಾಪಯೇ - ನೇದಾಂತ ಶಾಸ್ತ್ರ ಸಾರ್ವಭೌಮರಾದ ಪ್ರಯತ್ನ ಚಿತ್ತನ್ನಾಗಿ ಬುದ್ಧಿಯನ್ನು ಕಲಿಸಿರುತ್ತಾರೆ, ಬಹು ಸ್ವಾರಸ್ಯವಾಗಿ ನಿಸ್ಸಂದೇಹವಾಗಿ, ಯಾವದೊಂದು ಶಙ್ಕೆಗಳಿಗೂ, ಅವಕಾಶ ವಿಲ್ಲದಹಾಗೆ ಕೃಪಯಾ ಉಪದೇಶಿಸಿರುತ್ತಾರೆ. ಅವರು ಎಂತವರೆಂದರೆ ಹೇಳು ತ್ತಾರೆ:—ಪೂರ್ವಾರ್ಧದಿಂದ ದುಷ್ಟ ಹೇತುಗಳನ್ನು ಹೇಳಿ ಕುತರ್ಕಗಳನ್ನು ಮಾಡುವ ಯುಕ್ತಿವಾದಗಳಿಗೆ, ಸರಿಯಾದ ಯುಕ್ತಿಗಳನ್ನೇ ಹೇಳಿ, ಅವರು ಗಳ ವಾದಗಳನ್ನು ಜಯಿಸುವ ತರ್ಕವಿದ್ಯೆಗಳಲ್ಲಿ ಚಿತ್ತನ್ನಾಗಿ ಶಿಕ್ಷಿತರಾಗಿರುವ ತಾರ್ಕಿಕಾಗ್ರೇಸರರು ಎಂದು ಹೇಳುತ್ತಾರೆ, (೧) **ತತ್ತದ್ದೈತುಕ ಹೇತುಕೇ** - **ತತ್ತತ್** - ಆಯಾ ಎಂದರೆ ನಾನಾ ವಿಧವಾದ, **ಹೈತುಕ** - ಶಾಸ್ತ್ರಗಳನ್ನು ದೂರೀ ಕೃತಮಾಡಿ, ಬರೀ ಯುಕ್ತಿಗಳಾದ ಹೇತುಗಳನ್ನು ಎಂದರೆ ಕಾರಣಗಳನ್ನು ಹೇಳಿ ವಾದಮಾಡುವರು, ಕುತರ್ಕಗಳ ಮೂಲಕ ವಾದಮಾಡುವವರು ಹೈತು ಕರು, ಅಂತವರೇ, **ಹೇತುಕೇ** - ಕಾರಣವಾಗಿವುಳ್ಳ **ತರ್ಕೇಂದ್ರಜಾಲಕ್ರಮೇ** - **ತರ್ಕ** - ಇಂತಹ ತರ್ಕವೆಂಬ, **ಇಂದ್ರಜಾಲಕ್ರಮೇ** ಬುದ್ಧಿಯನ್ನು ಮೋಸಗೊ ಳಿಸುವ ಕ್ರಮದಲ್ಲಿ, **ಕೃತಧಿಯಃ**-ಶಿಕ್ಷಿತವಾದ ಬುದ್ಧಿಯುಳ್ಳವರಾಯುದರಿಂದಲೇ, **ಕಥಕೆ ಪ್ರಧಾನ ಗಣನೇ** - ತಾರ್ಕಿಕಾಗ್ರೇಸರರನ್ನು ಗಣನೆ ಮಾಡುವದರಲ್ಲಿ, **ಕನಿಷ್ಠಾಶ್ರಯಾಂ** - ಕಿರುಬೆರಳಿನ, ಆಶ್ರಯವನ್ನು, **ಬಿಭ್ರಾಣಾಃ** - ಧರಿಸಿರುವಂ ತಹ ಪೂರ್ವಾಚಾರ್ಯರು, ತಾರ್ಕಿಕರೆಲ್ಲಿ ವೊದಲು ಯಾರು ಎಂದು ಹೆಬ್ಬೆರಳನ್ನು ಕಿರುಬೆರಳಿನಲ್ಲಿಟ್ಟು ಎಣಿಸುವಾಗ, ನಮ್ಮ ಪೂರ್ವಾಚಾರ್ಯರುಗಳಾದ ಯಾಮು ನೇಯರೂ ಶ್ರೀ ಭಾಷ್ಯಕಾರರೂ, ಹಾಗೆಯೇ ಈಚೆಗೆ ನಡಾದೂರಮ್ಮಾಳ್ ಕಿಡಾಂಬಿ ಅಪ್ಪುಳ್ಳಾರ್ ಮೊದಲಾದವರೂ ಎಂಬ ಭಾವವು; ಅವರುಗಳ ಉಪದೇಶ ದಿಂದ ತರ್ಕಶಾಸ್ತ್ರದಲ್ಲಿ ಪ್ರವೀಣತೆಯನ್ನು ಹೊಂದಿ ಕವಿತಾರ್ಕಿಕ ಸಿಂಹರೆಂದು ಪ್ರಸಿದ್ಧರಾದ ತಾವೂ ಸಹ ಸೂಚಿಸಲ್ಪಟ್ಟರು. ಹೀಗೆ ಪರಪಕ್ಷಕುತರ್ಕಗಳನ್ನು ಅಂತಹ ಯುಕ್ತಿವಾದಗಳಿಂದಲೇ ನಿರ್ಮೂಲನಮಾಡುವ ಶಕ್ತಿಯುಳ್ಳವರೆಂಬ ಭಾವವು.

ಆದರೆ ಅಂತಹ ಯುಕ್ತಿವಾದ ಮಾತ್ರವೇ ಅಷ್ಟು ಪ್ರಶಸ್ತವಲ್ಲವು. ಇನ್ನೂ ಹೆಚ್ಚು ವೈಲಕ್ಷಣ್ಯವೂ ಉಂಟೆಂದು ಉತ್ತರಾರ್ಧದಿಂದ ತಿಳಿಸುತ್ತಾರೆ. ಪರವಾದಿಗಳ ತರ್ಕವಾದರೋ ಶಾಸ್ತ್ರವನ್ನು ತ್ಯಜಿಸಿದ ಕುತರ್ಕವು ನಮ್ಮವರ ತರ್ಕವಾದರೋ ವೇದಾಂತಶಾಸ್ತ್ರಜ್ಞಾನದಿಂದ ಸುಪ್ರತಿಷ್ಠಿತವಾದ ಸತ್ತರ್ಕವು; ಅಂತಹ ತರ್ಕದಿಂದ ಸರ್ವಸಂಶಯಗಳನ್ನು ಕಳೆದುಕೊಂಡು ಪರಿಶುದ್ಧವಾದ ಅಂತಃಕರಣವುಳ್ಳವರೆಂದು ಹೇಳುತ್ತಾರೆ (೨) **ಅಧ್ಯಾತ್ಮಶ್ರುತಿಸಂಪ್ರದಾಯಕೈತಕ್ಯೈಃ**- **ಅಧ್ಯಾತ್ಮ ಶ್ರುತಿ** - ವೇದಾಂತ ನಿರ್ಣಯವನ್ನು ಬೋಧಿಸುವ ಶ್ರುತಿಗಳು ಇವು ಯಾವುವೆಂದರೆ ಮುಖ್ಯವಾಗಿ ದಶೋಪನಿಷತ್ತುಗಳು, ಇವುಗಳ **ಸಂಪ್ರದಾಯ** - ಗುರುಶಿಷ್ಯಕ್ರಮದಿಂದ ಅವಿಚ್ಛಿನ್ನವಾಗಿ ಪ್ರಾಪ್ತವಾದ ಉಪದೇಶಗಳೆಂಬ, **ಕೈತಕ್ಯೈಃ** ಕಶ್ಮಲವಾಗಿ ಕೆರೆಯನ್ನೀರಿನಹಾಗೆ ಕೆಂಪಗೆ ಕಲುಷಿತವಾದ ನೀರನ್ನು ಶುದ್ಧಿಮಾಡುವ ಸತ್ತರ್ಕರೂಪಗಳಲ್ಲಿರುವ ಚಿಲ್ಲದ ಬೀಜಗಳಿಂದ, **ಅದ್ಧಾ** - ಬಹುಚನ್ನಾಗಿ, **ವಿಶುದ್ಧಾಶಯಾಃ** - ನಿರ್ಮಲವಾದ ಮನಸ್ಸುಗಳನ್ನುಳ್ಳವರು, ಇಂತಹ ಬುದ್ಧಿಯುಕ್ತವಾದದಿಂದಲೂ, ಮತ್ತು ವೇದಾಂತ ಶಾಸ್ತ್ರಜ್ಞಾನದಿಂದಲೂ ಗೆಲ್ಲಲು ಸಾಮರ್ಥ್ಯವುಳ್ಳ ತಾರ್ಕಿಕಾಗ್ರೇಸರರಾದ ತಮ್ಮ ಆಚಾರ್ಯರುಗಳು ಸಾಧ್ಯೋಪಾಯದಿಂದಲೇ ಸಿದ್ಧೋಪಾಯನು ವಶ್ಯನೆಂದು ಉಪದೇಶಿಸಿರುತ್ತಾರೆ. ಈ ಉಪದೇಶದಲ್ಲಿ ಪ್ರಧಾನವಾದ ಉಪದೇಶವು ಯಾವುದೆಂದರೆ.—"**ತಸ್ಯ ಚ ವಶೀಕರಣಂ ತಚ್ಚರಣಾಗತಿರೇವ**" ಎಂಬ ಶ್ರೀ ಭಾಷ್ಯಕಾರರ ಪ್ರಸಿದ್ಧೋಕ್ತಿಯು. ಆ ಸಿದ್ಧೋಪಾಯನಾಗಿ ಕರುಣಾನಿಧಿಯಾದ ಶ್ರೀಯಃಪತಿಯನ್ನು ವಶೀಕರಣಮಾಡಿಕೊಳ್ಳಬೇಕಾದರೆ, ಆತನ ಪಾದಾರವಿಂದದಲ್ಲಿ ಅನುಷ್ಠಿಸಿದ **ಶರಣಾಗತಿಯೇ** ಇದೇ **ಸಾಧ್ಯೋಪಾಯವು** ಇದು ಎರಡು ವಿಧವು (೧) ಅಜ್ಞಿರೂಪದಲ್ಲಿ ಭಕ್ತ್ಯುಪಾಯವು ಹೇಳಲ್ಪಟ್ಟಿತು (೨) ಅಜ್ಞಿರೂಪದಲ್ಲಿ ಪ್ರಪತ್ತ್ಯುಪಾಯವು ಹೇಳಲ್ಪಟ್ಟಿತು. ಮೊದಲನೆಯದು "**ಮಾಮೇವ ಯೇ ಪ್ರಪದ್ಯಂತೇ**" ಎಂದು (ಗೀತಾ ೭-೧೪) **ಶ್ಲೋಕದಲ್ಲೂ**, "**ಮಾಂ ನಮಸ್ಕುರು ಮಾಮೇವೈಷ್ಯಸಿ**" ಎಂದು (ಗೀತಾ ೯-೩೪) ಶ್ಲೋಕದಲ್ಲೂ, "**ಮಾಮೇಕಂ ಶರಣಂ ವ್ರಜ**" ಎಂದು ಗೀತಾ ೧೮-೬೬ನೆಯ ಶ್ಲೋಕದಲ್ಲೂ, ಹೀಗೆಲ್ಲಾ ಉಪವಾದಿತವು. ಅಜ್ಞಿರೂಪ ಪ್ರಪತ್ತಿಯು (ಗೀ ೧೮. ೬೬) ಶ್ಲೋಕದಲ್ಲೂ ಕಠಶ್ರುತಿಯಲ್ಲೂ, ವಸುರಣ್ಯೋ ಮಂತ್ರದಲ್ಲೂ, ಭಗವಚ್ಛಾಸ್ತ್ರದಲ್ಲೂ, ರಾಮಾಯಣ, ಭಾರತ, ಭಾಗವತಗಳಾದ ಇತಿಹಾಸಗಳಲ್ಲೂ, ಇನ್ನೂ ಶಾಂಡಿಲ್ಯ ಸ್ಮೃತಿ, ಅಹಿರ್ಬುಧ್ನ್ಯಸಂಹಿತೆ ಮೊದಲಾದವುಗಳಲ್ಲೂ ಉಪವಾದಿತವು. ಹಾಗಾದರೆ ಗೀತೆಯಲ್ಲಿ ಈ ಸ್ವತಂತ್ರ ಪ್ರಪತ್ತಿಯು ಹೇಳಿಲ್ಪಟ್ಟಿಲ್ಲವೋ ಎಂದರೆ ಈ ಸಮಸ್ತ ವ್ಯಾಧಿಗಳಿಗೂ ಶ್ರೇಷ್ಠ ರತ್ನವಾದ ಇದನ್ನು

ಅಲ್ಲಿನ ಒಂದು ವಿಧವಾದ ಪ್ರಬಲರೋಗಕ್ಕೆ ಭೇಷಜವೆಂದು ಹೇಳಿದರೆ, ಇತರ ರೋಗಗಳಿಗೂ ಭೇಷಜವಲ್ಲವೆಂದು ಊಹಿಸಲು ಕಾರಣವಿಲ್ಲವು. ಅದುದರಿಂದ ಗೀತಾ ಚರಮಶ್ಲೋಕವು ಎರಡು ವಿಧ ಶರಣಾಗತಿಯನ್ನೂ ಉಪದೇಶಿಸುತ್ತ ದೆಂದು ಭಾವಿಸತಕ್ಕದ್ದು. ಈ ಅಭಿಪ್ರಾಯಗಳನ್ನೆಲ್ಲವನ್ನೂ ಮೇಲಿನ ಶ್ರೀಭಾಷ್ಯ ಕಾರರ ದಿವ್ಯಸೂಕ್ತಿಯನ್ನೂ ಮನಸ್ಸಿನಲ್ಲಿಟ್ಟೀ, ಈ ಸಿದ್ಧೋಪಾಯ ಸಾಧ್ಯೋಪಾಯ ವಿಷಯಗಳಲ್ಲಿ ಉಂಟಾಗಬಹುದಾದ ಸರ್ವ ಸಂಶಯಗಳೂ ನಿಲ್ಲಲು ಸಾಧ್ಯವೇ ಇಲ್ಲವು. ಶ್ರೀ ಯಾಮುನೇಯರು ಶ್ರೀ ಭಾಷ್ಯಕಾರರು ಮೊದಲಾದ ತಾರ್ಕಿಕಾಗ್ರೇಸರರು ಇತರ ಸಿದ್ಧಾಂತಿಗಳನ್ನೆಲ್ಲಾ ತಮ್ಮ ಸತ್ತರ್ಕಗಳಿಂದ ಜಯಿಸಿ ಪೂರ್ವಪಕ್ಷ ಸಿದ್ಧಾಂತಗಳನ್ನೆಲ್ಲಾ ಅವರುಗಳನುಗ್ರಹಿಸಿರುವ ಸಿದ್ಧಿತ್ರಯ ಶ್ರೀ ಭಾಷ್ಯಾದಿಗ್ರಂಥಗಳಲ್ಲಿ ವ್ಯಕ್ತಪಡಿಸಿರುತ್ತಾರೆ. ಆ ಅಭಿಪ್ರಾಯಗಳನ್ನೇ ತಾವೂ ಉಪಪಾದನೆಮಾಡಿ, ಶತದೂಷಣೀ ಪರಮತಭಂಗ,ನ್ಯಾಯಸಿದ್ಧಾಂಜನ, ನಿಕ್ಷೇಪ ರಕ್ಷೆ ಮುಂತಾದ ಗ್ರಂಥಗಳಲ್ಲಿ ವ್ಯಕ್ತಪಡಿಸಿರುತ್ತೇನೆಂಬಂಶವೂ ಸೂಚಿತವು. ಅದುದು ರಿಂದ ತತ್ತದ್ಧೈತುಕಹೇತುಕೇ,ತರ್ಕೇಂದ್ರಜಾಲಕ್ರಮೇ ಕೃತಧಿಯಃ ಎಂದು ತಮ್ಮ ಪೂರ್ವಾಚಾರ್ಯರನ್ನು ಕುರಿತು ಹೇಳಿದರು. ಬರೀ ತರ್ಕವು ಶಾಸ್ತ್ರಸಮ್ಮತ ವಿಲ್ಲದ.ದಾದರೆ ಕುತರ್ಕವಾಗುತ್ತದೆ. ಅದರಿಂದ ಪ್ರತಿಷ್ಠಿತಜ್ಞಾನವು ದೊರೆಯುವ ದಿಲ್ಲವೆಂದು "ತರ್ಕಾಪ್ರತಿಷ್ಠಾನಾದಪಿ" (೨.೧.೧೧.) ಎಂಬ ಬ್ರಹ್ಮ ಸೂತ್ರದಲ್ಲಿ ಶ್ರೀ ವ್ಯಾಸಮಹರ್ಷಿಯು ಹೇಳಿರುತ್ತಾರೆ ಶ್ರೀದೇಶಿಕರೂ ಸಙ್ಕಲ್ಪ ಸೂರ್ಯೋದಯದಲ್ಲಿ, ತರ್ಕೋನಪ್ರತಿತಿಷ್ಠತಿ, ಕೇವಲತರ್ಕವೇ ಪ್ರತಿಷ್ಠಿತ ಜ್ಞಾನವನ್ನುಂಟು ಮಾಡುವದಿಲ್ಲವೆಂದು ಹೇಳಿರುತ್ತಾರೆ. ಜಗನ್ಮಿಥ್ಯಾದೃಶ್ಯತ್ವಾತ್ ರಜ್ಜುಸರ್ಪವತ್ ಎಂದು ಅನುಮಿತಿ ಯುಕ್ತಿಯಿಂದ ಸಾಧಿಸಿದರೆ ಅದೇ ಯುಕ್ತಿಯಿಂದಲೇ ಪರಬ್ರಹ್ಮ ಮಿಥ್ಯಾ ದೃಶ್ಯತ್ವಾತ್ ಎಂದು ಪ್ರತಿದ್ವಂದ್ವಿಯಾಗಿ ಅನ.ಮಿತಿ ಹೇಳಲು ಶಕ್ತಿಯುಳ್ಳವರೆಂಬ ಭಾವವು. ಇಂತಹ ಹೇತುಗಳಿಂದ ಸಾಧಿಸುವ ದೆಲ್ಲಾ ಇಂದ್ರಜಾಲಕ್ರಮವೆಂದು ಹೇಳಲ್ಪಟ್ಟಿತು. ಈ ಇಂದ್ರಜಾಲ ಕ್ರಮವನ್ನು ಮನಸ್ಸಿನಲ್ಲಿಟ್ಟು ಆಕ್ಷಿಯಾಳ್ವಾರ್ ನೆಂಬ ಅದ್ವೈತಿ ಸನ್ಯಾಸಿಯು, ಯಾಮುನೇಯರನ್ನು ವಾದಕ್ಕೆ ಕರೆದು, ಹೇಳುತ್ತಾರೇನೆಂದರೆ.—ನೀವು ಮೂರು ವಾಕ್ಯಗಳನ್ನು ಹೇಳಬಹುದು, ಅಹುದು ಎಂಬುದನ್ನು ಅಲ್ಲವೆಂದು ನಾನು ಸಾಧಿಸಿಕೊಡುವೆನು, ನೀವು ಅಲ್ಲವೆಂದು ಹೇಳಿದುದನ್ನು ನಾನು ಹೌದು ಎಂದು ಸಾಧಿಸುವೆನು ಎಂದು ಹೇಳಲಾಗಿ, ಇಂತಹ ಇಂದ್ರಜಾಲೋಕ್ತಿಗೆ ತತ್ಸದೃಶವಾದ ಯುಕ್ತಿಯೇ ಪರಮ ಭೇಷಜವಾಗಿ ತಿಳಿದು ಯಾಮುನೇಯರು ಅದು ರಾಜನ ಸಭಾಂಗಣವಾದುದರಿಂದ, "ರಾಜನು ಸಾರ್ವಭೌಮನೆಂದೂ, ರಾಜಪತ್ನೀ ಪತಿವ್ರತೆಯೆಂದೂ" ತಿಳಿಸಿ, ಇದನ್ನು ಅಲ್ಲವೆಂದು ಸಾಧಿಸಿ ತೋರಿಸಿಕೊಡಿರಿ ಎಂದೂ, "ನಿಮ್ಮ ತಾಯಿಯು ಬಂಜೆ

ಯಲ್ಲವು ಎಂದು ಹೇಳಿ" ಬಂಜೆಯೆಂದು ಸಾಧಿಸಿ ಎಂದೂ, ಹೇಳಲು; ಆದಕ್ಕೆ ರಾಜ ಪುರೋಹಿತನು ಬಹಳ ಲಜ್ಜಿತನಾಗಲು; ಯುಕ್ತಿಮಾತ್ರವಲ್ಲದೆ ಅನಂತರ ಶಾಸ್ತ್ರವಾದಗಳಲ್ಲೂ ಜಿತರಾದರೆಂಬ ವೃತ್ತಾಂತವುಂಟು. ಹಾಗೆಯೇ ಶ್ರೀ ಭಾಷ್ಯಕಾರರಿಗೆ ವಿದ್ಯಾಗುರುಗಳಾದ ಯಾದವಪ್ರಕಾಶರೂ ಶ್ರೀ ಭಾಷ್ಯಕಾರರ ಶಿಷ್ಯರಾದ ಶ್ರೀ ಕೂರೇಶರೊಂದಿಗೆ ವಾದಮಾಡಿ ಸೋತು ವಿಶಿಷ್ಟಾದ್ವೈತ ಸಿದ್ಧಾಂತವನ್ನವಲಂಬಿಸಿ ಶ್ರೀ ವೈಷ್ಣವ ಯತಿಗಳಾಗಿ ಯತಿಧರ್ಮ ಸಮುಚ್ಚಯವೆಂಬ ಗ್ರಂಥವನ್ನು ಬರೆದು ಪ್ರಖ್ಯಾತರಾದರೆಂಬ ವೃತ್ತಾಂತವುಂಟು. ಹಾಗೆಯೇ ವೇದಾಂತಿ ಎಂಬ ನಾಮಧೇಯವುಳ್ಳ ಅದ್ವೈತಿಗಳು ಶ್ರೀ ಪರಾಶರ ಭಟ್ಟರಿಂದ ವಾದದಲ್ಲಿ ಜಿತರಾಗಿ ಶ್ರೀ ವೈಷ್ಣವ ಸಂನ್ಯಾಸಿಯಾಗಿ ನಂಜೀಯರೆಂಬ ಯತಿಯಾಗಿ ಮಹಾಪ್ರಸಿದ್ಧರಾದರೆಂಬ ಇತಿಹಾಸ ಉಂಟು. ಆದುದರಿಂದ ನಮ್ಮ ಪೂರ್ವಾಚಾರ್ಯರುಗಳೆಲ್ಲಾ ಕಥಕಪ್ರಧಾನ ಗಣನೆಯಲ್ಲಿ,ದತ್ತಕನಿಷ್ಠಕಾಂಗುಳಿಯುಳ್ಳವರು ; ತಾರ್ತಿಕಾಗ್ರೇಸರರು ಯಾರೆಂದು ಗಣನೆ ಮಾಡುವದರಲ್ಲಿ ಮೊದಲನೆಯದಾದ ಕೆರಬೆಟ್ಟಿನಿಂದ ಎಣಿಸಲ್ಪಡುವವರು; ತಮ್ಮ ಹಾಗೆ ತಾರ್ಕಿಕ ಸಿಂಹರಾದ ನಮ್ಮ ಸಿದ್ಧಾಂತದ ತಾರ್ಕಿಕ ಶಿಖಾಮಣಿಗಳು ಎಂದು ಹೇಳಿಕೊಂಡಿರುತ್ತಾರೆ. ಆದುದರಿಂದಲೇ ನಿಷ್ಠಾಂ ಕನಿಷ್ಠಾಶ್ರಯಾಂ ಬಿಭ್ರಾಣಾಃ ಎಂಬ ಪ್ರಯೋಗವು. ಗಣನೆಯಲ್ಲಿ ಕನಿಷ್ಠ ಬೆರಳಿಗೆ ಪ್ರಾಥಮ್ಯವೆಂಬುದು "ಪುರಾ ಕವೀನಾಂ ಗಣನಾಪ್ರಸಂಗೇ" ಕಾಳಿದಾಸ ಕವಿಯೇ ದತ್ತ ಕನಿಷ್ಠಕನೆಂದೂ, ಆತನಿಗೆ ಸರಿಯಾದ ಎರಡನೆಯ ಕವಿಯೇ ದೊರೆಯುದೇ ಇದ್ದುದರಿಂದ ಅನಾಮಿಕಾ ಎಂಬ ಎರಡನೆಯ ಬೆರಳು "ಅನಾಮಿಕಾ ಸಾರ್ಥವತೀ ಬಭೂವ" ಎಂದು ಅನಾಮಿಕಾ ಎಂಬ ಹೆಸರು ಅರ್ಥವತ್ತಾದುದೆಂದು ಕವಿಗಳು ವರ್ಣಿಸಿರುತ್ತಾರೆ. ಆದುದರಿಂದ ಅಗ್ರೇಸರತ್ವವನ್ನು ಹೇಳುವದಕ್ಕಾಗಿ ಕನಿಷ್ಠಾಶ್ರಯಾಂ ಎಂಬ ಪ್ರಯೋಗವು.

ನಮ್ಮ ಈ ಪೂರ್ವಾಚಾರ್ಯರುಗಳ ಮಹತ್ವವು ಬರೀ ತರ್ಕ ನೈಪುಣ್ಯದಿಂದ ಮಾತ್ರವೇ ಅಲ್ಲವು. ಹಾಗೆ ಬರೀ ತರ್ಕನೈಪುಣ್ಯವುಳ್ಳ ಮನಸ್ಸು ನೀರು ಕೆಂಪಗಿರುವ ಕೆರೆಯಹಾಗೆ ನಿರ್ಮಲವಾಗಿರದು ಇತರ ಸಿದ್ಧಾಂತಿಗಳ ಮನಸ್ಸು ಹೇಗೆ ಶಜ್ಯಾವಿಲವಾಗಿರುತ್ತದೋ ಹಾಗೆಯೇ ಇರುತ್ತಿತ್ತು. ನಮ್ಮ ಪೂರ್ವಾಚಾರ್ಯರಾದ ತಾರ್ಕಿಕ ಶಿಖಾಮಣಿಗಳೋ ಎಂದರೆ, ಅಧ್ಯಾತ್ಮಶ್ರುತಿಸಂಪ್ರದಾಯ ಕತಕೈಃ ವಿಶುದ್ಧಾತಯೆರು ಉಪನಿಷತ್ತುಗಳ ಸಾರಭೂತಾರ್ಥಗಳ ಅವಿಚ್ಛಿನ್ನ ಉಪದೇಶ ಮೂಲಕ ಗುರುಶಿಷ್ಯಕ್ರಮದಿಂದ ಒದಗಿದ ಜ್ಞಾನವೆಂಬ ಚಿಲ್ಲದ ಬೀಜಗಳಿಂದ ನಿರ್ಮಲೀಕೃತಗಳಾದ ಮನಸ್ಸನ್ನುಳ್ಳವರು. ಉಪನಿಷತ್ತುಗಳಿಗೆ, ಕಲುಷಿತವಾದ ಮತಿಗಳ ಹಾಗೆ ಅಪಾರ್ಥಗಳನ್ನು ಹೇಳದವರು. ದ್ವೈಪಾಯನರು ತಮ್ಮ ಸೂತ್ರಗಳಲ್ಲಿ ಸರಿಯಾದ ಅರ್ಥಗಳನ್ನು ಬೋಧಿಸಿದ ದನು, ಯಥಾರ್ಥವಾಗಿ ಉಪದೇಶ ಮೂ

ಲಕ ಗ್ರಹಿಸಿದವರು. ಆದುದರಿಂದ ಶ್ರೀ ದೇಶಿಕರವರೇ ಸೆಙ್ಕಲ್ಪ ಸಯೋ ದಯದಲ್ಲಿ ತಮ್ಮ ಸಿದ್ಧಾನ್ತವು "ನಾಥೋಪಜ್ಞಂ ಪ್ರವೃತ್ತಂ ಬಹುಭಿ ರುಪಚಿತಂ ಯಾಮುನೇಯಪ್ರಬಂಧೈ । ತ್ರಾತಂ ಸಮ್ಯಗ್ಯತೀಂದ್ರೈ ರಿದಮಖಿಲತಪಃಕರ್ಶನಂ ದರ್ಶನಂ ನಃ॥"(೪೯) ಹೀಗೆ ಈ ಮೂರು ಮಹನೀ ಯರುಗಳಾದ ನಾಥಮುನಿ, ಯಾಮುನಮುನಿ, ಶ್ರೀ ರಾಮಾನುಜಮುನಿ ಇವರುಗಳ ಸತ್ಕೃತಿಗಳಿಂದ ಪ್ರತ್ಯಕ್ಷಾನುಮಾನ ಶಬ್ದಪ್ರಮಾಣಗಳಲ್ಲಿ ಅಪಲಾಪಾದಿ ಯಾವ ದೋಷಗಳೂ ಇಲ್ಲದಹಾಗೆ ಸಕಲಸಿದ್ಧಾಂತಗಳಲ್ಲಿರುವ ಶಙ್ಕಾರೂಪ ಅಂಧಕಾರ ವೆಲ್ಲಾ ತಮ್ಮ ಸಿದ್ಧಾಂತದ ಬೆಳಕಿನಿಂದ ತೊಲಗಿಸಿತ್ತನೆಂದು ಹೇಳಿಕೊಂಡಿರು ತ್ತಾರೆ. ಶ್ರೀ ಭಾಷ್ಯಕಾರರವರು ದಯಪಾಲಿಸಿದ ಸರ್ವಸಮಂಜಸಾರ್ಥಗಳು ಶ್ರೀ ಭಾಷ್ಯದಲ್ಲೂ ವೇದಾರ್ಥಸಂಗ್ರಹದಲ್ಲೂ ಹೇಳಲ್ಪಟ್ಟ ಸಮಂಜಸಾರ್ಥಗಳೇ ಗುರುಶಿಷ್ಯಕ್ರಮದಲ್ಲಿ ಬಂದುದೇ ಶ್ರುತಪ್ರಕಾಶಿಕೆಯಲ್ಲೂ ಪ್ರತಿಷ್ಠಿತಗಳಾಗಿ ಹಾಗೆಯೇ ಸಂಪ್ರದಾಯಕ್ರಮದಿಂದ ಶ್ರೀ ನಡಾದೂರಮ್ಮಾಳ್, ತಮ್ಮ ಮಾತುಲರು ಅವರಿಂದ ತಮಗೂ ಹೀಗೆ ಪರಂಪರಾಕ್ರಮದಿಂದ ಬಂದಿರುತ್ತವೆ ಎಂಬುದ ಸೂಚಿಸಲ್ಪಟ್ಟಿತು. ಇಂತಹ ಮಹನೀಯರ ಸರ್ವೋತ್ಕೃಷ್ಟವಾದ ಪರಮಹಿತ ವಾದ ನಿಸ್ಸಂಶಯವಾದ ಉಪದೇಶವು ಯಾವುದೆಂದರೆ :—ಕರುಣಾಸಾಗರನಾದ ಆಶ್ರಿತ ವತ್ಸಲನಾದ ಸಿದ್ಧೋಪಾಯನಾದ ಶ್ರಿಯಃಪತಿಯನ್ನು ಪಶೇಕರಣಕ್ಕಾಗಿ, ಸೀತೆಯು ರಾವಣನಿಗೆ ಉಪದೇಶಿಸಿದ ರೀತಿಯಲ್ಲಿ, "ಪ್ರಸಾದಯಸ್ವೈನಂ ಜೈನಂ ಶರಣಾಗತವತ್ಸಲಂ" ಸಾಧ್ಯೋಪಾಯದಿಂದ ಪ್ರಸನ್ನನಾಗಿ ಮಾಡಿಕೊಳ್ಳತಕ್ಕದ್ದು ಆವಶ್ಯಕವು. ಇದನ್ನು ತಮ್ಮ ವಾದಮೂಲಕವಾಗಿ ನಾತ್ರವೇ ಉಪಪಾದಿಸಿದು ದಲ್ಲವು. ಈ ಅರ್ಥಗಳು ತಮಗೆ ವಾದಿನಡಾದೂರಮ್ಮಾಳ್, ಆತ್ರೇಯ ರಾಮಾನು ಜಾಚಾರ್ಯರಾದ ಗುರುವರ್ಯರುಗಳಿಂದ ಪರಮಹಿತದಿಂದ ಉಪದೇಶಿಸಲ್ಪಟ್ಟವು. ಆದುದರಿಂದ ಸರ್ವರೂ ಇದೇ ಪರಮಹಿತವೆಂದು ಭಾವಿಸಿ ಪರಮಾದರದಿಂದ ಗ್ರಹಿಸತಕ್ಕ ವಿಷಯವೆಂದು ಪರಮಕೃಪಯಾ ಉಪದೇಶಿಸಿರುತ್ತಾರೆ.

ಸಾರದೀಪಿಕಾವ್ಯಾಖ್ಯಾತೃವು ಈ ಅಧಿಕಾರದ ಸಙ್ಗ್ರಹಾರ್ಥವನ್ನು ಸೂಚಿಸಿರುತ್ತಾರೆ, ಹೇಗೆಂದರೆ :—"ಇಪ್ಪಡಿ ಇವ್ವಧಿಕಾರತ್ತಿಲ್ (೧)ಪ್ರಪತ್ತಿ ಯಿರ್ ಸರ್ವಾಧಿಕಾರತ್ವಮುಮ್, (೨) ವಿಶ್ವಾಸಾದಿಗಳಂಗಿಯನ್ರು ನಿಕ್ಷೇಪ ಮೇಅಂಗಿ ಎನ್ರು ಮಿಡನ್ರುಮ್, ಮತ್ತು (೩) ಮುಣ್ಡಾನ ಶಙ್ಕಾ ವಿಶೇಷ ಪರಿಹಾರಜ್ಞಳುಮ್, (೪) ಭಕ್ತ್ಯಾದಿಗಳುಕ್ಕು ಸ್ವರೂಪವಿರುದ್ಧತ್ವಾದಿ ಶಙ್ಕಾಪರಿಹಾರಮುಮ್, (೫) ಸ್ವರಕ್ಷಣಾರ್ಥವ್ಯಾಪಾರಂ ವಿಹಿತಮೆನ್ರು ಮಿಡನ್ರುಮ್, (೬) ವಿಹಿತತ್ವಾದ್ಧಕ್ತಿ ಪ್ರಪತ್ತಿಗಳಿರುಣ್ಣುಮ್ ಯಥಾಧಿ ಕಾರಂ ಸಗಿಪ್ಪ ಪ್ರಜ್ಞೆಯೆನ್ರುಮ್. (೭) ಭಕ್ತಿಯು ಮಾಚಾರ್ಯರುಚಿ ಪರಿ

ಗೃಹೀತಶಮೆನ್ನುವ್, (೮) ಕೆಲಿಯ ಗತ್ತಿಲುವ್ ಭಕ್ತಿಕ್ಕ ಧಿಕಾರಿಗಳ್ ಸಂಭಾವಿತರೆನ್ನುವ್ (೯) ಅಶಕ್ತಾಧಿಕಾರಿಕ್ಕು ಭಕ್ತಿಸ್ವಾಧಿಕಾರವಿರುದ್ಧಮೆನ್ನುವ್, (೧೦) ನ್ಯಾಸವಿದ್ಯೆಯೇ ಸರ್ವವಿದ್ಯೆಗಳಿತೆ ಶ್ರೇಷ್ಠಮೆನ್ನುವ್, (೧೧) ಪರಿಕರವಿಷಯಶಬ್ದಾದಿಪರಿತ್ಯಾರಜ್ಞಿಳುವ್ (೧೨) ಭಕ್ತಿಕ್ರಪತ್ತಿಗಳಿರಣ್ಡುವ್ ಅಭಿಸಂಧಿ ಭೇದಕ್ಕಾಗಿ ವಿರುದ್ಧ ಫಲಸಾಧನವಾಗಕೂಡುನುನ್ನುವ್. (೧೩) ಪ್ರಯೋಜನಾಂತರಪರಕ್ಕು ಇವ್ವೆ ಪ್ರವೃತ್ತಿ ಧರ್ಮಕೋಟಿಯಿಲೆ ನಿರ್ಕ್ಕುಮೆನ್ನುವ್, (೧೪) ಅನ್ಯಾಭಿಗಮನಾದಿಗಳಾಗಾದೆನ್ನುವ್, (೧೫) ಪ್ರಪನ್ನರ್ಕ್ಕು ಸರ್ವಕಾಲವುಮ್ ಭಗವದನುಸ್ಮರಣರೂಪ ಫಲಭಕ್ತ್ಯನುವರ್ತನತ್ತುಕ್ಕು ವಿರೋಧಿ ಲ್ಲೈ ಯೆನ್ನುವ್ ಶೊಲ್ಲಿತ್ತ್ವೈಕ್ಕಟ್ಟಿನಾರ್”

ಈ ಅಧಿಕಾರ ವು ಏನೇನು ಉಪಪಾದಿಸಲ್ಪಟ್ಟಿದೆ ಎಂಬುದನ್ನು ಅಧಿಕಾರ ಮಧ್ಯದಲ್ಲಿ ನಾವು ಕಾಣಿಸಿರುವ ವಿಷಯ ಸೂಚನೆಗಳಿಂದಲೂ ಗ್ರಹಿಸಬಹುದು.

ಅಧಿಕಾರಾರ್ಥಸಙ್ಗ್ರಹವನ್ನು ಸಾರದೀಪಿಕೆಯವರು ಸಂಸ್ಕೃತ ಶ್ಲೋಕಗಳ ಮೂಲಕ ಹೇಳಿರುವದನ್ನು ಸಾರವಿವರಣೆಯವರೂ ಉದಾಹರಿಸಿರುತ್ತಾರೆ:—

“ಬದ್ಧಿಸೌಕರ್ಯಾಯ ಸಾರದೀಪಿಕಾಯಾ ಮುಕ್ತಾಧಿಕಾರಾರ್ಥ ಸಙ್ಗ್ರಹಕಾರಿಕಾಲಿಖ್ಯಂತೇ—“ ಪ್ರಪತ್ತೇರ್ವೈದಿಕತ್ವೇಪಿ ಸರ್ವವರ್ಣಾಧಿಕಾರತಾ। ವಿಶ್ವಾಸಃ ಸ್ವಾರ್ಥನಾಚಾತ್ಮ ರಕ್ಷಾಭರ ಸಮರ್ಪಣೇ ॥೧॥ ಪರ್ಯವಸ್ಯತ್ಯತಶ್ಶಾಸ್ತ್ರೇ ನ್ಯಾಸೋಜ್ಜ್ಞೀವ ವಿಧೀಯತೇ। ಅಂಗ ಪಂಚಕೆ ಸಂಪನ್ನಂ ರಕ್ಷಾಭರಸಮರ್ಪಣಮ್ ॥೨॥ ಪ್ರಪತ್ತಿಶಾಸ್ತ್ರವಿಹಿತಂ ಸರ್ವದೇಶಿಕ ಸಮ್ಮತಂ। ನಸ್ವರೂಪವಿರುದ್ಧತ್ವಮ್ ಭಕ್ತ್ಯಾದೇರ್ವಿಹಿತತ್ವತಃ ॥೩॥ ನಾಹಂಕಾರಾದಿ ಗರ್ಭತ್ವಮಸ್ಯಶಾಸ್ತ್ರೇಷು ಕಥ್ಯತೇ। ಸಶೇಷತಾ ವಿರುದ್ಧತ್ವ ಪಾರತಂತ್ರ್ಯನಿರೋಧಿತೇ ॥೪॥ ಶೇಷತ್ವಂ ಪಾರತಂತ್ರ್ಯಂಚ ಮುಕ್ತಾವಪಿಚ ವಿಶ್ರುತಮ್। ನಚೈಕಾಂತ್ಯ ವಿರುದ್ಧತ್ವಂ ಶ್ರೀಕಸಂರಾಧನತ್ವತಃ ॥೫॥ ಪ್ರಾಪ್ಯಾನುರೂಪತಾ ಭಾವೋ ನಾನ್ಯೇಷಾಂ ಯುಕ್ತಿಗೋಚರಃ। ಶಾಸ್ತ್ರಾದೇವಾ ವಸೇಯಾತೋ ಭಕ್ತಿಃಪ್ರಾಪ್ಯೋ ಚಿತಾಮತಾ ॥೬॥ ಪರಮರ್ಷಿಗೃಹೀತತ್ವಾನ್ನೈವಾಚಾರ್ಯ ಬಹಿಷ್ಕೃತಾ। ಕಲಾನಿಷೇಧೋ ನೈವಾಸ್ಯಾಸ್ತದಶಕ್ತೇರ್ವಿರುಧ್ಯತೇ ॥೭॥ ಸಂಭಾವಿತಸ್ವಭಾವತ್ವಂ ನಾಂಗಾನಾಂ ವಿಹಿತತ್ವತಃ। ಸಂಭಾವಿತತ್ವೇ ಚಾಂಗಾನಾಂ ವಿತ್ವಾಸೇ ಹ್ಯೇತದಾಪತೇತ್ ॥೮॥ ವಿಶ್ವಾಸ ತಾರತನ್ಯಸ್ಯ ಸಂಭವಾಲ್ಲೋಕಶಾಸ್ತ್ರಯೋಃ। ಮಹಾನೇವಹಿ ವಿಶ್ವಾಸಃ ಪ್ರಪತ್ತೇ ರಂಗಮಿಷ್ಯತೇ ॥೯॥ ತತ್ಕಾಲೇ ಮಂದ ವಿಶ್ವಾಸಾ ನಪಿ ಶೇಶೋಧಿಕಾರಿಣಃ। ಕ್ರಮೇಣ ಪೂರ್ಣ ವಿಶ್ವಾಸಾ ನ್ಕೃತ್ವಾಪಾತಿ ದಯಾಧಿಃ ॥೧೦॥ ಉಪಾಯಾಂತರ ಶಕ್ತ್ಯಾದಿ ವಿಳಂಬ ಕ್ಷಮತಾ ಫಲೇ। ವ್ಯಾ

ಷಾದೇ ಭ್ರಜನೇ ಹೇತು ರ್ನವಿತ್ವಾದಿ ಶೂನ್ಯತಾ ॥೧೧॥ ಕೈಚಿತ್ಕಪಿನ್ನೇ ಭಗವತ್ವಾಪ್ತ್ಯಾರಾದಿ ದೃಶ್ಯತೇ । ನ್ಯಾಸೇ ಸಙ್ಕಲ್ಪ ವೈಷಮ್ಯಾತ್ಪ್ರಾರಬ್ಧ ಸೆಕ್ಯತಾತ್ಪರಾ ॥ ೧೨ ॥ ಕೇಚಿದ್ವೃಷ್ಟಿಫಲಾಸಿದ್ಧ್ಯನ್ಯಾಸೇಷು ವಿಹಿತೇ ಷ್ವಲೇ । ಕೆಮ್ಮ ಕರ್ತ್ರಾದಿ ವೈಗುಣ್ಯಾತ್ಫಲಾಸಿದ್ಧಿರ್ಹಿ ಸರ್ವತಃ ॥ ೧೩ ॥ ವಿರುದ್ಧ ಫಲ ಹೇತುತ್ವ ಮಭಿಸಂಧಿವಶಾದ್ಭವೇತ್ । ವಿಕಸ್ಯ ರಾಜ್ಞೋ ದಾ ತವ್ಯ ಜಂಬೀರ ಫಲನೀತಿತಃ ॥೧೪॥ ಪ್ರವೃತ್ತಿ ಧರ್ಮೌಸ್ತೋಭಕ್ತಿ ಪ್ರಪ ತ್ತೀ ಕಾಮುಕಾಮಿನಾಂ । ನಿವೃತ್ತಿ ಧರ್ಮೌ ತಾವೇವ ಭಗವಚ್ಚರಣಾರ್ಥಿನಾಂ॥ ಆವೃತ್ತ್ಯನಾವೃತ್ತಿ ವಶಾದ್ವಿಷಮಾವಪಿ ತಾವ್ಗೌ । ಮೋಕ್ಷೈಕ ಫಲದೌ ಸ್ಯಾತಾಂ ಅಧಿಕಾರಿ ವಿಶೇಷತಃ ॥೧೫॥ ಉಪಾಯ ಫಲಯೋರೇಕೆ ರೂಪ ತ್ವೇಪಿ ಪ್ರಪನ್ನಯೋಃ । ಫಲೇವಿಳಂಬಾವಿಳಂಬೌ ತ್ವರಾಯೌ ಸ್ಯಾ ತ್ತ ತವ್ಯತಃ ॥೧೬॥ ಸಾಧ್ಯೋಪಾಯ ಪ್ರಸನ್ನೋಯಸ್ಸಿಧ್ಯೋಪಾಯಃ ಫಲ ಪ್ರದಃ।ತಸ್ಸಿದ್ಧ ಸಾಧ್ಯಯೋಃ ಕಾರ್ಯಂ ಫಲಂ ಶಾಸ್ತ್ರೇಷು ವರ್ಣ್ಯತೇ ॥೧೭॥ ಹರಿರೇಕಸ್ಸದಾ ಧ್ಯೇಯಃ ಇತ್ಯಾದ್ಯುಕ್ತ್ಯನುಸಾರತಃ। ಅಂಗಪ್ರಪತ್ತಿ ಪರತಾಂ ಶ್ಲೋಕಸ್ಯಾಹುರ್ನತನ್ಮತಂ ॥೧೯॥ "ಹರಿರೇಕಸ್ಸದಾಧ್ಯೇಯ" ಇತ್ಯಾದಿರ್ಹಿ ವಿಧೀಯತೇ। ಸ್ವತಂತ್ರನ್ಯಾಸನಿಷ್ಠಸ್ಯ ಫಲರೂಪ ಮುಪಾಸನಮ್ ॥೨೦॥ ಕೈಂ ಕರ್ಯೇಕ್ರಿಯವಾನೇತು ಖ್ಯಾತಿಲಾಭ ವಿವರ್ಜಿತಃ । ಪ್ರಯೋಜನಾಂತರಾನಿ ಚ್ಛುರ್ಮೋಕ್ಷಂಚಾಪಿ ಫಲಂತ್ಯಜೇತ್ ॥ ೨೧ ॥ ಸ್ವಯಂಪ್ರಯೋಜನತ್ವೇನ ಮುಕ್ತೇವತ್ಸರ್ವಮಾಚರೇತ್ । ಅನ್ಯಾಭಿಗಮನಂ ತ್ಯಾಜ್ಯಂ ತಥಾನ್ಯಾರ್ಥ ಪ್ರವೃತ್ತಯಃ ॥೨೨॥ ಅನ್ಯಪೂಜಾನ್ಯಕೀರ್ತಿಶ್ಚ ತ್ಯಾಜ್ಯಮನ್ಯ ವಿಚಿನ್ತನಮ್। ವಿತೇಷಾಂ ವಿನಿವೃತ್ಯರ್ಥಂ ಹರಾವಭಿಗಮಾದಿಕೆಮ್ ॥೨೩॥ ವಿಧೀಯತೇಸ್ಯ ಶಾಸ್ತ್ರೇಷು ಕಾಲೇಷೂಕ್ತೇಷು ಪಂಚಸು । ಆನರ್ಹಾಣಾಮಪಿನೃಣಾಂ ದೇ ವಾಭಿಗಮನಾದಿಷು ॥೨೪॥ ಸ್ವಯೋಗ್ಯನಿತ್ಯ ಕೈತ್ಕೈರ್ಯಾಸ್ಥಿತಿ ಶ್ಯಕ್ರೂಪ ಯಾಪಿವಾ । ವಿಲಕ್ಷಣೋಭಕ್ತಿಯೋಗಃ ಸ್ತ್ರೀಶೂದ್ರಾಣಾಂ ನಿಷಿಧ್ಯತೇ॥೨೫॥ ಸರ್ವೇಷಾಂ ಸರ್ವದಾ ಕಾರ್ಯೋ ದೇಹಾನುಸ್ಮೃತಿಲಕ್ಷಣಃ । ಕ್ಲೇಶಾನಾಂಚ ಕ್ಷಯಕರಂ ಯೋಗಾದನ್ಯ ನ್ನ ವಿದ್ಯತೇ ॥೨೬॥ ಇತ್ಯಾದಿಷು ಪ್ರಪನ್ನೇಭ್ಯ ಆಕರಶ್ಚನಿಯಮ್ಯತೇ ॥ ಇತಿ.

ಶ್ರೀಮದ್ರಹಸ್ಯತ್ರಯಸಾರಸ ಇಪ್ಪತ್ತುನಾಲ್ಕನೆಯ
ಸಾಧ್ಯೋಪಾಯಶೋಧನಾಧಿಕಾರಕ್ಕೆ
ತಿರುನಾರಾಯಣಪುರಂ ವಿಜಯರಾಘವೆಕರ್ಮನ
ಆಚಾರ್ಯಹೃದಯಾನ್ವೇಷಿಣೇ